ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨-೩

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಯಜ್ಞವೈಭವಖಂಡ

(ಭಾಗ ೨)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೫೫

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨–೩

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಯಜ್ಞವೈಭವಖಂಡ

(ಭಾಗ ೨)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

Printed by T. S. Raghavachar, Manager,
Sree Panchacharya Electric Press
Sayaji Rao Road, Mysore

For The Palace Mysore.

ಮುನ್ನುಡಿ

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಹೊಸಹೊಸದಾದ ತಿಳಿವಳಿಕೆಯನ್ನು ಪಡೆಯಲು ಬಯಸುವುದೂ, ಅದನ್ನು ಹೆಚ್ಚಿಸಿಕೊಳ್ಳುತ್ತಿರುವುದೂ, ಅದಕ್ಕಾಗಿ ಸಂತತ ಪ್ರಯತ್ನ ಪರಿಶೋಧನೆಗಳನ್ನು ಮಾಡುತ್ತಿರುವುದೂ, ಇವು ಮಾನವನ ಹುಟ್ಟುಗುಣವೂ, ಅನಿವಾರ್ಯವಾದ ಸ್ವಭಾವವೂ ಆಗಿವೆ. ಇದು ಈಗಿನ ವಿಚಾರಯುಗವೆನ್ನಿಸಿಕೊಂಡಿರುವುದರ ವಿಶೇಷ ಧರ್ಮವೇನೂ ಅಲ್ಲವು. ಹಿಂದಿನಕಾಲದ ಭಾರತಾರ್ಯರೂ ಹೀಗೆಯೇ ಆಶಿಸಿ ಪ್ರಯತ್ನಿಸುತ್ತಿದ್ದರು. "ತಮಸೋ ಮಾ ಜ್ಯೋತಿರ್ಗಮಯ" ಬೃಹದಾರಣ್ಯಕ ಉಪನಿಷತ್ ೧.೩.೨೮. ನೋಡಿ. ನನ್ನನ್ನು ಕತ್ತಲೆಯಿಂದ ಬೆಳಕಿಗೆ ನಡೆಯಿಸು. ಎಂದು ಇದರ ಅರ್ಥವು. ಇದರ ತಾತ್ಪರ್ಯವನ್ನು ಹೀಗೆ ವಿವರಿಸಬಹುದು. ನಾವು ರಾತ್ರಿಯ ಕತ್ತಲಲ್ಲಿರುವಾಗ, ಎಷ್ಟುಹೊತ್ತಿಗೆ ಬೆಳಗಾದೀತೋ, ಎಂದು ತೀವ್ರವಾಗಿ ಆಶಿಸುತ್ತಿರುತ್ತೇವೆ. ಏಕೆಂದರೆ, ಕತ್ತಲೆಯು ಪದಾರ್ಥಗಳನ್ನು ನೋಡಿ ತಿಳಿಯಲು ಅಡ್ಡಿಯಾಗಿರುತ್ತದೆ. ಬೆಳಕು ವಸ್ತುಗಳನ್ನು ಕಂಡು ತಿಳಿಯಲು ಸಹಾಯ ಮಾಡುತ್ತದೆ. ಅಜ್ಞಾನವನ್ನು ಕತ್ತಲೆ ಎಂದೂ, ಜ್ಞಾನ ಅಥವಾ ತಿಳಿವಳಿಕೆಯನ್ನು ಬೆಳಕೆಂದೂ ಭಾವಿಸಿ ಹೇಳಿರುವುದು ಎಲ್ಲ ದೇಶ ಕಾಲಗಳಲ್ಲೂ ವಾಡಿಕೆಯಲ್ಲಿದೆ. ಆದುದರಿಂದ ತತ್ವಜಿಜ್ಞಾಸೆಯು ಮಾನವನ, ಅದರಲ್ಲೂ ಮುಂದಾಲೋಚನೆಯುಳ್ಳ, ವಿವೇಚನಪರನಾಗಿರುವ ಮಾನವನ, ಸ್ವಾಭಾವಿಕವಾದ ಗುಣವಾಗಿದೆ. ಈ ಸೂತಸಂಹಿತೆಯು ಯಜ್ಞವೈಭವಖಂಡದ ಭಾಗದಲ್ಲಿ ಪಾಪ ಅಜ್ಞಾನಗಳ ನಿವೃತ್ತಿಗೆ ಉಪಾಯಗಳನ್ನು ವಿಸ್ತಾರವಾಗಿ ಹೇಳಿದೆ.

ತತ್ವವು ಎರಡು ಬಗೆಯಾಗಿದೆ ಎಂದು ಸ್ಥೂಲವಾಗಿ ಮೊದಲಿನಲ್ಲಿ ಹೇಳಬಹುದು. ಒಂದು ಬಾಹ್ಯವಾದ ಪ್ರಪಂಚತತ್ವ; ಇನ್ನೊಂದು ಆಂತರವಾದ ಆತ್ಮತತ್ವ. ಭಾರತಾರ್ಯರು ಬಾಹ್ಯಪ್ರಪಂಚವನ್ನು ಮೊದಲು ಪರಿಶೀಲಿಸಿದಂತೆ ತೋರುತ್ತದೆ. ಅದರಲ್ಲಿ ಪ್ರಕೃತಿಸೌಂದರ್ಯವು ತುಂಬಿರುವುದನ್ನೂ, ಅದರಲ್ಲಿ ಮಾನವರ ಉದ್ದೇಶಗಳು ನೆರವೇರುತ್ತಿರುವುದನ್ನೂ, ಅದು ಕ್ರಮವಾಗಿ ಸಾಗುತ್ತಿರುವುದನ್ನೂ ಮನಗಂಡರು. ಸೌಂದರ್ಯ, ಉದ್ದೇಶ, ಕ್ರಮಗಳನ್ನೊಳಗೊಂಡಿರುವ ಗಡಿಯಾರ

ವನ್ನು ನೋಡಿ ಅದನ್ನು ರಚಿಸಿದವನ ಗುಣಗಳನ್ನು ಜನರು ಶ್ಲಾಘಿಸಿ ಗೌರವಿಸುವಂತೆ, ಈ ಪ್ರಪಂಚದ ಸೃಷ್ಟಿ, ಸ್ಥಿತಿ, ಉಪಸಂಹಾರಗಳನ್ನು ನೆರವೇರಿಸುತ್ತಿರುವ ತತ್ವವು ಒಂದೇ ಆಗಿರಬೇಕೆಂದು ಆರ್ಯರು ತಿಳಿದು ಹೇಳಿದರು. "ಏಕಂ ಸತ್ ವಿಪ್ರಾಃ ಬಹುಧಾ ವದಂತಿ" ಋಗ್ವೇದ ೧.೧೬೪.೪೬. "ಯತೋ ವಾ ಇಮಾನಿ ಭೂತಾನಿ ಜಾಯಂತೇ . . . . . ತದ್ಬ್ರಹ್ಮೇತಿ" ತೈತ್ತಿರೀಯೋಪನಿಷತ್ ೩.೧. ಆ ಮೇಲೆ ಆತ್ಮತತ್ವವು ಸಚ್ಚಿದಾನಂದರೂಪವಾದುದೆಂಬುದನ್ನು ಮನಗಂಡರು. ಪುಟ ೨೫೪ ನೋಡಿ. ಹಾಗೆಯೇ ಬಾಹ್ಯಪ್ರಪಂಚಕ್ಕೆ ಮೂಲಕಾರಣವೂ ಅಧಿಷ್ಠಾನವೂ ಆಗಿರುವ ಬ್ರಹ್ಮತತ್ವವೂ, ಆತ್ಮತತ್ವವೂ ಸಚ್ಚಿದಾನಂದರೂಪದಲ್ಲಿ ಒಂದೇ ಎಂಬುದನ್ನು ತಿಳಿದು ವಿವರಿಸಿದರು. "ಏಕಮೇವಾ ದ್ವಿತೀಯಂ ಬ್ರಹ್ಮ" ಛಾಂದೋಗ್ಯೋಪನಿಷತ್ ೬.೨.೧. "ತಜ್ಜಲಾನಿತಿ" "ಆಯಮಾತ್ಮಾಬ್ರಹ್ಮ ಸರ್ವಾನುಭೂಃ" ಬೃ.ಉ. ೨.೫.೧೯. "ಸತ್ಯಂ ಜ್ಞಾನ ಮನಂತಂ ಬ್ರಹ್ಮ" ತೈತ್ತಿರೀಯೋಪನಿಷತ್. ೨.೧.೧. ಎಂದು ಮುಂತಾದ ಶ್ರುತಿವಾಕ್ಯಗಳು ಈ ಬ್ರಹ್ಮಾತ್ಮೈಕ್ಯವನ್ನು ಸಾರಿ ಹೇಳುತ್ತಿವೆ. ಈ ಜೀವಾತ್ಮ ಪರಮಾತ್ಮೈಕ್ಯವನ್ನು ಈ ಗ್ರಂಥದಲ್ಲೂ ವಿಸ್ತಾರವಾಗಿ ಅನೇಕ ಉದಾಹರಣೆ ಉಪಮಾನಗಳೊಡನೆ ಹೃದಯಂಗಮವಾಗಿ ವಿವರಿಸಿದೆ. ಪು. ೨೧೦; ೩೦೬; ನೋಡಿ.

ಈ ಅದ್ವೈತತತ್ವದ ವ್ಯಾವಹಾರಿಕದೃಷ್ಟಿಯಲ್ಲಿ ಈ ಪ್ರಪಂಚದಲ್ಲಿರುವ ಎಲ್ಲ ಮತಧರ್ಮಗಳೂ, ತತ್ತ್ವೋಪದೇಶಗಳೂ ಸಮಾವೇಶವನ್ನು ಪಡೆಯುವಷ್ಟು ಮನೋವೈಶಾಲ್ಯವನ್ನು ಹೊಂದಿರಬೇಕೆಂದು ಮಾರ್ಗಪ್ರಾಮಾಣ್ಯದ ಅಧ್ಯಾಯದಲ್ಲಿ, ಹಿಂದಿನ ಸಂಪುಟದ ೨ನೆಯ ಅಧ್ಯಾಯದಲ್ಲಿ, ವಿವರಿಸಲಾಗಿದೆ. ಇದರಿಂದ ವಿಶ್ವ ಧರ್ಮಾಚರಣೆಗೆ ತಕ್ಕ ಹೃದಯವೈಶಾಲ್ಯವೂ, ಪರಮತಸಹನೆಯೂ ಏರ್ಪಡುವುದ ರಿಂದ ಅದ್ವೈತದರ್ಶನಕ್ಕೆ ಯಾವ ಮತ, ದರ್ಶನಗಳೊಡನೆಯೂ ವಿರೋಧವಿಲ್ಲವು. ಈ ಉಪದೇಶವನ್ನು ಭಗವದ್ಗೀತೆಯಲ್ಲೂ "ಯೋ ಯೋ ಯಾಂ ಯಾಂ ತನೂಂ ಭಕ್ತಃ . . . ." ಅ. ೭. ಶ್ಲೋ. ೨೨ ರಲ್ಲಿ ತಿಳಿಯಹೇಳಿದೆ. ಅದ್ವೈತದ ಸ್ವರೂಪ ವನ್ನು ಅ. ೧೦. ಶ್ಲೋ. ೧೭ ರಲ್ಲೂ, ಅ. ೧೮. ಶ್ಲೋ. ೭೬ ರಲ್ಲೂ, ದರ್ಶನ ಸಾಮರಸ್ಯವನ್ನು ಅ. ೨೨. ಶ್ಲೋ. ೨೧ ರಲ್ಲೂ, ವಿವರಿಸಿರುತ್ತದೆ. ಇಂತಹ ತಿಳಿವಳಿಕೆ ಯಿಂದ ಮಾನವನು ಮಾದರಿಯ ಕರ್ಮಯೋಗಿಯಾಗುತ್ತಾನೆ. ಅವನಿಂದಲೇ ಈ ಜಗತ್ತಿನಲ್ಲಿ ಶಾಂತಿ, ಸುಖ, ಕಲ್ಯಾಣಗಳು ನೆಲೆಸುವಂತಾಗಬೇಕಾಗಿದೆ.

ಇಂತಹ ಉತ್ತಮವಾದ ಧರ್ಮಾಚರಣೆಯೂ, ತಿಳಿವಳಿಕೆಯೂ, ಎಲ್ಲ ಜನರ ಮತ್ತು ಮುಖಂಡರ ಮನಸ್ಸಿನಲ್ಲಿ ಬೇರೂರಿ ಬಲಗೊಳ್ಳುವಂತಾಗಲೆಂದು ಈ ಗ್ರಂಥವನ್ನೂ ಕನ್ನಡ ಅನುವಾದದೊಡನೆ ಮುದ್ರಿಸಿ ಪ್ರಚಾರ ಮಾಡಬೇಕೆಂದು ನಮ್ಮನ್ನಾಳುತ್ತಿರುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ.ಸಿ.ಎಸ್.ಐ.,** ಮಹಾಪ್ರಭುಗಳ ಆಜ್ಞಾನುಸಾರವಾಗಿ ಇದನ್ನು ಪ್ರಕಟಿಸಲಾಗಿದೆ. ಈ ಮಹಾನುಭಾವರ ಸದುದ್ದೇಶವು ನೆರವೇರುವಂತಾಗಲೆಂದು ಶ್ರೀಚಾಮುಂಡೇಶ್ವರೀ, ತ್ರಿಪುರಸುಂದರೀ, ಜಗನ್ಮಾತೆಯ ಅಡಿದಾವರೆಗಳಲ್ಲಿ ನಮಸ್ಕರಿಸಿ ಪ್ರಾರ್ಥಿಸುತ್ತೇನೆ.

ಪಾರ್ಥಿವಸಂವತ್ಸರದ
ಭಾದ್ರಪದ ಶುಕ್ಲ ದಶಮೀ,
ಭಾನುವಾರ, 16—9—1945

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ

ಶ್ರೀಸೂತಸಂಹಿತೆಯ ತೃತೀಯಸಂಪುಟದಲ್ಲಿರುವ ವಿಷಯಗಳ ಸೂಚಿಕೆ

ಯಜ್ಞವೈಭವಖಂಡ

ಅಧ್ಯಾಯ	ವಿಷಯ	ಪುಟಸಂಖ್ಯೆ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಷಡ್ವಿಂಶೋಽಧ್ಯಾಯಃ ||

ಇಪ್ಪತ್ತಾರನೆಯ ಅಧ್ಯಾಯವು

(ಶಿವಭಕ್ತಿವಿಚಾರ)

|| ಸೂತ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಶಿವಭಕ್ತಿಂ ಸಮಾಸತಃ ।
ಯಯಾ ಭುಕ್ತಿರ್ವಿಮುಕ್ತಿಶ್ಚ ಮುನೀಂದ್ರಾಸ್ಸರ್ವದೇಹಿನಾಮ್ ॥೧॥

ಭಕ್ತಿಶ್ಚ ಬಹುಧಾ ಜ್ಞೇಯಾ ಭವಾನೀಸಹಿತಸ್ಯ ತು ।
ಏಕಾ ಶಂಕರಸಾಯುಜ್ಯಶ್ರದ್ಧಾ ಸಾರತರಾ ಪರಾ ॥೨॥

ಎಲೈ ಶೌನಕಾದಿ ಋಷಿಗಳೇ, ಅನಂತರದಲ್ಲಿ ಯಾವ ಶಿವಭಕ್ತಿಯಿಂದ ಎಲ್ಲಾ ಪ್ರಾಣಿಗಳಿಗೂ ಇಹಲೋಕದ ಭೋಗಗಳೂ ಕೊನೆಯಲ್ಲಿ ಮುಕ್ತಿಯೂ ಉಂಟಾಗುವುವೋ ಅಂಥ ಭಕ್ತಿಯ ವಿಚಾರವನ್ನು ಸಂಗ್ರಹಿಸಿ ಹೇಳುತ್ತೇನೆ. ಕೇಳಿರಿ. ||೧||

ಪರಶಿವನಲ್ಲಿರಬೇಕಾದ ಭಕ್ತಿಯು ಅನೇಕವಿಧವಾಗಿರುವುದು. ಅದರಲ್ಲಿ ಸಾಯುಜ್ಯ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯಗಳೆಂಬ–ನಾಲ್ಕು ವಿಧವಾದ ಮುಕ್ತಿಗಳಿಗೆ ಸಾಧನಗಳಾದ ಭಕ್ತಿಗಳು ಮುಖ್ಯವಾದುವು. ಸಾಯುಜ್ಯವೆಂದರೆ ಜೀವಾತ್ಮನಿಗೆ ಪರಶಿವನೊಡನೆ ಇರುವ ಐಕ್ಯದ ಸಾಕ್ಷಾತ್ಕಾರವಾಗುವಿಕೆ. ಆದ್ದರಿಂದ ಈ ರೀತಿಯಾದ ಮೋಕ್ಷದಲ್ಲಿ ಶ್ರದ್ಧೆಯಿಂದಿರುವುದೇ ಮುಖ್ಯವಾದ ಈಶ್ವರಭಕ್ತಿಯು. ||೨||

ಅನ್ಯಾ ಶಂಕರಸಾರೂಪ್ಯಶ್ರದ್ಧಾಽತೀವ ಶಿವಪ್ರಿಯಾ ।
ಅಪರಾ ಶಿವಸಾಮೀಪ್ಯಶ್ರದ್ಧಾ ವೇದವಿದಾಂ ವರಾಃ ॥೩॥

ಇತರಾ ಶಿವಸಾಲೋಕ್ಯಶ್ರದ್ಧಾಽಭೀಷ್ಟಫಲಪ್ರದಾ ।
ಅಪರಾ ಚ ಶಿವಜ್ಞಾನಶ್ರದ್ಧಾ ಪಾಶನಿಕೃಂತನೀ ॥೪॥

ಅನ್ಯಾ ವೇದಶಿರಶ್ಶ್ರದ್ಧಾ ಸಾಕ್ಷಾದ್ವಿಜ್ಞಾನದಾಯಿನೀ ।
ಅಪರಾ ಶ್ರವಣಶ್ರದ್ಧಾ ಪ್ರೋಕ್ತಾ ವೇದಾಂತವೇದಿಭಿಃ ॥೫॥

ಇತರಾ ಮನನಶ್ರದ್ಧಾ ನೃಣಾಂ ಸಂಭಾವನಾ ಪ್ರದಾ ।
ಅನ್ಯಾ ದೇವೇಶ್ವರಧ್ಯಾನಶ್ರದ್ಧಾ ರೂಪಾ ಮಹತ್ತರಾ ॥೬॥

ಸಾರೂಪ್ಯವೆಂದರೆ ರುದ್ರಲೋಕಾದಿಗಳಲ್ಲಿ ರುದ್ರನಿಗೆ ಯಾವ ಆಕಾರವಿದೆಯೋ ಅಂಥ ಆಕಾರದಿಂದ ಕೂಡಿ ರುದ್ರಾದಿಲೋಕಗಳಲ್ಲಿರುವಿಕೆಯು. ಈ ರೀತಿಯಾದ ಮುಕ್ತಿಯಲ್ಲಿರುವ ಶ್ರದ್ಧೆಯೂ ಶಿವನಿಗೆ ಬಹಳ ಇಷ್ಟವಾದುದು. ಸಾಮೀಪ್ಯವೆಂದರೆ ಬೇರೆ ಆಕಾರದಿಂದ ರುದ್ರನ ಸಮೀಪದಲ್ಲಿರುವುದು. ವೇದಜ್ಞರಲ್ಲಿ ಶ್ರೇಷ್ಠರಾದ ಋಷಿಗಳೇ, ಈ ರೀತಿಯಾದ ಮುಕ್ತಿಯಲ್ಲಿರುವ ಭಕ್ತಿಯೂ ಈಶ್ವರಭಕ್ತಿಯೇ. ॥೩॥

ಸಾಲೋಕ್ಯವೆಂದರೆ, ರುದ್ರಲೋಕದಲ್ಲಿರುವಿಕೆ. ಈ ರೀತಿಯಾದ ಮುಕ್ತಿಯಲ್ಲಿರುವ ಭಕ್ತಿಯೂ, ಶಿವಭಕ್ತಿಯೇ. ಈ ವಿಧವಾದ ಭಕ್ತಿಯು ಇಷ್ಟಾರ್ಥವನ್ನುಂಟುಮಾಡುವುದು. ಶಿವಸ್ವರೂಪವಿಷಯಕವಾದ ಭಕ್ತಿಯು ಮತ್ತೊಂದು. ಇದು ವೇದಾಂತಶ್ರವಣದಿಂದ ಉಂಟಾಗುವುದು. ಈ ರೀತಿಯಾದ ವೇದಾಂತದಿಂದ ಉತ್ಪನ್ನವಾದ ಭಕ್ತಿಯೂ ಶಿವಭಕ್ತಿಯೇ. ಈ ವಿಧವಾದ ಭಕ್ತಿಯು ಸಂಸಾರ ಬಂಧನವನ್ನು ನಾಶಮಾಡುವುದು. ॥೪-೫॥

ಮತ್ತೊಂದು ವಿಧವಾದ ಭಕ್ತಿಯು ವೇದಾಂತವಿಚಾರಮಾಡಬೇಕೆಂಬುದು. ಇದು ಉತ್ತಮವಾದ ಜ್ಞಾನವನ್ನುಂಟುಮಾಡುವುದು. ಇನ್ನೊಂದು ವಿಧವಾದ ಭಕ್ತಿ ಯಾವುದೆಂದರೆ ವೇದಾಂತವನ್ನು ತಿಳಿದವರು ಹೇಳುವ ವೇದಾಂತಶ್ರವಣ ಮಾಡಬೇಕೆಂಬ ಭಕ್ತಿಯು. ॥೫॥

ಇನ್ನೊಂದು ವಿಧವಾದುದು ಮನನ ಎಂಬುದು. ಇದರಿಂದ ಗುರುಗಳಿಂದಲೂ ವೇದಾಂತದಿಂದಲೂ ನಿಶ್ಚಯಿಸಲ್ಪಟ್ಟಿದ್ದಾಗ್ಯೂ ಪರಶಿವನ ಸ್ವರೂಪದ ವಿಷಯದಲ್ಲಿ ಅನೇಕವೇಳೆ ಸಂದೇಹವುಂಟಾಗುವುದು. ಇಂಥ ಸಂದೇಹವು ಮನನದಿಂದ ಪರಿಹಾರ

ಅಪರೋದ್ಧೂಳನಶ್ರದ್ಧಾ ಭಸ್ಮನಾ ಪಾಪನಾಶಿನೀ ।
ತ್ರಿಪುಂಡ್ರಧಾರಣಶ್ರದ್ಧಾ ತದನ್ಯಾ ತತ್ತ್ವದಾಯಿನೀ ॥೭॥

ರುದ್ರಾಕ್ಷಧಾರಣಶ್ರದ್ಧಾ ಚಾಪಿ ಭಕ್ತಿರುದೀರಿತಾ ।
ಷಡಕ್ಷರಜಪಶ್ರದ್ಧಾ ಚಾಪಿ ಭಕ್ತಿರ್ಮಹತ್ತರಾ ॥೮॥

ಶಿವಲಿಂಗಾರ್ಚನಶ್ರದ್ಧಾ ದ್ವಿಜಾ ಭಕ್ತಿರನುತ್ತಮಾ ।
ಲಿಂಗಾರ್ಚನದಿದೃಕ್ಷಾ ಚ ಮಹಾಭಕ್ತಿಃ ಪ್ರಕೀರ್ತಿತಾ ॥೯॥

ಅನುಮೋದನಮೀಶಸ್ಯ ಪೂಜಾಯಾ ಭಕ್ತಿರುಚ್ಯತೇ ।
ಪೂಜೋಪಕರಣಶ್ರದ್ಧಾ ಚಾಪಿ ಭಕ್ತಿರುದೀರ್ಯತೇ ॥೧೦॥

ಶಿವೋತ್ಸವದಿದೃಕ್ಷಾ ಚ ಶಿವಭಕ್ತಿರ್ಮಹತ್ತರಾ ।
ತಥೈವೋತ್ಸವಸೇವಾ ಚ ಭಕ್ತಿರುಕ್ತಾಽತಿಶೋಭನಾ ॥೧೧॥

ವಾಗುವುದು. ಇನ್ನೊಂದು ವಿಧವಾದುದು ನಿದಿಧ್ಯಾಸನರೂಪವಾದ ಶ್ರದ್ಧೆಯು. ಇದು ಬಹಳ ಉತ್ತಮವಾದುದು. ||೬||

ಮೈಗೆಲ್ಲಾ ಭಸ್ಮಲೇಪನಮಾಡಿಕೊಳ್ಳುವುದೂ ಒಂದು ವಿಧವಾದ ಭಕ್ತಿಯು. ಇದರಿಂದ ಪಾಪವೆಲ್ಲಾ ನಾಶವಾಗುವುದು. ಮತ್ತೊಂದು ವಿಧವಾದ ತ್ರಿಪುಂಡ್ರ ಧಾರಣದಲ್ಲಿ ನಂಬಿಕೆಯ ರೂಪವಾದ ಭಕ್ತಿಯು ತತ್ತ್ವಜ್ಞಾನವನ್ನುಂಟುಮಾಡು ವುದು. ರುದ್ರಾಕ್ಷಿಯನ್ನು ಧರಿಸುವುದೂ ಷಡಕ್ಷರೀಮಂತ್ರವನ್ನು ಜಪಿಸುವುದೂ ಒಂದೊಂದು ವಿಧವಾದ ಉತ್ತಮವಾದ ಭಕ್ತಿಗಳು. ||೭-೮||

ಶಿವಲಿಂಗವನ್ನು ಪೂಜಿಸುವುದೂ, ಲಿಂಗದ ಪೂಜೆಯನ್ನು ಮಾಡಬೇಕೆಂಬ ಇಚ್ಛೆಯೂ, ಯಾರಾದರೂ ಲಿಂಗವನ್ನು ಪೂಜಿಸುತ್ತೇವೆಂದರೆ ಅದನ್ನು ಅನುಮತಿ ಸುವುದೂ, ಪೂಜೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದೂ ಒಂದೊಂದು ವಿಧವಾದ ಉತ್ತಮವಾದ ಭಕ್ತಿಗಳು. ||೯||

ಎಲೈ ಋಷಿಗಳೇ, ಶಿವಸಂಬಂಧವಾದ ಉತ್ಸವಗಳನ್ನು ನೋಡಬೇಕೆಂಬ ಇಚ್ಛೆಯೂ, ಶಿವೋತ್ಸವಗಳಲ್ಲಿ ಸೇರುವುದೂ, ಶಿವೋತ್ಸವಕ್ಕೋಸ್ಕರ ಬಂದಿರುವ ಮಹಾತ್ಮರಿಗೆ ಅನ್ನೋದಕಗಳನ್ನು ಕೊಡುವುದೂ, ಮಹಾದೇವ, ಶಿವ–ಮೊದಲಾದ

ತಥೈವೋತ್ಸವಸೇವಾರ್ಥಮಾಗತಾನಾಂ ಮಹಾತ್ಮನಾಮ್ ।
ಅನ್ನಪಾನಪ್ರದಾನಂ ಚ ಶಿವಭಕ್ತಿರುದೀರಿತಾ ॥೧೨॥

ಮಹಾದೇವಪದಾದೀನಾಂ ಶ್ರವಣೇಚ್ಛಾ ಮಹರ್ಷಯಃ ।
ಮಹಾಭಕ್ತಿರಿತಿ ಪ್ರೋಕ್ತಾ ಮಹಾಮಾಹೇಶ್ವರೈರ್ಜನೈಃ ॥೧೩॥

ಕಥಾಶ್ರವಣಕಾಲೇ ತು ಶಿವಸ್ಯ ಪರಮಾತ್ಮನಃ ।
ವಿಕಾರಸ್ಸರ್ವನೇತ್ರಾದೇರ್ಭಕ್ತಿರುಕ್ತಾ ಮಹಾತ್ಮಭಿಃ ॥೧೪॥

ಉದ್ಯಾನಕರಣಂ ಶಂಭೋಶ್ಶಿವಭಕ್ತಿರುದಾಹೃತಾ ।
ವಾಪೀಕೂಪತಟಾಕಾದಿಕರಣಂ ಚ ಮುನೀಶ್ವಿಭಿಃ ॥೧೫॥

ಪ್ರಾಕಾರಗೋಪುರಾದೀನಾಂ ಶಿವಸ್ಯಾಮಿತತೇಜಸಃ ।
ಇಷ್ಟಕಾದ್ಯೈಶ್ಚ ನಿರ್ಮಾಣಂ ಶಿವಭಕ್ತಿರುದೀರಿತಾ ॥೧೬॥

ಶಬ್ದಗಳನ್ನು ಕೇಳಬೇಕೆಂಬ ಇಚ್ಛೆಯೂ ಇವುಗಳೆಲ್ಲವೂ ಶ್ರೇಷ್ಠವಾದ ಶಿವಭಕ್ತಿಗಳೆಂದು ದೊಡ್ಡ ಮಹೇಶ್ವರನಲ್ಲಿ ಭಕ್ತಿಯುಳ್ಳ ಮಹಾತ್ಮರು ಹೇಳುತ್ತಾರೆ. ||೧೧-೧೨-೧೩||

ಶಿವನ ಕಥೆಗಳನ್ನು ಕೇಳುವ ಕಾಲದಲ್ಲಿ ಉಂಟಾಗುವ ಆನಂದಬಾಷ್ಪ, ರೋಮಾಂಚ ಮುಂತಾದ ಅನುಭವಗಳೂ ಒಂದು ವಿಧವಾದ ಭಕ್ತಿಯ ಗುರುತುಗಳೆಂದು ಮಹಾತ್ಮರು ಹೇಳುತ್ತಾರೆ. ||೧೪||

ಶಿವನಿಗೋಸ್ಕರ ತೋಪುಗಳನ್ನು ಹಾಕಿಸುವುದೂ, ಬಾವಿ, ಕೊಳ, ಕೆರೆ ಇವುಗಳನ್ನು ಕಟ್ಟಿಸುವುದೂ, ಕಲ್ಲು, ಇಟ್ಟಿಗೆ ಮೊದಲಾದವುಗಳಿಂದ ದೇವಸ್ಥಾನ, ಗೋಪುರ ಇವುಗಳನ್ನು ಕಟ್ಟಿಸುವುದೂ ಶಿವಭಕ್ತಿಗೆ ಗುರುತೂ, ಸಾಧನವೂ ಆಗಿರುವುದರಿಂದ ಶಿವಭಕ್ತಿ ಎಂದು ಮಹಾತ್ಮರಿಂದ ಹೇಳಲ್ಪಟ್ಟಿದೆ. ಏಕೆಂದರೆ ಆಯಾಸ ಪರಿಹಾರ ಮುಂತಾದ ದುಃಖನಿವೃತ್ತಿಯಾದಾಗಲೂ, ಫಲಜಲಗಳ ಸೇವನೆಯಿಂದ ಸುಖಪ್ರಾಪ್ತಿಯಾದಾಗಲೂ, ಆಸ್ತಿಕರಾದ ಧಾರ್ಮಿಕರಿಗೆ ಈ ಎಲ್ಲಕ್ಕೂ ಮೂಲ ಕಾರಣನೂ, ಆದಿಪ್ರೇರಕನೂ, ಆದ ದೇವನನ್ನು ಜ್ಞಾಪಿಸಿಕೊಂಡು ಕೃತಜ್ಞತೆಯಿಂದ ಧ್ಯಾನಿಸುತ್ತಾರೆ. ಆದುದರಿಂದ ಈ ಧರ್ಮಕಾರ್ಯಗಳಿಂದಲೂ ಶಿವಭಕ್ತಿಗೆ ಸಹಾಯವಾಗುತ್ತದೆ. ಎಂದು ಭಾವವು. ||೧೫-೧೬||

ಶಿವಶಾಸನಯುಕ್ತಸ್ಯ ಪೂಜಾ ಶ್ರದ್ಧಾ ಪುರಸ್ಸರಮ್ ।
ಶಿವಭಕ್ತಿರಿತಿ ಪ್ರೋಕ್ತಾ ಶಿವಭಕ್ತಿಪರಾಯಣೈಃ ॥೧೭॥

ಶಿವಾರಾಧನಬುದ್ಧ್ಯೈವ ನಿತ್ಯಾನಾಮಪಿ ಕರ್ಮಣಾಮ್ ।
ನೈಮಿತ್ತಿಕಾನಾಂ ಕರಣಮಪಿ ಭಕ್ತಿಶ್ಶಿವಸ್ಯ ತು ॥೧೮॥

ಅಭ್ಯಾಸಶ್ಶಿವವಿದ್ಯಾಯಾಸ್ತಸ್ಯಾ ಅಧ್ಯಾಪನಂ ತಥಾ ।
ಶಿವಭಕ್ತಿರಿತಿ ಪ್ರೋಕ್ತಾ ಶಿವಭಕ್ತಿಪರಾಯಣೈಃ ॥೧೯॥

ಲೇಖನಂ ಶಿವವಿದ್ಯಾಯಾಃ ಪ್ರದಾನಂ ಪುಸ್ತಕಸ್ಯ ತು ।
ಶಿವಭಕ್ತಿರಿತಿ ಪ್ರೋಕ್ತಾ ಶಿವಶಾಸ್ತ್ರವಿಶಾರದೈಃ ॥೨೦॥

ಶಿವಪುಸ್ತಕನಿಕ್ಷೇಪಸ್ಥಾನನಿರ್ಮಾಣಮಾಸ್ತಿಕಾಃ ।
ಶಿವಭಕ್ತಿರಿತಿ ಪ್ರೋಕ್ತಾ ಶಿವದೃಷ್ಟಿಪರಾಯಣೈಃ ॥೨೧॥

ಶಿವನ ಅಪ್ಪಣೆಯಂತೆ ನಡೆಯುವವರನ್ನು ಶ್ರದ್ಧೆಯಿಂದ ಪೂಜಿಸುವುದೂ ಶಿವಭಕ್ತಿಯೆಂದು ಈಶ್ವರನಲ್ಲಿ ಭಕ್ತಿಯುಳ್ಳವರು ಹೇಳುತ್ತಾರೆ. ಶಿವನ ಪೂಜೆಯೆಂಬ ಭಾವನೆಯಿಂದ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡುವುದೂ ಶಿವಭಕ್ತಿ ಎಂದು ಮಹಾತ್ಮರು ಹೇಳಿರುತ್ತಾರೆ. ||೧೭-೧೮||

ಶಿವಸಂಬಂಧವಾದ ವಿದ್ಯೆಯನ್ನು ಓದುವುದೂ, ಓದಿದುದನ್ನು ಮತ್ತೊಬ್ಬರಿಗೆ ಹೇಳಿಕೊಡುವುದೂ ಶಿವಭಕ್ತಿ ಎಂದು ಶಿವಭಕ್ತರು ಹೇಳುತ್ತಾರೆ. ಎಲೈ ಋಷಿಗಳೇ, ಶಿವವಿದ್ಯೆಯ ಪುಸ್ತಕಗಳನ್ನು ಬರೆಯುವುದೂ, ದಾನಮಾಡುವುದೂ, ಶಿವವಿದ್ಯಾ ಪುಸ್ತಕಗಳನ್ನು ಇಡುವುದಕ್ಕೋಸ್ಕರವೂ, ವಾಚಕರು ಬಂದು ಗ್ರಂಥಗಳನ್ನು ವ್ಯಾಸಂಗ ಮಾಡಲು ಅನುಕೂಲಿಸುವಂತೆಯೂ, ಪುಸ್ತಕಾಲಯ (ಲೈಬ್ರೆರಿ)ಗಳನ್ನು ಸ್ಥಾಪಿಸಲು ಕಟ್ಟಡ ಮುಂತಾದವುಗಳನ್ನು ಮಾಡಿಸುವುದೂ, ಶಿವಭಕ್ತಿ ಎಂದು ಈಶ್ವರನಲ್ಲಿ ಭಕ್ತಿಯುಳ್ಳ ಮಹಾತ್ಮರು ಹೇಳುತ್ತಾರೆ. ||೧೯-೨೦-೨೧||

ಶಿವಜ್ಞಾನಿಯಾದವನಿಗೆ ಎಂದರೆ ಜ್ಞಾನವೈರಾಗ್ಯಗಳಿಂದ ಸನ್ಯಾಸಿಯಾಗಿರುವವನಿಗೂ, ದೇವರಲ್ಲಿ ಭಕ್ತಿಯುಳ್ಳವನಿಗೂ, ಮಠಗಳನ್ನು ಮತ್ತು ಭಜನೆಯ ಮಂದಿರಗಳನ್ನೂ ಕಟ್ಟಿಸಿ, ಅಲ್ಲಿ ಧರ್ಮಾಚರಣೆಯಿಂದಲೂ, ವೇದಾಂತವಿಚಾರದಿಂದಲೂ ಧರ್ಮ ಮತ್ತು ತಿಳಿವಳಿಕೆಗಳನ್ನು ಪ್ರಚಾರಮಾಡುತ್ತಾ ತಾನೂ ಮತ್ತು

ಶಿವಜ್ಞಾನೈಕನಿಷ್ಠಸ್ಯ ಮಠಿಕಾದಾನಮೇವ ಚ ।
ಅನ್ನಪಾನಾದಿದಾನಂ ಚ ಶಿವಭಕ್ತಿರುದೀರಿತಾ ॥೨೨॥

ಶಿವಜ್ಞಾನೈಕನಿಷ್ಠಸ್ಯ ಶುಶ್ರೂಷಾ ಶ್ರದ್ಧಯಾ ಸಹ ।
ಶಿವಭಕ್ತಿರಿತಿ ಪ್ರೋಕ್ತಾ ಶಿವಭಕ್ತಿಪರಾಯಣೈಃ ॥೨೩॥

ಜಾಪಿನಾಂ ಶಿವಮಂತ್ರಸ್ಯ ಶುಶ್ರೂಷಾ ಚ ಮಹಾತ್ಮನಾಮ್ ।
ಶಿವಭಕ್ತಿರಿತಿ ಪ್ರೋಕ್ತಾ ಶಿವತತ್ತ್ವವಿಚಿಂತಕೈಃ ॥೨೪॥

ಶಿವಯಾತ್ರಾಪರಾಣಾಂ ತು ಶುಶ್ರೂಷಾ ಚ ತಥೈವ ಚ ।
ಶಿವಯಾತ್ರಾ ಚ ವಿದ್ವದ್ಭಿಶ್ಶಿವಭಕ್ತಿಃ ಪ್ರಕೀರ್ತಿತಾ ॥೨೫॥

ಶಿವಯಾತ್ರಾಪರಾಣಾಂ ತು ಬಾಧಕಾನಾಂ ತು ಬಾಧನಮ್ ।
ಶಿವಭಕ್ತಿರಿತಿ ಪ್ರೋಕ್ತಾ ಶಿವಯಾತ್ರಾಪರಾಯಣೈಃ ॥೨೬॥

ಶಿವಾಪರಾಧನಿಷ್ಠಾನಾಂ ಛೇದನಂ ಪರಯಾ ಮುದಾ ।
ಶಿವಭಕ್ತಿರಿತಿ ಪ್ರೋಕ್ತಾ ಶಿವಾರಾಧನತತ್ಪರೈಃ ॥೨೭॥

ಇತರರೂ ಕೃತಾರ್ಥರೂ ಧನ್ಯರೂ ಆಗಲು ಅನುಕೂಲಿಸುವಂತೆ ಧರ್ಮಜ್ಞಾನಗಳ ಕೇಂದ್ರಗಳನ್ನು ಸ್ಥಾಪಿಸಿಕೊಂಡು ವಾಸಮಾಡುವುದಕ್ಕೆ ಸ್ಥಳಗಳನ್ನು ಕೊಡುವುದೂ, ಅನ್ನನೀರುಗಳನ್ನು ಕೊಡುವುದೂ, ಶಿವಜ್ಞಾನ ಒಂದರಲ್ಲೇ ಆಸಕ್ತನಾಗಿರುವವನ ಸೇವೆಮಾಡುವುದೂ, ಶಿವಮಂತ್ರಜಪಮಾಡುವವರ ಸೇವೆಮಾಡುವುದೂ, ಇವುಗಳೆಲ್ಲವೂಶಿವಭಕ್ತಿಗಳೆಂದು ಶಿವನಲ್ಲಿ ಭಕ್ತಿಯುಳ್ಳವರು ಹೇಳುತ್ತಾರೆ. ॥೨೨-೨೩-೨೪॥

ಶಿವಕ್ಷೇತ್ರಗಳಿಗೆ ಹೋಗುವವರ ಸೇವೆಮಾಡುವುದೂ, ಶಿವಕ್ಷೇತ್ರಗಳಿಗೆ ಹೋಗುವುದೂ, ಶಿವಕ್ಷೇತ್ರಗಳಿಗೆ ಹೋಗುವವರಿಗೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೂ, ಶಿವಭಕ್ತಿಗಳೆಂದು ಶಿವಭಕ್ತರೂ ಶಿವನ ನಿಜಸ್ವರೂಪವನ್ನು ವಿಮರ್ಶೆಮಾಡುವವರೂ ಹೇಳುತ್ತಾರೆ. ॥೨೫-೨೬॥

ಶಿವನ ವಿಷಯದಲ್ಲಿ ತಪ್ಪುಮಾಡುವವರನ್ನು ಸಂತೋಷದಿಂದ ಕೊಲ್ಲುವುದೂ, ಶಿವಜ್ಞಾನದಲ್ಲಿ ಆಸಕ್ತರಾದವರನ್ನೂ, ಶಿವಜ್ಞಾನವನ್ನೂ ಯಾರು ದೂಷಿಸುತ್ತಾನೋ,

ಶಿವಜ್ಞಾನೈಕನಿಷ್ಠಾನಾಂ ಶಿವಜ್ಞಾನಸ್ಯ ಸುವ್ರತಾಃ ।
ದೂಷಕಸ್ಯ ಶಿರಶ್ಛೇದಶ್ಶಿವಭಕ್ತಿರುದೀರಿತಾ ॥೨೮॥

ಭಸ್ಮಸಾಧನನಿಷ್ಠಾನಾಂ ದೂಷಕಸ್ಯ ಮುನೀಶ್ವರಾಃ ।
ಛೇದನಂ ಶಿರಸಸ್ಸಾಕ್ಷಾಚ್ಛಿವಭಕ್ತಿರುದೀರಿತಾ ॥೨೯॥

ವಿಷ್ಣ್ವಾದೀನಾಂ ತು ದೇವಾನಾಂ ದೂಷಕಸ್ಯ ದುರಾತ್ಮನಃ ।
ಬಾಧನಂ ಶಿವಭಕ್ತಿಸ್ತು ಪ್ರೋಕ್ತಾ ವೇದಾಂತವೇದಿಭಿಃ ॥೩೦॥

ವಿಷ್ಣ್ವಾದಿದೇವತಾಭಕ್ತಸ್ಯೈವ ದೂಷಣಕಾರಿಣಃ ।
ಬಾಧನಂ ಚ ಮಹಾಪ್ರಾಜ್ಞೈಶ್ಶಿವಭಕ್ತಿರುದೀರಿತಾ ॥೩೧॥

ಅಂಥ ದುಷ್ಟನ ತಲೆಯನ್ನು ಕತ್ತರಿಸುವುದೂ, ಎಲೈ ಋಷಿಗಳೇ, ಯಾವಾಗಲೂ ಭಸ್ಮಧಾರಣಮಾಡುವವರನ್ನು ಯಾರು ಬೈಯುತ್ತಾರೋ ಅವರ ತಲೆಕತ್ತರಿಸುವುದೂ ಶಿವಭಕ್ತಿಯೆಂದು ಶಿವಭಕ್ತರು ಹೇಳುತ್ತಾರೆ. ||೨೭-೨೮-೨೯||

ವಿಷ್ಣುವೇ ಮೊದಲಾದ ದೇವತೆಗಳನ್ನು ದೂಷಣೆಮಾಡುವ, ಮತ್ತು ವಿಷ್ಣ್ವಾದಿದೇವತೆಗಳ ಭಕ್ತರನ್ನು ದೂಷಣೆಮಾಡುವ, ದುಷ್ಟನನ್ನು ಕೊಲ್ಲುವುದೂ ಶಿವಭಕ್ತಿಯೆಂದು ಬಹಳ ಬುದ್ಧಿವಂತರಾದವರು ಹೇಳುತ್ತಾರೆ. ಇಂತಹ ಸಂದರ್ಭ ಗಳಲ್ಲಿ ಈ ಮಾತುಗಳಿಗೆ ವಾಚ್ಯಾರ್ಥದಲ್ಲಿ ತಾತ್ಪರ್ಯವಿಲ್ಲವು. ಏಕೆಂದರೆ ಹಾಗೆ ಮಾಡುವುದರಿಂದ ದೇಶದಲ್ಲಿ ಶಾಂತಿಯು ಹಾಳಾಗುತ್ತದೆ. ಆದುದರಿಂದ "ನಹಿನಿಂದಾ" ನ್ಯಾಯವನ್ನು ಅನುಸರಿಸಿ, ಶಿವಭಕ್ತಿಯು ಉತ್ತಮವಾದುದೆಂದೂ ಅದಕ್ಕೆ ಸಹಾಯ ವನ್ನು ಒದಗಿಸುವುದೂ, ಬಾಧಕಗಳನ್ನು ನಿವಾರಿಸುವುದೂ ಧರ್ಮವೆಂದು ಬೋಧಿಸು ವುದರಲ್ಲಿ ತಾತ್ಪರ್ಯವೆಂದೂ, ತಿಳಿಯಬೇಕು. ಶಿವಭಕ್ತಿದೂಷಕರಲ್ಲಿರುವ ದುಷ್ಟವಾದ ಮನೋಭಾವವನ್ನು ಸರಿಯಾದ ತಿಳಿವಳಿಕೆ ಮತ್ತು ಉದಾಹರಣೆಗಳಿಂದ ಮಾರ್ಪ ಡಿಸಬೇಕೆಂಬುದರಲ್ಲಿ ತಾತ್ಪರ್ಯವೆಂದು ತಿಳಿಯಬೇಕು. ಏಕೆಂದರೆ ಇವು ವಿಶೇಷ ಧರ್ಮಗಳಾಗಿವೆ. ಇವುಗಳಿಂದ ಸಾಮಾನ್ಯ ಧರ್ಮಗಳಾದ ಅಹಿಂಸಾ, ಪರೋಪಕಾರ ಮುಂತಾದವುಗಳಿಗೆ ಬಾಧೆ ಬರದಂತೆ ತಿಳಿದು ಆಚರಿಸಬೇಕೆಂದು ತಾತ್ಪರ್ಯವು. ಇದನ್ನು ತಿಳಿಯದೆ ಅಲ್ಪಜ್ಞರಾದ ಮತಪ್ರಚಾರಕರು ಇಂತಹ ಸೂಕ್ಷ್ಮಧರ್ಮದ ರೀತಿಯನ್ನು ವಿಚಾರಿಸಿ ತಿಳಿಯದೆ ಅಪಕಾರಪ್ರತೀಕಾರಗಳಿಂದ ದೇಶದಲ್ಲಿ ಧರ್ಮ ಪ್ರಚಾರಸಂಸ್ಥಾಪನೆಗಳಿಗೆ ಬದಲಾಗಿ, ಶಾಂತಿ ನೆಮ್ಮದಿ ಸುಖಗಳಿಗೆ ಭಂಗಗಳನ್ನು

ದೇವದ್ರವ್ಯಸ್ಯ ಭೋಕ್ತ್ರುಶ್ಚ ಬ್ರಾಹ್ಮಣದ್ರವ್ಯಹಾರಿಣಃ ।
ಬಾಧನಂ ಚ ಮಹಾಪ್ರಾಜ್ಞೈಶ್ಶಿವಭಕ್ತಿರುದೀರಿತಾ ॥೩೨॥

ಆತುರಾಣಾಂ ನೃಣಾಂ ರಕ್ಷಾಽರಕ್ಷಾ(ರಕ್ಷಕಾ)ಣಾಂ ಚ ರಕ್ಷಣಮ್ ।
ಭೀತಸ್ಯಾಭಯದಾನಂ ಚ ಶಿವಭಕ್ತಿಃ ಪ್ರಕೀರ್ತಿತಾ ॥೩೩॥

ಸರ್ವಭೂತೇಷು ಕಾರುಣ್ಯಂ ಪ್ರಿಯಭಾಷಣಮೇವ ಚ ।
ಸರ್ವಭೂತಹಿತೇ ಶ್ರದ್ಧಾ ಸಾಕ್ಷಾದ್ಭಕ್ತಿಶ್ಶಿವಸ್ಯ ತು ॥೩೪॥

ಸರ್ವಭೂತೇಷು ದೋಷಸ್ಯಾದರ್ಶನಂ ಗುಣದರ್ಶನಮ್ ।
ಸರ್ವಭೂತೇಷು ಮೈತ್ರೀ ಚ ಶಿವಭಕ್ತಿರುದೀರಿತಾ ॥೩೫॥

ತಂದಿರುತ್ತಾರೆಂಬುದನ್ನು ಗಮನಿಸಬೇಕು. ಆದುದರಿಂದ ಮೇಲೆ ಹೇಳಿದಂತೆ ಇಂತಹ ವಾಕ್ಯಗಳಿಗೆ ವಾಚ್ಯಾರ್ಥದಲ್ಲಿ ತಾತ್ಪರ್ಯವಿಲ್ಲವೆಂದೂ, ಶಿವಭಕ್ತಿಯ ಮೇಲ್ಮೆಯನ್ನು ವಿವರಿಸುವುದರಲ್ಲೇ ತಾತ್ಪರ್ಯವೆಂದೂ ತಿಳಿಯಬೇಕು. ॥೩೦-೩೧॥

ದೇವರ ದ್ರವ್ಯವನ್ನು ಅನ್ಯಾಯವಾಗಿ ಅನುಭವಿಸುವವನನ್ನು ಹಿಂಸಿಸುವುದೂ, ಬ್ರಾಹ್ಮಣರ ದ್ರವ್ಯವನ್ನು ಕದಿಯುವವರನ್ನು ಹಿಂಸಿಸುವುದೂ, ರೋಗಿಗಳನ್ನು ಕಾಪಾಡುವುದೂ, ಅನಾಥರನ್ನು ಕಾಪಾಡುವುದೂ, ಭಯಪಟ್ಟವರನ್ನು ಭಯದಿಂದ ಕಾಪಾಡುವುದೂ ಇವುಗಳೆಲ್ಲವೂ ಶಿವಭಕ್ತಿಯೆಂದು ಪ್ರಾಜ್ಞರು ಹೇಳುತ್ತಾರೆ. ಹೀಗೆ ಸಾಮಾನ್ಯಧರ್ಮಗಳನ್ನು ಆಚರಿಸುವುದೂ ಶಿವಭಕ್ತಿಯೆಂದು ಹೇಳಿದಂತಾಯಿತು. ॥೩೨-೩೩॥

ಎಲ್ಲಾ ಪ್ರಾಣಿಗಳಲ್ಲಿಯೂ ಕರುಣೆಯನ್ನು ತೋರಿಸುವುದು, ಹಿತವಾದ ಮಾತುಗಳನ್ನಾಡುವುದು–ಎಲ್ಲಾ ಪ್ರಾಣಿಗಳಿಗೂ ಒಳ್ಳೆಯದನ್ನು ಮಾಡುವುದರಲ್ಲಿ ಆಸಕ್ತನಾಗಿರುವುದು, ಎಲ್ಲಾ ಪ್ರಾಣಿಗಳಲ್ಲಿಯೂ ದೋಷಗಳನ್ನು ಎಣಿಸದೆ ಗುಣವನ್ನೇ ಎಣಿಸುವುದು, ಇವುಗಳೆಲ್ಲವೂ ಈಶ್ವರಭಕ್ತಿಗಳು ಎಂದು ಹೇಳಿದೆ. ಈ ಮೂರು ಶ್ಲೋಕಗಳಲ್ಲಿ ಸಾಮಾನ್ಯಧರ್ಮಗಳನ್ನೂ ವಿಧಾನಮಾಡಿರುವುದರಿಂದ ಹಿಂದಿನ ೨೭ ರಿಂದ ೩೨ ಶ್ಲೋಕಗಳಿಗೆ ಮೇಲೆ ಹೇಳಿದಂತೆ ಅರ್ಥಮಾಡಬೇಕೆಂಬುದು ವಾಚಕರಿಗೂ ಗೊತ್ತಾಗುತ್ತದೆ. ಆದುದರಿಂದ ಯಾವುದೊಂದು ವಿಶೇಷ ಧರ್ಮವನ್ನು ಬೋಧಿಸಿರುವಾಗ ಹೇಳಿರುವ ಅತಿಶಯೋಕ್ತಿಗಳಿಗೆ ವಾಚ್ಯಾರ್ಥದಲ್ಲಿ ತಾತ್ಪರ್ಯವಿಲ್ಲವೆಂದೂ, ವಿಶೇಷಧರ್ಮವನ್ನು ಹೊಗಳಿ ಜನರಿಗೆ ಅದರಲ್ಲಿ ಆದರವನ್ನುಂಟುಮಾಡುವುದರಲ್ಲಿ ಮಾತ್ರ ಉದ್ದೇಶವಿದೆ ಎಂದೂ ತಿಳಿಯಬೇಕು.

ಮಹಾದೇವೇಽತಿವಿಶ್ವಾಸೋ ವಿಶ್ವಾಸಶ್ಶಿವವೇದನೇ ।
ವೇದಾಂತೇಷು ಚ ವಿಶ್ವಾಸಶ್ಶಿವಭಕ್ತಿರುದೀರಿತಾ ॥೩೬॥

ಗುರೂಕ್ತಾರ್ಥೇಷು ವಿಶ್ವಾಸೋ ಗುರುಶುಶ್ರೂಷಣಂ ತಥಾ ।
ಸಾಽಪಿ ಭಕ್ತಿರಿತಿ ಪ್ರೋಕ್ತಾ ವೇದವೇದಾಂತವೇದಿಭಿಃ ॥೩೭॥

ಭಕ್ತಿರೇವ ಪರಮಾರ್ಥದಾಯಿನೀ
ಭಕ್ತಿರೇವ ಭವರೋಗನಾಶಿನೀ ।
ಭಕ್ತಿರೇವ ಪರವೇದನಪ್ರದಾ
ಭಕ್ತಿರೇವ ಪರಮುಕ್ತಿಕಾರಿಣೀ ॥೩೮॥

ಭಕ್ತಿಯುಕ್ತಜನಚಿತ್ತಪಂಕಜೇ
ಭುಕ್ತಿಮುಕ್ತಿಫಲದಃ ಪುರಾತನಃ ।
ಶಕ್ತಿಯುಕ್ತಪರವಿಗ್ರಹಶ್ಶಿವಃ
ಸತ್ಯಮೇವ ಸತತಂ ಪ್ರಕಾಶತೇ ॥೩೯॥

"ಅಹಿಂಸಾಸತ್ಯಮಸ್ತೇಯಂ" "ಪರೋಪಕಾರಃ ಪುಣ್ಯಾಯ" ಇವೇ ಮುಂತಾದುವು ಸಾಮಾನ್ಯಧರ್ಮಗಳು. ಇವನ್ನು ಎಲ್ಲರೂ ಯಾವಾಗಲೂ ಕಾಪಾಡಿ ಆಚರಿಸುತ್ತಿರಬೇಕು. ||೩೪-೩೫||

ಮಹಾದೇವನು ರಕ್ಷಕನೆಂಬ ಹೆಚ್ಚಾದ ಪ್ರೀತಿಯೂ, ಶಿವನನ್ನು ತಿಳಿಯುವುದು ಮೋಕ್ಷಸಾಧನವೆಂಬ ಭರವಸೆಯೂ ಶಿವಭಕ್ತಿ ಎನ್ನಿಸಿಕೊಳ್ಳುತ್ತವೆ. ಅಲ್ಲದೆ ಗುರುಗಳು ಹೇಳಿದಂತೆ ಶಿವತತ್ವ ವಿಚಾರದಲ್ಲಿರುವ ಉಪನಿಷತ್ತುಗಳು ಶಿವಜ್ಞಾನಕ್ಕೆ ಮುಖ್ಯ ಸಾಧನವೆಂಬ ನಂಬಿಕೆಯೂ, ಗುರುಗಳ ಸೇವೆಮಾಡುವುದೂ, ಇವೆಲ್ಲವೂ ಶಿವಭಕ್ತಿಗಳೆಂದು ವೇದವೇದಾಂತವನ್ನು ತಿಳಿದವರು ಹೇಳುತ್ತಾರೆ. ||೩೬-೩೭||

ಭಕ್ತಿಯೇ ಉತ್ತಮವಾದ ಪುರುಷಾರ್ಥವನ್ನುಂಟುಮಾಡುವುದು. ಸಂಸಾರವೆಂಬ ರೋಗವನ್ನು ಪರಿಹಾರಮಾಡುವುದೂ ಭಕ್ತಿಯೇ. ಭಕ್ತಿಯೇ ಶ್ರೇಷ್ಠವಾದ ಜ್ಞಾನವನ್ನು ಕೊಡುವುದು. ಭಕ್ತಿಯೇ ಉತ್ತಮವಾದ ಮುಕ್ತಿಗೂ ಕಾರಣವಾದುದು. ||೩೮||

ಭಕ್ತಿಯುಳ್ಳ ಜನಗಳ ಕಮಲದಂತೆ ಇರುವ ಹೃದಯದಲ್ಲಿ ಭೋಗವನ್ನೂ, ಮೋಕ್ಷವನ್ನೂ, ಕೊಡುವ, ಬಹಳ ಹಳಬನಾದ, ಪಾರ್ವತೀಸಹಿತನಾದ, ಉತ್ತಮ

ಭಕ್ತಜನಕೃತ್ಯಪರಿತುಷ್ಟಪರಮೇಶಃ
ಸತ್ಯಸುಖಬೋಧಪರಮಂ ವಪುರನಂತಮ್ ।
ಸ್ವಸ್ಯ ಮುನಯಃ ಪರಮಕಾರುಣಿಕ ಈಶಃ
ಶಕ್ತಿಸಹಿತಸ್ತ್ರಿನಯನಃ ಖಲು ದದಾತಿ ॥೪೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಶಿವಭಕ್ತಿವಿಚಾರೋ ನಾಮ ಷಡ್ವಿಂಶಾಧ್ಯಾಯಃ

ವಾದ ಶರೀರವುಳ್ಳ ಶಿವನು ಯಾವಾಗಲೂ ಪ್ರಕಾಶಿಸುತ್ತಿರುತ್ತಾನೆ. ಈ ಮಾತು ಸತ್ಯವಾದುದು. ॥೩೯॥

ಎಲೈ ಋಷಿಗಳೇ, ಭಕ್ತರಾದವರು ಮಾಡುವ ಕೆಲಸದಿಂದ ಸಂತೋಷಗೊಂಡ, ಬಹಳ ಕರುಣಾಶಾಲಿಯಾದ ಲೋಕಕ್ಕೆಲ್ಲಾ ಒಡೆಯನಾದ ಅಂಬಾಸಹಿತನಾದ ಮೂರು ಕಣ್ಣುಗಳುಳ್ಳ ಶಿವನು ಭಕ್ತನಿಗೆ ಸಚ್ಚಿದಾನಂದರೂಪವಾದ ನಾಶರಹಿತವಾದ ಶರೀರವನ್ನು ಅಂದರೆ ಮೋಕ್ಷವನ್ನು ಕೊಡುತ್ತಾನೆ. ಈ ವಿಚಾರದಲ್ಲಿ ಸಂದೇಹವಿಲ್ಲವು—ಎಂದು ಸೂತಪುರಾಣಿಕರು ಶೌನಕಾದಿಗಳನ್ನು ಕುರಿತು ಶಿವಭಕ್ತಿಯ ವಿಚಾರವನ್ನು ಈ ರೀತಿಯಾಗಿ ಹೇಳಿದರು. ॥೪೦॥

ಈ ಅಧ್ಯಾಯದಲ್ಲಿ ಭಕ್ತಿಯು ಅಪರಭಕ್ತಿ, ಪರಭಕ್ತಿ, ಎಂದೂ, ಸಾಧನಭಕ್ತಿ, ಸಾಧ್ಯಭಕ್ತಿ, ಎಂದೂ, ನಾರದ, ಶಾಂಡಿಲ್ಯ, ಮುಂತಾದವರು ನಿರೂಪಿಸಿರುವ ಭಕ್ತಿಸೂತ್ರಗಳಲ್ಲಿ ತಿಳಿಯಹೇಳಿರುವ ಭಕ್ತಿಯ ಬಗೆಗಳನ್ನು ಸಂಗ್ರಹವಾಗಿಯೂ ವಿಶದವಾಗಿಯೂ ವಿಧಾನಮಾಡಿರುವುದನ್ನು ಗಮನಿಸಬೇಕು. ಕಾಮ್ಯ ಧರ್ಮಾಚರಣೆ ಎಂಬ ಅಪರಭಕ್ತಿಯೂ, ಐಹಿಕಾಮುಷ್ಮಿಕಭೋಗಗಳನ್ನೂ, ನಿಷ್ಕಾಮ ಧರ್ಮಾಚರಣೆ ಎಂಬ ಸಾಧನಭಕ್ತಿಯೂ, ಚಿತ್ತಶುದ್ಧಿ, ಜ್ಞಾನಪ್ರಾಪ್ತಿಗಳ ಮೂಲಕವಾಗಿ ಕಡೆಗೆ ಮೋಕ್ಷವನ್ನೂ ಉಂಟುಮಾಡುವುದರಿಂದ, ಪರಭಕ್ತಿ ಅಥವಾ ಸಾಧ್ಯಭಕ್ತಿಯಲ್ಲಿ ಪರಿಣಮಿಸುತ್ತದೆಂಬುದನ್ನು ಗಮನಿಸಬಹುದು.

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ನಾನಾಬಗೆಯಲ್ಲಿರುವ ಶಿವಭಕ್ತಿಯ ಸ್ವರೂಪಗಳನ್ನು ವಿವರಿಸಿರುವ
ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಸಪ್ತವಿಂಶೋಽಧ್ಯಾಯಃ ||

ಇಪ್ಪತ್ತೇಳನೆಯ ಅಧ್ಯಾಯವು

(ಪರಪದಸ್ವರೂಪ ವಿಚಾರಃ)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಪರಾತ್ಪರತರಂ ಪದಮ್ ।
ಯತ್ಸತ್ತಾಯೋಗತಸ್ಸರ್ವಂ ಸತ್ಯವದ್ಭವತಿ ದ್ವಿಜಾಃ ॥೧॥

ಇದುವರೆಗೆ ಪರಶಿವಸ್ವರೂಪಜ್ಞಾನಕ್ಕೆ ಉಪಾಯವಾದ ಭಕ್ತಿ, ಪ್ರಸಾದಗಳನ್ನು ಹೇಳಿ ಈಗ ಪರಶಿವಸ್ವರೂಪವು ಅದ್ವೈತವೇ ಆಗಿದೆ ಎಂಬುದನ್ನು ವಿವರಿಸುತ್ತಾರೆ. ಮೇಲಾದ ತತ್ತ್ವಗಳಲ್ಲಿ ಶ್ರೇಷ್ಠವಾದ ತತ್ತ್ವವನ್ನು ವಿವರಿಸಲಾಗುವುದು. ಶಕ್ತಿತತ್ತ್ವವೇ ಉಪಾಧಿಯಾಗುಳ್ಳದ್ದು ಪರವೆನಿಸುತ್ತದೆ. ಶಿವತತ್ತ್ವವೇ ಉಪಾಧಿಯಾಗಿ ಉಳ್ಳದ್ದು ಮೇಲಾದುದು ಪರಾತ್ಪರವೆನಿಸುತ್ತದೆ. ಈ ಉಪಾಧಿಗಳನ್ನೂ ಮೀರಿರುವ ಸಚ್ಚಿದಾನಂದಸ್ವರೂಪವಾದ ಪರಶಿವಸ್ವರೂಪವು ಪರಾತ್ಪರವೆನಿಸುತ್ತದೆ. ಅದೇ ಪರಮಪದವೆನಿಸುತ್ತದೆ. ಈ ಪರತತ್ತ್ವವು ಎಲ್ಲಕ್ಕೂ ಅಧಿಷ್ಠಾನರೂಪವಾಗಿರುವುದರಿಂದ ಅದರ ಸತ್ತೆಯೇ ಇತರ ಎಲ್ಲ ಪದಾರ್ಥಗಳಲ್ಲೂ ತೋರುತ್ತದೆ, ಅದರಿಂದ ಅವೆಲ್ಲವೂ ಇದೆ ಎಂಬ ವ್ಯವಹಾರಕ್ಕೆ ವಿಷಯವಾಗುತ್ತಿದೆ. ಅಧಿಷ್ಠಾನದ ಸತ್ತೆಯೇ ಆರೋಪ್ಯ ಪ್ರಪಂಚದಲ್ಲೂ ಅನುವೃತ್ತವಾಗಿ ಸತ್ಯವೆಂದು ತೋರುತ್ತದೆ. ||೧||

ಯಸ್ಯೈವ ಚಿತ್ಪ್ರಕಾಶೇನ ಸರ್ವಂ ಚೇತಯತೇ ಜಗತ್ ।
ಯಸ್ಯಾನಂದಾಭಿಸಂಬಂಧಾತ್ಸರ್ವಂ ಪ್ರೇಮಾಸ್ಪದಂ ಭವೇತ್ ॥೨॥

ಪ್ರತೀತಾದ್ಭೌತಿಕಾದಸ್ಮಾತ್ ಭೂತಾನಿ ಮುನಿಪುಂಗವಾಃ ।
ಉತ್ಕೃಷ್ಟಾನಿ ತಥಾ ತೇಭ್ಯೋ ಜೀವಾತ್ಮಾ ಚೇತನಃ ಪ್ರಭುಃ ॥೩॥

ಸಮಷ್ಟಿವ್ಯಷ್ಟಿಭಾವೇನ ಸೋಽಪಿ ಭಿನ್ನಃ ಪರಸ್ಪರಮ್ ।
ವ್ಯಷ್ಟಯಶ್ಚ ತಥಾ ಭಿನ್ನಾಃ ಸ್ವಸ್ವಭಾವಾನುರೂಪತಃ ॥೪॥

ದೇವತಿರ್ಯಙ್ಮನುಷ್ಯಾದಿಶರೀರಂ ಪ್ರಾಪ್ನುವಂತಿ ಚ ।
ಆಸಾಂ ಸಮಷ್ಟಿಭೂತಸ್ತು ಶ್ರೇಷ್ಠಸ್ಸರ್ವಾತ್ಮನಾ ಬುಧಾಃ ॥೫॥

ಯಾವ ಅಧಿಷ್ಠಾನಚೈತನ್ಯದಲ್ಲಿ ದೃಕ್‌ನಲ್ಲಿರುವ ದೃಶ್ಯಗ್ರಹಣಸಾಮರ್ಥ್ಯ ರೂಪವಾದ ಚಿತ್ಪ್ರಕಾಶವು ತೋರುತ್ತಿರುತ್ತದೆಯೋ, ಅದರಿಂದ ಚಿತ್ಸ್ವರೂಪವು ದೃಶ್ಯ ದಲ್ಲಿ ಆರೋಪಿತವಾಗಿ ತೋರುತ್ತದೆ. ಹಾಗೆಯೇ ಅಧಿಷ್ಠಾನಭೂತವಾದ ಬ್ರಹ್ಮ ತತ್ತ್ವದ ಆನಂದದ ಸಂಬಂಧವೂ ಆಧ್ಯಾಸಿಕವಾಗಿ ತೋರುತ್ತಾ, ಎಲ್ಲವೂ ಆನಂದ ರೂಪವೆಂದೂ ತೋರುತ್ತದೆ. ಈ ಕಾರಣದಿಂದ ಎಲ್ಲವೂ ಪ್ರೀತಿವಿಷಯವಾಗುತ್ತಿರು ತ್ತದೆ. ॥೨॥

ಹೀಗೆ ಪರಿದೃಶ್ಯಮಾನವಾದ ಈ ಪಂಚಭೂತಾತ್ಮಕವಾದ ಪ್ರಪಂಚಕ್ಕಿಂತಲೂ ಅದಕ್ಕೆ ಕಾರಣವಾದ ಪಂಚಭೂತಗಳು ಉತ್ಕೃಷ್ಟವಾದುವು. ಅವುಗಳಿಗಿಂತ ಜೀವನು, ಅವಕ್ಕೆ ಕಾರಣನಾದ ಈಶ್ವರನ ಅಂಶವುಳ್ಳವನಾದುದರಿಂದ, ಉತ್ಕೃಷ್ಟನು. ಅಲ್ಲದೆ ಅವನು ಚೇತನರೂಪನೂ ಶಕ್ತಿಯುಳ್ಳವನೂ ಆಗಿದ್ದಾನೆ. ॥೩॥

ಆ ಜೀವನು ಸಮಷ್ಟಿ ಎಂದೂ ವ್ಯಷ್ಟಿ ಎಂದೂ ಎರಡು ಬಗೆಯಾಗುತ್ತಾನೆ. ಸಮಷ್ಟಿ ಎಂದರೆ ಎಲ್ಲವನ್ನೂ ಸಮಶ್ನುತೇ=ವ್ಯಾಪಿಸಿದ್ದಾನೆ. ನಿರ್ಮಲಸತ್ತ್ವವೇ ಉಪಾಧಿಯಾಗಿ ಉಳ್ಳೋಣದರಿಂದ ತಡೆಯಿಲ್ಲದ ಜ್ಞಾನದಿಂದ ಎಲ್ಲವನ್ನೂ ತಿಳಿಯ ಬಲ್ಲನು. ವ್ಯಷ್ಟಿಗಳೂ ತಮ್ಮ ತಮ್ಮ ಸ್ವಭಾವಾನುಸಾರವಾಗಿ ಭಿನ್ನರಾಗಿರುತ್ತಾರೆ. ವ್ಯಷ್ಟಿ ಎಂದರೆ ವಿಭಕ್ತವಾಗಿ ಪರಿಚ್ಛಿನ್ನವಾಗಿ ಪ್ರತ್ಯೇಕವಾಗಿ ತನ್ನ ಸ್ವರೂಪವನ್ನು ಮಾತ್ರ ಅಶ್ನುತೇ ವ್ಯಾಪಿಸಿದಾನೆ, ತಿಳಿಯುತ್ತಾನೆ. ಆದುದರಿಂದ ಜೀವರು ವ್ಯಷ್ಟಿ ಎನಿಸುತ್ತಾರೆ. ಮಲಿನಸತ್ತ್ವವೇ ಉಪಾಧಿಯಾಗಿ ಉಳ್ಳವರಾಗಿ ಆ ಮಾಲಿನ್ಯದ ಹೆಚ್ಚು ಕಡಿಮೆಗಳಿಂದ ಅವರಲ್ಲೂ ಭೇದವುಂಟಾಗುತ್ತದೆ. ಜೀವರು ಮರಣಕಾಲದಲ್ಲಿ

ತತೋ ವಿಶಿಷ್ಟಾಸ್ಸಕಲಾಃ ಬ್ರಹ್ಮಣಸ್ತು ವಿಭೂತಯಃ ।
ತಾಶ್ಚಾನ್ಯೋನ್ಯಂ ವಿಶಿಷ್ಟಾಸ್ಸ್ಯುಃ ಯಥಾ ಜೀವಾ ಮುನೀಶ್ವರಾಃ ॥೬॥

ತಾಸಾಂ ಬ್ರಹ್ಮಾಧಿಕಃ ತಸ್ಮಾದ್ವಿಷ್ಣುರ್ಮುಖ್ಯಃ ಪ್ರಕೀರ್ತಿತಃ ।
ಸೋಽಪಿ ಸ್ವವ್ಯಷ್ಟಿಭೂತೇಭ್ಯಃ ವರಿಷ್ಠಃ ಪರಿಕೀರ್ತಿತಃ ॥೭॥

ತತೋ ರುದ್ರೋಽಧಿಕಸ್ಸೋಽಪಿ ಸ್ವವ್ಯಷ್ಟಿಭ್ಯೋಽಧಿಕಃ ಸ್ಮೃತಃ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಪರತತ್ತ್ವವಿಭೂತಯಃ ॥೮॥

ಫಲೋನ್ಮುಖವಾದ ಪುಣ್ಯಪಾಪಗಳಲ್ಲಿ ಒಂದರ ಫಲವಾಗಿ ಮುಂದಿನ ಜನ್ಮದ ವಿಷಯವಾದ ಸಂಕಲ್ಪರೂಪವಾದ ಭಾವವನ್ನು ಪಡೆಯುತ್ತಾರೆ. ಅದಕ್ಕನುಸಾರವಾಗಿ ದೇವ, ಮನುಷ್ಯ, ಪ್ರಾಣಿಜನ್ಮಗಳನ್ನು ಹೊಂದುತ್ತಾರೆ. ಇವರೆಲ್ಲರಿಗಿಂತಲೂ ಈ ಎಲ್ಲವನ್ನೂ ತಿಳಿಯಬಲ್ಲ ಸಮಷ್ಟಿಯು ಶ್ರೇಷ್ಠನು. ಆ ಸಮಷ್ಟಿರೂಪನೇ ಹಿರಣ್ಯಗರ್ಭನೆನಿಸುತ್ತಾನೆ. ||೪-೫||

ಆ ಹಿರಣ್ಯಗರ್ಭನಿಗಿಂತಲೂ ಬ್ರಹ್ಮನ ವಿಭೂತಿಗಳಾದ ಬ್ರಹ್ಮ, ವಿಷ್ಣು, ರುದ್ರರು, ಶ್ರೇಷ್ಠರು. ಬ್ರಹ್ಮನಿಗೆ ರಜೋಗುಣವೂ, ವಿಷ್ಣುವಿಗೆ ಬಹಿಸ್ಸತ್ತ್ವ ವಿಶಿಷ್ಟವಾದ ಅಂತರತಮೋಗುಣವೂ, ರುದ್ರನಿಗೆ ಬಹಿಸ್ತಮೋವಿಶಿಷ್ಟವಾದ ಅಂತಸ್ಸತ್ತ್ವವೂ, ಉಪಾಧಿಗಳಾಗಿರುತ್ತವೆ. ಆದುದರಿಂದ ಜೀವರು ಹೇಗೋ ಹಾಗೆ ಈ ತ್ರಿಮೂರ್ತಿಗಳೂ ಉತ್ಕರ್ಷಾಪಕರ್ಷಗಳುಳ್ಳವರಾಗಿರುತ್ತಾರೆ. ||೬||

ಅವರಲ್ಲಿ ಬ್ರಹ್ಮನೂ, ಅವನಿಗಿಂತ ವಿಷ್ಣುವೂ, ಅವನಿಗಿಂತಲೂ ರುದ್ರನೂ ಉಪಾಧಿವಿಶೇಷದಿಂದ ಉತ್ಕೃಷ್ಟರು. ಇವರು ತಮ್ಮ ತಮ್ಮ ವ್ಯಷ್ಟಿಗಳಾದ ಅವತಾರಗಳಿಗಿಂತ ಶ್ರೇಷ್ಠರು. ಅವತಾರಗಳಲ್ಲಿ ಅಂಶತಾರತಮ್ಯವಿದೆ. ||೭||

ಬ್ರಹ್ಮ, ವಿಷ್ಣು, ರುದ್ರರು ಪರತತ್ತ್ವದ ವಿಭೂತಿಗಳೆನಿಸುತ್ತಾರೆ. ಮಾಯಾಗತವಾದ ಗುಣತ್ರಯದಲ್ಲಿ ಒಂದೊಂದು ಮುಂದಾಗಿ ಉಪಾಧಿಯಾಗಿರುವುದರಿಂದ ಈ ಮೂರು ಹೆಸರುಗಳು ಬಂದಿವೆ. ಗುಣತ್ರಯಕ್ಕೆ ಪ್ರಾಧಾನ್ಯದಿಂದ ಮೂರ್ತಿತ್ರಯವಾಗುತ್ತದೆ. ಗುಣತ್ರಯವಿಭಾಗವಿಲ್ಲದ ಮಾಯಾ ಉಪಾಧಿಯಾಗಿದ್ದರೆ ಅವನು ಈಶ್ವರನೆನಿಸುತ್ತಾನೆ. ಇವನು ಮೂರ್ತಿತ್ರಯಕ್ಕಿಂತ ಮೇಲಾದವನು. ಅವನಿಗಿಂತಲೂ ಮೇಲಾದ

ಏಷಾಂ ತ್ರಯಾಣಾಮಧಿಕಃ ಸರ್ವಕಾರಣ ಈಶ್ವರಃ ।
ತತೋಽಧಿಕಂ ಪರಂ ತತ್ತ್ವಂ ಜ್ಞಾನಮಾನಂದಮದ್ವಯಮ್ ॥೯॥

ಇಯಮೇವ ಹಿ ಸರ್ವೇಷಾಂ ಕಾಷ್ಠಾ ಪ್ರೋಕ್ತಾ ಶ್ರುತೌ ಸ್ಮೃತೌ ।
ಯೋಽಯಂ ಮಾನುಷ ಆನಂದಃ ತತಶ್ಶತಗುಣೋತ್ತರಃ ॥೧೦॥

ಮನುಷ್ಯಗಂಧರ್ವಾದೀನಾಂ ಆನಂದ ಇತಿ ಗಮ್ಯತೇ ।
ಬ್ರಹ್ಮಾನಂದಶತಂ ವಿಷ್ಣೋರೇಕ ಆನಂದ ಉಚ್ಯತೇ ॥೧೧॥

ತಸ್ಯಾನಂದಶತಂ ರುದ್ರಸ್ಯೈಕ ಆನಂದ ಏವ ಹಿ ।
ರುದ್ರಾನಂದಶತಂ ಸರ್ವಕಾರಣಸ್ಯ ಶಿವಸ್ಯ ತು ॥೧೨॥

ಕಾರಣತ್ವೋಪಲಕ್ಷ್ಯಸ್ಯ ಶಿವಸ್ಯ ಪರಮಾತ್ಮನಃ ।
ಸತ್ಯಚಿನ್ಮಾತ್ರರೂಪಸ್ಯ ಭೂಮಾನಂದ ಉದಾಹೃತಃ ॥೧೩॥

ಸರ್ವಕಾರಣತ್ವೋಪಲಕ್ಷಿತವಾದ ಶುದ್ಧಬ್ರಹ್ಮಸ್ಥಾನೀಯವಾದ ಪರತತ್ತ್ವವೇ ಪರಶಿವ ಸ್ವರೂಪವು. ಅದೇ ಎರಡನೆಯ ವಸ್ತುವಿಲ್ಲದ ಚಿದಾನಂದರೂಪವಾದುದು. ಈ ಪರತತ್ತ್ವವೇ ನಿರತಿಶಯವಾದ ಕಡೆಯ ಗಡಿಯ ಉತ್ತಮ ವಸ್ತುವು. ಇದೇ ನಿರತಿಶಯವಾದ ಉತ್ಕರ್ಷವುಳ್ಳ ಶುದ್ಧಚಿತ್ತತ್ತ್ವವು. ಇದು ನಿರತಿಶಯವಾದರೂ ಉಪಾಧಿಗುಣತಾರತಮ್ಯದಿಂದ ಒಂದಕ್ಕಿಂತಲೂ ಒಂದು ಸಾತಿಶಯವೆಂದೂ ಮೇಲು ಕೀಳೆಂದೂ ಶ್ರುತಿಯಲ್ಲೂ, ಸ್ಮೃತಿಯಲ್ಲೂ ವ್ಯವಹಾರವಿದೆ. ॥೯॥

ಸ್ವರೂಪಭೂತವಾದ ಜ್ಞಾನಾನಂದಗಳಿಗೂ ಔಪಾಧಿಕವಾಗಿ ಸಾವಧಿಕತ್ವವನ್ನು ತೋರಿಸುತ್ತಾರೆ. ಮಾನುಷಾನಂದಕ್ಕಿಂತ ಮನುಷ್ಯಗಂಧರ್ವನ ಆನಂದವು ನೂರ್ಮಡಿ ಹೆಚ್ಚಿನದು. ॥೧೦॥

ಬ್ರಹ್ಮನ ಆನಂದಕ್ಕಿಂತ ವಿಷ್ಣುವಿನ ಆನಂದವೂ, ಅದಕ್ಕಿಂತ ರುದ್ರನ ಆನಂದವೂ, ಅದಕ್ಕಿಂತ ಈಶ್ವರನ ಆನಂದವೂ, ಅದಕ್ಕಿಂತ ಎಂದರೆ ಕಾರಣತ್ವ ವಿಶಿಷ್ಟನಾದ ಈಶ್ವರನ ಆನಂದಕ್ಕಿಂತ ಸರ್ವಕಾರಣತ್ವೋಪಲಕ್ಷಿತನಾದ ಪರಶಿವನ ಶುದ್ಧಬ್ರಹ್ಮನ ಸ್ವರೂಪಭೂತವಾದ ಆನಂದವೂ ಸಚ್ಚಿದ್ರೂಪವಾದುದು ಮತ್ತು ಎಲ್ಲಕ್ಕಿಂತ ನೂರ್ಮಡಿ ಮೇಲಾದುದು. ॥೧೧-೧೨-೧೩॥

ಏವಂ ಕ್ರಮೇಣ ಸರ್ವೇಷಾಂ ಜ್ಞಾನಾಧಿಕ್ಯಮುಪೇಕ್ಷ್ಯತೇ ॥೧೪॥

ಸ್ಕಂಧಶಾಖಾದಿಭೇದೇನ ಯಥಾ ವೃಕ್ಷೋ ವ್ಯವಸ್ಥಿತಃ ।
ತಥಾ ರುದ್ರಾದಿಭೇದೇನ ಶಿವ ಏಕೋ ವ್ಯವಸ್ಥಿತಃ ॥೧೫॥

ಉತ್ಕರ್ಷಶ್ಚಾಪಕರ್ಷಶ್ಚ ಸ್ಕಂಧಶಾಖಾದಿವಸ್ತುಷು ।
ತಥೋತ್ಕರ್ಷೋಽಪಕರ್ಷಶ್ಚ ರುದ್ರವಿಷ್ಣ್ವಾದಿಷು ಸ್ಥಿತಃ ॥೧೬॥

ತರಂಗಬುದ್ಬುದಾದೀನಾಂ ಯಥಾ ಲೋಕೇ ವ್ಯವಸ್ಥಿತಃ ।
ಉತ್ಕರ್ಷಶ್ಚಾಪಕರ್ಷಶ್ಚ ತಥಾ ರುದ್ರಾದಿಷು ಸ್ಥಿತಃ ॥೧೭॥

ವಿಶ್ವಾಧಿಕತ್ವಂ ರುದ್ರಸ್ಯ ಕಾರಣಸ್ಯ ಶಿವಸ್ಯ ಚ ।
ನ ವದಂತಿ ಜನಾ ಯೇ ತೇ ರಾಕ್ಷಸಾಃ ಸ್ಯುರ್ನ ಸಂಶಯಃ ॥೧೮॥

ವ್ಯಾವಹಾರಿಕದೃಷ್ಟ್ಯಾಽಯಂ ವಿಭಾಗಃ ಪರಿಕೀರ್ತಿತಃ ।
ಪ್ರಮಾಣದೃಷ್ಟ್ಯಾ ವಸ್ತ್ವೇಕಮೇವ ನಿತ್ಯಂ ನ ಸಂಶಯಃ ॥೧೯॥

ಈ ರೀತಿಯಲ್ಲಿ ಜ್ಞಾನದ ಅತಿಶಯವೂ ನೂರ್ಮಡಿಯಾಗಿ ಹೆಚ್ಚು ಹೆಚ್ಚಾಗಿರುತ್ತದೆ. ॥೧೪॥

ಕವಟಲು ಕೊಂಬೆ ಮುಂತಾದ ಭೇದದಿಂದ ವೃಕ್ಷವು ಹೇಗೋ ಹಾಗೆ ರುದ್ರಾದಿಭೇದದಿಂದ ಪರಶಿವನು ಒಬ್ಬನೇ ಇರುತ್ತಾನೆ. ಮೇಲುಕೀಳುಗಳು ಕವಟಲು ಕೊಂಬೆಗಳಲ್ಲಿರುವಂತೆ ರುದ್ರಾದಿಗಳಲ್ಲೂ ಉಂಟು. ಅಲೆ, ನೊರೆ, ಮುಂತಾದವುಗಳಲ್ಲಿ ಹೇಗೆ ಲೋಕದಲ್ಲಿ ಮೇಲುಕೀಳುಗಳುಂಟೋ ಹಾಗೆ ರುದ್ರಾದಿಗಳಲ್ಲೂ ಉಂಟು. ಈ ಮೇಲ್ಮೆಕೀಳ್ಮೆಗಳು ಉಪಾಧಿಗಳಲ್ಲಿವೆ, ಸ್ವರೂಪದಲ್ಲಿಲ್ಲವು. ಸಚ್ಚಿದಾನಂದರೂಪವಾದ ಸ್ವರೂಪದಲ್ಲಿ ಅದ್ವೈತವು ವಾಸ್ತವವಾದುದು. ॥೧೫-೧೬-೧೭॥

ರುದ್ರನಿಗೂ ಎಲ್ಲಕ್ಕೂ ಕಾರಣನಾದ ಪರಶಿವನಿಗೂ ಎಲ್ಲಕ್ಕಿಂತ ಮೇಲ್ಮೆಯನ್ನು ಯಾರು ತಿಳಿದು ಹೇಳುವುದಿಲ್ಲವೋ ಅಂಥವರು ರಾಕ್ಷಸರಾಗುತ್ತಾರೆ. ಅಲ್ಲದೆ ಈ ಮೇಲು ಕೀಳು, ಹೆಚ್ಚು ಕಡಿಮೆ ಮುಂತಾದ ವಿಭಾಗವನ್ನು ವ್ಯಾವಹಾರಿಕದೃಷ್ಟಿಯಿಂದ ಹೇಳಿದೆ. ಅಷ್ಟೇ ಹೊರತು ಪಾರಮಾರ್ಥಿಕವಾಗಿ ಒಂದೇ ವಸ್ತುವೇ ಇದೆ. ಇದರಲ್ಲಿ ಸಂದೇಹವಿಲ್ಲವು. ॥೧೮-೧೯॥

ಅನಾದೃತ್ಯ ಮಹಾಮೋಹಾತ್ಪ್ರಮಾಣಂ ಭುವಿ ಮಾನವಾಃ ।
ಅಯಂ ಪರಸ್ತ್ವಯಂ ನೇತಿ ವಿವದಂತೇ ಪರಸ್ಪರಮ್ ॥೧೯॥

ಮಹಾಪಾಪವತಾಂ ನೃಣಾಂ ರುದ್ರಾಧಿಕ್ಯಂ ನ ಭಾಸತೇ ।
ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಮ್ ॥೨೦॥

ರುದ್ರಾಧಿಕ್ಯಂ ಸ್ವತೋ ಭಾತಿ ಪ್ರಮಾಣೈರಪಿ ತರ್ಕತಃ ।
ಸೋಪಾನಕ್ರಮತೋ ನೃಣಾಂ ದೇವಾಸ್ಸಂಸಾರಮೋಚಕಾಃ ॥೨೧॥

ರುದ್ರಸ್ಸಂಸಾರಮಗ್ನಾನಾಂ ಸಾಕ್ಷಾತ್ಸಂಸಾರಮೋಚಕಃ ।
ಅತಸ್ಸರ್ವಂ ಪರಿತ್ಯಜ್ಯ ಶಿವಾದನ್ಯತ್ತು ದೈವತಮ್ ॥೨೨॥

ಶಿವ ಏಕಸ್ಸದಾ ಧ್ಯೇಯಸ್ಸಾಕ್ಷಾತ್ಸಂಸಾರಮೋಚಕಃ ।

ಈ ಲೋಕದಲ್ಲಿ ಮನುಷ್ಯರು ಶ್ರುತಿ ಮೊದಲಾದ ಪ್ರಮಾಣಗಳನ್ನು ಆದರಿಸದೆ ಮಹಾಮಾಯೆಯ ಪ್ರಭಾವದಿಂದ ಇವನು ಶ್ರೇಷ್ಠನು, ಇವನಲ್ಲವು, ಎಂದು ಒಬ್ಬರೊಡನೊಬ್ಬರು ಜಗಳವಾಡುತ್ತಿರುತ್ತಾರೆ. ಮಹಾ ಪಾಪವುಳ್ಳ ಜನರಿಗೆ ರುದ್ರನು ಎಲ್ಲಕ್ಕಿಂತ ಮೇಲಾದವನೆಂಬ ಅಂಶವು ತೋರದೆ ಹೋಗುತ್ತದೆ. ಅನೇಕ ಜನ್ಮಗಳಲ್ಲಿ ಶ್ರೌತಸ್ಮಾರ್ತಕರ್ಮಾನುಷ್ಠಾನಮಾಡಿ ಚಿತ್ತಶುದ್ಧಿಯನ್ನು ಪಡೆದವರಿಗೆ ರುದ್ರನ ಉತ್ತಮತ್ವವು ತಾನಾಗಿಯೇ ವೇದಪ್ರಮಾಣದಿಂದಲೂ ಅದನ್ನನುಸರಿಸಿರುವ ಯುಕ್ತಿಗಳಿಂದಲೂ ತೋರುತ್ತದೆ. ॥೧೯-೨೦॥

ಇತರ ದೇವತೆಗಳು ಸೋಪಾನಕ್ರಮದಿಂದ ಎಂದರೆ ಈಶ್ವರನ ಮೂಲಕ ಸಂಸಾರದಿಂದ ಬಿಡುಗಡೆಯು ಮನುಷ್ಯರಿಗೆ ಉಂಟಾಗುವಂತೆ ಮಾಡುತ್ತಾರೆ. ರುದ್ರನಾದರೋ ಸಾಕ್ಷಾತ್ಪರಶಿವರೂಪನಾದುದರಿಂದ ಮನುಷ್ಯರಿಗೆ ನೇರವಾಗಿಯೇ ಮೋಕ್ಷವನ್ನು ಕೊಡುತ್ತಾನೆ. ಸಂಸಾರದಲ್ಲಿ ಮುಳುಗಿರುವ ಜನರನ್ನು ಶಿವನು ಬಿಡಿಸಿ ಕಾಪಾಡುತ್ತಾನೆ. ಆದುದರಿಂದ ಶಿವನಿಗಿಂತ ಬೇರೆಯಾದ ದೇವರೆಲ್ಲರನ್ನೂ ಬಿಟ್ಟು ನೇರವಾಗಿ ಮೋಕ್ಷವನ್ನು ಕೊಡುವ ಶಿವನೊಬ್ಬನನ್ನೇ ಮುಮುಕ್ಷುವು ಸರ್ವದಾ ಧ್ಯಾನಮಾಡುತ್ತಿರಬೇಕು. ॥೨೧-೨೨॥

ವೃಕ್ಷಸ್ಯ ಮೂಲಸೇಕೇನ ಶಾಖಾಃ ಪುಷ್ಯಂತಿ ವೈ ಯಥಾ ।
ಶಿವಧ್ಯಾನೇನ ದೇವಾಶ್ಚ ತಥಾ ತೃಪ್ತಾ ಭವಂತಿ ಹಿ ॥೨೩॥

ವಿಕಲ್ಪರಹಿತಂ ತತ್ತ್ವಜ್ಞಾನಮಾನಂದಮವ್ಯಯಮ್ ।
ಯೇ ಪಶ್ಯಂತಿ ವಿಮುಕ್ತಾಸ್ತೇ ಜೀವಂತೋಽಪಿ ನ ಸಂಶಯಃ ॥೨೪॥

ನಿರ್ವಿಕಲ್ಪಂ ಪರಂ ತತ್ತ್ವಂ ತರ್ಕತೋ ಯಸ್ಯ ಭಾಸತೇ ।
ಸೋಽಪಿ ಮುಚ್ಯೇತ ಸಂಸಾರಾತ್ ಯಥಾ ಸ್ವಪ್ನಪ್ರಪಂಚತಃ ॥೨೫॥

ನಿರ್ವಿಕಲ್ಪಂ ಪರಂ ತತ್ತ್ವಂ ಪ್ರಮಾಣೇನೈವ ಕೇವಲಮ್ ।
ಯಸ್ಯ ಭಾತಿ ಸ ಮುಚ್ಯೇತ ಸ್ವಸಂಸಾರಮಹೋದಧೇಃ ॥೨೬॥

ಒಂದು ಗಿಡದ ಬುಡಕ್ಕೆ ನೀರನ್ನು ಹಾಕುವುದರಿಂದ ಕೊಂಬೆರೆಂಬೆಗಳೆಲ್ಲವೂ ಪುಷ್ಟಿಯನ್ನು ಪಡೆಯುವ ಹಾಗೆ, ಶಿವನ ಧ್ಯಾನದಿಂದ ಇತರ ಎಲ್ಲ ದೇವತೆಗಳೂ ತೃಪ್ತಿಯನ್ನು ಪಡೆಯುತ್ತಾರೆ. ಜಾತಿ ಗುಣ ಕ್ರಿಯಾ ವ್ಯಕ್ತಿಗಳಲ್ಲಿ ಹೀಗೋ ಹಾಗೋ ಎಂದು ಮುಂತಾದ ವಿಕಲ್ಪಗಳು ವಿಶೇಷಧರ್ಮಗಳುಳ್ಳ ವಸ್ತುಗಳ ವಿಷಯದಲ್ಲಿ ಸಂಭವಿಸುತ್ತವೆ. ನಿರ್ವಿಶೇಷವಾದ ಪರತತ್ತ್ವವಾದರೋ ಜ್ಞಾನಸ್ವರೂಪವಾದುದಾಗಿಯೂ ಆನಂದಸ್ವರೂಪವಾದುದಾಗಿಯೂ ನಾಶರಹಿತವಾದುದಾಗಿಯೂ ಇದೆ. ಆದುದರಿಂದ ಅಂತಹ ಪರತತ್ತ್ವಸ್ವರೂಪನಾದ ಪರಶಿವನನ್ನು ಯಾರು ತಿಳಿಯುತ್ತಾರೋ ಅವರು ದೇಹವನ್ನು ಧರಿಸಿದ್ದರೂ ಮುಕ್ತರೇ ಆಗಿರುತ್ತಾ ಜೀವನ್ಮುಕ್ತರೆನಿಸುತ್ತಾರೆ. ||೨೩-೨೪||

ನಿರ್ವಿಶೇಷವಾದ ಪರತತ್ತ್ವವು ಯುಕ್ತಿಯಿಂದಲೂ ಯಾರಿಗೆ ತಿಳಿಯುತ್ತದೋ, ಎಂದರೆ ಹಗ್ಗವನ್ನು ನೋಡಿ ಇದು ಹಾವು ಎಂಬ ಭ್ರಮವೂ, ಇದು ಹಾವಲ್ಲವು ಹಗ್ಗವು ಎಂಬ ಬಾಧೆಯೂ ಅಧಿಷ್ಠಾನವಿಲ್ಲದೆ ಸಂಭವಿಸವು. ಆ ಅಧಿಷ್ಠಾನವು ಕಲ್ಪಿತ ಪದಾರ್ಥಗಳಿಗಿಂತ ಮೇಲಾದ ಸತ್ತಾ ಉಳ್ಳ ತತ್ತ್ವವಾಗಿರಬೇಕು. ಹಗ್ಗದಲ್ಲಿ ಹಾವು ಪ್ರಾತಿಭಾಸಿಕವಾದುದು, ಹಗ್ಗವು ವ್ಯಾವಹಾರಿಕವಾದುದು. ಆದುದರಿಂದ ಎಲ್ಲಕ್ಕೂ ಅಧಿಷ್ಠಾನವಾದ ತತ್ತ್ವವು ನಿರ್ವಿಶೇಷವಾಗಿರಬೇಕು ಎಂದು ಮುಂತಾದ ಯುಕ್ತಿಗಳಿಂದಲೂ ಯಾರಿಗೆ ತಿಳಿಯುತ್ತದೋ, ಅಂಥವರು ಸ್ವಪ್ನದಿಂದ ಹೇಗೋ ಹಾಗೆ ಈ ಸಂಸಾರದಿಂದ ಮೋಕ್ಷವನ್ನು ಪಡೆಯುತ್ತಾರೆ. ||೨೫||

ಧರ್ಮವಿಶೇಷಗಳಿಲ್ಲದಿರುವುದರಿಂದ ಪರತತ್ತ್ವಜ್ಞಾನವು ಯಾವನಿಗೆ ವೇದ ಪ್ರಮಾಣದಿಂದಲೇ ಉಂಟಾಗಿದೆಯೋ ಅಂಥವನು, ತನ್ನ ಕಲ್ಪನೆಯಿಂದ ತೋರು

ನ ಚ ನಾಮಾನಿ ರೂಪಾಣಿ ಶಿವಸ್ಯ ಪರಮಾತ್ಮನಃ ।
ತಥಾಽಪಿ ಮಾಯಯಾ ತಸ್ಯ ನಾಮರೂಪೇ ಪ್ರಕಲ್ಪಿತೇ ॥೨೭॥

ಶಿವೋ ರುದ್ರೋ ಮಹಾದೇವಶ್ಶಂಕರೋ ಬ್ರಹ್ಮ ಸತ್ಪರಮ್ ।
ಏವಮಾದೀನಿ ನಾಮಾನಿ ವಿಶಿಷ್ಟಾನಿ ಪರಸ್ಯ ತು ॥೨೮॥

ವಿಷ್ಣುನಾರಾಯಣಾದೀನಿ ನಾಮಾನಿ ಪರಮೇಶ್ವರೇ ।
ಕಥಂಚಿತ್ ಯೋಗವೃತ್ತ್ಯಾ ತು ವರ್ತಂತೇ ನ ತು ಮುಖ್ಯಯಾ ॥೨೯॥

ಅರೂಪಸ್ಯ ಶಿವಸ್ಯಾಪಿ ಮೂರ್ತಿರ್ಧ್ಯೇಯಾ ಹ್ಯುಪಾಸಕೈಃ ।
ಉಮಾರ್ಧವಿಗ್ರಹಾ ಶುಕ್ಲಾ ತ್ರಿಣೇತ್ರಾ ಚಂದ್ರಶೇಖರಾ ॥೩೦॥

ನೀಲಗ್ರೀವಾ ಪರಾನಂದಪ್ರಮೋದಾ ತಾಂಡವಪ್ರಿಯಾ ।
ಬ್ರಹ್ಮವಿಷ್ಣುಮಹಾದೇವೈರುಪಾಸ್ಯಾ ಗುಣಮೂರ್ತಿಭಿಃ ॥೩೧॥

ತ್ತಿರುವ ಕರ್ತೃತ್ವಭೋಕ್ತೃತ್ವಜನನಮರಣಪ್ರವಾಹರೂಪವಾದ ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಎಲ್ಲಕ್ಕೂ ಪರಮಾತ್ಮನಾಗಿರುವ ಪರಶಿವನಿಗೆ ನಾಮರೂಪ ಮುಂತಾದ ವಿಶೇಷಧರ್ಮಗಳು ಪಾರಮಾರ್ಥಿಕವಾಗಿ ಇಲ್ಲವು. ಹಾಗಿದ್ದರೂ ಆ ಪರಮಾತ್ಮನ ನಿಜರೂಪವಾದ ತಿಳಿವಳಿಕೆ ಇಲ್ಲದಿರುವುದರಿಂದ ನಾಮ ರೂಪಗಳು ಅವನಲ್ಲಿ ಕಲ್ಪಿತವಾಗಿ ತೋರುತ್ತಿರುತ್ತವೆ. ||೨೬-೨೭||

ಮಾಯೆಯಿಂದ ಕಲ್ಪಿತವಾದ ನಾಮಗಳಲ್ಲಿ ಶಿವ, ರುದ್ರ, ಮಹಾದೇವ, ಶಂಕರ ಎಂಬ ನಾಮಗಳು ಪರಶಿವನಲ್ಲಿ ರೂಢಿಯನ್ನು ಪಡೆದಿವೆ. ಬ್ರಹ್ಮ, ಸತ್, ಪರಂ, ಎಂಬ ನಾಮಗಳು ಪರಶಿವನ ಪಾರಮಾರ್ಥಿಕರೂಪವನ್ನು ನೇರವಾಗಿ ತಿಳಿಸುವ ಹೆಸರು ಗಳಾಗಿವೆ. ಈ ಹೆಸರುಗಳೆಲ್ಲವೂ ಪರಶಿವನಿಗೆ ಮುಖ್ಯವಾದ ನಾಮಗಳು. ಎಂದರೆ ಇವು ಮುಖ್ಯವಾದ ವೃತ್ತಿಯಿಂದ ಅರ್ಥವನ್ನು ತಿಳಿಸುವ ನಾಮಗಳಾಗಿವೆ. ||೨೮||

ವಿಷ್ಣು, ನಾರಾಯಣ ಮುಂತಾದ ಹೆಸರುಗಳು ಪರಶಿವನಲ್ಲಿ ಯೋಗಾರ್ಥ ದೃಷ್ಟಿಯಿಂದ ಅನ್ವಯವನ್ನು ಹೊಂದುತ್ತವೆಯೇ ಹೊರತು ರೂಢಿಯಿಂದ ಅನ್ವಯಿ ಸುವುದಿಲ್ಲ. ಆದುದರಿಂದ ಅವು ಪರಶಿವನಿಗೆ ಮುಖ್ಯವಾದ ನಾಮಗಳಲ್ಲವು. ||೨೯||

ಪರಶಿವನಿಗೆ ಪಾರಮಾರ್ಥಿಕವಾಗಿ ರೂಪವಿಲ್ಲದಿದ್ದರೂ ಉಪಾಸನೆಮಾಡು ವವರಿಂದ ಆಕಾರವು ಅಂದರೆ ಅರ್ಧನಾರೀಶ್ವರನೆಂದೂ, ಶುಭ್ರವಾಗಿದೆ ಎಂದೂ,

ಸರ್ವಮೂರ್ತಿವಿಹೀನಸ್ಯ ಸರ್ವಮೂರ್ತೇಶ್ಶಿವಸ್ಯ ತು ।
ತಥಾಽಪ್ಯೇಷಾ ಪರಾ ಮೂರ್ತಿಃ ಇತ್ಯೇಷಾ ಶಾಶ್ವತೀ ಶ್ರುತಿಃ ॥೩೨॥

ತಸ್ಮಾತ್ತಯಃ ಪಿಂಡವದ್ವಿಪ್ರಾಃ ರುದ್ರಮೂರ್ತಿಃ ಪರಸ್ಯ ತು ।
ಮೂರ್ತ್ಯಾ ತುಲ್ಯಾನ್ಯಮೂರ್ತಿಭ್ಯೋ ಲಕ್ಷಣೈರ್ಮುನಿಸತ್ತಮಾಃ ॥೩೩॥

ವಿಷ್ಣ್ವಾದೀನಾಂ ತು ಸರ್ವೇಷಾಂ ಮೂರ್ತಯೋ ವ್ಯವಧಾನತಃ ।
ನ ತುಲ್ಯಾಃ ಪರತತ್ತ್ವಸ್ಯ ಮೂರ್ತ್ಯಾ ವೇದಾಂತಪಾರಗಾಃ ॥೩೪॥

ಮೂರು ಕಣ್ಣುಗಳುಳ್ಳದ್ದೆಂದೂ, ಚಂದ್ರನೇ ಶಿರೋಭೂಷಣವಾಗಿ ಉಳ್ಳದ್ದೆಂದೂ, ಕಪ್ಪಾದ ಕತ್ತುಳ್ಳದ್ದೆಂದೂ, ನಿರತಿಶಯವಾದ ಆನಂದಸ್ವರೂಪವಾದುದರಿಂದ ಹೆಚ್ಚಾದ ಸಂತೋಷರೂಪವಾದುದೆಂದೂ, ಉದ್ಧತನರ್ತನದಲ್ಲಿ ಪ್ರೀತಿಯುಳ್ಳದ್ದೆಂದೂ, ಮಾಯಾ ಸ್ವರೂಪದಲ್ಲಿ ಶೇರಿರುವ ಸತ್ತ್ವ ರಜಸ್ ತಮಸ್ ಎಂಬ ತ್ರಿಗುಣಗಳು ಉಪಾಧಿ ಯಾಗಿರುವ ಬ್ರಹ್ಮವಿಷ್ಣುಮಹೇಶ್ವರರೆಂಬ, ತ್ರಿಮೂರ್ತಿಗಳಿಂದ ಉಪಾಸನೆಮಾಡ ಲ್ಪಡುತ್ತಿರುವುದೆಂದೂ, ಪರಶಿವನ ಮೂರ್ತಿಯು ಉಪಾಸನೆಗಾಗಿ ಉಪಾಸಕರಿಂದ ಕಲ್ಪಿತವಾಗಿದೆ. ॥೩೦-೩೧॥

ಎಲ್ಲ ವಿಧವಾದ ಆಕಾರಗಳೂ ಪಾರಮಾರ್ಥಿಕವಾಗಿ ಇಲ್ಲದಿರುವ, ಕಲ್ಪಿತ ವಾಗಿ ಎಲ್ಲ ಆಕಾರಗಳನ್ನೂ ಪಡೆದಿರುವ, ಪರಶಿವನಿಗೆ ಈ ಪ್ರಪಂಚರೂಪವಾದ ಆಕಾರವು ಕಲ್ಪಿತವಾಗಿ ತೋರುತ್ತಿದೆ ಎಂದು ನಿತ್ಯವಾದ ಶ್ರುತಿಯು ಸಾರುತ್ತದೆ. “ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ। ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತಸಾಕ್ಷಿಂ ಪರತಃ ಪರಸ್ಮಾತ್ ॥” ಕೈವಲ್ಯೋಪನಿಷತ್ ೭. ಎಂದು ಮುಂತಾದ ಶ್ರುತಿಗಳು ಪ್ರಮಾಣವಾಗಿವೆ. ॥೩೨॥

ರುದ್ರಮೂರ್ತಿಯು ಸಂಹರಣಕಾರ್ಯಕ್ಕಾಗಿ ಬಹಿಸ್ತಮೋರೂಪವಾಗಿಯೂ ಅಂತಸ್ಸತ್ತ್ವರೂಪವಾದುದಾಗಿಯೂ ಇದೆ. ಪರಶಿವನ ಮೂರ್ತಿಯು ಸಾಕ್ಷಿಚಿತ್ಪ್ರಕಾಶ ರೂಪವಾಗಿದೆ; ಆದುದರಿಂದ ಸ್ವಪ್ರಕಾಶರೂಪವಾದುದು. ಈ ಪ್ರಕಾರವಾಗಿ ಇವೆರಡೂ ಸದೃಶವಾಗಿವೆ. ಇತರ ವಿಷ್ಣ್ವಾದಿಮೂರ್ತಿಗಳು ಪರಶಿವಮೂರ್ತಿಗಿಂತ ವಿಲಕ್ಷಣ ವಾಗಿವೆ. ಅದುದರಿಂದ ರುದ್ರಮುರ್ತಿಯು ಪರಶಿವಮೂರ್ತಿಗಿಂತ, ಕಾದ ಕಬ್ಬಿಣದ ಗುಂಡು ಅಗ್ನಿಯಿಂದ ಹೇಗೋ ಹಾಗೆ, ಅವಿಭಾಗದಿಂದ ಅಭಿನ್ನವಾಗಿದೆ. ॥೩೩॥

ವಿಷ್ಣುಮುಂತಾದವರ ಮೂರ್ತಿಗಳು ಎಲ್ಲವೂ ಶುದ್ಧಸತ್ತ್ವಪ್ರಧಾನವಾದ

ಪರತತ್ತ್ವಸ್ಯ ನಾಮಾನಿ ಪ್ರತ್ಯಾಸತ್ತ್ಯಾ ಮುನೀಶ್ವರಾಃ ।
ತ್ರಿಮೂರ್ತೀನಾಂ ತು ರುದ್ರಸ್ಯಾವ್ಯವಧಾನಾನಿ ಸುವ್ರತಾಃ ॥೩೫॥

ವಿಷ್ಣ್ವಾದೀನಾಂ ಚ ದೇವಾನಾಂ ತಾನಿ ನಾಮಾನಿ ಸುವ್ರತಾಃ ।
ತತ್ತ್ವಾನ್ವಯೇನ ನಾಮಾನಿ ಭವಂತಿ ಬ್ರಹ್ಮವಿತ್ತಮಾಃ ॥೩೬॥

ತಥಾಽಪಿ ರುದ್ರೇ ತಾನ್ಯೇವ ಪ್ರತ್ಯಾಸತ್ತ್ಯಾಪರೇಣ ತು ।
ಮುಖ್ಯಾನಿ ಸ ತಥಾಽನ್ಯೇಷು ವ್ಯವಧಾನಾತ್ಪರೇಣ ತು ॥೩೭॥

ರುದ್ರಮೂರ್ತಿಗಿಂತ ರಜೋಗುಣ ತಮೋಗುಣಗಳು ಹೆಚ್ಚಾಗಿರುವುದರಿಂದ ವ್ಯವಧಾನವನ್ನು ಹೊಂದಿರುವುದರಿಂದ ಅದರಷ್ಟು ಸದೃಶವಾಗಲಾರವು. ॥೩೪॥

ಪರತತ್ತ್ವದ ನಾಮುಗಳು ಬ್ರಹ್ಮ, ಸತ್, ಪರಂ ಎಂಬಿವು ತ್ರಿಮೂರ್ತಿಗಳ ಮಧ್ಯದಲ್ಲಿ ರುದ್ರನಿಗೆ ಪರಶಿವನ ಪ್ರತಿಬಿಂಬವು ಪೂರ್ಣವಾಗಿ ಮೂಡಿರುವುದರಿಂದ ಪ್ರತ್ಯಾಸತ್ತಿಯನ್ನು ಪಡೆದಿವೆ. ವಿಷ್ಣು ಮುಂತಾದವರಿಗೆ ರಜೋಗುಣ ತಮೋಗುಣ ಗಳ ಪ್ರಾಚುರ್ಯದಿಂದ ವ್ಯವಧಾನವನ್ನು ಹೊಂದಿವೆ. ॥೩೫॥

ವಿಷ್ಣು ಮುಂತಾದ ದೇವತೆಗಳಿಗೆ ಬ್ರಹ್ಮ, ಸತ್, ಪರಂ, ಎಂಬ ನಾಮುಗಳು ವ್ಯವಧಾನದಿಂದ ಎಂದರೆ ಪರತತ್ತ್ವಪ್ರತಿಫಲನವೆಂಬ ಸಂಬಂಧವು ಕಡಮೆಯಾಗಿರುವುದರಿಂದ ಅಮುಖ್ಯವಾಗಿರುತ್ತವೆ; ರುದ್ರನಲ್ಲಾದರೊ ಪರತತ್ತ್ವವು ಹೆಚ್ಚಾಗಿ ಪ್ರತಿಫಲಿಸಿ ಅನುವೃತ್ತವಾಗಿರುವುದರಿಂದ ಮುಖ್ಯವಾಗಿವೆ. ॥೩೬॥

ಪರತತ್ತ್ವದ ಅನುವೃತ್ತಿಯೂ ತ್ರಿಮೂರ್ತಿಗಳಲ್ಲೂ ಇದ್ದರೂ ರುದ್ರನಲ್ಲಿ ಹೆಚ್ಚಾದ ಪ್ರತ್ಯಾಸತ್ತಿಯಿಂದ ಪೂರ್ಣವಾಗಿ ಪರತತ್ತ್ವದ ಪ್ರತಿಫಲನವನ್ನು ಮಾಡುವುದರಿಂದ ಮುಖ್ಯವೃತ್ತಿಯಿಂದ ಬ್ರಹ್ಮ, ಸತ್, ಪರಂ ಎಂಬ ನಾಮುಗಳು ಅನ್ವಯಿಸುತ್ತವೆ. ಇತರ ವಿಷ್ಣು ಮುಂತಾದವರಲ್ಲಿ ವ್ಯವಧಾನದಿಂದ, ರಜೋಗುಣ ತಮೋಗುಣಗಳು ಹೆಚ್ಚಾಗಿರುವುದರಿಂದ, ಪರತತ್ತ್ವದ ಸಂಪೂರ್ಣರೂಪದ ಪ್ರತಿಫಲನವು ಆಗದೆ ಇರುವುದರಿಂದ ಆ ನಾಮುಗಳು ಮುಖ್ಯವೃತ್ತಿಯಿಂದ ಅನ್ವಯಿಸಲಾರವು. ॥೩೭॥

ಪರತತ್ತ್ವಪರಿಜ್ಞಾನಂ ತಸ್ಯ ಮೂರ್ತಿಪ್ರಸಾದತಃ ।
ತತ್ಪ್ರಸಾದಶ್ಚ ತದ್ಧ್ಯಾನಪೂಜಾಭ್ಯಾಮೇವ ನಾನ್ಯಥಾ ॥೩೮॥

ಅನ್ನಾದಿಭೋಜನಾನ್ನೃಣಾಂ ಯಥಾ ಕ್ಷುದ್ವಿನಿವರ್ತತೇ ।
ತಥಾ ಮೂರ್ತಿಪ್ರಸಾದೇನ ತತ್ತತ್ತ್ವಂ ಚ ಪ್ರಕಾಶತೇ ॥೩೯॥

ಪರತತ್ತ್ವಂ ತು ಸರ್ವೇಷಾಂ ಸ್ವರೂಪಮಪಿ ಸರ್ವದಾ ।
ತಸ್ಯ ಮೂರ್ತಿಪ್ರಸಾದೇನ ವಿನಾ ನೈವ ಪ್ರಕಾಶತೇ ॥೪೦॥

ತಸ್ಮಾನ್ಮೂರ್ತಿರ್ಹಿ ಸರ್ವೇಷಾಂ ಭೋಗಮೋಕ್ಷಫಲಪ್ರದಾ ।
ಅತೋ ಮೂರ್ತಿಂ ಮಹಾಭಕ್ತ್ಯಾ ಭಜಧ್ವಂ ಮುನಿಪುಂಗವಾಃ ॥೪೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಪರಪದಸ್ವರೂಪವಿಚಾರೋ ನಾಮ ಸಪ್ತವಿಂಶಾಧ್ಯಾಯಃ

ಪರತತ್ತ್ವದ ತಿಳಿವಳಿಕೆಯು ಆ ಮೂರ್ತಿಯ ಅನುಗ್ರಹದಿಂದ ಉಂಟಾಗುತ್ತದೆ. ಅರ್ಧನಾರೀಶ್ವರಚಂದ್ರಶೇಖರಮೂರ್ತಿಯ ಅನುಗ್ರಹವು ಆ ಮೂರ್ತಿಯನ್ನು ಧ್ಯಾನಮಾಡುವುದರಿಂದಲೂ ಅರ್ಚನೆಮಾಡುವುದರಿಂದಲೂ ಉಂಟಾಗುತ್ತದೆಯೇ ಹೊರತು ಬೇರೆ ದಾರಿ ಇಲ್ಲವು. ಅನ್ನವನ್ನು ತಿನ್ನುವುದರಿಂದ ಹಸಿವು ಹೋಗುವ ಹಾಗೆ ಆ ಮೂರ್ತಿಯ ಅನುಗ್ರಹದಿಂದ ಪರಶಿವತತ್ತ್ವವೂ ತೋರುತ್ತದೆ. ||೩೮-೩೯||

ಪರತತ್ತ್ವವು ಯಾವಾಗಲೂ ಎಲ್ಲರಿಗೂ ಸ್ವರೂಪವಾಗಿಯೇ ಇದ್ದರೂ ಆ ಪರತತ್ತ್ವದ ಅರ್ಧನಾರೀಶ್ವರ ಮುಂತಾದ ಮೂರ್ತಿಯ ಅನುಗ್ರಹದಿಂದ ಹೊರತು ಬೇರೆ ಯಾವ ಕಾರಣದಿಂದಲೂ ಪರತತ್ತ್ವವು ತಿಳಿಯಲ್ಪಡುವುದಿಲ್ಲ.

ಆದುದರಿಂದ ಸಗುಣವಾದ ರುದ್ರಮೂರ್ತಿಯೇ ಎಲ್ಲರಿಗೂ ಭೋಗ, ವಿಷಯಾನುಭವ, ಮೋಕ್ಷ, ಸಂಸಾರದಿಂದ ಬಿಡುಗಡೆ, ಮುಂತಾದ ಫಲಗಳನ್ನು ಕೊಡುತ್ತದೆ. ಆದುದರಿಂದ ರುದ್ರಮೂರ್ತಿಯನ್ನು ಹೆಚ್ಚಾದ ಭಕ್ತಿಯಿಂದ ಸೇವಿಸಬೇಕು. ||೪೦-೪೧||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಪರತತ್ವದ ಶಿವಸ್ವರೂಪವನ್ನು ತಿಳಿಸುವ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಅಷ್ಟವಿಂಶೋಽಧ್ಯಾಯಃ ||

ಇಪ್ಪತ್ತೆಂಟನೆಯ ಅಧ್ಯಾಯವು

(ಶಿವಲಿಂಗಸ್ವರೂಪಕಥನಮ್)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಶಿವಲಿಂಗಂ ಸಮಾಸತಃ ।
ಯಸ್ಯವಿಜ್ಞಾನಮಾತ್ರೇಣ ವಿಮುಕ್ತೋ ಮಾನವೋ ಭವೇತ್ ॥೧॥

ಶಿವ ಏವ ಸ್ವಯಂ ಲಿಂಗಂ ಲಿಂಗಂ ಗಮಕಮೇವ ಹಿ ।
ಶಿವೇನ ಗಮ್ಯತೇ ಸರ್ವಂ ಶಿವೋ ನಾನ್ಯೇನ ಗಮ್ಯತೇ ॥೨॥

ಇದುವರೆಗೆ ಧ್ಯಾನ, ಪೂಜಾ ಇವುಗಳಿಗೋಸ್ಕರ ಪರಶಿವನ ಕಲ್ಪಿತಮೂರ್ತಿಗಳ ಸ್ವರೂಪವನ್ನು ಹೇಳಿ, ಈಗ ಲಿಂಗದ ಸ್ವರೂಪವನ್ನು ಸಂಗ್ರಹವಾಗಿ ಹೇಳುತ್ತಾರೆ. ಯಾವ ಆ ಲಿಂಗದ ಸ್ವರೂಪದ ತಿಳಿವಳಿಕೆಯಿಂದ ಮಾನವನು ಸಂಸಾರಬಂಧದ ದುಃಖದಿಂದ ಬಿಡುಗಡೆಯನ್ನು ಹೊಂದುತ್ತಾನೆ. ||೧||

ಪರಶಿವನೇ ಜಡಪ್ರಪಂಚಕ್ಕೆ ಗಮಕವಾದುದರಿಂದ, ಪ್ರಕಾಶಕವಾದುದರಿಂದ, ಲಿಂಗವೆನಿಸುತ್ತಾನೆ. ಈ ಚರಾಚರಪ್ರಪಂಚವೆಲ್ಲವೂ ಪರಶಿವನಿಂದ ಪ್ರಕಾಶಿತವಾಗುತ್ತದೆ. ಆದುದರಿಂದ ಪರಶಿವನು ತನಗೆ ತಾನೇ ಗಮಕನಾಗಿದಾನೆ. ಅವನು ಇನ್ನೊಂದರಿಂದ ಪ್ರಕಾಶ್ಯನಲ್ಲವು. ||೨||

ಜಡಂ ಹಿ ಗಮ್ಯತೇಽನ್ಯೇನ ನಾಜಡಂ ಮುನಿಪುಂಗವಾಃ ।
ಶಿವೋ ನೈವ ಜಡಸ್ತಸ್ಮಾತ್ ಸ್ವಪ್ರಕಾಶೈಕಲಕ್ಷಣಃ ॥೩॥

ಅಸ್ವಪ್ರಕಾಶಶ್ಚೇತ್ತಸ್ಮಾತ್ ಶಿವೋ ನೈವ ಶಿವೋ ಭವೇತ್ ।
ಅಸ್ವಪ್ರಕಾಶಂ ಕುಡ್ಯಾದಿ ನ ಶಿವಸ್ಸಮ್ಮತಃ ಖಲು ॥೪॥

ಶಿವೇಽಸತಿ ಮುನಿಶ್ರೇಷ್ಠಾಃ ಸ್ವಪ್ರಕಾಶೈಕಲಕ್ಷಣೇ ।
ಅಪ್ರತೀತಂ ಭವೇತ್ಸರ್ವಂ ತತಶ್ಶೂನ್ಯಮಶೇಷತಃ ॥೫॥

ಶೂನ್ಯಸಿದ್ಧಿರಪಿ ಶ್ರೇಷ್ಠಾಃ ಶೂನ್ಯೇನೈವ ನ ಸಿಧ್ಯತಿ ।
ಖಲು ಸರ್ವಾತ್ಮನಾ ಭಾನವಿಹೀನಂ ಶೂನ್ಯಲಕ್ಷಣಮ್ ॥೬॥

ಜಡವಸ್ತು ಮಾತ್ರ ಇನ್ನೊಂದು ಪ್ರಕಾಶಾದಿಗಮಕಗಳಿಂದ ತಿಳಿಸಲ್ಪಡುತ್ತದೆ. ಆದುದರಿಂದ ಜಡವಲ್ಲದ್ದು ದೃಶ್ಯವಾಗುವುದಿಲ್ಲ. ಪರಶಿವನು ಜಡನಲ್ಲವಾದುದರಿಂದ ಸ್ವಪ್ರಕಾಶವೆಂಬ ಒಂದೇ ಲಕ್ಷಣವನ್ನು, ಗಮಕವನ್ನು, ಹೊಂದಿದಾನೆ. ಆದ್ದರಿಂದಲೇ ॥೩॥

ಪರಶಿವನು ಸ್ವಪ್ರಕಾಶನು, ಶಿವತ್ವವೇ ಕಾರಣವು, ಯಾವುದು ಸ್ವಪ್ರಕಾಶವಲ್ಲವೋ ಅದು ಶಿವನಲ್ಲವು, ಘಟಾದಿಗಳು ಉದಾಹರಣವು—ಎಂಬ ಅನುಮಾನವು ಏರ್ಪಡುತ್ತದೆ. ಶಿವನು ಸ್ವಪ್ರಕಾಶನಲ್ಲದಿದ್ದರೆ ಶಿವನೆನ್ನಿಸಲಾರನು. ಗೋಡೆ ಮುಂತಾದುದು ಸ್ವಪ್ರಕಾಶವಲ್ಲವು. ಆದುದರಿಂದ ಗೋಡೆ ಮುಂತಾದುವು ಶಿವನೂ ಅಲ್ಲವೆಂದು ಗೊತ್ತಾಗಿದೆ. ॥೪॥

ಸ್ವಪ್ರಕಾಶಮಾತ್ರವೇ ಗಮಕವಾಗಿ ಉಳ್ಳ ಶಿವನು ಇಲ್ಲದಿದ್ದರೆ ಈ ಎಲ್ಲ ಪ್ರಪಂಚವೂ ತಿಳಿಯದೆ ಹೋಗಿ, ಎಲ್ಲವೂ ತಿಳಿಯದೆ ಶೂನ್ಯವೇ ಆಗಿ ಪರಿಣಮಿಸಬೇಕಾಗುತ್ತದೆ. ಆದುದರಿಂದ ಶಿವನು ಸ್ವಪ್ರಕಾಶನೆಂದು ಸಿದ್ಧವಾಗುತ್ತದೆ. ॥೫॥

ಶೂನ್ಯದ ಸಿದ್ಧಿಯೂ ಕೂಡ ಶೂನ್ಯದಿಂದಲೇ ಆಗಲಾರದು. ಅದು ಯಾವುದಾದರೂ ಒಂದು ಪ್ರಮಾಣದಿಂದ ಆಗಬೇಕು. ಪ್ರಮಾಣವನ್ನು ಅವಲಂಬಿಸಿ ಪ್ರಮೇಯವು ಸಿದ್ಧಿಸುತ್ತದೆಂಬ ನಿಯಮವು ಗೊತ್ತಾಗಿದೆ. ಶೂನ್ಯವು ಪ್ರಮಾಣವಲ್ಲವು. ಯಾವ ರೀತಿಯಲ್ಲೂ ತೋರದೆ ಇರುವಿಕೆಯನ್ನೇ ಶೂನ್ಯವೆನ್ನಬೇಕು. ಆದರೆ ಶೂನ್ಯಸಿದ್ಧಿಯಾದರೂ ಒಂದು ಜ್ಞಾನದಲ್ಲಿ ವಿಷಯವಾಗಿರಬೇಕು. ಆ ಜ್ಞಾನವಾದರೂ ಒಂದು ಇದೆ ಎನ್ನಬೇಕು. ಆದುದರಿಂದ ‘ ಸರ್ವಂ ಶೂನ್ಯಂ ’ ಎಂಬುದು ಸಿದ್ಧಿಸಲಾರದು. ಇಲ್ಲವೆಂದು ಗೊತ್ತುಮಾಡುವುದಕ್ಕೂ ಸಾಕ್ಷಿಚಿತ್ ಇರಬೇಕು. ॥೬॥

ಅತಸ್ಸಾಕ್ಷೀ ಶಿವಸ್ಸಾಂಬಃ ಸ್ವಪ್ರಕಾಶೈಕಲಕ್ಷಣಃ ।
ತೇನ ಸರ್ವಮಿದಂ ಗಮ್ಯಂ ಗಮ್ಯತೇಽಸೌ ನ ಗಮ್ಯತೇ ॥೭॥

ಸ್ವಯಂಜ್ಯೋತಿರಿತಿ ಪ್ರಾಹ ಶ್ರುತಿಸ್ಸಾಕ್ಷೀ ಮಹೇಶ್ವರಮ್ ।
ತಸ್ಯ ಭಾಸಾ ಸರ್ವಮಿದಂ ವಿಭಾತೀತ್ಯಪಿ ಚಾಹ ಹಿ ॥೮॥

ಅತಶ್ಶಿವಸ್ಸರ್ವಜಗದ್ವಿಭಾಸಕಃ
ಸ್ವಯಂಪ್ರಕಾಶಸ್ಸ್ವಯಮೇವ ಕೇವಲಮ್ ।
ಮಯೋದಿತಂ ಲಿಂಗಮಿತಿ ದ್ವಿಜರ್ಷಭಾಃ
ತದೇವ ಪೂಜ್ಯಂ ಶ್ರುತಿಮಸ್ತಕಸ್ಥಿತಂ ॥೯॥

ಶಿವಸ್ಯ ಲಿಂಗಂ ಶಿವಲಿಂಗಮನ್ಯೇ
ಮುನೀಶ್ವರಾ ವೇದವಿದೋ ವದಂತಿ ।
ಸ್ವಯಂಪ್ರಕಾಶಸ್ಯ ನ ಯುಜ್ಯತೇ ತತ್
ತತಶ್ಚ ಶಂಭುಸ್ಸ್ವಯಮೇವ ಲಿಂಗಂ ॥೧೦॥

ಆದುದರಿಂದ ಈ ದೃಗ್ದೃಶ್ಯರೂಪವಾದ ಎಲ್ಲ ಪ್ರಪಂಚಕ್ಕೂ ಸಾಕ್ಷಿಯಾದ ಸಾಂಬನಾದ ಪರಶಿವನು ಸ್ವಪ್ರಕಾಶಮಾತ್ರಸ್ವರೂಪನಾಗಿದಾನೆ. ಅವನಿಂದಲೇ ಈ ಚರಾಚರಪ್ರಪಂಚವೆಲ್ಲವೂ ತಿಳಿಯಲ್ಪಡುತ್ತದೆ. "ತಮೇವ ಭಾಂತಮನುಭಾತಿಸರ್ವಂ" ಅವನು ಯಾವುದರಿಂದಲೂ ಗಮ್ಯನಾಗುವುದಿಲ್ಲ. ಕಠೋಪನಿಷತ್ ೫.೧೫. ॥೭॥

ವೇದವೂ ಪರಶಿವನನ್ನು ಸ್ವಪ್ರಕಾಶರೂಪನೆಂದು ಹೇಳುತ್ತಿದೆ. ಆ ಸ್ವಪ್ರಕಾಶ ರೂಪನಾದ ಪರಶಿವನ ಬೆಳಕಿನಿಂದಲೇ ಈ ಪ್ರಪಂಚವೆಲ್ಲವೂ ಪ್ರಕಾಶಿಸುತ್ತಿದೆ ಎಂದೂ ಶ್ರುತಿಯು ಹೇಳುತ್ತಿದೆ. "ತಸ್ಯ ಭಾಸಾ ಸರ್ವಮಿದಂ ವಿಭಾತಿ" ಕ. ಉ. ೫.೧೫. ॥೮॥

ಆದುದರಿಂದ ಪರಶಿವನು ಈ ಎಲ್ಲ ಪ್ರಪಂಚವನ್ನೂ ಪ್ರಕಾಶಿಸುವಂತೆ ಮಾಡು ತ್ತಾನೆ. ತಾನೊಬ್ಬನು ಮಾತ್ರ ಸ್ವಪ್ರಕಾಶರೂಪನಾಗಿದಾನೆ. ವೇದಗಳಿಗೆ ಶಿರಸ್ಸಿನಂತೆ ಶ್ರೇಷ್ಠಭಾಗವಾದ ಉಪನಿಷತ್ತುಗಳಲ್ಲಿ ಹೇಳಿರುವ ಈ ಪರಶಿವನ ಲಿಂಗವನ್ನು ಗಮಕ ವನ್ನು, ಹೇಳಿದೆನು. ॥೯॥

ಮತ್ತೆ ಕೆಲವರು ಶಿವನಿಗೆ ಪರಶಿವನ ತಿಳಿವಳಿಕೆಯುಂಟಾಗುವುದಕ್ಕೆ ಜ್ಞಾಪಕ ವಾದ, ಅದರಿಂದಲೇ ಪೂಜ್ಯವಾಗಿರುವ, ಲೋಹಾದಿಲಿಂಗವನ್ನೇ ಶಿವಗಮಕವೆನ್ನು

ವಿವೇಕಹೀನಮರ್ತ್ಯಚಿತ್ತವೃತ್ತ್ಯಪೇಕ್ಷಯಾ ದ್ವಿಜಾಃ
ಶಿವಸ್ಯ ಲಿಂಗಮಿತ್ಯಯಂ ರವಸ್ಸಮಸ್ತಜಂತುಭಿಃ ।
ನಿಗದ್ಯತೇ ಶಿವಸ್ಸ್ವತಃ ಪ್ರಸಿದ್ಧ ಏವ ಸರ್ವದಾ
ತತಶ್ಶಿವಸ್ಯ ಲಿಂಗಮಿತ್ಯಯಂ ರವೋ ನ ಸಂಗತಃ ॥೧೧॥

ಸ್ವತ ಏವ ಪ್ರಗವೋಽಪಿ ಶಂಕರೋ
ನ ವಿಭಾತೀವ ವಿಭಾತಿ ಮಾಯಯಾ ।
ಸ್ವತ ಏವ ಶ್ರುತಿಕೋವಿದಾಶ್ಶಿವಃ
ಸ್ವಕಲಿಂಗೇನ ನಿಗಮ್ಯತೇ ಸ್ಫುಟಂ ॥೧೨॥

ಶಿವಸ್ಯ ಲಿಂಗಂ ಕಥಯಂತಿ ಕೇಚಿ
ದ್ಬಹುಪ್ರಕಾರಂ ವ್ಯವಹಾರದೃಷ್ಟ್ಯಾ ।
ನ ತತ್ತ್ವದೃಷ್ಟ್ಯಾ ಪರಮೇಶ್ವರಸ್ಯ
ಸ್ವಯಂಪ್ರಭಸ್ಯಾಸ್ಯ ನ ಚಾಸ್ತಿ ಲಿಂಗಂ ॥೧೩॥

ತ್ತಾರೆ. ಸ್ವಯಂಪ್ರಕಾಶಸ್ವರೂಪನಾದ ಪರಶಿವನಿಗೆ ಇನ್ನೊಂದು ಗಮಕಪದಾರ್ಥವಿಲ್ಲವಾದುದರಿಂದ ಪರಶಿವಸ್ವರೂಪವೇ ಗಮಕವೆಂಬುದು ಸಿದ್ಧಾಂತವು. ॥೧೦॥

ತಿಳಿವಳಿಕೆಯಲ್ಲಿ ಕಡಮೆಯಾಗಿರುವವನ ದೃಷ್ಟಿಯಿಂದ ಅವನ ಚಿತ್ತವೃತ್ತಿಯು ಮಟ್ಟವನ್ನನುಸರಿಸಿ ಶಿವನಿಗೆ ಲಿಂಗವು ಜ್ಞಾಪಕವಾದ ಸಾಧನವು ಎಂಬ ವ್ಯವಹಾರವಿದೆ. ಆದರೆ ಪರಶಿವನು ಸ್ವಪ್ರಕಾಶನಾದುದರಿಂದ ಈ ಸಾಮಾನ್ಯ ಜನರ ವ್ಯವಹಾರವು ಸಿದ್ಧಾಂತದೃಷ್ಟಿಯಿಂದ ಸಂಗತವಾದುದಲ್ಲವು. ॥೧೧॥

ಪುರುಷರು ಭಿನ್ನರಾದರೂ ಶಿವಸ್ವರೂಪವು ಮಾತ್ರ ಒಂದೇ ಆಗಿರಬೇಕು ಹೇಗೆ? ಎಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಾರೆ. ಪರಶಿವನು ಸ್ವಯಂಪ್ರಕಾಶಸ್ವರೂಪನಾದುದರಿಂದ ಅಜ್ಞಾನಿಗಳಿಗೆ ಮಾಯಾ ಆವರಣದಿಂದ ಆ ಪರಶಿವನ ವಾಸ್ತವವಾದ ಸ್ವಪ್ರಕಾಶಸ್ವರೂಪವು ತಿಳಿಯುವುದಿಲ್ಲ. ಆದುದರಿಂದ ಅಂಥವರು ಲಿಂಗಾದಿಗಳನ್ನು ಗಮಕವೆಂದು ವ್ಯವಹರಿಸುತ್ತಾರೆ. ಜ್ಞಾನಿಗಳಿಗೆ ಪರಶಿವನು ಸ್ವಪ್ರಕಾಶವಾಗಿಯೇ ಇರುತ್ತಾನೆ. ॥೧೨॥

ಅಜ್ಞಾನಿಗಳ ವ್ಯವಹಾರದೃಷ್ಟಿಯಿಂದ ಪರಶಿವನಿಗೆ ನಾನಾಪ್ರಕಾರಗಳಾದ ಲಿಂಗಗಳು, ಜ್ಞಾಪಕಗಳಾಗಿವೆ ಎಂದು ಹೇಳುತ್ತಾರೆ. ಪಾರಮಾರ್ಥಿಕದೃಷ್ಟಿಯಿಂದ

ವೇದಾಂತವಾಕ್ಯೋತ್ಥಪರಾತ್ಮವಿದ್ಯಾ
ಶಿವಸ್ಯ ಲಿಂಗಂ ಕಥಯಂತಿ ಕೇಚಿತ್ ।
ವಿಚಾರಜನ್ಯಾಮಪಿ ಸತ್ಯವಿದ್ಯಾಂ
ಬ್ರುವಂತಿ ಚಾನ್ಯೇ ಪರಮಸ್ಯ ಲಿಂಗಂ ॥೧೪॥

ಸ್ಮೃತಿಜಾಮಿತಿಹಾಸಜಾಮಿಮಾಂ
ಪರವಿದ್ಯಾಮಪಿ ಲಿಂಗಮೀಶಿತುಃ ।
ಅತಿಶುದ್ಧಾಮಪಿ ತಾಂ ಪುರಾಣಜಾಂ
ಪ್ರವದಂತಿ ಶ್ರುತಿವಿತ್ತಮೋತ್ತಮಾಃ ॥೧೫॥

ಶಿವಸ್ಯ ಲಿಂಗಂ ಕಥಯಂತಿ ಮಾಯಾಂ
ಶಿವಸ್ಯ ದೃಶ್ಯಾಂ ಶಿವವಸ್ತುನಿಷ್ಠಾಮ್ ।
ವದಂತಿ ಕೇಚಿಜ್ಜನಚಿತ್ತಮನ್ಯೇ
ತ್ವಹಂಕೃತಿಂ ಚಾಪಿ ಮನಶ್ಚ ಬುದ್ಧಿಮ್ ॥೧೬॥

ಪರಶಿವನಿಗೆ ಇತರ ಗಮಕಗಳಿಲ್ಲವು. ಪರಶಿವನು ಸ್ವಯಂಪ್ರಕಾಶನಾಗಿರುವುದರಿಂದ ಅವನಿಗೆ ಗಮಕಾಂತರವಿಲ್ಲ. ಅವನೇ ಗಮಕವು. ॥೧೩॥

ವೇದಾಂತವಾಕ್ಯಗಳು ಎಂದರೆ ಉಪನಿಷದ್ವಾಕ್ಯಗಳ ಅರ್ಥವನ್ನು ತಿಳಿಯುವುದರಿಂದ ಉಂಟಾಗುವ ಅಖಂಡಾಕಾರವೃತ್ತಿಯನ್ನು ಅವಿದ್ಯಾನಿವೃತ್ತಿಯ ಮೂಲಕವಾಗಿ ಪರಶಿವನಿಗೆ ಗಮಕವಾಗಿರುತ್ತದೆಂದು ಕೆಲವರು ಹೇಳುತ್ತಾರೆ. ಹಾಗೆಯೇ ವೇದಾಂತವಾಕ್ಯಗಳ ಅರ್ಥನಿರ್ಣಯವಿಚಾರಶಾಸ್ತ್ರವೆಂದರೆ ಬ್ರಹ್ಮಸೂತ್ರಗಳ, ಬಾದರಾಯಣರಚಿತವಾದ ಸೂತ್ರಗಳ, ಅರ್ಥಜ್ಞಾನದಿಂದ ಉಂಟಾಗುವ ತತ್ತ್ವಜ್ಞಾನವನ್ನು ಪರಶಿವನಿಗೆ ಗಮಕವೆಂದು ಮತ್ತೆ ಕೆಲವರು ಹೇಳುತ್ತಾರೆ. ॥೧೪॥

ಮನ್ವಾದಿಸ್ಮೃತಿಗಳಿಂದಲೂ, ಭಾರತಾದಿ ಇತಿಹಾಸಗಳು : ಭಾಗವತಾದಿ ಪುರಾಣಗಳು ಇವುಗಳ ವಿಚಾರದಿಂದಲೂ ಉಂಟಾಗುವ ಪರಶಿವಸ್ವರೂಪದ ಪರಿಶುದ್ಧವಾದ ತಿಳಿವಳಿಕೆಯೂ ಪರವಿದ್ಯೆ ಎನಿಸುತ್ತದೆ. ॥೧೫॥

ಅಧಿಷ್ಠಾನಸ್ವರೂಪನಾದ ಪರಶಿವನಲ್ಲಿ ಅಧ್ಯಸ್ತವಾದ, ಈ ಪರಶಿವನಿಂದಲೇ ಪ್ರಕಾಶಿತವಾಗಿರುವ ಮಾಯೆ, ಜನರ ಚಿತ್ತ, ಅಹಂಕಾರ, ಮನಸ್ಸು, ಬುದ್ಧಿ,

ಪ್ರಾಣಂ ಚ ಕೇಚಿತ್ಪ್ರವದಂತಿ ಲಿಂಗಂ
ಶರೀರಮನ್ಯೇ ಪ್ರವದಂತಿ ಲಿಂಗಮ್ ।
ತ್ವಗಾದಿಖಾನಿ ಪ್ರವದಂತಿ ಕೇಚಿತ್
ಸಮೂಹಮನ್ಯೇ ಪರಮೇಶ್ವರಸ್ಯ ॥೧೭॥

ಶಬ್ದಾದಿಭೂತಾನಿ ಮಹೇಶ್ವರಸ್ಯ
ಸ್ಥೂಲಾದಿಭೂತಾನಿ ಚ ಸಂಗಿರಂತೇ ।
ಪಾತಾಳಲೋಕಾದಿಸಮಸ್ತಮೇತತ್
ಲಿಂಗಂ ಮಹೇಶಸ್ಯ ವದಂತಿ ಕೇಚಿತ್ ॥೧೮॥

ಯದಸ್ತಿ ಯನ್ನಾಸ್ತಿ ಮಹೇಶ್ವರಸ್ಯ
ಸಮಸ್ತಮೇತತ್ಪ್ರವದಂತಿ ಲಿಂಗಮ್ ।
ವಿಶುದ್ಧವಿದ್ಯಾಃ ಪರಯೋಗಿನೋಽಸ್ಯ
ಸ್ವಯಂಪ್ರಭಸ್ಯೈವ ನ ಲಿಂಗಮೂಚುಃ ॥೧೯॥

ಇವನ್ನೂ ಪರಶಿವಸ್ವರೂಪದ ತಿಳಿವಳಿಕೆಯುಂಟಾಗಲು ಗಮಕಗಳೆಂದು ಹೇಳುತ್ತಾರೆ. ॥೧೬॥

ಪ್ರಾಣಾದಿಪಂಚವಾಯುಗಳೂ, ಲಿಂಗಶರೀರವೂ, ತ್ವಕ್ ಮುಂತಾದ ಐದು ಜ್ಞಾನೇಂದ್ರಿಯಗಳೂ, ಚರ್ಮ ಮಾಂಸ ರುಧಿರ ಮೇದಸ್ಸು ಮಜ್ಜಾಸ್ನಾಯು ಮೂಳೆ, ಎಂಬ ಸಪ್ತಧಾತುಸಮೂಹರೂಪವಾದ ಸ್ಥೂಲಶರೀರವೂ ಪರಶಿವಸ್ವರೂಪದ ತಿಳಿವಳಿಕೆಗೆ ಸಾಧನವಾಗಿರುವುದರಿಂದ ಲಿಂಗವಾಗುತ್ತವೆ. ॥೧೭॥

ಶಬ್ದಸ್ಪರ್ಶರೂಪರಸಗಂಧಗಳೆಂಬ ಸೂಕ್ಷ್ಮಭೂತಗಳೂ, ಅವುಗಳ ಕಾರ್ಯವಾದ ಆಕಾಶ, ವಾಯು, ತೇಜಸ್ಸು, ಜಲ, ಪೃಥ್ವಿ ಎಂಬ ಐದು ಸ್ಥೂಲಭೂತಗಳೂ, ಪಾತಾಳ ಮುಂತಾದ ಈ ಎಲ್ಲ ಲೋಕಗಳೂ ಪರಶಿವಸ್ವರೂಪದ ತಿಳಿವಳಿಕೆಗೆ ಲಿಂಗಗಳಾಗಿವೆ. ॥೧೮॥

ಸತ್, ಅಸತ್, ಎಂಬ ಪದಗಳಿಗೆ ಅರ್ಥವಾಗಿರುವ ಈ ಎಲ್ಲವೂ ಪರಶಿವನ ಸ್ವರೂಪವನ್ನು ಅಜ್ಞಾನಿಗಳಾದ ಸಾಮಾನ್ಯ ಜನರಿಗೆ ತಿಳಿಸಿಕೊಡಲು ಲಿಂಗಗಳಾಗುತ್ತವೆ. ಪಾರಮಾರ್ಥಿಕವಾದ ಜ್ಞಾನವುಳ್ಳ ವಿವೇಕಿಗೆ, ಸಂಶಯವಿಪರ್ಯಯ ಮುಂತಾದ ದೋಷವಿಲ್ಲದ ವೇದಾಂತವಾಕ್ಯದಿಂದ ಉಂಟಾದ ಜ್ಞಾನವುಳ್ಳ ವಿವೇಕಿಗೆ

ಯದ್ಯಲ್ಲಿಂಗತಯಾ ಶಿವಸ್ಯ ಕಥಿತಂ ತತ್ತ್ರಜ್ಜಡಂ ವಸ್ತುತೋ
ಲಿಂಗಂ ನೈವ ಭವೇದ್ವಿಶುದ್ಧಮತಯಃ ಜ್ಞಾನಂ ಹಿ ಲಿಂಗಂ ಭವೇತ್ ।
ತಸ್ಮಾದೇವ ಮಹೇಶ್ವರಃ ಪರತರಃ ತತ್ತ್ರಜ್ಜಡೋಪಾಧಿಕಃ
ಚಿದ್ರೂಪಃ ಕಥಿತಃ ಪ್ರಭೋರ್ಗಮಕಮಿತ್ಯರ್ಥಸ್ಥಿತಿಃ ಸ್ವಸ್ಯ ತು ॥೨೦॥

ಆಲಯಂ ಲಿಂಗಮಿತ್ಯಾಹುರಪರೇ ವೇದವಿತ್ತಮಾಃ ।
ತದಾಽಪಿ ಶಂಕರಸ್ಸಾಕ್ಷಾಲ್ಲಿಂಗಂ ನಾನ್ಯಸ್ಮುನೀಶ್ವರಾಃ ॥೨೧॥

ಆಲಯೋ ನಾಮ ಚಾಧಾರಃ ಸರ್ವಾಧಾರಶ್ಶಿವಃ ಖಲು ।
ಸದಾ ಸತ್ಯಸ್ವಭಾವತ್ವಾತ್ ಸತ್ಯ ಏವ ಶಿವಃ ಖಲು ॥೨೨॥

ಪರಶಿವಸ್ವರೂಪಜ್ಞಾನವಾಗಲು ಸ್ವಪ್ರಕಾಶಸ್ವರೂಪ ಹೊರತು ಬೇರೆ ಲಿಂಗವು, ಗುರುತು, ಇಲ್ಲವೆನ್ನುತ್ತಾರೆ. ॥೧೯॥

ಅಜ್ಞಾನಿದೃಷ್ಟಿಯಿಂದ ಮಾಯೆ ಮೊದಲಾದ ಮೇಲೆ ಹೇಳಿದ ಪದಾರ್ಥವೆಲ್ಲವೂ ಜಡವಾದುದರಿಂದ ಪರಶಿವಸ್ವರೂಪಜ್ಞಾನಕ್ಕೆ ಸರಿಯಾದ ಗುರುತಾಗಲಾರದು. ಎಂದರೆ ಅವುಗಳ ಇರುವಿಕೆಯೇ ಲಿಂಗವಾಗಲಾರದು. ಅವುಗಳ ಜ್ಞಾನವು ಲಿಂಗವಾಗಬಹುದು. ಆದುದರಿಂದ ಜ್ಞಾನವೇ ಪರಶಿವಸ್ವರೂಪಜ್ಞಾನಕ್ಕೆ ಲಿಂಗವಾಗುತ್ತದೆ. ಎಂದರೆ ಅವು ಆಯಾ ಜಡವಸ್ತುಗಳೇ ಉಪಾಧಿಯಾಗಿರುವ ಅವುಗಳಿಂದ ಪರಿಚ್ಛಿನ್ನವಲ್ಲದೆ ಇರುವ ಪರಶಿವಜ್ಞಾನಕ್ಕೆ ಗುರುತಾಗುತ್ತವೆ. ಸೋಪಾಧಿಕವಾದ ಚಿದ್ರೂಪವು ನಿರುಪಾಧಿಕವಾದ ಸ್ವರೂಪಜ್ಞಾನಕ್ಕೆ ಉಪಲಕ್ಷಣರೀತಿಯಿಂದ ಲಿಂಗವಾಗುತ್ತದೆ.॥೨೦॥

ಗಮಕಂ ಲಿಂಗಂ, ಪರಶಿವಸ್ವರೂಪವನ್ನು ತಿಳಿಸುವ ಗುರುತೇ ಲಿಂಗವು ಎಂಬ ಪಕ್ಷದಲ್ಲಿ ಪರಶಿವಸ್ವರೂಪವೇ ಎಲ್ಲಕ್ಕೂ ಗಮಕವಾದುದರಿಂದ ಪರಶಿವನು ಸ್ವಪ್ರಕಾಶರೂಪನೆಂದು ಹೇಳಿ, ಇತರ ಪಕ್ಷದಲ್ಲೂ ಅದೇ ತತ್ತ್ವವೆಂಬುದನ್ನು ಹೇಳುತ್ತಾರೆ. ಆಲಯವೇ ಲಿಂಗವೆಂದು ಕೆಲವರು ಹೇಳುತ್ತಾರೆ. ಆ ಮತದಲ್ಲೂ ಶಂಕರನೇ ನೇರವಾದ ಲಿಂಗವೆಂದು ತಿಳಿಯಬೇಕು. ॥೨೧॥

ಆಲಯವೆಂದರೆ ಅಧಿಷ್ಠಾನವು. ಪರಶಿವನು ಸರ್ವಾಧಿಷ್ಠಾನರೂಪನು. ಕಲ್ಪಿತವಾದ ವಸ್ತುವು ಅಧಿಷ್ಠಾನವಾಗಲಾರದು. ಆದುದರಿಂದ ಪರಶಿವನು ಸತ್ಯಸ್ವರೂಪನು. ಆರೋಪಿತವಾದ ರಜತಾದಿಗಳಿಗಿಂತ ಅಧಿಷ್ಠಾನವಾದ ಶುಕ್ತಿ ಮುಂತಾದುವು ಮೇಲ್ತರದ ಸತ್ತೆಯುಳ್ಳದ್ದಾಗಿರಬೇಕು. ರಜತದ ಪ್ರಾತಿಭಾಸಿಕ ಸತ್ತೆಗಿಂತ ಶುಕ್ತಿಯ

ಚಿದ್ರೂಪಂ ಹಿ ಸದಾ ಸತ್ಯಂ ನಾಚಿದ್ರೂಪಂ ಕಥಂಚನ ।
ಅಸತ್ಯತ್ವಸ್ಯ ದೃಷ್ಟತ್ವಾದಚಿದ್ರೂಪಸ್ಯ ವಸ್ತುನಃ ॥೨೩॥

ಶುಕ್ತಿಕಾರಜತಾದೀನಾಮಸತ್ಯತ್ವಂ ಹಿ ಸಮ್ಮತಮ್ ।
ಅಚೇತನಾನಾಮನ್ಯೇಷಾಮಸತ್ಯತ್ವೇ ನಿದರ್ಶನಮ್ ॥೨೪॥

ಶುಕ್ತಿಕಾ ರಜತಂ ವಿಪ್ರಾಃ ಸತ್ಯ ಏವ ತತಶ್ಶಿವಃ ।
ಅತಃ ಕಲ್ಪಿತರೂಪಾಣಾಮಾಧಾರೋ ಭಗವಾನ್ ಶಿವಃ ॥೨೫॥

ಅನಾಧಾರೋ ಮಹಾದೇವಸ್ಸತ್ಯಚೈತನ್ಯಲಕ್ಷಣಃ ।
ಸರ್ವಾಧಾರಸ್ಯ ನಾಧಾರಃ ವಿದ್ಯತೇ ಹಿ ದ್ವಿಜೋತ್ತಮಾಃ ॥೨೬॥

ಆಕಾಶಸ್ಯ ಯಥಾ ಕಶ್ಚಿನ್ನಾಧಾರೋ ವಿದ್ಯತೇ ದ್ವಿಜಾಃ ।
ನ್ಯಾವರ್ತಯತಿ ಚಾಧಾರಂ ಶಿವಸ್ಯ ಪರಮಾತ್ಮನಃ ॥೨೭॥

ವ್ಯಾವಹಾರಿಕಸತ್ತೆಯು ಮೇಲ್ತರದ್ದಾಗಿದೆ. ಹಾಗೆ ವ್ಯಾವಹಾರಿಕವಾದ ಈ ಎಲ್ಲ ಪ್ರಪಂಚಕ್ಕೂ ಅಧಿಷ್ಠಾನವಾದ ಪರತತ್ತ್ವಸ್ವರೂಪನಾದ ಪರಶಿವನು ವ್ಯಾವಹಾರಿಕ ಸತ್ತೆಗಿಂತ ಮೇಲಾದ ಪಾರಮಾರ್ಥಿಕಸತ್ತಾರೂಪನಾಗಿದಾನೆ. ||೨೨||

ಚಿದ್ರೂಪವೇ ಬದಲಾಯಿಸುತ್ತಿರುವ ಜಾಗ್ರದಾದ್ಯವಸ್ಥೆಗಳಲ್ಲಿ ಅನುಸರಿಸಿ ತೋರುತ್ತಿರುವುದರಿಂದ ಸತ್ಯವಾದುದು. ಅಚಿತ್ ಆದ ಜಡವು ಚಿದ್ರೂಪವಲ್ಲವು. ಚಿದ್ರೂಪವಲ್ಲದ ಎಲ್ಲ ವಸ್ತುಗಳೂ ಜಡವಾದುದರಿಂದ ಅಸತ್ಯವೆಂದು ಗೊತ್ತಾಗುತ್ತದೆ. ರಜತಾದಿಗಳು ಅಸತ್ಯವಾದುವೆಂದು ಗೊತ್ತಾಗಿದೆ. ಹಾಗೆ ಇತರ ಅಚಿದ್ವಸ್ತುಗಳೂ ಅಸತ್ಯಗಳೆಂದು ಸಿದ್ಧವಾಗುತ್ತದೆ. ಆದುದರಿಂದ ಪರಶಿವನು ಸತ್ಯಸ್ವರೂಪನೇ ಆಗಿದಾನೆ. ಆದುದರಿಂದ ಕಲ್ಪಿತವಸ್ತುಗಳೆಲ್ಲಕ್ಕೂ ಪರಶಿವನೇ ಅಧಿಷ್ಠಾನರೂಪನು. ||೨೩-೨೪-೨೫||

ಆದರೆ ಪರಶಿವನಿಗೆ ಆಧಾರ ಬೇರೆ ಇಲ್ಲವು. ಅವನು ಸಚ್ಚಿದ್ರೂಪನಾದವನು. ಎಲ್ಲಕ್ಕೂ ಆಧಾರನಾದವನಿಗೆ ಬೇರೆ ಆಧಾರವಿಲ್ಲವು. ಹೇಗೆಂದರೆ ಸರ್ವಾಧಾರವಾದ ಆಕಾಶಕ್ಕೆ ಬೇರೆ ಆಧಾರವಿಲ್ಲವು. ||೨೬||

ಆದುದರಿಂದ ಎಲ್ಲಕ್ಕೂ ಆಧಾರವಾಗಿರುವ ಪರಮಾತ್ಮನಾದ ಪರಶಿವನಿಗೆ ಆಧಾರವಿಲ್ಲವೆಂದು ಶ್ರುತಿಯು ಸಾರುತ್ತಿದೆ. ||೨೭||

ಸ್ವೇ ಮಹಿಮ್ನೀತಿ ವೇದಾಂತಃ ಸತ್ಯವಾದೀ ಸ್ವತಃ ಪ್ರಮಾ ।
ವೇದಾಂತವಾಕ್ಯಂ ಮಾನಾನಾಮತಿಮಾನಮಿತಿ ಸ್ಥಿತಿಃ ॥೨೮॥

ಅತಸ್ಸತ್ಯಚಿದಾನಂದಲಕ್ಷಣಃ ಪರಮೇಶ್ವರಃ ।
ಸ್ವಯಮೇವ ಸದಾ ಲಿಂಗಂ ನ ಲಿಂಗಂ ತಸ್ಯ ವಿದ್ಯತೇ ॥೨೯॥

ಸಂಸಾರಾರ್ಣವಮಗ್ನಾನಾಂ ಅಜ್ಞಾನಾಂಧೀಕೃತಾತ್ಮನಾಮ್ ।
ಚಿತ್ತಪಾಕಾನುಗುಣ್ಯೇನ ಭಾವನಾರ್ಥಂ ದ್ವಿಜರ್ಷಭಾಃ ॥೩೦॥

ಅನಾಧಾರಸ್ಯ ದೇವಸ್ಯ ಶಿವಸ್ಯ ಪರಮಾತ್ಮನಃ ।
ಆಧಾರೋ ಮಂತ್ರಸಂಸ್ಕಾರಾತ್ ಕಲ್ಪಿತಸ್ಸತ್ಯವದ್ಬುಧಾಃ ॥೩೧॥

"ಕಸ್ಮಿನ್ ಪ್ರತಿಷ್ಠಿತ ಇತಿ । ಸ್ವೇಮಹಿಮ್ನೀತಿ" ಎಂಬ ಶ್ರುತಿಯು ಸತ್ಯವನ್ನು ಹೇಳುತ್ತದೆ. ಅದು ಸ್ವತಃಸಿದ್ಧವಾದ ಪ್ರಾಮಾಣ್ಯವುಳ್ಳದ್ದು. ಆದುದರಿಂದ ಪ್ರಮಾಣಗಳಲ್ಲಿ ಉಪನಿಷದ್ವಾಕ್ಯಗಳು ಎಲ್ಲವನ್ನೂ ಮೀರಿದ ಪ್ರಮಾಣವಾಗಿವೆ.॥೨೮॥

ಆದುದರಿಂದ ಸಚ್ಚಿದಾನಂದಸ್ವರೂಪನಾದ ಪರಶಿವನು ತನಗೆ ತಾನೇ ಗಮಕನು. ಅವನಿಗೆ ಬೇರೆ ಗಮಕವಿಲ್ಲವು. ॥೨೯॥

ಸಂಸಾರಸಾಗರದಲ್ಲಿ ಮುಳುಗಿರುವ, ಅಜ್ಞಾನದಿಂದ ಕುರುಡಾದ ಮನಸ್ಸುಳ್ಳ, ಸಾಮಾನ್ಯಜನರ ಚಿತ್ತದ ಸಂಸ್ಕೃತಿಯ ಪರಿಪಾಕದಲ್ಲಿನ ಮಟ್ಟದ ಮೇಲ್ಮೆ ಕೀಳ್ಮೆಗಳಿಗನುಸಾರವಾಗಿ, ಅವರಿಗೆ ಧ್ಯಾನದ ಆನುಕೂಲ್ಯಕ್ಕಾಗಿ ಪಾರ್ಥಿವಲಿಂಗಾದಿಗಳು ಗಮಕವೆಂದು ಹೇಳಲಾಗಿದೆ. ॥೩೦॥

ಅಜ್ಞಾನಿಗಳಿಗೂ ಪರಶಿವಸ್ವರೂಪದ ಜ್ಞಾನವಿಲ್ಲದವರೂ ಅವರವರ ಚಿತ್ತದ ಸಂಸ್ಕಾರಾನುಗುಣವಾಗಿ ಪೂಜಾಧ್ಯಾನಾದಿಗಳನ್ನು ಆಚರಿಸುತ್ತಾ, ಅವರ ಜ್ಞಾನಕ್ಕೆ ಅಡ್ಡಿಯಾಗಿರುವ ಪಾಪಗಳನ್ನು ನಿವಾರಿಸಬೇಕು. ಆದುದರಿಂದ ಆಧಾರ ರಹಿತನಾದ ಪರಶಿವನಿಗೂ ಬಾಣಲಿಂಗಾದಿ ಮೂರ್ತಿಗಳನ್ನು ಧ್ಯಾನಾಧಾರಗಳನ್ನಾಗಿ ಆಗಮಾದಿಗಳಲ್ಲಿ ನಿಜವಾಗಿರುವಂತೆಯೇ ಕಲ್ಪಿಸಿ ಹೇಳಿದೆ. ॥೩೧॥

ಲಯನಾಲ್ಲಿಂಗಮಿತ್ಯಾಹುಃ ಅಪರೇ ವೇದವಿತ್ತಮಾಃ ।
ತದಾಽಪಿ ಲಿಂಗಂ ಭಗವಾನ್ ಸ್ವಯಮೇವ ಮಹೇಶ್ವರಃ ॥೩೨॥

ಲೀಯಮಾನಮಿದಂ ಸರ್ವಂ ಬ್ರಹ್ಮಣ್ಯೇವ ಹಿ ಲೀಯತೇ ।
ನ ಲೀಯತೇ ಪರಂ ಬ್ರಹ್ಮ ಸದಾ ಸತ್ಯಸ್ವಭಾವತಃ ॥೩೩॥

ಶುಕ್ತಿಕಾರಜತಾದೀನಾಂ ಅಸತ್ಯಾನಾಂ ದ್ವಿಜರ್ಷಭಾಃ ।
ಲಯೋ ದೃಷ್ಟೋ ನ ಸತ್ಯಸ್ಯ ಶುಕ್ತಿಕಾಶಕಲಸ್ಯ ತು ॥೩೪॥

ಲೀಯತೇ ಹಿ ಶಿವಾದನ್ಯದಶೇಷಮಶಿವಂ ಶಿವೇ ।
ಅತೋ ಲಿಂಗಂ ದ್ವಿಜಶ್ರೇಷ್ಠಾ ಅವಿನಾಶೀ ಹರಸ್ಸ್ವಯಮ್ ॥೩೫॥

'ಲಿಗಿ-ಗತೌ' ಎಂಬ ಧಾತುವಿನಿಂದ ಆಗುವ, 'ಲಿಂಗಯತಿ' ಪಡೆಯಿಸುತ್ತದೆ. ಆದುದರಿಂದ ಲಿಂಗವು ಎಂಬ ವ್ಯುತ್ಪತ್ತಿಯಿಂದ, ಪರಶಿವಸ್ವರೂಪವೇ ಧ್ಯಾನದಿಂದ ಧ್ಯಾತೃವನ್ನು ಪರಶಿವಸ್ವರೂಪವಾಗಿರುವಿಕೆಯನ್ನು ಪಡೆಯಿಸುತ್ತದೆ. ಎಂದು ಹೇಳಿದ್ದಾಯಿತು. ಈಗ 'ಲೀಙ್-ಸಂಶ್ಲೇಷಣೇ' ಎಂಬ ಧಾತುವಿನಿಂದ 'ಲೀಯತೇ ಅಸ್ಮಿನ್,' ಪ್ರಪಂಚವು ಪರಶಿವಸ್ವರೂಪವಾದ ಬ್ರಹ್ಮದಲ್ಲಿ ಅಡಗುತ್ತದೆ ಎಂಬ ವ್ಯುತ್ಪತ್ತಿಯಿಂದ ಹೇಳುತ್ತಾರೆ. ಆಗಲೂ ಮಹಾಮಹಿಮನಾದ ಮಹೇಶ್ವರನಾದ ಪರಶಿವನು ತಾನೇ ಲಯಾಧಾರನಾಗಿರುತ್ತಾನೆ. ||೩೨||

ಲಯವಾಗುವ ಈ ದೃಶ್ಯಪ್ರಪಂಚವೆಲ್ಲವೂ ಅಧಿಷ್ಠಾನವಾದ ಬ್ರಹ್ಮನಲ್ಲಿಯೇ ಲಯವನ್ನು ಹೊಂದುತ್ತದೆ. ಇದರ ಹಾಗೆ ಬ್ರಹ್ಮವೂ ಲಯವಾಗಲೆಂದು ಆಪಾದನೆ ಮಾಡಲಾಗುವುದಿಲ್ಲ. ಏಕೆಂದರೆ ಬ್ರಹ್ಮವು ತ್ರಿಕಾಲಾಬಾಧ್ಯವಾದುದೂ ಸತ್ಯಸ್ವಭಾವವುಳ್ಳದ್ದೂ ಆಗಿದೆ. ಕಲ್ಪಿತವಸ್ತುವಿಗೆ ಅಧಿಷ್ಠಾನದಲ್ಲಿ ಲಯವಾಗಬಹುದು, ಅಧಿಷ್ಠಾನಕ್ಕೆ ಲಯವಿಲ್ಲವು. ಹೇಗೆಂದರೆ ರಜತ ಮುಂತಾದುವು ಶುಕ್ತಿ ಮುಂತಾದುದರಲ್ಲಿ ಕಲ್ಪಿತವಾದುದರಿಂದ ಅಸತ್ಯಗಳಾದುದರಿಂದ ಅವಕ್ಕೆ ಲಯವು ಕಾಣಬರುತ್ತದೆ. ಆದರೆ ಅಧಿಷ್ಠಾನವಾದ ಶುಕ್ತಿಗೆ ಲಯವು ಕಾಣಬರುವುದಿಲ್ಲ. ಏಕೆಂದರೆ ಅದು ರಜತಕ್ಕಿಂತಲೂ ಮೇಲಾದ ಸತ್ಯಸ್ವಭಾವವುಳ್ಳದ್ದು. ಹಾಗೆಯೇ ಪರಶಿವನಲ್ಲಿ ಎಲ್ಲ ಶಿವಭಿನ್ನವಾದ ಇತರ ದೃಶ್ಯಪ್ರಪಂಚವು ಲಯವನ್ನು ಹೊಂದುತ್ತದೆ. ಆದುದರಿಂದ ಪರಶಿವನೇ ಲಿಂಗಸ್ವರೂಪನೂ ಆಗಿದ್ದಾನೆ. ಸರ್ವಾಧಿಷ್ಠಾನವಾದ ಶಿವನು ಮಾತ್ರ ವ್ಯಾವಹಾರಿಕ ಸತ್ತೆಯುಳ್ಳ ದೃಶ್ಯಪ್ರಪಂಚಕ್ಕಿಂತ ಮೇಲಾದ ಪಾರಮಾರ್ಥಿಕ ಸತ್ತೆಯುಳ್ಳವನಾಗಿರುವುದರಿಂದ ನಿತ್ಯನು. ||೩೩-೩೪-೩೫||

ಅನ್ಯೇ ಚ ಯೋಗಿನೋ ವಿಪ್ರಾ ಆಮನಂತಿ ಶಿವಸ್ಯ ತು ।
ಆಧಾರೇಷು ಶರೀರೇಽಸ್ಮಿನ್ ಲಿಂಗಾನಿ ಪರಮಾತ್ಮನಃ ॥೩೬॥

ಅಧೋಮುಖಮನಾದ್ಯಂತಂ ಅಪಿಂಡಂ ಪಿಂಡಸಂಜ್ಞಿತಮ್ ।
ಜ್ವಲತ್ಕಾಲಾನಿಲಪ್ರಖ್ಯಂ ಸ್ವಯಂಭು ಬ್ರಹ್ಮಸಂಜ್ಞಿತಮ್ ॥೩೭॥

ಮಧ್ಯಮಸ್ಥಂ ಮಹಾಮಂತ್ರೈರರ್ಚನೀಯಂ ತು ಯೋಗಿಭಿಃ ।
ಗುರೂಪದೇಶತೋ ಜ್ಞೇಯಂ ಲಿಂಗಮೇಕಂ ಪ್ರಕೀರ್ತಿತಮ್ ॥೩೮॥

ಯೋಗಮಾರ್ಗವನ್ನನುಸರಿಸುವ ಇತರರು ಈ ಶರೀರದಲ್ಲಿರುವ ಆರು ಆಧಾರಗಳಲ್ಲಿ ಪರಶಿವನ ಉಪಾಸನೆಗಾಗಿ ಗಣೇಶ, ಬ್ರಹ್ಮ, ವಿಷ್ಣು, ರುದ್ರ, ಸಾಕ್ಷಿ, ಶುದ್ಧ ಎಂಬ ರೂಪಗಳನ್ನು ಬೋಧಿಸುತ್ತಾರೆ. ॥೩೬॥

ಮೂಲಾಧಾರದಲ್ಲಿ ಸತ್ತ್ವರಜಸ್ತಮೋರೂಪವಾದ ಗುಣಸಾಮಾನ್ಯವು ಉಪಾಧಿಯಾಗಿರುವ ಪರತತ್ತ್ವವನ್ನು ಗಣೇಶಸಂಜ್ಞೆಯಿಂದ ಉಪಾಸನೆಮಾಡಬೇಕು. ಮಣಿಪೂರವೆಂಬ ನಾಭಿಸ್ಥಾನದ ಆಧಾರದಲ್ಲಿ ರಜೋಗುಣ ಉಪಾಧಿಯಾಗುಳ್ಳ ಪರತತ್ತ್ವವನ್ನು ಬ್ರಹ್ಮಸಂಜ್ಞೆಯಿಂದ ಧ್ಯಾನಮಾಡಬೇಕು. ಮೂರನೆಯದಾದ ಹೃದಯಸ್ಥಾನದ ಅನಾಹತಚಕ್ರದ ಆಧಾರದಲ್ಲಿ ಸತ್ತ್ವಗುಣವೇ ಉಪಾಧಿಯಾಗಿ ಉಳ್ಳ ವಿಷ್ಣುಸಂಜ್ಞೆಯಿಂದ ಪರತತ್ತ್ವವನ್ನು ಧ್ಯಾನಮಾಡಬೇಕು. ನಾಲ್ಕನೆಯದಾದ ಭ್ರೂಮಧ್ಯಸ್ಥಾನದ ಆಜ್ಞಾಚಕ್ರದ ಆಧಾರದಲ್ಲಿ ತಮೋಗುಣವೇ ಉಪಾಧಿಯಾಗಿ ಉಳ್ಳ ರುದ್ರಸಂಜ್ಞೆಯಿಂದ ಪರತತ್ತ್ವವನ್ನು ಧ್ಯಾನಿಸಬೇಕು. ಐದನೆಯದಾದ ಬ್ರಹ್ಮರಂಧ್ರದಲ್ಲಿ ದ್ವಾದಶಾಂತದಲ್ಲಿ ಸಾಕ್ಷಿರೂಪವಾಗಿ ಪರತತ್ತ್ವವನ್ನು ಧ್ಯಾನಿಸಬೇಕು. ಕಡೆಯದಾದ ಷೋಡಶಾಂತದಲ್ಲಿ ಸ್ವಪ್ರತಿಷ್ಠವಾದ ತನಗೆ ತಾನೇ ಆಧಾರವಾಗಿರುವ ಪರತತ್ತ್ವವನ್ನು ಉಪಾಸನೆಮಾಡಬೇಕು.

ಮಣಿಪೂರಕದಲ್ಲಿ ಉಪಾಸನೆಮಾಡಬೇಕಾದ ಬ್ರಹ್ಮಲಿಂಗದ ಸ್ವರೂಪವನ್ನು ಹೇಳುತ್ತಾರೆ. ಸೃಷ್ಟಿಮಾಡಬೇಕಾದ ಜಗದ್ರೂಪವಾದ ಕಾರ್ಯಕ್ಕೆ ಅಭಿಮುಖವಾಗಿರುವ, ವಾಸ್ತವವಾಗಿ ಶರೀರವಿಲ್ಲದಿರುವ, ಸಮಷ್ಟಿಸ್ಥೂಲಶರೀರಾಭಿಮಾನಿಯಾದ, ತುದಿಮೊದಲಿಲ್ಲದೆ ತನ್ನಲ್ಲಿತಾನೇ ಇರುವ, ಪ್ರಕಾಶಿಸುತ್ತಿರುವ ಪ್ರಳಯಾಗ್ನಿಗೆ ಸಮಾನವಾದ, ಪರತತ್ತ್ವವನ್ನು ಧ್ಯಾನಿಸಬೇಕು. ॥೩೭॥

ಮಣಿಪೂರಸ್ಥಾನದಲ್ಲಿರುವ ಈ ಪರತತ್ತ್ವವನ್ನು ಓಂಕಾರದ ಅಕಾರವೇ

ಕೋಟಿಸೂರ್ಯಪ್ರತೀಕಾಶಂ ಕೋಮಲಂ ದ್ವಿಜಪುಂಗವಾಃ ।
ಅಪದಂ ಪದಮವ್ಯಕ್ತಂ ಅಬಾಣಂ ಬಾಣಮದ್ಭುತಮ್ ॥೩೯॥

ತೃತೀಯಸ್ಥಂ ಸದೈವೋರ್ಧ್ವಮುಖಂ ಸಂಸಾರನಾಶಕಮ್ ।
ಅರ್ಚನೀಯಂ ಮಹಾಮಂತ್ರೈರಾತ್ಮನಿಷ್ಠೈಸ್ತು ಯೋಗಿಭಿಃ ॥೪೦॥

ಗುರೂಪದೇಶತೋ ಜ್ಞೇಯಂ ದ್ವಿತೀಯಂ ಲಿಂಗಮೀರಿತಮ್ ।
ಚಂದ್ರಕೋಟಿಪ್ರತೀಕಾಶಂ ಶಾಂಕರಂ ಶಕ್ತಿವಲ್ಲಭಮ್ ॥೪೧॥

ಅರೂಪರೂಪಮವ್ಯಕ್ತಂ ಅಪರಂ ಪರಮಾದ್ಭುತಮ್ ।
ವಿಸರ್ಗಾಧಿಷ್ಠಿತಂ ವಿಶ್ವಂ ವಿಶ್ವವಿಜ್ಞಾನಸಾಧಕಮ್ ॥೪೨॥

ಮುಂತಾದ ಮಹಾಮಂತ್ರಗಳಿಂದ ಯೋಗಿಗಳು ಪೂಜಿಸಲು ಗುರೂಪದೇಶದಿಂದ ಈ ಮೊದಲನೆಯ ಅಂಶದ ಸ್ವರೂಪವನ್ನು ತಿಳಿಯಬೇಕು. ॥೩೮॥

ಕೋಟಿಸೂರ್ಯರಂತೆ ಪ್ರಕಾಶಮಾನವಾದ, ರೂಪಮಾತ್ರವಿರುವ ಸ್ಪರ್ಶವಿಲ್ಲದಿರುವುದರಿಂದ ಕೋಮಲವಾದ, ಪದಂ, ಗಮನಸಾಧನವಾದ ಸೂಕ್ಷ್ಮಶರೀರವಿಲ್ಲದ, ಎಲ್ಲ ಇಂದ್ರಿಯಗಳಿಗೆ ಗೋಚರವಾಗದಿರುವುದರಿಂದ ಅವ್ಯಕ್ತವಾದ, ಅಬಾಣಂ ಸ್ಥೂಲಶರೀರವಿಲ್ಲದ, ಬಾಣಪದಂ ಉಪಾಸನಾರ್ಥವಾದ ಸ್ಥೂಲಸೂಕ್ಷ್ಮಶರೀರಗಳುಳ್ಳ, ಆದುದರಿಂದಲೇ ಆಶ್ಚರ್ಯವಾದ, ಮೂಲಾಧಾರದಿಂದ ಮೂರನೆಯ ಸ್ಥಾನದಲ್ಲಿರುವ, ಸರ್ವದಾ ಪ್ರಪಂಚಕ್ಕೆ ಕಾರಣವಾದ ಪರತತ್ತ್ವಕ್ಕೆ ಅಭಿಮುಖವಾದ, ಅನಾಹತದಲ್ಲಿ ವಿಷ್ಣುಲಿಂಗರೂಪವನ್ನು ಹೇಳುತ್ತಾರೆ. ಸಂಸಾರಬಂಧದುಃಖಗಳನ್ನು ನಾಶಮಾಡುವ, ಉಕಾರವೇ ಮುಂತಾದ ಮಹಾಮಂತ್ರಗಳಿಂದ ಯೋಗಿಗಳೂ ಆತ್ಮನಿಷ್ಠರೂ ಆದ ಉಪಾಸಕರಿಂದ ಪೂಜಿಸಲ್ಪಡುವ ಈ ಎರಡನೆಯ ಬ್ರಹ್ಮಲಿಂಗವನ್ನೂ ಗುರೂಪದೇಶದಿಂದ ತಿಳಿಯಬೇಕು. ಮೂಲಾಧಾರವನ್ನು ವಾಚನಿಕವಾಗಿ ಹೇಳದಿದ್ದರೂ ತೃತೀಯಸ್ಥಂ ಎಂದು ಹೇಳಿದ್ದರಿಂದ ಗಮ್ಯವಾಗಿದೆ. ಎರಡನೆಯ ಲಿಂಗವೆನ್ನುವುದು ವಾಚನಿಕವಾಗಿ ಹೇಳಿದ ಲಿಂಗಗಳಲ್ಲಿ ಎರಡನೆಯದೆಂದು ಭಾವವು. ॥೩೯-೪೦॥

ಆಜ್ಞಾಚಕ್ರದಲ್ಲಿ ಉಪಾಸ್ಯವಾದ ಲಿಂಗಸ್ವರೂಪವು ಕೋಟಿಚಂದ್ರರಷ್ಟು ಕಾಂತಿಯುಳ್ಳ, ಶಿವನ ವಾಸ್ತವರೂಪವಾದ, ಶಕ್ತಿರೂಪಳಾದ ಪಾರ್ವತೀಸಹಿತವಾದ, ರೂಪವಿಲ್ಲದ್ದಾದರೂ ಉಪಾಸನಾರ್ಥವಾದ ರೂಪವುಳ್ಳ, ವ್ಯಾಕೃತವಲ್ಲದ ಕಾರ್ಯರೂಪವನ್ನು ಪಡೆಯದೆ ಕಾರಣರೂಪವಾಗಿರುವ, ಅಜ್ಞಾನರೂಪಕಾರಣ ಶರೀರವೇ ಉಪಾಧಿಯಾಗಿ ಉಳ್ಳ, ವಾಸ್ತವವಾಗಿ ತನಗಿಂತಲೂ ಮೇಲಾದ ಪದಾರ್ಥವಿಲ್ಲದ,

ಅರ್ಚನೀಯಂ ಮಹಾಮಂತ್ರೈರತಿಶುದ್ಧೈಸ್ತು ಯೋಗಿಭಿಃ ।
ಗುರೂಪದೇಶತೋ ಜ್ಞೇಯಂ ತೃತೀಯಂ ಲಿಂಗಮೀರಿತಮ್ ॥೪೪॥

ಏತೇಷು ಲಿಂಗೇಷು ಶಿವಃ ಪುರಾಣಃ
ಸ್ವಶಕ್ತಿಯುಕ್ತಸ್ಸ್ವಜನಪ್ರಿಯಾಯ ।
ಪ್ರಕಾಶತೇ ಸಂತತಮಾತ್ಮವಿದ್ಯಾ
ಪ್ಲವಾಭಿಲಾಷೈರಭಿಪೂಜನೀಯಾ ॥೪೫॥

ಅಂತರ್ಲಿಂಗಂ ಯೋ ವಿಜಾನಾತಿ ಶಶ್ವತ್
ಬಂಧಚ್ಛೇದಂ ಶಂಕರಸ್ಯ ಪ್ರಸಾದಾತ್ ।
ಕುರ್ಯಾದಾಶು ಬ್ರಹ್ಮವಿದ್ಬ್ರಹ್ಮನಿಷ್ಠಾಃ
ಸತ್ಯಂ ಪ್ರೋಕ್ತಂ ಸರ್ವಲೋಕಪ್ರಿಯಾಯ ॥೪೬॥

ಎಲ್ಲಕ್ಕಿಂತಲೂ ಮೇಲಾದ, ಆಶ್ಚರ್ಯಕರವಾದ ಸರ್ಗವೆಂದರೆ ಸೃಷ್ಟಿಯೂ ಸಂಸಾರವೂ ಹೋಗುವ ಸ್ಥಾನವಾದ, ಆಜ್ಞಾಸ್ಥಾನದಲ್ಲಿ ರುದ್ರಲಿಂಗಸ್ವರೂಪವಾಗಿರುವ, ಸರ್ವ ಜ್ಞಾನಕ್ಕೂ ಸಾಧನವಾದ, ವಿಶ್ವರೂಪನಾದ ರುದ್ರನ ಜ್ಞಾನಕ್ಕೆ ಸಾಧನವಾದ, ಸರ್ವ ಸ್ವರೂಪಿಯಾದ, ಈ ಪರತತ್ತ್ವವನ್ನು ಮಕಾರವೇ ಮುಂತಾದ ಮಹಾಮಂತ್ರಗಳಿಂದ ಪೂಜ್ಯವಾದ, ಬ್ರಹ್ಮನ ಮೂರನೆಯ ಲಿಂಗವಾದ ಇದನ್ನು ಗುರೂಪದೇಶದಿಂದ ತಿಳಿಯಬೇಕು. ॥೪೧-೪೨-೪೩-೪೪॥

ಮೇಲೆ ಹೇಳಿದ ಉಪಾಸ್ಯಮೂರ್ತಿಗಳಲ್ಲಿ ಅವ್ಯಕ್ತವಾದ ಕಾರಣೋಪಾಧಿಕನಾದ ಪರಶಿವಮೂರ್ತಿಯು ಅನಾದಿಯಾಗಿ ಎಲ್ಲರಲ್ಲೂ ಅನುಸರಿಸಿರುವ ತನ್ನ ಶಕ್ತಿಯಿಂದ ಕೂಡಿದವನಾಗಿ ತನ್ನ ಭಕ್ತರ ಇಷ್ಟಾರ್ಥವನ್ನು ಅನುಗ್ರಹಿಸುವುದಕ್ಕಾಗಿ ಆವಿರ್ಭವಿಸುತ್ತಾನೆ. ಆದುದರಿಂದ ಸಂಸಾರಸಾಗರವನ್ನು ದಾಟಲು ಅಪೇಕ್ಷೆಯುಳ್ಳವರು, ಸಹಾಯವಾಗಿರುವ ಆತ್ಮವಿದ್ಯೆ ಎಂಬ ತೆಪ್ಪವನ್ನು ಅಪೇಕ್ಷಿಸುವವರು, ಈ ಮೂರ್ತಿಯನ್ನು ಸಂತತವಾಗಿ ಧ್ಯಾನಿಸಬೇಕು. ॥೪೫॥

ಈ ಮೇಲೆ ಹೇಳಿದ ಲಿಂಗವನ್ನು ಯಾವನು ಬಾರಿಬಾರಿಗೂ ಅಂತಃಕರಣದಲ್ಲಿ ಧ್ಯಾನಿಸುತ್ತಾನೋ ಅವನು ಪರಶಿವನ ಅನುಗ್ರಹದಿಂದ ಬ್ರಹ್ಮಜ್ಞಾನವನ್ನು ಪಡೆದವನಾಗಿ ಸಂಸಾರಬಂಧದ ಬಿಡುಗಡೆಯನ್ನು ಜಾಗ್ರತೆಯಾಗಿ ಪಡೆಯುತ್ತಾನೆ. ಈ ಲೋಕದಲ್ಲಿರುವವರೆಲ್ಲರಿಗೂ ಹಿತವಾಗಲೆಂದು ಈ ಪರಮಾರ್ಥತತ್ತ್ವರಹಸ್ಯವನ್ನು ೞಳಲಾಗಿದೆ. ॥೪೬॥

ನಿಸ್ತರಂಗಶಿವೇ ಪರಮಾತ್ಮನಿ
ಪ್ರತ್ಯಯಸ್ಯ ಲಯಃ ಪರಯೋಗಿನಃ ।
ಮುಖ್ಯಮರ್ಚನಮಿತ್ಯಭಿಪದ್ಯತೇ
ಪುಷ್ಪತೋಯಫಲಪ್ರಮುಖಾಃ ಕೃಶಾಃ ॥೪೭॥

ಮಂತ್ರೇಣ ಪೂಜಾ ಮತಿಮತ್ತಮಾನಾಂ
ಅಬೋಧಮೂಲಸ್ಯ ಮಹಾದ್ರುಮಸ್ಯ ।
ಸಂಸಾರಸಂಜ್ಞಸ್ಯ ಮುನೀಂಪ್ರಮುಖ್ಯಾಃ
ನಾಲಂ ಸದಾ ಮೂಲನಿಮೂಲನಾಯ ॥೪೮॥

ಜ್ಞಾನಮೇವ ಶಿವಾರ್ಚನಮಿಷ್ಯತೇ
ಸ್ಥೂಲಮೇವ ಬಹಿರ್ಭಜನಂ ನೃಣಾಮ್ ।
ವೇದ ಏವ ಸದಾ ಮಿತಿ ಕಾರಣಂ
ಬೋಧ ಏವ ಪರಮಂ ಪದಮಾಸ್ತಿಕಾಃ ॥೪೯॥

ನಿರ್ವಿಕಲ್ಪಜ್ಞಾನರೂಪನಾದ ನಿರುಪಾಧಿಕನಾದ ಪರಮಾತ್ಮಸ್ವರೂಪನಾದ ಪರಶಿವನಲ್ಲಿ ಅಸಂಪ್ರಜ್ಞಾತಸಮಾಧಿನಿಷ್ಠನಾದ ರಾಜಯೋಗಿಗೆ ಎಲ್ಲ ವೃತ್ತಿಗಳನ್ನೂ ಲಯಮಾಡಿರುವಿಕೆಯೇ ಮುಖ್ಯವಾದ ಪೂಜೆಯಾಗಿರುತ್ತದೆ. ಹೂವು, ಹಣ್ಣು, ನೀರು ಮುಂತಾದವುಗಳಿಂದ ಮಾಡುವ ಪೂಜೆಯು ಕೇವಲ ಲಘುವಾದುದು, ಮೇಲಾದುದಲ್ಲವು. ॥೪೭॥

ಜ್ಞಾನಿಗಳಲ್ಲಿ ಶ್ರೇಷ್ಠರಾಗಿರುವವರಿಗೆ ಮಂತ್ರ, ನೀರು, ಹೂವು, ಹಣ್ಣು, ಮುಂತಾದ ಬಾಹ್ಯಸಾಮಗ್ರಿಗಳಿಂದ ಪೂಜಿಸುವಿಕೆಯು ಅಜ್ಞಾನದಿಂದುಂಟಾಗಿರುವ ಸಂಸಾರವೆಂಬ ಈ ದೊಡ್ಡ ಮರವನ್ನು ಬೇರುಸಹಿತವಾಗಿ ಕಿತ್ತುಹಾಕಲು ಸಾಕಾಗುವುದಿಲ್ಲವು. ॥೪೮॥

ಮಾನಸೋಪಾಸನೆಯಿಂದ ಆಗುವ ಪರತತ್ತ್ವಜ್ಞಾನವೇ ಮನುಷ್ಯರಿಗೆ ಶಿವನ ಉತ್ತಮವಾದ ಪೂಜೆ ಎನ್ನಿಸುತ್ತದೆ. ಬಾಹ್ಯಸಾಮಗ್ರಿಗಳಿಂದ ಮಾಡುವ ಪೂಜೆಯು ಬಾಹ್ಯವಾದುದಾಗಿ ಸ್ಥೂಲಪೂಜೆ ಎನ್ನಿಸುತ್ತದೆ. ವೇದಸಾರವಾದ ಓಂಕಾರವೇ ಪರಶಿವಸಾಕ್ಷಾತ್ಕಾರಕ್ಕೆ ಕಾರಣವು. ಆದುದರಿಂದ ಜ್ಞಾನವೇ ಶ್ರೇಷ್ಠವಾದ ಮುಕ್ತಿಸ್ಥಿತಿಯು. ॥೪೯॥

ಗುಹ್ಯಮೇವ ತು ವಃ ಕಥಿತಂ ಮಯಾ
ಮಹ್ಯಮಾಹ ಮಹೇಶ್ವರವಲ್ಲಭಃ ।
ವ್ಯಾಸ ಆಮರಣಾಂತಿಕಮಾಸ್ತಿಕಾಃ
ಪೂಜಯಧ್ವಮಸತ್ಯನಿವೃತ್ತಯೇ ॥೫೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಶಿವಲಿಂಗಸ್ವರೂಪಕಥನಂ ನಾಮ ಅಷ್ಟಾವಿಂಶಾಧ್ಯಾಯಃ

ಈ ಪರಮರಹಸ್ಯವಾದ ತತ್ತ್ವವು ನನ್ನಿಂದ ನಿಮಗೆ ಹೇಳಲ್ಪಟ್ಟಿದೆ. ಪರಶಿವನಿಗೆ ಭಕ್ತನಾದುದರಿಂದ ಪ್ರಿಯನಾದ ವ್ಯಾಸನಿಂದ ಇದು ನನಗೆ ಹೇಳಲ್ಪಟ್ಟಿತು. ಅಪಾರ ಮಾರ್ಥಿಕವಾದ ಈ ಸಂಸಾರಪ್ರಪಂಚದ ನಿವೃತ್ತಿಗೋಸ್ಕರ ಮರಣಪರ್ಯಂತವಾಗಿಯೂ ಜ್ಞಾನರೂಪವಾದ ಪೂಜೆಯನ್ನು, ಧ್ಯಾನವನ್ನು ಸರ್ವದಾ ಮಾಡಿರಿ. ॥೫೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಶಿವಲಿಂಗಸ್ವರೂಪವನ್ನು ವಿವರಿಸಿರುವ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ಏಕೋನತ್ರಿಂಶೋಽಧ್ಯಾಯಃ ॥

ಇಪ್ಪತ್ತೊಂಬತ್ತನೆಯ ಅಧ್ಯಾಯವು

(ಶಿವಸ್ಥಾನವಿಚಾರಃ)

॥ ಸೂತ ಉವಾಚ ॥

ಅಥಾತಸ್ಸಂಪ್ರವಕ್ಷ್ಯಾಮಿ ಶಿವಸ್ಥಾನಂ ಸಮಾಸತಃ ।
ಯತ್ರ ಸಂಚಿಂತ್ಯ ದೇವೇಶಂ ಕೈವಲ್ಯಂ ಲಭತೇ ನರಃ ॥೧॥

ಪುರಾ ನಾರಾಯಣಶ್ಶ್ರೀಮಾನ್ ಕಿರೀಟೀ ಗರುಡಧ್ವಜಃ ।
ಶ್ರೀಮತ್ಕೈಲಾಸಪರ್ಯಂತೇ ತತಾಪ ಪರಮಂ ತಪಃ ॥೨॥

ಭಸ್ಮೋದ್ಧೂಳಿತಸರ್ವಾಂಗಃ ತ್ರಿಪುಂಡ್ರಾಂಕಿತಮಸ್ತಕಃ ।
ರುದ್ರಾಕ್ಷಮಾಲಾಭರಣೋ ಜಟಾವಲ್ಕಲಸಂಯುತಃ ॥೩॥

ಪರಶಿವಜ್ಞಾನಕ್ಕೆ ಗಮಕಗಳಾದ ಲಿಂಗಗಳನ್ನು ಹೇಳಿ ಈಗ ಪರಶಿವನ ಅಭಿವ್ಯಕ್ತಿಗೆ ತಕ್ಕಂಥ, ಮಾನವಶರೀರದಲ್ಲೂ ಹೊರಗೂ ಇರುವ ಸ್ಥಾನಗಳನ್ನೂ ಕ್ಷೇತ್ರಗಳನ್ನೂ ಹೇಳುತ್ತಾರೆ. ಆ ಸ್ಥಾನಗಳಲ್ಲಿ ಪರಶಿವನನ್ನು ಧ್ಯಾನಮಾಡುವುದರಿಂದ ಮಾನವನು ತಪ್ಪದೆ ಕ್ರಮವಾಗಿ ಮೋಕ್ಷವನ್ನು ಪಡೆಯುತ್ತಾನೆ. ॥೧॥

ಪೂರ್ವಕಾಲದಲ್ಲಿ ಕೈಲಾಸಪರ್ವತದ ಸಮೀಪದಲ್ಲಿ ಲಕ್ಷ್ಮೀಸಹಿತನಾದ, ಕಿರೀಟವನ್ನು ಧರಿಸಿರುವ, ಬಾವುಟದಲ್ಲಿ ಗರುಡನುಳ್ಳ, ನಾರಾಯಣನು ಮೇಲಾದ

ತಪಸಾ ತಸ್ಯ ದೇವಸ್ಯ ಕೇಶವಸ್ಯ ಮಹಾತ್ಮನಃ ।
ಪ್ರಾದುರಾಸೀನ್ಮಹಾದೇವಶ್ಶಂಕರಃ ಕರುಣಾನಿಧಿಃ ॥೪॥

ತಂ ದೃಷ್ಟ್ವಾ ಪುಂಡರೀಕಾಕ್ಷೋ ಮಹಾದೇವಂ ಘೃಣಾನಿಧಿಮ್ ।
ಅಂಬಿಕಾಸಹಿತಂ ರುದ್ರಂ ಚಂದ್ರಮೌಳಿಂ ಸನಾತನಂ ॥೫॥

ಪ್ರಣಮ್ಯ ದಂಡವದ್ಭೂಮೌ ಭಕ್ತ್ಯಾ ಪರಮಯಾ ಸಹ ।
ಸ್ತೋತ್ರಮಾರಭತೇ ಸ್ತೋತುಂ ಸರ್ವಭೂತಹಿತಾವಹಮ್ ॥೬॥

ಅಕಾರಾಯ ನಮಸ್ಸಾಕ್ಷಾದನಂತಾನಂದಮೂರ್ತಯೇ ।
ಆತ್ಮಭೂತಾಯ ಸರ್ವೇಷಾಮತಿಶುದ್ಧಾಯ ಶೂಲಿನೇ ॥೭॥

ತಪಸ್ಸನ್ನು ಮಾಡಿದನು. ವಿಭೂತಿಯಿಂದ ಲೇಪಿತವಾದ ಶರೀರವುಳ್ಳ, ತ್ರಿಪುಂಡ್ರದಿಂದ ಕೂಡಿದ ಹಣೆಯುಳ್ಳ, ರುದ್ರಾಕ್ಷಮಾಲೆಯ ಅಲಂಕಾರವುಳ್ಳ, ಜಡೆ ನಾರುಮಡಿಗಳಿಂದ ಕೂಡಿರುವ, ದಯಾನಿಧಿಯಾದ, ಮಂಗಳಕರನಾದ ಮಹಾದೇವನು ಮಹಾತ್ಮನಾದ, ತೇಜಸ್ವಿಯಾದ ವಿಷ್ಣುವಿನ ತಪಸ್ಸಿನಿಂದ ಮೆಚ್ಚಿದವನಾಗಿ ಪ್ರತ್ಯಕ್ಷನಾದನು. ||೨-೩-೪||

ಕಮಲದಹಾಗಿರುವ ಕಣ್ಣುಳ್ಳ ವಿಷ್ಣುವು ಎಲ್ಲರಿಗಿಂತಲೂ ದೊಡ್ಡ ದೇವರಾದ, ಕೃಪಾನಿಧಿಯಾದ, ಪಾರ್ವತಿಯೊಡನೆ ಕೂಡಿರುವ, ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ, ಶಾಶ್ವತನಾದ ಆ ರುದ್ರಮೂರ್ತಿಯನ್ನು ನೋಡಿ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಮೇಲಾದ ಭಕ್ತಿಯೊಡನೆ ಎಲ್ಲ ಪ್ರಾಣಿಗಳಿಗೂ ಹಿತಕರವಾದ ಪರಶಿವಸ್ತೋತ್ರವನ್ನು ಅರ್ಥಧ್ಯಾನದೊಡನೆ ಹೇಳಲು ಆರಂಭಿಸಿದನು. ||೫-೬||

ಮಂತ್ರಶಾಸ್ತ್ರದಲ್ಲಿ ಮಂತ್ರಕ್ಕೂ ಮಂತ್ರದಲ್ಲಿ ಧ್ಯೇಯವಾದ ಅರ್ಥಕ್ಕೂ ತಾದಾತ್ಮ್ಯವನ್ನು ಹೇಳುತ್ತಾರೆ. ಹಾಗೆಯೇ ವ್ಯಾಕರಣಶಾಸ್ತ್ರದಲ್ಲಿ ಶಬ್ದಕ್ಕೂ ಅರ್ಥಕ್ಕೂ ಅಭೇದವನ್ನು ಹೇಳುತ್ತಾರೆ. ವರ್ಣಮಾಲೆಯಲ್ಲಿನ ಅಕ್ಷರಸ್ವರೂಪವಾದ ಮಂತ್ರಕ್ಕೆ ಅರ್ಥನಾದ, ಅಕಾರರೂಪನಾದ, ಅಪರಿಚ್ಛಿನ್ನವಾದ ಆನಂದಸ್ವರೂಪನಾದ, ಎಲ್ಲರಿಗೂ ಅಂತರಾತ್ಮಸ್ವರೂಪನಾಗಿರುವ, ಉಪಾಧಿಸಂಬಂಧವಿಲ್ಲದ್ದರಿಂದ ಪರಿಶುದ್ಧನಾದ, ಮಂದಾಧಿಕಾರಿಗಳ ಅನುಗ್ರಹಕ್ಕಾಗಿ ಶೂಲಾದಿಚಿಹ್ನದಿಂದ ಕೂಡಿರುವ ಪರಶಿವನಿಗೆ ನಮಸ್ಕಾರವು. ||೭||

ಇಲ್ಲಿ ನಾವು ಗಮನಿಸಬಹುದಾದ ವಿಶೇಷವೆನೆಂದರೆ—ಮಂತ್ರವು ಅಕ್ಷರರೂಪವಾಗಿದೆ. ಅಕ್ಷರ ಅಥವಾ ವರ್ಣಗಳು ಶಬ್ದದಿಂದ ಉಂಟಾಗುತ್ತವೆ. ಶಬ್ದವು ಸ್ಪಂದರೂಪವಾದುದು. ಈ ಸ್ಪಂದಕ್ಕೇ ಶಕ್ತಿ ಎಂದು ಹೆಸರಿದೆ. ಈ ಶಕ್ತಿಯು ಸತ್ವರಜಸ್ತಮೋರೂಪವಾದ ಗುಣತ್ರಯಾತ್ಮಕವಾಗಿ ಪ್ರಕೃತಿ ಎನಿಸುತ್ತದೆ. ಇವುಗಳಲ್ಲಿ ಸತ್ತ್ವವು ಜ್ಞಾನಾತ್ಮಕಸ್ಪಂದರೂಪವಾದುದು. ರಜಸ್ಸುಕ್ರಿಯಾತ್ಮಕಸ್ಪಂದರೂಪವಾದುದು. ತಮಸ್ಸು ನಿರೋಧಾತ್ಮಕವಾಗಿದೆ. ಶಬ್ದದ ಉತ್ಪತ್ತಿ ಅಥವಾ ಆವಿರ್ಭಾವದಲ್ಲಿ ಮೊದಲು ಸ್ಪಂದವು ನಾದವಾಗುತ್ತದೆ. ಇದರಲ್ಲಿ ಪರಾಪಶ್ಯಂತೀಮಧ್ಯಮಾಸ್ಥಿತಿಗಳನ್ನು ಹಿಂದೆ ಪಂಚೋಪನಿಷತ್ತಿನಲ್ಲಿ ವಿವರಿಸಿದೆ ಎಂದು ಹೇಳಿ ಆಗಿದೆ. ಅನಂತರದಲ್ಲಿ ವೈಖರೀರೂಪದಲ್ಲಿ ಶಬ್ದವು ಮುಖದಲ್ಲಿರುವ ಉಚ್ಚಾರಣಸ್ಥಾನಗಳಲ್ಲಿ ಮೊದಲನೆಯದಾದ ಕಂಠದಲ್ಲಿ, ವಿವೃತಾಸ್ಯದಲ್ಲಿ ಅಕಾರರೂಪವಾಗಿ, ಇತರ ಉಚ್ಚಾರಣಸ್ಥಾನಗಳಲ್ಲಿ ಆಯಾ ಅಕ್ಷರರೂಪಗಳನ್ನು ಪಡೆದು, ಕಡೆಯ ಉಚ್ಚಾರಣಸ್ಥಾನವಾದ ತುಟಿಯಲ್ಲಿ ಉಕಾರರೂಪವನ್ನೂ ಪಡೆದು, ಸಂವೃತರೂಪವಾಗಿ ಹಿಂತಿರುಗಿ ಮಕಾರರೂಪವಾದ ನಾದದಲ್ಲಿ ಲೀನವಾಗುತ್ತದೆ. ಈ ಸ್ಪಂದವಿವರ್ತದಿಂದ ಶಬ್ದಗಳು ಉಂಟಾಗುವಹಾಗೆ, ಕ್ರಿಯಾವಿವರ್ತದಿಂದ ಅರ್ಥಗಳೂ ಉಂಟಾಗುತ್ತವೆ. ಈ ಅಂಶವನ್ನು ಸೂಕ್ಷ್ಮವಾಗಿ ಮಂತ್ರಶಾಸ್ತ್ರ ಶಬ್ದಶಾಸ್ತ್ರಗಳಲ್ಲಿ ಹೇಳಿದೆ.

ಆದುದರಿಂದ ಇಲ್ಲಿ ವಿಷ್ಣುವು ಪರಶಿವನನ್ನು ಅಕ್ಷರಮಾಲೆಯಲ್ಲಿರುವ ಅಕ್ಷರಸ್ವರೂಪನೆಂದು ಉಪಾಸನೆಮಾಡಿದನೆಂದು ಹೇಳಿದೆ. ಶಿವನು ಅನಂತಾನಂದಮೂರ್ತಿಯು. ಇದು ಉಪಾಸನೆಗೆ ಉತ್ತಮವಾದ ಪ್ರತೀಕವು. ಏಕೆಂದರೆ, ಶಿವನು ಅನಂತಾನಂದರೂಪವಾದ ಶಬ್ದ ಮತ್ತು ಅದರ ಅರ್ಥಸ್ವರೂಪನೂ ಆಗಿದಾನೆ. ಇಲ್ಲಿ ಅರ್ಥವು ತನ್ನನ್ನು ತಿಳಿಸುವ ಶಬ್ದದೊಡನೆಯೇ ಸ್ಫುರಿಸುವುದರಿಂದ ಅದು ಶಬ್ದವಿವರ್ತವಾದುದು. ಎರಡರಲ್ಲಿಯೂ ಸ್ಪಂದವು ಅನುಗತವಾಗಿದೆ. ಈ ಅಂಶವನ್ನು,

“ನ ಸೋಽಸ್ತಿ ಪ್ರತ್ಯಯೋ ಲೋಕೇ ಯಃ ಶಬ್ದಾನುಗಮಾದೃತೇ ।
ಅನುವಿದ್ಧಮಿವ ಜ್ಞಾನಂ ಸರ್ವಂ ಶಬ್ದೇನ ಗಮ್ಯತೇ ॥”

“ಶಬ್ದಬ್ರಹ್ಮಯದೇಕಂ ಯತ್ ಚೈತನ್ಯಂ ಚ ಸರ್ವಭೂತಾನಾಂ ।
ಯತ್ಪರಿಣಾಮಸ್ತ್ರಿಭುವನಮಖಿಲಮಿದಂ ಜಯತಿ ಸಾ ವಾಣೀ ॥”

" ಅನಾದಿನಿಧನಂ ಬ್ರಹ್ಮ ಶಬ್ದತತ್ವಂ ಯದಕ್ಷರಂ ।
ವಿವರ್ತತೇಽರ್ಥಭಾವೇನ ಪ್ರಕ್ರಿಯಾಜಗತೋಽಯತಃ ॥ "

ಇತಿ ವಾಕ್ಯಪದೀಯೇ ಹರಿಃ.

" ನಾದೈರಾಹಿತಬೀಜಾಯಾಂ ಅಂತ್ಯೇನ ಧ್ವನಿನಾ ಸಹ ।
ಆವೃತ್ತಪರಿಪಾಕಾಯಾಂ ಬುದ್ಧೌ ಶಬ್ದೋಽವಧಾರ್ಯತೇ ॥ "

ಎಂದು ಮಂತ್ರಶಾಸ್ತ್ರಗಳಲ್ಲೂ ಶಬ್ದಶಾಸ್ತ್ರ (ವ್ಯಾಕರಣಶಾಸ್ತ್ರ)ದಲ್ಲೂ ಹೇಳಿದೆ. ಆಧುನಿಕರಾದ ಭೌತಶಾಸ್ತ್ರಜ್ಞರು ಪ್ರಯೋಗ, ಸಂಶೋಧನೆಗಳಿಂದ ಗೊತ್ತುಮಾಡುತ್ತಿರುವ ಸಿದ್ಧಾಂತಗಳೂ ಈ ಮೇಲಿನ ತತ್ವಕ್ಕೆ ಅನುಕೂಲವಾಗಿರುತ್ತವೆಯೇ ಹೊರತು ವಿರುದ್ಧಗಳಾಗಿಲ್ಲವೆಂಬ ಅಂಶವನ್ನೂ ಗಮನಿಸಬಹುದು. ಆದಾರ್ಶನಿಕರು ಈಚೆಗೆ ಈ ಪ್ರಪಂಚದ ಮೂಲತತ್ವಗಳು ದ್ರವ್ಯ (matter), ಶಕ್ತಿ ಅಥವಾ ಸ್ಪಂದ (Energy or Vibration), ಎಂದು ಎರಡರಲ್ಲಿ ಪರ್ಯವಸಾನವನ್ನು ಹೊಂದಿವೆ ಎಂದು ಹೇಳಿದ್ದರು. ಇತ್ತೀಚಿನ ಸಿದ್ಧಾಂತದಂತೆ ಶಕ್ತಿ ಅಥವಾ ಸ್ಪಂದ (Energy) ಒಂದೇ ಮೂಲತತ್ವವೆಂದು ಸ್ಥಾಪಿಸುತ್ತಿರುವುದಾಗಿ ತಿಳಿಯಬರುತ್ತಿದೆ.

ಈ ಸ್ತೋತ್ರದಲ್ಲಿರುವ ಶ್ಲೋಕಗಳ ಮೊದಲಿನಲ್ಲಿ ಮಾತೃಕಾವರ್ಣಮಾಲಿಯಲ್ಲಿನ ವರ್ಣಗಳನ್ನೂ, ವರ್ಣಮಂತ್ರಗಳನ್ನೂ, ಆ ಅಕ್ಷರಗಳಿಂದ ಪ್ರಾರಂಭವಾಗುವ ಪದಗಳನ್ನೂ, ಇತರ ನಾಮಗಳನ್ನೂ ಹೇಳಿದೆ. ಇದರಿಂದ ಸ್ತುತಿಸಲ್ಪಡುವ ಪರಶಿವನು ಆ ವರ್ಣಮಂತ್ರಸ್ವರೂಪನೆಂದೂ, ಆ ಮಂತ್ರದಲ್ಲಿ ಉಪಾಸ್ಯವಾದ ದೇವತಾಸ್ವರೂಪನೆಂದೂ, ಆಯಾ ಪದಾರ್ಥಸ್ವರೂಪನೂ ಆಗಿದಾನೆಂದೂ ಅಭೇದದಿಂದ ಧ್ಯಾನಿಸಬೇಕು. ತತ್ವಸಾಕ್ಷಾತ್ಕಾರಕ್ಕೆ ಜ್ಞಾನಮಾರ್ಗದಂತೆ ಉಪಾಸನಾಮಾರ್ಗವೂ ಫಲಕಾರಿಯಾಗುತ್ತದೆ. ಇವುಗಳನ್ನು ಪ್ರಾರಂಭಿಸುವಾಗ ಶ್ರದ್ಧೆಯಿಂದ ಎಂದರೆ, ಗುರೂಪದೇಶ, ಶಾಸ್ತ್ರೋಪದೇಶಗಳಲ್ಲಿ ಅಚಲವಾದ ನಂಬಿಕೆಯಿಂದ, ಪ್ರಾರಂಭಿಸಿದರೂ, ಕ್ರಮವಾಗಿ ಹೆಚ್ಚು ಹೆಚ್ಚು ಅನುಭವವನ್ನು ಪಡೆಯುತ್ತಾ, ಮುಮುಕ್ಷುಗಳಾದ ಜಿಜ್ಞಾಸುಗಳಂತೆ, ಭಕ್ತರಾದ ಉಪಾಸಕರೂ, ಭಕ್ತಿ, ಉಪಾಸನೆ, ಜ್ಞಾನಗಳು ಕಡೆಗೆ ಒಂದೇ ಆಗಿವೆ ಎಂಬುದನ್ನೂ, ಒಂದೇ ಗುರಿಯನ್ನು ತಲಪಿಸುತ್ತವೆ ಎಂಬುದನ್ನೂ ಕ್ರಮವಾಗಿ ಮನಗಾಣುತ್ತಾರೆ. ಹೀಗೆ ಭಕ್ತಿಯಿಂದ ಪ್ರಾರಂಭಿಸಿದರೂ ಮೂಢಭಕ್ತಿ ಅಥವಾ ಗೊಡ್ಡುನಂಬಿಕೆಯಲ್ಲಿ ಪರ್ಯವಸಾನವಾಗದೆ, ಶಾಸ್ತ್ರೀಯವಾದ ಯುಕ್ತಿವಿಮರ್ಶೆಗಳ ದೃಷ್ಟಿಯಿಂದಲೂ ನಿಜವೆಂದು ಮನಗಾಣಬಹುದಾದ ಜ್ಞಾನವೇ ದೊರೆಯುತ್ತದೆಂಬುದು ಗಮನಾರ್ಹವಾಗಿರುತ್ತದೆ.

ಆಕಾರಾಯಾತಿಶುದ್ಧಾಯ ಸಾಕ್ಷಿಣೇ ಸರ್ವವಸ್ತುನಃ ।
ಅಂಬಿಕಾಪತಯೇ ತುಭ್ಯಂ ಅಸಂಗಾಯ ನಮೋ ನಮಃ ॥೮॥

ಇಕಾರಾಯೇಶ್ವರಾಖ್ಯಾಯ ಸರ್ವಸಿದ್ಧಿಕರಾಯ ಚ ।
ಇಂದ್ರಾದಿಲೋಕಪಾಲಾನಾಮಿಯತ್ತಾಕಾರಿಣೇ ನಮಃ ॥೯॥

ಈಕಾರಾಯ ವರಿಷ್ಠಾಯ ವಾಂಛಿತಾರ್ಥಪ್ರದಾಯ ಚ ।
ವಂಚಕಾನಾಮಲಭ್ಯಾಯ ವಸುದಾಯ ನಮೋ ನಮಃ ॥೧೦॥

ಉಕಾರಾಯೋಗ್ರಜಂತೂನಾಂ ಉಗ್ರರೂಪಾಯ ಶೂಲಿನೇ ।
ಉತ್ತಮಾನಾಂ ತು ಜಂತೂನಾಂ ಉಪಾಸ್ಯಾಯ ನಮೋ ನಮಃ ॥೧೧॥

ಊಕಾರಾಯೋಪವೀತಾಯ ಹ್ಯೂರ್ಜಿತಾಯೋತ್ತಮಾತ್ಮನೇ ।
ಉತ್ತಮಜ್ಞಾನಗಮ್ಯಾಯ ನಮಸ್ತೇ ಪರಮಾತ್ಮನೇ ॥೧೨॥

ದೋಷಸಂಬಂಧವಿಲ್ಲದ ಅತಿಶುದ್ಧನಾದ, ಎಲ್ಲ ಪದಾರ್ಥಗಳಿಗೂ ಸಾಕ್ಷಿಯಾಗಿರುವ, ಪಾರ್ವತೀಪತಿಯಾದ, ವಾಸ್ತವವಾಗಿ ಉಪಾಧಿಗಳ ಗುಣದೋಷಗಳೊಡನೆ ಸಂಬಂಧವಿಲ್ಲದ, ಆಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೮||

ಇಂದ್ರನೇ ಮುಂತಾದ ಎಂಟು ದಿಕ್ಪಾಲಕರಿಗೆ ಅವರವರ ಪುಣ್ಯಕ್ಕೆ ಅನುಸಾರವಾಗಿ ತಕ್ಕ ಪದವಿಗಳನ್ನು ಕೊಡುವ, ಎಲ್ಲ ಕಾರ್ಯಸಿದ್ಧಿಗಳನ್ನೂ ಅನುಗ್ರಹಿಸುವ ಈಶ್ವರನೆಂಬ ಹೆಸರುಳ್ಳ ಇಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೯||

ಎಲ್ಲ ಇಷ್ಟಾರ್ಥಗಳನ್ನೂ ಕೊಡುವ, ಶ್ರೇಷ್ಠನಾದ, ತಿಳಿದೋ ತಿಳಿಯದೆಯೋ ಆತ್ಮಪರವಂಚಕರಾದ ಮೋಸಗಾರರಿಗೆ ದರ್ಶನವನ್ನು ಕೊಡದೆ ಇರುವ, ಐಶ್ವರ್ಯಗಳನ್ನು ಅನುಗ್ರಹಿಸುವ ಈಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೧೦||

ಕೆಟ್ಟ ಪ್ರಾಣಿಗಳಿಗೆ ಭಯಂಕರವಾದ ಸ್ವರೂಪವುಳ್ಳ, ಶೂಲಾಯುಧವನ್ನು ಧರಿಸಿರುವ, ಒಳ್ಳೆಯ ಪ್ರಾಣಿಗಳಿಗೆ ಉಪಾಸನೆಮಾಡಲು ಅರ್ಹನಾದ, ಉಪಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೧೧||

ಐಹಿಕಾಮುಷ್ಮಿಕಭೋಗಗಳಿಗಾಗಲಿ ಮೋಕ್ಷಕ್ಕಾಗಲಿ ಎಲ್ಲ ಜನರಿಂದಲೂ ಪಡೆಯಲ್ಪಡುವ, ಬಲಿಷ್ಠನಾದ, ಶ್ರೇಷ್ಠನಾದ, ಆತ್ಮಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೧೨||

ಋಕಾರಾಯಾದಿಭೂತಾಯ ರಾಮಪೂರ್ವಾರ್ಚಿತಾಯ ಚ ।
ಋಚಾಮರ್ಥಸ್ವರೂಪಾಯ ನಮಸ್ಸತ್ಯಪರಾತ್ಮನೇ ॥೧೩॥

ೠಕಾರಾಯ ನಿಸರ್ಗಾಯ ನಿತ್ಯತೃಪ್ತಾಯ ಶಂಭವೇ ।
ರಸಾದಿಭೂತರೂಪಾಯ ನಮಶ್ಶುದ್ಧಚಿದಾತ್ಮನೇ ॥೧೪॥

ಌಕಾರಾಯ ಲಸದ್ಗಂಡಮಂಡಿತಾಭರಣಾಯ ಚ ।
ಲಿಂಗಲಿಂಗ್ಯಾದಿಹೀನಾಯ ಲಿಂಗರೂಪಾಯ ತೇ ನಮಃ ॥೧೫॥

ൡಕಾರಾಯ ಲಯಸ್ಥಾಯ ಧ್ವಂಸಕಾಯಾದಿ ಹೇತವೇ ।
ಲಾಕ್ಷಾರುಣಶರೀರಾಯ ಲಾಭಸ್ಥಾನಾಯ ವೈ ನಮಃ ॥೧೬॥

ಎಲ್ಲಕ್ಕೂ ಮೊದಲಿನವನಾದ, ರಾಮಮಂತ್ರಕ್ಕೂ ಋಕಾರಕ್ಕೂ ರಕಾರ ಶ್ರವಣವು ಸಮವಾಗಿರುವುದರಿಂದ ರಾಮನಿಂದಲೂ ಮೊದಲು ಪೂಜಿತನಾದ, ಋಗ್ವೇದಮಂತ್ರಗಳಿಗೆ ಅರ್ಥರೂಪನಾದ, ತ್ರಿಕಾಲಾಬಾಧ್ಯನಾದ ಸತ್ಯ ಪರಮಾತ್ಮ ರೂಪನಾದ ಋಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೧೩॥

ಸರ್ವ ವಸ್ತುಗಳಿಗೂ ಸ್ವಾಭಾವಿಕರೂಪಸ್ವರೂಪನಾದ, ಸರ್ವದಾ ತೃಪ್ತನಾಗಿ ಪಡೆಯಬೇಕಾದುದು ಏನೂ ಇಲ್ಲದವನಾದ, ಕಲ್ಯಾಣಕ್ಕೆ ಮೂಲಕಾರಣನಾದ, ೠಕಾರಕ್ಕೂ ರಕಾರಶ್ರುತಿಸಾಮ್ಯದಿಂದ ರಸಾದಿಪಂಚತನ್ಮಾತ್ರಾಸ್ವರೂಪನಾದ, ಮಾಯಾಸಂಬಂಧದೋಷವಿಲ್ಲದ, ಜ್ಞಾನಸ್ವರೂಪನಾದ ೠಕಾರಸ್ವರೂಪನಾದ, ಪರಶಿವನಿಗೆ ನಮಸ್ಕಾರವು. ॥೧೪॥

ಪ್ರಕಾಶಮಾನವಾದ ಗಂಡಪ್ರದೇಶದಿಂದ ಹೆಚ್ಚು ಕಾಂತಿಯನ್ನು ಪಡೆದಿರುವ ಅಲಂಕಾರವುಳ್ಳ, ಸ್ವಪ್ರಕಾಶರೂಪನಾದುದರಿಂದ ಗಮಕಗಮ್ಯಜ್ಞಾನವೆಂಬ ತ್ರಿಪುಟಿ ಯನ್ನು ಮೀರಿರುವ, ಸ್ವಪ್ರಕಾಶಚಿದ್ರೂಪನಾದ, ಌಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ॥೧೫॥

ಪ್ರಳಯಕಾಲದಲ್ಲೂ ಅಬಾಧಿತನಾಗಿರುವ, ಪ್ರಪಂಚದ ಸಂಹಾರಕ್ಕೆ ಕಾರಣ ನಾದ, ಎಲ್ಲಕ್ಕೂ ಮೊದಲಿನ ಕಾರಣನಾದ, ಅರಗಿನಂತೆ ಕೆಂಪಾದ ಶರೀರವುಳ್ಳ, ಕರ್ಮಫಲರೂಪನಾದ ಲಾಭಕ್ಕೆ, ಜನರ ಕರ್ಮಫಲಲಾಭಕ್ಕೆ, ಕಾರಣನಾದ ൡಕಾರ ಸ್ವರೂಪನಾದ ಪರಶಿವನಿಗೆ ನಮಸ್ಕಾರವು. ॥೧೬॥

ಏಕಾರಾಯ ನಮುಶ್ಶಶ್ವದಿದಂತಾಸಾಕ್ಷಿಣೇ ತಥಾ ।
ಅಹಂತಾಸಾಕ್ಷಿಣೇ ಸಾಕ್ಷಾತ್ ಪ್ರತ್ಯಗದ್ವಯವಸ್ತುನೇ ॥೧೭॥

ಐಕಾರಾಯಾಮಲಜ್ಞಾನಪ್ರಭಾವಪರಿಶೀಲಿನಾಮ್ ।
ಅತ್ಮರೂಪತಯಾ ನಿತ್ಯಂ ಪ್ರತೀತಾಯ ನಮೋ ನಮಃ ॥೧೮॥

ಓಕಾರಾಯ ವಿರಿಂಚಾಯ ವಿಷ್ಣವೇ ರುದ್ರಮೂರ್ತಯೇ ।
ವಾಚ್ಯವಾಚಕಹೀನಾಯ ಸ್ವಯಂಭಾನಾಯ ವೈ ನಮಃ ॥೧೯॥

ಏಕಾರವು ಅಕಾರಇಕಾರಗಳ ಸಮಾಗಮದಿಂದುಂಟಾಗಿದೆ. ಅಕಾರವು ಅಹಂತಾರೂಪವಾದುದು. ಇಕಾರವು ಇದಂತಾರೂಪವಾದುದು. ನಾನು ಎಂಬ ಪ್ರತೀತಿಗೂ ಸಾಕ್ಷಿಯಾಗಿರುವ, ಇದು ಎಂಬ ಜ್ಞಾನಕ್ಕೆ ವಿಷಯವಾಗುವ ದೃಶ್ಯ ಪ್ರಪಂಚಕ್ಕೂ ಸಾಕ್ಷಿಯಾಗಿರುವ, ದೃಗ್‌ದೃಶ್ಯಗಳೆರಡಕ್ಕೂ ಭಾಸಕನಾದ, ವಿಷಯ ವಿಷಯಿ ಎಂಬ ವ್ಯವಹಾರಕ್ಕೆ ಎದುರಾಗಿ ವಾಸ್ತವವಾಗಿ ವಿಷಯವಿಷಯಿಭಾವವಿಲ್ಲದ ಪ್ರತ್ಯಗ್ರೂಪದಲ್ಲಿ ಅದ್ವೈತರೂಪನಾದ, ಏಕರೂಪನಾದ ಪರಶಿವನಿಗೆ ನಮಸ್ಕಾರವು. ||೧೭||

ಐಕಾರವು ಅಕಾರ ಏಕಾರಗಳ ಸಮಾಗಮದಿಂದ ಆಗಿದೆ. ಅಕಾರದಿಂದ ಮಾಯಾಸಂಬಂಧರೂಪವಾದ ದೋಷವಿಲ್ಲದ ಶುದ್ಧಜ್ಞಾನದ ಮಹಿಮೆಯನ್ನು ತಿಳಿಯುವವರಿಗೆ ಪ್ರತ್ಯಗಾತ್ಮರೂಪನಾಗಿ ಸರ್ವದಾ ತೋರುತ್ತಿರುವ ಐಕಾರ ರೂಪನಾದ ಪರಶಿವನಿಗೆ ನಮಸ್ಕಾರವು. ||೧೮||

ಓಕಾರವು ಅಕಾರ ಉಕಾರಗಳ ಸಮಾಗಮದಿಂದ ಆಗಿದೆ. ಅಕಾರಾರ್ಥವಾದ ಬ್ರಹ್ಮರೂಪನೂ ಉಕಾರಾರ್ಥವಾದ ವಿಷ್ಣುರೂಪನೂ ಆದ ರುದ್ರಸ್ವರೂಪನಾಗಿರುವ, ವಾಚಕ ಶಬ್ದವೂ ವಾಚ್ಯ ಅರ್ಥವೂ ಎಂದು ಮುಂತಾದ ಶಬ್ದಾರ್ಥಸ್ವರೂಪವನ್ನು ಉಪಾಸಕರ ಅನುಗ್ರಹಾರ್ಥವಾಗಿ ಔಪಾಧಿಕವಾಗಿ ಪಡೆದಿದ್ದರೂ ವಾಸ್ತವವಾಗಿ ಅದೆಲ್ಲಕ್ಕೂ ಮೀರಿ ಸ್ವಪ್ರಕಾಶಸ್ವರೂಪನಾಗಿರುವ, ಓಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೧೯||

ಔಕಾರಾಯ ಮಹೇಶಾಯ ಮಹಾಮಂತ್ರಾರ್ಥರೂಪಿಣೇ ।
ಮಹಾದೇವಾಯ ಮಂತ್ರಾದಿಪ್ರಪಂಚಾಯ ನಮೋ ನಮಃ ॥೨೦॥

ಬಿಂದುರೂಪಾಯ ಬೀಜಾಯ ಬೀಜಾಧಿಷ್ಠಾನರೂಪಿಣೇ ।
ಬೀಜನಾಶಕರಜ್ಞಾನಸ್ವರೂಪಾಯ ನಮೋ ನಮಃ ॥೨೧॥

ವಿಸರ್ಜನೀಯರೂಪಾಯ ವಿಸ್ಮಯಾಯ ಮಹಾತ್ಮನೇ ।
ವಿಸರ್ಜನೀಯನಿಷ್ಠಾನಾಂ ವಿಶೇಷಾರ್ಥಾಯ ವೈ ನಮಃ ॥೨೨॥

ಕಕಾರಾಯ ಕಪೂರ್ವಾದಿದೇವತಾ ಪೂಜಿತಾಯ ಚ ।
ಕರಣಗ್ರಾಮಸಂಹರ್ತ್ರೇ ಕಾಲಾತೀತಾಯ ವೈ ನಮಃ ॥೨೩॥

ಉಪಾಸಕರ ಇಷ್ಟಾರ್ಥಗಳನ್ನು ಅನುಗ್ರಹಿಸಬಲ್ಲವನಾದುದರಿಂದ ಮಹೇಶ್ವರನಾದ, ಶ್ರೇಷ್ಠವಾದ ಮಂತ್ರವೆಂದರೆ ರುದ್ರನಮಕಚಮಕಮಂತ್ರಗಳ ಅರ್ಥರೂಪನಾದ, ಔಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೨೦||

ಮಾಯೆಯಲ್ಲಿ ಪ್ರತಿಬಿಂಬಿಸಿರುವ ಸ್ಥಿತಿಯಲ್ಲಿ ಬಿಂದುರೂಪನಾದ, ಅಂಕುರಸ್ಥಿತಿಯಲ್ಲಿ ಬೀಜರೂಪವೆನ್ನಿಸಿಕೊಳ್ಳುವ, ಈ ಬೀಜರೂಪದ ಅಧ್ಯಾಸಕ್ಕೂ ಅಧಿಷ್ಠಾನರೂಪನಾದ, ಈ ಬೀಜಾವಸ್ಥೆಗೂ ನಾಶಕವಾದ ಸಾಕ್ಷಾತ್ಕಾರರೂಪವಾದ ಜ್ಞಾನಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೨೧||

ವಿವಿಧರೂಪಗಳಿಂದ ಸೃಷ್ಟಿಮಾಡಲ್ಪಡುವ ಜಗದ್ರೂಪನಾದ, ಆಶ್ಚರ್ಯಕರನಾದ, ತ್ಯಾಗನಿಷ್ಠರಾದ ಜ್ಞಾನಿಗಳಿಗೆ ವಿಶೇಷರೂಪದಿಂದ ಪ್ರಾರ್ಥನೆಗೆ ವಿಷಯನಾದ, ವಿಸರ್ಗರೂಪನಾದ ಪರಶಿವನಿಗೆ ನಮಸ್ಕಾರವು. ||೨೨||

ಕ ಎಂದರೆ ಬ್ರಹ್ಮನೇ ಮುಂತಾದ ದೇವತೆಗಳಿಂದ ಪೂಜಿಸಲ್ಪಡುತ್ತಿರುವ, ಇಂದ್ರಿಯಸಮೂಹಗಳಿಂದ ಕೂಡಿರುವ ಸ್ಥೂಲಸೂಕ್ಷ್ಮಕಾರಣಶರೀರಗಳನ್ನು ನಾಶಮಾಡುವ, ಜ್ಞಾನವನ್ನು ಅನುಗ್ರಹಿಸಿ ಅಶರೀರತ್ವರೂಪವಾದ ಮೋಕ್ಷವನ್ನು ಕೊಡುವ, ಕಾಲದ ಅಳತೆಗೆ ಮೀರಿರುವ, ಕಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೨೩||

ಖಕಾರಾಯ ಖಪೂರ್ವಾದಿಭೂತಪಂಚಕಹೇತವೇ ।
ಖಮೂರ್ತಾಯ ಖಲಪ್ರಜ್ಞಾಗೋಚರಾಯ ನಮೋ ನಮಃ ॥೨೪॥

ಗಕಾರಾಯ ಗಣೇಶಾಯ ಗಣವೃಂದಾರ್ಚಿತಾಯ ಚ ।
ಗಂಗಾಧರಾಯ ಗುಹ್ಯಾಯ ಗುಣಾತೀತಾಯ ತೇ ನಮಃ ॥೨೫॥

ಘಕಾರಾಯ ಘನಾಕಾರ ಘಾತಕಾಯ ಘನಾತ್ಮನೇ ।
ಘಟಾದಿಜಗದಾಕಾರರಹಿತಾಯ ನಮೋ ನಮಃ ॥೨೬॥

ಙಕಾರಾಯ ಙಮಂತ್ರಾರ್ಥಸ್ವರೂಪಾಯ ಶಿವಾತ್ಮನೇ ।
ಙಾಙೀಙೂಸಂಜ್ಞಿತಾರ್ಥಾನಾಮಗಮ್ಯಾಯ ನಮೋ ನಮಃ ॥೨೭॥

ಆಕಾಶ ಮುಂತಾದ ಪಂಚಭೂತಗಳ ಸೃಷ್ಟಿಗೆ ಕಾರಣನಾದ, ಆಕಾಶದಂತೆ ನಿರ್ಲೇಪವಾದ ಶರೀರವುಳ್ಳ, ನೀಚರ ತಿಳಿವಳಿಕೆಗೆ ನಿಲುಕದೆ ಇರುವ ಖಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೨೪||

ಪ್ರಮಥಗಣಗಳಿಗೆ ಸ್ವಾಮಿಯಾದ, ಪೂಜ್ಯನಾದ, ಗಂಗಾದೇವಿಯನ್ನು ಧರಿಸಿರುವ, ಗುಹೆಯಲ್ಲಿ ಎಂದರೆ ಬುದ್ಧಿಯಲ್ಲಿ ತೋರುವ, ಸತ್ತ್ವರಜಸ್ತಮೋರೂಪವಾದ ಮೂರು ಗುಣಗಳನ್ನು ಮೀರಿರುವ, ಗಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೨೫||

ಮೂರ್ತಸ್ವರೂಪವುಳ್ಳ ಜಗತ್ತಿನ ಸಂಹಾರಕ್ಕೆ ಕಾರಣನಾದ, ಪ್ರಪಂಚಾಕಾರನಾದ, ಗಡಿಗೆ ಮುಂತಾದ ಎಲ್ಲ ವಸ್ತುಗಳನ್ನೊಳಗೊಂಡ ಜಗತ್ತಿನ ರೂಪವನ್ನು ವಾಸ್ತವವಾಗಿ ಹೊಂದದೆ ಇರುವ, ಘಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೨೬||

ಙಮಂತ್ರಕ್ಕೆ ಅರ್ಥಸ್ವರರೂಪನಾದ ಏಕರುದ್ರಸ್ವರೂಪನಾದ, ಶಿವರೂಪನಾದ, ಙ ಮುಂತಾದ ವ್ಯಂಜನಗಳಿಂದ ಕೂಡಿರುವ ಮಂತ್ರಗಳಿಗೆ ಅರ್ಥರೂಪಳಾದ ಪಾರ್ವತಿಯ ಮೂರ್ತಿಗಳಿಂದಲೂ ಅಭಿನ್ನನಾದುದರಿಂದ, ಅಜ್ಞಾನಿಗೆ ಅಗಮ್ಯನಾದ, ಙಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೨೭||

ಚಕಾರಾಯ ಚಮಂತ್ರಾರ್ಥಸ್ವರೂಪಾಯಾಮಿತಾತ್ಮನೇ ।
ಚಮಂತ್ರಾರ್ಥನಿಷಣ್ಣಾನಾಮಮೃತಾಯ ನಮೋ ನಮಃ ॥೨೮॥

ಛಕಾರಾಯ ಛಲಾಲಸ್ಯಛಾದನಾದಿ ವಿಶೇಷತಃ ।
ಛಾದನಛಂದನಛನ್ನ ವಿಭಾಗಾಯ ನಮೋ ನಮಃ ॥೨೯॥

ಜಕಾರಾಯ ಜಗಚ್ಛಕ್ತಿಸ್ವರೂಪಾಯ ಜಯಾರ್ಥಿನಾಮ್ ।
ಜಯಪ್ರದಾಯ ದೇವಾಯ ಜಂಭಮೋಹಾಯ ತೇ ನಮಃ ॥೩೦॥

ಝಕಾರಾಯ ಝಮಂತ್ರಾರ್ಥಸ್ವರೂಪಾಯಾಮೃತಾತ್ಮನೇ ।
ಝಮಧ್ಯಚಂದ್ರಬಿಂಬಾಯ ನಮಸ್ಸಾಂಬಾಯ ಶಂಭವೇ ॥೩೧॥

ಚ ಎಂಬ ಮಂತ್ರಕ್ಕೆ ಅರ್ಥರೂಪನಾದ ಕೂರ್ಮೇಶರೂಪನಾದ, ಅಪರಿಚ್ಛಿನ್ನ ಸ್ವರೂಪನಾದ, ಚಮಂತ್ರದ ಉಪಾಸನೆಯಲ್ಲಿ ನಿಷ್ಠರಾಗಿ ಸಿದ್ಧರಾದವರಿಗೆ ಜನ್ಮ ಮರಣಸಂಸಾರಬಂಧವನ್ನು ನಿವಾರಿಸಿ ಮೋಕ್ಷವನ್ನು ಕೊಡುವ, ಚಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೨೮॥

ಕುಟಿಲತೆ, ಸೋಮಾರಿತನ, ಆವರಣ ಮುಂತಾದ ಭೇದಗಳಿಂದ, ವ್ಯಾಧಿ, ಇಚ್ಛಾಜನನ, ಆವೃತಿರೂಪವಾಗಿ ವಿಂಗಡವಾಗಿರುವ ಛಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೨೯॥

ಈ ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಶಕ್ತಿಸ್ವರೂಪನಾದ, ಜಯವನ್ನು ಅಪೇಕ್ಷಿಸುವವರಿಗೆ ಜಯವನ್ನು ಕೊಡುವ, ಪ್ರಕಾಶರೂಪನಾದ, ಜೀವರನ್ನು ಪರವಶರನ್ನಾಗಿ ಮಾಡುವ ಅಜ್ಞಾನಕ್ಕೆ ಅಧಿಷ್ಠಾನರೂಪನಾದ ಜಕಾರ ಸ್ವರೂಪನಾದ ಪರಶಿವನಿಗೆ ನಮಸ್ಕಾರವು. ॥೩೦॥

ಝಮಂತ್ರಕ್ಕೆ ಅರ್ಥವಾದ ದ್ರಾವಿಣೀಶಕ್ತಿಯಿಂದ ಕೂಡಿರುವ, ಶಾಶ್ವತನಾದ, ಝಕಾರದಿಂದ ಲಕ್ಷ್ಯವಾದ, ಅಮೃತವೇ ಮಧ್ಯದಲ್ಲುಳ್ಳ ಚಂದ್ರನೇ ಮೂರ್ತಿಯಾಗುಳ್ಳ, ಪಾರ್ವತೀಯುತನಾದ, ಮಂಗಳಕಾರಣನಾದ, ಝಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೩೧॥

ಞಕಾರಾಯ ಞಮಂತ್ರಾರ್ಥಸ್ವರೂಪಾಯ ಞಮೂರ್ತಯೇ ।
ಜ್ಞಪ್ತಿಮಾತ್ರೈಕನಿಷ್ಠಾನಾಂ ಮುಕ್ತಿದಾಯ ನಮೋ ನಮಃ ॥೩೨॥

ಟಕಾರಾಯ ಟಟಾಟೀಟೂ ಪೂರ್ವಕೈಸ್ತು ಮಹಾರವೈಃ ।
ಅರ್ಚಿತಾಯ ಸುರಶ್ರೇಷ್ಠೈಃ ಅಸುರೈಶ್ಚ ನಮೋ ನಮಃ ॥೩೩॥

ಠಕಾರಾಯ ಠಮಂತ್ರಾರ್ಥಸ್ವರೂಪಾಯ ಠಮಂತ್ರತಃ ।
ಠಠಾದಿ ಗಣಪೂಜ್ಯಾಯ ಠಮಧ್ಯಾಯ ನಮೋ ನಮಃ ॥೩೪॥

ಡಕಾರಾಯ ಡಡಾಡೀಡೂಡೇಡೋಡೈಶ್ಚ ಮಹಾರವೈಃ ।
ಡಾಮರೈರಭಿಪೂಜ್ಯಾಯ ನಮೋ ನೃತ್ಯಪ್ರಿಯಾಯ ಚ ॥೩೫॥

ಢಕಾರಾಯ ಢಮಂತ್ರಾರ್ಥಪರಿಜ್ಞಾನವತಾಂ ನೃಣಾಮ್ ।
ಢಸಂಜ್ಞಿತಮಹಾನಂದಪ್ರದಾಯ ಸತತಂ ನಮಃ ॥೩೬॥

ಞಮಂತ್ರಾರ್ಥವಾದ ನಾಗರೀಶಕ್ತಿಯಿಂದ ಕೂಡಿರುವ, ಜ್ಞಾನಸ್ವರೂಪನಾದ, ಜ್ಞಾನಮಾತ್ರದಲ್ಲಿ ಅಚಲವಾದ ನಿಷ್ಠೆಯುಳ್ಳವರಿಗೆ ಮುಕ್ತಿಯನ್ನು ಕೊಡುವ ಞಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೩೨||

ಟಟಾಟೀಟೂ ಎಂಬ ಬುಡುಬುಡಿಕೆ, ಡಮರುಗ ಮುಂತಾದ ವಾದ್ಯಧ್ವನಿಗಳಿಂದ ದೇವತೆಗಳಿಂದಲೂ ರಾಕ್ಷಸರಿಂದಲೂ ಪೂಜಿಸಲ್ಪಟ್ಟಿರುವ, ಟಕಾರಸ್ವರೂಪನಾದ ಪರಶಿವನಿಗೆ ನಮಸ್ಕಾರವು. ||೩೩||

ಮಂಜರೀಶಕ್ತಿಸಹಿತವಾದ ಲಿಂಗದೇವತೆಯೇ ಠಮಂತ್ರಾರ್ಥವು. ಆ ಶಕ್ತಿಸ್ವರೂಪನಾದ, ಠ ಠಾ ಮುಂತಾದ ಧ್ವನಿಗಳಿಗೆ ಕಾರಣನಾದ ಗಣದಿಂದ ಪೂಜಿತನಾದ, ಮಂಜರೀಶಕ್ತಿಸಹಿತವಾದ ಲಾಂಗಲೀಮಂತ್ರದಿಂದ ಪೂಜಿತನಾದ, ಠಬಿಂದುವಿನಿಂದ ಕೂಡಿದ ಶಿವರೂಪನಾದ ಪರಶಿವನಿಗೆ ನಮಸ್ಕಾರವು. ||೩೪||

ಡಾಡೀ ಮುಂತಾದ ಭಯಂಕರವಾದ ಮಹಾಧ್ವನಿಗಳಿಂದ ಆ ಧ್ವನಿಕಾರಣಗಳಾದ ದೇವತೆಗಳಿಂದ ಪೂಜಿತನಾದ, ನೃತ್ಯದಲ್ಲಿ ಆಸಕ್ತಿಯುಳ್ಳ ಡಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೩೫||

ವೀರಿಣೀಶಕ್ತಿಸಹಿತನಾದ ಅರ್ಧನಾರೀಶ್ವರನು ಢಮಂತ್ರಾರ್ಥವು. ಅದರ ತಿಳಿವಳಿಕೆಯುಳ್ಳ ಜನರಿಗೆ ಢಕಾರದ ಹಾಗಿರುವ ಅಟ್ಟಹಾಸದಿಂದ ಅದಕ್ಕೆ ಕಾರಣ

ಣಕಾರಾಯ ಣಣಾಣೀಣೂಣೇಣೋಣೈಣೌರವೈಸ್ಸದಾ ।
ಣಾಕಿನೀಗಣಪೂಜ್ಯಾಯ ಣಸಂಜ್ಞಾಯ ನಮೋ ನಮಃ ॥೩೭॥

ತಕಾರಾಯ ತಶಬ್ದಾರ್ಥಸ್ವರೂಪಾಯ ತತಾಯ ಚ ।
ತತ್ತ್ವಮಿತ್ಯಭಿಪೂಜ್ಯಾಯ ತತ್ತ್ವಭೂತಾಯ ವೈ ನಮಃ ॥೩೮॥

ಥಕಾರಾಯ ಥಮಂತ್ರಾರ್ಥಸ್ವರೂಪಾಯ ಥಸಂಜ್ಞಿತೈಃ ।
ಮಹಾಗಣೈಶ್ಚ ಪೂಜ್ಯಾಯ ಥಮಧ್ಯಾಯ ನಮೋ ನಮಃ ॥೩೯॥

ದಕಾರಾಯ ದಯಾರೂಪಮಹಾಶಕ್ತಿಮಯಾಯ ಚ ।
ದೇಶಜಾತಿವಿಹೀನಾಯ ದಿವಾರಾತ್ರಾಯ ವೈ ನಮಃ ॥೪೦॥

ಧಕಾರಾಯ ಧರಣ್ಯಾದಿ ಮಹಾಭೂತಸ್ವರೂಪಿಣೇ ।
ಧರಾಧರಸ್ಯ ಧಿಸ್ಥಾಯ ಧಮಧ್ಯಾಯ ನಮೋ ನಮಃ ॥೪೧॥

ವಾದ ಶ್ರೇಷ್ಠವಾದ ಆನಂದವನ್ನು ಕೊಡುವ ಢಕಾರೂಪನಾದ ಪರಶಿವನಿಗೆ ಸರ್ವದಾ ನಮಸ್ಕಾರವು. ॥೩೬॥

ಕೋಟರೀಶಕ್ತಿಸಹಿತನಾದ ಉಮಾಕಾಂತನೇ ಣಮಂತ್ರಾರ್ಥವು. ಆ ಸಂಜ್ಞೆಯುಳ್ಳ, ಣಣಾ ಮುಂತಾದ ಗಂಟೆಯ ಧ್ವನಿಗಳಿಂದ ಣಾಕಿನೀಗಣಗಳಿಂದ ಪೂಜಿತನಾದ ಣಕಾರಸ್ವರೂಪನಾದ ಪರಶಿವನಿಗೆ ಯಾವಾಗಲೂ ನಮಸ್ಕಾರವು. ॥೩೭॥

ಪೂತನಾಸಹಿತನಾದ ಆಷಾಢೀಶನಾಮಕಶಿವನೇ ತಮಂತ್ರಾರ್ಥವು. ಆ ಸ್ವರೂಪವುಳ್ಳ, ವಿಸ್ತಾರವಾಗಿ ವ್ಯಾಪಿಸಿರುವ, ಪೂರ್ಣವಾಗಿ ತುಂಬಿರುವ, ಆತ್ಮವು ಪರಶಿವಸ್ವರೂಪವೆಂದು ಉಪಾಸನೆಮಾಡುವುದೆಂಬ ಪೂಜೆಯಿಂದ ಪೂಜಿತನಾದ, ಪಾರಮಾರ್ಥಿಕಸ್ವರೂಪವುಳ್ಳ ತಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೩೮॥

ದಯೆಯೆಂಬ ಶಕ್ತಿವಿಶೇಷರೂಪನಾದ, ದೇಶಜಾತಿಗಳಿಲ್ಲದೆ ಅಪರಿಚ್ಛಿನ್ನ ಶುದ್ಧನಾದ, ಹಗಲು ರಾತ್ರಿ ಮುಂತಾದ ಕಾಲಸ್ವರೂಪನಾದ, ದಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೪೦॥

ಪೃಥಿವೀಜಲತೇಜೋವಾಯುಆಕಾಶವೆಂಬ ಮಹಾಭೂತಸ್ವರೂಪನಾದ, ಕೈಲಾಸಪರ್ವತದ ಮಧ್ಯದಲ್ಲಿರುವ, ಮೇಧಾಪ್ರದಶಬ್ದದಿಂದ ಹೇಳಲ್ಪಡುವ, ಧಕಾರ ರೂಪನಾದ ಪರಶಿವನಿಗೆ ನಮಸ್ಕಾರವು. ॥೪೧॥

ನಕಾರಾಯ ನಗೇಂದ್ರಾಯ ನಾಮಜಾತ್ಯಾದಿಹೇತವೇ ।
ನಮಶ್ಶಿವಾಯ ನಮ್ಯಾ(ಭ್ಯಾ)ಯ ನಾಮರೂಪಾಯ ಶೂಲಿನೇ ॥೪೨॥

ಪಕಾರಾಯ ಪರಾನಂದಸ್ವರೂಪಾಯ ಪರಾತ್ಮನೇ ।
ಪರಾಪರವಿಹೀನಾಯ ಪಾವನಾಯ ನಮೋ ನಮಃ ॥೪೩॥

ಫಕಾರಾಯ ಫಲಾಖ್ಯಾಯ ಫಲಾಖ್ಯಗಣಯೋನಯೇ ।
ಫಲಾಖ್ಯಗಣಪೂಜ್ಯಾಯ ನಮಃ ಪೂರ್ಣಸ್ವರೂಪಿಣೇ ॥೪೪॥

ಬಕಾರಾಯ ಬಕಾರಾಖ್ಯಮಹಾಬೀಜೈಕಜಾಪಿನಾಮ್ ।
ಬಂಧನಾಗಾರನಾಶೈಕಹೇತವೇ ವೇಧಸೇ ನಮಃ ॥೪೫॥

ಕೈಲಾಸಪರ್ವತವಾಸಿಯಾದ, ನಾಮ ಜಾತಿ ಮುಂತಾದ ಸೃಷ್ಟಿಗೆ ಕಾರಣನಾದ, (ಣಮು ಪ್ರಹ್ವೀಭಾವೇ ಇತಿ) ನಮಸ್ಕಾರಯೋಗ್ಯನಾದ, ಆಕಾಶದಿಂದ ಕೂಡಿದ ನಾಮರೂಪಗಳೆಂಬ ಶಬ್ದಾರ್ಥಗಳ ಸ್ವರೂಪವುಳ್ಳ, ಶೂಲಾಯುಧವನ್ನು ಧರಿಸಿರುವ, ನಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೪೨||

ಶ್ರೇಷ್ಠವಾದ, ಆನಂದಸ್ವರೂಪನಾದ, ಪರಮಾತ್ಮರೂಪನಾದ, ತನಗಿಂತ ಮೇಲಾದ ಪದಾರ್ಥವಿಲ್ಲದ, ತನಗಿಂತಲೂ ಕಡಿಮೆಯಾದ ಪದಾರ್ಥವೂ ವಾಸ್ತವವಾಗಿಲ್ಲದೆ ಇರುವ, ಮಾಯಾದೋಷನಾಶಕನಾದ, ಪಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೪೩||

ಅಷ್ಟಾಂಗಯೋಗದ ತಿಳಿವಳಿಕೆಯಿಂದಲೂ ಅಭ್ಯಾಸದಿಂದಲೂ ಪಡೆಯುವ ಫಲವೆಂಬ ಹೆಸರುಳ್ಳ, ನಾನಾಪ್ರಕಾರವಾದ ಕರ್ಮಗಳಿಗೆ ಫಲರೂಪವಾದ, ಪ್ರಮಥಗಣಗಳ ಪದವಿಯನ್ನು ಪಡೆಯಲು ಕಾರಣನಾದ, ಆ ಗಣಗಳಿಂದ ಪೂಜಿತನಾದ, ಸರ್ವವ್ಯಾಪಿಯಾದ ಅಪರಿಚ್ಛಿನ್ನವಾದ ಸ್ವರೂಪವುಳ್ಳ ಫಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೪೪||

ಬಕಾರದಿಂದ ಕೂಡಿದ ಬ್ರಹ್ಮಪದವೆಂಬ ಮಹಾಮಂತ್ರದ ಬೀಜಾಕ್ಷರವನ್ನು ಮುಖ್ಯವಾಗಿ ಜಪಿಸುವವರಿಗೆ ಸಂಸಾರಬಂಧಕ್ಕೆ ಕಾರಣವಾದ ಅಜ್ಞಾನವನ್ನು ನಾಶಮಾಡುವುದರಲ್ಲಿ ಮುಖ್ಯಕಾರಣವಾದ, ಬ್ರಹ್ಮರೂಪನಾದ ಬಕಾರರೂಪನಾದ ಪರಶಿವನಿಗೆ ನಮಸ್ಕಾರವು. ||೪೫||

ಭಕಾರಾಯ ಭವಾಬ್ಧೇಸ್ತು ತಾರಕಾಯ ಭವಾಯ ತೇ ।
ಭವಶಬ್ದೈಕವೇದ್ಯಾಯ ಭವಾನೀಪತಯೇ ನಮಃ ॥೪೬॥

ಮಕಾರಾಯ ಮಹಾಮಾಯಾಪಾಶನಾಶೈಕಹೇತವೇ ।
ಮಮಕಾರವಿಹೀನಾನಾಂ ಮಹಾನಂದಾಯ ವೈ ನಮಃ ॥೪೭॥

ಯಕಾರಾಯ ಯಥಾರ್ಥಾಯ ಯಥಾರ್ಥಜ್ಞಾನಿನಾಂ ನೃಣಾಮ್ ।
ಯಥಾರ್ಥಪ್ರತ್ಯಗದ್ವೈತಬ್ರಹ್ಮಣೇ ಸತತಂ ನಮಃ ॥೪೮॥

ರಕಾರಾಯ ರತಿಪ್ರೀತಿಪ್ರಿಯಾಯ ರತಿಹೇತವೇ ।
ರಶಬ್ದವಪುಷೇ ರೋಗಭವನಾಶಾಯ ವೈ ನಮಃ ॥೪೯॥

ಸಂಸಾರವೆಂಬ ಸಾಗರದಿಂದ ದಾಟಿಸುವ, ಸದ್ರೂಪನಾದ, ಸತ್ ಎಂಬ ಶಬ್ದ ದಿಂದ ಭವನೊಬ್ಬನೇ ತಿಳಿಸಲ್ಪಡುತ್ತಾನಾಗಿ ಅದರಿಂದ ತಿಳಿಸಲ್ಪಡುವ, ಪಾರ್ವತೀ ಪತಿಯಾದ ಭಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೪೬॥

ಮಹಾಮಾಯೆಯೆಂಬ ಹಗ್ಗದ ಬೀರುಗುಣಿಕೆಯನ್ನು ನಾಶಮಾಡಲು ಮುಖ್ಯ ಕಾರಣನಾದ, ಮಮತೆಯನ್ನು ಬಿಟ್ಟಿರುವವರಿಗೆ ಉತ್ತಮವಾದ ಆನಂದ ರೂಪನಾಗಿರುವ, ಮಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೪೭॥

ಯಾವುದು ಯಾವ ರೂಪದಲ್ಲಿ ಸರ್ವದಾ ತೋರುತ್ತದೋ ಆ ರೂಪವು ಸತ್ಯವಾದುದರಿಂದ ಅದು ಯಥಾರ್ಥವೆನಿಸುತ್ತದೆ. ಬ್ರಹ್ಮವು ಸಚ್ಚಿದಾನಂದರೂಪ ದಿಂದ ಯಾವಾಗಲೂ ತೋರುತ್ತದೆ. ಆ ರೂಪದಿಂದ ಅದು ಸತ್ಯವಾಗಿದೆ. ಆದುದ ರಿಂದ ಅದು ಯಥಾರ್ಥರೂಪವಾದುದು. ಅಂಥ ಬ್ರಹ್ಮಸ್ವರೂಪನಾದ, ವಾಸ್ತವ ವಾದುದರಿಂದ ಅಬಾಧ್ಯವಾದ ಜ್ಞಾನವುಳ್ಳ ಜನರಿಗೆ ನಿಜವಾದ ಜೀವಾತ್ಮ ಪರಮಾತ್ಮ ರಿಗೆ ಅಭೇದರೂಪವಾದ ಬ್ರಹ್ಮಸ್ವರೂಪನಾದ, ಯಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೪೮॥

ಈಶ್ವರನ ಅಷ್ಟಮೂರ್ತಿಗಳಲ್ಲಿ ರವಿಯೂ ಒಂದಾಗಿದೆ. ಆ ರವಿಶಬ್ದವು ರಕಾರದಿಂದ ಕೂಡಿದೆ. ಶಬ್ದೈಕದೇಶ, ಶಬ್ದ, ಮತ್ತು ಅರ್ಥಗಳಿಗೆ ಅಭೇದವೆಂಬ ನ್ಯಾಯವನ್ನು ಅವಲಂಬಿಸಿ ಈ ಪ್ರಕರಣದಲ್ಲಿ ಆಯಾ ವರ್ಣರೂಪನಾಗಿದಾನೆಂದು ಪರಶಿವನನ್ನು ವರ್ಣಿಸುತ್ತಿದಾರೆ. ರಕಾರರೂಪನಾದ, ರತಿಯ ಪ್ರೀತಿಯೂ ಪ್ರಿಯ ವಾಗಿರುವ ಮನ್ಮಥರೂಪನೂ ಆಗಿರುವ, ಸರ್ವಾತ್ಮಕನಾದ, ಎಲ್ಲ ಪ್ರೀತಿಗೂ ಕಾರಣ

ಲಕಾರಾಯ ಲತಾಸೋಮಸ್ವರೂಪಾಯ ಲತಾತ್ಮನೇ ।
ಲಾಭಾಲಾಭವಿಹೀನಾಯ ಲಬ್ಧರೂಪಾಯ ವೈ ನಮಃ ॥೫೦॥

ವಕಾರಾಯ ವರಿಷ್ಠಾಯ ವಾಸುದೇವಾದಿ ಹೇತವೇ ।
ವಾಂಛಾವಾಗುರುವಿಚ್ಛಿತ್ತಿಹೇತುಭೂತಾಯ ವೈ ನಮಃ ॥೫೧॥

ಶಕಾರಾಯ ಶರಣ್ಯಾಯ ಶಂಭವೇ ಶರಣಾರ್ಥಿನಾಮ್ ।
ಶರಣಾಯ ಶರಚ್ಚಂದ್ರಧವಳಾಯ ನಮೋ ನಮಃ ॥೫೨॥

ಷಕಾರಾಯ ಷಡಾಧಾರಷಟ್ಚಕ್ರಾದಿಸ್ವರೂಪಿಣೇ ।
ಷಡಕ್ಷರನಿಷಣ್ಣಾಯ ನಮಷ್ಷಣ್ಮುಖಹೇತವೇ ॥೫೩॥

ನಾದ, ಸೂರ್ಯರೂಪನಾದ, ರೋಗಗಳನ್ನೂ ಸಂಸಾರವನ್ನೂ ಕ್ರಮವಾಗಿ ನಾಶ ಮಾಡುವ ಪರಶಿವನಿಗೆ ನಮಸ್ಕಾರವು. ॥೪೯॥

ಈಶ್ವರನ ಎಂಟು ಮೂರ್ತಿಗಳಲ್ಲಿ ಒಂದಾದ ಚಂದ್ರನು ಓಷಧೀಶನಾದುದರಿಂದ ಸೋಮಲತಾಸ್ವರೂಪನಾದ ಲಕಾರರೂಪನಾದ, ಸರ್ವಾತ್ಮಕನಾಗಿ ಲತಾರೂಪನೂ ಆದ, ಆಪ್ತಕಾಮನಾದುದರಿಂದ ಲಾಭಅಲಾಭಗಳಿಲ್ಲದ, ಜೀವನ ಹಾಗೆ ಆವರಣವಿಲ್ಲದಿರುವುದರಿಂದ ಯಾವಾಗಲೂ ಲಬ್ಧವಾಗಿರುವ ಸ್ವರೂಪಜ್ಞಾನವುಳ್ಳ ಪರಶಿವನಿಗೆ ನಮಸ್ಕಾರವು. ॥೫೦॥

ವಕಾರರೂಪನಾದ, ಶ್ರೇಷ್ಠನಾದ, ವಸುದೇವನ ಮಗನಾದ ಕೃಷ್ಣ ಮುಂತಾದ ಎಲ್ಲರಿಗೂ ಕಾರಣನಾದ, ಆಶೆಯೆಂಬ ಬಲೆಯನ್ನು ಕತ್ತರಿಸಲು ಕಾರಣನಾದ ಪರಶಿವನಿಗೆ ನಮಸ್ಕಾರವು. ॥೫೧॥

ಆಶ್ರಿತರನ್ನು ಕಾಪಾಡುವ ಸ್ವಭಾವವುಳ್ಳ, ಮರೆಹೊಕ್ಕವರ ಸುಖಕ್ಕೆ ಕಾರಣನಾದ, ಸರ್ವರಕ್ಷಕನಾದ, ಶರತ್ಕಾಲದ ಚಂದ್ರನಂತೆ ಶುಭ್ರವಾದ ಕಾಂತಿಯುಳ್ಳ, ಶಕಾರರೂಪನಾದ ಪರಶಿವನಿಗೆ ನಮಸ್ಕಾರವು. ॥೫೨॥

ಷಕಾರರೂಪನಾದ, ಮೂಲಾಧಾರ ಮುಂತಾದ ಆರು ಸ್ಥಾನಗಳಲ್ಲಿ ಷಟ್ಚಕ್ರರೂಪನಾಗಿರುವ, ಆರು ಅಕ್ಷರಗಳುಳ್ಳ ಶಿವಮಂತ್ರದಿಂದ ತಿಳಿಯಲ್ಪಡುವ, ಷಣ್ಮುಖನಿಗೆ ಕಾರಣನಾಗಿರುವ ಪರಶಿವನಿಗೆ ನಮಸ್ಕಾರವು. ॥೫೩॥

ಸಕಾರಾಯ ಸಶಬ್ದಾರ್ಥಸ್ವರೂಪಾಯ ಸದಾತ್ಮನೇ ।
ಸಾಕ್ಷಿಣೇ ಸಾಕ್ಷಿರೂಪಾಣಾಂ ನಮಸ್ಸಾಧೂಪಕಾರಿಣೇ ॥೫೪॥

ಹಕಾರಾಯಾಹಮರ್ಥಾಯ ಸದಾಽಹಂಕಾರಸಾಕ್ಷಿಣೇ ।
ಹಾಹಾಹೂಹೂಕಗೀತಾಯ ಹಂಸರೂಪಾಯ ವೈ ನಮಃ ॥೫೫॥

ಲಕಾರಾಯ ಲಕಾರಾಖ್ಯಮಹಾಮಂತ್ರಪ್ರಿಯಾಯ ಚ ।
ಲೋಲಾಚಂಚಲಸಂಸಾರನಾಶನಾಯ ನಮೋ ನಮಃ ॥೫೬॥

ಕ್ಷಕಾರಾಯ ಕ್ಷಮಂತ್ರಾರ್ಥಸ್ವರೂಪಾಯ ಕ್ಷಮಾವತಾಮ್ ।
ಕ್ಷೇಮದಾಯ ಮಮ ಕ್ಷೇಮಸ್ವರೂಪಾಯ ನಮೋ ನಮಃ ॥೫೭॥

ಸಕಾರರೂಪನಾದ, ಸಹಜಾ ಎಂಬ ಶಕ್ತಿಯಿಂದ ಕೂಡಿದ ಭೃಂಗೀಶನು ಸಶಬ್ದಕ್ಕೆ ಅರ್ಥವು. ಅದೇ ಸ್ವರೂಪವಾಗಿ ಉಳ್ಳ, ತ್ರಿಕಾಲಾಬಾಧ್ಯವಾದ ಸದ್ರೂಪನಾದ, "ಅಸಂಗೋದಾಸೀನತ್ವೇ ಸತಿ ಭಾಸಮಾನತ್ವಂ ಸಾಕ್ಷಿತ್ವಮ್" ಎಂಬಂತೆ ಅಸಂಗನಾಗಿಯೂ ಅಭಿಮಾನವಿಲ್ಲದವನಾಗಿಯೂ, ಚಿದ್ರೂಪನಾಗಿಯೂ ಸರ್ವದಾ ತೋರುತ್ತಲೂ ಇರುವ, ವಿಷಯಗಳಲ್ಲಿ ಆಸಕ್ತರಾಗಿರುವವರಿಗೂ, ಮುಮುಕ್ಷುಗಳಿಗೂ, ಭೋಗಮೋಕ್ಷಗಳನ್ನು ಅವರವರ ಯೋಗ್ಯತಾನುಸಾರವಾಗಿ ಚನ್ನಾಗಿ ಅನುಗ್ರಹಿಸುವ, ಪರಶಿವನಿಗೆ ನಮಸ್ಕಾರವು. ॥೫೪॥

ಹಕಾರಸ್ವರೂಪನಾದ, ಅಹಂಪದಕ್ಕೆ ಲಕ್ಷ್ಯಾರ್ಥಸ್ವರೂಪನಾದ, ಯಾವಾಗಲೂ ಅಹಂ ಎಂಬ ಪ್ರತ್ಯಯಕ್ಕೆ ಸಾಕ್ಷಿಯಾಗಿರುವ, ಹಾಹಾ, ಹೀಹೀ, ಹೂಹೂ ಎಂಬ ದೇವಗಂಧರ್ವರಿಂದ ಸ್ತುತಿಸಲ್ಪಡುವ, ಅಜಪಾಮಂತ್ರಪ್ರತಿಪಾದಿತನಾದ ಹಂಸಸ್ವರೂಪನಾದ "ತತ್ತ್ವಮಸಿ" ಮುಂತಾದ ವಾಕ್ಯಬೋಧ್ಯನಾದ ಪರಶಿವನಿಗೆ ನಮಸ್ಕಾರವು. ॥೫೫॥

ವ್ಯಾಪಿನೀಶಕ್ತಿಯಿಂದ ಕೂಡಿರುವ ಶಿವನು ಲಕಾರಾರ್ಥವು. ಲಕಾರರೂಪನಾದ, ಲಮಂತ್ರಜಪದಿಂದ ಸಂತುಷ್ಟನಾಗುವ, "ಲಡಯೋರಭೇದಃ" ಎಂಬಂತೆ ಡೋಲಾ ಉಯ್ಯಾಲೆಯ ಹಾಗೆ ಚಂಚಲವಾದ ಸಂಸಾರವನ್ನು ಹೋಗಲಾಡಿಸುವ ಪರಶಿವನಿಗೆ ನಮಸ್ಕಾರವು. ॥೫೬॥

ಮಾಯಾಶಕ್ತಿಯಿಂದ (ರಹಿತನಾದ) ಕೂಡಿರುವ ಸಂವರ್ತಕೇ(ಶ)ಯನೇ ಕ್ಷಮಂತ್ರಾರ್ಥವು. ಕ್ಷಕಾರರೂಪನಾದ, ಶಬ್ದಕ್ಕೂ ಅರ್ಥಕ್ಕೂ ಅಭೇದದಿಂದ

ಮಾತೃಕಾವಪುಷೇ ಮಾತೃಮಾನಮೇಯಾದಿಸಾಕ್ಷಿಣೇ ।
ಮಾತೃಕಾಮಂತ್ರಲಭ್ಯಾಯ ಮಹಸೇ ಚ ನಮೋ ನಮಃ ॥೫೮॥

ಮಾತೃಕಾಧಾರಭೂತಾಯ ಮಾತೃಕಾಮೂಲರೂಪಿಣೇ ।
ಮಹಾಮಂತ್ರೈಕವಾಚ್ಯಾಯ ಮಹಸೇ ಬ್ರಹ್ಮಣೇ ನಮಃ ॥೫೯॥

ದ್ವಿಧಾ ಭೂತಮಹಾಮಂತ್ರಸ್ವರವ್ಯಂಜನರೂಪತಃ ।
ವಾಚ್ಯಾಯಾಪದರೂಪಾಯ ಪದಾಯ ಮಹಸೇ ನಮಃ ॥೬೦॥

ಅಷ್ಟಾಧಾ ಚಾಷ್ಟವರ್ಗೈಸ್ತು ವಿಭಕ್ತಾಯಾಮಲಾತ್ಮನೇ ।
ಅಶೇಷಶಬ್ದಭೂತಾಯ ತತ್ತದರ್ಥಾಯ ವೈ ನಮಃ ॥೬೧॥

ಕ್ಷಮಂತ್ರಾರ್ಥರೂಪನೂ ಆದ, ಕ್ಷಮಾಗುಣವುಳ್ಳವರಿಗೆ ಕ್ಷೇಮದಾಯಕನಾದ, ಪಡೆದು ದನ್ನು ರಕ್ಷಿಸುವ, ನನ್ನ ಅಂದರೆ ಉಪಾಸಕನಿಗೆ ಉಂಟಾಗುವ ಉತ್ಕರ್ಷರೂಪನಾದ, ಪರಶಿವನಿಗೆ ನಮಸ್ಕಾರವು. ॥೫೭॥

ವರ್ಣಮಾಲೆಯೇ ಸ್ವರೂಪವಾಗಿ ಉಳ್ಳ, ತಿಳಿಯುವವನು, ತಿಳಿವಳಿಕೆ, ತಿಳಿದುಬರುವ ವಿಷಯ ಇವೇ ಮುಂತಾದುವಕ್ಕೂ ಸಾಕ್ಷಿಯಾಗಿರುವ, ವರ್ಣಮಾಲಾ ರೂಪವಾದ ಮಂತ್ರದಿಂದ ಉಪಾಸನಾಮೂಲಕ ಪಡೆಯಲ್ಪಡುವ, ಜ್ಯೋತೀರೂಪ ನಾದ ಪರಶಿವನಿಗೆ ನಮಸ್ಕಾರವು. ॥೫೮॥

ವರ್ಣಮಾಲೆಗೆ ಅಧಿಷ್ಠಾನರೂಪನಾದ, ವರ್ಣಮಾಲೆಗೆ ಕಾರಣನಾದ ಬ್ರಹ್ಮ ರೂಪನಾದ, ಅಕಾರಾದಿವರ್ಣಮಾಲೆಯೆಂಬ ಮಹಾಮಂತ್ರಕ್ಕೆ ಅರ್ಥರೂಪನಾದ, ತೇಜೋರೂಪನಾದ, ಬ್ರಹ್ಮನಿಗೆ ನಮಸ್ಕಾರವು. ॥೫೯॥

ಮಂತ್ರದ ವರ್ಣಗಳಿಗೆ ವ್ಯಂಜಕವಾದ ಧ್ವನಿ ಮತ್ತು ಸ್ಫೋಟ ಎಂದರೆ ವ್ಯಂಗ್ಯವಾದ "ಏಕಂಪದಂ," ಒಂದು ಪದವು, ಎಂಬ ಪ್ರತೀತಿಗೆ ವಿಷಯವಾದ ಸ್ಫೋಟ ವೆಂದು ಈ ಎರಡು ರೂಪವಾಗಿರುವ, ವರ್ಣಮಾಲೆಯೆಂಬ ಮಂತ್ರದಲ್ಲಿ ಸ್ವರಗಳೂ ವ್ಯಂಜನಗಳೂ ಇವುಗಳ ಸ್ವರೂಪದಿಂದ ತಿಳಿಸಲ್ಪಡುವ ಎಂದರೆ ಸ್ಫೋಟದಿಂದ ತಿಳಿದು ಬರುವನಾದುದರಿಂದ ಔಪಾಧಿಕವಾಗಿ ಪದಸ್ವರೂಪನಾದ, ಆದರೂ ವಾಸ್ತವವಾಗಿ ಪದರೂಪನಲ್ಲದ ಪರಶಿವನಿಗೆ ನಮಸ್ಕಾರವು. ॥೬೦॥

ನಿಜಸ್ವರೂಪದಲ್ಲಿ ನಿರ್ಮಲನಾದ ನಿಷ್ಕಳನಾದ, ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ವಾಕ್ತತ್ವರೂಪನಾದ, ಅಕಾರಾದಿ, ಕಾದಿ, ಚಾದಿ,

ಶಬ್ದಾನ್ವಯವಿಹೀನಾಯ ಶಬ್ದಲಭ್ಯಾಯ ಸಾಕ್ಷಿಣೇ ।
ಸರ್ವೋಪಾಧಿವಿಹೀನಾಯ ಸ್ವಯಂಭಾನಾಯ ವೈ ನಮಃ ॥೬೨॥

ಪ್ರತ್ಯಕ್ಷಾದಿಪ್ರಮಾಣಾನಾಮಗಮ್ಯಾಯಾಪರೋಕ್ಷತಃ ।
ಪ್ರತೀತಾಯ ಸ್ವಯಂ ಸರ್ವಸಾಕ್ಷಿಣೇ ಮಹಸೇ ನಮಃ ॥೬೩॥

ಸ್ವಸ್ವರೂಪಾದಿಹೀನಾಯ ವಸ್ತುತೋಽವಸ್ತುತೋಽಪಿ ಚ ।
ಅರ್ಥಾಯ ಮಹತೇ ಸಾಕ್ಷಾತ್ ಸ್ವಯಂಭಾನಾಯ ವೈ ನಮಃ ॥೬೪॥

ಪ್ರಸಾದಲಭ್ಯಾಯ ಶಿವಾಯ ಸತ್ಯ ಚಿ
ನ್ಮಹಾಸುಖಾಯಾಪರವರ್ಜಿತಾಯ ।
ಅತೀವ ಶುದ್ಧಸ್ಯ ಹೃದಂಬುಜಾಲಯೇ
ವಿಭಾಸಮಾನಾಯ ನಮೋ ನಮಸ್ತೇ ॥೬೫॥

ಟಾದಿ, ತಾದಿ, ಪಾದಿ, ಯಾದಿ, ಶಾದಿಯಾದ ಎಂಟು ವರ್ಣಸಮುದಾಯರೂಪನಾದ, ಎಲ್ಲ ಶಬ್ದಸ್ವರೂಪನಾದ, ಶಬ್ದಾರ್ಥಗಳಿಗೆ ಅಭೇದನ್ಯಾಯದಿಂದ ಆ ಶಬ್ದಗಳ ಅರ್ಥರೂಪನೂ ಆಗಿರುವ ಪರಶಿವನಿಗೆ ನಮಸ್ಕಾರವು. ॥೬೧॥

ನಿಜಸ್ವರೂಪದಲ್ಲಿ ಎಲ್ಲ ಉಪಾಧಿಗಳಿಂದ ರಹಿತನಾದ, ಆದುದರಿಂದ ಯಾವ ಶಬ್ದವೂ ವಾಚಕತಾಸಂಬಂಧದಿಂದ ತನ್ನಲ್ಲಿ ಇಲ್ಲದೆ ಇರುವ, ಸೋಪಾಧಿಕವಾಗಿರುವಾಗ ಶಬ್ದಗಳಿಂದ ತಿಳಿಯಲ್ಪಡುವ, ವಾಸ್ತವರೂಪದಲ್ಲಿ ಎಲ್ಲ ಬಗೆಯ ಉಪಾಧಿಗಳ ಸಂಬಂಧವಿಲ್ಲದಿರುವ, ಸ್ವಪ್ರಕಾಶರೂಪನಾದ ಪರಶಿವನಿಗೆ ನಮಸ್ಕಾರವು. ॥೬೨॥

ಪ್ರತ್ಯಕ್ಷ, ಅನುಮಾನ, ಶಬ್ದಗಳೆಂಬ ಪ್ರಮಾಣಗಳಿಗೆ ಗೋಚರನಾಗದ, ದೃಶ್ಯತ್ವವನ್ನು ಮೀರಿ ಅಪರೋಕ್ಷಸಾಕ್ಷಾತ್ಕಾರದಿಂದ ತಿಳಿಯಬರುವ, ಎಲ್ಲಕ್ಕೂ ತಾನೇ ಸಾಕ್ಷಿಯಾಗಿರುವ, ತೇಜೋರೂಪನಾದ ಪರಶಿವನಿಗೆ ನಮಸ್ಕಾರವು. ॥೬೩॥

ಪಾರಮಾರ್ಥಿಕರೂಪದಲ್ಲಿ ರೂಪವಿಶೇಷವಿಲ್ಲದೆ ವೃತ್ತಿಯಿಲ್ಲದವನಾದ, ಔಪಾಧಿಕವಾಗಿಯೇ ಕಾಣಬರುವ ನಾಮರೂಪಗಳು ವಾಸ್ತವವಾಗಿಲ್ಲದ, ದೇಶಕಾಲವಸ್ತುಪರಿಚ್ಛೇದಗಳಿಂದ ರಹಿತನಾದ, ಅಪರೋಕ್ಷಸಾಕ್ಷಾತ್ಕಾರದಿಂದ ತಿಳಿಯುವ ಪರಮಾರ್ಥರೂಪನಾದ, ಸ್ವಪ್ರಕಾಶರೂಪನಾದ ಪರಶಿವನಿಗೆ ನಮಸ್ಕಾರವು. ॥೬೪॥

ಈಶ್ವರಾನುಗ್ರಹದಿಂದ ಪಡೆಯಬಹುದಾದ, ಸಚ್ಚಿದಾನಂದರೂಪನಾದ, ಮಾಯಾ ಅದರ ಕಾರ್ಯಗಳೆಂಬ ಅಪರಪದಾರ್ಥಗಳಿಂದ ವಾಸ್ತವವಾಗಿ ಸಂಬಂಧಿಸದೆ

|| ಓಂ ಸೂತ ಉವಾಚ ||

ಏವಂ ನಾರಾಯಣೇನೈವ ಶಂಕರೋಽಭಿಷ್ಟುತಃ ಪುನಃ ।
ಪ್ರಾಹ ಗಂಭೀರಯಾ ವಾಚಾ ಕಿಮರ್ಥಂ ತಪ್ತವಾಂಸ್ತಪಃ ॥೬೬॥

ತಪಸ್ಸ್ಥಾನಾನಿ ಮೇ ದೇವ ಬ್ರೂಹಿ ಸಾಕ್ಷಾತ್ಕೃಪಾಕರ ।
ಇತ್ಯುಕ್ತೋ ವಿಷ್ಣುನಾ ಶಂಭುಃ ಸರ್ವಜ್ಞಃ ಕರುಣಾಕರಃ ॥೬೭॥
ಪ್ರಾಹ ಸರ್ವೇಶ್ವರೇಶಾನಃ ಸ್ಥಾನಾನಿ ಸ್ವಸ್ಯ ವಿಷ್ಣವೇ ।

|| ಓಂ ಈಶ್ವರ ಉವಾಚ ||

ಮಮ ಸ್ಥಾನಾನಿ ವಕ್ಷ್ಯಾಮಿ ಮಹಾಮೋಹನಿವೃತ್ತಯೇ ।
ಅತೀವ ಶ್ರದ್ಧಯಾ ಸಾರ್ಧಂ ಶೃಣುಷ್ವ ಪುರುಷೋತ್ತಮ ॥೬೮॥

ಅಧ್ಯಾತ್ಮೇ ಚಾಧಿಭೂತೇ ಚ ಸ್ಥಾನಾನಿ ಸುಬಹೂನಿ ಮೇ ।
ಸ್ವರ್ಗಾಪವರ್ಗಸಿದ್ಧ್ಯರ್ಥಂ ಉಪಾಸ್ಯಾನಿ ಮನೀಷಿಭಿಃ ॥೬೯॥

ಇರುವ, ಹೆಚ್ಚಾಗಿ ನಿರ್ಮಲನಾದ ಉಪಾಸಕನ ಹೃದಯಕಮಲಸ್ಥಾನದಲ್ಲಿ ಸ್ಫುರಿಸುವ, ರಜಸ್ತಮೋಗುಣಗಳಿಂದ ಅಭಿಭೂತವಾಗದ ಶುದ್ಧಸತ್ತ್ವರೂಪವಾದ, ಪರಶಿವನಿಗೆ ನಮಸ್ಕಾರವು. ||೬೫||

ಈ ರೀತಿಯಾಗಿ ನಾರಾಯಣನಿಂದಲೇ ಸ್ತೋತ್ರಮಾಡಲ್ಪಟ್ಟ ಪರಶಿವನು ಗಂಭೀರವಾದ ಮಾತಿನಿಂದ ಅವನನ್ನು ಕುರಿತು, ಏಕೆ ತಪಸ್ಸನ್ನು ಮಾಡಿದೆ? ಎಂದು ಕೇಳಿದನು. ||೬೬||

" ದಯಾಮಯನಾದ ಪರಶಿವನೇ, ತೇಜೋರೂಪನೇ, ನಿನ್ನ ಉಪಾಸನಾ ಸ್ಥಾನಗಳನ್ನು ನನಗೆ ಹೇಳು" ಎಂದು ವಿಷ್ಣುವಿನಿಂದ ಕೇಳಲ್ಪಟ್ಟ ಸರ್ವಜ್ಞನಾದ ಕೃಪಾಶಾಲಿಯಾದ ಶಂಭುವು, ಎಲ್ಲ ಈಶ್ವರರಿಗೂ ಈಶ್ವರನಾದ ಪರಶಿವನು, ತನ್ನ ಸ್ಥಾನಗಳನ್ನು ವಿಷ್ಣುವಿಗೆ ಹೇಳಿದನು. ಈಶ್ವರನು ಸರ್ವವ್ಯಾಪಿಯಾಗಿದ್ದರೂ ಈ ಸ್ಥಳಗಳಲ್ಲಿ ಹೆಚ್ಚು ಸುಲಭವಾಗಿ ಉಪಾಸಕರಿಗೆ ಪ್ರತ್ಯಕ್ಷನಾಗುತ್ತಾನೆಂದು ಭಾವವು. ||೬೭||

ಉಪಾಸಕರಾದ ಭಕ್ತರು ತಮ್ಮ ಅಜ್ಞಾನವನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ನನ್ನ ಸ್ಥಾನಗಳನ್ನು ಹೇಳುವೆನು. ಪುರುಷಶ್ರೇಷ್ಠನಾದ ವಿಷ್ಣುವೇ, ಹೆಚ್ಚಾದ ಭಕ್ತಿವಿಶ್ವಾಸಗಳಿಂದ ಕೇಳು. ಅಧ್ಯಾತ್ಮವಾದ ಈ ಶರೀರದಲ್ಲೂ, ಅಧಿಭೂತವಾದ ಪಂಚಭೂತಗಳಲ್ಲೂ ನನ್ನ ಅನುಗ್ರಹಕ್ಕೂ ಸಾಕ್ಷಾತ್ಕಾರಕ್ಕೂ ಸಾಧ್ಯಕಾರಿ

ಬ್ರಹ್ಮರಂಧ್ರಾಭಿಧಂ ಸ್ಥಾನಂ ವಿಶಿಷ್ಟಂ ಯೋಗಿಸೇವಿತಮ್ ।
ವಿಮುಕ್ತಿಸಾಧನಂ ನೄಣಾಮಿತಿ ವಿದ್ಧಿ ವಿಚಕ್ಷಣ ॥೨೧॥

ಮುಖಮಂಡಲಮಾಶ್ಚರ್ಯ ಭುಕ್ತಿಮುಕ್ತಿಫಲಪ್ರದಮ್ ।
ಮೋಹನಾಶಕರಂ ಸಾಕ್ಷಾತ್ಸ್ಥಾನಂ ವಿದ್ಧಿ ಜನಾರ್ದನ ॥೨೨॥

ಚಕ್ಷುಷೀ ಚ ತಥಾ ಶ್ರೋತ್ರೇ ನಾಸಿಕೇ ಚ ಜನಾರ್ದನ ।
ಗಂಡೋಷ್ಠದಂತಮೂರ್ಧಾ ಚ ಸ್ಥಾನಾನ್ಯಾಸ್ಯೇ ಮಮಾನಘ ॥೨೩॥

ಹಸ್ತಪಾದಗತಾಸ್ಸರ್ವೇ ಸಂಧಯಃ ಪುರುಷೋತ್ತಮ ।
ಸ್ಥಾನಾನಿ ಮಮ ಕಲ್ಯಾಣ ತಥಾ ಪಾರ್ಶ್ವದ್ವಯಂ ಮಮ ॥೨೪॥

ಗಳಾದ ಸ್ಥಾನಗಳು ಅನೇಕವಾಗಿವೆ. ಬುದ್ಧಿವಂತರಾದ ಜ್ಞಾನಿಗಳು ಸ್ವರ್ಗಾದಿಲೋಕಗಳ ಮತ್ತು ಮೋಕ್ಷದ ಪ್ರಾಪ್ತಿಗೋಸ್ಕರ ಆ ಸ್ಥಾನಗಳಲ್ಲಿ ಸಾನ್ನಿಧ್ಯವಿಶೇಷದಿಂದ ಅಭಿವ್ಯಕ್ತವಾಗುವ ನನ್ನನ್ನು ಧ್ಯಾನಮಾಡಬೇಕು. ಈ ಉಪಾಸನಾಸ್ಥಾನಗಳಲ್ಲಿ ಆಧ್ಯಾತ್ಮಿಕವೆಂದೂ ಅಧಿಭೌತವೆಂದೂ ಎರಡು ಬಗೆ ಇದೆ. ||೧೮-೧೯-೨೦||

ಆಧ್ಯಾತ್ಮಿಕವಾದ ಉಪಾಸನಾ ಸ್ಥಾನಗಳಲ್ಲಿ ಬ್ರಹ್ಮರಂಧ್ರವೆಂಬ ಸ್ಥಾನವು ಎಲ್ಲಕ್ಕಿಂತಲೂ ಹೆಚ್ಚು ಗುಣವುಳ್ಳದ್ದು. ಆದುದರಿಂದ ಅದನ್ನು ಯೋಗಿಗಳು ಧ್ಯಾನಯೋಗದಿಂದ ಸೇವಿಸುತ್ತಾರೆ. ವಿವೇಕಿಯಾದ ವಿಷ್ಣುವೇ, ಮನುಷ್ಯರಿಗೆ ಈ ಸ್ಥಾನವು ಮೋಕ್ಷವನ್ನು ಕೊಡುತ್ತದೆಂದು ತಿಳಿ. ||೨೧||

ಮುಖಮಂಡಲವು ಇನ್ನೊಂದು ಸ್ಥಾನವು. ಅದು ಐಹಿಕಭೋಗಗಳನ್ನೂ ಮೋಕ್ಷರೂಪಫಲವನ್ನೂ ಕೊಡುವಂಥದ್ದು. ಓ ಜನಾರ್ದನನೇ, ಅದು ಅಜ್ಞಾನವನ್ನು ಹೋಗಲಾಡಿಸುವ, ಸಾಕ್ಷಾತ್ಕಾರಕ್ಕೆ ಸಾಧನವಾದ, ಉಪಾಸನಾಸ್ಥಾನವೆಂದು ತಿಳಿ. ಇದು ಆಶ್ಚರ್ಯಕರವಾದುದು. ||೨೨||

ಎರಡು ಕಣ್ಣುಗಳೂ, ಎರಡು ಕಿವಿಗಳೂ, ಎರಡು ಮೂಗಿನ ಸೊಳ್ಳೆಗಳೂ ಗಂಡಗಳೂ, ಓಷ್ಠಗಳೂ, ದಂತಗಳೂ, ತಲೆಯೂ, ಓ ನಿರ್ದೋಷಿಯಾದ ವಿಷ್ಣುವೇ, ಇವುಗಳನ್ನು ನನ್ನ ಉಪಾಸನಾ ಸ್ಥಾನಗಳೆಂದು ತಿಳಿ. ಈ ಹದಿನಾರು ಸ್ಥಾನಗಳಲ್ಲಿ ಹದಿನಾರು ಸ್ವರಗಳಿಂದ ಉಪಾಸನೆಯನ್ನು ಮಾಡಬೇಕೆಂದು ಭಾವವು. ||೨೩||

ಎರಡು ಕೈಕಾಲುಗಳ ಸಂಧಿಗಳು ತುದಿಗಳು ಇವುಗಳಲ್ಲಿ ಕ, ಚ, ಟ, ತ ವರ್ಗಗಳಿಂದ ವರ್ಣಮಂತ್ರ ಉಪಾಸನೆಯನ್ನು ಮಾಡಬೇಕು. ಹಾಗೆಯೇ ಎರಡು

ಪೃಷ್ಠಶ್ಚ ನಾಭಿದೇಶಶ್ಚ ಹೃದ್ದೇಶಶ್ಚ ಜನಾರ್ದನ ।
ಧಾತವಸ್ಸಪ್ತ ಮೇ ಸಾಕ್ಷಾತ್ ಸ್ಥಾನಾನಿ ಪುರುಷೋತ್ತಮ ॥೭೫॥

ಮೂಲಾಧಾರಮಧಿಷ್ಠಾನಂ ಪೂರಕಾಖ್ಯಮನಾಹತಮ್ ।
ವಿಶುದ್ಧಾಖ್ಯಂ ಚ ಮತ್ಸ್ಥಾನಂ ವಿದ್ಧಿ ಪಂಕಜಲೋಚನ ॥೭೬॥

ಮಹಾಜ್ಞಾ ಸಿದ್ಧಿಸಂಜ್ಞಂ ಚ ವಿಷ್ಣೋ ವಾರಾಣಸೀ ಪುರೀ ।
ಪ್ರಣವಾಂಶತ್ರಯಂ ಬಿಂದುನಾದ ಶಕ್ತಿಸಮಾಹ್ವಯಮ್ ॥೭೭॥

ಬೀಜಸ್ಥಾನಂ ಚ ಮೇಢ್ರಂ ಚ ರೋಮಾಣಿ ವಿವಿಧಾನಿ ಚ ।
ಮಮ ಸ್ಥಾನಾನಿ ಕಲ್ಯಾಣ ವಿದ್ಧಿ ಪಂಕಜಲೋಚನ ॥೭೮॥

ಪಾರ್ಶ್ವಗಳೂ ಬೆನ್ನು, ಹೊಟ್ಟೆ, ಹೊಕ್ಕುಳು, ಎದೆ ಇವುಗಳೂ ಪವರ್ಗದ ವರ್ಣಗಳಿಂದ ಉಪಾಸನೆಯನ್ನು ಮಾಡಬೇಕಾದ ಸ್ಥಾನಗಳೆಂದು ತಿಳಿ. ಹೃದಯವು ಪ್ರಾಣ, ಅಪಾನ, ಜೀವ, ಸಪ್ತಧಾತುಗಳನ್ನು ಹೊಂದಿರುವುದರಿಂದ ಅವು ಯಕಾರಾದಿ ಹತ್ತುವರ್ಣಗಳಿಂದ ಉಪಾಸನಾಸ್ಥಾನಗಳು. ಇದಕ್ಕೇ ಮಾತೃಕಾಸ್ಥಾನವೆಂದೂ ಹೆಸರಿದೆ. ಇದು ಬಾಹ್ಯವಾದುದು. ||೭೪-೭೫||

ಬಾಹ್ಯವಾದ ಉಪಾಸನಾಸ್ಥಾನಗಳನ್ನು ಹೇಳಿ ಈಗ ಆಂತರವಾದವುಗಳನ್ನೂ ಹೇಳುತ್ತಾರೆ. ಮೂಲಾಧಾರದಲ್ಲಿ ನಾಲ್ಕು ವರ್ಣಗಳಿಂದಲೂ, ಸ್ವಾಧಿಷ್ಠಾನದಲ್ಲಿ ಆರು ವರ್ಣಗಳಿಂದಲೂ, ಮಣಿಪೂರದಲ್ಲಿ ಹತ್ತು ವರ್ಣಗಳಿಂದಲೂ, ಅನಾಹತದಲ್ಲಿ ಹನ್ನೆರಡು ವರ್ಣಗಳಿಂದಲೂ, ವಿಶುದ್ಧಚಕ್ರದಲ್ಲಿ ಹದಿನಾರು ವರ್ಣಗಳಿಂದಲೂ, ಆಜ್ಞಾಚಕ್ರದಲ್ಲಿ ಎರಡು ವರ್ಣಗಳಿಂದಲೂ, ಉಪಾಸನೆಮಾಡಬೇಕೆಂದು, ಕಮಲಾಕ್ಷನಾದ ವಿಷ್ಣುವೇ, ತಿಳಿ. ಇದು ಆಂತರವಾದುದು. ಆಜ್ಞಾ, ವಾರಾಣಸೀಪುರೀ, ಭ್ರೂಮಧ್ಯ, ಇವೆಲ್ಲವೂ ಒಂದೇ ಸ್ಥಾನದ ಹೆಸರುಗಳು. ಸಿದ್ಧಿಯೆಂದರೆ ಬ್ರಹ್ಮರಂಧ್ರದಲ್ಲಿ ಸಹಸ್ರಾರಪದ್ಮದಲ್ಲಿ ಒಂದು. ಹೀಗೆ ಐವತ್ತೊಂದು ವರ್ಣಗಳಿಂದ ಉಪಾಸನೆಯನ್ನು ಮಾಡಬೇಕು. ||೭೬||

ಓಂಕಾರವೆಂಬ ಪ್ರಣವದ "ಅ, ಉ, ಮ್" ಎಂಬ ಮೂರು ವರ್ಣಗಳು ಬಿಂದು, ನಾದ, ಶಕ್ತಿ ಎಂಬ ಹೆಸರುಳ್ಳವು. ಬೀಜ, ಶೇಫ, ರೋಮಗಳು ಕ್ರಮವಾಗಿ ಸ್ಥಾನಗಳು. ಮಂಗಳಕರನಾದ ಕಮಲಾಕ್ಷನಾದ ವಿಷ್ಣುವೇ, ನನ್ನ ಅಭಿವ್ಯಕ್ತಿಗೆ ಈ ಸ್ಥಾನಗಳು ವಿಶಿಷ್ಟವಾದುವೆಂದು ತಿಳಿ. ||೭೭-೭೮||

ಯಥಾಽಧ್ಯಾತ್ಮೇ ಮಹಾವಿಷ್ಣೋ ಸ್ಥಾನಾನಿ ಸುಬಹೂನಿ ಮೇ ।
ತಥಾಽಧಿಭೂತೇ ಮೇ ವಿಷ್ಣೋ ಸ್ಥಾನಾನಿ ಸುಬಹೂನಿ ಚ ॥೭೯॥

ಕೈಲಾಸಪರ್ವತಸ್ಸಾಕ್ಷಾತ್ ಸ್ಥಾನಂ ವಿಷ್ಣೋ ಮಮಾನಘ ।
ಶ್ರೀಮದ್ದಕ್ಷಿಣಕೈಲಾಸಪರ್ವತಶ್ಚ ತಥೈವ ಚ ॥೮೦॥

ವಾರಾಣಸೀ ಪುರೀ ಪುಣ್ಯಾ ವಿಮುಕ್ತಿಫಲದಾ ನೃಣಾಮ್ ।
ಮರಣಾದೇವ ಸರ್ವೇಷಾಂ ತಚ್ಚ ಸ್ಥಾನಂ ಮಮಾನಘ ॥೮೧॥

ಶ್ರೀಸೋಮನಾಥಸಂಜ್ಞಂ ಚ ತಥಾ ಕೇದಾರಮದ್ಭುತಮ್ ।
ಶ್ರೀಪರ್ವತಂ ಚ ಮೇ ಸ್ಥಾನಂ ವಿದ್ಧಿ ಪಂಕಜಲೋಚನ ॥೮೨॥

ಶ್ರೀಮದ್ವೃದ್ಧಾಚಲಂ ಪುಣ್ಯಂ ತಥಾ ಗೋಪರ್ವತಂ ಹರೇ ।
ತಥಾ ಶ್ರೀಹರತೀರ್ಥಂ ಚ ವಿದ್ಧಿ ಸ್ಥಾನಂ ಮಮಾವ್ಯಯಮ್ ॥೮೩॥

ಆಧಿಗ್ರಾಮಸಮಾಖ್ಯಂ ಚ ಶ್ವೇತಾರಣ್ಯಂ ಮಹತ್ತರಮ್ ।
ದಂತಿಸ್ಥಾನಂ ಚ ಮೇ ವಿಷ್ಣೋ ಸ್ಥಾನಂ ವಿದ್ಧಿ ಮಹತ್ತರಮ್ ॥೮೪॥

ಹೀಗೆ ಅಧ್ಯಾತ್ಮಶರೀರದಲ್ಲಿ ನನ್ನ ಸ್ಥಾನಗಳು ಅನೇಕವಾಗಿವೆ. ಹಾಗೆಯೇ ಅಧಿಭೂತವಾದ ಕೈಲಾಸಪರ್ವತಾದಿಗಳೂ ನನ್ನ ಉಪಾಸನಾ ಸ್ಥಾನಗಳೆಂದು ತಿಳಿ. ||೭೯||

ಕೈಲಾಸಪರ್ವತವು ನನ್ನ ಸಾಕ್ಷಾತ್ಕಾರಕ್ಕೆ ನೇರವಾಗಿ ಸಹಾಯಕವಾದ ಸ್ಥಾನವು, ಹಾಗೆಯೇ ದಕ್ಷಿಣಕೈಲಾಸಪರ್ವತವೂ, ಮರಣಮಾತ್ರದಿಂದಲೇ ಎಲ್ಲ ಜನರಿಗೂ ಮೋಕ್ಷವನ್ನು ಕೊಡುವ ಕಾಶಿಯೂ, ಓ ದೋಷರಹಿತನಾದ ವಿಷ್ಣುವೇ, ನನ್ನ ಅಭಿವ್ಯಕ್ತಿಸ್ಥಾನಗಳೆಂದು ತಿಳಿ. ||೮೦-೮೧||

ಓ ಕಮಲಾಕ್ಷನಾದ ವಿಷ್ಣುವೇ, ಸೋಮನಾಥಕ್ಷೇತ್ರವೂ, ಕೇದಾರಕ್ಷೇತ್ರವೂ, ಶ್ರೀಶೈಲವೂ, ವೃದ್ಧಾಚಲವೂ, ಗೋಪರ್ವತವೂ, ಹರತೀರ್ಥವೂ, ಆಧಿಗ್ರಾಮಕ್ಷೇತ್ರವೂ, ಶ್ವೇತಾರಣ್ಯವೂ, ದಂತಿಸ್ಥಾನವೂ, ಇವೆಲ್ಲವೂ ನನ್ನ ಸಾನ್ನಿಧ್ಯವಿಶೇಷವುಳ್ಳವಾದುದರಿಂದ ನನ್ನ ಸ್ವರೂಪಸಾಕ್ಷಾತ್ಕಾರದ ಅಭಿವ್ಯಕ್ತಿಸ್ಥಾನಗಳೆಂದು ತಿಳಿ. ||೮೨-೮೩-೮೪||

ತ್ರಿಕೋಟಿಹಾಖ್ಯಂ ಗಂಭೀರಂ ತಥಾ ಗೋಪುಟತೀರ್ಥಕಮ್ ।
ಮಧ್ಯಾರ್ಜುನಂ ಚ ಮೇ ಸ್ಥಾನಂ ವಿದ್ಧಿ ಪಂಕಜಲೋಚನ ॥೮೫॥

ಶ್ರೀಮನ್ಮಂಗಳವಂಶಾಖ್ಯಂ ಕುಂಭಕೋಣಸಮಾಹ್ವಯಮ್ ।
ತಥಾ ಸವ್ಯೇತರಾವರ್ತಂ ವಿದ್ಧಿ ಸ್ಥಾನಂ ಮಮಾನಘ ॥೮೬॥

ಜಪ್ಯೇಶ್ವರಸಮಾಖ್ಯಂ ಚ ತಥಾ ವಲ್ಮೀಕಮುತ್ತಮಮ್ ।
ಗಜಾರಣ್ಯಸಮಾಖ್ಯಂ ಮೇ ವಿದ್ಧಿ ಸ್ಥಾನಂ ವಿಚಕ್ಷಣ ॥೮೭॥

ವೇದಾರಣ್ಯ ಸಮಾಖ್ಯಂ ಚ ಸ್ಥಾನಂ ವಿದ್ಧಿ ಮಮಾದ್ಭುತಮ್ ।
ಶ್ರೀಮದ್ರಾಮೇಶ್ವರಾಖ್ಯಂ ಚ ತಥಾ ಹಾಲಾಸ್ಯಸಂಜ್ಞಿತಮ್ ॥೮೮॥

ಪುಂಡರೀಕಪುರಮುತ್ತಮಂ ಮಮ
　ಸ್ಥಾನಮಗ್ನಿಸದೃಶಂ ವಿಶೋಧನಮ್ ।
ಯೋಗನಿಷ್ಠಮುನಿಸಂಘಸೇವಿತಂ
　ಭೋಗಮುಕ್ತಿಫಲದಂ ಪುರಾತನಮ್ ॥೮೯॥

ತ್ವಯಾ ಮಯಾ ವಜ್ರಧರೇಣ ನಂದಿನಾ
　ವಿನಾಯಕಾದ್ಯೈರಖಿಲೈರತಿಪ್ರಿಯಾತ್ ।

ತ್ರಿಕೋಟಿಹ, ಗೋಪುಟ, ಮಧ್ಯಾರ್ಜುನ, ಮಂಗಳವಂಶ, ಕುಂಭಕೋಣ, ಸವ್ಯೇತರಾವರ್ತ, ಜಪ್ಯೇಶ್ವರ, ವಲ್ಮೀಕ, ಗಜಾರಣ್ಯ, ಇವೂ ನನ್ನ ಸಾಕ್ಷಾತ್ಕಾರಕ್ಕೆ ವಿಶೇಷವಾದ ಆನುಕೂಲ್ಯವುಳ್ಳ ಸ್ಥಾನಗಳು. ||೮೫-೮೬-೮೭||

ವೇದಾರಣ್ಯ, ಹಾಲಾಸ್ಯ, ಆಶ್ಚರ್ಯಕರವಾದ ರಾಮೇಶ್ವರ, ಪುಂಡರೀಕಪುರ, ಇವೂ ನನ್ನ ಸ್ಥಾನಗಳು. ಪುಂಡರೀಕಪುರವು ಅಗ್ನಿಯ ಹಾಗೆ ಶುದ್ಧಿಯನ್ನು ಕೊಡುವುದಾಗಿಯೂ, ಯೋಗಿಜನಸೇವ್ಯವಾಗಿಯೂ, ಪುರಾತನವಾದುದಾಗಿಯೂ ಇದೆ. ||೮೮-೮೯||

ಆ ಪುಂಡರೀಕಪುರವು ನಿನ್ನಿಂದಲೂ, ನನ್ನಿಂದಲೂ, ಇಂದ್ರನಿಂದಲೂ, ನಂದಿಯಿಂದಲೂ, ವಿನಾಯಕ ಮುಂತಾದವರಿಂದಲೂ ಇತರ ಆಸ್ತಿಕಜನರಿಂದಲೂ ಯಾವಾಗಲೂ ಸೇವಿಸಲ್ಪಡುತ್ತದೆ. ಈ ಪ್ರಪಂಚವೆಲ್ಲವೂ ಸಮಷ್ಟಿಸ್ಥೂಲಶರೀರಾಭಿ

ನಿಷೇವಿತಂ ಸಂತತಮಾಸ್ತಿಕೈರ್ಜನೈಃ
ಸ್ವರಾಟ್ಸಮಾಖ್ಯಸ್ಯ ಹೃದಿ ಸ್ಥಿತಂ ಶುಭಮ್ ॥೯೦॥

ಶ್ರುತಿಸ್ಮೃತಿಭ್ಯಾಮಪಿ ಸರ್ವಶಕ್ತಿಭಿಃ
ನ ಗೋಚರೀಕರ್ತುಮಲಂ ಮಹತ್ತರಮ್ ।
ಪ್ರಸಾದಿಭಿರ್ಲಭ್ಯಮತೀವ ಶೋಭನಂ
ಗುಣಾಕರಂ ಗುಹ್ಯಮಶೋಭನಾಪಹಮ್ ॥೯೧॥

ಸದಾ ಪರಾನಂದವಿಕಾಸಕಾರಣಂ
ದಿವಾಕರಾಣಾಮಪಿ ಕೋಟಿಭಿಸ್ಸಮಮ್ ।
ಪುರಾತನಾನಾಮಪಿ ಪುಣ್ಯಶಾಲಿನಾಂ
ವಿಮೋಹನಾಶಾಯ ಮಯೈವ ನಿರ್ಮಿತಮ್ ॥೯೨॥

ಸ್ಥಾನಮೇತದತಿಪ್ರಿಯಮಾಸ್ತಿಕೈಃ
ವೇದವಿದ್ಭಿ ರತಿಪ್ರಿಯಕಾರಿಭಿಃ ।

ಮಾನಿಯಾದ ವಿರಾಟ್ಪುರುಷನಿಗೆ ಸ್ಥೂಲಶರೀರವು. ಈ ಬ್ರಹ್ಮಾಂಡದಲ್ಲಿ ಹೃದಯ ಸ್ಥಾನದ ಹಾಗೆ ಪುಂಡರೀಕಪುರವಿದೆ. ಇದು ಸ್ವರಾಟ್ ಎಂದರೆ ಲಿಂಗಶರೀರವಾಗಿ ಹೃದಯದಲ್ಲಿದೆ ಎಂದು ಭಾವಿಸಬೇಕು. ॥೯೦॥

ವೇದಸ್ಮೃತಿಗಳಿಂದಲೂ ಎಲ್ಲ ಶಕ್ತಿಯುಳ್ಳ ಮಹರ್ಷಿಗಳಿಂದಲೂ ಎಲ್ಲಕ್ಕಿಂತಲೂ ದೊಡ್ಡದಾದ ಪರತತ್ತ್ವವನ್ನು ಕಾಣಲು ಸಾಧ್ಯವಿಲ್ಲವು. ತುಂಬ ಮಂಗಳಕರವಾದ ಸರ್ವಗುಣಗಳಿಗೂ ನಿಧಿಯಾದ, ಅಮಂಗಳಗಳನ್ನು ಹೋಗಲಾಡಿಸುವ ರಹಸ್ಯವಾದ ಆ ಬ್ರಹ್ಮವು ಅಭಿವ್ಯಕ್ತವಾಗುವ ತತ್ತ್ವಸ್ಥಾನವನ್ನು ಬ್ರಹ್ಮನ ಅನುಗ್ರಹವನ್ನು ಪಡೆದಿರುವವರು ಮಾತ್ರ ಶೀಘ್ರವಾಗಿ ಪಡೆಯಬಹುದು. ॥೯೧॥

ಸರ್ವದಾ ಶ್ರೇಷ್ಠವಾದ ಆನಂದದ ಅಭಿವ್ಯಕ್ತಿಗೆ ಕಾರಣವಾದ, ಸೂರ್ಯಕೋಟಿತೇಜಸ್ಸುಳ್ಳ, ಪುಣ್ಯವಂತರಾದ ಪ್ರಾಚೀನಋಷಿಗಳಿಗೆ ಇದ್ದ ಅಜ್ಞಾನವನ್ನು ನಿವಾರಿಸುವುದಕ್ಕೋಸ್ಕರ ನನ್ನಿಂದಲೇ ಆ ಪರಶಿವಸ್ಥಾನವು ಕಲ್ಪಿಸಲ್ಪಟ್ಟಿತು. ॥೯೨॥

ಪುರುಷರಲ್ಲಿ ಶ್ರೇಷ್ಠನಾದ ವಿಷ್ಣುವೇ, ಈ ಸ್ಥಾನವು ಆಸ್ತಿಕರಾದ, ವೇದಾರ್ಥವನ್ನು ತಿಳಿದಿರುವ, ಲೋಕದ ಜನರಿಗೆ ಉಪಕಾರಿಗಳಾದ ಋಷಿಗಳಿಂದ ಗೌರವಿಸಲ್ಪ

ಪೂಜಿತಂ ಪುರುಷೋತ್ತಮ ಮುಕ್ತಿದಂ ।
ಸೇವಿತಂ ಚ ಸತತಂ ಮಯೈವ ತು ॥೯೩॥

ಅತ್ರ ನೃತ್ತಮತಿಶೋಭನಂ ಪರಂ
ಸತ್ಯಬೋಧಸುಖವಸ್ತುಬೋಧಕಮ್ ।
ಭಕ್ತಚಿತ್ತಹೃದಯಸ್ಥಿತಂ ಹರೇ
ವ್ಯಕ್ತಮೇವ ಸತತಂ ಕರೋಮ್ಯಹಮ್ ॥೯೪॥

ಶಂಕರೀ ಚ ಪರಮಾ ವಿನಾಯಕಃ
ಷಣ್ಮುಖಶ್ಚ ಸುಯಶಾಃ ಪತಿಃ ಪ್ರಭುಃ ।
ಅಂತರಂಗಜನಮಪ್ಯತಿಪ್ರಿಯಂ
ನೃತ್ತಮತ್ರ ಪರಿಪಶ್ಯತಿ ಸ್ವಯಮ್ ॥೯೫॥

ತ್ವಂ ಚ ಪದ್ಮಜನಿತಃ ಪುರಂದರಃ
ಪಂಕಜಾಽಪಿ ಪರಮಾ ಸರಸ್ವತೀ ।
ಮತ್ಪ್ರಸಾದಜನಿತೇನ ಚಕ್ಷುಷಾ
ನೃತ್ಯಮತ್ರ ದದೃಶುಃ ಸಮಂಜಸಮ್ ॥೯೬॥

ಟ್ಟಿದೆ. ಆದುದರಿಂದ ಇದು ಎಲ್ಲರಿಗೂ ಪ್ರೀತಿಪಾತ್ರವಾಗಿದೆ. ನಾನೂ ಇದನ್ನು ಯಾವಾಗಲೂ ನನ್ನ ಅಭಿವ್ಯಕ್ತಿಗೆ ವಿಶೇಷ ಸ್ಥಾನವನ್ನಾಗಿ ಮಾಡಿಕೊಂಡಿದೇನೆ.॥೯೩॥

ತುಂಬ ಮಂಗಳಕರವಾದ, ಶ್ರೇಷ್ಠವಾದ, ಸಚ್ಚಿದಾನಂದರೂಪವಾದ ಪರಶಿವ ಸ್ವರೂಪವೆಂಬ ಪರತತ್ತ್ವವನ್ನು ತಿಳಿಯಲು ಸಾಧನವಾದ, ನನ್ನ ನರ್ತನ ದರ್ಶನವನ್ನು ಈ ಪುಂಡರೀಕಕ್ಷೇತ್ರವೆಂಬ ಸ್ಥಾನದಲ್ಲಿ ಎಲ್ಲ ಭಕ್ತರ ಹೃದಯದಲ್ಲಿ ಪ್ರಕಾಶವಾಗಿ ಇರುವುದನ್ನಾಗಿ ಮಾಡುತ್ತೇನೆ. ॥೯೪॥

ಶ್ರೇಷ್ಠಳಾದ ಪಾರ್ವತಿಯೂ, ವಿನಾಯಕನೂ, ಸ್ಕಂದನೂ, ಒಳ್ಳೆಯ ಕೀರ್ತಿಯುಳ್ಳ ಸೇನಾಪತಿಯಾದ, ಸ್ವಾಮಿಯಾದ ಕುಮಾರನೂ, ಈ ನನ್ನ ಅಂತರಂಗಕ್ಕೆ ಸೇರಿದ ಭಕ್ತಜನರು; ಈ ಪುಂಡರೀಕಪುರವೆಂಬ ಸ್ಥಾನದಲ್ಲಿ ನನ್ನ ನೃತ್ತವನ್ನು ಇವರು ಸಾಕ್ಷಾತ್ತಾಗಿ ನೋಡುತ್ತಾರೆ. ॥೯೫॥

ಓ ವಿಷ್ಣುವೇ, ನೀನೂ, ಕಮಲಾಸನನಾದ ಬ್ರಹ್ಮನೂ, ಶತ್ರುಪುರನಾಶಕ

ಶಬ್ದಜಾಲಪರಿಮೋಹಿತಾ ಜನಾಃ
ತರ್ಕಜಾಲಪರಿಮೋಹಿತಾ ಅಪಿ ।
ಅತ್ರ ನೈವ ದದೃಶುಶ್ಚ ನರ್ತನಂ
ಭಕ್ತಿಹೀನಜನತಾऽಪ್ಯಧೋಕ್ಷಜ ॥೯೭॥

ವೇದಬಾಹ್ಯಸರಣಿಸ್ಥಿತಾ ಜನಾಃ
ಕೇವಲಾಶ್ಚ ಮನುಜಾ ಅಪಿ ಪ್ರಿಯಮ್ ।
ಅತ್ರ ಭಕ್ತಿಸಹಿತಾ ಅಪಿ ಸ್ವತಃ
ಸತ್ಯಮೇವ ದದೃಶುಶ್ಚ ನರ್ತನಮ್ ॥೯೮॥

ಅತ್ರ ನೃತ್ತಮವಿಲೋಕ್ಯ ಮಾನವಃ
ಸ್ವರ್ಗಲೋಕಮಪಿ ನೈತಿ ಚೇಜ್ಯಯಾ ।
ನಿತ್ಯಶುದ್ಧಸುಖಸತ್ಯಚಿದ್ಘನಂ
ಬ್ರಹ್ಮ ಮುಕ್ತಿಮಪಿ ನೈತಿ ವಿದ್ಯಯಾ ॥೯೯॥

ನಾದ ಇಂದ್ರನೂ, ಶ್ರೇಷ್ಠಳಾದ ಲಕ್ಷ್ಮಿಯೂ, ಸರಸ್ವತಿಯೂ ನನ್ನ ಅನುಗ್ರಹದಿಂದ ಉಂಟಾದ ಒಳಗಣ್ಣಿನಿಂದ ನನ್ನ ನರ್ತನವನ್ನು ಚನ್ನಾಗಿ ನೋಡಿದರು. ॥೯೬॥

ಶಬ್ದದಿಂದ ತೃಪ್ತಿಪಡುವ ವೈಯಾಕರಣರೂ, ಯುಕ್ತಿಯಿಂದ ಸಂತೋಷಿಸುವ ತಾರ್ಕಿಕರೂ, ಭಕ್ತಿಹೀನಜನರೂ ನನ್ನ ನರ್ತನವನ್ನು ಕಾಣರು. ॥೯೭॥

ಹಾಗೆಯೇ ವೇದಾಧ್ಯಯನಾದಿಗಳಿಗೆ ಅನರ್ಹರಾದ ಜನರೂ ಕಾಣರು. ಆದರೆ ಸಾಧಾರಣರಾದ ಮನುಷ್ಯರಾದರೂ ಭಕ್ತಿಯುಳ್ಳವರಾದರೆ ತಾವೇ ನಿಜವಾಗಿಯೂ ನನ್ನ ನರ್ತನವನ್ನು ನೋಡಬಲ್ಲರು. ॥೯೮॥

ಈ ಲೋಕದಲ್ಲಿ ನಟರಾಜನಾದ ನನ್ನ ನೃತ್ತವನ್ನು ನೋಡದೆ ಜನರು ಯಜ್ಞಯಾಗಾದಿಗಳಿಂದ ಸ್ವರ್ಗಲೋಕವನ್ನಾಗಲಿ, ನಿತ್ಯನಾಗಿಯೂ ಕಾಲತ್ರಯದಲ್ಲೂ ಅಬಾಧ್ಯನಾಗಿಯೂ ಮಾಯಾಸಂಬಂಧವಿಲ್ಲದೆ ಶುದ್ಧನಾಗಿಯೂ, ಆನಂದರೂಪನಾಗಿಯೂ, ಸತ್ಯಸ್ವರೂಪನಾಗಿ ಎಂದರೆ ವಿಕಾರವಿಲ್ಲದವನಾಗಿಯೂ, ಜ್ಞಾನಘನಸ್ವರೂಪನಾಗಿಯೂ, ಇರುವ ಬ್ರಹ್ಮವನ್ನಾಗಲಿ, ಮೋಕ್ಷವನ್ನಾಗಲಿ ಪಡೆಯಲಾರರು. ॥೯೯॥

ನೃತ್ತದರ್ಶನವಿವರ್ಜಿತಃ ಪುಮಾನ್
ಅತ್ರ ಕೀಟಸದೃಶಶ್ಚ ಕೇಶವ ।
ತಸ್ಯ ಪುಣ್ಯಮಪಿ ದುಷ್ಕೃತಂ ಭವೇತ್
ಸತ್ಯಮೇವ ಕಥಿತಂ ಮಯಾಽಚ್ಯುತ ॥೧೦೦॥

ನೃತ್ತದರ್ಶನವಿಹೀನವಾಡವಃ
ಸತ್ಯಮತ್ರ ಪುರುಷೋತ್ತಮಾಂತ್ಯಜಃ ।
ತಸ್ಯ ಜನ್ಮ ವಿಫಲಂ ಹ್ಯಹೋ ಹರೇ
ಕಃ ಸ್ವಮೋಹಮತಿವರ್ತತೇ ನರಃ ॥೧೦೧॥

ಬಹುಪ್ರಲಾಪೇನ ಕಿಮತ್ರ ಲಭ್ಯತೇ
ವಿಚಿತ್ರಮೇತತ್ಪುರಮಾದೃತಂ ಮಯಾ ।
ವಿಮುಕ್ತಿಭಾಜಾಮಪಿ ಪುಣ್ಯಶೀಲಿನಾಂ
ವಿಮುಕ್ತಿಹೇತುಸ್ಸಕಲೋತ್ತಮೋತ್ತಮಮ್ ॥೧೦೨॥

ಲೋಕದಲ್ಲಿ ನನ್ನ ನೃತ್ತವನ್ನು ನೋಡದ ಜನರು ಹುಳುಗಳಹಾಗೆ ಆಗುತ್ತಾರೆ. ಅಂಥವರು ಇತರ ಧರ್ಮಾಚರಣೆಯಿಂದ ಪಡೆಯುವ ಪುಣ್ಯವೂ ಪಾಪವೇ ಆಗುತ್ತದೆ. ಓ ವಿಷ್ಣುವೇ, ನಾನು ನಿಜವನ್ನೇ ಹೇಳಿದೇನೆ. ||೧೦೦||

ಓ ಪುರುಷೋತ್ತಮನಾದ ವಿಷ್ಣುವೇ, ಈ ಲೋಕದಲ್ಲಿ ನನ್ನ ನೃತ್ತವನ್ನು ನೋಡದಿರುವ ಬ್ರಾಹ್ಮಣನೂ ಹೊಲೆಯನ ಹಾಗಾಗುತ್ತಾನೆ. ಅಂಥವನ ಜನ್ಮವು ವ್ಯರ್ಥವಾದುದು. ಅಂಥ ಯಾವನು ತಾನೇ ತನ್ನ ಅಜ್ಞಾನವನ್ನು ದಾಟುತ್ತಾನೆ? ||೧೦೧||

ಓ ವಿಷ್ಣುವೇ, ಹೆಚ್ಚು ಹೇಳಿ ಏನು? ಈ ಆಶ್ಚರ್ಯಕರವಾದ ಪುಂಡರೀಕಪುರದಲ್ಲಿ ನಾನು ಆದರವುಳ್ಳವನಾಗಿದೇನೆ. ಸತ್ಕರ್ಮಗಳಿಂದ ಮುಕ್ತಿಯನ್ನು ಪಡೆಯಲು ಅರ್ಹರಾದವರಿಗೂ ಮೋಕ್ಷವನ್ನು ಉಂಟುಮಾಡಲು ಈ ಕ್ಷೇತ್ರವೇ ಕಾರಣವಾಗಿದೆ. ||೧೦೨||

|| ಸೂತ ಉವಾಚ ||

ಏವಮುಕ್ತ್ವಾ ಮಹಾದೇವಸ್ಸಾಂಬಸ್ಸಂಸಾರಮೋಚಕಃ ।
ಸತ್ಯಜ್ಞಾನಪರಾನಂದಸ್ತತ್ರೈವಾಂತರಧೀಯತ ||೧೦೩||

ವಿಷ್ಣುರ್ವಿಶ್ವಜಗನ್ನಾಥೋ ವಿಶ್ವಲೋಕಹಿತೇ ರತಃ ।
ಶಿವಸ್ಥಾನಾನಿ ಚಾಕರ್ಣ್ಯ ಶ್ರೀವೈಕುಂಠಂ ಗತೋಽಭವತ್ ||೧೦೪||

ಭವದ್ಭಿಶ್ಚ ಮಹಾಭಾಗ್ಯಾತ್ ಶಿವಸ್ಥಾನಾನಿ ಸುವ್ರತಾಃ ।
ಶ್ರುತಾನಿ ತಾನಿ ಮೋಕ್ಷಾರ್ಥಂ ಭಜಧ್ವಂ ಶ್ರದ್ಧಯಾ ಸಹ ||೧೦೫||

ಸ್ಥಾನಾನಿ ಸರ್ವಾಣಿ ಮಯೋದಿತಾನಿ
ದ್ವಿಜೇಂದ್ರವೃಂದಾ ಅತಿಶೋಭನಾನಿ ।
ಭಜೇದವಿದ್ಯಾವಿನಿವೃತ್ತಿಕಾಮಃ
ಪ್ರಿಯೇಣ ಚೈಕಂ ಪರಮೇಶ್ವರಸ್ಯ ||೧೦೬||

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಶಿವಸ್ಥಾನವಿಚಾರೋ ನಾಮ ಏಕೋನತ್ರಿಂಶಾಧ್ಯಾಯಃ

ಹೀಗೆಂದು ಹೇಳಿ ಅಂಬಾಸಹಿತನಾದ, ಸಂಸಾರದಿಂದ ಬಿಡುಗಡೆಮಾಡುವ, ಸಚ್ಚಿದಾನಂದರೂಪನಾದ, ಮಹಾದೇವನಾದ ಪರಶಿವನು, ಅಲ್ಲಿಯೇ ಅಂತರ್ಧಾನ ವನ್ನು ಹೊಂದಿದನು. ||೧೦೩||

ಎಲ್ಲ ಲೋಕಗಳಿಗೂ ಒಡೆಯನಾದ, ಎಲ್ಲರ ಹಿತವನ್ನೂ ಮಾಡುವುದರಲ್ಲಿ ಆಸಕ್ತನಾದ, ವಿಷ್ಣುವು ಶಿವಸ್ಥಾನಗಳನ್ನು ಪರಶಿವನಿಂದ ಕೇಳಿ ವೈಕುಂಠಲೋಕಕ್ಕೆ ಹೋದನು. ||೧೦೪||

ನಿಯಮನಿಷ್ಠರಾದ ಋಷಿಗಳೇ, ಆ ಶಿವಸ್ಥಾನಗಳನ್ನು ನೀವೂ ನಿಮ್ಮ ಪುಣ್ಯ ವಿಶೇಷದಿಂದ ಕೇಳಿ ತಿಳಿದಿರಿ. ಆ ಸ್ಥಾನಗಳನ್ನು ನಂಬಿಕೆಯುಳ್ಳವರಾಗಿ ಆಶ್ರಯಿಸಿ ಮೋಕ್ಷವನ್ನು ಪಡೆಯಿರಿ. ||೧೦೫||

ಓ ಶ್ರೇಷ್ಠರಾದ ಬ್ರಾಹ್ಮಣರೇ, ಮಂಗಳಕರಗಳಾದ, ಎಲ್ಲ ಶಿವಸ್ಥಾನಗಳೂ

ನನ್ನಿಂದ ಹೇಳಲ್ಪಟ್ಟಿವೆ. ಅಜ್ಞಾನವು ಹೋಗಲೆಂದು ಆಶಿಸುವವನು ಇವುಗಳಲ್ಲಿ ಒಂದನ್ನಾದರೂ ಆಶ್ರಯಿಸಬೇಕು. ||೧೦೬||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಶಿವಸ್ಥಾನಗಳನ್ನು ವಿವರಿಸಿರುವ
ಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

॥ ತ್ರಿಂಶೋಽಧ್ಯಾಯಃ ॥

ಮೂವತ್ತನೆಯ ಅಧ್ಯಾಯವು

(ಭಸ್ಮಧಾರಣವೈಭವಮ್)

ಅಥಾತಸ್ಸಂಪ್ರವಕ್ಷ್ಯಾಮಿ ಭಸ್ಮಧಾರಣವೈಭವಮ್ ।
ಯಸ್ಯ ವಿಜ್ಞಾನಮಾತ್ರೇಣ ನರೋ ಮುಚ್ಯೇತ ಬಂಧನಾತ್ ॥೧॥

ಭಸ್ಮ ನಾನಾವಿಧಂ ಪ್ರೋಕ್ತಂ ಧಾರ್ಮಿಕೈಸ್ತತ್ತ್ವಚಿಂತಕೈಃ ।
ಏಕಂ ವಿಪ್ರಾ ಮಹಾಭಸ್ಮ ಸ್ವಲ್ಪಮನ್ಯತ್ಪ್ರಕೀರ್ತಿತಮ್ ॥೨॥

ಉಪಾಸನೆಗೆ ಅನುಕೂಲವಾದ ಶಿವಸ್ಥಾನಗಳನ್ನು ಹೇಳಿ ಆಮೇಲೆ ಉಪಾಸಕರು ಆಚರಿಸಬೇಕಾದ ಧರ್ಮವಾದ ಭಸ್ಮಧಾರಣದ ಮಹಿಮೆಯನ್ನು ಅವರ ಉಪಯೋಗಕ್ಕಾಗಿ ಸೂತರು "ಆದುದರಿಂದ ಈಗ ಭಸ್ಮಧಾರಣದ ಮಹಿಮೆಯನ್ನು ಹೇಳುತ್ತೇನೆ. ಇದನ್ನು ತಿಳಿಯುವುದರಿಂದಲೇ ಮಾನವನು ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ." ಎಂದು ಹೇಳುತ್ತಾರೆ. ॥೧॥

ಪರಮಾರ್ಥವನ್ನು ವಿಚಾರಿಸುವ ಧರ್ಮನಿಷ್ಠರಾದ ಜ್ಞಾನಿಗಳಿಂದ ಭಸ್ಮವು ನಾನಾಪ್ರಕಾರವಾಗಿರುವುದಾಗಿ ಹೇಳಲ್ಪಟ್ಟಿದೆ. ಆ ಪೈಕಿ ಒಂದು ಶ್ರೇಷ್ಠವಾದ ಭಸ್ಮವು. ಉಳಿದುದೆಲ್ಲವೂ ಅದಕ್ಕಿಂತಲೂ ಕಡಿಮೆಯಾದುದು. ॥೨॥

ಮಹಾಭಸ್ಮ ಮಹಾದೇವೋ ಮಹಾಮಾಯಾವಭಾಸಕಃ ।
ಭರ್ತ್ಸನಾತ್ಸರ್ವಪಾಪಾನಾಂ ಭಾಸನಂ ತಸ್ಯ ವಿದ್ಯಯಾ ॥೩॥

ವಿದ್ಯಾ ವೇದೋದ್ಭವಾ ಸಾಕ್ಷಾತ್ ಮುನಯಃ ಸಂಶಿತವ್ರತಾಃ ।
ಅವಿದ್ಯಾಫಲತಶ್ಚಾನ್ಯಾಸ್ಸತ್ಯಮೇವ ಮಯೋದಿತಮ್ ॥೪॥

ಯಸ್ಯ ಸಾಕ್ಷಾನ್ಮಹಾಭಸ್ಮ ಭಾತಿ ಸ್ವಾತ್ಮತಯಾ ಸ್ವತಃ ।
ನ ತಸ್ಯ ಭಸ್ಮನಾ ಕಾರ್ಯಂ ನ ಜಟಾಭಿರ್ನ ಚೀವರೈಃ ॥೫॥

ಯಸ್ಯ ಭಸ್ಮ ಸ್ವತೋ ಭಾತಿ ಸ್ವಾತ್ಮನಾ ಮುನಿಪುಂಗವಾಃ ।
ನ ತಸ್ಯ ವರ್ಣಧರ್ಮೇಣ ಕಾರ್ಯಂ ನಾಶ್ರಮಧರ್ಮತಃ ॥೬॥

ಮಾಯಾ, ಅನಾದಿಯಾದ ಅಜ್ಞಾನ, ಮತ್ತು ಅದರ ಕಾರ್ಯವಾದ ಈ ಪ್ರಪಂಚ, ಇವೆಲ್ಲವನ್ನೂ ಸಾಕ್ಷಿಯಾಗಿ ಅರಿಯುವುದರಿಂದ ಪರಶಿವಸ್ವರೂಪನಾದ ಮಹಾದೇವನೇ ಮಹಾಭಸ್ಮವೆಂದು ಪರಿಗಣಿಸಲ್ಪಟ್ಟಿದಾನೆ. ಎಲ್ಲ ಪಾಪಗಳನ್ನು ನಾಶ ಮಾಡುವುದರಿಂದಲೂ, ಜ್ಞಾನದಿಂದ ಆ ಪರಶಿವನ ಸ್ವರೂಪವು ಉಪಾಸಕರ ಹೃದಯದಲ್ಲಿ ಸ್ಫುರಿಸುವಹಾಗೆ ಮಾಡುವುದರಿಂದಲೂ ಅದು ಭಸ್ಮವೆನಿಸಿಕೊಂಡಿದೆ. ॥೩॥

ನೇರವಾಗಿ ವೇದಾರ್ಥವಿಚಾರದಿಂದುಂಟಾಗುವ ತಿಳಿವಳಿಕೆಗೇ ವಿದ್ಯೆ ಎಂದು ಹೆಸರು. ಓ ವ್ರತನಿಷ್ಠರಾದ ಋಷಿಗಳೇ, ಇತರ ವಿದ್ಯೆಗಳೆಲ್ಲವೂ ಫಲದಿಂದ ಎಂದರೆ ನೇರವಾಗಿ ಮುಕ್ತಿಯನ್ನುಂಟುಮಾಡದೆ ಇರುವುದರಿಂದ ಅವಿದ್ಯೆ ಎನಿಸುತ್ತವೆ. ನಾನು ಹೇಳುವ ಈ ಮಾತು ಸತ್ಯವಾದುದು. ॥೪॥

ಯಾವ ಜ್ಞಾನಿಗೆ ಮಹಾಭಸ್ಮರೂಪವಾದ ಪರಶಿವನ ಸ್ವರೂಪವು ಸ್ವಾತ್ಮರೂಪವಾದುದರಿಂದ ತಾನಾಗಿಯೇ ನೇರವಾಗಿ ಸ್ಫುರಿಸುತ್ತದೋ ಅಂಥವನಿಗೆ ಭಸ್ಮದಿಂದಲಾಗಲಿ, ಜಡೆಗಳಿಂದಲಾಗಲಿ, ನಾರುಮಡಿಗಳಿಂದಲಾಗಲಿ ಹೆಚ್ಚಾದ ಬೇರೆ ಪ್ರಯೋಜನವಿಲ್ಲವು. ॥೫॥

ಯಾವ ಜ್ಞಾನಿಗೆ ಭಸ್ಮರೂಪನಾದ ಪರಶಿವನ ತತ್ತ್ವವು ಸ್ವಾತ್ಮರೂಪವಾದುದರಿಂದ ತಾನಾಗಿಯೇ ಗೋಚರಿಸುತ್ತದೋ ಅಂಥವನಿಗೆ ವರ್ಣಧರ್ಮ ಆಶ್ರಮಧರ್ಮಗಳಿಂದಲೂ ಆಗಬೇಕಾದ ಮೇಲಾದ ಬೇರೆ ಫಲವೇನೂ ಇರುವುದಿಲ್ಲವು. ॥೬॥

ಯಸ್ಯ ಭಸ್ಮಾತ್ಮರೂಪೇಣ ವಿಭಾತಿ ಪರಯೋಗಿನಃ ।
ನ ತಸ್ಯ ತಪಸಾ ಕಾರ್ಯಂ ನ ದಾನೇನ ನ ಚೇಜ್ಯಯಾ ॥೭॥

ಯಸ್ಯ ಸಾಕ್ಷಿಸ್ವರೂಪೇಣ ಭಸ್ಮ ಭಾತಿ ಸ್ವಯಂ ಪ್ರಭಮ್ ।
ನ ತಸ್ಯ ಕಾರ್ಯಂ ವೇದೇನ ನ ಚ ಸ್ಮೃತಿಪುರಾಣಕೈಃ ॥೮॥

ಯಸ್ಯ ಭಸ್ಮ ದ್ವಿಜಾ ಭಾತಿ ಪ್ರತ್ಯಗ್ರೂಪೇಣ ಸಂತತಮ್ ।
ನ ತಸ್ಯ ಕಾರ್ಯಂ ತೀರ್ಥೇನ ನಾರ್ಚನೇನ ಶಿವಸ್ಯ ತು ॥೯॥

ಭಸ್ಮವಿಜ್ಞಾನಸಂಪನ್ನೋ ಮಹಾಯೋಗೀ ಮಹತ್ತರಃ ।
ಕೃತಕೃತ್ಯಶ್ಚ ಮೇಧಾವೀ ಕಾ ಕಥಾ ಶಿವ ಏವ ಸಃ ॥೧೦॥

ಭಸ್ಮವಿಜ್ಞಾನಲಾಭಾಯ ಖಲು ವೇದಾಸ್ಸನಾತನಾಃ ।
ಪ್ರವೃತ್ತಾಸ್ಸ್ಮೃತಯಸ್ಸರ್ವಾಃ ಪುರಾಣಂ ಭಾರತಾದಿ ಚ ॥೧೧॥

ಯಾವ ಶ್ರೇಷ್ಠನಾದ ಯೋಗಿಗೆ ಭಸ್ಮರೂಪನಾದ ಪರಶಿವನ ತತ್ತ್ವವು ಸ್ವಸ್ವರೂಪದಿಂದ ತೋರುತ್ತದೋ ಅಂಥ ಜ್ಞಾನಿಗೆ ತಪಸ್ಸಿನಿಂದಲೂ, ದಾನ ಯಾಗಗಳಿಂದಲೂ ಆಗಬೇಕಾದ ಹೆಚ್ಚಿನ ಫಲವೇನೂ ಇರುವುದಿಲ್ಲವು. ॥೭॥

ಯಾವ ಜ್ಞಾನಿಗೆ ಸ್ವಪ್ರಕಾಶರೂಪವಾದ ಭಸ್ಮವು ತನ್ನ ಸಾಕ್ಷಿಸ್ವರೂಪದಿಂದ ಸ್ಫುರಿಸುತ್ತಿರುತ್ತದೋ ಅಂಥವನಿಗೆ ವೇದದಿಂದಲೂ, ಸ್ಮೃತಿಗಳಿಂದಲೂ, ಪುರಾಣಗಳಿಂದಲೂ ಆಗಬೇಕಾದ ಫಲವೇನೂ ಇರುವುದಿಲ್ಲವು. ॥೮॥

ಯಾವ ಜ್ಞಾನಿಗೆ ಭಸ್ಮರೂಪವಾದ ಪರಶಿವತತ್ತ್ವವು ಪ್ರತ್ಯಗಾತ್ಮರೂಪದಿಂದ ಸ್ಫುರಿಸುತ್ತಿರುವುದೋ, ಓ ಋಷಿಗಳಿರ, ಅಂಥವನಿಗೆ ಶಿವನ ತೀರ್ಥ, ಪೂಜೆಗಳಿಂದಲೂ ಆಗಬೇಕಾದ ಮಿಗಿಲಾದ ಬೇರೆ ಫಲವೇನೂ ಇರುವುದಿಲ್ಲವು. ॥೯॥

ಪರಶಿವಸ್ವರೂಪವಾದ ಭಸ್ಮದ ತತ್ತ್ವವನ್ನು ತಿಳಿದಿರುವ ಶ್ರೇಷ್ಠನಾದ ಮಹಾಯೋಗಿಯು ಕೃತಕೃತ್ಯನೂ ಧನ್ಯನೂ ಬುದ್ಧಿವಂತನೂ ಆಗಿದಾನೆಂದು ಹೇಳಬೇಕಾಗಿಲ್ಲವು. ಏಕೆಂದರೆ ಅಂಥವನು ಸಾಕ್ಷಾತ್ತಾಗಿ ಪರಶಿವಸ್ವರೂಪನೇ ಆಗಿರುತ್ತಾನೆ.॥೧೦॥

ಇಂಥ ಭಸ್ಮದ ತತ್ತ್ವವನ್ನು ತಿಳಿಯುವುದಕ್ಕೋಸ್ಕರವೇ ಅನಾದಿನಿತ್ಯಗಳಾದ ವೇದಗಳೂ, ಸ್ಮೃತಿಗಳೂ ಭಾರತ ಮುಂತಾದ ಪುರಾಣಗಳೂ ಇವೆಲ್ಲವೂ ಹೊರಟಿವೆ. ॥೧೧॥

ಭಸ್ಮವಿಜ್ಞಾನನಿಷ್ಠಸ್ಯ ನ ಕರ್ತವ್ಯಂ ಕಥಂಚನ ।
ಕೇವಲಂ ದೇಹಯಾತ್ರೈವ ಕಾರ್ಯಾ ದೇಹಾಂತಮಾಸ್ತಿಕಾಃ ॥೧೨॥

ಸ್ವಲ್ಪಂ ಭಸ್ಮ ಬುಧಶ್ರೇಷ್ಠಾ ಬಹುಧಾ ಪರಿಕೀರ್ತಿತಮ್ ।
ಶ್ರೌತಮೇಕಂ ತಥಾ ಸ್ಮಾರ್ತಂ ಅಪರಂ ಪಂಡಿತೋತ್ತಮಾಃ ॥೧೩॥

ಶ್ರೌತಂ ಭಸ್ಮ ದ್ವಿಜಾ ಮುಖ್ಯಂ ಸ್ಮಾರ್ತಂ ಗೌಣಂ ಪ್ರಕೀರ್ತಿತಮ್ ।
ಅನ್ಯಚ್ಚಾಸ್ತಿ ದ್ವಿಜಾ ಭಸ್ಮ ಲೌಕಿಕಂ ಕೇವಲಂ ಪರಮ್ ॥೧೪॥

ಶ್ರೌತಂ ಭಸ್ಮ ತಥಾ ಸ್ಮಾರ್ತಂ ದ್ವಿಜಾನಾಮೇವ ಕೀರ್ತಿತಮ್ ।
ಅನ್ಯೇಷಾಮಪಿ ಸರ್ವೇಷಾಮಪರಂ ಭಸ್ಮ ಲೌಕಿಕಮ್ ॥೧೫॥

ಈ ಭಸ್ಮದ ತತ್ತ್ವವನ್ನು ತಿಳಿದು ಅದರಲ್ಲಿ ನಿರತನಾಗಿರುವವನಿಗೆ ಆಚರಿಸ ಬೇಕಾದ ಧರ್ಮವಿಶೇಷವಾವುದೂ ಇರುವುದಿಲ್ಲವು; ಈ ಶರೀರವು ಬಿದ್ದುಹೋಗುವ ವರೆಗೆ ಈ ದೇಹರಕ್ಷಣೆಗೆ ಮಾತ್ರ ಬೇಕಾಗುವಷ್ಟು ಕಾರ್ಯವನ್ನು ನೆರವೇರಿಸು ತ್ತಿದ್ದರೆ ಸಾಕು. ||೧೨||

ಓ ಜ್ಞಾನಿಗಳಲ್ಲಿ ಶ್ರೇಷ್ಠರಾದ ಋಷಿಗಳೇ, ಮೇಲೆ ಹೇಳಿದ ಪರಶಿವತತ್ತ್ವ ರೂಪವಾದ ಭಸ್ಮ ಹೊರತು ಇತರ ವಿಭೂತಿ ಮುಂತಾದ ಭಸ್ಮವು ಮಹಾಭಸ್ಮ ಕ್ಕಿಂತ ಅಲ್ಪವಾದುದು. ಇದು ಶ್ರೌತವೆಂದೂ ಸ್ಮಾರ್ತವೆಂದೂ ಅನೇಕ ಪ್ರಕಾರವಾಗಿ ಹೇಳಲ್ಪಟ್ಟಿದೆ. ||೧೩||

ಶ್ರುತ್ಯುಕ್ತಕರ್ಮವಾದ ಅಗ್ನಿಹೋತ್ರಾದಿಗಳ ಆಚರಣೆಯಿಂದ ದೊರೆಯುವ ಭಸ್ಮವು ಶ್ರೌತವೆನಿಸುತ್ತದೆ. ಸ್ಮೃತ್ಯುಕ್ತವಾದ ಔಪಾಸನಕರ್ಮಾನುಷ್ಠಾನದಿಂದ ದೊರೆಯುವ ಭಸ್ಮವು ಗೌಣಭಸ್ಮವೆನಿಸುತ್ತದೆ. ಕೇವಲ ಲೌಕಿಕವಾದ ಭಸ್ಮವೂ ಬೇರೆ ಇದೆ. ||೧೪||

ಶ್ರೌತವಾದ ಅಗ್ನಿಹೋತ್ರಭಸ್ಮವನ್ನೂ, ಸ್ಮಾರ್ತವಾದ ಔಪಾಸನ ಭಸ್ಮವನ್ನೂ, ದ್ವಿಜರು ಮಾತ್ರ ಧರಿಸಬಹುದು. ಇತರರಿಗೆ ವೇದಾಧ್ಯಯನಾಧಿಕಾರವಿಲ್ಲದ್ದರಿಂದ ಲೌಕಿಕವಾದ, ಮಂತ್ರಪೂರ್ವಕವಾಗಿ ಸಿದ್ಧವಲ್ಲದ, ಭಸ್ಮವನ್ನು ಇತರರು ಧರಿಸ ಬೇಕು. ||೧೫||

ಸರ್ವಾಂಗೋದ್ಧೂಳನೇನೈವ ತಥಾ ತಿರ್ಯಕ್ತ್ರಿಪುಂಡ್ರಕೈಃ ।
ಭಸ್ಮ ಧಾರ್ಯಮಿತಿ ಪ್ರೋಕ್ತಂ ದ್ವಿಜಾನಾಂ ಮುನಿಪುಂಗವೈಃ ॥೧೬॥

ಧಾರಣಂ ಮಂತ್ರತಃ ಪ್ರೋಕ್ತಂ ದ್ವಿಜಾನಾಂ ಮುನಿಪುಂಗವೈಃ ।
ಕೇವಲಂ ಧಾರಣಂ ವಿಪ್ರಾ ಅನ್ಯೇಷಾಮಪಿ ಕೀರ್ತಿತಮ್ ॥೧೭॥

ಅಗ್ನಿರಿತ್ಯಾದಿಭಿರ್ಮಂತ್ರೈಃ ಜಾಬಾಲೋಪನಿಷದ್ಗತೈಃ ।
ಸಪ್ತಭಿರ್ಧೂಳನಂ ಕಾರ್ಯಂ ಭಸ್ಮನಾ ಸಜಲೇನ ಚ ॥೧೮॥

ತ್ರಿಯಾಯುಷೇಣ ಮಂತ್ರೇಣ
ದ್ವಿಜೈಸ್ತಿರ್ಯಕ್ತ್ರಿಪುಂಡ್ರಕಮ್ ।
ಧಾರ್ಯಂ ಪ್ರೋಕ್ತಂ ದ್ವಿಜಶ್ರೇಷ್ಠಾ
ಧಾರ್ಮಿಕೈರ್ವೇದಪಾರಗೈಃ ॥೧೯॥

ಮೇಧಾವೀತ್ಯಾದಿನಾವಾಽಪಿ ಬ್ರಹ್ಮಚಾರೀ ದಿನೇದಿನೇ ।
ಭಸ್ಮನಾ ಸಜಲೇನೈವ ಧಾರಯೇಚ್ಚ ತ್ರಿಪುಂಡ್ರಕಮ್ ॥೨೦॥

ಶರೀರದ ಎಲ್ಲ ಅವಯವಗಳಿಗೆ ಸವರಿಕೊಳ್ಳುವುದರಿಂದಲೂ, ಹಾಗೆಯೇ ಅಡ್ಡವಾಗಿ ತ್ರಿಪುಂಡ್ರಗಳಿಂದಲೂ, ದ್ವಿಜರು ಭಸ್ಮವನ್ನು ಧರಿಸಬೇಕೆಂದು ಋಷಿಶ್ರೇಷ್ಠರಿಂದ ಹೇಳಲ್ಪಟ್ಟಿದೆ. ॥೧೬॥

ದ್ವಿಜರು ಭಸ್ಮವನ್ನು ಮಂತ್ರೋಚ್ಚಾರಣಪೂರ್ವಕವಾಗಿ ಧರಿಸಬೇಕು. ಇತರರು ಸುಮ್ಮನೆಯೇ ಭಸ್ಮವನ್ನು ಧರಿಸಬೇಕೆಂದು ಋಷಿಗಳು ಹೇಳಿದ್ದಾರೆ. ॥೧೭॥

ಜಾಬಾಲೋಪನಿಷತ್ತಿನಲ್ಲಿ ಹೇಳಿರುವ “ಅಗ್ನಿರಿತಿ ಭಸ್ಮ” ಮುಂತಾದ ಏಳು ಮಂತ್ರಗಳಿಂದ ಭಸ್ಮವನ್ನು ಸವರಿಕೊಳ್ಳಬೇಕು. ಹಾಗೆಯೇ ನೀರಿನಿಂದ ಕೂಡಿದ ಭಸ್ಮದಿಂದ, ॥೧೮॥

“ತ್ರಿಯಾಯುಷಂ” ಇತ್ಯಾದಿ ಮಂತ್ರಗಳಿಂದ ಅಡ್ಡಲಾಗಿ ತ್ರಿಪುಂಡ್ರಕವನ್ನು ದ್ವಿಜರು ಧರಿಸಬೇಕೆಂದು ಧರ್ಮನಿಷ್ಠರಾದ ವೇದಜ್ಞರಿಂದ ಹೇಳಲ್ಪಟ್ಟಿದೆ. ॥೧೯॥

“ಮೇಧಾವೀ” ಇತ್ಯಾದಿ ಮಂತ್ರಗಳಿಂದ ಬಹ್ಮಚಾರಿಯು ಪ್ರತಿನಿತ್ಯದಲ್ಲೂ ನೀರಿನಿಂದ ಕೂಡಿದ ಭಸ್ಮದಿಂದ ತ್ರಿಪುಂಡ್ರವನ್ನು ಧರಿಸಬೇಕು. ॥೨೦॥

ತ್ರ್ಯಯಂಬಕೇಣ ಮಂತ್ರೇಣ ಪ್ರಣವೇನ ಶಿವೇನ ವಾ ।
ಗೃಹಸ್ಥಶ್ಚ ವನಸ್ಥಶ್ಚ ಧಾರಯೇಚ್ಚ ತ್ರಿಪುಂಡ್ರಕಮ್ ॥೨೧॥

ಓಂಕಾರೇಣ ನಿರುಕ್ತೇನ ಸಹಂಸೇನ ತ್ರಿಪುಂಡ್ರಕಮ್ ।
ಧಾರಯೇದ್ಭಿಕ್ಷುಕೋ ನಿತ್ಯಂ ಇತಿ ಜಾಬಾಲಿಕೀ ಶ್ರುತಿಃ ॥೨೨॥

ಲಲಾಟೇ ಚೈವ ದೋರ್ದ್ವಂದ್ವೇ ತಥೈವೋರಸಿ ಬುದ್ಧಿಮಾನ್ ।
ತ್ರಿಪುಂಡ್ರಂ ಧಾರಯೇನ್ನಿತ್ಯಂ ಭುಕ್ತಿಮುಕ್ತಿಫಲಪ್ರದಮ್ ॥೨೩॥

ವರ್ಣಾನಾಮಾಶ್ರಮಾಣಾಂ ಚ ಮಂತ್ರತೋಽಮಂತ್ರತೋಽಪಿ ಚ ।
ತ್ರಿಪುಂಡ್ರೋದ್ಧೂಳನಂ ಪ್ರೋಕ್ತಂ ಜಾಬಾಲೈರಾದರೇಣ ಚ ॥೨೪॥

ಉದ್ಧೂಳನಂ ತ್ರಿಪುಂಡ್ರಂ ಚ ಜ್ಞಾನಾಂಗತ್ವೇನ ಸಾದರಮ್ ।
ಆಮನಂತಿ ಮುನಿಶ್ರೇಷ್ಠಾಃ ಶ್ವೇತಾಶ್ವತರಶಾಖಿನಃ ॥೨೫॥

ತ್ರ್ಯಂಬಕದೇವತೆಯುಳ್ಳ "ತ್ರಿಯಂಬಕಂ ಯಜಾಮಹೇ" ಇತ್ಯಾದಿ ಮಂತ್ರದಿಂದಲಾಗಲಿ, ಓಂಕಾರವೆಂಬ ಪ್ರಣವದಿಂದಾಗಲಿ, ಶಿವನಾಮದಿಂದಾಗಲಿ ಗೃಹಸ್ಥನೂ ವಾನಪ್ರಸ್ಥನೂ ತ್ರಿಪುಂಡ್ರವನ್ನು ಧರಿಸಬೇಕು. ॥೨೧॥

ಮೇಲೆ ಹೇಳಿದ ಹಂಸಮಂತ್ರದೊಡನೆ ಓಂಕಾರದಿಂದ ಭಸ್ಮವನ್ನು ಸಂನ್ಯಾಸಿಯು ಧರಿಸಬೇಕೆಂದು ಜಾಬಾಲಶ್ರುತಿಯು ಹೇಳುತ್ತದೆ. ॥೨೨॥

ಹಣೆಯಲ್ಲೂ, ಎರಡು ಭುಜಗಳಲ್ಲೂ, ಎದೆಯಲ್ಲೂ, ವಿವೇಕಿಯಾದವನು ತ್ರಿಪುಂಡ್ರವನ್ನು ಪ್ರತಿದಿನವೂ ಧರಿಸಬೇಕು; ಇದು ಐಹಿಕಭೋಗಗಳನ್ನೂ ಕಡೆಗೆ ಮೋಕ್ಷವನ್ನೂ ಕೊಡುತ್ತದೆ. ॥೨೩॥

ಬ್ರಾಹ್ಮಣಾದಿ ವರ್ಣಗಳಿಂದಲೂ, ಬ್ರಹ್ಮಚರ್ಯಾದ್ಯಾಶ್ರಮಗಳಿಂದಲೂ ಕೂಡಿರುವವರು ಮಂತ್ರಪೂರ್ವಕವಾಗಿಯೂ ಮಂತ್ರವಿಲ್ಲದೆಯೂ ಭಸ್ಮದಿಂದ ಉದ್ಧೂಳನವನ್ನೂ ತ್ರಿಪುಂಡ್ರವನ್ನೂ ಆದರಪೂರ್ವಕವಾಗಿ ಧರಿಸಬೇಕೆಂದು ಜಾಬಾಲೋಪನಿಷತ್ತಿನ ಮಂತ್ರಗಳಿಂದ ಹೇಳಲ್ಪಟ್ಟಿದೆ. ॥೨೪॥

ಶ್ವೇತಾಶ್ವತರೋಪನಿಷತ್ತಿನಿಂದ ಕೂಡಿದ ವೇದಶಾಖೆಯನ್ನು ಅಧ್ಯಯನ ಮಾಡುವವರು ಉದ್ಧೂಳನವನ್ನೂ ತ್ರಿಪುಂಡ್ರವನ್ನೂ ಆದರಪೂರ್ವಕವಾಗಿ ಧರಿಸುವುದು ಪರಶಿವತತ್ತ್ವಜ್ಞಾನಕ್ಕೆ ಸಾಧನವಾದುದೆಂದು ಹೇಳುತ್ತಾರೆ. ॥೨೫॥

ಅಯಮುತ್ಯಾಶ್ರಮೋ ಧರ್ಮೋ ಯೈಸ್ಸಮಾಚರಿತೋ ಮುದಾ ।
ತೇಷಾಮೇವ ಶಿವಜ್ಞಾನಂ ಸಂಸಾರಚ್ಛೇದಕಾರಣಮ್ ॥೨೬॥

ಉದ್ಧೂಳನಂ ತ್ರಿಪುಂಡ್ರಂ ಚ ಮಾಯಾಪಾಶನಿವೃತ್ತಯೇ ।
ಆಮನಂತಿ ಮುನಿಶ್ರೇಷ್ಠಾ ಅಥರ್ವಶಿರಸಿ ಸ್ಥಿತಾಃ ॥೨೭॥

ತಥಾಽಪಿ ಮಾಯಾವಿಚ್ಛೇದೋ ಜ್ಞಾನಾದೇವ ತು ಕೇವಲಾತ್ ।
ಅಜ್ಞಾನಸ್ಯ ತು ವಿಜ್ಞಾನಂ ಬಾಧಕಂ ಖಲು ನೇತರತ್ ॥೨೮॥

ವ್ರತಂ ಪಾಶುಪತಂ ಯೇನ ಸಮ್ಯಗಾಚರಿತಂ ಬುಧಾಃ ।
ತಸ್ಯ ಜ್ಞಾನಂ ವಿಜಾಯೇತ ತೇನ ಪಾಶವಿಮೋಚನಮ್ ॥೨೯॥

ಉದ್ಧೂಳನಂ ತ್ರಿಪುಂಡ್ರಂ ಚ ಜ್ಞಾನಾಂಗತ್ವೇನ ಕೇವಲಮ್ ।
ಆಮನಂತಿ ಮುನಿಶ್ರೇಷ್ಠಾಸ್ಸಾಕ್ಷಾತ್ಕೈವಲ್ಯಶಾಖಿನಾಮ್ ॥೩೦॥

ಮೇಲೆ ಹೇಳಿದ ಹಂಸಮಂತ್ರದಿಂದ ಉದ್ಧೂಳನತ್ರಿಪುಂಡ್ರಧಾರಣರೂಪವಾದ ಧರ್ಮವು ಎಲ್ಲ ಆಶ್ರಮಧರ್ಮಗಳನ್ನೂ ಮೀರಿ ಮೇಲಾದುದಾಗಿದೆ. ಈ ಧರ್ಮವನ್ನು ಸಂತೋಷದಿಂದ ಯಾರು ಆಚರಿಸುತ್ತಾರೋ ಅಂಥವರಿಗೇ ಸಂಸಾರಬಂಧದಿಂದ ಬಿಡುಗಡೆಯನ್ನುಂಟುಮಾಡುವ ಶಿವಜ್ಞಾನವುಂಟಾಗುವುದು. ॥೨೬॥

ಈ ಉದ್ಧೂಳನತ್ರಿಪುಂಡ್ರಗಳನ್ನು ಅಜ್ಞಾನರೂಪವಾದ ಮಾಯೆಯ ಬಲೆಯಿಂದ ಬಿಡುಗಡೆಯನ್ನು ಹೊಂದುವುದಕ್ಕೋಸ್ಕರ ಆಚರಿಸಬೇಕೆಂದು, ಓ ಋಷಿಶ್ರೇಷ್ಠರೇ, ಅಥರ್ವವೇದದ ಉಪನಿಷತ್ತನ್ನು ತಿಳಿದವರು ಹೇಳುತ್ತಾರೆ. ॥೨೭॥

ಹೇಗಾದರೂ ಮಾಯೆಯ ನಾಶವು ಜ್ಞಾನವೊಂದರಿಂದಲೇ ಉಂಟಾಗುತ್ತದೆ. ಏಕೆಂದರೆ ಅಜ್ಞಾನವನ್ನು ಜ್ಞಾನವೇ ಹೋಗಲಾಡಿಸಬಲ್ಲುದು. ಅದು ಇನ್ನು ಯಾವುದರಿಂದಲೂ ಆಗುವುದಿಲ್ಲ. ॥೨೮॥

ಈ ಪಾಶುಪತವ್ರತವನ್ನು ಯಾರು ಚನ್ನಾಗಿ ಆಚರಿಸುತ್ತಾರೋ ಅಂಥವರಿಗೆ ತತ್ತ್ವಜ್ಞಾನವಾಗುತ್ತದೆ. ಅದರಿಂದ ಮಾಯೆಯ ಬಲೆಯಿಂದ ಬಿಡುಗಡೆಯಾಗುತ್ತದೆ. ॥೨೯॥

ಕೈವಲ್ಯಶಾಖಾಧ್ಯಯನಮಾಡುವವರೂ ಈ ಉದ್ಧೂಳನತ್ರಿಪುಂಡ್ರಧಾರಣಗಳನ್ನು ಬ್ರಹ್ಮತತ್ತ್ವಜ್ಞಾನಕ್ಕೆ ಸಾಧನವಾದ ಅಂಗವೆಂದು ಹೇಳುತ್ತಾರೆ. ॥೩೦॥

ಅತೋಽಪಿ ಪಾಶವಿಚ್ಛೇದಲಾಭಾಯ ಜ್ಞಾನಸಿದ್ಧಯೇ ।
ಉದ್ಧೂಳನಂ ತ್ರಿಪುಂಡ್ರಂ ಚ ಮುಮುಕ್ಷುಸ್ಸಮ್ಯಗಾಚರೇತ್ ॥೩೧॥

ಅಗ್ನ್ಯಾದಿಭ್ಯಃ ಪರಾ ಭೂತಿಃ ತಯಾ ತಿರ್ಯಕ್ತ್ರಿಪುಂಡ್ರಕಮ್ ।
ಧೂಳನಂ ಚಾಽಽಚರೇದೇವ ಮುಮುಕ್ಷುರ್ಜ್ಞಾನಸಿದ್ಧಯೇ ॥೩೨॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಪ್ರಮಾದಾದಪಿ ಮೋಕ್ಷಾರ್ಥೀ ನ ತ್ಯಜೇದಿತಿ ಹಿ ಶ್ರುತಿಃ ॥೩೩॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಮಹಾಪಾಪವಿನಾಶಾಯ ವಿಧತ್ತೇ ವೈದಿಕೀ ಶ್ರುತಿಃ ॥೩೪॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ರಕ್ಷಾರ್ಥಂ ಸರ್ವಜಂತೂನಾಂ ವಿಧತ್ತೇ ವೈದಿಕೀ ಶ್ರುತಿಃ ॥೩೫॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಮಂಗಳಾರ್ಥಂ ಚ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೩೬॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಪವಿತ್ರಾರ್ಥಂ ಚ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೩೭॥

ಆದುದರಿಂದ ಮೋಕ್ಷವನ್ನು ಇಚ್ಛಿಸುವವನು ಸಂಸಾರವೆಂಬ ಬಲೆಯ ಬಂಧನದಿಂದ ಬಿಡುಗಡೆಯನ್ನು ಪಡೆಯಲು ಭಸ್ಮದಿಂದ ಉದ್ಧೂಳನ, ತ್ರಿಪುಂಡ್ರಗಳನ್ನು ಚನ್ನಾಗಿ ಆಚರಿಸಬೇಕು. ॥೩೧॥

ಪೃಥಿವ್ಯಪ್ತೇಜೋರೂಪವಾದ ಭೂತಗಳಿಂದ ಉಂಟಾಗುವ ವಿಭೂತಿಯಿಂದ ಅಡ್ಡಲಾಗಿ ತ್ರಿಪುಂಡ್ರವನ್ನೂ, ಉದ್ಧೂಳನವನ್ನೂ, ಮೋಕ್ಷೇಚ್ಛೆಯುಳ್ಳವನು ಜ್ಞಾನವು ಉಂಟಾಗುವುದಕ್ಕೋಸ್ಕರ ಆಚರಿಸಲೇಬೇಕು. ॥೩೨॥

ಭಸ್ಮದಿಂದ ಉದ್ಧೂಳನವನ್ನೂ ಅಡ್ಡಲಾದ ತ್ರಿಪುಂಡ್ರವನ್ನೂ ಮೋಕ್ಷೇಚ್ಛೆಯುಳ್ಳವನು ಪ್ರಮಾದದಿಂದಲೂ ಆಚರಿಸದೆ ಬಿಡಬಾರದು. ॥೩೩॥

ಭಸ್ಮದಿಂದ ಉದ್ಧೂಳನವನ್ನೂ ತ್ರಿಪುಂಡ್ರವನ್ನೂ ಮಹಾಪಾಪಗಳ ನಿವಾರಣೆಗೋಸ್ಕರವೂ, ಎಲ್ಲ ಪ್ರಾಣಿಗಳನ್ನೂ ಕಾಪಾಡುವುದಕ್ಕೂ, ಎಲ್ಲರಿಗೂ ರಕ್ಷಣೆಗೂ

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಮಾಹೇಶ್ವರಾಣಾಂ ಲಿಂಗಾರ್ಥಂ ವಿಧತ್ತೇ ವೈದಿಕೀ ಶ್ರುತಿಃ ॥೩೮॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಲಿಂಗಾರ್ಥಂ ಚೈವ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೩೯॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್
ಸ್ನಾನತ್ವೇನೈವ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೪೦॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ವ್ರತತ್ವೇನೈವ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೪೧॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ದಾನತ್ವೇನೈವ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೪೨॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ತಪಸ್ತ್ವೇನೈವ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೪೩॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಯಜ್ಞತ್ವೇನೈವ ಸರ್ವೇಷಾಂ ವಿಧತ್ತೇ ವೈದಿಕೀ ಶ್ರುತಿಃ ॥೪೪॥

ಭಸ್ಮನೋದ್ಧೂಳನಂ ಚೈವ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ಸರ್ವಧರ್ಮತಯಾ ಪುಂಸಾಂ ವಿಧತ್ತೇ ವೈದಿಕೀ ಶ್ರುತಿಃ ॥೪೫॥

ಕಲ್ಯಾಣವಾಗುವುದಕ್ಕಾಗಿಯೂ, ಎಲ್ಲರಿಗೂ ಪರಿಶುದ್ಧಿಯುಂಟಾಗುವುದಕ್ಕೋಸ್ಕರವೂ, ಮಹೇಶ್ವರಭಕ್ತರ ಗುರುತಿಗಾಗಿಯೂ, ಮಾಹೇಶ್ವರರಲ್ಲದ ಇತರ ಎಲ್ಲ ಶಿವಭಕ್ತರ ಗುರುತಿಗಾಗಿಯೂ ಶ್ರುತಿಯು ವಿಧಿಸುತ್ತದೆ. ॥೩೪-೩೫-೩೬.೩೭-೩೮-೩೯॥

ಈ ಉದ್ಧೂಳನವನ್ನೂ ತ್ರಿಪುಂಡ್ರವನ್ನೂ ಎಲ್ಲರಿಗೂ ಸ್ನಾನರೂಪವೆಂದೂ, ನಿಯಮರೂಪವೆಂದೂ, ದಾನರೂಪವೆಂದೂ, ತಪೋರೂಪವೆಂದೂ, ಯಾಗರೂಪವೆಂದೂ, ಪುರುಷರು ಆಚರಿಸಬೇಕಾದ ಎಲ್ಲ ಧರ್ಮರೂಪವೆಂದೂ ಶ್ರುತಿಯು ಹೇಳುತ್ತದೆ. ॥೪೦-೪೧-೪೨-೪೩-೪೪-೪೫॥

ಶಿವೇನ ವಿಷ್ಣುನಾ ಚೈವ ಬ್ರಹ್ಮಣಾ ವಜ್ರಿಣಾ ತಥಾ ।
ದೇವತಾಭಿರ್ಧೃತಂ ಭಸ್ಮ ತ್ರಿಪುಂಡ್ರೋದ್ಧೂಳನಾತ್ಮನಾ ॥೪೬॥

ಮಹಾದೇವ್ಯಾ ಚ ಲಕ್ಷ್ಮ್ಯಾ ಚ ವಾಚಾ ಚಾನ್ಯಾಭಿರಾಸ್ತಿಕಾಃ ।
ಸರ್ವಸ್ತ್ರೀಭಿರ್ಧೃತಂ ಭಸ್ಮ ತ್ರಿಪುಂಡ್ರೋದ್ಧೂಳನಾತ್ಮನಾ ॥೪೭॥

ಯಕ್ಷರಾಕ್ಷಸಗಂಧರ್ವಸಿದ್ಧವಿದ್ಯಾಧರಾದಿಭಿಃ ।
ಮುನಿಭಿಶ್ಚ ಧೃತಂ ಭಸ್ಮ ತ್ರಿಪುಂಡ್ರೋದ್ಧೂಳನಾತ್ಮನಾ ॥೪೮॥

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈರಪಿ ಚ ಸಂಕರೈಃ ।
ಅಪಭ್ರಂಶೈರ್ಧೃತಂ ಭಸ್ಮ ತ್ರಿಪುಂಡ್ರೋದ್ಧೂಳನಾತ್ಮನಾ ॥೪೯॥

ಉದ್ಧೂಳನಂ ತ್ರಿಪುಂಡ್ರಂ ಚ ಯೈಸ್ಸಮಾಚರಿತಂ ಮುದಾ ।
ತ ಏವ ಶಿಷ್ಟಾ ವಿದ್ವಾಂಸೋ ನೇತರೇ ಮುನಿಪುಂಗವಾಃ ॥೫೦॥

ಉದ್ಧೂಳನಂ ತ್ರಿಪುಂಡ್ರಂ ಚ ಶ್ರದ್ಧಯಾ ವಾ ಚರಂತಿ ಯೇ ।
ತೇಷಾಂ ನಾಸ್ತಿ ವಿನಿರ್ಮೋಕ್ಷಸ್ಸಂಸಾರಾಜ್ಜನ್ಮ ಕೋಟಿಭಿಃ ॥೫೧॥

ಉದ್ಧೂಳನಂ ತ್ರಿಪುಂಡ್ರಂ ಚ ಶ್ರದ್ಧಯಾ ನಾಚರಂತಿ ಯೇ ।
ತೇಷಾಂ ನಾಸ್ತಿ ಶಿವಜ್ಞಾನಂ ಕಲ್ಪಕೋಟಿಶತೈರಪಿ ॥೫೨॥

ಶಿವನಿಂದಲೂ, ವಿಷ್ಣು, ಬ್ರಹ್ಮ, ಇಂದ್ರ, ದೇವತೆಗಳು, ಮಹಾದೇವಿಯಾದ ಪಾರ್ವತಿಯಿಂದಲೂ, ಲಕ್ಷ್ಮಿ, ಸರಸ್ವತೀ, ಮತ್ತು ಇತರ ಎಲ್ಲ ಸ್ತ್ರೀಯರಿಂದಲೂ ಈ ಉದ್ಧೂಳನತ್ರಿಪುಂಡ್ರರೂಪದಿಂದ ಭಸ್ಮವು ಧರಿಸಲ್ಪಡುತ್ತದೆ. ॥೪೬-೪೭॥

ಯಕ್ಷರು, ರಾಕ್ಷಸರು, ಗಂಧರ್ವರು, ಸಿದ್ಧರು, ವಿದ್ಯಾಧರರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಮತ್ತು ಇತರ ಸಂಕರವರ್ಣದವರು, ಇವರುಗಳಿಂದ ಈ ಉದ್ಧೂಳನತ್ರಿಪುಂಡ್ರಗಳು ಧರಿಸಲ್ಪಡುತ್ತವೆ. ಇವನ್ನು ಯಾರು ಆದರಪೂರ್ವಕವಾಗಿ ಆಚರಿಸುತ್ತಾರೋ ಅವರೇ ಶಿಷ್ಟರು, ವಿದ್ವಾಂಸರು ಎನಿಸುತ್ತಾರೆ. ಇತರರು ಹಾಗೆನ್ನಿಸಿಕೊಳ್ಳಲಾರರು. ॥೪೮-೪೯-೫೦॥

ಈ ಉದ್ಧೂಳನವನ್ನೂ ತ್ರಿಪುಂಡ್ರವನ್ನೂ ಯಾರು ನಂಬಿಕೆಯಿಂದ ಆಚರಿಸುವುದಿಲ್ಲವೋ ಅಂಥವರಿಗೆ ಅನೇಕ ಕೋಟಿ ವರ್ಷಗಳಾದರೂ ಶಿವನ ತಿಳಿವಳಿಕೆ

ಉದ್ಧೂಳನಂ ತ್ರಿಪುಂಡ್ರಂ ಚ ಶ್ರದ್ಧಯಾ ನಾಚರಂತಿ ಯೇ ।
ತೇಷಾಂ ನಾಸ್ತಿ ಸಮಾಚಾರೋ ವರ್ಣಾಶ್ರಮಸಮನ್ವಿತಃ ॥೫೩॥

ಉದ್ಧೂಳನಂ ತ್ರಿಪುಂಡ್ರಂ ಚ ಶ್ರದ್ಧಯಾ ನಾಚರಂತಿ ಯೇ ।
ತೇ ಮಹಾಪಾತಕೈರ್ಯುಕ್ತಾ ಇತಿ ಶಾಸ್ತ್ರಸ್ಯ ನಿರ್ಣಯಃ ॥೫೪॥

ಉದ್ಧೂಳನಂ ತ್ರಿಪುಂಡ್ರಂ ಚ ಶ್ರದ್ಧಯಾ ನಾಚರಂತಿ ಯೇ ।
ತೈಸ್ಸಮಾಚರಿತಂ ಸರ್ವಂ ವಿಪರೀತಫಲಾಯ ಹಿ ॥೫೫॥

ಮಹಾಪಾತಕಯುಕ್ತಾನಾಂ ಜಂತೂನಾಂ ಸರ್ವಜನ್ಮಸು ।
ತ್ರಿಪುಂಡ್ರೋದ್ಧೂಳನದ್ವೇಷೋ ಜಾಯತೇ ಸುದೃಢಂ ಬುಧಾಃ ॥೫೬॥

ತ್ರಿಪುಂಡ್ರೋದ್ಧೂಳನೇ ಶ್ರದ್ಧಾ ಯೇಷಾಂ ನೈವೋಪಜಾಯತೇ ।
ಉಪಪಾತಕದೋಷೇಣ ದುಷ್ಟಾಸ್ತೇನಾತ್ರ ಸಂಶಯಃ ॥೫೭॥

ತ್ರಿಪುಂಡ್ರೋದ್ಧೂಳನಾದೌ ಚ
ದರ್ಶನೇ ಶ್ರವಣೇಽಪಿ ಚ ।
ವಾಂಛಾ ನ ಜಾಯತೇ ಯೇಷಾಂ
ತೇ ಮಹಾಪಾಪಸಂಯುತಾಃ ॥೫೮॥

ಯುಂಟಾಗುವುದಿಲ್ಲ. ಅಂಥವರಿಗೆ ವರ್ಣಧರ್ಮಆಶ್ರಮಧರ್ಮಗಳನ್ನು ಆಚರಿಸಿದುದರ ಫಲವೂ ಉಂಟಾಗುವುದಿಲ್ಲ. ಅಂಥವರು ಮಹಾಪಾತಕವುಳ್ಳವರೆಂದು ಶಾಸ್ತ್ರವು ಗೊತ್ತಾಗಿ ಹೇಳುತ್ತದೆ. ಈ ಸಂಸಾರದಿಂದ ಬಿಡುಗಡೆಯೂ ಅಂಥವರಿಗೆ ಉಂಟಾಗದು. ||೫೧-೫೨-೫೩-೫೪||

ಈ ತ್ರಿಪುಂಡ್ರ, ಉದ್ಧೂಳನಗಳನ್ನು ಯಾರು ಶ್ರದ್ಧಾಭಕ್ತಿಗಳಿಂದ ಆಚರಿಸುವುದಿಲ್ಲವೋ ಅಂಥವರಿಂದ ಆಚರಿಸಲ್ಪಡುವ ಇತರ ಧರ್ಮಗಳೂ ಅವುಗಳ ಸತ್ಫಲಗಳನ್ನುಂಟುಮಾಡದೆ ಹೋಗುತ್ತವೆ. ಅಲ್ಲದೆ ಮಹಾಪಾತಕಗಳಿಂದ ಕೂಡಿದ ಜಂತುಗಳಿಗೇ ಎಲ್ಲ ಜನ್ಮಗಳಲ್ಲೂ ಈ ತ್ರಿಪುಂಡ್ರೋದ್ಧೂಳನದಲ್ಲಿ ದ್ವೇಷಬುದ್ಧಿಯುಂಟಾಗುತ್ತದೆ. ||೫೫-೫೬||

ಯಾರಿಗೆ ತ್ರಿಪುಂಡ್ರೋದ್ಧೂಳನಗಳಲ್ಲಿ ಭಕ್ತಿವಿಶ್ವಾಸಗಳುಂಟಾಗುವುದಿಲ್ಲವೋ ಅಂಥವರು ಉಪಪಾತಕದೋಷದಿಂದ ದುಷ್ಟರಾಗಿರುತ್ತಾರೆ. ಇದರಲ್ಲಿ ಸಂಶಯವಿಲ್ಲವು.

ಯೇಷಾಂ ಕ್ರೋಧೋ ಭವೇದ್ಭಸ್ಮಧಾರಣೇ ತತ್ಪ್ರಮಾಣಕೇ ।
ತೇ ಮಹಾಪಾತಕೈರ್ಯುಕ್ತಾ ಇತಿ ಮೇ ನಿಶ್ಚಿತಾ ಮತಿಃ ॥೫೯॥

ಭಸ್ಮಧಾರಣಮಾಹಾತ್ಮ್ಯಂ ಮಯಾ ವಕ್ತುಂ ನ ಶಕ್ಯತೇ ।
ಗುರುಣಾ ಚಾಪಿ ಮೇ ವಿಪ್ರಾಃ ಕಲ್ಪಕೋಟಿಶತೈರಪಿ ॥೬೦॥

ಬ್ರಹ್ಮಣಾ ವಿಷ್ಣುನಾ ಚಾಪಿ ರುದ್ರೇಣಾಪಿ ಮುನೀಶ್ವರಾಃ ।
ಭಸ್ಮಧಾರಣಮಾಹಾತ್ಮ್ಯಂ ನ ಶಕ್ಯಂ ಪರಿಭಾಷಿತುಮ್ ॥೬೧॥

ಅಹೋ ಮೋಹಸ್ಯ ಮಾಹಾತ್ಮ್ಯಂ ಮುನೀಂದ್ರಾ ಬ್ರಹ್ಮವಾದಿನಃ ।
ಯೇ ನರಾ ಭಸ್ಮ ಸಂತ್ಯಜ್ಯ ಕುರ್ವಂತ್ಯನ್ಯತ್ಸಮಾಹಿತಮ್ ॥೬೨॥

ಅತಿರಹಸ್ಯಮಿದಂ ಮುನಿಪುಂಗವಾಃ
ಕಥಿತಮೇವ ಸಮಸ್ತಜಗದ್ಧಿತಮ್ ।

ತ್ರಿಪುಂಡ್ರೋದ್ಧೂಳನಗಳಲ್ಲೂ, ಅವನ್ನು ನೋಡುವುದರಲ್ಲೂ ಅವುಗಳ ಗುಣಗಳನ್ನು ಕೇಳುವುದರಲ್ಲೂ ಇಚ್ಛೆಯು ಯಾರಿಗೆ ಉಂಟಾಗದೋ, ಅಂಥವರು ಮಹಾಪಾತಕಗಳಿಂದ ಕೂಡಿದವರು; ಭಸ್ಮವನ್ನು ಧರಿಸುವುದರಲ್ಲಿಯೂ ಅದರ ಪ್ರಮಾಣದಲ್ಲೂ ಯಾರಿಗೆ ಕೋಪ ಉಂಟಾಗುತ್ತದೋ ಅಂಥವರು ಮಹಾಪಾತಕಗಳಿಂದ ಕೂಡಿರುತ್ತಾರೆಂದು ನಾನು ಖಂಡಿತವಾಗಿ ಹೇಳುತ್ತೇನೆ. ॥೫೭-೫೮-೫೯॥

ಓ ಮುನಿಶ್ರೇಷ್ಠರೇ, ಭಸ್ಮಧಾರಣದ ಮಹಿಮೆಯನ್ನು ಹೇಳಲು ನನ್ನಿಂದಲೂ ಗುರುವಾದ ಶುಕಋಷಿಗಳಿಂದಲೂ, ಅನೇಕಕಲ್ಪಕೋಟಿವರ್ಷಗಳು ಹೇಳಿದರೂ ಮುಗಿಸಲು ಸಾಧ್ಯವಾಗುವುದಿಲ್ಲ. ಬ್ರಹ್ಮ, ವಿಷ್ಣು, ರುದ್ರ ಇವರಿಂದಲೂ, ಭಸ್ಮಧಾರಣ ಮಹಿಮೆಯನ್ನು ಸಮಗ್ರವಾಗಿ ಹೇಳಲು ಸಾಧ್ಯವಾಗದು. ॥೬೦-೬೧॥

ಓ ಬ್ರಹ್ಮವಾದಿಗಳಾದ ಋಷಿಗಳೇ, ಯಾರು ಭಸ್ಮಧಾರಣವನ್ನು ಬಿಟ್ಟು ಯಾವ ಇಷ್ಟವಾದ ಬೇರೆ ಧರ್ಮವನ್ನು ಆಚರಿಸಿದರೂ ಅದು ಫಲಿಸದು. ಆದುದರಿಂದ ಅಂಥವರ ಅಜ್ಞಾನದ ಮಹಿಮೆಯು ಆಶ್ಚರ್ಯಕರವಾದುದು. ॥೬೨॥

ಓ ಋಷಿಶ್ರೇಷ್ಠರೇ, ಎಲ್ಲ ಲೋಕಗಳಿಗೂ ಹಿತಕರವಾದ ಈ ಭಸ್ಮಧಾರಣ ಮಹಿಮೆಯು ತುಂಬ ರಹಸ್ಯವಾದುದು. ಆದರೂ ಅದು ನನ್ನಿಂದ ಹೇಳಲ್ಪಟ್ಟಿದೆ.

ಯದಿ ಸಮಾಚರಿತಂ ಮನುಜೈರ್ಮುದಾ
ಸಫಲಮೇವ ಹಿ ಜನ್ಮ ನ ಸಂಶಯಃ ॥೬೩॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಭಸ್ಮಧಾರಣವೈಭವಂ ನಾಮ ತ್ರಿಂಶಾಧ್ಯಾಯಃ

ಮಾನವರು ಇದನ್ನು ಸಂತೋಷದಿಂದ ಆಚರಿಸುವುದಾದರೆ ಅವರ ಜನ್ಮವು ಸಫಲವಾಗುತ್ತದೆ. ಸಂದೇಹವಿಲ್ಲವು. ॥೬೩॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಭಸ್ಮಧಾರಣವೈಭವದ ವಿವರಣೆ ಎಂಬ ಮೂವತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಏಕತ್ರಿಂಶೋಽಧ್ಯಾಯಃ ||

ಮೂವತ್ತೊಂದನೆಯ ಅಧ್ಯಾಯವು

(ಜೀವಬ್ರಹ್ಮೈಕ್ಯನಿರೂಪಣಮ್)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಶಿವಪ್ರೀತಿಕರಂ ಮುದಾ ।
ಶ್ರದ್ಧಯಾ ಸಹ ವಿಪ್ರೇಂದ್ರಾಃ ಶೃಣುತಾತೀವ ಶೋಭನಮ್ ॥೧॥

ಜೀವಬ್ರಹ್ಮೈಕ್ಯವಿಜ್ಞಾನಂ ವಿಶುದ್ಧಂ ವೇದಸಂಭವಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೨॥

ಎಲೈ ಶೌನಕಾದಿ ಋಷಿಗಳೇ, ಈಗ ಶಿವನಿಗೆ ಪ್ರೀತಿಯನ್ನುಂಟುಮಾಡುವುದು ಯಾವುದೆಂಬ ವಿಚಾರವನ್ನು ಸಂತೋಷದಿಂದ ಹೇಳುತ್ತೇನೆ. ನೀವುಗಳೆಲ್ಲರೂ ಉತ್ತಮವಾದ ಈ ವಿಚಾರವನ್ನು ಬಹಳ ಶ್ರದ್ಧೆಯಿಂದ ಕೇಳಿರಿ. ||೧||

ಎಲೈ ಬ್ರಾಹ್ಮಣಶ್ರೇಷ್ಠರೇ, ಪರಿಶುದ್ಧವಾದ, ವೇದಾರ್ಥವಿಚಾರದಿಂದುಂಟಾಗುವ, ಜೀವನೂ ಬ್ರಹ್ಮನೂ ಒಂದೇ ಎಂಬ (ಜ್ಞಾನವು) ತಿಳಿವಳಿಕೆಯು, ದೇವಶ್ರೇಷ್ಠನಾದ ಶಿವನಿಗೆ ಯಾವಾಗಲೂ ಪ್ರೀತಿಯನ್ನುಂಟುಮಾಡುವುದು. ||೨||

ಸರ್ವಂ ಬ್ರಹ್ಮೇತಿ ವಿಜ್ಞಾನಂ ಯತ್ತದ್ವೇದಾಂತವಾಕ್ಯಜಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೩॥

ಸಾಂಬಮೂರ್ತಿಧರಸ್ಯಾಸ್ಯ ಶಿವಸ್ಯ ಧ್ಯಾನಮಾಸ್ತಿಕಾಃ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೪॥

ನೃತ್ಯಮಾನಸ್ಯ ದೇವಸ್ಯ ಧ್ಯಾನಂ ಯತ್ತದ್ದ್ವಿಜೋತ್ತಮಾಃ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೫॥

ಶಿವಶಂಕರರುದ್ರಾದಿ ಶಬ್ದಾಭ್ಯಾಸಶ್ಚ ಸಾದರಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೬॥

ಶಿವಭಕ್ತಿಶ್ಚ ವಿಪ್ರೇಂದ್ರಾ ಗುರುಭಕ್ತಿಸ್ತಥೈವ ಚ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೭॥

ಶ್ರುತಿಸ್ಮೃತಿಪುರಾಣೇಷು ವಿಶ್ವಾಸೋ ಯಸ್ಸ ಆಸ್ತಿಕಾಃ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಃ ಸದಾ ॥೮॥

ಅಧ್ಯಾಪನಂ ಚಾಧ್ಯಯನಂ ವೇದವೇದಾಂತಯೋರಪಿ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೯॥

ವೇದಾಂತವಾಕ್ಯದಿಂದುಂಟಾದ "ಎಲ್ಲವೂ ಬ್ರಹ್ಮವು" ಎಂಬ ತಿಳಿವಳಿಕೆಯೂ, ಪಾರ್ವತೀಸಹಿತನಾದ ಶಿವನ ಆಕಾರವನ್ನು ಧ್ಯಾನಮಾಡುವುದೂ, ಶಿವನಿಗೆ ಬಹಳ ಇಷ್ಟವಾದುದು. ||೩-೪||

ದೇವಗಣದ ಮಧ್ಯದಲ್ಲಿ ನರ್ತನಮಾಡುತ್ತಿರುವ ಈಶ್ವರನ ಆಕಾರವನ್ನು ಧ್ಯಾನಮಾಡುವುದೂ, ಶಿವ, ಶಂಕರ, ರುದ್ರ, ಎಂಬ ನಾಮಗಳನ್ನು ಯಾವಾಗಲೂ ಹೇಳುತ್ತಿರುವುದೂ, ಶಿವಭಕ್ತಿಯೂ, ಗುರುಭಕ್ತಿಯೂ, ಶ್ರುತಿಸ್ಮೃತಿಪುರಾಣಗಳಲ್ಲಿರುವ ಭಕ್ತಿಯೂ ಶಿವನಿಗೆ ಬಹಳ ಇಷ್ಟವಾದವುಗಳು. ||೫-೬-೭-೮||

ವೇದವೇದಾಂತಗಳನ್ನು ಅಭ್ಯಾಸಮಾಡುವುದೂ, ಅಭ್ಯಾಸಮಾಡಿಸುವುದೂ, ವೇದಗಳಿಗೂ ವೇದಾಂತವಾಕ್ಯಗಳಿಗೂ ಅದ್ವಿತೀಯಬ್ರಹ್ಮನಲ್ಲಿಯೇ ತಾತ್ಪರ್ಯ

ವೇದವೇದಾಂತವಾಕ್ಯಾನಾಂ ತಾತ್ಪರ್ಯಸ್ಯ ನಿರೂಪಣಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೦॥

ತ್ರಿಪುಂಡ್ರೋದ್ಧೂಳನಾ ಚಾರೋ ಜಾಬಾಲೋಕ್ತೇನ ವರ್ತ್ಮನಾ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಃ ಸದಾ ॥೧೧॥

ಕಂಠೇ ಶಿರಸಿ ವಾ ಹಸ್ತೇ ರುದ್ರಾಕ್ಷಾಣಾಂ ಚ ಧಾರಣಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೨॥

ಲಿಂಗೇ ಶಿವಾರ್ಚನಂ ನಿತ್ಯಂ ವೇದೋಕ್ತೇನೈವ ವರ್ತ್ಮನಾ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೩॥

ವಾರಾಣಸ್ಯಾದಿಕೇ ಸ್ಥಾನೇ ಯಾತ್ರಾಕರಣಮಾದರಾತ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೪॥

ಶಾನ್ತಿದಾನ್ತ್ಯಾದಿ ಸಂಪತ್ತಿರ್ಮುಮುಕ್ಷುತ್ವಂ ಮುನೀಶ್ವರಾಃ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೫॥

ನಿತ್ಯಾನಿತ್ಯಾರ್ಥವಿಜ್ಞಾನಂ ವೈರಾಗ್ಯಂ ಸುದೃಢಂ ತಥಾ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೬॥

ವನ್ನು ನಿರ್ಣಯಮಾಡುವುದೂ, ಜಾಬಾಲೋಪನಿಷತ್ತಿನಲ್ಲಿ ಹೇಳಿರುವ ರೀತಿಯಲ್ಲಿ ತ್ರಿಪುಂಡ್ರವನ್ನು ಧರಿಸುವ ಪದ್ಧತಿಯೂ ಮಹಾದೇವನಿಗೆ ಬಹಳ ಪ್ರೀತಿಯನ್ನುಂಟು ಮಾಡುವುವು. ॥೯-೧೦-೧೧॥

ಕುತ್ತಿಗೆಯಲ್ಲಾಗಲಿ, ತಲೆಯಲ್ಲಾಗಲಿ, ಕೈಯಲ್ಲಾಗಲಿ, ರುದ್ರಾಕ್ಷಿಗಳನ್ನು ಧರಿಸುವುದೂ, ಲಿಂಗವನ್ನು ವೇದದಲ್ಲಿ ಹೇಳಿರುವ ರೀತಿಯಂತೆ ಶಿವನನ್ನಾಗಿ ಪೂಜೆ ಮಾಡುವುದೂ, ಕಾಶಿಯೇ ಮೊದಲಾದ ಕ್ಷೇತ್ರಗಳಿಗೆ ಹೋಗುವುದೂ, ಅಂತ ರಿಂದ್ರಿಯಬಹಿರಿಂದ್ರಿಯಗಳನ್ನು ನಿಗ್ರಹಮಾಡುವುದೂ, ಮೋಕ್ಷವನ್ನು ಹೊಂದ ಬೇಕೆಂದು ಇಚ್ಛಿಸುವುದೂ, ನಿತ್ಯವಸ್ತುವಾವುದು ? ಅನಿತ್ಯವಸ್ತುವಾವುದು ? ಎಂದು ವಿಚಾರಮಾಡಿ ತಿಳಿಯುವುದೂ, ವಿವೇಕದಿಂದ ಪ್ರಬಲವಾದ ವೈರಾಗ್ಯವೂ ಇವುಗಳೆ ಲ್ಲವೂ ಮಹಾದೇವನಿಗೆ ಪ್ರೀತಿಯನ್ನುಂಟುಮಾಡುವುವು. ॥೧೨-೧೩-೧೪-೧೫-೧೬॥

ಯಜ್ಞದಾನತಪಃಕರ್ಮ ನಿಷ್ಠಾ ಚಾಶ್ರಮಲಕ್ಷಣಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೭॥

ಸ್ವಜಾತಿವಿಹಿತಾಚಾರೋ ತಥಾಽನ್ಯಾಚಾರವರ್ಜನಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೮॥

ನಿಷಿದ್ಧಕರ್ಮಣಾಂ ತ್ಯಾಗೋ ದುರ್ವೃತ್ತಾನಾಮುಪೇಕ್ಷಣಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೧೯॥

ದಯಾ ಸರ್ವೇಷು ಭೂತೇಷು ಮಾರ್ಗದೂಷಣವರ್ಜನಮ್ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೨೦॥

ದ್ವಿಜಾನಾಮಪಿ ಶುಶ್ರೂಷಾ ಜ್ಞಾನಿನಾಂ ಚ ವಿಶೇಷತಃ ।
ದೇವದೇವಸ್ಯ ವಿಪ್ರೇಂದ್ರಾ ಮಹಾಪ್ರೀತಿಕರಂ ಸದಾ ॥೨೧॥

ಶಿವಜ್ಞಾನೈಕನಿಷ್ಠಸ್ಯ ಗುರೋಶ್ಶುಶ್ರೂಷಣಂ ಮುದಾ ।
ಶಿವಪ್ರೀತಿಕರಾಣಾಂ ತು ವಿಶಿಷ್ಟಂ ನಾತ್ರ ಸಂಶಯಃ ॥೨೨॥

ಯಜ್ಞ, ದಾನ, ತಪಸ್ಸು ಇವುಗಳ ಆಚರಣೆಯೂ, ಬ್ರಹ್ಮಚರ್ಯಗಾರ್ಹಸ್ಥ್ಯ ಮೊದಲಾದ ಆಶ್ರಮಧರ್ಮಗಳನ್ನು ನಡೆಸುವುದೂ, ಬ್ರಾಹ್ಮಣಾದಿಜಾತಿಗಳಿಗೆ ಗೊತ್ತಾಗಿರುವ ಆಚಾರಗಳನ್ನು ನಡೆಸುವುದೂ, ಇತರರ ಜಾತ್ಯಾಚಾರಗಳನ್ನು ಮಾಡದಿರುವುದೂ, ಶಾಸ್ತ್ರದಲ್ಲಿ ಮಾಡಬಾರದೆಂದು ಹೇಳಿರುವ ಕೆಲಸಗಳನ್ನು ಮಾಡದಿರುವುದೂ, ದುಷ್ಟರ ಸಹವಾಸಕ್ಕೆ ಹೋಗದಿರುವುದೂ, ಎಲ್ಲಾ ಪ್ರಾಣಿಗಳಲ್ಲಿಯೂ ಕರುಣೆಯನ್ನು ತೋರಿಸುವುದೂ, ಶಾಸ್ತ್ರಗಳನ್ನು ಇತರರ (ಅ. ೨೨) ಮೋಕ್ಷಮಾರ್ಗಗಳನ್ನು ದೂಷಣೆಮಾಡದಿರುವುದೂ, ಬ್ರಾಹ್ಮಣರ ಸೇವೆಮಾಡುವುದೂ, ಅದರಲ್ಲಿಯೂ ಜ್ಞಾನಿಗೆ ಸೇವೆಮಾಡುವುದೂ ಇವು ಮಹಾದೇವನಿಗೆ ಯಾವಾಗಲೂ ಪ್ರೀತಿಯನ್ನುಂಟುಮಾಡುತ್ತವೆ. ॥೧೭-೧೮-೧೯-೨೦-೨೧॥

ಶಿವಜ್ಞಾನಿಯಾದ ಗುರುವಿನ ಸೇವೆಮಾಡುವುದು, ಶಿವನಿಗೆ ಪ್ರೀತಿಯನ್ನುಂಟುಮಾಡಿ, ಅವನ ಅನುಗ್ರಹವನ್ನು ಹೊಂದಬೇಕೆನ್ನುವವರಿಗೆ ಬಹಳ ಮುಖ್ಯವಾದುದು. ಇದರಲ್ಲಿ ಸಂದೇಹವಿಲ್ಲವು. ॥೨೨॥

ಪುರಾ ಕಾಚಿತ್ಕುಲಾಲಸ್ತ್ರೀ ಬಭೂವಾತೀವ ಸುಂದರೀ ।
ಸಾ ಸಹಸ್ರತ್ರಯಂ ಹತ್ವಾ ವಿಪ್ರಾಣಾಮರ್ಥವಾಂಛಯಾ ॥೨೩॥

ಮಹಾಧನವತೀ ಭೂತ್ವಾ ಮಾಯಯಾ ಪರಿಮೋಹಿತಾ ।
ಯಥೇಷ್ಟಂ ಭೂತಲೇ ವಿಪ್ರಾಃ ಚಚಾರ ಪರಿಗರ್ವಿತಾ ॥೨೪॥

ಕಶ್ಚಿದ್ವಿಜ್ಞಾನಸಂಪನ್ನೋ ಮಹಾಯೋಗೀ ಸುನಿಶ್ಚಲಃ ।
ಶ್ರೀಮದ್ದಕ್ಷಿಣಕೈಲಾಸಂ ಶಿವಸ್ಥಾನೋತ್ತಮೋತ್ತಮಮ್ ॥೨೫॥

ವರ್ಣಿತುಂ ಶ್ರದ್ಧಯಾಽಽಗಚ್ಛದ್ವಿದಿತ್ವಾ ದೇಶವೈಭವಮ್ ।
ತಂ ದೃಷ್ಟ್ವಾ ಸಾ ಸ್ವಭೋಗಾರ್ಥಂ ಪ್ರಣಿಪತ್ಯ ತಪಸ್ವಿನಮ್ ॥೨೬॥

ಪರಿಗೃಹ್ಯಾತಿಸಂತುಷ್ಟಾ ಗೃಹೇ ಸ್ವೀಯೇ ವಿಚಕ್ಷಣಾ ।
ಸ್ನಾಪ್ಯ ವಸ್ತ್ರಾದಿಕಂ ದತ್ವಾ ಭೋಜಯಿತ್ವಾ ಸುಮೋದತಃ ॥೨೭॥

ಚಂದನಾದ್ಯೈರಲಂಕೃತ್ಯ ದತ್ವಾ ತಾಂಬೂಲಪೂರ್ವಕಮ್ ।
ಸಮಾಶ್ವಾಸ್ಯ ಮಹಾತ್ಮಾನಂ ಪ್ರಿಯಂ ಭುಕ್ತವತೀ ದ್ವಿಜಾಃ ॥೨೮॥

ಎಲೈ ಬ್ರಾಹ್ಮಣರೇ, ಪೂರ್ವದಲ್ಲಿ ಬಹಳ ಸುಂದರಿಯಾದ ಒಬ್ಬಳು ಕುಂಬಾರ ಸ್ತ್ರೀ ಇದ್ದಳು. ಅವಳು ದುಡ್ಡಿನಾಸೆಯಿಂದ ಮೂರುಸಾವಿರ ಬ್ರಾಹ್ಮಣರನ್ನು ಕೊಂದು ಅವರ ದುಡ್ಡನ್ನೆಲ್ಲವನ್ನೂ ತೆಗೆದುಕೊಂಡು ಬಹಳ ಐಶ್ವರ್ಯವಂತಳಾಗಿ, ಐಶ್ವರ್ಯದಿಂದ ಏನುಮಾಡಬೇಕೆಂಬ ವಿವೇಕವಿಲ್ಲದೆ ಮನಸ್ಸು ಬಂದಂತೆ ಇರುತ್ತಾ ಬಹಳ ಅಹಂಕಾರದಿಂದ ಕೂಡಿದವಳಾಗಿ ಮೆರೆಯುತ್ತಿದ್ದಳು. ॥೨೩-೨೪॥

ಹೀಗಿರಲು ಒಂದು ದಿನ ಜ್ಞಾನಿಯಾದ, ಚಂಚಲವಾಗದ ಮನಸ್ಸುಳ್ಳ ಒಬ್ಬ ಶಿವಯೋಗಿಯು, ಶಿವಕ್ಷೇತ್ರಗಳಲ್ಲೆಲ್ಲಾ ಶ್ರೇಷ್ಠವಾದ, ದಕ್ಷಿಣಕೈಲಾಸಕ್ಷೇತ್ರದ ಮಹಿಮೆಯನ್ನು ಕೇಳಿ ಅಲ್ಲಿಗೆ ಹೋಗಬೇಕೆಂಬ ಇಚ್ಛೆಯಿಂದ ಬಂದನು. ॥೨೫॥

ಹೀಗೆ ಬಂದ ಶಿವಯೋಗಿಯನ್ನು ನೋಡಿ ಆ ಕುಂಬಾರಿತಿಯು ಪೂರ್ವಜನ್ಮದ ಪುಣ್ಯವಿಶೇಷದಿಂದ ಅವನೊಡನೆ ಸುಖಪಡಲಾಸೆಯಿಂದ ಅವನಿಗೆ ನಮಸ್ಕಾರಮಾಡಿ ತನ್ನ ಮನೆಗೆ ಕರೆದುಕೊಂಡುಹೋಗಿ ಬಹಳ ಸಂತೋಷದಿಂದ, ಅವನಿಗೆ ಸ್ನಾನ ಮಾಡಿಸಿ ಉಡಲು ಬಟ್ಟೆಗಳನ್ನು ಕೊಟ್ಟು ಅನಂತರ ಸಂತೋಷದಿಂದ ಊಟಮಾಡಿಸಿ, ಗಂಧ, ಹೂ, ಇವುಗಳಿಂದ ಅಲಂಕಾರಮಾಡಿ ತಾಂಬೂಲವೇ ಮೊದಲಾದವುಗಳನ್ನು

ಸೋऽಪಿ ವಿಜ್ಞಾನಸಂಪನ್ನೋ ಮಹಾಯೋಗೀ ನಿರಾಕುಲಃ ।
ಅತೀವ ಪ್ರೀತಿಮಾಪನ್ನಸ್ತಯಾ ಸಹ ಮುನೀಶ್ವರಾಃ ॥೨೯॥

ಶ್ರೀಮದ್ದಕ್ಷಿಣಕೈಲಾಸೇ ಶಿವಸ್ಥಾನೋತ್ತಮೋತ್ತಮೇ ।
ಅವರ್ತತ ಚಿರಂ ಕಾಲಮತೀವ ಪ್ರೀತಿಸಂಯುತಃ ॥೩೦॥

ದೇವದೇವೋ ಮಹಾಪ್ರೀತಸ್ತಯಾ ಶುಶ್ರೂಷಯಾ ದ್ವಿಜಾಃ ।
ತಸ್ಯೈ ಪರಮಕೈವಲ್ಯಂ ದದೌ ವಿಜ್ಞಾನಪೂರ್ವಕಮ್ ॥೩೦॥

ಬಹವೋ ಜ್ಞಾನನಿಷ್ಠಸ್ಯ ಶುಶ್ರೂಷಾ ಬಲತೋ ದ್ವಿಜಾಃ ।
ಶಿವಪ್ರೀತಿಮವಾಪ್ಯಾಶು ವಿಮುಕ್ತಾ ಭವಬಂಧನಾತ್ ॥೩೨॥

ಅತ ಉಕ್ತೇಷು ಸರ್ವೇಷು ಶುಶ್ರೂಷಾ ಶಿವಯೋಗಿನಃ ।
ಶಿವಪ್ರೀತಿಕರೀ ಸಾಕ್ಷಾದಿತಿ ವೇದಾರ್ಥಸಂಗ್ರಹಃ ॥೩೩॥

ಕೊಟ್ಟು ಆ ಶಿವಯೋಗಿಗೆ ಸತ್ಕಾರಮಾಡಿ, ಅನಂತರ ತಾನೂ ಆತನೊಡನೆ ಸುಖವನ್ನನುಭವಿಸಿದಳು. ॥೨೬-೨೭-೨೮॥

ಆ ಶಿವಯೋಗಿಯು ಜ್ಞಾನಿಯಾದ್ದರಿಂದ ಯಾವ ವಿಧವಾದ ಯೋಚನೆಯೂ ಪುಣ್ಯಪಾಪಲೇಪವೂ ಇಲ್ಲದವನಾಗಿ, ಸಂತೋಷದಿಂದ ಆಕೆಯೊಡನೆ ಶಿವಕ್ಷೇತ್ರಗಳಲ್ಲಿ ಶ್ರೇಷ್ಠವಾದ ದಕ್ಷಿಣಕೈಲಾಸದಲ್ಲಿ ಬಹಳಕಾಲ ಪ್ರೀತಿಯಿಂದ ವಾಸಮಾಡಿದನು. ॥೨೯-೩೦॥

ಹೀಗಿರುವಲ್ಲಿ ತುಂಬ ಸಂತೋಷದಿಂದ ಶಿವಯೋಗಿಗೆ ಮಾಡಿದ ಸೇವೆಯಿಂದ ಬಹಳ ತೃಪ್ತನಾದ ಪರಮೇಶ್ವರನು ಆ ಕುಂಬಾರಿತಿಗೆ ಉತ್ತಮವಾದ ಜ್ಞಾನವನ್ನು ಕೊಟ್ಟು ಅನಂತರ ಮೋಕ್ಷವನ್ನು ಕೊಟ್ಟನು. ॥೩೧॥

ಎಲೈ ಬ್ರಾಹ್ಮಣರೇ, ಹೀಗೆ ಅನೇಕರು ಜ್ಞಾನಿಯಾದವರ ಸೇವೆಮಾಡಿ ಅಂಥವರ ಸೇವೆಯ ಮಹಿಮೆಯಿಂದ ಈಶ್ವರನ ಪ್ರೀತಿಗೆ ಪಾತ್ರರಾಗಿ ಸಂಸಾರ ಬಂಧನದಿಂದ ಬಿಡುಗಡೆಹೊಂದಿದ್ದಾರೆ. ॥೩೨॥

ಆದ್ದರಿಂದ ಎಲ್ಲಾ ಸೇವೆಗಳಿಗಿಂತಲೂ ಶಿವಯೋಗಿಯ ಸೇವೆಯು ಬಹಳ ಉತ್ತಮವಾದುದು. ಅದು ಶಿವನಿಗೆ ಬೇಗ ಪ್ರೀತಿಯನ್ನುಂಟುಮಾಡುವುದು. ಎಂದು ವೇದದ ತಾತ್ಪರ್ಯವು. ॥೩೩॥

ಅತಶ್ಶಿವಪ್ರೀತಿಕರಂ ವಿಚಾರ್ಯ
ದ್ವಿಜೋತ್ತಮಾ ವೇದವಿದಾಂ ವರಿಷ್ಠಾಃ ।
ಮದುಕ್ತಮಾರ್ಗೇಣ ಶಿವಪ್ರಿಯೇಣ
ಸದಾಶಿವಪ್ರೀತಿಕರಂ ಕುರುಧ್ವಮ್ ॥೩೪॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಶಿವಪ್ರೀತಿಕರನಿರೂಪಣಂ ನಾಮ ಏಕತ್ರಿಂಶಾಧ್ಯಾಯಃ

ವೇದವನ್ನು ತಿಳಿದವರಲ್ಲಿ ಉತ್ತಮರಾದ ಎಲೈ ಬ್ರಾಹಣಶ್ರೇಷ್ಠರೇ, ಹೀಗಿರುವುದರಿಂದ ಶಿವನಿಗೆ ಬಹಳ ಪ್ರೀತಿಯನ್ನುಂಟುಮಾಡುವುದು ಯಾವುದು ? ಎಂಬುದನ್ನು ಚೆನ್ನಾಗಿ ವಿಚಾರಮಾಡಿ ನಾನು ಹೇಳಿರುವ ರೀತಿಯಿಂದ ಅವನಿಗೆ ಪ್ರೀತಿಯನ್ನುಂಟುಮಾಡಿರಿ. ಎಂದು ಸೂತರು ಶೌನಕಾದಿಗಳನ್ನು ಕುರಿತು ಹೇಳಿದರು. ||೩೪||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಶಿವಪ್ರೀತಿಯನ್ನುಂಟುಮಾಡುವ ರೀತಿಯನ್ನು ವಿವರಿಸುವ
ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ದ್ವಾತ್ರಿಂಶೋಽಧ್ಯಾಯಃ ||

ಮೂವತ್ತೆರಡನೆಯ ಅಧ್ಯಾಯವು

|| ಓಂ ಸೂತ ಉವಾಚ ||

ಅಥ ವಕ್ಷ್ಯೇ ಮಹಾದೇವಶ್ರದ್ಧಾಽಭಾವಸ್ಯ ಕಾರಣಮ್ ।
ಮನುಷ್ಯಾಣಾಂ ಮುನಿಶ್ರೇಷ್ಠಾಃ ಶೃಣುತ ಶ್ರದ್ಧಯಾ ಸಹ ||೧||

ಪುರಾ ಕಾಲವಿಪಾಕೇನ ಪ್ರಾಣಿಕರ್ಮವಶೇನ ಚ ।
ಪಂಚಸಪ್ತ ಚ ವರ್ಷಾಣಿ ನ ವವರ್ಷ ಶತಕ್ರತುಃ ||೨||

ಅನಾವೃಷ್ಟ್ಯಾ ದ್ವಿಜಾ ಭೂಮಿಃ ದುರ್ಭಿಕ್ಷಾಽಭವದಾಸ್ತಿಕಾಃ ।
ಕ್ಷುತ್ಪೀಡಾ ಚ ಮಹಾತೀವ್ರಾ ವಿಜಾತಾ ಸರ್ವದೇಹಿನಾಮ್ ||೩||

ಪರಶಿವನಲ್ಲಿ ಪ್ರೀತಿಯುಂಟಾಗುವ ಸಾಧನಗಳನ್ನೂ ರೀತಿಗಳನ್ನೂ ಹೇಳಿ ಈಗ ಶಿವನಲ್ಲಿ ಭಕ್ತಿಯಿಲ್ಲದಿರುವಿಕೆಗೆ ಕಾರಣವನ್ನು ಹೇಳುತ್ತಾರೆ. ಆ ತಿಳಿವಳಿಕೆಯಿಂದ ಅದನ್ನು ನಿವಾರಿಸಿಕೊಂಡು ಪ್ರೀತಿಸಂಪಾದನೆಮಾಡಲು ಅನುಕೂಲವಾಗುತ್ತದೆ. ಮಹಾದೇವನಲ್ಲಿ ಮನುಷ್ಯರಿಗೆ ಭಕ್ತಿನಂಬಿಕೆಗಳುಂಟಾಗದಿರುವ ಕಾರಣಗಳನ್ನು ಹೇಳುತ್ತೇನೆ. ಓ ಋಷಿಶ್ರೇಷ್ಠರಾ, ವಿಶ್ವಾಸಾದರಗಳೊಡನೆ ಕೇಳಿ. ||೧||

ಪೂರ್ವಕಾಲದಲ್ಲಿ ಪ್ರಾಣಿಗಳ ಕರ್ಮಾಧೀನವಾಗಿ ತಕ್ಕ ಫಲವನ್ನು ಕೊಡುವ ಕಾಲವೂ ಬರಲು ದೇವೇಂದ್ರನು ಹನ್ನೆರಡು ವರ್ಷಗಳ ವರೆಗೆ ಮಳೆಯನ್ನು ಹುಯ್ಯಲು ಬಿಡಲಿಲ್ಲ. ಈ ಮಳೆ ಇಲ್ಲದಿರುವಿಕೆಯಿಂದ ಓ ಆಸ್ತಿಕರಾದ ಬ್ರಾಹ್ಮಣರಾ,

ಮನುಷ್ಯಾಶ್ಚ ದುರಾಚಾರಾ ಅಭವನ್ನನ್ನವಾಂಛಯಾ ।
ಹತ್ವಾ ಕೇಚಿನ್ಮನುಷ್ಯಾಂಶ್ಚ ಭುಕ್ತವಂತೋ ವಿಮೋಹಿತಾಃ ॥೪॥

ಹತ್ವಾ ಕೇಚಿತ್ ಪಶೂನ್ಮೋಹಾತ್ ಅಜಾನ್ ಕೇಚನ ಮೋಹಿತಾಃ ।
ತುರಂಗಾಂಶ್ಚ ಗಜಾನ್ ಕೇಚಿತ್ ಭುಕ್ತವಂತೋ ಯಥಾಬಲಮ್॥೫॥

ಬ್ರಾಹ್ಮಣಾಃ ಕೇಚಿದಾಲೋಡ್ಯ(ಕ್ಯ) ವಿಶಿಷ್ಟಾ ಮುನಿಸತ್ತಮಾಃ ।
ಗೌತಮಸ್ಯಾಶ್ರಮಂ ಪುಣ್ಯಂ ಯಯುಸ್ಸರ್ವೇ ಮಹತ್ತರಮ್ ॥೬॥

ಗೌತಮಸ್ಯ ತಪೋಯೋಗಾತ್ ಪ್ರಸಾದಾಚ್ಛಂಕರಸ್ಯ ಚ ।
ಆಶ್ರಮಸ್ತಸ್ಯ ವಿಪ್ರೇಂದ್ರಾಃ ಸುಭಿಕ್ಷಮಭವದ್ಭೃಶಮ್ ॥೭॥

ತೇ ಸಂಭೂಯ ಮುನಿಶ್ರೇಷ್ಠಂ ಗೌತಮಂ ಪ್ರಣಿಪತ್ಯ ಚ ।
ಪ್ರೋಚುಃ ಕ್ಲೇಶೇನ ಸಂಯುಕ್ತಾಃ ದ್ವಿಜಾಃ ಕಾರುಣಿಕಂ ಪ್ರತಿ ॥೮॥

ಭೂಮಿಯು ಆಹಾರಪದಾರ್ಥಗಳನ್ನು ದೊರೆಯಿಸಲಾರದಾಯಿತು; ಎಲ್ಲಾ ಪ್ರಾಣಿಗಳಿಗೂ ಬಹಳ ಹೆಚ್ಚಾದ ಹಶಿವೆಯ ಸಂಕಟವು ಪ್ರಾಪ್ತವಾಯಿತು. ||೩||

ಮಾನವರು ದುರಾಚಾರವುಳ್ಳವರಾಗಿ ಕೆಲವರು ಮನುಷ್ಯರನ್ನೂ ಕೊಂದು ತಿಂದರು, ಕೆಲವರು ದನಗಳನ್ನೂ, ಕೆಲವರು ಆಡುಕುರಿಗಳನ್ನೂ, ಮತ್ತೆ ಕೆಲವರು ಅಜ್ಞಾನದಿಂದ ಕುದುರೆ ಆನೆಗಳನ್ನೂ ಅವರವರ ಶಕ್ತಿಗೆ ಸಾಧ್ಯವಾದುದನ್ನೆಲ್ಲವನ್ನೂ ಕೊಂದು ತಿನ್ನುವವರಾದರು. ||೪-೫||

ಓ ಋಷಿಶ್ರೇಷ್ಠರಾ, ಶಿಷ್ಟರಾದ ಕೆಲವರು ಬ್ರಾಹ್ಮಣರು ಎಲ್ಲವನ್ನೂ ವಿಮರ್ಶೆ ಮಾಡಿ ಪುಣ್ಯಫಲವಾಗಿರುವ ಗೌತಮಋಷಿಯ ಶ್ರೇಷ್ಠವಾದ ಆಶ್ರಮವನ್ನು ಪಡೆದು ಅಲ್ಲಿ ನೆಲಸಿದರು. ಗೌತಮಋಷಿಯ ತಪಸ್ಸಿನ ಸಂಬಂಧದಿಂದಲೂ, ಶ್ರೀ ಪರಶಿವನ ಅನುಗ್ರಹದಿಂದಲೂ, ಆತನ ಆಶ್ರಮವು ಸುಭಿಕ್ಷದಿಂದ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ಒದಗಿಸಿಕೊಡಬಲ್ಲುದಾಗಿತ್ತು. ||೬-೭||

ಆ ಋಷಿಗಳೆಲ್ಲರೂ ಒಟ್ಟು ಗೂಡಿ ಗೌತಮಋಷಿಗೆ ನಮಸ್ಕರಿಸಿ, ಕರುಣಾ ಶಾಲಿಯಾದ ಗೌತಮನನ್ನು ಕುರಿತು ಕ್ಲೇಶವುಳ್ಳವರಾಗಿ ಹೀಗೆ ಹೇಳಿದರು:— ಮಹಾಮಹಿಮಶಾಲಿಯಾದ, ಪರಶಿವನ ಪ್ರೀತಿಗೆ ಪಾತ್ರನಾದ, ಪರರಿಗೆ ಹಿತಾಚರಣೆ ಯಲ್ಲಿಯೇ ಆಸಕ್ತಿಯುಳ್ಳ, ಓ ಗೌತಮ ಮಹರ್ಷಿಯೇ, ನಾವೆಲ್ಲರೂ ಹಶಿವೆಯಿಂದ

ವಯಂ ಕ್ಷುತ್ಪೀಡಿತಾಸ್ಸರ್ವೇ ಭಗವನ್ ಭವವಲ್ಲಭ ।
ಕೇವಲಂ ಕೃಪಯೈವಾಸ್ಮಾನ್ ರಕ್ಷ ರಕ್ಷ ಹಿತೇ ರತ ॥೯॥

ಇತಿ ವಿಜ್ಞಾಪಿತಃ ಶ್ರೀಮಾನ್ ಮಹಾಕಾರುಣಿಕೋತ್ತಮಃ ।
ಗೌತಮಸ್ಸರ್ವವಿಪ್ರಾಣಾಂ ಅಭಯಂ ದತ್ತವಾನ್ ಪ್ರಭುಃ ॥೧೦॥

ಪುತ್ರಭಾರ್ಯಾವಿಯುಕ್ತಾನಾಂ ವಿಪ್ರಾಣಾಂ ಗೌತಮೋ ಮುನಿಃ ।
ದದೌ ಧಾನ್ಯಂ ಧನಂ ವಸ್ತ್ರಂ ತಿಲಂ ತೈಲಂ ಚ ಗಾಮಪಿ ॥೧೧॥

ಅನ್ನಾನಿ ಯಾನಿ ಜಂತೂನಾಂ
ಇಷ್ಟಾನಿ ಸಕಲಾನಿ ತು ।
ತಾನಿ ತೇಷಾಂ ಮುನಿಃ ಶ್ರೀಮಾನ್
ದದೌ ಕಾರುಣಿಕೋತ್ತಮಃ ॥೧೨॥

ಆಧಿವ್ಯಾಧ್ಯಸ್ತ್ರಶಸ್ತ್ರಾದಿಪೀಡಾಶ್ಚ ವಿವಿಧಾ ದ್ವಿಜಾಃ ।
ನಿವಾರಿತಾ ಮುನೀಂದ್ರೇಣ ಗೌತಮೇನ ದ್ವಿಜನ್ಮನಾಮ್ ॥೧೩॥

ಸಂಕಟವುಳ್ಳವರಾಗಿದೇವೆ. ಕೇವಲ ಕೃಪೆಯಿಂದಲೇ ನಮ್ಮನ್ನು ನೀನು ಕಾಪಾಡು. ||೮-೯||

ತುಂಬ ದಯಾಳುಗಳಲ್ಲಿ ಶ್ರೇಷ್ಠನಾದ ತೇಜಸ್ವಿಯಾದ ಸಮರ್ಥನಾದ ಆ ಗೌತಮ ಮಹರ್ಷಿಯು ಋಷಿಗಳಿಂದ ಹೀಗೆ ವಿಜ್ಞಾಪಿಸಲ್ಪಟ್ಟವನಾಗಿ ಆ ಋಷಿಗಳಿಗೆಲ್ಲರಿಗೂ ಅಭಯದಾನವನ್ನು ಮಾಡಿದನು. ಹೆಂಡಿರು ಮಕ್ಕಳಿಂದ ಕೂಡಿರುವ ಆ ಋಷಿಗಳಿಗೆ ಗೌತಮ ಮಹರ್ಷಿಯು ದವಸವನ್ನೂ, ಹಣವನ್ನೂ, ವಸ್ತ್ರಗಳನ್ನೂ, ಯಳ್ಳು, ಎಣ್ಣೆ ಇವುಗಳನ್ನೂ ಹಸುವನ್ನೂ ಕೊಟ್ಟನು. ||೧೦-೧೧||

ದಯಾಳುಗಳಲ್ಲಿ ಶ್ರೇಷ್ಠನಾದ ಸಂಪದ್ಯುಕ್ತನಾದ ಆ ಗೌತಮ ಮಹರ್ಷಿಯು ಅವರಿಗೆಲ್ಲರಿಗೂ ಪ್ರಾಣಿಗಳಿಗೂ ಬೇಕಾದ ಇತರ ಎಲ್ಲ ವಸ್ತುಗಳನ್ನೂ ಒದಗಿಸಿ ಕೊಟ್ಟನು. ||೧೨||

ಓ ಋಷಿಗಳೇ, ಆ ಬ್ರಾಹ್ಮಣರಿಗೆ ಉಂಟಾಗಿದ್ದ ಮನೋರೋಗ, ಶರೀರರೋಗ, ಮಂತ್ರಾಸ್ತ್ರಗಳು, ಆಯುಧಗಳು ಇವುಗಳಿಂದ ಆಗಿದ್ದ ನಾನಾವಿಧವಾದ ವೇದನೆಗಳನ್ನು ಮುನಿಶ್ರೇಷ್ಠನಾದ ಗೌತಮನು ನಿವಾರಿಸಿದನು. ಅಲ್ಲದೆ ಓ ಋಷಿ

ಶ್ರೌತಸ್ಮಾರ್ತಸದಾಚಾರಾ ಉಪದಿಷ್ಟಾ ದ್ವಿಜನ್ಮನಾಮ್ ।
ಗೌತಮೇನ ಮುನೀಂದ್ರೇಣ ಮುನೀಂದ್ರಾಃ ಕರುಣಾಬಲಾತ್ ॥೧೪॥

ಏವಂ ಚಿರಗತೇ ಕಾಲೇ ಗೌತಮಸ್ಯ ಮಹಾತ್ಮನಃ ।
ತಪಸಾ ಕೇವಲಂ ಭೂಮಿಸ್ಸುಭಿಕ್ಷಾಽಭವದಾಸ್ತಿಕಾಃ ॥೧೫॥

ಬ್ರಾಹ್ಮಣೈಶ್ಚ ಪುನಸ್ಸರ್ವೈಃ ಗೌತಮೇನ ಸುರಕ್ಷಿತೈಃ ।
ವಿಚಾರ್ಯ ಕಾರ್ಯಂ ಸಂಭೂಯ ಸ್ವದೇಶಗಮನಾಯ ವೈ ॥೧೬॥

ಗೌಃ ಹತಾ ಗೌತಮೇನೇತಿ ನಿರ್ಘೃಣೈಃ ಪುರುಷಾಧಮೈಃ ।
ಕೃತೋ ಮಿಥ್ಯಾಽಭಿಶಾಪಸ್ತು ಮಹಾಮೋಹವಶೇನ ತು ॥೧೭॥

ತಂ ಶ್ರುತ್ವಾ ಸ ಮುನಿಶ್ರೇಷ್ಠಃ
ಗೌತಮೋ ಮುನಿಸತ್ತಮಾಃ ।
ಮಹಾಕ್ರೋಧೇನ ಸಂಯುಕ್ತಃ
ಶಶಾಪ ಬ್ರಾಹ್ಮಣಾಧಮಾನ್ ॥೧೮॥

ಶ್ರೇಷ್ಠರಾ, ಶ್ರುತಿಗಳಲ್ಲೂ ಸ್ಮೃತಿಗಳಲ್ಲೂ ಹೇಳಿರುವ ಒಳ್ಳೆಯ ಆಚರಣೆಗಳನ್ನೂ ಮುನಿಶ್ರೇಷ್ಠನಾದ ಗೌತಮನು ದಯಾಪರವಶನಾಗಿ ಅವರಿಗೆ ಉಪದೇಶಿಸಿದನು. ॥೧೩-೧೪॥

ಈ ರೀತಿಯಲ್ಲಿ ಬಹುಕಾಲವು ಕಳೆಯುತ್ತಿರಲು ಮಹಾತ್ಮನಾದ ಗೌತಮನ ತಪಸ್ಸಿನ ಬಲದಿಂದಲೇ ಆ ತಪೋವನಭೂಮಿಯು ತುಂಬಿದ ಆಹಾರಪದಾರ್ಥವುಳ್ಳದ್ದಾಗಿತ್ತು. ಹೀಗೆ ಗೌತಮನಿಂದ ಕಾಪಾಡಲ್ಪಟ್ಟಿದ್ದ ಋಷಿಗಳೆಲ್ಲರೂ ತಮ್ಮ ದೇಶವನ್ನು ಕುರಿತು ಪ್ರಯಾಣಮಾಡಲು ಮಾಡಬೇಕಾದ ಕೆಲಸವನ್ನು ಎಲ್ಲರೂ ಒಟ್ಟುಸೇರಿ ವಿಮರ್ಶಿಸಿದರು, ಅಸೂಯೆಯಿಂದ ಅಜ್ಞಾನಕ್ಕೆ ಪರವಶರಾಗೋಣದರಿಂದ ದಯಾಶೂನ್ಯರಾದ ನೀಚಮನುಷ್ಯರಾದ ಆ ಋಷಿಗಳು ಗೌತಮನು ಹಸುವನ್ನು ಕೊಂದನೆಂದು ಸುಳ್ಳಾದ ಅಪವಾದವನ್ನುಂಟುಮಾಡಿ ಹರಡಿದರು. ॥೧೫-೧೬-೧೭॥

ಆ ಅಪವಾದವನ್ನು ಕೇಳಿ ತೇಜಸ್ವಿಯಾದ ಆ ಋಷಿಶ್ರೇಷ್ಠನಾದ ಗೌತಮ ಮುನಿಯು, ಹೆಚ್ಚಾದ ಕೋಪದಿಂದ ಕೂಡಿದವನಾಗಿ ಆ ನೀಚರಾದ ಬ್ರಾಹ್ಮಣರನ್ನು ಕುರಿತು ಹೀಗೆ ಶಾಪವನ್ನು ಕೊಟ್ಟನು. ॥೧೮॥

|| ಗೌತಮ ಉವಾಚ ||

ಮಹಾದೇವಸ್ವರೂಪೇ ಚ ಮಹಾದೇವಸ್ಯ ವಿಗ್ರಹೇ ।
ಮಹಾದೇವಸ್ಯ ಭಕ್ತೌ ಚ ಮಹಾದೇವಸ್ಯ ನಾಮ್ನಿ ಚ ||೧೯||

ಮಹಾದೇವಸ್ಯ ವಿಜ್ಞಾನೇ ಮಹಾದೇವಪರಿಗ್ರಹೇ ।
ಮಹಾದೇವಸ್ಯ ಚ ಸ್ಥಾನೇ ಮಹಾದೇವಸ್ಯ ಕೀರ್ತನೇ ||೨೦||

ಮಹಾದೇವಾಯ ದಾನೇ ಚ ಮಹಾದೇವಾಶ್ರಯೇಷು ಚ ।
ಮಹಾದೇವಸ್ಯ ಚೋತ್ಕರ್ಷೇ ತ್ರಿಪುಂಡ್ರೋದ್ಧೂಳನಾದಿಷು ||೨೧||

ರುದ್ರಾಕ್ಷಧಾರಣೇ ನಿತ್ಯಂ ರುದ್ರಸ್ಯೈವ ತು ಪೂಜನೇ ।
ರುದ್ರಾಲಯದಿದೃಕ್ಷಾಯಾಂ ರುದ್ರಯಾತ್ರಾದಿಕರ್ಮಸು ||೨೨||

ಯದ್ಯತ್ತು ರುದ್ರಸಂಬಂಧಿ ತತ್ರತತ್ರಾಪಿ ದುರ್ಜನಾಃ ।
ಭವತಾಸುಸ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ||೨೩||

ಮಹಾದೇವನ ನಿಜಸ್ವರೂಪದ, ಅವನ ಶರೀರದ, ಭಕ್ತಿಯ, ನಾಮಗಳ, ತಿಳಿವಳಿಕೆಯ, ಅವನನ್ನು ಉಪಾಸ್ಯದೈವವೆಂದು ಸ್ವೀಕರಿಸುವುದರ, ಅವನ ವಾಸ ಸ್ಥಾನವಾದ ಕೈಲಾಸದ, ಮಹಾದೇವನು ಅಭಿವ್ಯಕ್ತನಾಗುವ ಲಿಂಗಾದಿಸ್ಥಾನದ, ಈ ವಿಷಯಗಳಲ್ಲಿಯೂ ಎಲೈ ನೀಚರೇ, ಶ್ರದ್ಧೆಯಿಲ್ಲದೆ ಹೋಗುವವರಾಗಿರಿ! ಎಂದು ಶಾಪವನ್ನು ಕೊಟ್ಟನು. ||೧೯-೨೦||

ಅಲ್ಲದೆ ಮಹಾದೇವನ ಹೆಸರಿನಲ್ಲಿ ದಾನಮಾಡುವುದು, ಮಹಾದೇವನನ್ನು ನಂಬಿ ಆಶ್ರಯಿಸಿರುವ ಭಕ್ತರು, ಮಹಾದೇವನ ಸರ್ವೋತ್ತಮತ್ವ, ತ್ರಿಪುಂಡ್ರಭಸ್ಮೋದ್ಧೂಳನ, ರುದ್ರಾಕ್ಷಿಯನ್ನು ಧರಿಸುವುದು, ಪ್ರತಿದಿನವೂ ರುದ್ರನನ್ನು ಪೂಜಿಸುವುದು, ರುದ್ರದೇವಾಲಯಗಳನ್ನು ದರ್ಶನಮಾಡುವುದು, ಶೈವಕ್ಷೇತ್ರಗಳ ಯಾತ್ರೆಯನ್ನು ಮಾಡುವುದು, ಮತ್ತು ರುದ್ರನಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲೂ, ಓ ನೀಚ ಬ್ರಾಹ್ಮಣರಾ, ನೀವು ಆದರವಿಲ್ಲದೆ ಪರಾಙ್ಮುಖರಾದವರು ಆಗಿರಿ! ಎಂದು ಗೌತಮನು ಶಾಪವನ್ನು ಕೊಟ್ಟನು. ||೨೧-೨೨-೨೩||

ನಿತ್ಯಕರ್ಮಾದ್ಯನುಷ್ಠಾನೇ ತಥಾ ಕಾಮ್ಯವಿವರ್ಜನೇ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೨೪॥

ಸ್ವಾಧ್ಯಾಯೇ ಚ ಜಪೇ ಚೈವ ತಥಾ ಪ್ರವಚನೇಽಪಿ ಚ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೨೫॥

ಶಾಂತಿದಾಂತ್ಯಾದಿವಿಜ್ಞಾನಸಾಧನೇಷು ದ್ವಿಜಾಧಮಾಃ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೨೬॥

ನಾನಾವಿಧೇಷು ದಾನೇಷು ಯಜ್ಞೇಷು ವಿವಿಧೇಷು ಚ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೨೭॥

ಕೃಚ್ಛ್ರಚಾಂದ್ರಾಯಣಾದೌ ಚ ತಥಾ ಮಾಸೋಪವಾಸಕೇ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೨೮॥

ವೇದಭಕ್ತೌ ತಥಾಽಽಸ್ತಿಕ್ಯೇ ಯೋಗಾಂಗೇಷು ಯಮಾದಿಷು ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೨೯॥

"ಸ್ನಾನಂ ಸಂಧ್ಯಾ ಜಪೋ ಹೋಮಃ ದೇವತಾನಾಂ ಚ ಪೂಜನಂ । ಆತಿಥ್ಯಂ ವೈಶ್ವದೇವಶ್ಚ ಷಟ್ಕರ್ಮಾಣಿ ದಿನೇ ದಿನೇ ॥" ಎಂದು ಹೇಳಿರುವ ಸಂಧ್ಯಾದಿ ನಿತ್ಯಕರ್ಮಗಳನ್ನು ಮಾಡುವುದರಲ್ಲೂ, ಜ್ಯೋತಿಷ್ಟೋಮ, ಚಿತ್ರಾಯಾಗ ಮುಂತಾದ ಕಾಮ್ಯಕರ್ಮಗಳನ್ನು ಬಿಡುವುದರಲ್ಲೂ, ವೇದಾಧ್ಯಯನದಲ್ಲೂ, ಜಪದಲ್ಲೂ, ಶಿಷ್ಯರಿಗೆ ವಿದ್ಯಾಬೋಧನದಲ್ಲೂ, ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನ ಗಳೆಂಬ ಜ್ಞಾನಸಾಧನಗಳಲ್ಲೂ, ನಾನಾಪ್ರಕಾರವಾದ ದಾನಗಳಲ್ಲೂ, ನಾನಾವಿಧ ವಾದ ಯಜ್ಞಗಳಲ್ಲೂ, ಕೃಚ್ಛ್ರ, ಚಾಂದ್ರಾಯಣ, ಮಾಸೋಪವಾಸ ಮುಂತಾದ ಪ್ರಾಯಶ್ಚಿತ್ತಗಳಲ್ಲೂ ಓ ನೀಚರಾದ ಬ್ರಾಹ್ಮಣರಾ, ನಿಮಗೆ ಆದರ ಉಂಟಾಗದೆ ಹೋಗಲಿ. ॥೨೪-೨೫-೨೬-೨೭-೨೮॥

ವೇದದಲ್ಲಿ ಪ್ರಾಮಾಣ್ಯವಿಶ್ವಾಸವೂ, ಆಸ್ತಿಕ್ಯದಲ್ಲಿ ನಂಬಿಕೆಯೂ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಗಳೆಂಬ ಯೋಗದ ಅಂಗಗಳಲ್ಲೂ, ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ಹೇಳಿರುವ ಎಲ್ಲ

ಶ್ರುತಿಸ್ಮೃತಿಪುರಾಣೋಕ್ತೇಷ್ವರ್ಥೇಷು ಸಕಲೇಷು ಚ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೩೦॥

ಸ್ವದಾರಗಮನೇ ಷ್ವೇವ ಪರದಾರವಿವರ್ಜನೇ ।
ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ ॥೩೧॥

ವಿಷ್ಣ್ವಾದಿದೇವತಾಸ್ಸರ್ವಾ ವಿಶಿಷ್ಟಾಶ್ಶಂಕರಾದಿತಿ ।
ಭ್ರಾಂತಿವಿಜ್ಞಾನಸಂಪನ್ನಾ ಭವತ ಬ್ರಾಹ್ಮಣಾಧಮಾಃ ॥೩೨॥

ಶಂಖಚಕ್ರಗದಾಪದ್ಮದಂಡಪಾಶಾಂಕುಶಾದಿಭಿಃ ।
ಅಂಕಿತಾಶ್ಶ್ರದ್ಧಯಾ ಯೂಯಂ ಭವತ ಬ್ರಾಹ್ಮಣಾಧಮಾಃ ॥೩೩॥

ನಿಹೀನಜಾತಿನಾಮ್ನಾ ತು ರೂಪೇಣ ಚ ತಥೈವ ಚ ।
ಅಂಕಿತಾಶ್ಶ್ರದ್ಧಯಾ ಯೂಯಂ ಭವತ ಬ್ರಾಹ್ಮಣಾಧಮಾಃ ॥೩೪॥

ವರ್ತುಳಾಶ್ವತ್ಥಪತ್ರಾರ್ಧ ಚಂದ್ರಶೂಲಾದಿಲಿಂಗಿನಃ ।
ಭವತ ಶ್ರದ್ಧಯಾ ಸಾರ್ಧಂ ಲಲಾಟೇ ಬ್ರಾಹ್ಮಣಾಧಮಾಃ ॥೩೫॥

ವಿಷಯಗಳಲ್ಲೂ, ನಿಮ್ಮ ಸ್ವ(ವಿವಾಹಿತರಾದ) ಸ್ತ್ರೀಯರಲ್ಲಿ ಮಾತ್ರ ಸಮಾಗಮ ಮಾಡುವುದರಲ್ಲೂ, ಇತರರ ಸ್ತ್ರೀಯರನ್ನು ಬಿಡುವುದರಲ್ಲೂ, ಓ ನೀಚ ಬ್ರಾಹ್ಮಣರಾ, ನಿಮಗೆ ಆದರವಿಲ್ಲದೆಹೋಗಲಿ. ವಿಷ್ಣು ಮುಂತಾದ ದೇವತೆಗಳು ಶಂಕರನಿಗಿಂತ ಮೇಲಾದ ದೇವತೆಗಳೆಂಬ ಭ್ರಾಂತಿಜ್ಞಾನದಿಂದ ಕೂಡಿದವರಾಗಿರಿ! ಎಂದು ಗೌತಮನು, ಶಾಪವನ್ನು ಕೊಟ್ಟನು. ಇಂತಹ ಸಂದರ್ಭಗಳಲ್ಲಿ ವಿಷ್ಣು ಮುಂತಾದ ದೇವತೆಗಳ, ವೈಷ್ಣವ ಮುಂತಾದ ಮತಗಳ, ನಿಂದೆಯಲ್ಲಿ ತಾತ್ಪರ್ಯವಿಲ್ಲವು "ನ ಹಿ ನಿಂದಾ" ನ್ಯಾಯದಿಂದ ಶಂಕರಪಾರಮ್ಯವನ್ನು ಹೇಳುವುದರಲ್ಲಿ ತಾತ್ಪರ್ಯವೆಂಬ ಅಂಶವನ್ನು ಮರೆಯಬಾರದು. ॥೨೯-೩೦-೩೧-೩೨॥

ಓ ನೀಚರಾದ ಬ್ರಾಹ್ಮಣರಾ, ನೀವು ಶಂಖ, ಚಕ್ರ, ಗದಾ, ಪದ್ಮ, ದಂಡ, ಪಾಶ, ಅಂಕುಶ ಮೊದಲಾದವುಗಳಿಂದ ತಪ್ತಮುದ್ರಾಂಕಿತರಾಗಿರಿ; ನೀಚಜಾತಿಯವರ ಹೆಸರಿನಿಂದಲೂ ರೂಪದಿಂದಲೂ ನಂಬಿಕೆಯಾದ ಗುರುತುಮಾಡಲ್ಪಟ್ಟವರಾಗಿರಿ. ದುಂಡಾದ ಅರಳಿಯೆಲೆಯಹಾಗೆ, ಅರ್ಧಚಂದ್ರನಹಾಗೆ, ಶೂಲದ ಹಾಗೂ

ಪಿತೃಮಾತೃಸುತಭ್ರಾತೃಭಾರ್ಯಾವಿಕ್ರಯಿಣಸ್ಸದಾ ।
ಬಂಧುವಿಕ್ರಯಿಣಸ್ತದ್ವತ್ ಭವತ ಬ್ರಾಹ್ಮಣಾಧಮಾಃ ॥೩೬॥

ವೇದವಿಕ್ರಯಿಣಸ್ತದ್ವತ್ ತೀರ್ಥವಿಕ್ರಯಿಣಸ್ತಥಾ ।
ಧರ್ಮವಿಕ್ರಯಿಣಸ್ತದ್ವತ್ ಭವತ ಬ್ರಾಹ್ಮಣಾಧಮಾಃ ॥೩೭॥

ಸುರಾವಿಕ್ರಯಿಣಸ್ತದ್ವನ್ಮಾಂಸವಿಕ್ರಯಿಣಸ್ತಥಾ ।
ಮತ್ಸ್ಯವಿಕ್ರಯಿಣಸ್ತದ್ವದ್ಭವತ ಬ್ರಾಹ್ಮಣಾಧಮಾಃ ॥೩೮॥

ಪಾಂಚರಾತ್ರೇ ಚ ಕಾಪಾಲೇ ತಥಾ ಕಾಲಾಮುಖೇಽಪಿ ಚ ।
ಶಾಕ್ತೇ ಚ ದೀಕ್ಷಿತಾ ಯೂಯಂ ಭವತ ಬ್ರಾಹ್ಮಣಾಧಮಾಃ ॥೩೯॥

ಶಾಬ್ದೇ ಬಾರ್ಹಸ್ಪತೇ ಚೈವ ತಥಾ ಪಾಶುಪತೇಽಪಿ ಚ ।
ಶಾಂಭವೇ ದೀಕ್ಷಿತಾ ಯೂಯಂ ಭವತ ಬ್ರಾಹ್ಮಣಾಧಮಾಃ ॥೪೦॥

ಪಾಷಂಡೇಷು ತಥಾಽನ್ಯೇಷು ಮಾರ್ಗೇಷ್ವಶ್ರೌತಕೇಷು ಚ ।
ಶ್ರದ್ಧಯಾ ದೀಕ್ಷಿತಾ ಯೂಯಂ ಭವತ ಬ್ರಾಹ್ಮಣಾಧಮಾಃ ॥೪೧॥

ಗುರುತುಗಳುಳ್ಳವರಾಗಿರಿ. ತಂದೆ, ತಾಯಿ, ಮಕ್ಕಳು, ಸಹೋದರರು, ಹೆಂಡಿತಿ ಮುಂತಾದವರನ್ನು ಯಾವಾಗಲೂ ಮಾರುವವರಾಗಿರಿ. ಹಾಗೆಯೇ ನೆಂಟರನ್ನು ಮಾರುವವರೂ ಆಗಿರಿ. ವೇದಾಧ್ಯಯನವನ್ನೂ ತೀರ್ಥಯಾತ್ರಾಫಲವನ್ನೂ ಧರ್ಮಾಚರಣೆಯ ಫಲವನ್ನೂ ಮಾರುವವರಾಗಿರಿ. ||೩೩-೩೪-೩೫-೩೬-೩೭||

ಓ ನೀಚಬ್ರಾಹ್ಮಣರಾ, ನೀವು ಮಾಂಸ, ಮದ್ಯ, ಮೀನು ಮುಂತಾದವುಗಳನ್ನು ಮಾರುವವರಾಗಿರಿ. ||೩೮||

ಪಾಂಚರಾತ್ರಾಗಮದಲ್ಲೂ, ಕಾಪಾಲಿಕಮತದಲ್ಲೂ, ಕಾಲಾಮುಖಮತದಲ್ಲೂ, ಶಾಕ್ತೇಯಮತದಲ್ಲೂ, ವೈಯಾಕರಣರ ಸ್ಫೋಟನಿತ್ಯವಾದಿಗಳ ಮತದಲ್ಲೂ, ಬೃಹಸ್ಪತಿಯು ಪ್ರಚಾರಮಾಡಿದ ಚಾರ್ವಾಕಮತದಲ್ಲೂ, ಪಾಶುಪತಮತದಲ್ಲೂ, ಶಾಂಭವಮತದಲ್ಲೂ, ಶ್ರದ್ಧೆಯುಳ್ಳವರಾಗಿ ಓ ನೀಚಬ್ರಾಹ್ಮಣರಾ, ದೀಕ್ಷೆಯುಳ್ಳವರಾಗಿರಿ. ||೩೯-೪೦||

ಪಾಷಂಡರ ಮತ್ತು ಇತರ ವೇದೋಕ್ತವಲ್ಲದ, ವೇದವನ್ನು ಪ್ರಮಾಣವೆಂದು ಒಪ್ಪದ, ಮತಗಳಲ್ಲಿ ಆದರದಿಂದ ನೀವು ನೀಚಬ್ರಾಹ್ಮಣರಾಗಿರಿ. ನಿಮ್ಮ ವಂಶದಲ್ಲಿ

ಯುಷ್ಮಾಕಂ ವಂಶಜಾತಾಶ್ಚ ಸರ್ವೇ ಸ್ತ್ರೀಭಿಸ್ಸಹ ದ್ವಿಜಾಃ ।
ಮದುಕ್ತಾರ್ಥಪ್ರಕಾರೇಣ ಭವಂತು ಬ್ರಾಹ್ಮಣಾಧಮಾಃ ॥೪೨॥

ಬಹುನೋಕ್ತೇನ ಕಿಂ ಸಾಕ್ಷಾತ್ ಶಿವೇ ಸಂಸಾರಮೋಚಕೇ ।
ತತ್ಸಂಬಂಧಿಷು ಸರ್ವೇಷು ಶ್ರುತಿಸ್ಮೃತ್ಯಾದಿಕೇಷು ಚ ॥೪೩॥

ಯುಷ್ಮಾಕಂ ವಂಶಜಾತಾನಾಂ ಯುಷ್ಮಾಕಂ ಚ ತಥೈವ ಚ ।
ಶ್ರದ್ಧಾಽಭಾವಸ್ತಥೈವಾಸ್ತು ಶಾಪಸ್ತೀವ್ರಃ ಕೃತೋ ಮಯಾ ॥೪೪॥

ಏವಂ ಮುನೀಂದ್ರೇಣ ಕೃತೇ ಚ ಶಾಪೇ
ದ್ವಿಜಾಧಮಾಶ್ಚಾಪಿ ತದಾಜ್ಞಯೈವ ।
ತಥಾಽಭವಂಸ್ತತ್ಕುಲಜಾಶ್ಚ ಸರ್ವೇ
ಸ್ವಭಾವಜೋ ಹ್ಯೇಷಮುನೇಃ ಪ್ರಭಾವಃ ॥೪೫॥

ಶ್ರದ್ಧಾಽಭಾವಸ್ತೇನ ಜಾತೋ ನರಾಣಾಂ
ಸಾಕ್ಷಾದ್ರುದ್ರೇ ತಸ್ಯ ಧರ್ಮೇ ಚ ವಿಪ್ರಾಃ ।
ತಸ್ಮಾದ್ವಿದ್ವಾಂಸ್ತದ್ವಿನಾಶಾಯ ಸಾಕ್ಷಾತ್
ರುದ್ರಂ ನಿತ್ಯಂ ಪೂಜಯೇಚ್ಛ್ರದ್ಧಯೈವ ॥೪೬॥

ಹುಟ್ಟುವ ಎಲ್ಲ ಬ್ರಾಹ್ಮಣರೂ ಹೆಂಗಸರೂ ಕೂಡ ನಾನು ಹೇಳಿದಂತೆ ನೀಚಬ್ರಾಹ್ಮಣರಾಗಲಿ. ॥೪೧-೪೨॥

ಹೆಚ್ಚು ಹೇಳಿ ಏನು? ನೇರವಾಗಿ ಸಂಸಾರಬಂಧದಿಂದ ಬಿಡುಗಡೆಯನ್ನುಂಟು ಮಾಡುವ ಪರಶಿವನಲ್ಲೂ, ಆ ಪರಶಿವನನ್ನು ಬೋಧಿಸುವ ವೇದ, ಸ್ಮೃತಿ ಮುಂತಾದ ಶಾಸ್ತ್ರಗಳಲ್ಲೂ ನಿಮಗೂ ನಿಮ್ಮ ವಂಶದಲ್ಲಿ ಹುಟ್ಟುವವರಿಗೂ ಹಾಗೆಯೇ ಭಕ್ತಿವಿಶ್ವಾಸಗಳು ಉಂಟಾಗದೆ ಹೋಗಲಿ. ಹೀಗೆಂದು ನಾನು ಕಠಿನವಾದ ಶಾಪವನ್ನು ಕೊಟ್ಟಿದೇನೆ—ಎಂದು ಗೌತಮನು ಹೇಳಿದನು. ॥೪೩-೪೪॥

ಈ ರೀತಿಯಾಗಿ ಮುನಿಶ್ರೇಷ್ಠನಾದ ಗೌತಮನು ಶಾಪವನ್ನು ಕೊಡಲು, ಆ ನೀಚರಾದ ಬ್ರಾಹ್ಮಣರೂ ಅವರ ವಂಶೀಯರೂ ಅವನ ಅಪ್ಪಣೆಯಂತೆ ಹಾಗೆಯೇ ಶ್ರದ್ಧೆಯಿಲ್ಲದವರಾದರು. ಈ ಮಹಿಮೆಯು ಗೌತಮಮುನಿಗೆ ಸ್ವಾಭಾವಿಕವಾದುದು. ಓ ಋಷಿಗಳೇ, ಆ ಕಾರಣದಿಂದ ನೇರವಾಗಿ ರುದ್ರನಲ್ಲೂ ಆ ದೇವರು

ತ್ರಿಪುಂಡ್ರಮುದ್ಧೂಳನಮಾಸ್ತಿಕೋತ್ತಮಾ-
ಸ್ಸಮಾಚರೇನ್ನಿತ್ಯಮತಂದ್ರಿತಸ್ತಥಾ ।
ವಿಶೇಷತಶ್ಶಾಂಕರವೇದನೇ ರತೋ
ಭವೇದಶೇಷಂ ಕಥಿತಂ ಮಯಾನಘ ॥೪೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಭಕ್ತ್ಯಭಾವಕಾರಣನಿರೂಪಣಂ ನಾಮ ದ್ವಾತ್ರಿಂಶಾಧ್ಯಾಯಃ

ಬೋಧಿಸಿರುವ ಧರ್ಮಾಚರಣೆಯಲ್ಲೂ ಶ್ರದ್ಧೆಯಿಲ್ಲದಿರುವಿಕೆಯು ಮನುಷ್ಯರಲ್ಲಿ ಉಂಟಾಗುತ್ತದೆ. ಆದುದರಿಂದ ವಿವೇಕಿಯಾದವನು ಆ ಶ್ರದ್ಧೆಯಿಲ್ಲದಿರುವಿಕೆಯ ನಿವಾರಣೆಗಾಗಿ ರುದ್ರನನ್ನು ನೇರವಾಗಿ ಪ್ರತಿನಿತ್ಯವೂ ಭಕ್ತಿವಿಶ್ವಾಸಗಳೊಡನೆ ಪೂಜಿಸುತ್ತಿರಬೇಕು. ||೪೬||

ತ್ರಿಪುಂಡ್ರವನ್ನೂ ಭಸ್ಮೋದ್ಧೂಳನವನ್ನೂ, ಓ ಆಸ್ತಿಕರಲ್ಲಿ ಶ್ರೇಷ್ಠರಾದ ಬ್ರಾಹ್ಮಣರಾ, ಪ್ರತಿನಿತ್ಯವೂ ಜಾಗರೂಕತೆಯಿಂದ ಮನುಷ್ಯನು ಆಚರಿಸಬೇಕು. ಅದರಲ್ಲೂ ವಿಶೇಷವಾಗಿ ಪರಶಿವತತ್ತ್ವವನ್ನು ತಿಳಿಯುವುದರಲ್ಲಿ ಆಸಕ್ತಿಯುಳ್ಳವನಾಗಿರಬೇಕು. ಈ ಅಂಶವೆಲ್ಲವೂ ಸ್ವಲ್ಪವೂ ಬಿಡದೆ ನನ್ನಿಂದ ಹೇಳಲ್ಪಟ್ಟಿದೆ. ||೪೭||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಶಿವಭಕ್ತಿಯ ಅಭಾವಕ್ಕೆ ಕಾರಣವಿಶೇಷವನ್ನು ವಿವರಿಸಿರುವ
ಮೂವತ್ತೆರಡನೆಯ ಅಧ್ಯಾಯವು ಮುಗಿದುದು

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ತ್ರಯಸ್ತ್ರಿಂಶೋಽಧ್ಯಾಯಃ ||

ಮೂವತ್ತುಮೂರನೆಯ ಅಧ್ಯಾಯವು

(ಪರತತ್ತ್ವನಾಮವಿಚಾರಃ)

|| ಸೂತ ಉವಾಚ ||

ಅಥ ನಾಮಾನಿ ವಕ್ಷ್ಯಾಮಿ ಪರತತ್ತ್ವಸ್ಯ ಸುವ್ರತಾಃ ।
ಯಾನಿ ಸಂಕೀರ್ತಯನ್ ಮರ್ತ್ಯಃ ವಿಮುಕ್ತಿಫಲಭಾಗ್ಭವೇತ್ ॥೧॥

ಶಿವೋ ರುದ್ರೋ ಮಹಾದೇವಶ್ಶಂಕರೋ ಬ್ರಹ್ಮ ಸತ್ಪರಮ್ ।
ಶಂಭುರೀಶಾನ ಈಶಶ್ಚ ಶೂಲೀ ಚಂದ್ರಕಳಾಧರಃ ॥೨॥

ಶರ್ವಃ ಪಶುಪತಿಸ್ಸಾಕ್ಷೀ ಹರಶ್ಶ್ರೀಕಂಠ ಅದ್ಭುತಃ ।
ಉಗ್ರಃ ಕಪರ್ದೀ ಗಿರಿಶೋ ಭವಸ್ಸರ್ವಜ್ಞ ಈಶ್ವರಃ ॥೩॥

ಶ್ರುತಿಗುರುವಾಕ್ಯಗಳಲ್ಲಿ ಶ್ರದ್ಧಾಳುವಾಗಿರುವವನಾದರೂ ಶ್ರವಣಾಧಿಕಾರವಿಲ್ಲದವನಿಗೂ ಮೋಕ್ಷೋಪಾಯವನ್ನು ಹೇಳುತ್ತಾರೆ. ಅನಂತರದಲ್ಲಿ ಪರತತ್ತ್ವದ ನಾಮಗಳನ್ನು ಹೇಳುತ್ತೇನೆ. ಈ ನಾಮುಗಳನ್ನು ಪಾರಾಯಣಮಾಡುವ ಮಾನವನು ಮುಕ್ತಿಫಲವನ್ನು ಹೊಂದುತ್ತಾನೆ. ||೧||

ಶಿವನು ಪರಬ್ರಹ್ಮಸದ್ರೂಪವಾದವನು. 'ಸದೇವ ಸೌಮ್ಯೇದಮಗ್ರ ಆಸೀತ್' ಎಂದು ಶ್ರುತಿಯು. "ಬ್ರಹ್ಮವಿದಾಪ್ನೋತಿ ಪರಂ" ಎಂದು ಮುಂತಾದ ಶ್ರುತಿಗಳಲ್ಲಿ

ಉಮಾಪತಿಃ ಕಪರ್ದೀ ಚ ಭೂತೇಶಸ್ತ್ರಿಪುರಾಂತಕಃ ।
ಅಂತಕಾರಿಸ್ತ್ರಿಣೇತ್ರಶ್ಚ ದಕ್ಷಯಜ್ಞವಿನಾಶನಃ ॥೪॥

ಧೂರ್ಜಟಿರ್ವಾಮದೇವಶ್ಚ ಸ್ಥಾಣುಸ್ಸರ್ವವಿನಾಶಕಃ ।
ಸ್ರಷ್ಟಾ ಚ ಪಾಲಕಶ್ಚೈವ ತತಸ್ತತ್ಪುರುಷಃ ಪ್ರಭುಃ ॥೫॥

ವಾಮದೇವಃ ಕಪಾಲೀ ಚ ಸದ್ಯೋಜಾತಸಮುಸ್ಸುಖೀ ।
ಅಘೋರಶ್ಚ ಸುಘೋರಶ್ಚ ಪ್ರಶಾಂತಃ ಪಾಪನಾಶಕಃ ॥೬॥

ಭವಾರಿರ್ಭೋಗದಃ ಪುಣ್ಯಃ ಕಾಮಧ್ವಂಸೀ ಕಪಿಂಜರಃ ।
ವ್ಯೋಮಕೇಶೋ ವಿಶಾಲಾಕ್ಷಃ ವಹ್ನಿರೇತಾ ವರಪ್ರದಃ ॥೭॥

ಭೀಮೋ ಭರ್ಗಃ ಪಿನಾಕೀ ಚ ವೃಷಾಂಕಃ ಕಾಲಕೂಟಹೃತ್ ।
ಕೃತ್ತಿವಾಸಾಃ ಕಿರಾತಶ್ಚ ಭಿಕ್ಷುಕೋ ಮೂಲಕಾರಣಮ್ ॥೮॥

ಅಹಿರ್ಬುಧ್ನ್ಯೋ ವಿರೂಪಾಕ್ಷೋ ವಿರೂಪೋ ವಿಶ್ವವೇಷಭೃತ್ ।
ಶಿಪಿವಿಷ್ಟೋ ಮಹಾದೇವಃ ಗಣೇಶಃ ಪಾರ್ವತೀಪತಿಃ ॥೯॥

ಮೃಡೋ ಮೇರುಧರೋ ಮೇಧಾ ಮಹಾಮಾಯೋ ಮಹೇಶ್ವರಃ ।
ಸರ್ವಾಧಿಷ್ಠಾನಮಾಧಾರಃ ಸರ್ವಾಧಿಕರಣಂ ಸ್ವರಾಟ್ ॥೧೦॥

ಸರ್ವೇಶ್ವರಸ್ಸರ್ವನಿಧಿಃ ಸರ್ವಾತ್ಮಾ ಸರ್ವಸಾಧಕಃ ।
ಸೇತುಸ್ಸೀಮಾಸಮುದ್ರಶ್ಚ ವಿಶಿಷ್ಟಶ್ಚ ವಿಧಾಕರಃ ॥೧೧॥

ಈ ಅಂಶವನ್ನು ಹೇಳಿದೆ. ಅಲ್ಲದೆ ಅಂತಕನನ್ನೂ, ಎಲ್ಲವನ್ನೂ ಪ್ರಳಯದಲ್ಲಿ ಸಂಹರಿಸುವ ಯಮನನ್ನೂ, ಕಡೆಗೆ ಸಂಹರಿಸುವವನು. ಕಠೋಪನಿಷತ್ ೨.೨೪. ಕಪಿಂಜರಃ ಎಂದರೆ ಪಿಂಗಳವರ್ಣದ ಜಡೆಗಳಿಂದ ಕೂಡಿರುವವನು. ಅಹಿರ್ಬುಧ್ನ್ಯಃ ಸರ್ಪಭೂಷಣನೂ, ಅಂತರಿಕ್ಷವಾಸಿಯೂ ಆಗಿರುವವನು, ಶಿಪಿವಿಷ್ಟಃ ರಶ್ಮಿಗಳಿಂದ ಆವರಿಸಲ್ಪಟ್ಟಿರುವವನು. ॥೨-೩-೪-೫-೬-೭-೮-೯॥

ಎಲ್ಲ ಪ್ರಪಂಚದ ತೋರಿಕೆಗೂ ಅಧಿಷ್ಠಾನರೂಪನಾದ, ಎಲ್ಲಕ್ಕೂ ಆಧಾರವಾಗಿರುವ, ಶುಕ್ತ್ಯವಚ್ಛಿನ್ನಚೈತನ್ಯವು ಅಧಿಷ್ಠಾನವೆಂದರೆ ತೋರುವ ಬೆಳ್ಳಿಗೆ ಶುಕ್ತಿ ಆಧಾರವಾಗಿದೆ. ಎಲ್ಲವನ್ನೂ ಆಳುವ, ಸ್ವಪ್ರಕಾಶವಾಗಿರುವ, ಎಲ್ಲಕ್ಕೂ ಒಡೆಯನಾದ,

ಜನ್ಮಾದಿಕಾರಣಂ ಹೇತುಶ್ಶಾಸ್ತ್ರಯೋನಿಸ್ಸುಖಾಸನಃ ।
ತತ್ಸಮಾನಾಧಿಕೋಽಸಂಗಃ ಆತ್ಮಾ ಚಾಮಲಸಾಧನಮ್ ॥೧೨॥

ಪುರಾಣಪುರುಷಃ ಪೂರ್ಣಃ ಅನಂತರೂಪಃ ಪುರಾತನಃ ।
ಸತ್ಯಂ ಜ್ಞಾನಸುಖಂ ಸಾಕ್ಷಾತ್ ಆಕಾಶಃ ಪ್ರಾಣ ಆಸ್ತಿಕಾಃ ॥೧೩॥

ಎಲ್ಲಕ್ಕೂ ನಿಧಿಯಂತೆ ಇರುವ, ಎಲ್ಲ ಪ್ರಪಂಚಕ್ಕೂ ಆತ್ಮನಾಗಿರುವ, ಎಲ್ಲ ಇಷ್ಟಾರ್ಥ ಪ್ರಾಪ್ತಿಗೂ ಸಹಾಯಕವಾದ, ಸೇತುವೆಯ ಹಾಗೆ ತಾರಕವಾಗಿರುವ ಮತ್ತು ಧಾರಣ ಸಾಮರ್ಥ್ಯವುಳ್ಳ ಎಲ್ಲಕ್ಕೂ ತಡೆಯಂತಿರುವ, ಸಮುದ್ರದ ಹಾಗೆ ಅಪಾರವಾದ, ಇತರ ದೇವತೆಗಳಿಗಿಂತ ವಿಶೇಷಗುಣವುಳ್ಳ, ವೈವಿಧ್ಯಕ್ಕೆ ಆಕರವಾದ, ಅಥವಾ ಪ್ರಪಂಚವಿಧಾರಕವಾದ ಪರಶಿವಮೂರ್ತಿಯು. ॥೧೦-೧೧॥

ಇರುವಿಕೆ, ಹುಟ್ಟುವಿಕೆ, ಬೆಳೆಯುವಿಕೆ, ಮಾರ್ಪಡುವಿಕೆ, ಕಡಿಮೆಯಾಗುವಿಕೆ, ಸಾಯುವಿಕೆ, ಎಂಬ ಆರು ವಿಧವಾದ ಭಾವಪದಾರ್ಥಗಳ ವಿಕಾರಕ್ಕೆ ಕಾರಣನಾದ, ಎಲ್ಲಕ್ಕೂ ಕಾರಣನಾದ, ಪ್ರವೃತ್ತಿನಿವೃತ್ತಿವಿಧಾಯಕವಾದ ಶ್ರುತ್ಯಾದಿಶಾಸ್ತ್ರಕ್ಕೆ ಕಾರಣನಾದ, "ಶಾಸ್ತ್ರಯೋನಿತ್ವಾತ್" ಬ್ರಹ್ಮಸೂತ್ರ ಅ. ೧. ಪಾ. ೧. ಸೂ. ೩. ದಲ್ಲಿ ಹೇಳಿರುವಂತೆ ಉಪನಿಷತ್ತೇ ಮೊದಲಾದ ವೇದಾಂತಶಾಸ್ತ್ರಗಳಿಂದ ತಿಳಿದು ಬರುವ, ಉಪಮಾನಾಂತರವಿಲ್ಲದೆ ತನಗೆತಾನೇ ಸದೃಶವಾಗಿರುವ, "ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ" ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿರುವಂತೆ ಸರ್ವಾಧಿಕತತ್ವ ಸ್ವರೂಪನಾದ, ತನ್ನಲ್ಲಿ ತಾನೇ ಸುಖವಾಗಿರುವ, ತನಗೆ ಸಮವೆಂದು ತೋರುವ ಎಲ್ಲವನ್ನೂ ಮೀರಿರುವ, ಸುಖ, ದುಃಖ, ಬಂಧಗಳಲೇಪವಿಲ್ಲದ ಎಲ್ಲವನ್ನೂ ಪಡೆದು ವ್ಯಾಪಿಸಿರುವ, ದೋಷವಿಲ್ಲದ ಮೋಕ್ಷಸಾಧನವೂ ಆದ ಶಿವಮೂರ್ತಿಯು. ॥೧೨॥

ಎಲ್ಲರಿಗೂ ಹಿಂದಿನವನಾದ, ಯಾವಾಗಲೂ ಮಾಸದೆ ಹೊಸದಾಗಿಯೇ ಇರುವ, ಉಪಾಸಕರ ಸೂಕ್ಷ್ಮಶರೀರದಲ್ಲಿ ಸಾಕ್ಷಾತ್ಕರಿಸಲು ದೊರೆಯುವ, ಎಲ್ಲೆಡೆಯಲ್ಲೂ ತುಂಬಿ ವ್ಯಾಪಿಸಿರುವ, ಔಪಾಧಿಕವಾದ ನಾನಾರೂಪಗಳಿಂದ ತೋರುವ, ಪ್ರಾಚೀನನೂ ನವೀನನೂ ಆಗಿರುವ, ಜ್ಞಾನಿಗಳ ಹೃದಯದಲ್ಲಿ ಸಚ್ಚಿದಾನಂದರೂಪನಾಗಿ ಸಾಕ್ಷಾತ್ಕಾರಕ್ಕೆ ದೊರೆಯುವ, ಸರ್ವಜ್ಞನೂ ಸರ್ವಶಕ್ತನೂ ಎಂದು ಎಲ್ಲೆಡೆಯಲ್ಲೂ ಪ್ರಕಾಶಿಸುತ್ತಿರುವ, ಎಲ್ಲೆಡೆಗಳಲ್ಲೂ ಎಲ್ಲವನ್ನೂ ನಡೆಯಿಸುವುದರಲ್ಲಿ ವ್ಯಾಪಕನಾದ ಇಂತಹ ಪರಶಿವಮೂರ್ತಿಯನ್ನು ಓ ಆಸ್ತಿಕರಾದ ಋಷಿಗಳೇ, ಧ್ಯಾನಮಾಡಿ. ॥೧೩॥

ಜ್ಯೋತಿಃ ಪ್ರಕಾಶಃ ಪ್ರಥಿತಃ ಸ್ವಯಂಭಾನಃ ಸ್ವಯಂಪ್ರಭಃ ।
ಸ್ವಪ್ರಕಾಶಃ ಸ್ವತಂತ್ರಶ್ಚ ಸ್ವಸ್ಥಃ ಸ್ವಾನುಭವೋಽಗಮಃ ॥೧೪॥

ಅತ್ತಾ ಚಾನಶನಶ್ಶಂಕುಃ ಪರಮಾತ್ಮಾ ಪರಾತ್ಪರಃ ।
ದೇವದೇವಶ್ಚ ದೇವೇಶಃ ಜಗನ್ನಾಥೋ ನಿರಂಜನಃ ॥೧೫॥

ನಿರ್ಭಯೋ ನಿರ್ಗುಣೋ ನಿತ್ಯೋ ನಿತ್ಯಾನಂದೋ ನಿರಾಮಯಃ ।
ವೇದೋ ವಿದಾಧಿರ್ವೇದಾಂತೋ ದೇವತಾ ಪರದೇವತಾ ॥೧೬॥

ಪತಿಃ ಪಾಶಹರಃ ಪಾರಃ ಪಾರಶೂನ್ಯಃ ಪ್ರಜಾಪತಿಃ ।
ಧಾತಾ ಧಾರಯಿತಾ ದೃಷ್ಟೋ ಧಾಮ ಧಾಮವಿವರ್ಜಿತಃ ॥೧೭॥

ಪ್ರಕಾಶರೂಪನಾದ, ಪ್ರಕಾಶಿಸುವ, ಪ್ರಸಿದ್ಧನಾದ, ತಾನೇ ತೋರುವ, ತಾನೇ ಎಲ್ಲವನ್ನೂ ಬೆಳಗುವ, ಇತರ ಪ್ರಕಾಶವನ್ನು ಅಪೇಕ್ಷಿಸದೆ ತೋರುವ, ಸ್ವತಂತ್ರನಾದ, ತನ್ನಲ್ಲಿಯೇ ತಾನಿರುವ, ಅರ್ಹರಾದ ಎಲ್ಲರಿಗೂ ಅನುಭವಕ್ಕೆ ಗೋಚರವಾಗುವ, ಸರ್ವವ್ಯಾಪಿಯಾಗಿರುವ ಚಲನವಿಲ್ಲದಿರುವ ರುದ್ರಮೂರ್ತಿಯು. ||೧೪||

ಎಲ್ಲವನ್ನೂ ಕಡೆಗೆ ಸಂಹರಿಸುವ, ತನಗೆ ಸಂಹಾರವಿಲ್ಲದ, ಶಂಕುವಿನ ಹಾಗೆ ಅಚಲವಾದ, ಎಲ್ಲರಿಗೂ ಆತ್ಮರೂಪನಾದ, ಶ್ರೇಷ್ಠರಿಗೆಲ್ಲರಿಗೂ ಶ್ರೇಷ್ಠನಾದ, ದೇವತೆಗಳಿಗೆಲ್ಲರಿಗೂ ದೇವನಾದ, ದೇವತೆಗಳಿಗೆ ಒಡೆಯನಾದ, ಪ್ರಪಂಚಕ್ಕೆಲ್ಲಕ್ಕೂ ನಿಯಾಮಕನಾಗಿ ಒಡೆಯನಾದ, ಆದರೂ ಲೇಪವಿಲ್ಲದ ರುದ್ರಮೂರ್ತಿಯು. ||೧೫||

ಎರಡನೆಯ ವಸ್ತುವಿಲ್ಲದ್ದರಿಂದ ಭಯವಿಲ್ಲದ, ಗುಣರಹಿತನಾದ, ಕಾಲತ್ರಯಾಬಾಧ್ಯನಾದ, ನಿತ್ಯವಾದ ಆನಂದವುಳ್ಳ, ಇನ್ನೊಂದು ಆಶ್ರಯವನ್ನು ಅವಲಂಬಿಸದೆ ತನ್ನಲ್ಲಿ ತಾನೇ ಇರುವ, ತಿಳಿಯತಕ್ಕ ಜ್ಞಾತೃವಾದ, ಎಲ್ಲ ಜ್ಞಾನವೂ ಇವನಲ್ಲಿ ಇಡಲ್ಪಟ್ಟಿದೆ (ವಿತ್ ಜ್ಞಾನಂ ಆಧೀಯತೇ ಅಸ್ಮಿನ್ ಇತಿ) ಎಂದು ವೇದಾಂತದಲ್ಲಿ ತಿಳಿದುಬರುವ, ದೇವತಾಸ್ವರೂಪನೂ ಸರ್ವೋತ್ತಮ ದೇವತಾರೂಪನೂ ಆದ ಇಂಥ ಪರಶಿವನನ್ನು ಈ ನಾಮಗಳ ಸ್ಮರಣಪೂರ್ವಕವಾಗಿ ಧ್ಯಾನಮಾಡಬೇಕು. ||೧೬||

ಎಲ್ಲರಿಗೂ ಒಡೆಯನಾದ, ಸಂಸಾರಪಾಶವನ್ನು ಪರಿಹರಿಸುವ, ಇತರ ದೇವತೆಗಳಿಗೆ ದಡದಂತೆ ಇರುವ, ಇವನನ್ನು ಆವರಿಸುವ ದಡವಿಲ್ಲದ, ಪ್ರಜಾಸಾಮಾನ್ಯಕ್ಕೇ ಸ್ವಾಮಿಯಾದ, ಜಗತ್ತನ್ನು ಧರಿಸಿರುವ, ವಿಷ್ಣ್ವಾದಿಗಳಿಂದ ಜಗದ್ಧಾರಣವನ್ನು

ಭುವನೇಶಃ ಸಭಾನಾಥಃ ಸಭಾಪತಿರತಿಪ್ರಭುಃ ।
ಸಭ್ಯಃ ಸ್ತುತ್ಯಃ ಸಮಸ್ತಾತ್ಮಾ ಸಾಂಬಸ್ಸಂಸಾರವರ್ಜಿತಃ ॥೧೮॥

ಸಂಸಾರವೇದ್ಯಸ್ಸತ್ಯಾರ್ಥಃ
ಸಾರಸ್ಸಂಸಾರಭೇಷಜಮ್ ।
ಸಂಸಾರಮೋಚಕೋ ಮೋಚ್ಯೋ
ಮುಕ್ತೋ ಮೂಲಧನಂ ಮುನಿಃ ॥೧೯॥

ಮಹರ್ಷಿಶ್ಚ ಮಹಾಗ್ರಾಸೋ ಮಹಾತ್ಮಾ ಮಧುರಸ್ವರಃ ।
ಸುರಜ್ಯೇಷ್ಠೋ ವಿರೂಪಾಕ್ಷೋ ವಿಶ್ವರೂಪೋ ವಿನಾಯಕಃ ॥೨೦॥

ಮಾಡಿಸುವ, ಸಮಾಧಿಯಲ್ಲಿ ಸಾಕ್ಷಾತ್ಕಾರವಿಷಯವಾಗುವ, ಎಲ್ಲಕ್ಕೂ ಆಧಾರವಾಗಿರುವ, ತಾನು ಬೇರೆ ಆಶ್ರಯವನ್ನು ಅಪೇಕ್ಷಿಸದೆ ಇರುವವನು. ||೧೭||

ಲೋಕಗಳಿಗೆ ಈಶ್ವರನು, ಸಭೆಯನ್ನು ಪೋಷಿಸುವವನು, ಸಭೆಗೆ ನಾಯಕನು, ಇವನ ಮೇಲೆ ಪ್ರಭುವಿಲ್ಲದೆ ಇರುವವನು, ಸತ್ಪುರುಷರಿಂದ ಶ್ಲಾಘಿಸಲ್ಪಟ್ಟಿರುವವನು, ಸರ್ವಕ್ಕೂ ಆತ್ಮನಾಗಿರುವವನು, ಉಮಾಶಕ್ತಿಯೊಡನಿರುವವನು, ಸಂಸಾರಬಂಧಕ್ಕೆ ಕಾರಣವಾದ ಅಜ್ಞಾನಸಂಬಂಧವಿಲ್ಲದವನು. ||೧೮||

ಈ ಪ್ರಪಂಚವೆಂಬ ಸಂಸಾರರೂಪವಾದ ಕಾರ್ಯದಿಂದ ಅದಕ್ಕೆ ಕಾರಣನೆಂದು ಊಹಿಸಲ್ಪಡುವವನು, ಬಾಧ್ಯವಲ್ಲದ ವಿಕಾರವಿಲ್ಲದ ವಸ್ತುವಾದವನು, ತತ್ತ್ವರೂಪನು, ಸಂಸಾರದುಃಖಕ್ಕೆ ಔಷಧಪ್ರಾಯನು, ಸಂಸಾರದಿಂದ ಭಕ್ತರನ್ನು ಬಿಡಿಸುವವನು, ಮೋಚ್ಯವಾದ ಸಂಸಾರರೂಪನು, ಮುಕ್ತನಾಗುವ ಜೀವಸ್ವರೂಪನು, ಎಲ್ಲಕ್ಕೂ ಮೂಲಕಾರಣವಾಗಿರುತ್ತಾ ರಕ್ಷಣಾದರಪಾತ್ರನು, ಮತ್ತು ಮನನಶೀಲನಾದವನು. ||೧೯||

ದೊಡ್ಡ ಋಷಿಯು, ಎಲ್ಲ ವೇದವನ್ನೂ ಕಂಡು ಹೇಳಿದವನು, ಎಲ್ಲವನ್ನೂ ಉಪಸಂಹರಿಸುವವನು, "ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ। ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಗೀಯತೇ ॥" ಎಂಬಂತೆ ಸರ್ವವ್ಯಾಪಿಯಾದ, ಇಂಪಾದ ಧ್ವನಿಯುಳ್ಳವನು, ದೇವತೆಗಳಲ್ಲಿ ಶ್ರೇಷ್ಠನು, ಸೂರ್ಯಚಂದ್ರ ಅಗ್ನಿರೂಪವಾದ ಮೂರು ಕಣ್ಣುಳ್ಳವನು, ಸರ್ವಸ್ವರೂಪನು, ಎಲ್ಲಕ್ಕೂ ನಾಯಕನಾದವನು ಮತ್ತು ತನಗೆ ಮತ್ತೊಬ್ಬ ನಾಯಕನಿಲ್ಲದವನು. ||೨೦||

ವಿಶ್ವಾಧಿಕಶ್ಚ ವೇದ್ಯಶ್ಚ ವೇದಾರ್ಥೋಽ ವಿಗತಸ್ಪೃಹಃ ।
ಅಹಮರ್ಥೋಽಪ್ರಮೇಯಶ್ಚ ತತ್ತ್ವನಿರ್ವಾಣಮುತ್ತಮಮ್ ॥೨೧॥

ಕೈವಲ್ಯಂ ಪದಮವ್ಯಕ್ತಂ ಕಾಲಕಾಲಶ್ಚ ಕೋಮಲಃ ।
ಅಂತರ್ಯಾಮೀ ಸಮಾಹಾರಃ ಸೋಮಸೌಖ್ಯಂ ಸುಹೃತ್ಸುಧಾ ॥೨೨॥

ಅದೃಶ್ಯೋ ದೃಶ್ಯನೇತಾ ಚ ನೇತ್ರಂ ದೃಷ್ಟಿಶ್ಚ ದರ್ಶನಮ್ ।
ದೃಗ್ದೃಶಿಃ ಪವಮಾನಶ್ಚ ವಶೀ ವೈಶ್ವಾನರೋ ನರಃ ॥೨೩॥

ತಿಳಿವಳಿಕೆಯಿಂದ ಎಲ್ಲಕ್ಕಿಂತಲೂ ಹೆಚ್ಚಾದವನು, ತಿಳಿಯಬೇಕಾದವನು, ವೇದವಾಕ್ಯಗಳಿಗೆ ಅರ್ಥರೂಪನಾಗಿರುವವನು, ಆಶೆಯಿಲ್ಲದವನು, ಅಹಂ ಶಬ್ದಕ್ಕೆ ಅರ್ಥವಾದವನು, ತಿಳಿಯುವುದಕ್ಕೆ ಆಗದವನು, (ಅಜ್ಞಾನನಿವೃತ್ತಿಗಾಗಿ ವೃತ್ತಿವ್ಯಾಪ್ಯತ್ವವು ವೃತ್ತಿವಿಷಯತ್ವವು, ವೃತ್ತಿಪ್ರತಿಫಲಿತಚೈತನ್ಯವು ಫಲವು, ಫಲವ್ಯಾಪ್ಯತ್ವ ಆ ಫಲತಾದಾತ್ಮ್ಯಸಂಬಂಧವು.) ತತ್ತ್ವರೂಪವಾಗಿಯೂ ಮೋಕ್ಷರೂಪವಾಗಿಯೂ ಇರುವವನು, ಸರ್ವಶ್ರೇಷ್ಠನು. ॥೨೧॥

ಅಜ್ಞಾನಸಂಬಂಧವಿಲ್ಲದೆ ಅದ್ವಿತೀಯನು, ಪ್ರಾಪ್ಯನು, ಅನುಮಾನಕ್ಕೆ ವಿಷಯನಲ್ಲದವನು, ಕಾಲಕ್ಕೂ ಉತ್ಪತ್ತಿಕಾರಣನು, ಇತರ ಸಂಪರ್ಕವಿಲ್ಲದೆ ಋಜು ಮೃದುವಾದವನು.

ಎಲ್ಲರ ಒಳಗಿದ್ದು ಪ್ರೇರಕನು, ಅಹಿತವನ್ನು ಬಿಟ್ಟು ಹಿತದಲ್ಲಿ ಪ್ರವರ್ತಿಸುವಂತೆ ಮಾಡುವವನು, ಎಲ್ಲಕ್ಕೂ ಪ್ರಳಯದಲ್ಲಿ ಅಡಗಿರುವ ಆಧಾರವು, ಉಮಾಶಕ್ತಿಸಹಿತನು, ಆನಂದರೂಪನು, ಎಲ್ಲಕ್ಕೂ ಹಿತೈಷಿಯು, ಅಮೃತದಂತೆ ಆನಂದಮಯನು. ॥೨೨॥

ದೃಶ್ಯಪ್ರಪಂಚಕ್ಕಿಂತ ಭಿನ್ನವಾದ, ದೃಕ್ಕಿಗೆ ವಿಷಯನಲ್ಲದ, ಪ್ರಪಂಚಕ್ಕೆ ನಾಯಕನಾದ, ನೋಡುವ ಕಣ್ಣು, ನೋಡುವಿಕೆ, ತಿಳಿಯುವಿಕೆ, ನೋಡುವವ, ಸಾಕ್ಷಾತ್ಕರಿಸುವಿಕೆ, ಇವುಗಳ ಸ್ವರೂಪನಾದ, ಪರಿಶುದ್ಧಿಯನ್ನುಂಟುಮಾಡುವ, ಎಲ್ಲವನ್ನೂ ಸ್ವಾಧೀನಮಾಡಿಕೊಂಡಿರುವ, ಎಲ್ಲ ಮನುಷ್ಯರಿಗೂ ಸಂಬಂಧಿಸಿದ, ಸದ್ಗತಿಯನ್ನುಕೊಡುವ ಸ್ವಭಾವವುಳ್ಳವನು ಪರಶಿವನು. ಅವನನ್ನು ಹೀಗೆಂದು ಧ್ಯಾನಿಸಬೇಕು. ॥೨೩॥

ಮೂಲಾಚಾರ್ಯಃ ಮುಕುಂದೇಶಃ ಮೂಲಮಾಯತನಂ ಮಹತ್ ।
ದಹರೋ ದ್ವಿಮದ್ವೈತಂ ಅನಾಖ್ಯಂ ವಸ್ತು ವಾಸ್ತವಮ್ ॥೨೪॥

ಭೂಮಾ ಭೋಜಯಿತಾ ಭೋಕ್ತಾ
ರುಚಿರ್ಭಸ್ಮಾಮೃತರಸಃ ।
ಹಕಾರೋ ಹುಂಫಡಗ್ರಸ್ಥೋ
ಹಾರ್ದೋ ಹೃತ್ಪಾವನೋಽವಧಿಃ ॥೨೫॥

ರೂಢ್ಯೈವೈತಾನಿ ನಾಮಾನ್ಯನಿಶಮುತಿತ
ರಾಮಾದಿತತ್ತ್ವೇ ಮಹೇಶೇ ।
ವರ್ತಂತೇ ನೈವ ನಾರಾಯಣಹರಿ
ಮುರಜಿದ್ವಾಸುದೇವಾದಿಶಬ್ದಾಃ ॥೨೬॥

ಎಲ್ಲರಿಗೂ ಮೊದಲನೆಯ ಆಚಾರ್ಯನು, ಮುಕುಂದನಿಗೂ ಸ್ವಾಮಿಯಾದವನು, ಕಾರಣಭೂತವಾದ ದೊಡ್ಡ ಅಧಿಷ್ಠಾನರೂಪನು, ಹೃದಯಾಕಾಶದಲ್ಲಿ ಗೋಚರವಾಗುವ, ಪ್ರಪಂಚಕ್ಕೆ ಮೀರಿ ಮೇಲಿರುವ, ಎರಡನೆಯ ಪಾರಮಾರ್ಥಿಕ ವಸ್ತುವಿಲ್ಲದ, ವಾಚಕಶಬ್ದವಿಲ್ಲದ, ಪಾರಮಾರ್ಥಿಕವಾದ ತತ್ತ್ವಸ್ವರೂಪನು, ಪರಶಿವನು. ಅವನ ಈ ನಾಮಗಳನ್ನು ಕೀರ್ತನಮಾಡಬೇಕು. ॥೨೪॥

ವಿಪುಲತಮವಾದ ಬ್ರಹ್ಮರೂಪನು, ಜನರಿಗೆ ಕರ್ಮಾನುಸಾರವಾದ ಭೋಗಗಳನ್ನು ಒದಗಿಸುವವನು, ಸುಖದುಃಭೋಗಗಳನ್ನು ಮಾಡುವ, ಪ್ರೀತಿಸ್ವರೂಪನು, ಪಾವನವಾದ ಭಸ್ಮರೂಪನು, ಅಮೃತದ ಸಾರರೂಪನು, ಹಕಾರರೂಪನು, ಹುಂಫಟ್ ಶಬ್ದರೂಪನು, ಭುವನೈಶ್ವರ್ಯವನ್ನು ಕೊಡುವ ಮಂತ್ರದ ಮೊದಲಕ್ಷರವಾದ ಹಕಾರರೂಪನು, ತೇಜೋರೂಪವಾದ ಹುಂಕಾರರೂಪನು, ಜಪಪ್ರತಿಬಂಧಕನಿವಾರಕವಾದ ಅಗ್ನಿರೂಪನು, ಈ ಆನುಪೂರ್ವಿರೂಪನು, ಹೃದಯದಲ್ಲಿ ಗೋಚರವಾಗುವವನು, ಹೃದಯವನ್ನು ಶೋಧಿಸುವವನು, ಎಲ್ಲ ಪ್ರಪಂಚಕ್ಕೂ ಮಾಯೆಗೂ ಅವಧಿಯಾಗಿ ಅತೀತನಾಗಿರುವವನು ಪರಶಿವನು. ಅವನನ್ನು ಈ ನಾಮಕೀರ್ತನಪೂರ್ವಕವಾಗಿ ಧ್ಯಾನಮಾಡಬೇಕು. ॥೨೫॥

ಈ ಮೇಲೆ ಹೇಳಿದ ಹೆಸರುಗಳು ರೂಢಿಯಾದ ಆದಿತತ್ತ್ವರೂಪನಾದ ಮಹೇಶ್ವರನನ್ನು ಹೇಳುತ್ತವೆ. ನಾರಾಯಣ, ಹರಿ ಮುರಜಿತ್, ವಾಸುದೇವ

ಯೋಗಾದಸ್ಮಿನ್ ಕಥಂಚಿತ್ ಪರಮ
ಮುನಿವರಾ ವಾಸುದೇವಾದಿಶಬ್ದಾಃ ।
ತಸ್ಮಾತ್ಪೂರ್ವೋಕ್ತನಾಮಾನ್ಯಮಲ
ಮತಿರಯಂ ಸರ್ವದಾ ಕೀರ್ತ್ತಯೇಚ್ಚ ॥೨೭॥

ಶಿವಾದಿಶಬ್ದಂ ಪರಿವರ್ಜ್ಯಮರ್ತ್ಯಾ
ವದಂತಿ ನಾರಾಯಣವಿಷ್ಣುಪೂರ್ವಂ ।
ಮುನೀಶ್ವರಾ ನಾಸ್ತಿ ವಿಮುಕ್ತಿರೇಷಾಂ
ವಿಭೂತಿರೇವ ಕ್ರಮಶೋ ವಿಮುಕ್ತಿಃ ॥೨೮॥

ಸದ್ಯ ಏವ ಪರಮಂ(ಶಿವಂ)ಯಯುಃ
ಸದ್ಯ ಏವ ಪರಮಂ ಸುಖಂ ಯಯುಃ ।
ಮುಖ್ಯಶಬ್ದಪರಿಕೀರ್ತನೇನ ತೇ
ಸತ್ಯಮೇವ ಪಠಿತಂ ಮಯೈವ ತು ॥೨೯॥

ಮುಂತಾದ ಶಬ್ದಗಳು ರೂಢಿಯಿಂದ ಮಹೇಶ್ವರನನ್ನು ಹೇಳುವದಿಲ್ಲ. ಆದರೂ ಈ ವಾಸುದೇವಾದಿ ಶಬ್ದಗಳು ಯೋಗಾರ್ಥದಿಂದ ಮಹೇಶ್ವರನನ್ನು ಹೇಳುತ್ತವೆ. ಓ ಋಷಿಶ್ರೇಷ್ಠರೇ, ಆದುದರಿಂದ ಮೇಲೆ ಹೇಳಿದ ನಾಮಗಳನ್ನು ನಿರ್ದೋಷ ಬುದ್ಧಿಯುಳ್ಳ ಯೋಗಿಯು ಯಾವಾಗಲೂ ಪಠಿಸುತ್ತಾ ಧ್ಯಾನಮಾಡಬೇಕು. ||೨೬-೨೭||

ಶಿವ ಮುಂತಾದ ಮೇಲೆ ಹೇಳಿದ ಮಹೇಶ್ವರನ ನಾಮಗಳನ್ನು ಬಿಟ್ಟು ಯಾವ ಮನುಷ್ಯರು ನಾರಾಯಣ ವಿಷ್ಣು ಮುಂತಾದ ನಾಮಗಳನ್ನು ಕೀರ್ತಿಸುತ್ತಾರೋ ಅಂಥವರಿಗೆ, ಓ ಋಷಿಶ್ರೇಷ್ಠರೇ, ಮೋಕ್ಷರೂಪಪರಮಫಲವು ಶೀಘ್ರವಾಗಿ ದೊರೆಯುವುದಿಲ್ಲ, ಅಂಥವರಿಗೆ ಅದಕ್ಕಿಂತಲೂ ಕಡಿಮೆ ಬೆಲೆಯುಳ್ಳ ಯೋಗಸಿದ್ಧಿಗಳಾಗುತ್ತವೆ. ಆದರೆ ಕಡೆಗೆ ಪರಶಿವನಾಮಕೀರ್ತನಧ್ಯಾನಗಳುಂಟಾಗಿ ಕ್ರಮವಾಗಿ ಪ್ರಪಂಚ ಸುಖದುಃಖಸಂಬಂಧವು ತಪ್ಪಿ ಮೋಕ್ಷವಾಗುವುದು. ||೨೮||

ಹಾಗೆ ಪರಶಿವನ ನಾಮಕೀರ್ತನಪೂರ್ವಕವಾಗಿ ಧ್ಯಾನಮಾಡಿದವರು ಕೂಡಲೆ ಪರಶಿವನನ್ನು ಪಡೆದರು. ಅಂಥವರು ಕೂಡಲೆ ಎಲ್ಲಕ್ಕಿಂತ ಮೇಲಾದ ಸುಖವನ್ನು ಪಡೆದರು. ಅವರು ಪರಶಿವನ ಮುಖ್ಯವಾಚಕರೂಢಿ ಶಬ್ದಗಳಾದ

ನಾಮಾನಿ ಸರ್ವಾಣಿ ಚ ಕಲ್ಪಿತಾನಿ
ಸ್ವಮಾಯಯಾ ನಿತ್ಯಸುಖಾತ್ಮರೂಪೇ ।
ತಥಾಽಪಿ ಮುಖ್ಯಾಸ್ತು ಶಿವಾದಿಶಬ್ದಾ
ಭವಂತಿ ಸಂಕಲ್ಪನಯಾ ಶಿವಸ್ಯ ॥೩೦॥

ಮುಖ್ಯಶಬ್ದಜಪತೋ ಮುನೀಶ್ವರಾಃ
ಸತ್ಯಮೇವ ಪರಮೇಶ್ವರೋ ಭವೇತ್ ।
ತಸ್ಯ ವಕ್ತ್ರಕಮಲೇ ಸದಾ ಶಿವೋ
ನೃತ್ಯತಿ ಸ್ಮ ಪರಮೇಶಯಾ ಸಹ ॥೩೧॥

ಪಾಪವಹ್ನಿಪರಿದಗ್ಧಮಾನಸೋ
ದೇವರುದ್ರಶಿವಶಂಕರಾದಿಷು ।
ಕ್ರೋಧಮೇತಿ ಮುನಯಸ್ತ್ವಹೋ ನರಃ
ಕೀಟಪೂರ್ವಜನಿರೇವ ತಸ್ಯ ಹಿ ॥೩೨॥

ನಾಮುಗಳನ್ನು ಪಠಿಸಿದ್ದರಿಂದ ಫಲವನ್ನು ಪಡೆದರು. ನಾನೂ ಹಾಗೆಯೇ ಮಾಡಿದೆನು. ಮತ್ತು ಸತ್ಯವನ್ನೇ ಹೇಳಿರುವೆನು. ॥೨೯॥

ನಿತ್ಯಸುಖಸ್ವರೂಪನಾದ ಪರಶಿವನಲ್ಲಿ ಮೇಲೆ ಹೇಳಿದ ಎಲ್ಲ ಹೆಸರುಗಳೂ ಅವನ ಮಾಯೆಯಿಂದ ಕಲ್ಪಿತಗಳಾಗಿವೆ, ಆದರೂ ಪರಶಿವಸಂಕಲ್ಪದಿಂದ ಈ ಶಿವ ಮುಂತಾದ ಶಬ್ದಗಳು ಮುಖ್ಯವೃತ್ತಿಯಿಂದಲೇ ವಾಚ್ಯವಾಚಕಸಂಬಂಧದಿಂದ ರೂಢಿಯಾಗಿ ಪರಶಿವನನ್ನು ಬೋಧಿಸುತ್ತವೆ. ॥೩೦॥

ಓ ಮುನಿಶ್ರೇಷ್ಠರೇ, ಪರಶಿವನನ್ನು ಮುಖ್ಯವೃತ್ತಿಯಿಂದ ಬೋಧಿಸುವ ಈ ನಾಮುಗಳ ಜಪದಿಂದ ಭಕ್ತನು ಪರಮೇಶ್ವರನೇ ಆಗುತ್ತಾನೆ. ಪರಮೇಶ್ವರಸಾರೂಪ್ಯವನ್ನು ಹೊಂದುತ್ತಾನೆ. ಹಾಗೆ ಜಪಮಾಡುವವನ ಮುಖಕಮಲದಲ್ಲಿ ಪರಶಿವನು ಪರಮೇಶ್ವರಿಯಾದ ಉಮಾದೇವಿಯೊಡನೆ ನರ್ತನಮಾಡುತ್ತಿರುತ್ತಾನೆ. ॥೩೧॥

ಪಾಪವೆಂಬ ಬೆಂಕಿಯಿಂದ ದೂಷಿತವಾದ ಮನಸ್ಸುಳ್ಳವನು ದೇವ, ರುದ್ರ, ಶಿವ, ಶಂಕರ—ಮುಂತಾದ ಮೂರ್ತಿಗಳಲ್ಲಿ ದ್ವೇಷಬುದ್ಧಿಯನ್ನು ಹೊಂದುತ್ತಾನೆ. ಅಂಥಸ್ಥಿತಿಗೆ ಕ್ರಿಮಿ ಮುಂತಾದ ಹಿಂದಿನ ಅವನ ಕೀಳು ಜನ್ಮವೇ ಕಾರಣವು. ॥೩೨॥

ಬಹುಪ್ರಲಾಪೇನ ಕಿಮಾಸ್ತಿಕೋತ್ತಮಾಃ
ಶಿವಾದಿ ನಾಮಾನಿ ಪರಾತ್ಪರಸ್ಯ ತು ।
ಅಧೋಕ್ಷಜಾದೇಸ್ತು ವಿಶೇಷತಸ್ಸ್ವತೋ
ಭವಂತಿ ನಾಮಾನಿ ಪರಸ್ಯ ಚಾಜ್ಞಯಾ ॥೩೩॥

ಅತೋ ಮಹಾದೇವಶಿವಾದಿಶಬ್ದಂ
ದ್ವಿಜೋ ಮುದಾ ನಿತ್ಯಮತಂದ್ರಿತಶ್ಚ ।
ವಿಹಾಯ ನಾರಾಯಣಪೂರ್ವಶಬ್ದಂ
ಜಪೇದಶೇಷಾಶುಭನಾಶನಾಯ ॥೩೪॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಪರತತ್ವನಾಮವಿವರಣಂ ನಾಮ ತ್ರಯಸ್ತ್ರಿಂಶಾಧ್ಯಾಯಃ

ಆಸ್ತಿಕರಲ್ಲಿ ಶ್ರೇಷ್ಠರಾದ ಓ ಮಹರ್ಷಿಗಳೇ, ಹೆಚ್ಚು ಹೇಳಿ ಏನು? ಶಿವ ಮುಂತಾದ ನಾಮಗಳು ಪರಾತ್ಪರನಾದ ಸರ್ವಶ್ರೇಷ್ಠನಾದ ಪರಶಿವನನ್ನು ರೂಢಿಯಿಂದ ಬೋಧಿಸುತ್ತವೆ. ಆದರೂ ಅವು ವಿಷ್ಣು ಮುಂತಾದ ದೇವತೆಗಳನ್ನೂ ಬೋಧಿಸುವುದುಂಟು. ಆಗ ಅವು ಯೌಗಿಕಾರ್ಥದ ಮೂಲಕವಾಗಿ ವಿಷ್ಣ್ವಾದಿ ದೇವತೆಗಳನ್ನೂ ಈಶ್ವರನ ಅನುಜ್ಞೆಯಿಂದಲೇ ಬೋಧಿಸುತ್ತವೆ. ॥೩೩॥

ಆದುದರಿಂದ ಮಹಾದೇವ ಶಿವ ಮುಂತಾದ ನಾಮಗಳನ್ನು, ನಾರಾಯಣ ಮುಂತಾದ ಉಪಪದಾರ್ಥಗಳನ್ನು ಮುಖ್ಯಧ್ಯೇಯವಾಗಿ ಇಟ್ಟುಕೊಳ್ಳದೆ ಬಿಟ್ಟು, ಬ್ರಾಹ್ಮಣನು ಜಾಗರೂಕನಾಗಿ ಜಪಿಸಬೇಕು. ಅದರಿಂದ ಎಲ್ಲ ಪಾಪಗಳೂ ನಾಶವಾಗುತ್ತವೆ. ॥೩೪॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಪರತತ್ವದ ಮುಖ್ಯನಾಮಗಳ ವಿವರಣೆ ಎಂಬ
ಮೂವತ್ತುಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಚತುಸ್ತ್ರಿಂಶೋಽಧ್ಯಾಯಃ ||

ಮೂವತ್ತುನಾಲ್ಕನೆಯ ಅಧ್ಯಾಯವು

(ಗುರೂಪಸದನನಿರೂಪಣಮ್)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಸಂಪ್ರದಾಯಸಮನ್ವಯಮ್ ।
ಮಹಾದೇವಪ್ರಸಾದಸ್ಯ ಕಾರಣಂ ಝಟಿತಿ ದ್ವಿಜಾಃ ॥೧॥

ಸತ್ಯಾಸ್ತೇಯದಯಾಪೂರ್ವೈಃ ಸರ್ವಧರ್ಮೈಸ್ಸಮನ್ವಿತಃ ।
ಕಾಮಕ್ರೋಧಮಹಾಲೋಭಪೈಶುನ್ಯಾದಿ ವಿವರ್ಜಿತಃ ॥೨॥

ಮೇಲೆ ಹೇಳಿದಂತೆ ಪರಶಿವಸ್ವರೂಪದ ಸಾಕ್ಷಾತ್ಕಾರವಾಗುವುದೇ ಪರಮ ಪುರುಷಾರ್ಥವಾಗಿರುವುದರಿಂದಲೂ, ಅದು ಗುರುಗಳಲ್ಲಿ ಉಪದೇಶಕ್ಕಾಗಿ ಆಶ್ರಯಿಸುವುದರಿಂದಲೇ ಆಗಬೇಕಾಗಿರುವುದರಿಂದಲೂ, ಗುರೂಪಸದನಪ್ರಕಾರವನ್ನು ಹೇಳುತ್ತಾರೆ. ಗುರುಗಳನ್ನು ಉಪದೇಶಕ್ಕಾಗಿ ಪಡೆಯುವುದರ ಔಚಿತ್ಯವನ್ನು ವಿವರಿಸುತ್ತೇನೆ. ಏಕೆಂದರೆ ಓ ಬ್ರಾಹ್ಮಣರಾ, ಈ ಗುರುಸಮೀಪಗಮನವು ಪರಶಿವನ ಅನುಗ್ರಹಕ್ಕೆ ಸಾವಕಾಶವಿಲ್ಲದೆ ಕಾರಣವಾಗುತ್ತದೆ. ||೧||

ಸತ್ಯಸಂಧತೆ, ಚೌರ್ಯಬುದ್ಧಿ ಇಲ್ಲದಿರುವಿಕೆ, ದಯೆ ಎಂದರೆ ಇತರರ ದುಃಖ ನಿವಾರಣೆಯಲ್ಲಿ ಇಚ್ಛಾಪೂರ್ವಕವಾದ ಪ್ರವೃತ್ತಿ, ಮುಂತಾದ ಎಲ್ಲ ಸಾತ್ತ್ವಿಕಗುಣ

ಆಚಾರ್ಯಂ ಸತ್ಯಸಂಪನ್ನಂ ಸಾಕ್ಷಾತ್ಕಾರುಣಿಕೋತ್ತಮಮ್ ।
ಅಭಿಗಮ್ಯ ಮಹಾತ್ಮಾನಂ ಪ್ರಣಮ್ಯ ಭುವಿ ದಂಡವತ್ ॥೩॥

ಚಂದನಾಗರುಕರ್ಪೂರಪ್ರಮುಖ್ಯೈಃ ಪೂಜ್ಯ ದೇಶಿಕಮ್ ।
ತ್ರಿಸಹಸ್ರಂ ಸಹಸ್ರಂ ವಾ ದ್ವಿಸಹಸ್ರಮಥಾಪಿ ವಾ ॥೪॥

ಉತ್ತಮಂ ಕಾಂಚನಂ ದತ್ವಾ ಯಥಾಶಕ್ತಿ ಧನಂ ತು ವಾ ।
ಬಹುಶೋ ದಂಡವದ್ಭೂಮೌ ಪ್ರಣಮ್ಯ ಶ್ರದ್ಧಯಾ ಸಹ ॥೫॥

ತಸ್ಯ ಪಾದಾಂಬುಜಂ ಮೂರ್ಧ್ನಿ ನಿಧಾಯ ಪರಯೋಗಿನಃ ।
ಅಧೀಹಿ ಭಗವೋ ಬ್ರಹ್ಮೇತ್ಯೇವಂ ವಿಜ್ಞಾಪಯೇತ್ಸುಧೀಃ ॥೬॥

ಸೋಽಪಿ ಕಾರುಣಿಕಃ ಶ್ರೀಮಾನ್ ಗುರುಸ್ಸರ್ವಾರ್ಥವಿತ್ತಮಃ ।
ಸುಸಮೇ ಸುಪ್ರದೇಶೇ ತು ನಿರ್ಜನೇ ನಿರ್ಭಯೇ ಶುಭೇ ॥೭॥

ಗಳಿಂದ ಅಲಂಕರಿಸಲ್ಪಟ್ಟವನಾಗಿ, ಕಾಮ, ಕ್ರೋಧ, ಬಲವಾದ ಅಜ್ಞಾನ, ಚಾಡಿ ಹೇಳುವಿಕೆ ಮುಂತಾದ ದೋಷಗಳನ್ನು ಬಿಟ್ಟವನಾಗಿ ಮುಮುಕ್ಷುವಾದವನು ಸತ್ಯವಾದಿಯಾಗಿ ಇತರರಿಗೆ ಉಪದೇಶಮಾಡುವುದರಲ್ಲಿ ದಯಾಶಾಲಿಯಾದ ಮಹಾತ್ಮನಾದ ಗುರುವನ್ನು ಪಡೆದು ಭೂಮಿಯ ಮೇಲೆ ದೀರ್ಘದಂಡ ನಮಸ್ಕಾರವನ್ನು ಮಾಡಿ, ಗಂಧಧೂಪಕರ್ಪೂರಾರತಿ ಮುಂತಾದ ಉಪಚಾರಗಳಿಂದ ಗುರುವನ್ನು ಪೂಜಿಸಿ, ॥೨-೩॥

ಮೂರು ಸಾವಿರ, ಎರಡು ಸಾವಿರ, ಅಥವಾ ಒಂದು ಸಾವಿರ ಒಳ್ಳೆಯ ಚಿನ್ನದ ನಾಣ್ಯಗಳನ್ನು ತನ್ನ ಶಕ್ತ್ಯನುಸಾರವಾಗಿ ಕೊಟ್ಟು ಭಕ್ತಿನಂಬಿಕೆಗಳೊಡನೆ ಅನೇಕ ಸಲ ಭೂಮಿಯಲ್ಲಿ ವಿನೀತನಾಗಿ ಸಾಷ್ಟಾಂಗನಮಸ್ಕಾರಮಾಡಿ ಶ್ರೇಷ್ಠನಾದ ಯೋಗಿಯಾದ ಆ ಗುರುವಿನ ಪಾದಕಮಲವನ್ನು ಶಿರಸಾವಹಿಸಿ ಬುದ್ಧಿವಂತನಾದ ಶಿಷ್ಯನು "ಸ್ವಾಮಿನ್ ಬ್ರಹ್ಮತತ್ತ್ವವನ್ನು ತಿಳಿಸಿ" ಎಂದು ವಿಜ್ಞಾಪಿಸಬೇಕು. ॥೪-೫-೬॥

ದಯಾಳುವಾದ, ಎಲ್ಲ ವಿಷಯಗಳನ್ನೂ ತಿಳಿದವರಲ್ಲಿ ಶ್ರೇಷ್ಠನಾದ, ತೇಜಸ್ವಿಯಾದ ಆ ಗುರುವೂ ಜನರ ಗದ್ದಲವಿಲ್ಲದ, ಭಯವಿಲ್ಲದ, ಒಳ್ಳೆಯದಾದ, ಸಮವಾದ ಪ್ರದೇಶದಲ್ಲಿ ಸಗಣಿಯಿಂದ ಸಾರಿಸಿ ಹೂವಿಂದ ಅಲಂಕರಿಸಲ್ಪಟ್ಟಿರುವ, ನಾಲ್ಕು

ಗೋಮಯೇನೋಪಲಿಪ್ತೇ ತು ಪುಷ್ಪೈರಭ್ಯರ್ಚಿತೇ ತಥಾ ।
ಪೂರ್ಣಕುಂಭೈಶ್ಚ ದೀಪೈಶ್ಚ ಧೂಪೈರ್ದಿಕ್ಷು ಸಮನ್ವಿತೇ ॥೮॥

ವಿತಾನತೋರಣೈರ್ಯುಕ್ತೇ ಧೂಪದೀಪಾದಿವಾಸಿತೇ ।
ಅಪಕ್ವತಂಡುಲೈಶ್ಶುದ್ಧೈಃ ಶುದ್ಧೈರ್ವಾ ಶಾಲಿತಂಡುಲೈಃ ॥೯॥

ವಿಲಿಖ್ಯ ಮಂಡಲಂ ಸಾಕ್ಷಾತ್ ಗುರೂಕ್ತೇನೈವ ವರ್ತ್ಮನಾ ।
ಏವಂ ಮಂತ್ರೇಣ ಸಂಪೂಜ್ಯ ಕುಸುಮೈಶ್ಚಂದನಾದಿಭಿಃ ॥೧೦॥

ಪಾರಂಪರ್ಯಕ್ರಮಂ ಬುಧ್ವಾ ಸಂಚಿಂತ್ಯ ಶ್ರದ್ಧಯಾ ಸಹ ।
ಸ್ಥಾಪಯಿತ್ವಾ ಗುರುಶ್ಶಿಷ್ಯಂ ಮಂಡಲಸ್ಯ ತು ಮಧ್ಯಮೇ ॥೧೧॥

ಕೃತಾಂಜಲಿಪುಟಂ ಪೂರ್ಣಪ್ರಕಾಶನಿಕರಾತ್ಮಕೇ ।
ಶಿವಾನಂದೇ ಸಮಾಸೀನಂ ಏವಂ ಭಾವನಯಾ ಯುತಮ್ ॥೧೨॥

ದೇಶಿಕಸ್ಸ್ವಾತ್ಮನಾಽಽತ್ಮಾನಂ ಅವಲೋಕ್ಯ ಸುನಿಶ್ಚಲಃ ।
ಶಿಷ್ಯಂ ಚಾತ್ಮತಯಾ ಸಾಕ್ಷಾತ್ ದೃಢಂ ಸಂಚಿಂತ್ಯ ಸಾಕ್ಷಿಣಃ ॥೧೩॥

ಸ್ವಾತ್ಮನೋಽನ್ಯತಯಾ ಭಾತಂ ಸ್ವಾತ್ಮಮಾತ್ರತಯಾ ಸ್ವಯಮ್ ।
ಚಿಂತಯೇನ್ನಿಶ್ಚಲಂ ಮಂತ್ರಂ ಜಪಿತ್ವಾ ಪೂರ್ವಮೇವ ತು ॥೧೪॥

ದಿಕ್ಕುಗಳಲ್ಲೂ ನೀರಿಂದ ತುಂಬಿರುವ ಹರವಿಗಳಿಂದಲೂ ಪರಿಮಳದಧೂಪದೀಪಗಳಿಂದಲೂ ಕೂಡಿರುವ, ಮೇಲುಕಟ್ಟು ತೋರಣಗಳಿಂದ ಕೂಡಿರುವ, ಒಳ್ಳೆಯ ಸ್ಥಳದಲ್ಲಿ, ತೊಳೆದ ಹಸಿಅಕ್ಕಿ ಅಥವಾ ಒಳ್ಳೆಯ ತಂಡುಲಗಳಿಂದ ಗುರುವು ಹೇಳಿದ ರೀತಿಯಿಂದ ಮಂಡಲವನ್ನು ಸ್ವಂತವಾಗಿ ಬರೆದು, ||೭-೮-೯||

ಈ ರೀತಿಯಾಗಿ ಅಜಪಾಮಂತ್ರದಿಂದಲೂ ಗಂಧಪುಷ್ಪಾದಿಗಳಿಂದಲೂ ಗುರುಶಿಷ್ಯಪರಂಪರೆಯ ಕ್ರಮದಲ್ಲಿ ಆಚರಣೆಯ ಪದ್ಧತಿಯನ್ನು ತಿಳಿದು ನಂಬಿಕೆ ಭಕ್ತಿಗಳಿಂದ ಕೂಡಿ ಮಂಡಲವನ್ನು ಪೂಜಿಸಿ; ಆ ಮಂಡಲದ ಮಧ್ಯದಲ್ಲಿ ಅಂಜಲಿಯನ್ನು ಕಟ್ಟಿಕೊಂಡಿರುವ ಶಿಷ್ಯನನ್ನು ಕೂರಿಸಿ, ಪೂರ್ಣವಾದ ತೇಜಸ್ಸಮುದಾಯಸ್ವಸ್ವರೂಪವಾದ ಆನಂದರೂಪನಾದ ಶಿವನನ್ನು ಧ್ಯಾನವಿಷಯವನ್ನಾಗಿ ಮಾಡಿಕೊಂಡು ಕೂತಿರುವ, ಈ ಭಾವನೆಯಿಂದ ಕೂಡಿರುವ ಶಿಷ್ಯನನ್ನು ಗುರುವು ತನ್ನ ಆತ್ಮನನ್ನು ಪರಮಾತ್ಮನಿಗಿಂತ ಬೇರೆಯಲ್ಲೆಂದೂ ಅಭಿನ್ನನೆಂದೂ ತಿಳಿದು, ಶಿಷ್ಯ

ಗ್ರಂಥಿಚ್ಛೇದಂ ಪುನಃ ಕುರ್ಯಾತ್ ಗುರೂಕ್ತೇನೈವ ವರ್ತ್ಮನಾ ।
ಕೃತೇ ಕಾರುಣಿಕೇನೈವಂ ಆಚಾರ್ಯೇಣ ದ್ವಿಜೋತ್ತಮಾಃ ॥೧೫॥

ಮಹಾದೇವೋ ಮಹಾನಂದೋ ಮಹಾಕಾರುಣಿಕೋತ್ತಮಃ ।
ಸ್ವಾತ್ಮಭೂತಾಂ ಪರಾಶಕ್ತಿಂ ಪ್ರೇರಯತ್ಯೇವ ಸುವ್ರತಾಃ ॥೧೬॥

ಪ್ರಸನ್ನಾ ಸಾ ಮಹಾದೇವೀ ಮಹಾಕಾರುಣಿಕೋತ್ತಮಾ ।
ಶಿಷ್ಯಸ್ಯಾತ್ಮನಿ ಚಿದ್ರೂಪೇ ಸ್ವಯಂ ಪತತಿ ನಿರ್ಮಲಾ ॥೧೭॥

ಶಕ್ತಿಪಾತೇ ತು ಸಂಜಾತೇ ಶಿಷ್ಯಸ್ಯಾತ್ಮನಿ ಸಂಸ್ಥಿತಾ ।
ಮಾಯಾ ದಗ್ಧಾ ಭವೇತ್ಕಿಂಚಿತ್ ನಾತ್ರ ಸಂದೇಹಕಾರಣಮ್ ॥೧೮॥

ನನ್ನೂ ತನ್ನ ಆತ್ಮನಿಗಿಂತ ಬೇರೆಯಲ್ಲವೆಂದೂ ಅಭಿನ್ನನೆಂದೂ ದೃಢವಾಗಿ ತಿಳಿದು, ತನ್ನ ಆತ್ಮನಿಗಿಂತ ಬೇರೆಯಾಗಿರುವಂತೆ ತೋರುತ್ತಿದ್ದರೂ ಸ್ವಾತ್ಮರೂಪನೇ ಎಂದು ದೃಢವಾಗಿ ತಿಳಿದು, ಆತ್ಮಮಂತ್ರಜಪವನ್ನು ಮೊದಲೇ ಮಾಡಿದ್ದು, ತನ್ನ ಗುರುವು ಉಪದೇಶಮಾಡಿದ್ದ ರೀತಿಯಿಂದಲೂ ಆಗಮೋಕ್ತಕ್ರಮದಿಂದಲೂ, ಅಜ್ಞಾನ ಕಾರ್ಯವಾದ ಚಿದಚಿತ್‌ಗ್ರಂಥಿಯನ್ನು ಭೇದಿಸಬೇಕು. ||೧೦-೧೧-೧೨-೧೩-೧೪||

ಓ ಬ್ರಾಹ್ಮಣಶ್ರೇಷ್ಠರೇ, ದಯಾಳುವಾದ ಗುರುವಿನಿಂದ ಮೇಲೆ ಹೇಳಿದಂತೆ ಮಾಡಲ್ಪಟ್ಟರೆ, ದಯಾಳುಶ್ರೇಷ್ಠನಾದ ಆನಂದಾತಿಶಯರೂಪನಾದ ಮಹಾದೇವನು ತನ್ನ ಆತ್ಮರೂಪವಾದ ಪರಾಶಕ್ತಿಯನ್ನು ಪ್ರೇರಿಸುತ್ತಾನೆ. ದಯಾಳುಶ್ರೇಷ್ಠಳಾದ ಆ ಚಿದ್ರೂಪಳಾದ ಮಹಾದೇವಿಯು ನಿರ್ಮಲಳಾಗಿ ಪ್ರಸನ್ನಳಾಗಿ ಚಿದ್ರೂಪನಾದ ಶಿಷ್ಯನ ಆತ್ಮನಲ್ಲಿ ಅನುಪ್ರವಿಷ್ಟಳಾಗುತ್ತಾಳೆ. ಸಚ್ಚಿದಾನಂದರೂಪನಾದ ತನ್ನಲ್ಲಿಯೇ ಪರಶಿವರೂಪಸ್ವರೂಪನಾದವನು ಮಾಯಾಪರಿಣಾಮರೂಪವಾದ ಜಗದಂಕುರವೆಂಬ ಶಕ್ತಿಯ ರೂಪವಿಶೇಷದಲ್ಲಿ ಅನುಪ್ರವೇಶಮಾಡುವುದು ಶಕ್ತಿಯಾದುದರಿಂದ ಪರಾ ಶಕ್ತಿಯೆಂದೂ ಪರಶಿವಸ್ವರೂಪಳೆಂದೂ ವ್ಯವಹಾರವಿದೆ. ಸಾಂಖ್ಯರ ಪ್ರಕೃತಿಯು ಚಿದ್ರೂಪವಲ್ಲವು ; ನಿತ್ಯವು ಸ್ವತಂತ್ರವು. ||೧೫-೧೬-೧೭||

ಈ ರೀತಿಯಾಗಿ ಪರಾಶಕ್ತಿಯು ಶಿಷ್ಯನ ಆತ್ಮನಲ್ಲಿ ಸ್ಫುರಿಸಲು ಶಿಷ್ಯನಲ್ಲಿದ್ದ ಅಜ್ಞಾನರೂಪವಾದ ಮಾಯೆಯು ಸುಟ್ಟುಹೋಗುತ್ತದೆ. ಇದರಲ್ಲಿ ಸಂಶಯಕ್ಕೆ ಕಾರಣವಿಲ್ಲವು. ||೧೮||

ಸರ್ವಸಾಧನಸಂಯುಕ್ತಸ್ಸಾಕ್ಷಾದಾಸ್ತಿಕ್ಯಸಂಯುತಃ ।
ಮಹಾದೇವಸ್ಯ ಭಕ್ತಶ್ಚೇತ್ ಶಿಷ್ಯಸ್ಸದ್ಗುರುಭಕ್ತಿಮಾನ್ ॥೧೯॥

ತಸ್ಯ ಶಿಷ್ಯಸ್ಯ ವಿಪ್ರೇಂದ್ರಾಃ ಕರ್ಮಸಾಮ್ಯೇ ಸತಿ ದ್ವಿಜಾಃ ।
ಶಾಂಭವೀಶಕ್ತಿರತ್ಯರ್ಥಂ ತಸ್ಮಿನ್ ಪತತಿ ಚಿದ್ಘನೇ ॥೨೦॥

ತಥಾ ಶಿಷ್ಯಸ್ಯ ಚಿದ್ರೂಪೇ ಕಲ್ಪಿತಾ ಮೋಹರೂಪಿಣೀ ।
ಮಾಯಾ ದಗ್ಧಾ ಭವೇತ್ಕಿಂಚಿತ್ ತದಾ ಪತತಿ ವಿಗ್ರಹಃ ॥೨೧॥

ಶಿಷ್ಯಸ್ಯ ದೇಹೇ ವಿಪ್ರೇಂದ್ರಾ ಧರಣ್ಯಾಂ ಪತಿತೇ ಸತಿ ।
ಪ್ರಸಾದಶ್ಶಾಂಕರಸ್ತಸ್ಯ ದ್ವಿಜಾಸ್ಸಂಜಾತ ಏವ ಹಿ ॥೨೨॥

ಜ್ಞಾನಕ್ಕೆ ಸಾಧನವಾದ ನಾಲ್ಕು ಗುಣ (ವಿವೇಕ, ವೈರಾಗ್ಯ, ಶಮಾದಿಗಳು, ಮುಮುಕ್ಷುತ್ವ) ದಿಂದ ಕೂಡಿರುವ, ದೇವರಿದ್ದಾನೆಂದು ಮುಂತಾದ ನಂಬಿಕೆಯುಳ್ಳ, ಶಿಷ್ಯನು ಮಹಾದೇವನಲ್ಲಿ ಭಕ್ತಿಯುಳ್ಳವನೂ ಗುರುಭಕ್ತಿಯುಳ್ಳವನೂ ಆಗಿದ್ದರೆ, ಓ ಬ್ರಾಹ್ಮಣರಾ, ಅಂಥ ಶಿಷ್ಯನಿಗೆ ಕರ್ಮಸಾಮ್ಯವೆಂದರೆ, ಸಂಚಿತಕರ್ಮಗಳು ಮೇಲೆ ಹೇಳಿದ ದೀಕ್ಷೆಯಿಂದ ಉಂಟಾದ ಜ್ಞಾನದಿಂದ ಶಕ್ತಿಯಿಲ್ಲದವಾಗಲು, ಭಾವಿಜನ್ಮವನ್ನುಂಟುಮಾಡಲಾರದವಾಗುತ್ತವೆ. ಪ್ರಾರಬ್ಧಕರ್ಮವು ಭೋಗದಿಂದ ನಷ್ಟಶಕ್ತಿಯಾಗಲು, ಈಗ ಮಾಡುತ್ತಿರುವ ಕರ್ಮಗಳು ಜ್ಞಾನದಿಂದ ಸಂಕಲ್ಪವಿಲ್ಲದೆ ಸುಖದುಃಖಜನ್ಮಾಂತರಗಳನ್ನುಂಟುಮಾಡಲಾರದವಾಗುತ್ತವೆ. ಹೀಗೆ ಕರ್ಮಸಾಮ್ಯವುಂಟಾಗಲು, ಅಂಥ ಶಿಷ್ಯನ ಜ್ಞಾನಘನನಾದ ಚಿದೇಕರಸನಾದ ಆತ್ಮನಲ್ಲಿ ಶಾಂಭವೀಶಕ್ತಿಯು ಚನ್ನಾಗಿ ಸ್ಫುರಿಸುತ್ತದೆ. ॥೧೯-೨೦॥

ಹಾಗೆಯೇ ಶಿಷ್ಯನ ಚಿದ್ರೂಪನಾದ ಆತ್ಮನಲ್ಲಿ ಕಲ್ಪಿಸಲ್ಪಟ್ಟಿದ್ದಂಥ, ಸ್ವಸ್ವರೂಪದ ತಿಳುವಳಿಕೆಗೆ ಅಡ್ಡಲಾಗಿದ್ದಂಥ, ಮೋಹರೂಪವಾದ ಮಾಯೆಯ ಅಜ್ಞಾನವು ಸುಟ್ಟುಹೋಗುತ್ತದೆ. ಜ್ಞಾನದಿಂದ ಅಜ್ಞಾನನಿವೃತ್ತಿಯಾಗಲು, ದೇಹಾಭಿಮಾನವು ಅಳಿದುಹೋಗಿ, ದೇಹವೇ ಬಿದ್ದುಹೋದಂತಾಗುತ್ತದೆ. ಆಮೇಲೆ ಕ್ರಮವಾಗಿ ಮರಣಕಾಲದಲ್ಲಿ ಶಿಷ್ಯನ ದೇಹವೂ ಸತ್ತು ಬಿದ್ದುಹೋಗಲು ಶಂಕರನ ಅನುಗ್ರಹವು ಆದಂತೆಯೇ. ಮರಣಬರುವವರೆಗೆ ಜೀವನ್ಮುಕ್ತಿಯೂ ಮರಣಾನಂತರದಲ್ಲಿ ವಿದೇಹಕೈವಲ್ಯವೂ ಉಂಟಾಗುತ್ತವೆ. ಎಂದು ಭಾವವು. ॥೨೧-೨೨॥

ಯಸ್ಯ ಪ್ರಸಾದಸ್ಸಂಜಾತಃ ದೇಹಪಾತಾವಸಾನಕಃ ।
ಕೃತಾರ್ಥ ಏವ ವಿಪ್ರೇಂದ್ರಾ ನ ಸ ಭೂಯೋಽಭಿಜಾಯತೇ ॥೨೩॥

ತಸ್ಯ ಪ್ರಸಾದಯುಕ್ತಸ್ಯ ವಿದ್ಯಾ ವೇದಾಂತವಾಕ್ಯಜಾ ।
ದಹತ್ಯವಿದ್ಯಾಮಖಿಲಾಂ ತಮಸ್ಸೂರ್ಯೋದಯೋ ಯಥಾ ॥೨೪॥

ಶಕ್ತಿಪಾತವಿಹೀನೋಽಪಿ ಸತ್ಯವಾಗ್ಗುರುಭಕ್ತಿಮಾನ್ ।
ಆಚಾರ್ಯಾಚ್ಛ್ರುತವೇದಾಂತಃ ಕ್ರಮಾನ್ಮುಚ್ಯೇತ ಬಂಧನಾತ್ ॥೨೫॥

ಶಕ್ತಿಪಾತಸಮಾಯುಕ್ತಾ ವಿದ್ಯಾ ವೇದಾಂತವಾಕ್ಯಜಾ ।
ಯದಾ ಯಸ್ಯ ತದಾ ತಸ್ಯ ವಿಮುಕ್ತಿರ್ನಾತ್ರ ಸಂಶಯಃ ॥೨೬॥

ಯಾರಿಗೆ ಶಂಕರನ ಪ್ರಸಾದವು ಉಂಟಾಗಿ ಕಡೆಗೆ ದೇಹಪಾತವಾಗುತ್ತದೋ ಅಂಥವನು ಕೃತಕೃತ್ಯನಾಗಿ ಪುನಃ ಜನ್ಮವನ್ನು ಪಡೆಯುವುದಿಲ್ಲ. ॥೨೩॥

ಶಂಕರನ ಅನುಗ್ರಹ ಉಂಟಾದವನಿಗೆ ವೇದಾಂತವಾಕ್ಯಗಳಿಂದ ಉಂಟಾಗುವ ಜ್ಞಾನವು, ಸೂರ್ಯೋದಯವಾಗಲು ಎಲ್ಲ ಕತ್ತಲೆಯೂ ನಾಶವಾಗುವಂತೆ, ಅವನ ಅಜ್ಞಾನವೆಲ್ಲವನ್ನೂ ಸುಟ್ಟು ಭಸ್ಮಮಾಡುತ್ತದೆ. ಕರ್ತೃತ್ವಾದಿ ಅಭಿಮಾನನಾಶದಿಂದ ಆ ಕರ್ಮಫಲವಾದ ಸುಖದುಃಖವು ಅವನಿಗೆ ಆಗುವುದಿಲ್ಲ. ॥೨೪॥

ಹೀಗೆ ನೇರವಾಗಿ ಪರಾಶಕ್ತಿಯ ಸ್ಫುರಣವಾಗದೆಹೋದರೂ ಶಿಷ್ಯನು ಸತ್ಯವಾದಿಯಾಗಿಯೂ ಗುರುಭಕ್ತಿಯುಳ್ಳವನೂ ಆಗಿದ್ದರೆ ಗುರುವಿನಿಂದ ವೇದಾಂತ ತತ್ತ್ವಗಳನ್ನು ತಿಳಿದುಕೊಂಡರೂ ಕ್ರಮವಾಗಿ ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ. ॥೨೫॥

ಪರಾಶಕ್ತಿಯು ಎಲ್ಲರ ಆತ್ಮರೂಪವಾಗಿಯೂ ವ್ಯಾಪಿಯಾಗಿಯೂ ಇರುವುದರಿಂದ ಅದಕ್ಕೆ ಪತನವು ಔಪಚಾರಿಕವಾದುದು. ಪ್ರತಿಯೊಬ್ಬರಲ್ಲೂ ಇರುವ ಈ ಶಕ್ತಿಗೆ ಅಜ್ಞಾನದಿಂದ ಆಗಿರುವ ಆವರಣಭಂಗವಾದರೆ ಅದು ಸ್ಫುರಿಸುವುದು. ಇದಕ್ಕೆ ಪಾತವೆಂದು ಔಪಚಾರಿಕವಾಗಿ ವ್ಯವಹಾರವಿದೆ. ಯಾರಿಗೆ ಶಕ್ತಿಯ ಪಾತದೊಡನೆ ವೇದಾಂತವಾಕ್ಯಾರ್ಥಜ್ಞಾನದಿಂದ ಉಂಟಾದ ಸಾಕ್ಷಾತ್ಕಾರವು ಸೇರುವದೋ ಅಂಥವರಿಗೆ ಆಗಲೇ ಅಲ್ಲಿಯೇ ಮುಕ್ತಿಯುಂಟಾಗುವುದು. ಸಂಶಯವಿಲ್ಲ. ॥೨೬॥

ಶಕ್ತಿಪಾತಪ್ರಕಾರಸ್ಯ ರಹಸ್ಯಾಂಶಶ್ಚ ಕಶ್ಚನ ।
ಮಯಾ ನೋಕ್ತೋ ರಹಸ್ಯತ್ವಾತ್ ಆಜ್ಞಾಭಂಗಭಯಾದಪಿ ॥೨೭॥

ಪ್ರಸಾದಕಾಮೀ ವಿಪ್ರೇಂದ್ರಾಃ ಪ್ರಸನ್ನೋ ಗುರುಭಕ್ತಿಮಾನ್ ।
ದಿನೇದಿನೇ ಗುರೋಃ ಪೂಜಾಂ ಕುರ್ಯಾದರ್ಥಾದಿಭಿಃ ನರಃ ॥೨೮॥

ಸಂಪ್ರದಾಯಸಮನ್ವಯಮುತ್ತಮಮ್
ಗುಹ್ಯಮೇತದಿದಂ ಕಥಿತಂ ಮಯಾ ।
ಶಂಕರೇಣ ಪುರಾ ಕಥಿತಂ ಗುರೋಃ
ಶಂಕರಃ ಖಲು ಸರ್ವಹಿತೇ ರತಃ ॥೨೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಗುರೂಪಸದನ ರೀತಿ, ಫಲ, ನಿರೂಪಣಂ ನಾಮ ಚತುಸ್ತ್ರಿಂಶಾಧ್ಯಾಯಃ

ಈ ಪರಾಶಕ್ತಿಯು ಚಿದ್ಘನರೂಪನಾದ ಆತ್ಮನಲ್ಲಿ ಬೀಳುವ ಸ್ಫುರಿಸುವ ಪ್ರಕಾರದಲ್ಲಿ ಒಂದು ರಹಸ್ಯಾಂಶವಿದೆ. ಅದನ್ನು ನಾನು ಹೇಳಿಲ್ಲ. ಅದನ್ನೂ ಹೇಳಲು ನಮ್ಮ ಗುರುಗಳ ಅನುಮತಿ ಇಲ್ಲವು. ಓ ಬ್ರಾಹ್ಮಣಶ್ರೇಷ್ಠರೇ, ಶಂಕರನ ಅನುಗ್ರಹವನ್ನು ಅಪೇಕ್ಷಿಸುವವನು ಗುರುಭಕ್ತಿಯುಳ್ಳವನಾಗಿ ಪ್ರತಿ ದಿನವೂ ಗುರುವನ್ನು ದ್ರವ್ಯ ಮುಂತಾದ ಇಷ್ಟವಸ್ತುಗಳಿಂದ ಸಂತೋಷಪಡಿಸುತ್ತಿರಬೇಕು. ಆದರಿಂದ ಅನುಗ್ರಹವನ್ನು ಪಡೆದವನಾಗುತ್ತಾನೆ. ॥೨೭-೨೮॥

ಗುರುಶಿಷ್ಯಪರಂಪರೆಯಲ್ಲಿ ಜ್ಞಾನಸ್ಫುರಣ ಉಂಟಾಗುವಂತೆ ಮಾಡುವ ಈ ಸಂಪ್ರದಾಯದ ಸಂಬಂಧವನ್ನು ನಮ್ಮ ಗುರುಗಳಿಗೆ ಶಂಕರನಿಂದ ಹೇಳಲ್ಪಟ್ಟ ರಹಸ್ಯವಾದ ಈ ಅಂಶವನ್ನು ನಾನೂ ನಿಮಗೆ ಹೇಳಿದೇನೆ. ಶಂಕರನು ಯಾವಾಗಲೂ ಎಲ್ಲ ಜನರ ಶ್ರೇಯೋಽಭಿವರ್ಧನದಲ್ಲಿ ಆಸಕ್ತನಾಗಿರುವನು. ॥೨೯॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಗುರೂಪಸದನದ ಪ್ರಕಾರ ಮತ್ತು ಫಲಗಳನ್ನು ವಿವರಿಸಿರುವ
ಮುವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

ಯಜ್ಞವೈಭವಖಂಡಂ

|| ಪಂಚತ್ರಿಂಶೋಽಧ್ಯಾಯಃ ||

ಮೂವತ್ತೈದನೆಯ ಅಧ್ಯಾಯವು

(ಸಂಪ್ರದಾಯಪರಂಪರಾವಿಚಾರಃ)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಸಂಪ್ರದಾಯಪರಂಪರಾಮ್ ।
ಯಜ್ಜ್ಞಾನೇನ ದ್ವಿಜಶ್ರೇಷ್ಠೋ ಗುರುರ್ಭವತಿ ಸುವ್ರತಾಃ ॥೧॥

ಯಶ್ಶಿವಸ್ಸರ್ವಭೂತಾನಾಂ ಈಶ್ವರಸ್ಸ್ವತ ಏವ ತು ।
ಈಶಾನಃ ಸರ್ವವಿದ್ಯಾನಾಂ ಸ ಏವಾದಿಗುರುರ್ಬುಧಾಃ ॥೨॥

ಬ್ರಹ್ಮಜ್ಞಾನವುಂಟಾಗಬೇಕಾದರೆ ಗುರುಗಳ ಹತ್ತಿರಕ್ಕೆ ಹೋಗುವುದೂ, ಸಂಪ್ರದಾಯಪರಂಪರೆಯನ್ನು ತಿಳಿಯುವುದೂ, ಕ್ರಮವಾಗಿ ಗುರುವಿನ ಅನುಗ್ರಹ ದಿಂದ ಕರ್ಮಸಾಮ್ಯ ಶಕ್ತಿಪಾತಗಳು ಉಂಟಾಗುವುದೂ ಕಾರಣವಾದುದರಿಂದ ಅಂಥ ಸಂಪ್ರದಾಯಪರಂಪರೆಯನ್ನು ತಿಳಿಯುವುದಕ್ಕೋಸ್ಕರ ಈ ಅಧ್ಯಾಯವು ಪ್ರಾರಂಭಿ ಸಲ್ಪಡುತ್ತದೆ.

ಸೂತಪೌರಾಣಿಕರು ಶೌನಕಾದಿ ಋಷಿಗಳನ್ನು ಕುರಿತು ನಿಯಮಶಾಲಿಗಳಾದ ಎಲೈ ಋಷಿಗಳೇ, ಯಾವ ಸಂಪ್ರದಾಯಪರಂಪರೆಯನ್ನು ತಿಳಿಯುವುದರಿಂದ ಬ್ರಾಹ್ಮಣಶ್ರೇಷ್ಠನು ಗುರುವೆನ್ನಿಸಿಕೊಳ್ಳುತ್ತಾನೆಯೋ ಅಂಥ ಪರಂಪರೆಯನ್ನು ನಿಮಗೆ ಹೇಳುತ್ತೇನೆ. ಏಕೆಂದರೆ ಈ ಜ್ಞಾನಸಂತತಿಯ ಭಾವನೆಯಿಂದ ತಿಳಿವಳಿಕೆಯ ಪ್ರವಾಹವು ಗುರುವಿನಿಂದ ಶಿಷ್ಯನಿಗೆ ಮುಂದುವರಿಯುತ್ತದೆ. ||೧||

ಎಲೈ ಪಂಡಿತರೇ, ಸರ್ವಪ್ರಾಣಿಗಳಿಗೂ ಎಲ್ಲಾ ವಿದ್ಯೆಗಳಿಗೂ ಒಡೆಯನಾದ

ತಸ್ಯ ಶಿಷ್ಯೋ ಮಹಾವಿಷ್ಣುಃ ಸರ್ವಜ್ಞಾನಮಹೋದಧಿಃ ।
ತಸ್ಮಾದಾತ್ತಪರಿಜ್ಞಾನೋ ಬ್ರಹ್ಮಾ ಸರ್ವಜಗತ್ಪ್ರಭುಃ ॥೩॥

ಸನತ್ಕುಮಾರೋ ಭಗವಾನ್ ಬ್ರಹ್ಮಣಾ ಶ್ರುತವೇದನಃ ।
ಸನತ್ಕುಮಾರಾತ್ಸರ್ವಜ್ಞಾತ್ಕೃಷ್ಣದ್ವೈಪಾಯನೋ ಮುನಿಃ ॥೪॥

ಅವಾಪ್ತಾಖಿಲವಿಜ್ಞಾನಸ್ತಸ್ಮಾದೇತಚ್ಛ್ರುತಂ ಮಯಾ ।
ಮತ್ತೋ ಲಬ್ಧಪರಿಜ್ಞಾನಾ ಯೂಯಂ ಸತ್ಯಪರಾಯಣಾಃ ॥೫॥

ಏವಂ ಬುದ್ಧ್ವಾ ಮುನಿಶ್ರೇಷ್ಠಾಸ್ಸಂಪ್ರದಾಯಪರಂಪರಾಮ್ ।
ತತ್ತನ್ನಾಮ್ನಾ ನಮಸ್ಕೃತ್ಯ ಶ್ರದ್ಧಯಾ ದೇಶಿಕಾನಿಮಾನ್ ॥೬॥

ಪೂರ್ವೋಕ್ತೇನೈವ ಮಾರ್ಗೇಣ ಕುರ್ಯಾದಜ್ಞಾನನಾಶನಮ್ ।
ಯೋ ವಿದ್ಯಾಸಂತತಿಜ್ಞಾನವಿಹೀನೋ ದೇಶಿಕೋ ಭವೇತ್ ॥೭॥
ಸ ಘೋರಂ ಯಾತಿ ನರಕಂ ನಾಸ್ತಿ ಸಂದೇಹಕಾರಣಮ್ ।

ಯಾವ ಈಶ್ವರನಿದ್ದಾನೋ ಅವನು ತನಗೆತಾನೇ ಗುರುವಾದುದರಿಂದ ಸರ್ವರಿಗೂ ಆದಿಗುರುವಾಗಿದ್ದಾನೆ. ॥೨॥

ಎಲ್ಲಾ ವಿಧವಾದ ತಿಳಿವಳಿಕೆಗಳಿಗೂ ಸಮುದ್ರದಂತೆ ಇರುವ ಮಹಾ ವಿಷ್ಣುವು ಆ ಈಶ್ವರನಿಗೆ ಶಿಷ್ಯನು. ಆ ವಿಷ್ಣುವಿಗೆ ಎಲ್ಲಾ ಲೋಕಗಳಿಗೂ ಒಡೆಯನಾದ ಬ್ರಹ್ಮನು ಶಿಷ್ಯನು. ॥೩॥

ಸನತ್ಕುಮಾರರು ಬ್ರಹ್ಮನಿಂದ ಜ್ಞಾನಿಗಳಾದರು. ಅಂಥ ಸರ್ವಜ್ಞರಾದ ಸನತ್ಕುಮಾರಮುನಿಗಳಿಂದ ವೇದವ್ಯಾಸರು ಎಲ್ಲಾ ಜ್ಞಾನವನ್ನೂ ತಿಳಿದುಕೊಂಡರು. ಅಂಥ ವ್ಯಾಸರಿಂದ ನಾನು ತಿಳಿದು, ಸತ್ಯವಂತರಾದ ನಿಮಗೆ ಹೇಳಿರುತ್ತೇನೆ. ॥೪-೫॥

ಎಲೈ ಋಷಿಶ್ರೇಷ್ಠರಿರಾ, ಈ ರೀತಿಯಾಗಿ ಸಂಪ್ರದಾಯಪರಂಪರೆಯನ್ನು ತಿಳಿದು, ಅವರವರ ಹೆಸರನ್ನು ಹೇಳಿ ಅವರವರಿಗೆ ನಮಸ್ಕಾರಮಾಡಿ ಪೂರ್ವದಲ್ಲಿ ಹೇಳಿದ ರೀತಿಯಿಂದ ಆಚಾರ್ಯರಿಂದ ಉಪದೇಶವನ್ನು ಹೊಂದಿ ಯಾವಾಗಲೂ ನಿಜವನ್ನೇ ಹೇಳುತ್ತಾ ಗುರುಭಕ್ತಿಯುಳ್ಳವನಾದ ಭಕ್ತನು ಅಜ್ಞಾನವನ್ನು ನಾಶ ಮಾಡಬೇಕು. ॥೬॥

ಯಾರು ತಾವು ಈ ಜ್ಞಾನಸಂತತಿಯ ತಿಳಿವಿಲ್ಲದೆ ಮತ್ತೊಬ್ಬರಿಗೆ ಉಪದೇಶ ಮಾಡುವವರಾಗುತ್ತಾರೋ, ಅವರು ಕ್ರೂರವಾದ ನರಕದಲ್ಲಿ ಬೀಳುತ್ತಾರೆ. ॥೭॥

ಯೋ ವಿದ್ಯಾಸಂತತಿಜ್ಞಾನವಿಹೀನೋ ದೇಶಿಕೋ ಭವೇತ್ ॥೮॥

ಸ ನಭೋಭಕ್ಷಣೇನೈವ ಕ್ಷುದ್ವ್ಯಾಥಿಂ ವಿನಿವರ್ತಯೇತ್ ।
ಯೋ ವಿದ್ಯಾಸಂತತಿಜ್ಞಾನವಿಹೀನೋ ದೇಶಿಕೋ ಭವೇತ್ ॥೯॥

ಸ ವಿನೈವ ತಿಲಾಂಸ್ತೈಲಂ ಲಭತೇ ಸಿಕತಾಸು ಚ ।
ಯೋ ವಿದ್ಯಾಸಂತತಿಜ್ಞಾನವಿಶಿಷ್ಟೋ ದೇಶಿಕೋ ಭವೇತ್ ॥೧೦॥

ಸೋಽನಾಯಾಸೇನ ಸಂಸಾರಾನ್ನೄಣಾಮುತ್ತಾರಕೋ ಭವೇತ್ ।
ಸ್ವಗೋತ್ರರ್ಷೀನ್ನಮಸ್ಕೃತ್ಯ ಗುರೂಕ್ತೇನೈವ ವರ್ತ್ಮನಾ ॥೧೧॥

ಸ್ವಗುರುಂ ಚ ನಮಸ್ಕೃತ್ಯ ಶ್ರದ್ಧಯಾ ಚ ಗುರೋರ್ಗುರುಮ್ ।
ವಿಘ್ನೇಶಂ ಷಣ್ಮುಖಂ ಚಾಪಿ ಶಿವಾಂ ವಿದ್ಯಾಸ್ವರೂಪಿಣೀಮ್ ॥೧೨॥

ಅನ್ಯಾಂಶ್ಚ ಸಕಲಾನ್ದೇವಾನ್ ಬ್ರಹ್ಮವಿಷ್ಣುಪುರೋಗಮಾನ್ ।
ಪುನಶ್ಶಿಷ್ಯಸ್ಯ ಮೇಧಾವೀ ಚಿತ್ತಪಾಕಂ ಪರೀಕ್ಷ್ಯ ಚ ॥೧೩॥
ಅವಿದ್ಯಾಪಾಶವಿಚ್ಛೇದಂ ಕುರ್ಯಾತ್ಪ್ರಾಜ್ಞಸ್ತು ದೇಶಿಕಃ ।

ಯಾವನು ಬ್ರಹ್ಮವಿದ್ಯೆಯ ಪರಂಪರೆಯನ್ನು ತಿಳಿಯದೆ ಉಪದೇಶಕನಾಗುತ್ತಾನೋ, ಅಂಥವನು ಆಕಾಶವನ್ನು ತಿನ್ನುವುದರಿಂದ ಹಸಿವನ್ನು ಅಡಗಿಸಿಕೊಳ್ಳಲು ತೊಡಗುವವನಂತಾಗುತ್ತಾನೆ. ॥೮॥

ಯಾವನು ಬ್ರಹ್ಮವಿದ್ಯೆಯ ಪರಂಪರಾಜ್ಞಾನವಿಲ್ಲದೆ ಉಪದೇಶಕನಾಗುತ್ತಾನೋ, ಅವನು ಎಳ್ಳಿಲ್ಲದೆ ಎಣ್ಣೆಯನ್ನು ತೆಗೆಯುವವನಂತೆಯೂ ವ್ಯರ್ಥವಾಗಿ ಶ್ರಮಿಸುವವನು ಆಗುತ್ತಾನೆ.

ಯಾವನು ಬ್ರಹ್ಮವಿದ್ಯಾಪರಂಪರಾಜ್ಞಾನದಿಂದ ಕೂಡಿದವನಾಗಿ ಉಪದೇಶಕನಾಗುತ್ತಾನೋ, ಅವನು ಆಯಾಸವಿಲ್ಲದೆ ಮನುಷ್ಯರನ್ನು ಸಂಸಾರದಿಂದ ಉದ್ಧಾರ ಮಾಡುವವನಾಗುತ್ತಾನೆ. ॥೯-೧೦॥

ತಮ್ಮ ಕುಲಕ್ಕೆ ಮುಖ್ಯರಾದ ಋಷಿಗಳಿಗೆ ಗುರುಗಳು ಹೇಳಿಕೊಟ್ಟಿರುವ ರೀತಿಯಿಂದ ನಮಸ್ಕಾರಮಾಡಿ ಭಕ್ತಿಯಿಂದ ಗುರುಗಳಿಗೂ ಅವರ ಗುರುಗಳಿಗೂ ವಿಘ್ನೇಶ, ಷಣ್ಮುಖ, ಬ್ರಹ್ಮವಿದ್ಯಾಸ್ವರೂಪಳಾದ ಪಾರ್ವತೀ, ಇವರಿಗೂ ನಮಸ್ಕಾರ ಮಾಡಿ, ಶಿಷ್ಯನ ಮನಸ್ಸಿನ ಸ್ಥಿತಿಯನ್ನೂ ಪರೀಕ್ಷೆಮಾಡಿ ಪ್ರಾಜ್ಞರಾದ ಗುರುಗಳು

ವಿದಿತ್ವಾ ಶಿಷ್ಯಚಿತ್ತಸ್ಯ ವಿಪಾಕಂ ಪುನರಾಸ್ತಿಕಾಃ ॥೧೪॥

ದದ್ಯಾತ್ಪಾಕಾನುರೂಪೇಣ ವಿದ್ಯಾಮೇತಾಂ ಮಹೇಶ್ವರೀಮ್ ॥೧೫॥

ಮೂರ್ಖಶಿಷ್ಯೋಪದೇಶೇನ ವಿದ್ಯಾಗರ್ವೇಣ ಸುವ್ರತಾಃ ।
ಗುರುದ್ರೋಹೇಣ ಸರ್ವಜ್ಞೋಽಪ್ಯಂಧಕೂಪೇ ಪತತ್ಯಧಃ ॥೧೬॥

ತಸ್ಮಾತ್ಸಂವತ್ಸರಂ ಶಿಷ್ಯಂ ಪರೀಕ್ಷ್ಯಾಕೃತ್ರಿಮಂ ಪುನಃ ।
ಪ್ರದದ್ಯಾದ್ವೈದಿಕೀಂ ವಿದ್ಯಾಂ ಗುರುರ್ವಿದ್ಯಾಭಿವೃದ್ಧಯೇ ॥೧೭॥

ವಿದ್ಯಾಸಂತತಿವಿಜ್ಞಾನಂ ಶಿಷ್ಯಚಿತ್ತಪರೀಕ್ಷಣಮ್ ।
ಅವಶ್ಯಂ ಭಾವಿ ವಿಪ್ರೇಂದ್ರಾ ದೇಶಿಕಸ್ಯೇಶ್ವರಾಜ್ಞಯಾ ॥೧೮॥

ಶಿಷ್ಯಸಂಬಂಧವಾದ ಅವಿದ್ಯೆಯನ್ನು ನಾಶಮಾಡಿ, ಪುನಃ ಶಿಷ್ಯನ ಮನಸ್ಸನ್ನು ಪರೀಕ್ಷೆಮಾಡಿ ಅವನ ಮನಸ್ಸಿನ ಸ್ಥಿತಿಗೆ ತಕ್ಕಹಾಗೆ ಮಹೇಶ್ವರೀ ವಿದ್ಯೆಯನ್ನು ಉಪದೇಶಮಾಡಬೇಕು. ||೧೧-೧೨-೧೩-೧೪||

ಎಲೈ ನಿಯಮವಂತರಾದ ಋಷಿಗಳೇ, ಮೂರ್ಖನಾದ ಶಿಷ್ಯನಿಗೆ ವಿದ್ಯೋಪದೇಶಮಾಡುವುದರಿಂದಲೂ, ತಾನು ವಿದ್ಯಾವಂತನೆಂದು ಜಂಬಪಡುವುದರಿಂದಲೂ, ವಿದ್ಯೋಪದೇಶಮಾಡಿದ ಗುರುಗಳಿಗೆ ವಂಚನೆಮಾಡುವುದರಿಂದಲೂ, ಅವನು ಸರ್ವಜ್ಞನಾದರೂ ಘೋರವಾದ ನರಕದಲ್ಲಿ ಬೀಳುತ್ತಾನೆ. ||೧೫||

ಆದುದರಿಂದ ಗುರುವು ಶಿಷ್ಯನನ್ನು ಒಂದು ವರ್ಷದವರೆಗೂ ಚನ್ನಾಗಿ ಪರೀಕ್ಷೆಮಾಡಿ ಯಾವ ವಿಧವಾದ ಮೋಸವನ್ನೂ ಮಾಡುವವನಲ್ಲವೆಂಬುದನ್ನು ತಿಳಿದು, ಅಂಥ ಶಿಷ್ಯನಿಗೆ ವಿದ್ಯೆಯ ಅಭಿವೃದ್ಧಿಗೋಸ್ಕರ ವೈದಿಕವಿದ್ಯೆಯನ್ನು ಉಪದೇಶಮಾಡಬೇಕು. ||೧೬||

ಎಲೈ ಬ್ರಾಹ್ಮಣಶ್ರೇಷ್ಠರೇ, ಗುರುವಾಗುವವನಿಗೆ ವಿದ್ಯಾಪರಂಪರೆಯ ತಿಳಿವಳಿಕೆಯೂ, ಶಿಷ್ಯನ ಮನಸ್ಸನ್ನು ಚೆನ್ನಾಗಿ ಪರೀಕ್ಷೆಮಾಡುವುದೂ ಅವಶ್ಯವಾಗಿ ತಿಳಿದಿರಲೇಬೇಕೆಂಬುದು ಈಶ್ವರನ ಅಪ್ಪಣೆಯು. ಆದ್ದರಿಂದ ಗುರುವಿಗೆ ಈ ಎರಡು ವಿಷಯಗಳು ಚೆನ್ನಾಗಿ ತಿಳಿದಿರಬೇಕು. ||೧೭||

ಈ ಸಂಪ್ರದಾಯ ಗೊತ್ತಿಲ್ಲದವನಿಂದ ಉಪದೇಶಮಾಡಲ್ಪಟ್ಟ ವಿದ್ಯೆಯು ವಿದ್ಯೆಯಲ್ಲವೆಂಬುದು ತತ್ತ್ವವನ್ನು ಬಲ್ಲವರ ಅಭಿಪ್ರಾಯವಾಗಿರುತ್ತದೆ. ||೧೮||

ಸಂಪ್ರದಾಯವಿಹೀನಾಯ ವಿದ್ಯಾವೇದಾಂತಪಾರಗಾಃ ।
ಸಾ ವಿದ್ಯಾ ನೈವ ವಿದ್ಯಾ ಸ್ಯಾದಿತಿ ತತ್ತ್ವವಿದಾಂ ಸ್ಥಿತಿಃ ॥೧೯॥

ಪಾರಂಪರ್ಯಪರಿಜ್ಞಾನಂ ಪರವಿದ್ಯಾಪ್ರವರ್ತಕಮ್ ।
ಪಾರಂಪರ್ಯಾವಬೋಧೇನ ವಿದ್ಯಾ ಸಾ ವೀರ್ಯವತ್ತರಾ ॥೨೦॥

ಪಾರಂಪರ್ಯಪರಿಜ್ಞಾನಾ ದೇವಪಾಶನಿಕೃನ್ತನಮ್ ।
ತಸ್ಮಾತ್ಪ್ರಾಜ್ಞಸ್ಸ್ವವಿದ್ಯಾಯಾಸ್ಸಂತತಿಜ್ಞಾನವಾನ್ ಭವೇತ್ ॥೨೧॥

ಯಥಾ ಗೋತ್ರಪರಿಜ್ಞಾನಂ ವಿವಾಹಸ್ಯೋಪಕಾರಕಮ್ ।
ಪಾರಂಪರ್ಯಪರಿಜ್ಞಾನಂ ತಥಾ ಜ್ಞಾನೋಪಕಾರಕಮ್ ॥೨೨॥

ವಿದ್ಯಾಸಂತತಯೋ ವಿಪ್ರಾ ಬಹುರೂಪಾಶ್ಶ್ರುತೌ ಶ್ರುತಾಃ ।
ತತ್ತತ್ಸಂತತಿವಿಜ್ಞಾನಂ ವಿದ್ಯಾಸಿದ್ಧೇಸ್ತು ಕಾರಣಮ್ ॥೨೩॥

ಯೋ ಗುರುರ್ಭವತಿ ಯಸ್ಯ ಸುವ್ರತಾಃ
ಸೋಽಪಿ ತಸ್ಯ ಪರವೇದನಾಯ ತು ।

ವಿದ್ಯಾಪರಂಪರೆಯ ತಿಳಿವಳಿಕೆಯು ಜ್ಞಾನಕ್ಕೆ ಕಾರಣವು. ಆದುದರಿಂದ ವಿದ್ಯಾಸಂತತಿಯಪರಂಪರಾಜ್ಞಾನದಿಂದ ವಿದ್ಯೆಯು ಬಲವುಳ್ಳದಾಗುವುದು ಎಂದರೆ ಮೋಕ್ಷಕ್ಕೆ ಕಾರಣವಾಗುವುದು. ||೧೯||

ವಿದ್ಯಾಗುರುಗಳ ಪರಂಪರೆಯನ್ನು ತಿಳಿಯುವುದರಿಂದಲೇ ಸಂಸಾರಬಂಧನದ ನಾಶವುಂಟಾಗುವುದಾದ್ದರಿಂದ ಬುದ್ಧಿವಂತನಾದವನು, ತನಗೆ ಉಪದೇಶವಾದ ವಿದ್ಯಾವಂತರಪರಂಪರೆಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ||೨೦||

ಗೋತ್ರದ ತಿಳಿವಳಿಕೆಯು ಹೇಗೆ ವಿವಾಹಕ್ಕೆ ಕಾರಣವಾಗುವುದೋ, ಹಾಗೆ ವಿದ್ಯಾಪರಂಪರಾಜ್ಞಾನವು ಮೋಕ್ಷಸಾಧನವಾದ ಜ್ಞಾನಕ್ಕೆ ಕಾರಣವಾಗುವುದು. ||೨೨||

ಎಲೈ ಋಷಿಗಳೇ, ಯಾರು ಯಾರಿಗೆ ಗುರುಗಳಾಗುತ್ತಾರೋ ಅವರೂ ಆ ಶಿಷ್ಯನಿಗೆ ಪರಬ್ರಹ್ಮದ ತಿಳಿವಳಿಕೆಗೆ ಕಾರಣರಾಗುತ್ತಾರೆ; ಭಕ್ತಿವಂತನಾದ ಅಂಥ ಶಿಷ್ಯನಿಗೆ ಅವನ ಗುರುಗಳ ಪರಂಪರೆಯನ್ನು ತಿಳಿಸಬೇಕು. ||೨೩||

ಯಾರು ಉಪದೇಶಕರ ಪರಂಪರೆಯನ್ನು ಚೆನ್ನಾಗಿ ತಿಳಿದಿದ್ದಾರೆಯೋ ಅಂಥ

ಸ್ವಸ್ಯ ದೇಶಿಕಪರಂಪರಾಮಿಮಾಂ
ತಸ್ಯ ಭಕ್ತಿಸಹಿತಸ್ಯ ಬೋಧಯೇತ್ ॥೨೪॥

ಶಕ್ತಿರಸ್ಯ ಮಹತೀ ವಿಜೃಂಭತೇ
ಯಸ್ಯ ದೇಶಿಕಪರಂಪರಾ ಧೃತಾ ।
ಮುಕ್ತಿಸಿದ್ಧಿರಪಿ ಚಾಸ್ತಿ ಸದ್ಗುರೋಃ
ಶುದ್ಧವಂಶವರವೇದನೇನ ತು ॥೨೫॥

ಸಂತಾನವಿಜ್ಞಾನವಿಹೀನದೇಶಿಕಃ
ಪಿಶಾಚಪೂರ್ವೈರಪಿ ಪೀಡಿತೋ ಭವೇತ್ ।
ಸಂತಾನವಿಜ್ಞಾನವತಃ ಸದಾಶಿವಃ
ಸ್ವಕಂ ವಪುಸ್ತಸ್ಯ ದದಾತಿ ಚಿತ್ಸುಖಮ್ ॥೨೬॥

ಶೃಣುಧ್ವಮನ್ಯತ್ಪ್ರವದಾಮಿ ಸಂತತಿ
ಪ್ರಬೋಧಹೀನಸ್ಯ ನರಸ್ಯ ಬೋಧನಮ್ ।

ವರಿಗೆ ಉತ್ತಮವಾದ ಒಂದು ವಿಧವಾದ ಶಕ್ತಿಯು ಪ್ರಕಾಶಿಸುತ್ತದೆ. ಮತ್ತು ಅಂಥ ಸದ್ಗುರುಗಳ ಪರಿಶುದ್ಧವಾದ ವಂಶದ ತಿಳಿವಳಿಕೆಯಿಂದ ಮೋಕ್ಷವೂ ಕೂಡ ಕ್ರಮವಾಗಿ ಉಂಟಾಗುತ್ತದೆ. ॥೨೪॥

ಅಲ್ಲದೆ ಹೀಗೆ ಗುರುಪರಂಪರೆಯನ್ನು ತಿಳಿಯದಿರುವ ಉಪದೇಶಕನಿಗೆ ಪಿಶಾಚಾದಿಗಳ ಬಾಧೆಯುಂಟಾಗುವುದು. ಅಂಥ ಪರಂಪರಾಜ್ಞಾನವುಳ್ಳವನಿಗಾದರೋ, ಸದಾಶಿವನು ಜ್ಞಾನರೂಪವೂ ಸುಖರೂಪವೂ ಆದ ತನ್ನ ಶರೀರವನ್ನೇ ಕೊಡುತ್ತಾನೆ. ಎಂದರೆ ಪರಂಪರೆಯ ತಿಳಿವಳಿಕೆಯುಳ್ಳವನಿಗೆ ಸುಖರೂಪವಾದ ಮೋಕ್ಷವೇ ಉಂಟಾಗುವುದು. ॥೨೫॥

ಇನ್ನೊಂದು ವಿಚಾರವನ್ನು ಹೇಳುತ್ತೇನೆ ಕೇಳಿರಿ. ಪರಂಪರಾಜ್ಞಾನವಿಲ್ಲದ ಮನುಷ್ಯನಿಗೆ ಮುಕ್ತಿಯಾಗಲಿ, ಜ್ಞಾನವಾಗಲಿ ಸರಿಯಾದ ರೀತಿಯಲ್ಲಿ ಉಂಟಾಗುವುದಿಲ್ಲ. ಅಂಥವನು ಗುರುವೂ ಅಲ್ಲ, ಸುಖವುಳ್ಳವನೂ ಅಲ್ಲ. ॥೨೬॥

ಪರಂಪರಾಜ್ಞಾನವಿಲ್ಲದವನ ಶಿಷ್ಯನು ಮುಕ್ತಿಯನ್ನೂ ಪರಬ್ರಹ್ಮಜ್ಞಾನವನ್ನೂ ಸುಖವನ್ನೂ ಚಿತ್ತಶುದ್ಧಿಯನ್ನೂ ಸರಿಯಾಗಿ ಹೊಂದುವುದಿಲ್ಲ. ಯಾವಾ

ನ ಮುಕ್ತಿಸಿದ್ಧಿರ್ನ ಚ ತಸ್ಯ ವೇದನಂ
ನ ದೇಶಿಕತ್ವಂ ನ ಸುಖಿತ್ವಮಾಸ್ತಿಕಾಃ ॥೨೭॥

ಶಿಷ್ಯಸ್ತು ಮುಕ್ತಿಂ ಪರವೇದನಂ ಸುಖಂ
ಚಿತ್ತಸ್ಯ ಶುದ್ಧಿಂ ನ ಚ ಯಾತಿ ಸುವ್ರತಾಃ ।
ಬದ್ಧಶ್ಚ ಕಷ್ಟಶ್ಚ ವಿಮೋಹಿತಶ್ಚ
ಭ್ರಷ್ಟಶ್ಚ ಸತ್ಯಂ ಪರಿಭಾಷಿತಂ ಮಯಾ ॥೨೮॥

ಕಿಮಿಹ ಬಹುಭಿರುಕ್ತೈಸ್ಸಂತತಿಜ್ಞಾನಹೀನಾಃ
ಸಕಲದುರಿತರಾಶಿಂ ಸತ್ಯಮುಕ್ತಂ ವಿಶಂತಿ ।
ಪರಮಪದಸಮಾಖ್ಯಂ ಬ್ರಹ್ಮರೂಪಂ ನ ಯಾಂತಿ
ಸ್ಫುರಣಸುಖಮನಂತಂ ಸಂತತಿಜ್ಞಾನಹೀನಾಃ ॥೨೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಸಂಪ್ರದಾಯಪರಂಪರಾವಿಚಾರೋ ನಾಮ ಪಂಚತ್ರಿಂಶಾಧ್ಯಾಯಃ

ಗಲೂ ಸಂಸಾರದುಃಖದಿಂದ ಕಷ್ಟಪಡುತ್ತಾ ಭ್ರಾಂತನಾಗಿ ಮೋಕ್ಷವಿಲ್ಲದವನಾಗುತ್ತಾನೆ. ನಾನು ಹೇಳಿರುವುದೆಲ್ಲವೂ ಸತ್ಯವು. ॥೨೭॥

ಎಷ್ಟು ಹೇಳಿ ಏನು ಪ್ರಯೋಜನ? ಪರಂಪರಾಜ್ಞಾನವಿಲ್ಲದವರಿಗೆ ಹಿಂದೆ ಹೇಳಿದ ಎಲ್ಲಾವಿಧವಾದ ಪಾಪಗಳೂ ಉಂಟಾಗುತ್ತವೆ. ಮತ್ತು ಪರಮಪದವೆಂಬ ಬ್ರಹ್ಮರೂಪವನ್ನು ಅವರು ಹೊಂದುವುದಿಲ್ಲ. ಜ್ಞಾನಸುಖವನ್ನೂ ಹೊಂದುವುದಿಲ್ಲ. ಜ್ಞಾನಸಂತತಿಯ ಪರಂಪರೆಯನ್ನು ತಿಳಿಯುವುದರಲ್ಲಿ ತುಂಬ ಮಹಿಮೆಯು ಇದೆ. ಎಂಬುದನ್ನು ಅರಿಯಬೇಕೆಂದು ಭಾವವು. ಎಂದು ಸೂತರು ಶೌನಕಾದಿಗಳನ್ನು ಕುರಿತು ಹೇಳಿದರು. ॥೨೮-೨೯॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಜ್ಞಾನಸಂತತಿಯ ಪರಂಪರೆಯ ಅರಿವಿನಮಹಿಮೆಯನ್ನು ವಿವರಿಸುವ
ಮೂವತ್ತೈದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಷಟ್ತ್ರಿಂಶೋಽಧ್ಯಾಯಃ ||

ಮೂವತ್ತಾರನೆಯ ಅಧ್ಯಾಯವು

(ಸದ್ಯೋಮುಕ್ತಿಕರಕ್ಷೇತ್ರಮಹಿಮಕಥನಮ್)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಸದ್ಯೋಮುಕ್ತಿಕರಂ ಪರಮ್ ।
ಆಮ್ನಾಯಾಂತೈಕಸಂಸಿದ್ಧಂ ಸುಕರಂ ಸರ್ವದೇಹಿನಾಮ್ ॥೧॥

ಪುರಾ ಭಗವತೀ ದೇವೀ ಭೋಗಮೋಕ್ಷಫಲಪ್ರದಾ ।
ಪುರಾಣಾ ಪೂರ್ಣವಿಜ್ಞಾನಸ್ವರೂಪಾ ಪರಮಾ ಶಿವಾ ॥೨॥

ಗುರುಶಿಷ್ಯಪರಂಪರೆಯಲ್ಲಿ ಜ್ಞಾನಪ್ರವಾಹದ ಸಂತತಿಯನ್ನು ಅರಿಯುವುದು ಸುಲಭವಾಗಿಯೂ ಶೀಘ್ರವಾಗಿಯೂ ಮುಕ್ತಿಗೆ ಕಾರಣವಾಗಿರುವಂತೆ, ಶಿವಕ್ಷೇತ್ರಗಳಲ್ಲಿ ವ್ರತಗಳನ್ನು ಆಚರಿಸುವುದೂ ಅಂತಹ ಸಾಧನವೆಂದು ತಿಳಿಸಲು ಸೂತರು ಶೌನಕಾದಿಗಳನ್ನು ಕುರಿತು ಹೇಳುತ್ತಾರೆ. ಎಲೈ ಶೌನಕಾದಿ ಋಷಿಗಳೇ, ಉಪನಿಷತ್ತಿನಲ್ಲಿ ಮಾತ್ರ ಹೇಳಲ್ಪಟ್ಟಿರುವ, ಎಲ್ಲಾ ಪ್ರಾಣಿಗಳಿಂದಲೂ ಸುಲಭವಾಗಿ ಪಡೆಯಬಹುದಾದ ಶೀಘ್ರವಾಗಿ ಮುಕ್ತಿಯನ್ನು ಕೊಡುವ ಕ್ಷೇತ್ರದ ಮಹಿಮೆಯನ್ನು ಹೇಳುತ್ತೇನೆ. ನೀವುಗಳೆಲ್ಲರೂ ಕೇಳಿರಿ. ||೧||

ಎಲೈ ಋಷಿಗಳೇ, ಪೂರ್ವದಲ್ಲಿ ಭೋಗಮೋಕ್ಷಗಳನ್ನು ಕೊಡುವ ಜ್ಞಾನಸ್ವರೂಪಳಾದ ಬಹಳ ಹಳಬಳಾದ ಪೂಜ್ಯಳಾದ ಪಾರ್ವತೀದೇವಿಯು ದೇವತೆಗಳಿಗೆಲ್ಲರಿಗೂ ದೇವನಾದ ಎಲ್ಲಾ ಲೋಕಗಳಿಗೂ ಒಡೆಯನಾದ, ದೇವತೆಗಳಲ್ಲಿಯೂ

ದೇವದೇವಂ ಜಗನ್ನಾಥಂ ದೇವೇಷು ಚ ನರೇಷು ಚ ।
ಕ್ರಿಮಿಕೀಟಪತಂಗೇಷು ಸಮಂ ಸರ್ವೇಷು ಸಂಸ್ಥಿತಮ್ ॥೨॥

ಸತ್ಯವಿಜ್ಞಾನ ಸಂಪೂರ್ಣಂ ಸುಖಲಕ್ಷಣಮದ್ವಯಮ್ ।
ಸ್ವಪ್ರಕಾಶೈಕಸಂಸಿದ್ಧಂ ಸ್ವವಿಲಕ್ಷಣವರ್ಜಿತಮ್ ॥೪॥

ಘೃತಕಾಠಿನ್ಯವದ್ವಿಪ್ರಾಃ ಕೇವಲಂ ಕೃಪಯೈವ ತು ।
ಆವಿರ್ಭೂತಮಹಾನಂದತಾಂಡವಂ ಕರುಣಾಲಯಮ್ ॥೫॥

ಗುಣಾತೀತಂ ಗುರುಂ ಗುಹ್ಯಮುಪಾಸ್ಯಂ ಗುಣಮೂರ್ತಿಭಿಃ ।
ಪ್ರಣಮ್ಯ ದಂಡವದ್ಭೂಮೌ ಶಿವಾಽಪೃಚ್ಛದಿದಂ ಬುಧಾಃ ॥೬॥

॥ ದೇವ್ಯುವಾಚ ॥

ದೇವದೇವ ಜಗನ್ನಾಥ ಜಗತಾಮಾರ್ತಿಭಂಜನ ।
ಸದ್ಯೋಮುಕ್ತಿಕರಂ ಪುಂಸಾಂ ಸುಕರಂ ಬ್ರೂಹಿ ಮೇ ಶಿವ ॥೭॥

ಮನುಷ್ಯರಲ್ಲಿಯೂ ಸಣ್ಣ ಸಣ್ಣ ಹುಳುಗಳಲ್ಲಿಯೂ ಸದ್ರೂಪದಿಂದ ಒಂದೇ ಸಮವಾಗಿರುವ, ಸತ್ಯನೂ, ಜ್ಞಾನದಿಂದ ತುಂಬಿರುವನೂ, ಸುಖಸ್ವರೂಪನೂ, ಅದ್ವಿತೀಯನೂ, ಸ್ವಪ್ರಕಾಶದಿಂದ (ಜ್ಞಾನದಿಂದ) ಮಾತ್ರ ತಿಳಿಯಲು ಯೋಗ್ಯನೂ, ವಿಕಾರಾದಿಗಳಿಲ್ಲದವನೂ (ತುಪ್ಪದಲ್ಲಿರುವ ಕಾಠಿನ್ಯದಂತೆ ನಾಮರೂಪ ಸಂಬಂಧವಿಲ್ಲದ ಎಂದರೆ ಗಟ್ಟಿ ತುಪ್ಪವನ್ನು ಕರಗಿಸಿದರೆ ಅದು ಆ ಕರಗಿದ ತುಪ್ಪದಲ್ಲಿಯೇ ಅಡಗಿ ತುಪ್ಪದಿಂದ ಬೇರೆಯಾಗಿ ಹೇಗೆ ದೊರೆಯುವುದಿಲ್ಲವೋ, ಹಾಗೆ ಬ್ರಹ್ಮಸಾಕ್ಷಾತ್ಕಾರವಾದ ಮೇಲೆ ಎಲ್ಲವೂ ಬ್ರಹ್ಮರೂಪವಾಗಿಯೇ ಇರುವುದರಿಂದ ಬ್ರಹ್ಮನಿಗಿಂತ ಬೇರೆಯಾದ ಪ್ರಪಂಚವು ಇಲ್ಲವೆಂದು ತಾತ್ಪರ್ಯವು.) ಸಂತೋಷಾಧಿಕ್ಯದಿಂದ ನರ್ತನಮಾಡುತ್ತಿರುವ ಕರುಣಾಶಾಲಿಯಾದ ಸತ್ತ್ವರಜಸ್ತಮೋಗುಣಗಳ ಸಂಬಂಧವಿಲ್ಲದ ಲೋಕಕ್ಕೆಲ್ಲಕ್ಕೂ ಗುರುವಾದ, ಬಹಳ ರಹಸ್ಯವಾಗಿರುವ, ಸತ್ತ್ವರಜಸ್ತಮೋಗುಣಗಳೇ ಪ್ರಧಾನವಾಗಿ ಉಳ್ಳ ಸೃಷ್ಟಿ ಸ್ಥಿತಿಲಯಗಳನ್ನು ಮಾಡುತ್ತಿರುವ, ಬ್ರಹ್ಮವಿಷ್ಣುರುದ್ರಾದಿಗಳಿಂದ ಸ್ತೋತ್ರ ಮಾಡಲ್ಪಡುತ್ತಿರುವ, ಪರಮೇಶ್ವರನಿಗೆ ಸಾಷ್ಟಾಂಗನಮಸ್ಕಾರಮಾಡಿ, ಮುಂದೆ ಹೇಳುವ ರೀತಿಯಲ್ಲಿ ವಿಜ್ಞಾಪನೆಮಾಡಿದಳು. ॥೨-೩-೪-೫-೬॥

ದೇವಿಯು ಹೇಳಿದಳು—ದೇವತೆಗಳಿಗೂ ದೇವನಾದವನೇ, ಲೋಕದ ದುಃಖ ಪರಿಹಾರಕನೇ, ಮನುಷ್ಯರಿಗೆ ಬಹಳ ಸುಲಭವಾಗಿ, ಜಾಗ್ರತೆಯಾಗಿ ಮುಕ್ತಿಯ

|| ಸೂತ ಉವಾಚ ||

ಏವಂ ಪೃಷ್ಟೋ ಮಹಾದೇವೋ ಮಹಾದೇವ್ಯಾ ವೃಷಧ್ವಜಃ ।
ಹಿತಾಯ ಜಗತಾಂ ತಸ್ಯೈ ಬಭಾಷೇ ತನ್ಮಹೇಶ್ವರಃ ||೮||

|| ಮಹೇಶ್ವರ ಉವಾಚ ||

ಸಾಧುಸಾಧು ಮಹಾದೇವಿ ತ್ವಯಾ ಪೃಷ್ಟಂ ಜಗದ್ಧಿತಮ್ ।
ಇತಃ ಪೂರ್ವಂ ಮಯಾ ನೋಕ್ತಂ ವದಾಮಿ ತವ ತಚ್ಛೃಣು ||೯||

ಬ್ರಾಹ್ಮಣೋ ವಾಽಂತ್ಯಜೋ ವಾಽಪಿ
ಸ್ತ್ರೀಪಾಷಂಡೋಽಥವಾ ಬುಧಃ ।
ದರಿದ್ರೋ ವಾ ಸಮೃದ್ಧೋ ವಾ
ಮೂರ್ಖೋ ವಾ ಪಂಡಿತೋಽಪಿ ವಾ ||೧೦||

ಸಮರ್ಥೋ ವಾಽಸಮರ್ಥೋ ವಾ ಬಾಲೋ ವಾ ಸ್ಥವಿರೋಽಪಿ ವಾ ।
ಆಸ್ತಿಕೋ ವಾ ಮಹಾದೇವಿ ನಾಸ್ತಿಕ್ಯೇನ ಯುತೋಽಪಿ ವಾ ||೧೧||

ನ್ನುಂಟುಮಾಡುವ ಕ್ಷೇತ್ರದ ಮಹಿಮೆಯನ್ನು ನನಗೆ ತಿಳಿಸು ಎಂದು ವಿಜ್ಞಾಪನೆ ಮಾಡಿದಳು. ||೭||

ಈ ರೀತಿಯಾಗಿ ಪಾರ್ವತೀದೇವಿಯಿಂದ ಕೇಳಲ್ಪಟ್ಟ ಪರಮೇಶ್ವರನು ಲೋಕದ ಹಿತಕ್ಕಾಗಿ ಪಾರ್ವತೀದೇವಿಗೆ ಅಂಥ ಕ್ಷೇತ್ರದ ಮಹಿಮೆಯನ್ನು ಹೇಳಿದನು ಎಂದು ಸೂತರು ಹೇಳಿದರು. ||೮||

ಎಲೌ ಪಾರ್ವತಿಯೇ, ನೀನು ಕೇಳಿರುವುದು ಬಹಳ ಒಳ್ಳೆಯದಾಯಿತು. ನೀನು ಕೇಳಿರುವುದು ಲೋಕಕ್ಕೂ ಹಿತವನ್ನುಂಟುಮಾಡುವುದಾಗಿದೆ. ಇಂಥ ವಿಚಾರವನ್ನು ಇದುವರೆಗೆ ನಾನು ಯಾರಿಗೂ ಹೇಳಿರಲಿಲ್ಲ. ಈಗ ನಿನಗಾಗಿ ಹೇಳುತ್ತೇನೆ, ಅದನ್ನು ನೀನು ಕೇಳು. ||೯||

ಎಲೌ ಪಾರ್ವತಿಯೇ, ಬ್ರಾಹ್ಮಣನೇ ಆಗಲಿ, ಚಂಡಾಲನೇ ಆಗಲಿ, ಹೆಂಗಸಾಗಲಿ, ಪಾಷಂಡನಾಗಲಿ, ವಿದ್ವಾಂಸನಾಗಲಿ, ದರಿದ್ರನಾಗಲಿ, ಐಶ್ವರ್ಯವಂತನಾಗಲಿ, ದಡ್ಡನಾಗಲಿ, ಪಂಡಿತನಾಗಲಿ, ಬಲಶಾಲಿಯಾಗಲಿ, ಬಲವಿಲ್ಲದವನಾಗಲಿ, ಹುಡುಗನಾಗಲಿ, ಮುದುಕನಾಗಲಿ, ಆಸ್ತಿಕನಾಗಲಿ, ನಾಸ್ತಿಕನಾಗಲಿ, ಭೂಮಿಯ

ಭೂಮೌ ದಕ್ಷಿಣಕೈಲಾಸೇ ಸರ್ವಸ್ಥಾನವರೇ ಶುಭೇ ।
ಸುವರ್ಣಮುಖರೀತೀರೇ ಸುಸ್ಥಿತೇ ಸರ್ವಸೇವಿತೇ ॥೧೨॥

ತ್ವಯಾ ಮಯಾ ವಾ ಪುತ್ರಾಭ್ಯಾಂ ನಂದಿನಾ ವೃಷಭೇಣ ಚ ।
ಮಮ ಭಕ್ತೈರಶೇಷೈಶ್ಚ ಬ್ರಹ್ಮಣಾ ವಿಷ್ಣುನಾಽಪಿ ಚ ॥೧೩॥

ಇಂದ್ರಾದಿಲೋಕಪಾಲೈಶ್ಚ ಸೋಮಸೂರ್ಯಾದಿಭಿಸ್ತಥಾ ।
ದೇವತಾಭಿಶ್ಚ ಸರ್ವಾಭಿರ್ಯಕ್ಷರಾಕ್ಷಸಪೂರ್ವಕೈಃ ॥೧೪॥

ಸರ್ವದಾ ಸೇವಿತೇ ಶುದ್ಧೇ ಸರ್ವಕಾಮಾರ್ಥಸಾಧಕೇ ।
ಸಂವತ್ಸರವ್ರತಂ ಕುರ್ಯಾತ್ಸದ್ಯೋಮುಕ್ತಿಕರಂ ತು ತತ್ ॥೧೫॥

ಆದಿತ್ಯೇ ಮೇಷಸಂಯುಕ್ತೇ ಚಿತ್ರಾನಕ್ಷತ್ರಕೇ ನರಃ ।
ಸುವರ್ಣಮುಖರೀತೋಯೇ ಪವಿತ್ರೇ ಪಾಪನಾಶಕೇ ॥೧೬॥

ಪ್ರಾತಃಸ್ನಾತ್ವಾ ಯಥಾಶಕ್ತಿ ಧನಂ ದತ್ವಾ ಪ್ರಿಯೇಣ ತು ।
ಶ್ರೀಕಾಳಹಸ್ತಿನಾಥಾಖ್ಯಂ ದೇವಂ ಮಾಮಾದರೇಣ ತು ॥೧೭॥

ಲ್ಲಿರುವ ದಕ್ಷಿಣಕೈಲಾಸವೆಂಬ, ಎಲ್ಲಾ ಸ್ಥಳಗಳಿಗಿಂತಲೂ ಉತ್ತಮವಾದ, ಮಂಗಳಕರವಾದ, ಸುವರ್ಣಮುಖರೀ ಎಂಬ ನದಿಯ ದಡದಲ್ಲಿರುವ, ಎಲ್ಲರಿಂದಲೂ ಸೇವಿಸಲ್ಪಡುತ್ತಿರುವ ಮತ್ತು ನಿನ್ನಿಂದಲೂ ನನ್ನಿಂದಲೂ ಮಕ್ಕಳಾದ ಗಣೇಶ, ಷಣ್ಮುಖ ಇವರಿಂದಲೂ, ವೃಷಭರೂಪಿಯಾದ ನಂದಿಯಿಂದಲೂ, ಮತ್ತು ನನ್ನ ಭಕ್ತರಿಂದಲೂ, ಬ್ರಹ್ಮ ವಿಷ್ಣು ಇವರುಗಳಿಂದಲೂ, ಇಂದ್ರನೇ ಮೊದಲಾದ ಎಂಟು ಜನ ಲೋಕಪಾಲಕರಿಂದಲೂ, ಚಂದ್ರಸೂರ್ಯರಿಂದಲೂ, ಎಲ್ಲಾ ದೇವತೆಗಳಿಂದಲೂ, ಯಕ್ಷರು ರಾಕ್ಷಸರು ಇವರುಗಳಿಂದಲೂ ಯಾವಾಗಲೂ ಸೇವಿಸಲ್ಪಡುತ್ತಿರುವ, ಪರಿಶುದ್ಧವಾದ, ಸಕಲ ಇಷ್ಟಾರ್ಥಗಳನ್ನುಂಟುಮಾಡುವ, ಸ್ಥಳದಲ್ಲಿ ಒಂದು ವರ್ಷದವರೆಗೆ ನಿಯಮದಿಂದ ಇರಬೇಕು. ಹೀಗೆ ಮಾಡಿದರೆ ಜಾಗ್ರತೆಯಾಗಿ ಮೋಕ್ಷವುಂಟಾಗುವುದು. ॥೧೦-೧೧-೧೨-೧೩-೧೪-೧೫॥

ಸೂರ್ಯನು ಮೇಷದಲ್ಲಿರುವಾಗ (ಮೇಷಮಾಸದಲ್ಲಿ) ಕೃತ್ತಿಕಾನಕ್ಷತ್ರದಲ್ಲಿ ಪರಿಶುದ್ಧವೂ ಪಾಪವನ್ನು ನಾಶಮಾಡುವುದೂ ಆದ ಸುವರ್ಣಮುಖರೀ ನದಿಯ ನೀರಿನಲ್ಲಿ ಬೆಳಗ್ಗೆ ಸ್ನಾನಮಾಡಿ ಭಕ್ತಿಯಿಂದ ಯಥಾಶಕ್ತಿಯಾಗಿ ದ್ರವ್ಯ ದಾನಮಾಡಿ

ಪ್ರದಕ್ಷಿಣಂ ಯಥಾಶಕ್ತಿ ಕೃತ್ವಾ ಭೂಮೌ ಚ ದಂಡವತ್ ।
ಪ್ರಣಮ್ಯ ದೃಷ್ಟ್ವಾ ದೇವೇಶಿ ನಕ್ತಂ ಭೋಜನಮಾಚರೇತ್ ॥೧೮॥

ಆದಿತ್ಯೇ ವೃಷಭಂ ಪ್ರಾಪ್ತೇ ವಿಶಾಖರ್ಕ್ಷೇ ಸಮಾಹಿತಃ ।
ಸುವರ್ಣಮುಖರೀತೋಯೇ ಪ್ರಾತಃಸ್ನಾತ್ವಾ ಯಥಾಬಲಮ್ ॥೧೯॥

ದತ್ವಾ ಪ್ರದಕ್ಷಿಣಂ ಕೃತ್ವಾ ದೇವಂ ದೃಷ್ಟ್ವಾಽಭಿವಾದ್ಯ ಚ ।
ಸಮಾಹಿತಮನಾ ಭೂತ್ವಾ ನಕ್ತ ಭೋಜನಮಾಚರೇತ್ ॥೨೦॥

ಆದಿತ್ಯೇ ಮಿಥುನಂ ಪ್ರಾಪ್ತೇ ಮೂಲಾಖ್ಯೇ ತಾರಕೇ ಬುಧಃ ।
ಸುವರ್ಣಮುಖರೀಸ್ನಾನಂ ಕೃತ್ವಾ ಪ್ರಾತಸ್ಸಮಾಹಿತಃ ॥೨೧॥

ಪ್ರದತ್ವಾ ಧನಮನ್ಯದ್ವಾ ಯಥಾಶಕ್ತಿ ಮಹರ್ಷಯಃ ।
ದೇವಂ ಪ್ರದಕ್ಷಿಣೀಕೃತ್ಯ ಪ್ರಣಮ್ಯ ಭುವಿ ದಂಡವತ್ ॥೨೨॥

ದೃಷ್ಟ್ವಾ ತತ್ರೈವ ಮಾಂ ದೇವಿ ನಕ್ತಭೋಜನಮಾಚರೇತ್ ।

ಕಾಳಹಸ್ತಿನಾಥನೆಂಬ ಈಶ್ವರನಿಗೆ ಯಥಾಶಕ್ತಿಯಾಗಿ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಈಶ್ವರನ ದರ್ಶನವನ್ನೂ ಮಾಡಿ, ಹಗಲು ಉಪವಾಸವಿದ್ದು, ಸಾಯಂಕಾಲ ಊಟಮಾಡಬೇಕು. ॥೧೬.೧೭-೧೮॥

ಹೀಗೆ ಸೂರ್ಯನು ವೃಷಭದಲ್ಲಿರುವಾಗ ವಿಶಾಖಾನಕ್ಷತ್ರದ ದಿವಸ ಸುವರ್ಣ ಮುಖರೀನದಿಯ ನೀರಿನಲ್ಲಿ ಬೆಳಗ್ಗೆ ಸ್ನಾನಮಾಡಿ ಯಥಾಶಕ್ತಿಯಾಗಿ ದಾನಮಾಡಿ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಕಾಳಹಸ್ತೀಶ್ವರನ ದರ್ಶನಸ್ತೋತ್ರಗಳನ್ನು ಮಾಡಿ, ಸಮಾಧಾನವಾದ ಮನಸ್ಸಿನಿಂದ ಸಾಯಂಕಾಲ ಭೋಜನಮಾಡಬೇಕು. ॥೧೯-೨೦॥

ಓ ಪಾರ್ವತೀ, ಸೂರ್ಯನು ಮಿಥುನರಾಶಿಯಲ್ಲಿರುವಾಗ ಮೂಲಾನಕ್ಷತ್ರದ ದಿನ ಸುವರ್ಣಮುಖರೀ ನದಿಯಲ್ಲಿ ಸ್ನಾನಮಾಡಿ ತನ್ನ ಶಕ್ತಿಯಿದ್ದಷ್ಟು ದ್ರವ್ಯವನ್ನಾಗಲಿ ಬೇರೆ ಯಾವುದಾದರೂ ವಸ್ತುವನ್ನಾಗಲಿ ದಾನಮಾಡಿ ಕಾಳಹಸ್ತೀಶ್ವರನಿಗೆ ಯಥಾಶಕ್ತಿ ಪ್ರದಕ್ಷಿಣನಮಸ್ಕಾರಮಾಡಿ ನನ್ನ ದರ್ಶನಮಾಡಿ ರಾತ್ರಿ ಭೋಜನ ಮಾಡಬೇಕು. ॥೨೧-೨೨॥

ಆದಿತ್ಯೇ ಕರ್ಕಟಂ ಪ್ರಾಪ್ತೇ ಭಗರ್ಕ್ಷೇ ಸುಸಮಾಹಿತಃ ॥೨೩॥

ಸುವರ್ಣಮುಖರೀಸ್ನಾನಂ ಕೃತ್ವಾ ಪ್ರಾತರ್ದ್ವಿಜೋತ್ತಮಾಃ ।
ದೃಷ್ಟ್ವಾ ತತ್ರೈವ ಮಾಂ ದೇವಿ ದೇವಂ ಭಕ್ತಿಪುರಸ್ಸರಮ್ ॥೨೪॥

ಪ್ರದಕ್ಷಿಣಂ ಯಥಾಶಕ್ತಿ ಕೃತ್ವಾ ದೃಷ್ಟ್ವಾಽಭಿವಾದ್ಯ ಚ ।
ತ್ಯಕ್ತ್ವಾಽಹರ್ಭೋಜನಂ ಧೀಮಾನ್ ರಾತ್ರೌ ಭೋಜನಮಾಚರೇತ್ ॥೨೫॥

ಸಿಂಹರಾಶೌ ಸ್ಥಿತೇ ಸೂರ್ಯೇ ವೈಷ್ಣವೇ ತಾರಕೇ ನರಃ ।
ಪ್ರಾತರೇವ ಮಹಾನದ್ಯಾಂ ಅಸ್ಯಾಂ ಸ್ನಾತ್ವಾ ಯಥಾಬಲಮ್ ॥೨೬॥

ದತ್ವಾ ಪ್ರದಕ್ಷಿಣಂ ಕೃತ್ವಾ ಸ್ತುತ್ವಾ ಮಾಮಭಿವಾದ್ಯ ಚ ।
ತ್ಯಕ್ತ್ವಾಽಹರ್ಭೋಜನಂ ಮರ್ತ್ಯೋ ರಾತ್ರೌ ಭೋಜನಮಾಚರೇತ್ ॥೨೭॥

ಆದಿತ್ಯೇ ಕನ್ಯಕಾಯುಕ್ತೇ ತಥಾ ಪ್ರೋಷ್ಠಪದೇ ದಿನೇ ।
ಸ್ನಾತ್ವಾ ಚಾಸ್ಯಾಂ ನರಃ ಪ್ರಾತರ್ದತ್ವಾ ವಿಪ್ರಾಯ ಭೋಜನಂ ॥೨೮॥

ಶ್ರೀಕಾಳಹಸ್ತಿನಾಥಾಖ್ಯಂ ದೇವಂ ಪೂರ್ವೋಕ್ತವರ್ತ್ಮನಾ ।
ದೃಷ್ಟ್ವಾಽಹರ್ಭೋಜನಂ ತ್ಯಕ್ತ್ವಾ ರಾತ್ರೌ ಭೋಜನಮಾಚರೇತ್ ॥೨೯॥

ತುಲಾಂ ಪ್ರಾಪ್ತೇಽತ್ರ ಮಾರ್ತಾಂಡೇ ಚಾಶ್ವಿನ್ಯಾಂ ಪ್ರಾತರೇವ ಚ ।
ನದ್ಯಾಮಸ್ಯಾಂ ನರಸ್ಸ್ನಾತ್ವಾ ದತ್ವಾ ವಿಪ್ರಾಯ ಭೋಜನಂ ॥೩೦॥

ಪ್ರದಕ್ಷಿಣಪ್ರಣಾಮಾದಿ ಕೃತ್ವಾ ನಕ್ತಂ ಸಮಾಚರೇತ್ ।
ಸೂರ್ಯೇ ವೃಶ್ಚಿಕಸಂಯುಕ್ತೇ ಕೃತ್ತಿಕಾಯಾಂ ದ್ವಿಜರ್ಷಭಾಃ ॥೩೧॥

ಎಲೌ ಪಾರ್ವತಿಯೇ, ಇದೇರೀತಿಯಾಗಿ ಕರ್ಕಾಟಕಮಾಸದಲ್ಲಿ ಪೂರ್ವಾಷಾಢಾನಕ್ಷತ್ರದ ದಿವಸವೂ, ಸಿಂಹಮಾಸದಲ್ಲಿ ಶ್ರವಣನಕ್ಷತ್ರದ ದಿವಸವೂ, ಕನ್ಯಾಮಾಸದಲ್ಲಿ ಪೂರ್ವಾಭಾದ್ರಾನಕ್ಷತ್ರದಲ್ಲಿಯೂ, ತುಲಾಮಾಸದಲ್ಲಿ ಅಶ್ವಿನೀನಕ್ಷತ್ರದ ದಿವಸದಲ್ಲಿಯೂ, ವೃಶ್ಚಿಕಮಾಸದಲ್ಲಿ ಕೃತ್ತಿಕಾನಕ್ಷತ್ರವಿರುವ ದಿವಸದಲ್ಲಿಯೂ, ಧನುರ್ಮಾಸದಲ್ಲಿ ಆರ್ದ್ರಾನಕ್ಷತ್ರದ ದಿವಸದಲ್ಲಿಯೂ, ಮಕರಮಾಸದಲ್ಲಿ ಪುಷ್ಯನಕ್ಷತ್ರವಿರುವ ದಿವಸದಲ್ಲಿಯೂ, ಸೂರ್ಯನು ಕುಂಭರಾಶಿಯಲ್ಲಿರುವಾಗ ಮಘಾನಕ್ಷತ್ರದಲ್ಲಿಯೂ, ಮೀನಮಾಸದಲ್ಲಿ ಉತ್ತರಾನಕ್ಷತ್ರವಿರುವ ದಿವಸದಲ್ಲಿಯೂ,

ಪೂರ್ವೋಕ್ತೇನೈವ ಮಾರ್ಗೇಣ ನರಃ ಕೃತ್ವಾ ಸಮಾಹಿತಃ ।
ತ್ಯಕ್ತ್ವಾಽಹರ್ಭೋಜನಂ ಮರ್ತ್ಯೋ ರಾತ್ರೌ ಭೋಜನಮಾಚರೇತ್ ॥೩೨॥

ಆದಿತ್ಯೇ ಚಾಪಸಂಯುಕ್ತೇ ಚಾರ್ದ್ರಾನಕ್ಷತ್ರಕೇ ನರಃ ।
ಕೃತ್ವಾ ತು ಪೂರ್ವವದ್ದೇವಿ ನಕ್ತಭೋಜನಮಾಚರೇತ್ ॥೩೩॥

ಸೂರ್ಯೇ ಮಕರಸಂಯುಕ್ತೇ ಪುಷ್ಯನಕ್ಷತ್ರಕೇ ನರಃ ।
ಪೂರ್ವವತ್ಸಕಲಂ ಕೃತ್ವಾ ನಕ್ತಭೋಜನಮಾಚರೇತ್ ॥೩೪॥

ಮಾಘಮಾಸಿ ಮಘರ್ಕ್ಷೇ ತು ಕೃತ್ವಾ ಪೂರ್ವವದಾಸ್ತಿಕಾಃ ।
ತ್ಯಕ್ತ್ವಾಽಹರ್ಭೋಜನಂ ವಿಪ್ರೋ ನಕ್ತ ಭೋಜನಮಾಚರೇತ್ ॥೩೫॥

ಮಾರ್ತಾಂಡೇ ಕುಂಭರಾಶಿಸ್ಥೇ ಮಘಾನಕ್ಷತ್ರಕೇ ನರಃ ।
ಪೂರ್ವವತ್ಸಕಲಂ ಕೃತ್ವಾ ನಕ್ತಭೋಜನಮಾಚರೇತ್ ॥೩೬॥

ಆದಿತ್ಯೇ ಮೀನರಾಶಿಸ್ಥೇ ಫಲ್ಗುನ್ಯಾಂ ದೇವಿ ಮಾನವಃ ।
ಪೂರ್ವವತ್ಸಕಲಂ ಕೃತ್ವಾ ನಕ್ತಭೋಜನಮಾಚರೇತ್ ॥೩೭॥

ಮಾಸಿಮಾಸಿ ಮನುಜಸ್ಸಮಾಚರೇತ್
ಏವಮೇವ ಪರಯಾ ಮುದಾ ಸದಾ ।
ದೇಹನಾಶಮವಲೋಕ್ಯ ತತ್ಕ್ಷಣೇ
ಜ್ಞಾನಮಸ್ಯ ಪರಮಂ ದದಾಮ್ಯಹಮ್ ॥೩೮॥

ಬೆಳಗ್ಗೆ ಸುವರ್ಣಮುಖರೀನದಿಯ ನೀರಿನಲ್ಲಿ ಸ್ನಾನಮಾಡಿ ಯಥಾಶಕ್ತಿಯಾಗಿ ದಾನಮಾಡಿ ಬ್ರಾಹ್ಮಣಭೋಜನಮಾಡಿಸಿ ಯಥಾಶಕ್ತಿಯಾಗಿ ಕಾಳಹಸ್ತೀಶ್ವರನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಈಶ್ವರದರ್ಶನಮಾಡಿ, ಸ್ತೋತ್ರಮಾಡಿ ಹಗಲು ಭೋಜನವನ್ನು ಮಾಡದೆ ರಾತ್ರಿಯಲ್ಲಿ ಭೋಜನಮಾಡಬೇಕು. ||೨೩-೨೪-೨೫-೨೬-೨೭-೨೮-೨೯-೩೦-೩೧-೩೨-೩೩-೩೪-೩೫-೩೬-೩೭||

ಹೀಗೆ ಪ್ರತಿಮಾಸವಲ್ಲಿ ಆಚರಿಸುತ್ತಿದ್ದರೆ ಆ ಮನುಷ್ಯನಿಗೆ ಅವಸಾನಕಾಲದಲ್ಲಿ ನಾನು ಜ್ಞಾನವನ್ನುಂಟುಮಾಡುತ್ತೇನೆ. ||೩೮||

ವ್ರತಸಮಾಚರಣೇನ ಮಹೇಶ್ವರಿ
  ಧ್ರುವಮವಾಪ ಪದಂ ಮಮ ಮಾನವಃ ।
ಇತಿ ಸಮೀರಿತಮೀಶ್ವರಿ ತೇ ಮಯಾ
  ಸುಕರಮೇತದಶೇಷಜನಸ್ಯ ತು ॥೩೯॥

ಅತ್ರ ದತ್ತಮಣುಮಾತ್ರಮಪ್ಯಮೋ
  ಮೇರುತುಲ್ಯಮಿತಿ ಶಾಸ್ತ್ರನಿಶ್ಚಯಃ ।
ನಿತ್ಯಮತ್ರ ಮನುಜಸ್ಯ ವರ್ತನಂ
  ಮುಕ್ತಿಸಿದ್ಧಿಕರಮಿತ್ಯಸಂಶಯಃ ॥೪೦॥

ಸ್ಥಾನಮೇತದಮರೇಂದ್ರವಂದಿತೇ
  ದೋಷತೂಲನಿಕರಸ್ಯ ಪಾವಕಃ ।
ಭೋಗಹೇತುರಪಿ ಕಾಮಿನಾಂ ನೃಣಾಂ
  ಭಾಗಧೇಯರಹಿತಸ್ಯ ಸಿಧ್ಯತಿ ॥೪೧॥

ಹೇ ಪಾರ್ವತೀ, ಈ ರೀತಿಯಾದ ವ್ರತವನ್ನಾಚರಿಸುವಂಥ ಮನುಷ್ಯನು ಉತ್ತಮವಾದ ನನ್ನ ಪದವಿಯನ್ನು ಹೊಂದುತ್ತಾನೆ! ಈ ರೀತಿ ಸಕಲ ಜನಗಳಿಗೂ ಸುಲಭವಾಗಿರುವ ರೀತಿಯನ್ನು ನಿನಗಾಗಿ ಹೇಳಿದ್ದೇನೆ. ॥೩೯॥

ಎಲೌ ಪಾರ್ವತಿಯೇ, ಈ ದಕ್ಷಿಣಕೈಲಾಸಕ್ಷೇತ್ರದಲ್ಲಿ ದಾನಮಾಡಿದುದು ಬಹಳ ಸ್ವಲ್ಪವಾಗಿದ್ದರೂ ಅದು ಮೇರುಪರ್ವತದಷ್ಟು ದೊಡ್ಡದಾಗುವುದು. ಎಂದರೆ ಬಹಳ ಫಲವನ್ನುಂಟುಮಾಡುವುದು ಎಂದು ಶಾಸ್ತ್ರದ ನಿಶ್ಚಯವು. ಹೀಗಿರುವ ಈ ಕ್ಷೇತ್ರದಲ್ಲಿ ಪ್ರತಿದಿನವೂ ವಾಸಮಾಡಿದ್ದೇ ಆದರೆ ಆ ಮನುಷ್ಯನಿಗೆ ಜಾಗ್ರತೆಯಾಗಿ ಮೋಕ್ಷಸಿದ್ಧಿಸುವುದು. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ॥೪೦॥

ದೇವೇಂದ್ರನಿಂದಲೂ ನಮಸ್ಕೃತಳಾದ ಪಾರ್ವತಿಯೇ, ಈ ದಕ್ಷಿಣಕೈಲಾಸ ಕ್ಷೇತ್ರವು ಪಾಪವೆಂಬ ಹತ್ತಿಯ ರಾಶಿಗೆ ಬೆಂಕಿಯಂತೆ ಇರುವುದು. ಎಂದರೆ ಸಮಸ್ತ ಪಾಪವನ್ನೂ ನಾಶಮಾಡುವದು; ವಿಷಯಸುಖವನ್ನು ಬಯಸುವವರಿಗೆ ಬೇಕಾದ ಇಷ್ಟವನ್ನು ಉಂಟುಮಾಡುವಂಥದು; ಪುಣ್ಯವಿಲ್ಲದವನಿಗಾದರೂ ಬೇಕಾದ ಇಷ್ಟವನ್ನುಂಟುಮಾಡುವುದು. ॥೪೧॥

ಅಸ್ಯ ವೈಭವಮಶೇಷ ನಾಯಿಕೇ
ನೈವ ವೇದ ಪರಿಮೋಹಿತೋ ಜನಃ ।
ಮತ್ಪ್ರಸಾದಮವಲಂಬ್ಯ ಕೇವಲಂ
ದೇವಿ ವೇದ ನ ಚ ಕಾರಣಾಂತರೈಃ ॥೪೨॥

ಪಾಪರಾಶಿಸಹಿತೋಽಪಿ ನಾಸ್ತಿಕ-
ಶ್ಚಾವಿವೇಕಸಹಿತೋಽಪಿ ಮಾನವಃ ।
ಕಾಳಹಸ್ತಿಮವಲಂಬ್ಯ ಕೇವಲಂ
ದೇವಿ ಯಾತಿ ಪರಮಂ ಪದಂ ಮಮ ॥೪೩॥

ಸದ್ಯೋಮುಕ್ತಿಕರಂ ಸಮಸ್ತಫಲದಂ
ಸಮ್ಯಕ್ಪರಿಜ್ಞಾನದಮ್ ।
ಭಕ್ತ್ಯಾ ಲಭ್ಯಮಿದಂ ಮಯಾಽಪಿ
ಹರಿಣಾ ಧಾತ್ರಾಽಪಿ ದೇವೈರಪಿ ॥೪೪॥

ಎಲ್ಲಕ್ಕೂ ಒಡೆಯಳಾದ ಪಾರ್ವತಿಯೇ, ಈ ಕ್ಷೇತ್ರದ ಮಹಿಮೆಯನ್ನು ಅಜ್ಞಾನಿಗಳಾದ ಜನರು ತಿಳಿಯಲಾರರು. ಆದರೆ ನನ್ನ ಅನುಗ್ರಹವನ್ನು ಅವಲಂಬಿಸಿದ ಜನರು ಅದರ ಸಾಮರ್ಥ್ಯದಿಂದ ಈ ಕ್ಷೇತ್ರದ ಮಹಿಮೆಯನ್ನು ತಿಳಿಯುವರೇ ಹೊರತು ಬೇರೆ ಯಾವ ಕಾರಣದಿಂದಲೂ ತಿಳಿಯಲಾರರು. ॥೪೨॥

ಪಾಪಸಮೂಹದಿಂದ ಕೂಡಿದವನಾಗಲಿ, ನಾಸ್ತಿಕನೇ ಆಗಲಿ, ವಿವೇಕವಿಲ್ಲದವನಾಗಿರಲಿ ಈ ರೀತಿಯಾದ ಯಾವ ಮನುಷ್ಯನಾದರೂ ಕಾಳಹಸ್ತೀಶ್ವರನನ್ನು ಮಾತ್ರ ಆಶ್ರಯಿಸಿದ್ದೇ ಆದರೆ ಅವನು ನನ್ನ ಸ್ಥಾನವನ್ನು ಹೊಂದುತ್ತಾನೆ. ॥೪೩॥

ಉತ್ತಮವಾದ ಈ ಸ್ಥಲವು ಜಾಗ್ರತೆಯಾಗಿ ಮುಕ್ತಿಯನ್ನುಂಟುಮಾಡತಕ್ಕದ್ದು, ಎಲ್ಲಾ ಧರ್ಮದ ಫಲವನ್ನು ಕೊಡುವಂಥಾದ್ದು, ಒಳ್ಳೆಯ ಜ್ಞಾನವನ್ನುಂಟು ಮಾಡುವುದು. ಈ ಸ್ಥಾನವು, ನಾನು, ವಿಷ್ಣುವು, ಬ್ರಹ್ಮನು-ಇವರುಗಳಿಂದಲೂ ಬಹಳ ಭಕ್ತಿಯಿಂದ ಪಡೆಯಲ್ಪಡತಕ್ಕುದು. ಆದ್ದರಿಂದ ನಿತ್ಯವಾದ ಈ ಸ್ಥಳವನ್ನು ಬುದ್ಧಿವಂತನಾದವನು, ಆಲಸ್ಯವನ್ನು ಬಿಟ್ಟು, ನಿರ್ಭಯನಾಗಿ ಇತರ ಎಲ್ಲಾ ಕ್ಷೇತ್ರಗಳ ಆಶೆಗಳನ್ನೂ ಬಿಟ್ಟು ಇದನ್ನು ಆಶ್ರಯಿಸಿದರೆ ಸಿದ್ಧಿಯಾಗುವುದು.

ಸ್ಥಾನಂ ನಿತ್ಯಮತಂದ್ರಿತೋ ಮತಿ
ಮತಾಮಗ್ರೇ ಸರಶ್ಚಾಶ್ರಯೇತ್ ।
ತ್ಯಕ್ತ್ವಾ ಸರ್ವಮಶಂಕಿತಃ ಪರತರಾ
ಸಾಧ್ವೀ ಶ್ರುತಿಶ್ಚಾಹ ಹಿ ॥೪೫॥

॥ ಸೂತ ಉವಾಚ ॥

ಏವಮುಕ್ತ್ವಾ ಮಹಾದೇವ್ಯೈ ಮಹಾತಾಂಡವಪಂಡಿತಃ ।
ಆಲಿಲಿಂಗೇ ಶಿವಾಂ ಶಂಭುಸ್ಸ್ಮರನ್ನೈಕ್ಯಂ ತಯಾಽಽತ್ಮನಃ ॥೪೬॥

ದೇವಿದೇವೀ ಜಗನ್ಮಾತಾ ದಯಾರ್ದ್ರಹೃದಯಾಂಬುಜಾ ।
ಪ್ರಣಮ್ಯ ಪೂಜಯಾಮಾಸ ಭವಂ ಭವಹರಂ ಪರಮ್ ॥೪೭॥

ಯದುಕ್ತಂ ದೇವದೇವೇನ ದೇವ್ಯೈ ರಹಸಿ ತದ್ದ್ವಿಜಾಃ ।
ಮಯೋಕ್ತಂ ಪರಮಪ್ರೀತ್ಯಾ ಯುಷ್ಮಾಕಂ ಬ್ರಹ್ಮವಾದಿನಾಮ್॥೪೮॥

“ ದೇವನನ್ನು ತಿಳಿದು ಎಲ್ಲಾ ಕಟ್ಟುಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ ” ಎಂಬ ಶ್ರುತಿಗಳಲ್ಲಿ ಹೇಳಿರುವಂತೆ ಎಲ್ಲಾ ಆಶೆಗಳನ್ನೂ ಬಿಟ್ಟು ಆ ನಿತ್ಯವಾದ ಸ್ಥಳವನ್ನು ಆಶ್ರಯಿಸಬೇಕು ಎಂದು ಪರಮೇಶ್ವರನು ಪಾರ್ವತೀದೇವಿಯನ್ನು ಕುರಿತು ಹೇಳಿದನು. ॥೪೪-೪೫॥

ಎಲೈ ಋಷಿಗಳೇ, ಈ ರೀತಿಯಾಗಿ ನರ್ತನದಲ್ಲಿ ಪಂಡಿತನಾದ ಪರಮೇಶ್ವರನು ಪಾರ್ವತಿಗೆ ಹೇಳಿ, ಪಾರ್ವತಿಯೂ ತಾನೂ ಒಂದೇ ಎಂದು ಮನಸ್ಸಿನಲ್ಲಿ ತಿಳಿಯುತ್ತಾ ಆ ಪಾರ್ವತಿಯನ್ನು ಆಲಿಂಗನಮಾಡಿದನು. ॥೪೬॥

ಲೋಕಕ್ಕೆಲ್ಲಕ್ಕೂ ತಾಯಿಯಾದ ದೇವತೆಗಳಲ್ಲೆಲ್ಲರಲ್ಲೂ ಉತ್ತಮಳಾದ ಪಾರ್ವತಿಯು ಕರುಣೆಯಿಂದ ಕೂಡಿದ ಮನಸ್ಸುಳ್ಳವಳಾಗಿ, ಸಂಸಾರದುಃಖನಾಶಕನಾದ ಈಶ್ವರನಿಗೆ ನಮಸ್ಕಾರಮಾಡಿ ಪೂಜೆಮಾಡಿದಳು. ॥೪೭॥

ಎಲೈ ಬ್ರಾಹ್ಮಣರೇ, ಈ ರೀತಿಯಾಗಿ ಗುಟ್ಟಾಗಿ ಪರಮೇಶ್ವರನು ಪಾರ್ವತಿಗೆ ಹೇಳಿದ ವಿಷಯವನ್ನು ನಾನು ವೇದಾಧ್ಯಯನಸಂಪನ್ನರಾದ, ಬ್ರಹ್ಮಸ್ವರೂಪವನ್ನು ತಿಳಿಯಲು ವಿಚಾರಮಾಡುತ್ತಿರುವ, ನಿಮಗೆ ಹೇಳಿರುತ್ತೇನೆ. ॥೪೮॥

ಭವಂತೋಽಪಿ ಪರಿತ್ಯಜ್ಯ ಸಮಸ್ತಂ ಪರಯಾ ಮುದಾ ।
ಸದ್ಯೋಮುಕ್ತಿಕರಂ ಸ್ಥಾನಂ ಭಜಧ್ವಮಿದಮುತ್ತಮಮ್ ॥೪೯॥

ಸರ್ವಮುಕ್ತಂ ಸಮಾಸೇನ ಸಾದರಂ ಮುನಿಪುಂಗವಾಃ ।
ನೈತದನ್ಯನ್ಮನುಷ್ಯಾಣಾಂ ಕಾಲಕ್ಷೇಪಸ್ಯ ಕಾರಣಮ್ ॥೫೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಸದ್ಯೋಮುಕ್ತಿಕರಕ್ಷೇತ್ರಮಹಿಮಕಥನಂ ನಾಮ ಷಟ್ತ್ರಿಂಶಾಧ್ಯಾಯಃ

ನೀವೂ ಕೂಡ ಇತರ ಎಲ್ಲಾ ಕ್ಷೇತ್ರಗಳ ಆಶೆಗಳನ್ನೂ ಬಿಟ್ಟು ಸಂತೋಷದಿಂದ ಕೂಡಿದವರಾಗಿ, ಉತ್ತಮವಾದ, ಜಾಗ್ರತೆಯಾಗಿ ಮುಕ್ತಿಯನ್ನು ಕೊಡುವ ಈ ಕ್ಷೇತ್ರವನ್ನು ಹೊಂದಿರಿ. ||೪೯||

ಎಲೈ ಋಷಿಶ್ರೇಷ್ಠರೇ, ಎಲ್ಲವನ್ನೂ ಸಂಗ್ರಹಿಸಿ ಪ್ರೀತಿಯಿಂದ ಹೇಳಿರುತ್ತೇನೆ; ಇದನ್ನು ಬಿಟ್ಟು ಬೇರೆ ಯಾವುದೂ ಮನುಷ್ಯರಿಗೆ ಕಾಲಹರಣಕ್ಕೆ ಯೋಗ್ಯವಾದ ರೀತಿಯಲ್ಲವು. ಎಂದು ಸೂತರು ಶೌನಕಾದಿಗಳಿಗೆ ಹೇಳಿದರು. ||೫೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಕೂಡಲೆ ಮುಕ್ತಿಯನ್ನು ದೊರೆಯಿಸುವ ಕ್ಷೇತ್ರದ ವಿವರಣೆಯುಳ್ಳ ಮೂವತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಸಪ್ತತ್ರಿಂಶೋಽಧ್ಯಾಯಃ ||

ಮೂವತ್ತೇಳನೆಯ ಅಧ್ಯಾಯವು

(ಮುಕ್ತ್ಯುಪಾಯವಿಚಾರಃ)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಮುನಯಸ್ಸಂಶ್ರಿ(ಶಿ)ತವ್ರತಾಃ ।
ಮುಕ್ತ್ಯುಪಾಯಮಯತ್ನೇನ ಮಯಾ ನೋಕ್ತಮಿತಃ ಪುರಾ ||೧||

ಪುರಾ ಜೈಮಿನಿರತ್ಯಂತಶ್ರದ್ಧಯಾ ಸಹ ಸುವ್ರತಾಃ ।
ಸ್ವಗುರುಂ ವೇದವೇದಾಂತವಿಶಾರದಮನುತ್ತಮಮ್ ||೨||

ತಪಸಾ ದೀಪ್ತಸರ್ವಾಂಗಂ ಪರಾಶರಸುತಂ ಪ್ರಭುಮ್ ।
ಪ್ರಣಮ್ಯ ಪರಮಪ್ರೀತ್ಯಾ ದಂಡವತ್ಪೃಥಿವೀತಲೇ ||೩||

ಹಿಂದೆ ಹೇಳಿದಂತೆ ಕಾಳಹಸ್ತಿಕ್ಷೇತ್ರದಲ್ಲಿ ಹೇಗೋ ಹಾಗೆ, ವ್ಯಾಘ್ರಪುರ ಮುಂತಾದ ಕ್ಷೇತ್ರಗಳಲ್ಲೂ ವ್ರತಗಳನ್ನು ಅನುಷ್ಠಾನಮಾಡುವುದರಿಂದ ಮುಕ್ತಿಯು ದೊರೆಯುತ್ತದೆಂಬುದನ್ನೂ ಪರಶಿವನೇ ತಿಳಿಯಹೇಳಿರುತ್ತಾನೆಂಬ ಅಂಶವನ್ನು ಸೂತರು ಹೇಳುತ್ತಾರೆ. ಎಲೈ ನಿಯಮವಂತರಾದ ಋಷಿಗಳೇ, ನಾನು ಇದುವರೆಗೆ ಹೇಳದಿರುವ, ಹೆಚ್ಚು ಪ್ರಯತ್ನವಿಲ್ಲದೆ ಸಿದ್ಧಿಸುವ ಮುಕ್ತಿಯ ಉಪಾಯವನ್ನು ಮತ್ತೂ ನಿಮಗೆ ಹೇಳುತ್ತೇನೆ ಕೇಳಿರಿ. ||೧||

ಪೂರ್ವದಲ್ಲಿ ಜೈಮಿನಿಮಹರ್ಷಿಗಳು ಬಹಳ ಶ್ರದ್ಧೆಯಿಂದ ಕೂಡಿದವರಾಗಿ ತಮ್ಮ ಗುರುಗಳಾದ, ವೇದವೇದಾಂತಗಳನ್ನು ಚೆನ್ನಾಗಿ ತಿಳಿದವರಾದ, ಬಹಳ

ನಿಧಾಯ ಮೂರ್ಧ್ನಿ ತತ್ಪಾದಪಂಕಜಂ ಭವಭೇಷಜಮ್ ।
ಅಪೃಚ್ಛಲ್ಲೋಕರಕ್ಷಾರ್ಥಮತಿಗುಹ್ಯಮನುತ್ತಮಮ್ ॥೪॥

॥ ಜೈಮಿನಿಃ ಉವಾಚ ॥

ಭಗವನ್ ಸರ್ವಜಂತೂನಾಮಯತ್ನೇನ ವಿಮುಕ್ತಿದಮ್ ।
ವದ ಕಾರುಣ್ಯತೋ ನಾಥ ಮಮ ಮಾಯಾವಿಷಾಪಹಮ್ ॥೫॥

॥ ವ್ಯಾಸ ಉವಾಚ ॥

ಸಾಧು ಸಾಧು ಮುನಿಶ್ರೇಷ್ಠ ತ್ವಯಾ ಪೃಷ್ಟಂ ಜಗದ್ಧಿತಮ್ ।
ಪುರಾ ಪುರಾಣಂ ಬ್ರಹ್ಮಾಣಮಿದಂ ಪೃಷ್ಟಂ ಮಯಾಽಪಿ ಚ ॥೬॥

ಬ್ರಹ್ಮಣಾ ಚ ಮಹಾವಿಷ್ಣುಃ ಪೃಷ್ಟಸ್ತೇನಾಪಿ ಶಂಕರಃ ।
ಸ ಪುನಶ್ಶಂಕರಶ್ಶ್ರೀಮಾನಂಬಿಕಾಪತಿರುತ್ತಮಃ ॥೭॥

ಸ್ವಸ್ವರೂಪಮಹಾನಂದಪ್ರಮೋದಜಲಧಿಸ್ಥಿತಃ ।
ವಿಷ್ಣವೇ ಲೋಕರಕ್ಷಾರ್ಥಂ ಬಭಾಷೇ ಕರುಣಾನಿಧಿಃ ॥೮॥

ಶ್ರೇಷ್ಠರಾದ, ತಪಸ್ಸಿನಿಂದ ಪ್ರಕಾಶಮಾನವಾದ ಶರೀರವುಳ್ಳ ಸರ್ವಸಮರ್ಥರಾದ, ಪರಾಶರರ ಮಕ್ಕಳಾದ ವ್ಯಾಸಮಹರ್ಷಿಗಳ ಸಮೀಪಕ್ಕೆ ಹೋಗಿ, ಬಹಳ ಪ್ರೀತಿಯಿಂದ ಭೂಮಿಯ ಮೇಲೆ ದಂಡದಂತೆ ನಮಸ್ಕಾರಮಾಡಿದರು. ॥೨-೩॥

ಹೀಗೆ ನಮಸ್ಕಾರಮಾಡಿ ಸಂಸಾರತಾಪಕ್ಕೆ ಔಷಧಿಯಾಗಿರುವ ಅವರ ಪಾದಕಮಲವನ್ನು ತಮ್ಮ ತಲೆಯಮೇಲಿಟ್ಟುಕೊಂಡು ಅನಂತರ ಅವರನ್ನು ಕುರಿತು ಲೋಕದ ಹಿತಕ್ಕಾಗಿ ಬಹಳ ಗುಟ್ಟಾದ ವಿಚಾರವನ್ನು ಈರೀತಿಯಲ್ಲಿ ಕೇಳಿದರು. ॥೪॥

ಓ ಪೂಜ್ಯರಾದ ಋಷಿಗಳೇ, ಪ್ರಾಣಿಗಳಿಗೆ ಹೆಚ್ಚು ಪ್ರಯತ್ನವಿಲ್ಲದೆ ಮುಕ್ತಿಯುಂಟಾಗುವ ಕ್ಷೇತ್ರದ ವಿಷಯವನ್ನು, ಅಜ್ಞಾನವೆಂಬ ವಿಷವನ್ನು ನಾಶಮಾಡುವಂಥದನ್ನು, ನನ್ನಲ್ಲಿ ದಯೆಯಿಟ್ಟು ಹೇಳಬೇಕು ಎಂದು ಪ್ರಾರ್ಥಿಸಿದರು. ॥೫॥

ಎಲೈ ಋಷಿಶ್ರೇಷ್ಠನಾದ ಜೈಮಿನಿಯೇ, ನೀನು ಕೇಳಿದುದು ಬಹಳ ಒಳ್ಳೆಯದಾಯಿತು. ನೀನು ಲೋಕದ ಹಿತಕ್ಕಾಗಿಯೇ ಹೀಗೆ ಕೇಳಿರುತ್ತೀಯೆ. ಇದೇ ವಿಚಾರವನ್ನು ನಾನು ಬಹಳ ಹಳಬನಾದ ಬ್ರಹ್ಮನನ್ನು ಕೇಳಿದೆನು. ಆ ಬ್ರಹ್ಮನು

॥ ಓಂ ಈಶ್ವರ ಉವಾಚ ॥

ಸ್ಥಾನೇ ಪೃಷ್ಟಂ ತ್ವಯಾ ವಿಷ್ಣೋ ಜಗತಃ ಪಾಲನೇ ರತ ।
ವದಾಮಿ ಸಂಗ್ರಹೇಣಾಹಂ ಮುಕ್ತ್ಯುಪಾಯಮಯತ್ನತಃ ॥೯॥

ಶ್ರೀಮದ್ವ್ಯಾಘ್ರಪುರಂ ನಾಮ ಸ್ಥಾನಮಸ್ತಿ ಮಹೀತಲೇ ।
ಸರ್ವದಾ ಪರಮಪ್ರೀತ್ಯಾ ಯತ್ರ ನೃತ್ಯಂ ಕರೋಮ್ಯಹಮ್ ॥೧೦॥

ಯತ್ರ ಮಾಮಾದರೇಣೈವ ನೃತ್ಯಮಾನಂ ದಿನೇದಿನೇ ।
ದೃಷ್ಟ್ವಾ ಪಂಚಾಕ್ಷರಂ ಮಂತ್ರಂ ಸತಾರಂ ಸರ್ವಸಿದ್ಧಿದಮ್ ॥೧೧॥

ಯಸ್ತು ದ್ವಾದಶಸಾಹಸ್ರಂ ಜಪತಿ ಶ್ರದ್ಧಯಾ ಸಹ ।
ತಸ್ಯ ಸಿದ್ಧಾ ಪರಾ ಮುಕ್ತಿರ್ವಿನಾ ವಿಜ್ಞಾನಮುತ್ತಮಮ್ ॥೧೨॥

ತನಗೆ ತಿಳಿಯದೆ ಮಹಾವಿಷ್ಣುವನ್ನು ಕೇಳಿದನು. ಆ ವಿಷ್ಣುವೂ ಕೂಡ ತನಗೆ ತಿಳಿಯದೆ ಶಂಕರನನ್ನು ಕೇಳಿದನು. ಆ ಪಾರ್ವತೀಪತಿಯೂ ದೇವೋತ್ತಮನೂ ಕರುಣಾಶಾಲಿಯೂ ಆದ ಶಂಕರನಾದರೂ ಸ್ವಸ್ವರೂಪಾನಂದವೆಂಬ ದೊಡ್ಡ ಆನಂದ ಸಮುದ್ರದಲ್ಲಿರುವವನಾಗಿ ಲೋಕದ ಹಿತಕ್ಕಾಗಿ ವಿಷ್ಣುವನ್ನು ಕುರಿತು ಈ ರೀತಿಯಾಗಿ ಹೇಳಿದನು. ॥೬-೭-೮॥

ಜಗತ್ತನ್ನು ಕಾಪಾಡುವುದರಲ್ಲಿ ಆಸಕ್ತನಾದ ವಿಷ್ಣುವೇ, ನೀನು ಕೇಳಿದುದು ಬಹಳ ಒಳ್ಳೆಯದಾಯಿತು. ಹೆಚ್ಚು ಪ್ರಯತ್ನವಿಲ್ಲದೆ ಮುಕ್ತಿಯುಂಟಾಗುವ ಉಪಾಯವನ್ನು ನಾನು ನಿನಗೆ ಸಂಕ್ಷೇಪವಾಗಿ ಹೇಳುತ್ತೇನೆ. ಕೇಳು. ॥೯॥

ಓ ವಿಷ್ಣುವೇ, ಭೂಲೋಕದಲ್ಲಿ ನಾನು ಯಾವಾಗಲೂ ಬಹಳ ಆನಂದದಿಂದ ನರ್ತನಮಾಡುತ್ತಿರುವಂಥ ವ್ಯಾಘ್ರಪುರವೆಂಬ ಸ್ಥಳವು ಇದೆ. ॥೧೦॥

ಯಾವ ಆ ವ್ಯಾಘ್ರಪುರದಲ್ಲಿ ನರ್ತನಮಾಡುತ್ತಿರುವ ನನ್ನನ್ನು ನೋಡಿ ಪ್ರಣವಸಹಿತವಾದ ಪಂಚಾಕ್ಷರೀಮಂತ್ರವನ್ನು ಪ್ರತಿದಿನವೂ ಜಪಮಾಡಬೇಕು. ಹೀಗೆ ಯಾರು ಬಹಳ ಭಕ್ತಿಯಿಂದ ಪ್ರತಿದಿನವೂ ಹನ್ನೆರಡು ಸಾವಿರ ಮಂತ್ರಜಪವನ್ನು ಮಾಡುತ್ತಾರೋ ಅವರಿಗೆ ಶ್ರೇಷ್ಠವಾದ ಜ್ಞಾನವಿಲ್ಲದಿದ್ದಾಗ್ಯೂ ಮುಕ್ತಿಯುಂಟಾಗುತ್ತದೆ. ॥೧೧-೧೨॥

ಶ್ರೀಮದ್ದಕ್ಷಿಣಕೈಲಾಸೇ ತಥಾ ವೃದ್ಧಾಚಲಾಭಿಧೇ ।
ತಥಾ ಗೋಪರ್ವತೇ ಶುದ್ಧೇ ತಥಾ ವಲ್ಮೀಕಸಂಜ್ಞಿತೇ ॥೧೩॥

ಅಧಿಗ್ರಾಮಸಮಾಖ್ಯೇ ಚ ಸ್ಥಾನೇ ಸರ್ವಫಲಪ್ರದೇ ।
ಸೋಮನಾಥೇ ತು ಗೋಕರ್ಣೇ ತಥಾ ಭೀಮೇಶ್ವರಾಭಿಧೇ ॥೧೪॥

ವೇದಾರಣ್ಯೇ ವಿಶಿಷ್ಟೇ ತು ಶ್ವೇತಾರಣ್ಯೇ ತು ಶೋಭನೇ ।
ಹಸ್ತಿಕಾನನಸಂಜ್ಞೇ ಚ ತಥಾ ಜಪ್ಯೇಶ್ವರಾಭಿಧೇ ॥೧೫॥

ಕುಂಭಕೋಣೇ ಮಹಾಸ್ಥಾನೇ ತಥಾ ಮಧ್ಯಾರ್ಜುನಾಭಿಧೇ ।
ವಾರಾಣಸ್ಯಾಂ ತು ಕೇದಾರೇ ತಥಾ ರಾಮೇಶ್ವರಾಭಿಧೇ ॥೧೬॥

ಹಾಲಾಸ್ಯೇ ಚ ಹರೇ ನಿತ್ಯಂ ದೃಷ್ಟ್ವಾ ಮಾಮಾದರೇಣ ತು ।
ಜಪಿತ್ವಾ ಪೂರ್ವವನ್ಮಂತ್ರಂ ಮುಚ್ಯತೇ ಭವಬಂಧನಾತ್ ॥೧೭॥

ಪುರಾ ಕಶ್ಚಿನ್ಮಹಾಪಾಪೀ ಪುಣ್ಯಲೇಶವಿವರ್ಜಿತಃ ।
ಮಹಾಮೋಹಾವೃತಸ್ಸಾಕ್ಷಾನ್ಮಾತರಂ ತು ಪತಿವ್ರತಾಮ್ ॥೧೮॥

ಇದೇ ರೀತಿಯಲ್ಲಿ ದಕ್ಷಿಣಕೈಲಾಸವೆಂಬ ಕ್ಷೇತ್ರದಲ್ಲಿಯೂ, ಅದರಂತೆ ವೃದ್ಧಾಚಲವೆಂಬ ಕ್ಷೇತ್ರದಲ್ಲಿಯೂ, ವೃಷಭಪರ್ವತದಲ್ಲಿಯೂ, ಎಲ್ಲ ಇಷ್ಟಾರ್ಥವನ್ನು ಕೊಡುವ ಸೋಮನಾಥವೆಂಬ ಸ್ಥಳದಲ್ಲಿಯೂ, ಗೋಕರ್ಣದಲ್ಲಿಯೂ ಭೀಮೇಶ್ವರ ದಲ್ಲಿಯೂ ಶ್ರೇಷ್ಠವಾದ ವೇದಾರಣ್ಯವೆಂಬಲ್ಲಿಯೂ, ಮಂಗಳಕರವಾದ ಶ್ವೇತಾರಣ್ಯ ದಲ್ಲಿಯೂ, ಹಸ್ತಿಕಾನನ ಜಪ್ಯೇಶ್ವರ ಎಂಬ ಸ್ಥಳಗಳಲ್ಲಿಯೂ, ಕುಂಭಕೋಣ ದಲ್ಲಿಯೂ, ಮಧ್ಯಾರ್ಜುನವೆಂಬ ಕ್ಷೇತ್ರಸ್ಥಳದಲ್ಲಿಯೂ, ಕಾಶೀಕ್ಷೇತ್ರದಲ್ಲಿಯೂ, ಕೇದಾರ, ರಾಮೇಶ್ವರಕ್ಷೇತ್ರಗಳಲ್ಲಿಯೂ, ಹಾಲಾಸ್ಯಕ್ಷೇತ್ರದಲ್ಲಿಯೂ, ಪ್ರತಿ ದಿನವೂ ನನ್ನ ದರ್ಶನವನ್ನು ಪ್ರೀತಿಯಿಂದ ಮಾಡಿ, ಪೂರ್ವದಲ್ಲಿ ಹೇಳಿರುವಂತೆ ಮಂತ್ರಜಪಮಾಡಿದ್ದೇ ಆದರೆ, ಅಂಥವನು ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ. ॥೧೩-೧೪-೧೫-೧೬-೧೭॥

ಪೂರ್ವದಲ್ಲಿ ಸ್ವಲ್ಪವೂ ಪುಣ್ಯಕರ್ಮವನ್ನು ಮಾಡದ ಬಹಳ ಪಾಪಿಯಾದ, ಕ್ರೂರವಾದ ಅಜ್ಞಾನದಿಂದ ಕೂಡಿದ ಒಬ್ಬ ಮನುಷ್ಯನಿದ್ದನು. ಅವನು ಒಂದು ವರ್ಷದವರೆಗೆ ಪತಿವ್ರತೆಯಾದ ಮಾತೃಸಂಗವನ್ನು ಮಾಡುತ್ತಾ ಒಳ್ಳೆಯ ನಡತೆ

ಗತ್ವಾ ಸಂವತ್ಸರಂ ಹತ್ವಾ ಪಿತರಂ ವೃತ್ತಸಂಯುತಃ (ತಂ) ।
ನಿರ್ಘೃಣೋ ನಿರ್ಭಯೋ ನಿತ್ಯಂ ಚಚಾರ ವಸುಧಾತಲೇ ॥೧೯॥

ಚರತಸ್ತಸ್ಯ ಮೂರ್ಖಸ್ಯ ಸದಾ ತೀವ್ರಭಯಂಕರಃ ।
ಮುಸಲೋದ್ಯತಪಾಣಿಸ್ತು ವಿಭಾತಿ ಬ್ರಹ್ಮರಾಕ್ಷಸಃ ॥೨೦॥

ತಂ ದೃಷ್ಟ್ವಾ ಭೀತಿಸಂಯುಕ್ತಃ ಪೂರ್ವಪುಣ್ಯಬಲೇನ ತು ।
ಹಾಲಾಸ್ಯಾಖ್ಯಂ ಮಹಾಸ್ಥಾನಮಗಮತ್ಪುರುಷೋತ್ತಮ ॥೨೧॥

ಅದೃಷ್ಟಸ್ತತ್ಕ್ಷಣಾದೇವ ತೇನೈವ ಬ್ರಹ್ಮರಾಕ್ಷಸಃ ।
ಸೋಽಪಿ ವಿಸ್ಮಯಮಾಪನ್ನೋ ವಿಚಾರ್ಯ ಕಮಲೇಕ್ಷಣ ॥೨೨॥

ಅಹೋ ಮಾಹಾತ್ಮ್ಯಮಸ್ಯೈವ ಸ್ಥಾನಸ್ಯಾತಿಭಯಂಕರಃ ।
ಅಸ್ಮಿನ್ ದೇಶೇ ನ ದೃಷ್ಟಸ್ತು ಮಯಾ ಸ ಬ್ರಹ್ಮರಾಕ್ಷಸಃ ॥೨೩॥

ಅತೋ ದೇಹವಿನಾಶಾನ್ತಂ ಮಯೈವಾತ್ರೈವ ವರ್ತನಮ್ ।
ಕಾರ್ಯಮಿತ್ಯಭಿಸಂಧಿಂ ಚ ಹರೇ ಕೃತ್ವಾ ಸುನಿಶ್ಚಲಃ ॥೨೪॥

ಯುಳ್ಳ ತಂದೆಯನ್ನು ಕೊಂದು, ದುಷ್ಟವಾದ ನಡತೆಯುಳ್ಳವನಾದಾಗ್ಯೂ ಸ್ವಲ್ಪವೂ ಕರುಣೆಯೂ ಭಯವೂ ಇಲ್ಲದೆ ಭೂಮಿಯಲ್ಲಿ ಅಲೆಯುತ್ತಿದ್ದನು. ||೧೮-೧೯||

ಮೂರ್ಖನಾದ ಅವನು ತಿರುಗುತ್ತಿರುವಾಗ ಕ್ರೂರವಾದ ಆ ಪಾಪದ ಫಲವಾಗಿ ಬಹಳ ಭಯವನ್ನುಂಟುಮಾಡುವ, ಒನಕೆಯನ್ನು ಎತ್ತಿ ಹಿಡಿದುಕೊಂಡಿರುವ ಒಂದು ಬ್ರಹ್ಮರಾಕ್ಷಸವು ಎದುರಿಗೆ ಕಾಣಿಸಿಕೊಳ್ಳಹತ್ತಿತು; ಆ ಬ್ರಹ್ಮರಾಕ್ಷಸನನ್ನು ನೋಡಿ ಭಯಗೊಂಡ ಆ ಮನುಷ್ಯನು ಪೂರ್ವಜನ್ಮದ ಪುಣ್ಯವಿಶೇಷದಿಂದ ಹಾಲಾಸ್ಯವೆಂಬ ಕ್ಷೇತ್ರಕ್ಕೆ ಅಕಸ್ಮಾತ್ತಾಗಿ ಹೋದನು. ||೨೦-೨೧||

ಹಾಲಾಸ್ಯಕ್ಷೇತ್ರಕ್ಕೆ ಹೋದಕೂಡಲೆ ಆ ಬ್ರಹ್ಮರಾಕ್ಷಸವು ಅವನಿಗೇ ಕಾಣದೆ ಮಾಯವಾಯಿತು. ಎಲೈ ವಿಷ್ಣುವೇ, ಆಗ ಅವನು ತನ್ನಲ್ಲಿಯೇ 'ಇದೇನಾಶ್ಚರ್ಯವು! ಈ ಕ್ಷೇತ್ರದ ಮಹಿಮೆ ಎಂಥಾದ್ದಾಗಿರಬಹುದು! ನಾನು ಮೊದಲು ನೋಡಿದ ಬ್ರಹ್ಮರಾಕ್ಷಸವು ಈಗ ಎಲ್ಲಿ ಕಾಣದಹಾಗಾಯಿತಲ್ಲ!' ಎಂದು ಬಹಳವಾಗಿ ಆ ದುಃಖನಿವೃತ್ತಿಕಾರಣವನ್ನು ಯೋಚನೆಮಾಡತೊಡಗಿದನು. ||೨೨-೨೩||

ಎಲೈ ವಿಷ್ಣುವೇ, ಅದು ಆ ಕ್ಷೇತ್ರಮಹಿಮೆ ಎಂದು ತಿಳಿದು ಅನಂತರ ಪುಣ್ಯಕರ

ಅವರ್ತತ ಮಹಾಸ್ಥಾನೇ ಸೇವನೇನೈವ ತಸ್ಯ ತು ।
ಸಮಸ್ತಾನಿ ಚ ಪಾಪಾನಿ ನಷ್ಟಾನಿ ಚ ಜನಾರ್ದನ ॥೨೫॥

ಮತ್ಪ್ರಸಾದೇನ ವಿಪ್ರಸ್ಯ ಕಸ್ಯಚಿದ್ವಚನಂ ಹರೇ ।
ಶ್ರುತ್ವಾ ದೃಷ್ಟ್ವಾ ಚ ಮಾಂ ನಿತ್ಯಂ ಹಾಲಾಸ್ಯಾಖ್ಯೇಽತಿಶೋಭನೇ॥೨೬॥

ಜಪಿತ್ವಾ ಪೂರ್ವವನ್ಮಂತ್ರಂ ಷಡಕ್ಷರಸಮಾಹ್ವಯಮ್ ।
ಅಯತ್ನೇನ ವಿಮುಕ್ತೋಽಭೂತ್ಸಂಸಾರಜಲಧೇಸ್ತು ಸಃ ॥೨೭॥

ಅತ್ರ ದತ್ತ ಮಹಾದಾನಂ ಭವೇತ್ ಸ್ಥಾನೇ ಮಮ ಪ್ರಿಯೇ ।
ಹುತಮಿಷ್ಟಂ ತಪಶ್ಚಾಲ್ಪಮಪ್ಯತ್ರ ಸುಮಹದ್ಭವೇತ್ ॥೨೮॥

ಅತೋ ವಿಶಿಷ್ಟೇ ಮತ್‌ಸ್ಥಾನೇ ಚಾತ್ರೈವಾನ್ಯತ್ರ ವಾ ನರಃ ।
ದೃಷ್ಟ್ವಾ ಮಾಮಾದರೇಣೈವ ಜಪೇನ್ಮಂತ್ರಂ ಷಡಕ್ಷರಮ್ ॥೨೯॥

ವಾದ ಆ ಕ್ಷೇತ್ರದಲ್ಲಿಯೇ ಆ ದೇಹ ನಾಶವಾಗುವವರೆಗೂ ವಾಸಮಾಡಬೇಕೆಂದು ನಿಶ್ಚಯಿಸಿಕೊಂಡು ದೃಢಮನಸ್ಸಿನಿಂದ ಉತ್ತಮವಾದ ಆ ಕ್ಷೇತ್ರದಲ್ಲಿಯೇ ವಾಸಿಸುತ್ತಿದ್ದನು. ಹೀಗೆ ಅಲ್ಲಿಯೇ ದೇವರ ಸೇವೆಮಾಡುತ್ತಾ ವಾಸಮಾಡಿದ್ದರಿಂದ ಅವನು ಮಾಡಿದ್ದ ಎಲ್ಲಾ ಪಾಪಗಳೂ ನಷ್ಟವಾದವು. ॥೨೪-೨೫॥

ಎಲೈ ವಿಷ್ಣುವೇ, ಅನಂತರ ಅವನು ನನ್ನ ಅನುಗ್ರಹದಿಂದ ಒಬ್ಬ ಬ್ರಾಹ್ಮಣನ ಮಾತಿನಂತೆ ಹಾಲಾಸ್ಯಕ್ಷೇತ್ರದಲ್ಲಿರುವ ನನ್ನ ದರ್ಶನಮಾಡುತ್ತಾ ಪೂರ್ವದಲ್ಲಿ ಹೇಳಿರುವಂತೆ ಪ್ರತಿದಿನವೂ ಷಡಕ್ಷರವೆಂಬ ಮಂತ್ರವನ್ನು ಜಪಮಾಡುತ್ತಿದ್ದುದರಿಂದ ಕೊನೆಯಲ್ಲಿ ಹೆಚ್ಚಿನ ಶ್ರಮವಿಲ್ಲದೆಯೇ ಮೋಕ್ಷವನ್ನು ಹೊಂದಿದನು. ॥೨೬-೨೭॥

ನನಗೆ ಇಷ್ಟವಾದ ಈ ಕ್ಷೇತ್ರದಲ್ಲಿ ಸ್ವಲ್ಪ ವಸ್ತುವನ್ನು ದಾನಮಾಡಿದಾಗ್ಯೂ ಅದು ಬಹಳ ದೊಡ್ಡದಾಗುವುದು ; ಅಲ್ಲದೆ ಈ ಸ್ಥಳದಲ್ಲಿ ಮಾಡಿದ ಹೋಮ, ಯಾಗಾದಿಗಳು ಬಹಳ ಸ್ವಲ್ಪವಾಗಿದ್ದಾಗ್ಯೂ ಬಹಳ ದೊಡ್ಡವಾಗುವುವು ! ॥೨೮॥

ಆದುದರಿಂದ ನನ್ನ ಸಾನ್ನಿಧ್ಯವಿಶೇಷವಿರುವ ಈ ಸ್ಥಳದಲ್ಲಾಗಲಿ ಬೇರೆ ಕ್ಷೇತ್ರಗಳಲ್ಲಾಗಲಿ ನನ್ನ ದರ್ಶನಮಾಡಿ ಶ್ರದ್ಧೆಯಿಂದ ಷಡಕ್ಷರೀಮಂತ್ರವನ್ನು ಜಪಮಾಡಬೇಕು. ॥೨೯॥

ಏವಮಾಚರತಸ್ತಸ್ಯ ಪ್ರಸಾದಾದೇವ ಮೇ ಹರೇ ।
ಮುಕ್ತಿಸಿದ್ಧಿರಯತ್ನೇನ ಭವತ್ಯೇವ ನ ಸಂಶಯಃ ॥೩೦॥

ಇತೋಽನ್ಯತ್ಸಕಲಂ ವಿಷ್ಣೋ ನರಾಣಾಂ ಪಾಪಕರ್ಮಣಾಮ್ ।
ಅವಶ್ಯಂ ಕರ್ತುಮತ್ಯರ್ಥಂ ತಸ್ಮಾದುಕ್ತಂ ಸಮಾಚರೇತ್ ॥೩೧॥

॥ ಸೂತ ಉವಾಚ ॥

ಏವಂ ಶಿವೇನೈವ ಸಮಸ್ತದೇಹಿನಾಂ
ವಿಮುಕ್ತಿಸಿದ್ಧ್ಯರ್ಥಮಯತ್ನತಃ ಪುರಾ ।
ಸುಭಾಷಿತಂ ಕಾರುಣಿಕೇನ ತನ್ಮಯಾ
ಪ್ರಭಾಷಿತಂ ವೋ ಮುನಯಸ್ಸುಸಾಧನಮ್ ॥೩೨॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಮುಕ್ತ್ಯುಪಾಯವಿಚಾರೋ ನಾಮ ಸಪ್ತತ್ರಿಂಶಾಧ್ಯಾಯಃ

ಈ ರೀತಿ ಮಾಡುತ್ತಿರುವವನಿಗೆ ನನ್ನ ಅನುಗ್ರಹದಿಂದ ಹೆಚ್ಚಿನ ಶ್ರಮವಿಲ್ಲದೆಯೇ ಮುಕ್ತಿಯು ಸಿದ್ಧಿಸುವುದು. ॥೩೦॥

ವಿಷ್ಣುವೇ, ಇದಕ್ಕಿಂತಲೂ ಇತರವಾದ ಶ್ರೌತಕರ್ಮಗಳನ್ನು ಮಾಡುವುದು ಪಾಪಿಗಳಾದವರಿಂದ ಶಕ್ಯವಿಲ್ಲವಾದ್ದರಿಂದ ಇದುವರೆಗೆ ಹೇಳಿದ ಇಷ್ಟು ಕೆಲಸವನ್ನಾದರೂ ಮಾಡಬೇಕು ಎಂದು ಈಶ್ವರನು ವಿಷ್ಣುವನ್ನು ಕುರಿತು ಹೇಳಿದನು. ॥೩೧॥

ಎಲೈ ಋಷಿಗಳೇ, ಈ ರೀತಿ ಸಾಕ್ಷಾತ್ ಶಿವನೇ ಎಲ್ಲಾ ಪ್ರಾಣಿಗಳಿಗೂ ಸುಲಭವಾಗಿ ಮುಕ್ತಿಸಿದ್ಧಿಯಾಗುವುದಕ್ಕೋಸ್ಕರ ಹೇಳಿದ ಈ ಉಪಾಯವನ್ನು ನಾನು ನಿಮಗೆ ಹೇಳಿರುತ್ತೇನೆ. ಎಂದು ಸೂತರು ಶೌನಕಾದಿಗಳಿಗೆ ಹೇಳಿದರು. ॥೩೨॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮುಕ್ತಿಗೆ ಸುಲಭವಾದ ಉಪಾಯವನ್ನು ತಿಳಿಸುವ
ಮೂವತ್ತೇಳನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಅಷ್ಟತ್ರಿಂಶೋಽಧ್ಯಾಯಃ ||

ಮೂವತ್ತೆಂಟನೆಯ ಅಧ್ಯಾಯವು

(ಮುಕ್ತಿಸಾಧನವಿಚಾರಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಸರ್ವಸಾಧನಮುತ್ತಮಮ್ ।
ಶೃಣುತಾತಿಪ್ರಿಯೇಣೈವ ದ್ವಿಜಾಸ್ಸಾರತರೋತ್ತಮಮ್ ॥೧॥

ಪುರಾ ಸತ್ಯವತೀಸೂನುಸ್ಸರ್ವವಿಜ್ಞಾನಸಾಗರಃ ।
ಸರ್ವವೇದೋದಧೇಃ ಸಾರಃ ಗುರುರ್ಮೇ ಕರುಣಾನಿಧಿಃ ॥೨॥

ವ್ಯಾಘ್ರಪುರ (ಪುಂಡರೀಕಪುರ, ವೆಕ್ಕಂ, ಮಲಯಾಳ) ಮುಂತಾದ ಶಿವ ಕ್ಷೇತ್ರಗಳಲ್ಲಿ ಆಚರಿಸಿದ ವ್ರತಗಳ ಹಾಗೆ, ಶಿವನಿಂದ ಉಪದೇಶಿಸಲ್ಪಟ್ಟಿರುವ, ಭುಕ್ತಿ ಮುಕ್ತಿಗಳಿಗೆ ವಿಶೇಷ ಸಾಧನವನ್ನು ತಿಳಿಸುತ್ತಾರೆ. ಈಗ ಐಹಿಕ ಆಮುಷ್ಮಿಕಭೋಗ, ಕೈಲಾಸಪ್ರಾಪ್ತಿ, ಪರಶಿವಸಾಯುಜ್ಯ ಮುಂತಾದ ಎಲ್ಲ ಇಷ್ಟಾರ್ಥಗಳಿಗೂ ಸಾಧನ ವನ್ನು ಹೇಳುತ್ತೇನೆ. ಓ ಶ್ರೇಷ್ಠರಾದ ಬ್ರಾಹ್ಮಣರಾ, ಉತ್ತಮಸಾಧನಗಳಲ್ಲಿ ಉತ್ತಮವಾದ ಈ ಸಾಧನವನ್ನು ತುಂಬ ಆದರದಿಂದ ಕೇಳುವವರಾಗಿರಿ. ||೧||

ಪೂರ್ವಕಾಲದಲ್ಲಿ ಸತ್ಯವತೀ ಪುತ್ರನಾದ, ಎಲ್ಲ ಶಾಸ್ತ್ರಗಳ ತಿಳಿವಳಿಕೆ ಎಂಬ ನೀರಿಗೆ ಸಮುದ್ರದ ಹಾಗೆ ನಿಧಿಯಾದ, ಸಮಸ್ತವಾದ ವೇದಗಳೆಲ್ಲಕ್ಕೂ ಮುಖ್ಯಾರ್ಥ ವಂತೆ ಇರುವ, ದಯಾನಿಧಿಯಾದ ನನ್ನ ಗುರುವಾದ ವ್ಯಾಸನು ಎಲ್ಲ ಜನರ ಉಪಕಾರ

ಸರ್ವಲೋಕೋಪಕಾರಾಯ ಸಾಂಬಂ ಸಂಸಾರಭೇಷಜಮ್ ।
ಧ್ಯಾಯಮಾನೋ ಮಹಾಭಕ್ತ್ಯಾ ತತಾಪ ಪರಮಂ ತಪಃ ॥೩॥

ಪುನಃ ಪುಷ್ಪಾದಿಭಿರ್ದೇವಂ ಸಮಾರಾಧ್ಯ ಯಥಾಬಲಮ್ ।
ಷಡಕ್ಷರೇಣ ಮಂತ್ರೇಣ ತುಷ್ಟಾವ ಚ ಮಹೇಶ್ವರಮ್ ॥೪॥

ಪರತತ್ತ್ವಾಯ ತತ್ತ್ವಾನಾಂ ತತ್ತ್ವಭೂತಾಯ ವಸ್ತುತಃ ।
ಸ್ವಸ್ಮಾದನ್ಯವಿಹೀನಾಯ ನಮಸ್ತಸ್ಮೈ ಸ್ವಯಂಭುವೇ ॥೫॥

ಚಿಚ್ಛಕ್ತಿರ್ಜಡಶಕ್ತಿಶ್ಚ ತದ್ಭೇದಾಶ್ಚ ತಥೈವ ಚ ।
ಯದೇವ ತತ್ತ್ವತೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ॥೬॥

ಕ್ಕೋಸ್ಕರ ಸಂಸಾರಕ್ಕೆ, ಜನನಮರಣದುಃಖಪರಂಪರೆಗೆ, ಔಷಧವು ರೋಗಕ್ಕೆ ಹೇಗೊ ಹಾಗೆ, ನಾಶಕನಾದ ಸಾಂಬನಾದ ಪರಶಿವನನ್ನು ಧ್ಯಾನಮಾಡುವವನಾಗಿ ಹೆಚ್ಚಾದ ಭಕ್ತಿಯಿಂದ ಉತ್ತಮವಾದ ತಪಸ್ಸನ್ನು ಆಚರಿಸಿದನು. ||೨-೩||

ವ್ಯಾಸಮಹರ್ಷಿಯು ಪುನಃ ಪರಶಿವನನ್ನು ಹೂವು ಮುಂತಾದ ಸಾಮಗ್ರಿಗಳಿಂದ ತನ್ನ ಶಕ್ತ್ಯನುಸಾರವಾಗಿ ಪೂಜಿಸಿ, ಆ ಮಹೇಶ್ವರನನ್ನು ಷಡಕ್ಷರೀಮಂತ್ರ ಜಪದಿಂದ ಧ್ಯಾನಮಾಡುತ್ತಾ, ಹೀಗೆ ಸ್ತೋತ್ರಮಾಡಿದನು. ||೪||

ಶಿವ, ಶಕ್ತಿ ಮೊದಲಾದ ಪೃಥಿವೀವರೆಗಿನ ಕಾರ್ಯಭೂತವಾದ ಎಲ್ಲ ತತ್ತ್ವಗಳಿಗೂಕಾರಣಭೂತನಾದ ಪರತತ್ತ್ವಸ್ವರೂಪನಾದ, ವಾಸ್ತವವಾದ ತತ್ತ್ವಸ್ವರೂಪನಾದ, ತನಗಿಂತಲೂ ಬೇರೆಯಾದ ಸಮಾಭ್ಯಧಿಕವಸ್ತುವಿಲ್ಲದ, ತಾನಾಗಿ ಇರುವ, ಕಾರಣರಹಿತನಾದ, ಪರಶಿವನಿಗೆ ನಮಸ್ಕಾರವು. ಔಪಾಧಿಕವಾಗಿ ಬೇರೆ ವಸ್ತುಗಳಿರುವಂತೆ ತೋರಿದರೂ ಪಾರಮಾರ್ಥಿಕವಾದ ವಸ್ತ್ವಂತರವಿಲ್ಲದ ಪರಶಿವನಿಗೆ ನಮಸ್ಕಾರವು. ||೫||

ಮಾಯಾಪರಿಣಾಮರೂಪವಾದ ಜಡಶಕ್ತಿಯೂ, ಆ ಜಡೋಪಾಧಿಯಿಂದ ಕೂಡಿರುವ ಚಿಚ್ಛಕ್ತಿಯೂ, ಅವುಗಳ ಭೇದಗಳಾದ ಇಚ್ಛಾ, ಜ್ಞಾನ, ಕ್ರಿಯಾ, ಮೊದಲಾದವುಗಳೂ, ಇವುಗಳ ಸ್ವರೂಪವನ್ನು ವಿಮರ್ಶಿಸಿದರೆ ಪಾರಮಾರ್ಥಿಕವಾಗಿ, ಇವೆಲ್ಲವೂ ಯಾವ ಪರತತ್ತ್ವಸ್ವರೂಪವಾಗಿಯೇ ಇರುವುವೋ, ಅಂಥ ಸರ್ವಾತ್ಮಸ್ವರೂಪನಾದ ಪರಶಿವನಿಗೆ ಸರ್ವದಾ ನಮಸ್ಕಾರವು. ||೬||

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ ।
ವಿರಾಡಾದ್ಯಾಶ್ಚ ದೇವಾಶ್ಚ ಯನ್ಮಾತ್ರಂ ತನ್ನುಮಶ್ಶಿವಮ್ ॥೭॥

ಮಹಾಸತ್ತ್ವಾಶ್ಚ ಯೇ ಜೀವಾ ಮಧ್ಯಸತ್ತ್ವಾಶ್ಚ ಚೇತನಾಃ ।
ವಿಹೀನಾಶ್ಚೈವ ಯನ್ಮಾತ್ರಂ ತನ್ನಮಾಮಿ ಮಹೌಜಸಮ್ ॥೮॥

ಯಸ್ಯ ಸತ್ತಾ ಜಗತ್ಸತ್ತಾರೂಪೇಣೈವಾವಭಾಸತೇ ।
ಯಂ ವಿನಾ ನ ಜಗತ್ತಸ್ಮೈ ಸದಾ ಸಾಕ್ಷಾತ್ ಸತೇ ನಮಃ ॥೯॥

ಯಸ್ಯ ಭಾನಂ ಜಗದ್ಭಾನಸ್ವರೂಪೇಣ ವಿಭಾಸತೇ ।
ಯಮೃತೇ ನ ಜಗದ್ಭಾನಂ ತಸ್ಮೈ ಭಾನಾತ್ಮನೇ ನಮಃ ॥೧೦॥

ಸೃಷ್ಟಿಕರ್ತನಾದ ಬ್ರಹ್ಮನೂ, ರಕ್ಷಣಕರ್ತನಾದ ವಿಷ್ಣುವೂ, ತಿರೋಧಾನವೆಂದರೆ ಉಪಸಂಹಾರಕರ್ತೃವಾದ ರುದ್ರನೂ, ಅನುಗ್ರಹಕರ್ತೃವಾದ ಈಶ್ವರನೂ, ನಿಗ್ರಹಕರ್ತನಾದ ಸದಾಶಿವನೂ, ವಿರಾಟ್, ಸ್ವರಾಟ್, ಸಮ್ರಾಟ್ ಮುಂತಾದ ದೇವತೆಗಳೂ ಪಾರಮಾರ್ಥಿಕವಾಗಿ ಯಾವ ಪರಶಿವಸ್ವರೂಪರೇ ಆಗಿದಾರೋ ಅಂಥ ಶಿವನನ್ನು ಸ್ತೋತ್ರಮಾಡುತ್ತೇವೆ. ॥೭॥

ಆನೆ ಮುಂತಾದ ಮಹಾಸತ್ತ್ವಚೇತನಗಳೂ, ಮಧ್ಯಮಸತ್ತ್ವರಾದ ಮನುಷ್ಯಚೇತನರೂ, ಹೀನಸತ್ತ್ವಗಳಾದ ಕ್ರಿಮಿಕೀಟಚೇತನಗಳೂ, ವಾಸ್ತವವಾಗಿ ಯಾವ ಪರಶಿವಸ್ವರೂಪರೋ, ಅಂಥ ಪರಮಶಕ್ತಿಯುತನಾದ ಶಿವನನ್ನು ನಮಸ್ಕರಿಸುತ್ತೇನೆ. ॥೮॥

ಎಲ್ಲಕ್ಕೂ ಅಧಿಷ್ಠಾನಸ್ವರೂಪನಾದ ಪರಶಿವನ ಸತ್ತೆಯು ಜಗತ್ತಿನಲ್ಲಿ ತೋರುವ ಸತ್ತೆಯ ರೂಪದಿಂದ ತೋರುತ್ತಿದೆಯೋ, ಯಾರು ಇಲ್ಲದಿದ್ದರೆ ಜಗತ್ತು ಇರಲಾರದೋ, ಎಂದರೆ ಪ್ರಪಂಚದ ಇರುವಿಕೆಯು ಪರಶಿವನ ಇರುವಿಕೆಗೆ ಅಧೀನವಾಗಿದೆಯೋ, ಯಾವ ಪರಶಿವನ ಸತ್ತೆಯು ಪರಾಧೀನವಾದುದಲ್ಲವೋ, ಅಂಥ ಸ್ವತಂತ್ರನಾದ ಪರಶಿವನಿಗೆ ನಮಸ್ಕಾರವು. ॥೯॥

ಯಾರ ತೋರುವಿಕೆಯು ಜಗತ್ತೆಂಬ ಉಪಾಧಿಯಿಂದ ಕಾಣಬರುತ್ತದೋ, ಯಾರಿಗಲ್ಲದೆ ಜಗತ್ತಿನ ತೋರುವಿಕೆಯೂ ಸಂಭವಿಸದೋ, ಯಾರ ಬೆಳಕಿನಿಂಡ ಜಗತ್ತು ಬೆಳಗುತ್ತದೋ, ಅಂಥಾ ಪ್ರಕಾಶಸ್ಫುರಣಸ್ವರೂಪನಾದ ಪರಶಿವನಿಗೆ ನಮಸ್ಕಾರವು. ॥೧೦॥

ಯದಾನಂದೋಽಖಿಲಾನಂದೋ ವಿಭಾತಿ ಸ್ವಯಮೇವ ತು ।
ತನ್ನುಮಃ ಪರಮಾನಂದಂ ಪರಾಪರವಿವರ್ಜಿತಮ್ ॥೧೧॥

ಯದ್ದೇಶಕಾಲದಿಗ್ಭಾಗೈರ್ನ ಭಿನ್ನಂ ಸರ್ವದಾಽದ್ವಯಮ್ ।
ಯದೇವ ವಿಶ್ವಂ ತದ್ಬ್ರಹ್ಮ ಯಥಾರ್ಥಂ ಪ್ರಣಮಾಮ್ಯಹಮ್॥೧೨॥

ಅನಂತಮದ್ವಯಂ ಪೂರ್ಣಂ ಏಕಮಿತ್ಯಾಮನಂತಿ ಯತ್ ।
ಆಗಮಾ ಅಖಿಲಾ ನಿತ್ಯಂ ವಂದೇ ತದ್ಬ್ರಹ್ಮಸಂಜ್ಞಿತಮ್ ॥೧೩॥

ಯತ್ಸ್ವರೂಪಮವಿಜ್ಞಾಯ ಸಾಂಖ್ಯಯೋಗೌ ವಿನಿರ್ಗತೌ ।
ತಂ ತದಜ್ಞಾನಚಿತ್ರಸ್ಯ ಭಿತ್ತಿಭೂತಂ ನುಮಶ್ಶಿವಮ್ ॥೧೪॥

ಯತ್ಸ್ವರೂಪಮವಿಜ್ಞಾಯ ಶಬ್ದಶಾಸ್ತ್ರಂ ಸಮುದ್ಬಭೌ ।
ತಂ ತದಜ್ಞಾನಚಿತ್ರಸ್ಯ ಭಿತ್ತಿಭೂತಂ ನುಮಶ್ಶಿವಮ್ ॥೧೫॥

ಯಾವ ಬ್ರಹ್ಮನ ಆನಂದವೇ, ಅದರ ಅಂಶವೇ, ಪ್ರಪಂಚದಲ್ಲಿನ ಎಲ್ಲ ಆನಂದರೂಪದಿಂದ ತಾನಾಗಿಯೇ ಅನುಭವಕ್ಕೆ ಬರುತ್ತಿದೆಯೋ, ಅಂಥ ಸರ್ವೋತ್ತಮಾನಂದರೂಪನಾದ, ಮೇಲುಕೀಳೆಂಬ ಭೇದವಿಲ್ಲದ, ಸಚ್ಚಿದಾನಂದರೂಪನಾದ ಪರಶಿವನನ್ನು ಸ್ತೋತ್ರಮಾಡುತ್ತೇವೆ. ॥೧೧॥

ಯಾವ ಬ್ರಹ್ಮತತ್ತ್ವವು ದೇಶ, ಕಾಲ, ಎಂಟು ದಿಗ್ಭಾಗಗಳು ಇವುಗಳಿಂದ ಭಿನ್ನವಾಗಿ ಪರಿಚ್ಛಿನ್ನವಾಗಿ ಇಲ್ಲವೋ, ಯಾವಾಗಲೂ ವಾಸ್ತವವಾಗಿ ಅದ್ವಯವಾಗಿರುತ್ತದೋ, ಯಾವುದು ಈ ಪ್ರಪಂಚರೂಪದಿಂದ ಔಪಾಧಿಕವಾಗಿ ತೋರುತ್ತಿರುತ್ತದೋ, ಅಂಥಾ ಪಾರಮಾರ್ಥಿಕವಾದ ಪರಶಿವತತ್ತ್ವವನ್ನು ನಮಸ್ಕರಿಸುತ್ತೇನೆ. ॥೧೨॥

ಪರಿಚ್ಛೇದರಹಿತವಾದ, ದ್ವಿತೀಯವಸ್ತುವಿಲ್ಲದ, ಪೂರ್ಣವಾದ, ಒಂದೇ ಆದ ತತ್ತ್ವವೆಂದು ಯಾವ ವಸ್ತುವನ್ನು ಎಲ್ಲ ವೇದಾದಿಪ್ರಮಾಣಗಳೂ ಹೇಳುತ್ತವೋ, ಅಂಥ ಬ್ರಹ್ಮವೆಂದು ಹೆಸರುಳ್ಳ ತತ್ತ್ವವನ್ನು ಸರ್ವದಾ ನಮಸ್ಕರಿಸುತ್ತೇನೆ. ॥೧೩॥

ಯಾವ ಪರಬ್ರಹ್ಮತತ್ತ್ವದ ವಾಸ್ತವಸ್ವರೂಪವನ್ನು ತಿಳಿಯದೆ ಇರುವುದರಿಂದ ಸಾಂಖ್ಯ, ಯೋಗ, ವ್ಯಾಕರಣ ಶಾಸ್ತ್ರಗಳುಂಟಾದವೋ, ಆ ಅಜ್ಞಾನಕ್ಕೆ, ಚಿತ್ರಕ್ಕೆ ಗೋಡೆಯು ಹೇಗೋ ಹಾಗೆ, ಅಧಿಷ್ಠಾನಭೂತವಾದ ಪರಶಿವಸ್ವರೂಪವನ್ನು

ಯತ್ಸ್ವರೂಪಮವಿಜ್ಞಾಯ ಕಾರಣಂ ಪರಮಾಣವಃ ।
ಕಲ್ಪಿತಾ ಜಗತೋ ವಿಪ್ರಾಃ ತನ್ನುಮಃ ಪರಮೇಶ್ವರಮ್ ॥೧೬॥

ಯತ್ಸ್ವರೂಪಮವಿಜ್ಞಾಯ ಕ್ರಿಯಾಂ ಸರ್ವಫಲಪ್ರದಾಮ್ ।
ಕಲ್ಪಯಂತಿ ವಿನಾ ದೇವಂ ತಂ ವಂದೇ ಸಕಲಪ್ರದಮ್ ॥೧೭॥

ಯತ್ಸ್ವರೂಪಮವಿಜ್ಞಾಯ ದೇಹಮಾತ್ಮೇತಿ ಮನ್ವತೇ ।
ತರ್ಕಾಭಾಸೈಸ್ತಮೀಶಾನಂ ವಂದೇ ದೇಹವಿಲಕ್ಷಣಮ್ ॥೧೮॥

ಯತ್ಸ್ವರೂಪಮವಿಜ್ಞಾಯ ದೇಹಜಾನೀಂದ್ರಿಯಾಣಿ ತು ।
ಆತ್ಮೇತಿ ಮನ್ವತೇ ವಂದೇ ತಮಿಂದ್ರಿಯವಿಲಕ್ಷಣಮ್ ॥೧೯॥

ಸ್ತೋತ್ರಮಾಡುತ್ತೇವೆ. ಯಾವ ಪರತತ್ತ್ವದ ಅಜ್ಞಾನದಿಂದ ನೈಯಾಯಿಕರೂ ವೈಶೇಷಿಕರೂ ಈ ಪ್ರಪಂಚಕ್ಕೆ ಕಾರಣಗಳು ಪರಮಾಣುಗಳೆಂದು ಕಲ್ಪಿಸುತ್ತಿದಾರೆಯೋ ಅಂಥಾ ಪರಮೇಶ್ವರನನ್ನು ಸ್ತೋತ್ರಮಾಡುತ್ತೇವೆ. ||೧೪-೧೫-೧೬||

ಯಾವ ಪರತತ್ತ್ವದ ತಿಳಿವಳಿಕೆಯಿಲ್ಲದಿರುವುದರಿಂದ ಮೀಮಾಂಸಕರು ಈಶ್ವರನನ್ನು ಒಪ್ಪದೆ ಕರ್ಮವನ್ನೇ ಎಲ್ಲ ಫಲಗಳನ್ನೂ ಕೊಡುವ ತತ್ವವೆಂದು ಕಲ್ಪಿಸುತ್ತಾರೋ ಅಂಥಾ ಎಲ್ಲರಿಗೂ ಎಲ್ಲ ಇಷ್ಟಾರ್ಥಗಳನ್ನೂ ಕೊಡುವ ಸ್ವಪ್ರಕಾಶರೂಪನಾದ ಪರಶಿವನನ್ನು ನಮಸ್ಕರಿಸುತ್ತೇನೆ. ||೧೭||

ಯಾವ ಪರತತ್ತ್ವದ ಪಾರಮಾರ್ಥಿಕವಾದ ಸ್ವರೂಪವನ್ನು ತಿಳಿಯದೆ ಶರೀರವನ್ನು ಶರೀರದಲ್ಲಿರುವ ಇಂದ್ರಿಯಗಳನ್ನೂ ಸದ್ಯುಕ್ತಿಯಂತೆ ತೋರುತ್ತಿರುವ ಊಹೆಗಳಿಂದ, ನಾನು ಹುಟ್ಟಿದೆ, ನಾನು ಕುರುಡನು, ಎಂದು ಮುಂತಾದ ಅನುಭವಗಳಿಂದ, ದೇಹ ಇಂದ್ರಿಯಗಳಿಗಿಂತ ಬೇರೆಯಾದ ಆತ್ಮನು ಕಾಣದಿರುವುದರಿಂದ ಇಲ್ಲವೆಂದು ಮುಂತಾದ ಅನುಪಲಬ್ಧಿಯುಕ್ತ್ಯಾಭಾಸ ಇವುಗಳಿಂದಲೂ, ದೇಹವನ್ನೇ ಇಂದ್ರಿಯಗಳನ್ನೇ ಆತ್ಮನೆಂದು ಜನರು ತಿಳಿಯುತ್ತಾರೋ, ಅಂಥಾ ವಾಸ್ತವವಾಗಿ ದೇಹೇಂದ್ರಿಯಗಳಿಂದ ಬೇರೆಯಾದ ಲಕ್ಷಣಗಳುಳ್ಳ ಪರಶಿವನನ್ನು ನಮಸ್ಕರಿಸುತ್ತೇನೆ. ||೧೮-೧೯||

ಯತ್ಸ್ವರೂಪಮವಿಜ್ಞಾಯ ಪ್ರಾಣಮಾತ್ಮೇತಿ ಮನ್ವತೇ ।
ವಂದೇ ತಂ ಪ್ರಾಣವೇತ್ತಾರಂ ಪ್ರಾಣಂ ಪ್ರಾಣಸ್ಯ ಸರ್ವದಾ ॥೨೦॥

ಯತ್ಸ್ವರೂಪಮವಿಜ್ಞಾಯ ಮನಃ ಸಂಕಲ್ಪಲಕ್ಷಣಮ್ ।
ಆತ್ಮೇತಿ ಮನ್ವತೇ ಭಕ್ತ್ಯಾ ವಂದೇ ತಂ ಮನಸಃ ಪರಮ್ ॥೨೧॥

ಯತ್ಸ್ವರೂಪಮವಿಜ್ಞಾಯ ಬುದ್ಧಿರಾತ್ಮೇತಿ ಮನ್ವತೇ ।
ತಂ ವಂದೇ ಬುದ್ಧಿಬೋದ್ಧಾರಂ ಬೋಧರೂಪಮವಿಕ್ರಿಯಮ್ ॥೨೨॥

ಯತ್ಸ್ವರೂಪಮವಿಜ್ಞಾಯ ಸರ್ವಪ್ರತ್ಯಯಕಾರಣಮ್ ।
ಅಂತಃಕರಣಮಾತ್ಮೇತಿ ಮನ್ವತೇ ತಂ ನಮಾಮ್ಯಹಮ್ ॥೨೩॥

ಯಾವ ಪರತತ್ತ್ವದ ಅಜ್ಞಾನದಿಂದ ಪ್ರಾಣವನ್ನೇ ಆತ್ಮನೆಂದು, ನಾನು ಉಸಿರಾಡುತ್ತೇನೆ, ಎಂಬ ಅನುಭವದಿಂದ ಜನರು ತಿಳಿಯುತ್ತಾರೋ, ಅಂಥಾ ಪ್ರಾಣಕ್ಕೂ ಜ್ಞಾತೃವಾದ, ಪ್ರಾಣವ್ಯಾಪಾರವನ್ನೂ ತಿಳಿಯುವ, ಪ್ರಾಣಕ್ಕೂ ಪ್ರಾಣನ ಶಕ್ತಿಯನ್ನು ಕೊಡುವ ಪರಶಿವತತ್ತ್ವವನ್ನು ಯಾವಾಗಲೂ ನಮಸ್ಕರಿಸುತ್ತೇನೆ. ॥೨೦॥

ಯಾವ ತತ್ತ್ವವನ್ನು ತಿಳಿಯದೆ ಹೀಗೋ ಹಾಗೋ ಎಂದು ಸಂಕಲ್ಪವಿಕಲ್ಪ ರೂಪವಾದ ಮನಸ್ಸನ್ನೇ ಆತ್ಮನೆಂದು ತಿಳಿಯುತ್ತಾರೋ, ಅಂಥಾ ಮನಸ್ಸಿಗೂ ಸಿಲುಕದೆ ಮೀರಿ ಇರುವ ಪರಶಿವನನ್ನು ನಮಸ್ಕರಿಸುತ್ತೇನೆ. ಯಾವ ತತ್ತ್ವ ಸ್ವರೂಪದ ಅರಿವಿಲ್ಲದೆ ಬುದ್ಧಿಯನ್ನೇ, ನಿಶ್ಚಯಜ್ಞಾನವನ್ನುಂಟುಮಾಡುವ ಶಕ್ತಿಯನ್ನೇ, ಆತ್ಮನೆಂದು ಜನರು ತಿಳಿಯುತ್ತಾರೋ, ಅಂಥಾ ಬುದ್ಧಿಗೂ ಜ್ಞಾತೃ ವಾದ, ಬುದ್ಧಿಗೂ ಸಾಕ್ಷಿಯಾದ, ಜ್ಞಾನಸ್ವರೂಪನಾದ, ವಿಕಾರಗಳಿಲ್ಲದಿರುವ ಪರಶಿವನನ್ನು ನಮಸ್ಕರಿಸುತ್ತೇನೆ. ॥೨೧-೨೨॥

ಯಾವ ಪರತತ್ತ್ವದ ಸ್ವರೂಪವನ್ನರಿಯದೆ ಜನರು ಎಲ್ಲ ವಿಧವಾದ ತಿಳಿವಳಿಕೆಗೂ ಕಾರಣವಾದ ಅಂತಃಕರಣವನ್ನೇ ಆತ್ಮನೆಂದು ತಿಳಿಯುತ್ತಾರೋ, ಅಂಥ ಪರಶಿವನನ್ನು ಸ್ತೋತ್ರಮಾಡುತ್ತೇವೆ. ಇಂದ್ರಿಯಗಳಿಂದ ಬರುವ ತಿಳಿವಳಿಕೆಗಳಿಗೆ ಎಲ್ಲಕ್ಕೂ ಮನಸ್ಸು ಬುದ್ಧಿ ಮುಂತಾದುದರ ಕಾರ್ಯವನ್ನು ನೆರವೇರಿಸುವ ಹಿನ್ನೆಲೆ ಬೆಂಬಲದಂತಿರುವ ಅಂತಃಕರಣವನ್ನು ಆತ್ಮನೆಂದು ತಿಳಿಯುತ್ತಾರೆ.

ಯಸ್ಮಿನ್ ಜಾಗ್ರದವಸ್ಥೈಷಾ ಭಾತೀವ ಭವತೀವ ಚ ।
ತಂ ತದ್ಭ್ರಾಂತೇರಧಿಷ್ಠಾನಂ ವಂದೇ ಸಾಕ್ಷಿಣಮೀಶ್ವರಮ್ ॥೨೪॥

ಯಸ್ಮಿನ್ ಸ್ವಪ್ನಪ್ರಪಂಚೋಽಯಂ ಭಾತೀವ ಭವತೀವ ಚ ।
ತಂ ತದ್ಭ್ರಾಂತೇರಧಿಷ್ಠಾನಂ ವಂದೇ ಸಾಕ್ಷಿಣಮೀಶ್ವರಮ್ ॥೨೫॥

ಯಸ್ಮಿನ್ ಸುಷುಪ್ತ್ಯವಸ್ಥೇಯಂ ಭಾತೀವ ಭವತೀವ ಚ ।
ತಂ ತದ್ಭ್ರಾಂತೇರಧಿಷ್ಠಾನಂ ವಂದೇ ಸಾಕ್ಷಿಣಮೀಶ್ವರಮ್ ॥೨೬॥

ಯಸ್ಮಿನ್ ಕ್ಲೃಪ್ತಂ ತುರೀಯತ್ವಂ ತ್ರಿಧಾಮಾಪೇಕ್ಷಯೈವ ತು ।
ತಂ ತುರೀಯತ್ವನಿರ್ಮುಕ್ತಂ ವಂದೇ ಚಿದ್ಘನಮೀಶ್ವರಮ್ ॥೨೭॥

ಜ್ಞಾನಶಕ್ತಿಯು ಮುಂದಾದರೆ ಅಂತಃಕರಣವೆನಿಸುತ್ತದೆ. ಕ್ರಿಯಾಶಕ್ತಿಯು ಮುಂದಾದರೆ ಪ್ರಾಣವೆನಿಸುತ್ತದೆ. ಯಾವ ಆತ್ಮನಲ್ಲಿ ಜಾಗ್ರತ್, ಎಚ್ಚರಿಕೆಯ ಸ್ಥಿತಿಯು ತೋರುತ್ತಾ ಇರುವಂತಿದೆಯೋ ಅಂಥಾ ಆ ಭ್ರಾಂತಿಗೆ ಅಧಿಷ್ಠಾನ ರೂಪನಾದ ಸಾಕ್ಷಿಸ್ವರೂಪನಾದ ಔಪಾಧಿಕವಾದ ಭೇದವನ್ನು ಬಿಟ್ಟು ಇರುವ ಪರಶಿವಸ್ವರೂಪನನ್ನು ನಮಸ್ಕರಿಸುತ್ತೇನೆ. ॥೨೩-೨೪॥

ಯಾವ ಆತ್ಮನಲ್ಲಿ ಈ ಸ್ವಪ್ನಪ್ರಪಂಚವೂ ಸುಷುಪ್ತ್ಯವಸ್ಥೆಯೂ ತೋರುತ್ತಾ ಇರುವಂತಿದೆಯೋ ಅಂಥಾ ಆ ಭ್ರಾಂತಿಗಳಿಗೆ ಅಧಿಷ್ಠಾನಭೂತನಾದ ಆತ್ಮನು ಅಂತಃಕರಣವೇ ಉಪಾಧಿಯಾಗಿದ್ದರೆ ಜೀವಾತ್ಮನೆನಿಸುತ್ತಾನೆ. ಎಲ್ಲ ಅಂತಃಕರಣಗಳ ಸಮಷ್ಟಿಯೇ ಉಪಾಧಿಯಾದರೆ ಹಿರಣ್ಯಗರ್ಭನೆನಿಸುತ್ತಾನೆ. ಇವೆರಡಕ್ಕೂ ಕಾರಣ ರೂಪವಾದ ಮಾಯೆಯೇ ಉಪಾಧಿಯಾದರೆ ಈಶ್ವರನೆನಿಸುತ್ತಾನೆ. ಈ ಔಪಾಧಿಕ ವಾದ ಭೇದವನ್ನು ಬಿಟ್ಟು ಪರಶಿವಸ್ವರೂಪನಾದ ಆತ್ಮನನ್ನು ನಮಸ್ಕರಿಸುತ್ತೇನೆ. ॥೨೫-೨೬॥

ಯಾವ ಆತ್ಮನಲ್ಲಿ ಜಾಗ್ರತ್ಸ್ವಪ್ನಸುಷುಪ್ತಿ (ಎಚ್ಚರಿಕೆ, ಕನಸು, ನಿದ್ದೆ) ಗಳೆಂಬ ಅವಸ್ಥೆಗಳ ದೃಷ್ಟಿಯಿಂದ ತುರೀಯತ್ವವು ನಾಲ್ಕನೆಯ ಸ್ಥಿತಿಯೂ ಕಲ್ಪಿತ ವಾಗಿಯೇ ಇದೆಯೋ, ಯಾವ ಆತ್ಮನು ತನ್ನ ಪಾರಮಾರ್ಥಿಕವಾದ ಸ್ವರೂಪದಲ್ಲಿ ಈ ಅವಸ್ಥೆಗಳಿಲ್ಲದವನೋ, ಅಂಥ ಒಂದೇ ಆದ ಇನ್ನೊಂದಿಲ್ಲದ ಅದ್ವಯಸ್ವರೂಪ ನಾದ ಅಜ್ಞಾನಸಂಬಂಧದ ದೋಷವಿಲ್ಲದಿರುವ, ಆದುದರಿಂದ ಯಾವ ವಿಶೇಷವೂ

ಯಸ್ಮಿಂಸ್ತುರೀಯಾತೀತತ್ವಮಧ್ಯಸ್ತಂ ತದಭಾವತಃ ।
ತಂ ವಂದೇ ಕೇವಲಂ ಶುದ್ಧಂ ನಿರ್ವಿಶೇಷಂ ಮಹೇಶ್ವರಮ್ ॥೨೮॥

ಏಕತ್ವಂ ಚ ತಥಾ ದ್ವಿತ್ವಂ ತ್ರಿತ್ವಂ ಯಸ್ಮಿನ್ ಪ್ರಕಲ್ಪಿತಮ್ ।
ಬಹುತ್ವಂ ಚ ತಮೀಶಾನಂ ಅಸಂಖ್ಯೇಯಂ ನಮಾಮ್ಯಹಮ್ ॥೨೯॥

ಅಭಿನ್ನಂ ಚ ತಥಾ ಭಿನ್ನಂ ಭಿನ್ನಾಭಿನ್ನಂ ವದಂತಿ ಯಮ್ ।
ತಂ ಸದಾ ಕೇವಲಂ ವಂದೇ ಕೇಷಾಂಚಿಲ್ಲಭ್ಯಮೀಶ್ವರಮ್ ॥೩೦॥

ಯಸ್ಯ ವಿಜ್ಞಾನಸಂಪನ್ನಾ ಬ್ರಹ್ಮವಿಷ್ಣುಮಹೇಶ್ವರಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೧॥

ಇಲ್ಲದಿರುವ ಪರಶಿವನನ್ನು ನಮಸ್ಕರಿಸುತ್ತೇನೆ. ಇದರಂತೆಯೇ ತುರಿಯಾತೀತ ತತ್ತ್ವವೂ ಸ್ವಾಭಾವಿಕವಾಗಿ ಆ ಧರ್ಮವಿಲ್ಲದಿರುವುದರಿಂದ ಕಲ್ಪಿತವಾಗಿಯೇ ತೋರುತ್ತದೋ ಅಂಥ ಚಿದ್ಘನರೂಪನಾದ ಜ್ಞಾನಸ್ವರೂಪನಾದ ಪರಶಿವನನ್ನು ನಮಸ್ಕರಿಸುತ್ತೇನೆ. ||೨೭-೨೮||

ಒಂದು, ಎರಡು, ಮೂರು, ಅನೇಕ ಮುಂತಾದ ಸಂಖ್ಯೆಗಳು ಯಾವ ಆತ್ಮನಲ್ಲಿ ಕಲ್ಪಿತವಾಗಿವೆಯೋ, ವಾಸ್ತವವಾಗಿ ಎಣಿಕೆಯ ಸಂಬಂಧವಿಲ್ಲದ ಆ ಪರಶಿವನನ್ನು ಸ್ತೋತ್ರಮಾಡುತ್ತೇವೆ. ಜೀವಾತ್ಮಪರಮಾತ್ಮರಿಗೆ ಅದ್ವೈತಿಗಳು ಅಭೇದವನ್ನೂ, ದ್ವೈತಿಗಳು ಭೇದವನ್ನೂ, ವಿಶಿಷ್ಟಾದ್ವೈತಿಗಳು ಭೇದಾಭೇದವನ್ನೂ ಪಾರಮಾರ್ಥಿಕವಾಗಿ ಹೇಳುತ್ತಾರೆ. ಅಂಥಾ ಅದ್ವಯನಾದ, ಕೆಲವರ ಸಿದ್ಧಾಂತದಲ್ಲಿ ಮಹಾವಾಕ್ಯಗಳಿಗೆ ತಾತ್ಪರ್ಯಾರ್ಥರೂಪನೂ ಜ್ಞಾನಿಗಳಿಗೆ ಲಭ್ಯನೂ ಆದ ಈಶ್ವರನನ್ನು ನಮಸ್ಕರಿಸುತ್ತೇನೆ. ||೨೯-೩೦||

ಯಾವ ಪರಶಿವನ ತತ್ತ್ವದ ತಿಳಿವಳಿಕೆಯನ್ನು ಪಡೆದೇ, ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ಮಹಾವ್ಯಕ್ತಿಗಳೂ ಕೂಡ ಬ್ರಹ್ಮತತ್ತ್ವದ ಪಾರಮಾರ್ಥಿಕ ರೂಪವನ್ನು ತಿಳಿಯುತ್ತಾರೋ ಅಂಥಾ ಅದ್ವಯತತ್ತ್ವವನ್ನು ಸ್ತೋತ್ರಮಾಡುತ್ತೇನೆ. ||೩೧||

ಯಸ್ಯ ವಿಜ್ಞಾನಸಂಪನ್ನೌ(ನ್ನಾಃ) ಸದೇಶ್ವರಸದಾಶಿವೌ ।
ಯಥಾರ್ಥಂ ಬ್ರಹ್ಮ ಜಾನೀತಃ ತನ್ನುಮಃ ಪರಮಾದ್ವಯಮ್ ॥೩೨॥

ಯಸ್ಯ ವಿಜ್ಞಾನಸಂಪನ್ನಾಸ್ಸರ್ವದೇವಾ ನ ಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೩॥

ಯಸ್ಯ ವಿಜ್ಞಾನಸಂಪನ್ನಾಃ ವಿಭಿನ್ನಾನ್ ಜೀವಚೇತನಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೪॥

ಯಸ್ಯ ವಿಜ್ಞಾನಸಂಪನ್ನಾಃ ಸರ್ವವೇದಾ ನ ಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೫॥

ಯಸ್ಯ ವಿಜ್ಞಾನಸಂಪನ್ನಾಃ ಸ್ಮೃತೀಸ್ಸರ್ವಾ ಅಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೬॥

ಯಾವ ಪರಶಿವತತ್ತ್ವದ ತಿಳಿವಳಿಕೆಯಿಂದ ಕೂಡಿದವರಾಗಿ ಅನುಗ್ರಹ ಕರ್ತೃವಾದ ಈಶ್ವರನೂ, ನಿಗ್ರಹಕರ್ತೃವಾದ ಸದಾಶಿವನೂ ಬ್ರಹ್ಮತತ್ತ್ವದ ಯಥಾರ್ಥವಾದ ಸ್ವರೂಪವನ್ನು ತಿಳಿದವರಾಗುತ್ತಾರೋ ಅಂಥ ಸರ್ವೋತ್ತಮನೂ ಅದ್ವಿತೀಯನೂ ಆದ ಪರಶಿವನನ್ನು ಸ್ತೋತ್ರಮಾಡುತ್ತೇವೆ. ನಿಗ್ರಹವೆಂದರೆ ಮನುಷ್ಯನ ಮನಸ್ಸನ್ನು ವಿಷಯಗಳಿಂದ ಹಿಂತಿರುಗಿಸುವುದು. ಅನುಗ್ರಹವೆಂದರೆ ತತ್ತ್ವಜ್ಞಾನವಾಗುವಂತೆ ಮಾಡುವುದು. ॥೩೨॥

ಯಾವ ಪರಶಿವನ ಜ್ಞಾನದಿಂದ ಕೂಡಿದವರಾಗಿ ಎಲ್ಲ ದೇವತೆಗಳೂ ಸ್ವಲ್ಪವೂ ಆತಂಕವಿಲ್ಲದವರಾಗಿ ಬ್ರಹ್ಮಸ್ವರೂಪವನ್ನು ತಿಳಿದವರಾಗುತ್ತಾರೋ ಅಂಥಾ ಶ್ರೇಷ್ಠನಾದ ಅದ್ವಿತೀಯನಾದ ಪರಶಿವನನ್ನು ಸ್ತೋತ್ರಮಾಡುತ್ತೇವೆ. ॥೩೩॥

ಯಾವ ಪರಶಿವನ ಜ್ಞಾನವನ್ನು ಪಡೆದವರೆಲ್ಲರೂ ನಾನಾಪ್ರಕಾರವಾಗಿರುವ ಜೀವಚೇತನಗಳೆಲ್ಲವನ್ನೂ ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪರೆಂದು ತಿಳಿಯುತ್ತಾರೋ, ಅಂಥ ಪರಶಿವನನ್ನು ಸ್ತೋತ್ರಮಾಡುತ್ತೇವೆ. ॥೩೪॥

ಯಾವ ಪರಶಿವನ ತಿಳಿವಳಿಕೆಯನ್ನು ಪಡೆದವರು ಸಂದೇಹವಿಲ್ಲದವರಾಗಿ ಎಲ್ಲ ದೇವತೆಗಳನ್ನೂ ಎಲ್ಲ ಸ್ಮೃತಿಗಳನ್ನೂ ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪವಾದುವೆಂದು ತಿಳಿಯುವವರಾಗುತ್ತಾರೆ. 'ಸರ್ವಂ ಖಲ್ವಿದಂ ಬ್ರಹ್ಮ', 'ಇದಂ

ಯಸ್ಯ ವಿಜ್ಞಾನಸಂಪನ್ನಾಃ ಪುರಾಣಾನಿ ಚ ಭಾರತಮ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೭॥

ಯಸ್ಯ ವಿಜ್ಞಾನಸಂಪನ್ನಾಃ ಸರ್ವಾನ್ ಶೈವಾಗಮಾನಪಿ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೮॥

ಯಸ್ಯ ವಿಜ್ಞಾನಸಂಪನ್ನಾ ವಿವಿಧಾನ್ವೈಷ್ಣವಾಗಮಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೩೯॥

ಯಸ್ಯ ವಿಜ್ಞಾನಸಂಪನ್ನಾ ಬ್ರಾಹ್ಮಾನೇತಾಂಸ್ತಥಾಗಮಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೪೦॥

ಯಸ್ಯ ವಿಜ್ಞಾನ ಸಂಪನ್ನಾ ಬುದ್ಧಾರ್ಹತಾಗಮಾನಿಮಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೪೧॥

ಯಸ್ಯ ವಿಜ್ಞಾನಸಂಪನ್ನಾಃ ಶಬ್ದಾನ್ ಸತ್ಯೇತರಾದಿಕಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೪೨॥

ಯಸ್ಯ ವಿಜ್ಞಾನಸಂಪನ್ನಾ ವಿದ್ಯಾಸ್ಸರ್ವಾ ಅಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೩॥

ಸರ್ವಂ ಯದಯಮಾತ್ಮಾ' ಮುಂತಾದ ಮಹಾವಾಕ್ಯಗಳ ತಾತ್ಪರ್ಯವನ್ನು ವಿವರಿಸುತ್ತಿದ್ದಾರೆ. ॥೩೫-೩೬॥

ಯಾವ ಪರಶಿವನ ತಿಳಿವಳಿಕೆಯನ್ನು ಪಡೆದವರು ಪುರಾಣಗಳನ್ನೂ ಭಾರತವನ್ನೂ, ಎಲ್ಲ ಶೈವಾಗಮಗಳನ್ನೂ, ನಾನಾಪ್ರಕಾರವಾದ ವೈಷ್ಣವಾಗಮಗಳನ್ನೂ, ಪ್ರಸಿದ್ಧವಾದ ಬ್ರಹ್ಮಾಗಮಗಳನ್ನೂ, ಬೌದ್ಧಾಗಮಗಳನ್ನೂ, ಜೈನಾಗಮಗಳನ್ನೂ, ಇವೆಲ್ಲವನ್ನೂ ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪವೆಂದೂ ಅಜ್ಞಾನದಿಂದ ಕಲ್ಪಿತವಾಗಿ ತೋರುತ್ತಿದೆಯೆಂದೂ ತಿಳಿಯುವವರಾಗುತ್ತಾರೆ. ॥೩೭-೩೮-೩೯-೪೦-೪೧॥

ಯಾವ ಪರಶಿವನ ಸ್ವರೂಪವನ್ನು ತಿಳಿದವರು ಸತ್ಯವಾಕ್ಯಗಳಂತೆ ಅಸತ್ಯವಾಕ್ಯಗಳನ್ನೂ, ಎಲ್ಲ ವಿದ್ಯೆಗಳನ್ನೂ, ಪರಸ್ಪರಬಾಧಕಗಳಾದ ಯುಕ್ತಿಗಳನ್ನೂ,

ಯಸ್ಯ ವಿಜ್ಞಾನಸಂಪನ್ನಾಸ್ತರ್ಕಾನನ್ಯೋನ್ಯಬಾಧಕಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೪॥

ಯಸ್ಯ ವಿಜ್ಞಾನಸಂಪನ್ನಾ ಮಾನಮಧ್ಯಕ್ಷಪೂರ್ವಕಂ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೫॥

ಯಸ್ಯ ವಿಜ್ಞಾನಸಂಪನ್ನಾ ಬ್ರಾಹ್ಮಣಾನ್ ಕ್ಷತ್ರಿಯಾನ್ವಿಶಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೬॥

ಯಸ್ಯ ವಿಜ್ಞಾನಸಂಪನ್ನಾಃ ಶೂದ್ರಾನಪಿ ಚ ಸಂಕರಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೭॥

ಯಸ್ಯ ವಿಜ್ಞಾನಸಂಪನ್ನಾ ಆಶ್ರಮಾನಖಿಲಾನಪಿ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೮॥

ಯಸ್ಯ ವಿಜ್ಞಾನಸಂಪನ್ನಾ ಧರ್ಮಾಧರ್ಮಾನಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೪೯॥

ಯಸ್ಯ ವಿಜ್ಞಾನಸಂಪನ್ನಾ ವರ್ಜ್ಯಾವರ್ಜ್ಯಾನಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೦॥

ಪ್ರತ್ಯಕ್ಷ ಮುಂತಾದ ಪ್ರಮಾಣಗಳನ್ನೂ, ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪವಾದುವೆಂದು ತಿಳಿಯುವವರಾಗುತ್ತಾರೋ ಅಂಥಾ ಪರಶಿವನನ್ನು ಸ್ತೋತ್ರಮಾಡುತ್ತೇವೆ. ||೪೨-೪೩-೪೪-೪೫||

ಯಾವ ಪರಶಿವನ ಸ್ವರೂಪಜ್ಞಾನವನ್ನು ಪಡೆದವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸಂಕರವೆಂಬ ಜಾತಿಗಳನ್ನೂ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸವೆಂಬ ಆಶ್ರಮಗಳನ್ನೂ ಪಾರಮಾರ್ಥಿಕವಾಗಿ ಬ್ರಹ್ಮರೂಪವಾದುವೆಂಬುದನ್ನು ಮನಗಾಣುವವರಾಗುತ್ತಾರೆಯೋ, ಅಂಥ ಪರಶಿವನನ್ನು ಸ್ತೋತ್ರಮಾಡುತ್ತೇವೆ. ||೪೬-೪೭-೪೮||

ಯಾವ ಪರಶಿವನ ಸ್ವರೂಪವನ್ನು ತಿಳಿದವರು ಧರ್ಮಾಧರ್ಮಗಳನ್ನೂ, ವರ್ಜ್ಯಾವರ್ಜ್ಯಗಳನ್ನೂ, ವಿದ್ಯೆ ಅವಿದ್ಯೆ ಉಪಾಸನಾಕರ್ಮಾನುಷ್ಠಾನಗಳನ್ನೂ,

ಯಸ್ಯ ವಿಜ್ಞಾನಸಂಪನ್ನಾ ವಿದ್ಯಾವಿದ್ಯಾ ಅಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೧॥

ಯಸ್ಯ ವಿಜ್ಞಾನಸಂಪನ್ನಾ ದೇಹಾದೀನಖಿಲಾನಿಮಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೨॥

ಯಸ್ಯ ವಿಜ್ಞಾನಸಂಪನ್ನಾ ಜಾಗ್ರದಾದಿತ್ರಯಂ ಸದಾ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೩॥

ಯಸ್ಯ ವಿಜ್ಞಾನಸಂಪನ್ನಾ ತುರೀಯತ್ವಾದಿ ಕಲ್ಪನಾಂ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೪॥

ಯಸ್ಯ ವಿಜ್ಞಾನಸಂಪನ್ನಾ ಭೂಮಿಂ ತದ್ಭೇದಮಾಸ್ತಿಕಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೫॥

ಯಸ್ಯ ವಿಜ್ಞಾನಸಂಪನ್ನಾ ಜಲಂ ತದ್ಭೇದಮಾಸ್ತಿಕಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೬॥

ಯಸ್ಯ ವಿಜ್ಞಾನಸಂಪನ್ನಾ ಅಗ್ನಿಂ ತದ್ಭೇದಮಾಸ್ತಿಕಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಮ್ ॥೫೭॥

ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪವಾದುವೆಂಬುದಾಗಿ ತಿಳಿದವರಾಗುತ್ತಾರೋ ಅಂಥ ಪರಶಿವನನ್ನು ಸ್ತೋತ್ರಮಾಡುತ್ತೇವೆ. ||೪೯-೫೦-೫೧||

ಯಾವ ಪರಶಿವನ ಸ್ವರೂಪವನ್ನು ತಿಳಿದವರು ದೇಹ, ಇಂದ್ರಿಯ, ಪ್ರಾಣ, ಅಂತಃಕರಣಗಳನ್ನೂ, ಜಾಗ್ರತ್, ಸ್ವಪ್ನ, ಸುಷುಪ್ತಿಗಳನ್ನೂ, ತುರೀಯ, ತುರೀಯಾತೀತ ಮುಂತಾದ ಕಲ್ಪನೆಗಳನ್ನೂ ಪಾರಮಾರ್ಥಿಕವಾಗಿ ಪರಬ್ರಹ್ಮ ಸ್ವರೂಪವಾದುವೆಂದು ತಿಳಿದವರಾಗುತ್ತಾರೋ, ಅಂಥ ಪರಶಿವನನ್ನು ಸ್ತೋತ್ರ ಮಾಡುತ್ತೇವೆ. ||೫೨-೫೩-೫೪||

ಯಾವ ಪರಶಿವನ ಸ್ವರೂಪವನ್ನು ತಿಳಿದವರು ಭೂಮಿ, ಜಲ, ಅಗ್ನಿ, ವಾಯು, ಆಕಾಶವೆಂಬ ಪಂಚಭೂತಗಳನ್ನೂ ಪಾರಮಾರ್ಥಿಕವಾಗಿ ಪರಬ್ರಹ್ಮ

ಯಸ್ಯ ವಿಜ್ಞಾನಸಂಪನ್ನಾ ವಾಯುಂ ತದ್ಭೇದಮಾಸ್ತಿಕಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೮॥

ಯಸ್ಯ ವಿಜ್ಞಾನಸಂಪನ್ನಾ ಆಕಾಶಂ ತತ್ರ ಕಲ್ಪಿತಂ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೫೯॥

ಯಸ್ಯ ವಿಜ್ಞಾನಸಂಪನ್ನಾಃ ಶಬ್ದಸ್ಪರ್ಶಾದಿಕಾನಿಮಾನ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೬೦॥

ಯಸ್ಯ ವಿಜ್ಞಾನಸಂಪನ್ನಾ ಮಹದಾದ್ಯಖಿಲಂ ಜಗತ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೬೧॥

ಯಸ್ಯ ವಿಜ್ಞಾನಸಂಪನ್ನಾಃ ಸರ್ವಮೇತದಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೬೨॥

ಯಸ್ಯ ವಿಜ್ಞಾನಸಂಪನ್ನಾ ಮಹಾಮಾಯಾಮಶಂಕಿತಾಃ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೬೩॥

ಯಸ್ಯ ವಿಜ್ಞಾನಸಂಪನ್ನಾಃ ಚಿಚ್ಛಕ್ತಿಂ ವಿಮಲಾಮಿಮಾಂ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೬೪॥

ಯಸ್ಯ ವಿಜ್ಞಾನಸಂಪನ್ನಾಃ ಪ್ರತೀತಮಖಿಲಂ ಜಗತ್ ।
ಯಥಾರ್ಥಂ ಬ್ರಹ್ಮ ಜಾನಂತಿ ತನ್ನುಮಃ ಪರಮಾದ್ವಯಂ ॥೬೫॥

ಸ್ವರೂಪವಾದುವೆಂಬುದನ್ನೂ ಮನಗಾಣುವವರಾಗುತ್ತಾರೋ ಅಂಥ ಪರಶಿವನನ್ನು ಸ್ತೋತ್ರಮಾಡುತ್ತೇವೆ. ॥೫೫-೫೬-೫೭-೫೮-೫೯॥

ಯಾವ ಪರಶಿವನ ಸ್ವರೂಪವನ್ನು ತಿಳಿದವರು ಶಬ್ದ, ಸ್ಪರ್ಶ, ರೂಪ, ರಸ, ಗಂಧ—ಎಂಬ ಐದು ಭೂತಗಳ ಗುಣಗಳನ್ನೂ, ಮಹತ್ತತ್ತ್ವವೇ ಮುಂತಾದ ಎಲ್ಲ ಪ್ರಪಂಚವನ್ನೂ, ಈ ಪರಿದೃಶ್ಯಮಾನವಾದ ಎಲ್ಲವನ್ನೂ, ಪ್ರಪಂಚಭ್ರಾಂತಿಗೆ ಕಾರಣವಾದ ಮಹಾಮಾಯೆಯನ್ನೂ, ಚಿದ್ರೂಪವಾದ ಶಕ್ತಿಯನ್ನೂ, ಮಾಯಾಪರಿಣಾಮ ವಿಶೇಷಗಳಿಂದ ಭೇದವಾಗಿರುವಂತೆ ತೋರುವ ಶಕ್ತಿಯನ್ನೂ, ತೋರುತ್ತಿರುವ ಈ ಎಲ್ಲ ಜಗತ್ತನ್ನೂ, ಪಾರಮಾರ್ಥಿಕವಾಗಿ ಬ್ರಹ್ಮಸ್ವರೂಪವಾದುದೆಂದು ತಿಳಿಯು

ಯಸ್ಯ ವಿಜ್ಞಾನಸಂಪನ್ನಾಃ ಫಲಾವಾಪ್ತ್ಯೈಕದಾಚನ ।
ನ ಕಿಂಚಿದಪಿ ಕುರ್ವಂತಿ ತನ್ನುಮಃ ಪರಮಾದ್ವಯಂ ॥೬೬॥

ಯಸ್ಯ ವಿಜ್ಞಾನಸಂಪನ್ನಾಃ ಪ್ರತ್ಯಗ್ಜ್ಯೋತಿಷಿ ಸಂಸ್ಥಿತಾಃ ।
ತಮೇವ ಪ್ರತ್ಯಗಾತ್ಮಾನಂ ವಂದೇಽಹಂತಾಽದಿವರ್ಜಿತಂ ॥೬೭॥

ಇದಂರೂಪಮಹಂರೂಪಂ ಯಸ್ಯ ಭಾತಿ ತಮೀಶ್ವರಂ ।
ವಂದೇ ಲಕ್ಷಣಮದ್ವಂದ್ವ ಮನಿರ್ದೇಶ್ಯಂ ಸ್ವಯಂಪ್ರಭಂ ॥೬೮॥

ಸ್ತುತಿಮತಿನಿವಹಸ್ಯ ನೈವ ಗೋಚರಂ
ಭವಭಯಜಲಧೇಸ್ಸ ದೈವ ತಾರಕಂ ।
ಅಹಮಹಮಿತಿ ಸತತೋದಿತಪ್ರಭಂ
ನಿಖಿಲಜಗದ್ಧಿತಂ ನಮಾಮಿ ಶಶ್ವತ್ ॥೬೯॥

ತ್ತಾರೋ, ಮತ್ತು ಯಾವ ತತ್ತ್ವದ ಜ್ಞಾನವಾದ ಮೇಲೆ ಬೇರೆ ಪ್ರಯೋಜನವನ್ನು ಪಡೆಯಲು ಯಾರೂ ಯಾವಾಗಲೂ ಯಾವ ಪ್ರಯತ್ನವನ್ನೂ ಮಾಡತೊಡಗುವುದಿಲ್ಲವೋ ಅಂಥ ಅದ್ವೈತತತ್ತ್ವವನ್ನು ಸ್ತೋತ್ರಮಾಡುತ್ತೇವೆ. ॥೬೦-೬೧-೬೨-೬೩-೬೪-೬೫-೬೬॥

ಯಾವ ಪರಶಿವತತ್ತ್ವದ ತಿಳಿವಳಿಕೆಯನ್ನು ಪಡೆದವರು ಪ್ರತ್ಯಗಾತ್ಮ ಚೈತನ್ಯದ ತೇಜಸ್ಸಿನಲ್ಲಿ ಲೀನರಾಗಿರುತ್ತಾರೋ ಅಂಥ ವಾಸ್ತವವಾಗಿ ಪ್ರತ್ಯಗಾತ್ಮ (ಜೀವಚೈತನ್ಯ) ಸ್ವರೂಪವನ್ನೂ, ಅಹಂಕಾರ ಮಮಕಾರಾದಿಗಳಿಲ್ಲದಿರುವ ಪರತತ್ತ್ವವನ್ನೂ ನಮಸ್ಕರಿಸುತ್ತೇವೆ. ॥೬೭॥

ಇದಂರೂಪವಾದ ದೃಶ್ಯವೆಲ್ಲವೂ, ಅಹಂರೂಪವಾದ ದೃಗ್ರೂಪವೆಲ್ಲವೂ, ಯಾವ ಪ್ರಕಾಶದಿಂದ ತೋರುತ್ತದೋ ಅಂಥ ದ್ವಂದ್ವಸ್ವರೂಪವೇ ಗಮಕವಾಗಿರುವ, ಶಬ್ದದಿಂದಲೂ ಉಪನಿಷದ್ವಾಕ್ಯದಿಂದಲೂ ಸಾಕ್ಷಾತ್ತಾಗಿ ತಿಳಿಸಲ್ಪಡದ, ಸ್ವಪ್ರಕಾಶ ರೂಪವಾದ, ಈಶ್ವರಚೈತನ್ಯವನ್ನು ನಮಸ್ಕರಿಸುತ್ತೇನೆ. ॥೬೮॥

ಸ್ತೋತ್ರ ಬುದ್ಧಿ ಇವುಗಳ ಸಮುದಾಯಕ್ಕೂ ಗೋಚರವಾಗದ, ಸಂಸಾರ ಬಂಧದುಃಖದಿಂದ ಆಗುವ ಭಯವೆಂಬ ಸಮುದ್ರವನ್ನು ಸರ್ವದಾ ತಪ್ಪದೆ ದಾಟಿಸುವ, ನಾನು ನಾನು ಎಂಬ ವೃತ್ತಿಗಳೆಲ್ಲವುಗಳಲ್ಲೂ ಯಾವಾಗಲೂ ತೋರುತ್ತಿರುವ, ಎಲ್ಲ

ಏವಂ ವ್ಯಾಸೇನ ಸರ್ವಜ್ಞಃ ಸಾಂಬಸ್ಸರ್ವಫಲಪ್ರದಃ ।
ಅಭಿಷ್ಟುತೋ ಮಹಾದೇವಃ ಪ್ರತ್ಯಕ್ಷಮಭವನ್ಮುನೇಃ ॥೨೦॥

ತಂ ದೃಷ್ಟ್ವಾ ದೇವದೇವೇಶಂ ದೇವ್ಯಾ ಸಹಿತಮವ್ಯಯಂ ।
ಪ್ರಣಮ್ಯ ಪ್ರಾರ್ಥಯಾಮಾಸ ಸರ್ವಸಾಧನವೇದನಂ ॥೨೧॥

ದೇವದೇವೋಽಪಿ ಸರ್ವಜ್ಞಃ ಪ್ರಸನ್ನಃಸರ್ವಸಾಧನಂ ।
ಪ್ರಾಹ ಗಂಭೀರಯಾ ವಾಚಾ ಮುನಯೇ ಮುನಿಸತ್ತಮಾಃ ॥೨೨॥

॥ ಈಶ್ವರ ಉವಾಚ ॥

ವಕ್ಷ್ಯೇ ವಿಪ್ರ ಸಮಾಸೇನ ಸರ್ವಸಾಧನಮುತ್ತಮಂ ।
ಶೃಣುಷ್ವ ಶ್ರದ್ಧಯಾ ಸಾರ್ಧಂ ಮಯಾ ನೋಕ್ತಮಿತಃ ಪುರಾ ॥೨೩॥

ಅಪೇಕ್ಷಿತಾರ್ಥಸ್ಸರ್ವೇಷಾಂ ಭುಕ್ತಿರ್ಮುಕ್ತಿಶ್ಚ ಸುವ್ರತಾಃ ।
ಮುಕ್ತಿರ್ನಾನಾವಿಧಾ ಪ್ರೋಕ್ತಾ ಮಯಾ ವೇದಾನುಸಾರತಃ ॥೨೪॥

ಜಗತ್ತಿನಿಂದ ಪಾರಮಾರ್ಥಿಕವಾಗಿ ಬಿಡಲ್ಪಟ್ಟಿರುವ ಪರಶಿವನನ್ನು ಬಾರಿ ಬಾರಿಗೂ ನಮಸ್ಕರಿಸುತ್ತೇನೆ. ॥೧೯॥

ಸರ್ವಜ್ಞನಾದ, ಎಲ್ಲ ಇಷ್ಟಾರ್ಥಗಳನ್ನೂ ಕೊಡುವ, ಅಂಬಾಸಹಿತನಾದ ಮಹಾದೇವನು ವ್ಯಾಸಮಹರ್ಷಿಯಿಂದ ಈ ಪ್ರಕಾರವಾಗಿ ಸ್ತೋತ್ರಮಾಡಲ್ಪಡಲು, ಋಷಿಗೆ ಪ್ರತ್ಯಕ್ಷನಾದನು. ದೇವತೆಗಳೆಲ್ಲರಿಗೂ ಸ್ವಾಮಿಗಳಾದವರಿಗೂ ಸ್ವಾಮಿಯಾದ, ದೇವಿಯೊಡನೆ ಕೂಡಿರುವ, ನಾಶರಹಿತನಾದ, ಆ ಪರಶಿವಮೂರ್ತಿಯನ್ನು ಕಂಡು ನಮಸ್ಕರಿಸಿ ಭುಕ್ತಿಮುಕ್ತಿಗಳೆಲ್ಲಕ್ಕೂ ಸಾಧನವಾದ ತಿಳಿವಳಿಕೆಯನ್ನು ಅನುಗ್ರಹಿಸೆಂದು ಪ್ರಾರ್ಥಿಸಿದನು. ದೇವತೆಗಳಿಗೆಲ್ಲರಿಗೂ ಸ್ವಾಮಿಯಾದ ಪರಶಿವನು ಸರ್ವಜ್ಞನಾದುದರಿಂದ ಅನುಗ್ರಹವುಳ್ಳವನಾಗಿ (ಭುಕ್ತಿ, ಮುಕ್ತಿ, ರೂಪವಾದ) ಸರ್ವಫಲಗಳಿಗೂ ಸಾಧನವಾದ ಕರ್ಮ, ಜ್ಞಾನಗಳನ್ನು ಓ ಋಷಿಗಳಿರಾ, ವ್ಯಾಸಮಹರ್ಷಿಗೋಸ್ಕರ ಗಂಭೀರವಾದ ಅರ್ಥಗರ್ಭಿತವಾದ ಈ ಮಾತಿನಿಂದ ವಿವರಿಸಿದನು. ॥೨೦-೨೧-೨೨॥

ಓ ಬ್ರಾಹ್ಮಣನಾದ ವ್ಯಾಸನೇ, ಎಲ್ಲ ಇಷ್ಟಾರ್ಥಕ್ಕೂ ಸಾಧನವಾದುದನ್ನು ಸಂಗ್ರಹವಾಗಿ ಹೇಳುತ್ತೇನೆ. ಇದನ್ನು ನಾನು ಹಿಂದೆ ಹೇಳಿಲ್ಲವು. ಆದುದರಿಂದ

ತತ್ರ ಸಾಯುಜ್ಯರೂಪಾಯಾ ಮುಕ್ತೇಸ್ಸಾಕ್ಷಾತ್ತು ಸಾಧನಂ ।
ಸಮ್ಯಕ್‌ಜ್ಞಾನಂ ನ ಕರ್ಮೋಕ್ತಂ ನ ತಯೋಶ್ಚ ಸಮುಚ್ಚಯಃ ॥೭೫॥

ನಿತ್ಯಸಿದ್ಧಾಽಥವಾ ಮುಕ್ತಿಃ ಸಾಧ್ಯರೂಪಾ ದ್ವಯೀ ಗತಿಃ ।
ನಿತ್ಯಸಿದ್ಧಾ ತು ಸರ್ವೇಷಾಮಾತ್ಮರೂಪಾಽಥವಾ ಪರಾ ॥೭೬॥

ಆತ್ಮರೂಪೈವ ಚೇನ್ಮುಕ್ತಿಃ ನಿತ್ಯಪ್ರಾಪ್ತಾ ಹಿ ಸಾಽಽತ್ಮನಃ ।
ನಿತ್ಯಪ್ರಾಪ್ಯಸ್ಯ ಚಾಪ್ರಾಪ್ತಿಃ ವಿಭ್ರಮಃ ಖಲು ದೇಹಿನಾಂ ॥೭೭॥

ವಿಭ್ರಮಸ್ಯ ನಿವೃತ್ತ್ಯಾ ಸಾ ಪ್ರಾಪ್ತೇತಿ ವ್ಯಪದಿಶ್ಯತೇ ।
ವಿಭ್ರಮಸ್ಯ ನಿವೃತ್ತಿಸ್ತು ಸಿಧ್ಯತ್ಯಜ್ಞಾನನಾಶತಃ ॥೭೮॥

ಅಜ್ಞಾನಸ್ಯ ವಿನಾಶಸ್ತು ಜ್ಞಾನಾದೇವ ನ ಚಾನ್ಯತಃ ।
ಜ್ಞಾನಾದಜ್ಞಾನನಾಶಸ್ತು ಪ್ರಸಿದ್ಧಸ್ಸರ್ವದೇಹಿನಾಂ ॥೭೯॥

ಆದರದೊಡನೆ ಕೇಳು. ಎಲ್ಲರಿಗೂ ಬೇಕಾಗಿರುವ ಇಷ್ಟಾರ್ಥವು ಐಹಿಕಾದಿಭೋಗವೂ ಮೋಕ್ಷವೂ ಆಗಿದೆ. ವೇದದಲ್ಲಿ ಹೇಳಿರುವುದನ್ನು ಅನುಸರಿಸಿ ಮುಕ್ತಿಯು ನಾನಾ ವಿಧವಾಗಿ ಹೇಳಲ್ಪಟ್ಟಿದೆ. ॥೭೩-೭೪॥

ಅದರಲ್ಲಿ ಸಾಯುಜ್ಯವೆಂಬ ಮುಕ್ತಿಗೆ ಸಾಕ್ಷಾತ್ತಾದ ಸಾಧನವು ಜ್ಞಾನವು, ಕರ್ಮವಲ್ಲವು, ಅವೆರಡರ ಸಮುಚ್ಚಯವೂ ಸಾಧನವಲ್ಲವು. ॥೭೫॥

ಮೋಕ್ಷವು ನಿತ್ಯವಾಗಿ ಸಿದ್ಧವಾದುದಾಗಿಯಾಗಲಿ, ಸಾಧ್ಯವಾದುದಾಗಿಯಾಗಲಿ ಇರಬೇಕು. ಇವೆರಡೇ ದಾರಿಯು. ಬೇರೆ ಇಲ್ಲವು. ಅದರಲ್ಲಿ ನಿತ್ಯಸಿದ್ಧವಾದುದು ಮೋಕ್ಷವು ಎಂದರೆ ಅದು ಆತ್ಮನಿಗೆ ಆತ್ಮರೂಪವಾಗಿರುವುದೇ, ಬೇರೆಯಾಗಿರುವುದೇ, ಎಂದು ವಿವೇಚಿಸಬೇಕು. ಆತ್ಮರೂಪವಾದುದೆಂದರೆ ನಿತ್ಯಸಿದ್ಧವೇ ಆಯಿತು. ಅದು ನಿತ್ಯಪ್ರಾಪ್ತವೂ ಆಗಿರಲೇಬೇಕು. ಯಾವಾಗಲೂ ಪ್ರಾಪ್ತವಾಗಿರುವುದಾದರೂ ಆ ಮುಕ್ತಿಯನ್ನು ಪಡೆಯಬೇಕೆನ್ನುವುದು ಭ್ರಾಂತಿಯುಮಾತ್ರವಾಗಿರುತ್ತದೆ. ॥೭೬-೭೭॥

ಮೋಕ್ಷವು ಯಾವಾಗಲೂ ಪ್ರಾಪ್ತವೇ ಆದರೂ, ಭ್ರಾಂತಿಯು ಹೋಗುವುದರಿಂದ ಪ್ರಾಪ್ತವಾದ ಹಾಗಾಗುತ್ತದೆಂದು ಶಬ್ದವ್ಯವಹಾರಮಾತ್ರವಾಗಿದೆ. ಭ್ರಾಂತಿಯು ಹೋಗುವಿಕೆಯೂ ಅಜ್ಞಾನದ ನಾಶದಿಂದ ಆಗುತ್ತದೆ. ಅಜ್ಞಾನನಾಶವು ಜ್ಞಾನದಿಂದಲೇ ಆಗಬೇಕೇ ಹೊರತು ಇನ್ನೊಂದರಿಂದಲೂ ಆಗುವುದಿಲ್ಲ. ಜ್ಞಾನದಿಂದ

ಅಪರಾ ಸಾ ಪರಾ ಮುಕ್ತಿಃ ನಾತ್ಮರೂಪೈವ ಚೇನ್ಮತಂ ।
ತದಾಽಪಿ ಮುಕ್ತಿಃ ಪ್ರಾಪ್ಯಾ ವಾಽನ ಪ್ರಾಪ್ಯಾ ವಾಽತ್ಮನೋ ಭವೇತ್ ॥೮೦॥

ಪ್ರಾಪ್ಯಾ ಚೇದಾತ್ಮನೋ ಮುಕ್ತಿಃ ಅಪ್ರಾಪ್ತಪ್ರಾಪ್ತಿರೇವ ಸಾ ।
ಅಪ್ರಾಪ್ತಪ್ರಾಪ್ತಿರಪ್ಯಸ್ಯ ಸಂಬಂಧೋ ನೈಕ್ಯಮೇವವಾ ॥೮೧॥

ಸಂಬಂಧಶ್ಚೇತ್ಸ ಸಾಧ್ಯೋ ವಾ ನಿತ್ಯೋ ವಾ ಸಾಧ್ಯ ಏವ ಚೇತ್ ।
ಅನಿತ್ಯಸ್ಸ ತು ಸಂಬಂಧಃ ಭವೇನ್ನಿತ್ಯೋ ನ ಸರ್ವಥಾ ॥೮೨॥

ಸಾಧ್ಯಾನಾಮಪಿ ಭಾವಾನಾಮನಿತ್ಯತ್ವಂ ವ್ಯವಸ್ಥಿತಂ ।
ಅಭಾವಸ್ಯ ನ ಸಾಧ್ಯತ್ವಂ ಪ್ರಧ್ವಂಸಾಖ್ಯಸ್ಯ ಸರ್ವದಾ ॥೮೩॥

ಅಜ್ಞಾನನಾಶವಾಗುವುದು ಎಲ್ಲರಿಗೂ ಅನುಭವದಲ್ಲಿದೆ. ಆರೋಪಕ್ಕೆ ಅಧಿಷ್ಠಾನವಾದ ಹಗ್ಗದ ಜ್ಞಾನದಿಂದ ಅಧ್ಯಸ್ತವಾಗಿದ್ದ ಹಾವು ಹೋಗುವ ಹಾಗೆ, ಪ್ರಪಂಚಾಧ್ಯಾಸಕ್ಕೆ ಅಧಿಷ್ಠಾನವಾದ ಬ್ರಹ್ಮನ ಸ್ವರೂಪಜ್ಞಾನದಿಂದ ಪ್ರಪಂಚ ಭ್ರಾಂತಿಯು ತೊಲಗುತ್ತದೆ. ॥೭೮-೭೯॥

ಹಾಗಲ್ಲದೆ ಮೋಕ್ಷವು ಆತ್ಮನಿಗಿಂತ ಬೇರೆಯಾಗಿರುವುದೆಂದರೆ, ಆಗಲೂ ಮುಕ್ತಿಯು ಪ್ರಾಪ್ಯವಾದುದೇ ಅಪ್ರಾಪ್ಯವಾದುದೇ ಎಂದು ಕೇಳಿದರೆ, ಪ್ರಾಪ್ತವೆಂದರೆ ಅದು ಅಪ್ರಾಪ್ತಪ್ರಾಪ್ತಿಯಾದ ಹಾಗಾಯಿತು. ಅಪ್ರಾಪ್ತಪ್ರಾಪ್ತಿ ಎಂದರೆ ಸಂಬಂಧಿಗಳೆರಡರಲ್ಲಿರುವ ಸಂಬಂಧರೂಪವಾದುದೇ ? ಒಂದಾಗಿರುವಿಕೆಯೇ ? ಎಂದು ಕೇಳಬೇಕಾಗುತ್ತದೆ. ॥೮೦-೮೧॥

ಸಂಬಂಧರೂಪವೆಂದರೆ, ಅದು ಸಾಧ್ಯವೊ, ನಿತ್ಯವೊ, ಎಂದು ವಿವೇಚಿಸಬೇಕು ; ಸಾಧ್ಯವೆಂದರೆ ಆ ಸಂಬಂಧವು ಅನಿತ್ಯವಾಗಿರಬೇಕಾಗುತ್ತದೆ. ಎಂದಿಗೂ ನಿತ್ಯವಾಗದು. ಆದುದರಿಂದ ಮೋಕ್ಷವೂ ಅನಿತ್ಯವಾಗಿ ಮುಕ್ತರಿಗೂ ಪುನಃ ಸಂಸಾರ ಬರಬೇಕಾಗುತ್ತದೆ. ॥೮೨॥

ಸಾಧ್ಯವಾದ, ಕೃತಿಜನ್ಯವಾದ ಎಲ್ಲ ಭಾವಪದಾರ್ಥಗಳೂ ಅನಿತ್ಯವಾದುವು. ಎಂಬ ನಿಯಮವು ಲೋಕದಲ್ಲಿ ಕಂಡುಬಂದಿದೆ. ಹಾಗೆಯೇ ಅಭಾವವು ಸಾಧ್ಯವೂ ಅಲ್ಲವೆಂದುಹೇಳಿದರೆ ಪ್ರಧ್ವಂಸಾಭಾವವು ಸಾಧ್ಯವಾದುದೆಂದು ನ್ಯಾಯಶಾಸ್ತ್ರದಲ್ಲಿಯೂ ಸಿದ್ಧಾಂತವಾಗಿದೆ. ಜನ್ಯವಾದ ಪ್ರಧ್ವಂಸಾಭಾವವು ನಿತ್ಯ (ನಾಶಾಪ್ರತಿಯೋಗಿ)ವೆಂದು 'ಸಾದಿಃ ಅನಂತಃ ಪ್ರಧ್ವಂಸಃ' ಎಂದು ನೈಯಾಯಿಕಸಿದ್ಧಾಂತವು. ॥೮೩॥

ಸಾಧ್ಯತ್ವಾಖ್ಯಸ್ತು ಧರ್ಮಶ್ಚ ನೈವಾಭಾವಾಶ್ರಯೋ ಭವೇತ್ ।
ನಿತ್ಯೋ ಯದಿ ಸ ಸಂಬಂಧಃ ತದ್ಧಿ ಸಂಬಂಧಸಂಜ್ಞಿತಾ ॥೮೪॥

ಮುಕ್ತಿಶ್ಚ ನಿತ್ಯಸಿದ್ಧೈವ ಮುಮುಕ್ಷೋರಾತ್ಮನೋ ಭವೇತ್ ।
ತದಾಽಪಿ ನಿತ್ಯಪ್ರಾಪ್ತಾಯಾ ಮುಕ್ತೇಃ ಪ್ರಾಪ್ತಿಸ್ತು ಪೂರ್ವವತ್॥೮೫॥

ವಿಜ್ಞಾನೇನೈವ ನಾನ್ಯೇನ ಸತ್ಯಮುಕ್ತಂ ದ್ವಿಜೋತ್ತಮ ।
ಅಪ್ರಾಪ್ತಪ್ರಾಪ್ತಿರೂಪಾಯಾ ಮುಕ್ತೇರೈಕ್ಯಂ ಭವೇದ್ಯದಿ ॥೮೬॥

ಸಾಧ್ಯತ್ವವೆಂದರೆ ಉತ್ಪತ್ತಿರೂಪಧರ್ಮವು. ಇದು ಅಭಾವಕ್ಕೆ ಸಂಬಂಧಿಸುವುದಿಲ್ಲ. ಏಕೆಂದರೆ ಉತ್ಪತ್ತಿರೂಪಧರ್ಮವು ಭಾವಪದಾರ್ಥವಾದುದರಿಂದ ಅದನ್ನು ಹೊಂದಿರುವುದೂ ಭಾವಪದಾರ್ಥವಾಗಲೆಂದು ಅಪಾದನೆ ಬರುತ್ತದೆ. ಎಂದರೆ ಪ್ರಧ್ವಂಸವೂ ಭಾವವಾಗಬೇಕಾಗುತ್ತದೆ. ಪ್ರಧ್ವಂಸದಲ್ಲಿ ಸಾಧ್ಯತ್ವ ಎಂದರೆ ಉತ್ಪತ್ತಿರೂಪಧರ್ಮವಿಲ್ಲ. ಆದುದರಿಂದ ಜನ್ಯವೆಲ್ಲವೂ ಅನಿತ್ಯವೆಂಬ ವ್ಯಾಪ್ತಿಯೇ ಸಿದ್ಧಾಂತವಾಗಿ ಉಳಿಯುತ್ತದೆ. ಹೀಗೆ ಸಂಬಂಧಿದ್ವಯಘಟಿತಸಂಬಂಧವೇ ಮುಕ್ತಿ ಎಂದು ಮೇಲೆ ಹೇಳಿದೆ. ಜೀವೇಶ್ವರಸಂಬಂಧವು ವೈಕುಂಠಾದಿ ದೇಶದಲ್ಲಿ ಉಂಟಾಗುತ್ತದೆ. ಆ ಸಂಬಂಧವು ಅನಿತ್ಯವೆಂದು ಇಟ್ಟುಕೊಂಡು ಖಂಡಿಸಿದ್ದಾಯಿತು. ಈಗ ಆ ಸಂಬಂಧವು ನಿತ್ಯವೆಂದು ಇಟ್ಟುಕೊಂಡರೆ ಸಂಬಂಧ ರೂಪವಾದ ಮುಕ್ತಿಯು ನಿತ್ಯವಾಗಿ ನಿತ್ಯಸಿದ್ಧವಾಗಿ ಸಾಧ್ಯವಾಗದೆ ಹೋಗುತ್ತದೆ. ಆದುದರಿಂದ ಮುಕ್ತಿಯು ಅಪ್ರಾಪ್ತಪ್ರಾಪ್ತಿರೂಪವಾಗುವದಿಲ್ಲ. ಮುಮುಕ್ಷುವಿನ ಆತ್ಮಕ್ಕೆ ಮುಕ್ತಿಯು ಸಿದ್ಧವಾಗಿ ತತ್ಪ್ರಾಪ್ತಿಗೆ ಪ್ರಯತ್ನವು ಕಾಣಬರುತ್ತದೆ. ಅದು ವಿರೋಧವಾಗುತ್ತದೆ. ॥೮೪॥

ಆಗಲೂ ಎಂದರೆ ಸಂಬಂಧವು ನಿತ್ಯವೆಂದರೂ ಮುಕ್ತಿಯು ನಿತ್ಯಪ್ರಾಪ್ತವಾದುದಾಗಿ, ಮುಂಚೆ ಹೇಳಿದಂತೆ ಜ್ಞಾನದಿಂದಲೇ ಅದು ಉಂಟಾಗಬೇಕು. ಕರ್ಮದಿಂದಲೂ ಉಪಾಸನೆ ಮುಂತಾದುದರಿಂದಲೂ ಉಂಟಾಗದು. ಆದುದರಿಂದ ಮುಕ್ತಿಯು ಅಪ್ರಾಪ್ತವೆಂಬ ಭ್ರಮನಿವೃತ್ತಿ ಎಂದು ಹೇಳಬೇಕೇ ವಿನಾ ಬೇರೆ ಇಲ್ಲವು. ಓ ಬ್ರಾಹ್ಮಣಶ್ರೇಷ್ಠರಾದ ವ್ಯಾಸಋಷಿಗಳೇ, ಇದು ಸತ್ಯವೆಂದು ಈಶ್ವರನಿಂದ ಹೇಳಲ್ಪಟ್ಟಿದೆ. ॥೮೫॥

ಹಾಗಿಲ್ಲದೆ ಮುಕ್ತಿಯು ಜೀವಬ್ರಹ್ಮರ ಐಕ್ಯ (ತಾದಾತ್ಮ್ಯ) ವೆಂದರೆ, ಅದು ಅಪ್ರಾಪ್ತಪ್ರಾಪ್ತಿರೂಪವೆಂದರೆ, ಸರಿಯಲ್ಲವು. ಏಕೆಂದರೆ ಎರಡು ಪದಾರ್ಥಗಳಿಗೆ

ತನ್ನ ಯುಕ್ತಂ ದ್ವಯೋರೈಕ್ಯಂ ನ ಸಿಧ್ಯತಿ ಕದಾಚನ ।
ಭಿನ್ನಯೋರ್ಭೇದ ನಾಶೇ ವಾ ಮುಕ್ತಿರ್ಭೇದೇ ಸ್ಥಿತೇಽಥವಾ ॥೮೭॥

ಭೇದನಾಶೇ ತಯೋರೈಕ್ಯಂ ಘಟತೇ ವೇದವಿತ್ತಮ ।
ಭೇದೇ ಸತಿ ತಯೋರೈಕ್ಯಂ ಇತಿ ಚೇತ್ತನ್ನ ಸಂಗತಂ ॥೮೮॥

ಭೇದಸ್ಯ ಸನ್ನಿಧಾನ್ನೈಕ್ಯಂ ವಿರೋಧಾನ್ನೈವ ಸಿಧ್ಯತಿ ।
ನ ಪ್ರಾಪ್ಯಾ ಹ್ಯಾತ್ಮನೋ ಮುಕ್ತಿರಿತಿ ಚೇತ್ತನ್ನ ಸಂಗತಂ ॥೮೯॥

ಅಪ್ರಾಪ್ಯಾಯಾಸ್ತು ಮುಕ್ತೇಶ್ಚ ನಾಸ್ತ್ಯಪೇಕ್ಷಾ ಹಿ ಸಾಧನೇ ।
ಸಾಧನೇಽಸತಿ ಸಾ ಮುಕ್ತಿರಪ್ರಾಪ್ಯೈವ ಸದಾ ಖಲು ॥೯೦॥

ಐಕ್ಯವು ಸಂಭವಿಸುವುದಿಲ್ಲವು. ವಾಸ್ತವವಾಗಿ ಭಿನ್ನರಾದ ಜೀವಬ್ರಹ್ಮರಿಗೆ ಭೇದನಾಶವಾದ ಮೇಲೆ ಮುಕ್ತಿಯು ಬರುತ್ತದೋ ಭೇದವಿರುವಾಗಲೇ ಮುಕ್ತಿಯು ಬರುತ್ತದೊ? ಎಂದು ಕೇಳಿದರೆ, ||೮೬-೮೭||

ಭೇದನಾಶವಾಗಿ ಐಕ್ಯವುಂಟಾಗುತ್ತೆಂದೂ ಹೇಳಲಾಗದು. ಭೇದವು ಅನ್ಯೋನ್ಯಾಭಾವವೆಂದೂ ಅದು ನಿತ್ಯವೆಂದೂ ಪೂರ್ವಪಕ್ಷಿಯ ಸಿದ್ಧಾಂತವು; ಆದುದರಿಂದ ಅದಕ್ಕೆ ನಾಶವು ಸಂಭವಿಸದು. ಆದುದರಿಂದ ಜೀವೇಶ್ವರೈಕ್ಯವು ಹೇಗೆ ಉಂಟಾದೀತು? ಭೇದವೇ ಇರುವಾಗ ಎಂತೂ ಜೀವೇಶ್ವರರಿಗೆ ಐಕ್ಯ ಬರುವ ಸಂಭವವೇ ಇಲ್ಲದ್ದರಿಂದ ಆ ಪಕ್ಷವೂ ಅಸಂಗತವಾದುದು. ||೮೮||

ಭೇದವಿರುವಾಗ ಐಕ್ಯವು ವಿರುದ್ಧವಾದುದರಿಂದ ಬರುವುದು ಅಸಾಧ್ಯವಾದುದು. ಮುಕ್ತಿಯು ಪ್ರಾಪ್ಯವೇ? ಅಪ್ರಾಪ್ಯವೇ? ಎಂದು ವಿಕಲ್ಪಮಾಡಿ ಪ್ರಾಪ್ಯ ಎಂಬ ಪಕ್ಷದಲ್ಲಿ ತೋರುವ ದೋಷಗಳನ್ನು ಹೇಳಿದ್ದಾಯಿತು. ಈಗ ಮೋಕ್ಷವು ಅಪ್ರಾಪ್ಯವೆಂಬ ಪಕ್ಷವನ್ನು ಖಂಡಿಸುತ್ತಾರೆ. ಮುಕ್ತಿಯು ಪ್ರಾಪ್ಯವಲ್ಲವೆಂಬುದು ಅಸಂಗತವು ಏಕೆಂದರೆ, ||೮೯||

ಮುಕ್ತಿಯು ಪ್ರಾಪ್ಯವಲ್ಲವೆಂದರೆ ಮೋಕ್ಷಸಾಧನೆಯಲ್ಲೂ ಅಪೇಕ್ಷೆಯುಂಟಾಗುವುದಿಲ್ಲ. ಸಾಧನವಿಲ್ಲದೆ ಮುಕ್ತಿಯುಂಟಾಗುವುದಾದರೆ ಎಲ್ಲರಿಗೂ ಮೋಕ್ಷವಾಗಬೇಕಾಗುತ್ತದೆ. ಮುಕ್ತಿಯು ಸರ್ವದಾ ಸಿದ್ಧವಾದುದು. ಆದರೆ ಸಾಧನವಿಲ್ಲದೆ ಮುಕ್ತಿಯಾಗುತ್ತದೆಂದು ತಾತ್ಪರ್ಯವಲ್ಲವು. ಅಪ್ರಾಪ್ತಿಭ್ರಾಂತಿನಿವಾರಣೆಯೇ ಮೋಕ್ಷವೆಂಬುದು ಸಿದ್ಧಾಂತವು. ||೯೦||

ನ ನಿತ್ಯಸಿದ್ಧಾ ಸಾ ಮುಕ್ತಿಸ್ಸಾಧ್ಯರೂಪೈವ ಚೇನ್ಮತಂ ।
ಸಾಧ್ಯತ್ವೇ ಸತ್ಯನಿತ್ಯತ್ವಂ ಪೂರ್ವಮೇವಾಭಿಭಾಷಿತಂ ॥೯೧॥

ಪ್ರಧ್ವಂಸಸ್ಯ ತು ನಿತ್ಯತ್ವಂ ಸರ್ವಥಾ ನ ಭವಿಷ್ಯತಿ ।
ಅಚಿದ್ರೂಪಸ್ಯ ಸರ್ವಸ್ಯ ವಿನಾಶೋ ಗಮ್ಯತೇ ಯಥಾ ॥೯೨॥

ಭಾವತ್ವೇ ಸತಿ ಸಾಧ್ಯತ್ವಾದ್ವಿನಾಶೋಽಚೇತನಸ್ಯ ತು ।
ಪ್ರಧ್ವಂಸಸ್ಯ ತು ಸಾಧ್ಯತ್ವೇಽಪ್ಯಭಾವತ್ವೇನ ಹೇತುನಾ ॥೯೩॥

ನ ಸಿಧ್ಯತಿ ವಿನಾಶಸ್ತು ತಚ್ಚ ನೈವ ಸುಸಂಗತಂ ।
ಪ್ರಾಗಭಾವಸಮಾಖ್ಯಸ್ಯಾಪ್ಯನಿತ್ಯತ್ವಸ್ಯ ದರ್ಶನಾತ್ ॥೯೪॥

ಮುಕ್ತಿಯು ನಿತ್ಯಸಿದ್ಧವಾದುದಲ್ಲವು. ಸಾಧ್ಯವಾದುದು ಎಂದೇ ಹೇಳಿದರೆ, ಆ ಮುಕ್ತಿಯು ಸಾಧ್ಯವಾಗಿ, ಜನ್ಯವಾಗಿ, ಅನಿತ್ಯವೇ ಆಗಬೇಕಾಗುತ್ತದೆ. ಹಾಗಾದರೆ ಮುಕ್ತನಿಗೆ ಪುನಃ ಸಂಸಾರವು ಬರಬೇಕಾಗುತ್ತದೆಂದು ಮುಂತಾಗಿ ದೋಷವನ್ನು ಮೇಲೆ ಹೇಳಿ ಆಗಿದೆ. ॥೯೧॥

ಪ್ರಧ್ವಂಸಾಭಾವಕ್ಕೆ ಹೇಗೂ ನಾಶವಿಲ್ಲವು. ಜನ್ಯವೆಲ್ಲವೂ ನಾಶವಾಗುತ್ತೆಂಬ ನಿಯಮವಿಲ್ಲವು. ಜನ್ಯವಲ್ಲದ ಪ್ರಾಗಭಾವಕ್ಕೆ ನಾಶವಿದೆ. ಆದುದರಿಂದ ಚಿದ್ಭಿನ್ನವಾದುದೆಲ್ಲವೂ, ಜಡವಾದುದೆಲ್ಲವೂ, ಅಜ್ಞಾನಕಾರ್ಯವಾದುದರಿಂದ ನಾಶ್ಯವೆಂದು ನಿಯಮವು. ಚಿದ್ರೂಪವಾದ ಆತ್ಮಚೈತನ್ಯದಿಂದ ಎಂದರೆ ಜ್ಞಾನದಿಂದ ಅಜ್ಞಾನ, ಅದರ ಕಾರ್ಯಗಳು ಇವೆಲ್ಲಕ್ಕೂ ನಾಶವಾಗುತ್ತದೆಂದು ನಿಯಮವು ದೋಷವಿಲ್ಲದ್ದಾಗಿದೆ. ॥೯೨॥

ಚೇತನವಲ್ಲದ ಭಾವರೂಪವಾದ ಸಾಧ್ಯವೆಲ್ಲವೂ ನಾಶ್ಯವೆಂಬುದು ಸರಿ. ಪ್ರಧ್ವಂಸವಾದರೋ ಸಾಧ್ಯವಾದರೂ ಅಭಾವರೂಪವಾದುದರಿಂದ, ॥೯೩॥

ನಾಶ್ಯವಾಗುವುದಿಲ್ಲ ಎನ್ನುವುದೂ ಸರಿಯಲ್ಲವು. ಏಕೆಂದರೆ ಪ್ರಾಗಭಾವವೆಂಬುದು ಜನ್ಯವಲ್ಲದೆ ಇದ್ದರೂ ಭಾವರೂಪತ್ವವಿಲ್ಲದಿದ್ದರೂ ನಾಶವು ಕಾಣಬರುತ್ತದೆ, ॥೯೪॥

ಪ್ರಾಗಭಾವಸ್ಯ ಸಾಧ್ಯತ್ವಾಭಾವೇ ಸತ್ಯಪ್ಯಭಾವತಃ ।
ಅನಿತ್ಯತ್ವಂ ಯದೀಷ್ಯೇತ ಪ್ರಧ್ವಂಸಸ್ಯಾಪಿ ತತ್ಸಮಂ ॥೯೫॥

ಭಾವಾನಾಮಪ್ಯಭಾವಾನಾಂ ಸಾಧ್ಯಾನಾಂ ಮುನಿಸತ್ತಮ ।
ಅಸಾಧ್ಯಾನಾಂ ಚ ಸರ್ವೇಷಾಂ ಅನಿತ್ಯತ್ವೇ ಪ್ರಯೋಜಕಂ ॥೯೬॥

ಅಚೇತನತ್ವಮೇವೋಕ್ತಂ ನೇತರದ್ವ್ಯಭಿಚಾರತಃ ।
ಚೇತನಸ್ಯ ತು ನಿತ್ಯತ್ವಂ ಶ್ರುತಿರಾಹ ಸನಾತನೀ ॥೯೭॥

ತಸ್ಮಾದುಕ್ತಪ್ರಕಾರೇಣ ಮುಕ್ತಿಸ್ಸಾಯುಜ್ಯರೂಪಿಣೀ ।
ಜ್ಞಾನಲಭ್ಯಾ ಕ್ರಿಯಾಮಾತ್ರಾನ್ನ ಲಭ್ಯಾ ನ ಸಮುಚ್ಚಯಾತ್ ॥೯೮॥

ಪ್ರಾಗಭಾವವು ಸಾಧ್ಯವಲ್ಲದಿದ್ದರೂ ಅಭಾವರೂಪವಾದುದರಿಂದ ಅನಿತ್ಯವೆನ್ನುವುದಾದರೆ ಪ್ರಧ್ವಂಸವೂ ಅಭಾವರೂಪವಾದುದರಿಂದ ಅನಿತ್ಯವಾಗಬೇಕಾಗುತ್ತದೆ; ಹಾಗಾದರೆ ಧ್ವಸ್ತವಾದ ಘಟಕ್ಕೆ ಪುನರುನ್ಮಜ್ಜನ ಬರಬೇಕಾಗುತ್ತದೆ ಎಂದು ನ್ಯಾಯಮತಖಂಡನೆಯು. ॥೯೫॥

ಭಾವರೂಪವಾದ ಸಾಧ್ಯಗಳು ಘಟಾದಿಗಳು; ಅಭಾವರೂಪಸಾಧ್ಯಗಳು ಪ್ರಧ್ವಂಸಾದಿಗಳು, ಭಾವರೂಪವಾದ ಅಸಾಧ್ಯಪದಾರ್ಥಗಳು ನ್ಯಾಯಮತದಲ್ಲಿ ಪರಮಾಣು, ದೇಶಕಾಲಾದಿಗಳು; ವೇದಾಂತಮತದಲ್ಲಿ ಅಜ್ಞಾನ, ಅಜ್ಞಾನಕ್ಕೂ ಚೇತನಕ್ಕೂ ಸಂಬಂಧ ಇವುಗಳು; ಅಭಾವರೂಪವಾದ ಅಸಾಧ್ಯಪದಾರ್ಥಗಳು ಪ್ರಾಗಭಾವ ಮುಂತಾದುವು, ಇವೆಲ್ಲವೂ ಅನಿತ್ಯವೆಂದು ಶ್ರುತಿಯು ಹೇಳುತ್ತದೆ. ಇವೆಲ್ಲದರಲ್ಲೂ ಅನುಗತವಾದ ಧರ್ಮವು ಅಚೇತನತ್ವ ಅಥವಾ ಜಡತ್ವವು; ಇತರ ಧರ್ಮವು ಪ್ರಯೋಜಕವಾಗದು. ಏಕೆಂದರೆ ವ್ಯಾಪ್ತಿಜ್ಞಾನವುಂಟಾಗದು. ಚೇತನಕ್ಕೆ ನಿತ್ಯತ್ವವನ್ನು "ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ" ಎಂಬ ಕಠೋಪನಿಷತ್ತಿನ ವಾಕ್ಯವು ಹೇಳುತ್ತಿದೆ. ॥೯೬-೯೭॥

ಆದುದರಿಂದ ಮೇಲೆ ಹೇಳಿದಂತೆ ಮೋಕ್ಷವು ಸಾಯುಜ್ಯರೂಪವಾದುದು ಎಂದರೆ ಜೀವಾತ್ಮಪರಮಾತ್ಮಗಳಿಗೆ ಭೇದಾಭಾವರೂಪವಾದುದು. ತದವೃತ್ತಿ ಧರ್ಮಾನಾಧಾರತ್ವೋಪಲಕ್ಷಿತಸ್ವರೂಪವಾದ ಅಭೇದವು. ಎಂದರೆ ಜೀವಬ್ರಹ್ಮಗಳಲ್ಲಿ ಒಂದರಲ್ಲಿಲ್ಲದ ಧರ್ಮವು ಇನ್ನೊಂದರಲ್ಲಿ ಇಲ್ಲವು. ಸರ್ವಜ್ಞತ್ವ ಅಲ್ಪಜ್ಞತ್ವಗಳನ್ನು ಬಿಟ್ಟು ಉಪಲಕ್ಷಿತಸ್ವರೂಪದಲ್ಲಿ ಅಭೇದವೆಂದು ಹೇಳಿದೆ. ಆ ಮುಕ್ತಿಯು ಕೇವಲ

ಜ್ಞಾನಂ ನಾಮಾಖಿಲಂ ಚೇದಂ ಸದ್ರೂಪೇಣಾವಭಾಸನಂ ।
ಕ್ರಿಯಾ ತು ಕಾರಕಾಪೇಕ್ಷಾ ನ ಜ್ಞಾನಾಲಂಬಿನೀ ಸದಾ ॥೯೯॥

ಅತಃ ಕ್ರಿಯಾಯಾ ಜ್ಞಾನೇನ ವಿರೋಧಾದೇವ ಸರ್ವಥಾ ।
ಸಮುಚ್ಚಯೋ ನ ಯುಜ್ಯೇತ ಕುತಸ್ತೇನ ಪರಾ ಗತಿಃ ॥೧೦೦॥

ಸಾರೂಪ್ಯಾಖ್ಯಾ ತು ಯಾ ಮುಕ್ತಿಃ ಸಾಮೀಪ್ಯಾಖ್ಯಾ ಚ ಯಾ ಪರಾ ।
ಸಾಲೋಕ್ಯಾಖ್ಯಾ ಚ ಯಾ ತಾಸಾಂ ಕೇವಲಂ ಕರ್ಮಸಾಧನಂ ॥೧೦೧॥

ಐಹಿಕಾಮುಷ್ಮಿಕಾಕಾರಾ ಮುಕ್ತಯಸ್ಸರ್ವದೇಹಿನಾಂ ।
ಕರ್ಮಣೈವ ಹಿ ಸಿಧ್ಯಂತಿ ನ ಜ್ಞಾನೇನ ವಿರೋಧತಃ ॥೧೦೨॥

ಜ್ಞಾನಂ ಕರ್ಮ ಚ ವೇದೋಕ್ತಮೇವ ನಾನ್ಯೋದಿತಂ ಭವೇತ್ ।
ಅನ್ಯೋದಿತಂ ತು ವಿಪ್ರೇಂದ್ರಾ ವ್ಯವಹಾರೇಽವಿವೇಕಿನಾಂ ॥೧೦೩॥

ಕರ್ಮದಿಂದಾದಲಿ ಕರ್ಮಜ್ಞಾನಸಮುಚ್ಚಯದಿಂದಾಗಲಿ ಲಭಿಸದು. ಜ್ಞಾನದಿಂದ ಮಾತ್ರ ದೊರೆಯುತ್ತದೆ. ॥೯೮॥

ಕರ್ತೃತ್ವಭೋಕ್ತೃತ್ವರೂಪವಾದ ಈ ಎಲ್ಲಾ ಪ್ರಪಂಚವೂ ಸಚ್ಚಿದಾನಂದಾ ದ್ವಿತೀಯಬ್ರಹ್ಮಾತ್ಮಸ್ವರೂಪವೆಂದು ಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಜ್ಞಾನವೆಂದು ಹೆಸರು. ಜ್ಞಾನವುಂಟಾದ ಉತ್ತರಕ್ಷಣದಲ್ಲಿ ಪ್ರಪಂಚವು ತೋರುವುದಿಲ್ಲವೆಂದು ಭಾವವು. ಕ್ರಿಯೆ ಎಂದರೆ ಕರ್ಮಗಳು ಕಾರಕಗಳನ್ನು ಅಪೇಕ್ಷಿಸುತ್ತವೆ. ಜ್ಞಾನವನ್ನು ಅವಲಂಬಿಸಿರುವುದಿಲ್ಲವು. ಕರ್ತೃತ್ವಭೋಕ್ತೃತ್ವಜ್ಞಾನವು ಕ್ರಿಯೆಗೆ ಬೇಕು. ಆ ಜ್ಞಾನವನ್ನು ಉಪಮರ್ದಿಸಿ ಅದ್ವಿತೀಯಬ್ರಹ್ಮಾತ್ಮಜ್ಞಾನವುಂಟಾಗುತ್ತದೆ. ಆದುದರಿಂದ, ಕ್ರಿಯೆಗೆ ಜ್ಞಾನದೊಡನೆ ವಿರೋಧವಿರುವುದರಿಂದಲೇ, ಅದಕ್ಕೆ ಜ್ಞಾನದೊಡನೆ ಸಮುಚ್ಚಯವು ಯಾವಾಗಲೂ ಸಂಭವಿಸದು. ಆ ಸಮುಚ್ಚಯದಿಂದ ಮೋಕ್ಷವಾಗುವುದು ಸುತರಾಂ ಅಸಂಭವವು. ॥೯೯-೧೦೦॥

ಸಾರೂಪ್ಯ, ಸಾಮೀಪ್ಯ, ಸಾಲೋಕ್ಯರೂಪವಾದ ಮುಕ್ತಿಗಳಿಗೆ ಕರ್ಮವೇ, ಮೇಲೆ ಹೇಳಿದ ಜ್ಞಾನವಲ್ಲವು, ಕರ್ಮವೇ ಸಾಧನವಾಗಿರುತ್ತದೆ. ॥೧೦೧॥

ಮೇಲೆ ಹೇಳಿದ ಮುಕ್ತಿಗಳೆಲ್ಲವೂ ಉಪಾಸನೆಯಿಂದ ಉಂಟಾಗಿ ದಿವ್ಯಲೋಕಗಳಲ್ಲಿ ಎಲ್ಲ ಉಪಾಸಕರಿಗೂ ಕರ್ಮದಿಂದಲೇ ಸಿದ್ಧಿಸುತ್ತವೆ. ಜ್ಞಾನದಿಂದ ಅವು

ಅಪೇಕ್ಷ್ಯಬುದ್ಧಿಂ ವಿಜ್ಞಾನಂ ಕರ್ಮ ಚೇತಿ ವಿಧೀಯತೇ ।
ತಥಾಽಪಿ ವ್ಯವಹಾರೇ ತೇ ವ್ಯಾವಹಾರಿಕಸಿದ್ಧಿದೇ ॥೧೦೪॥

ತಸ್ಮಾತ್ಸರ್ವತ್ರ ನಾಸ್ತಿಕ್ಯಂ ನ ಕುರ್ಯಾನ್ಮತಿಮುತ್ತಮಃ ।
ನಾಸ್ತಿಕ್ಯಾದೇವ ಸರ್ವೇಷಾಂ ಸಂಸಾರೇ ಪರಿವರ್ತನಂ ॥೧೦೫॥

ಸರ್ವಮುಕ್ತಂ ಸಮಾಸೇನ ಸಾಧನಂ ಮುನಿಸತ್ತಮ ।
ಗೋಪನೀಯಮಿದಂ ತಸ್ಮಾದಾಸ್ತಿಕಸ್ಯ ಸದಾಽದ್ಭುತಂ ॥೧೦೬॥

ಆಗವು. ಏಕೆಂದರೆ ಮೇಲೆ ಹೇಳಿದಂತೆ ಅವೆರಡಕ್ಕೂ ವಿರೋಧವಿದೆ ; ಉಪಮರ್ದ್ಯ ಉಪಮರ್ದಕಭಾವವಿದೆ. ಇಲ್ಲಿ ಹೇಳಿರುವ ಜ್ಞಾನವೂ ಕರ್ಮವೂ ವೇದೋಕ್ತವಾದು ದೆಂದೇ ಹೇಳುತ್ತೇವೆ. ಇತರ ಪ್ರಮಾಣದಿಂದ ಗೊತ್ತಾಗುವುದಲ್ಲವು. ಅಂತಹ ಜ್ಞಾನ ಕರ್ಮಗಳೂ ವ್ಯವಹಾರದಲ್ಲಿ ತೊಡಗಿರುವ ಆತ್ಮಜ್ಞಾನವಿಲ್ಲದವರಿಗೆ ಸಾಧನವಾಗಿರು ತ್ತವೆ. ಈ ಮೂರು ಬಗೆಯ ಮುಕ್ತಿಗಳಲ್ಲಿ ದ್ವೈತ, ವಿಶಿಷ್ಟಾದ್ವೈತ, ಮುಂತಾದ ಇತರ ಎಲ್ಲ ಮತಗಳಲ್ಲಿ ಹೇಳಿರುವ ಮುಕ್ತಿಗಳೂ ಸಮಾವೇಶವನ್ನು ಪಡೆಯುತ್ತವೆ. ||೧೦೨-೧೦೩||

ಮನುಷ್ಯರ ಬುದ್ಧಿಯ ಬೆಳವಳಿಗೆಯ ಮಟ್ಟವನ್ನು ಅನುಸರಿಸಿ ವಿಜ್ಞಾನ ವೆಂದರೆ ಉಪಾಸನೆಯನ್ನೂ, ಕರ್ಮವೆಂದರೆ ಸಂಧ್ಯಾವಂದನ ಅಗ್ನಿಹೋತ್ರಾದಿ ಕರ್ಮ ಗಳನ್ನೂ, ಆಯಾ ಅಧಿಕಾರಿಗಳ ಸಂಸ್ಕೃತಿಯ ತಾರತಮ್ಯವನ್ನು ಅನುಸರಿಸಿ ವಿಧಾನ ಮಾಡಿದೆ. ಹೀಗೆ ಇದು ಅಜ್ಞಾನವಿಷಯಕವಾದರೂ ವ್ಯಾವಹಾರಿಕವಾದ ಪ್ರಾಪಂಚಿಕ ವಾದ ಐಹಿಕ ಆಮುಷ್ಮಿಕಫಲಸಿದ್ಧಿಯನ್ನು ಉಂಟುಮಾಡುತ್ತದೆ. ಆದುದರಿಂದ ಇದು ಪಾರಮಾರ್ಥಿಕವಲ್ಲವೆಂದು ಜ್ಞಾನಿಗಳು ಜೀವನ್ಮುಕ್ತಿಸ್ಥಿತಿಯಲ್ಲಿ ಹೇಳಬಹುದಾದರೂ ಅಜ್ಞಾನಿಗಳು ಹಾಗೆ ಹೇಳುತ್ತಾ ಕರ್ಮವನ್ನು ಬಿಟ್ಟರೆ ಅದು ನಾಸ್ತಿಕ್ಯವೆನಿಸುತ್ತದೆ. ಆದುದರಿಂದ ಬುದ್ಧಿವಂತರಲ್ಲಿ ಶ್ರೇಷ್ಠನಾದವನು ಹಾಗೆ ಮಾಡಬಾರದು. ಇಂತಹ ನಾಸ್ತಿಕಸ್ವಭಾವದಿಂದಲೇ ಎಲ್ಲರಿಗೂ ಸಂಸಾರಬಂಧದಲ್ಲಿ ಸುತ್ತುತ್ತಿರುವಿಕೆಯುಂಟಾ ಗಿರುತ್ತದೆ. ||೧೦೪.೧೦೫||

ಋಷಿಶ್ರೇಷ್ಠನಾದ ವ್ಯಾಸನೇ, ಹೀಗೆ ಮೋಕ್ಷಸಾಧನಸ್ವರೂಪವು ಎಲ್ಲವೂ ಸಂಗ್ರಹವಾಗಿ ಹೇಳಲ್ಪಟ್ಟಿತು. ಆಸ್ತಿಕನಿಗೆ ಮೋಕ್ಷದಾಯಕವಾದ ಈ ಆಶ್ಚರ್ಯಕರ ವಾದ ಸಾಧನವನ್ನು ಯಾವಾಗಲೂ ಅನಧಿಕಾರಿಗೆ ಹೇಳದೆ ರಹಸ್ಯವಾಗಿಟ್ಟು ಕಾಪಾಡು ತ್ತಿರಬೇಕು. ||೧೦೬||

|| ಸೂತ ಉವಾಚ ||

ಏವಮುಕ್ತ್ವಾ ಮಹಾದೇವಃ ಸಾಂಬಸ್ಸರ್ವಾವಭಾಸಕಃ ।
ಪ್ರನೃತ್ಯ ಸನ್ನಿಧೌ ತಸ್ಯ ತತ್ರೈವಾಂತರ್ಹಿತೋಽಭವತ್ ||೧೦೭||

ಸಾಧನಂ ತು ಸಕಲಂ ಪರಿಭಾಷಿತಂ
ಕೇವಲಂ ತು ಕೃಪಯೈವ ವೋ ಮಯಾ ।
ನೇತರತ್ಕಥಿತವ್ಯಮಿಹ ದ್ವಿಜಾ
ಮೋಹ ಏವ ಹಿ ಸಮಸ್ತಮಿತೋಽನ್ಯಥಾ ||೧೦೮||

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಮುಕ್ತಿಸಾಧನವಿಚಾರೋ ನಾಮ ಅಷ್ಟತ್ರಿಂಶಾಧ್ಯಾಯಃ

ಎಲ್ಲವನ್ನೂ ತಿಳಿಯಬಲ್ಲ ಅಂಬಾಸಹಿತನಾದ ಮಹೇಶ್ವರನು ಈ ರೀತಿಯಾಗಿ ರಹಸ್ಯವನ್ನು ವಿವರಿಸಿ, ಆ ವ್ಯಾಸನ ಎದುರಿಗೆ ಸಂತೋಷದಿಂದ ನರ್ತಿಸಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿ ಮರೆಯಾದನು. ಎಂದು ಸೂತರು ಹೇಳಿದರು. ||೧೦೭||

ಓ ಬ್ರಾಹ್ಮಣರಾ, ನಾನು ಕೇವಲ ದಯೆಯಿಂದ ಈ ಎಲ್ಲ ಮುಕ್ತಿಸಾಧನವನ್ನೂ ನಿಮಗೆ ಹೇಳಿದೇನೆ. ಇದಕ್ಕಿಂತ ಬೇರೆಯಾಗಿ ಹೇಳಬೇಕಾದುದೇನೂ ಉಳಿದಿಲ್ಲವು. ಇದಕ್ಕಿಂತಲೂ ಬೇರೆಯಾದುವೆಲ್ಲವೂ ಅಜ್ಞಾನವೂ ಅದರ ಕಾರ್ಯವೂ ಆಗಿರುತ್ತವೆ. ||೧೦೮||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮೋಕ್ಷಪ್ರಾಪ್ತಿಗೆ ಮುಖ್ಯ ಸಾಧನಗಳನ್ನು ವಿವರಿಸುವ
ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

॥ ಏಕೋನಚತ್ವಾರಿಂಶೋಽಧ್ಯಾಯಃ ॥

ಮೂವತ್ತೊಂಬತ್ತನೆಯ ಅಧ್ಯಾಯವು

(ವೇದಾನಾಮವಿರೋಧನಿರೂಪಣಮ್)

॥ ಸೂತ ಉವಾಚ ॥

ಅಥಾತಸ್ಸಂಪ್ರವಕ್ಷ್ಯಾಮಿ ಸಮಾಸೇನ ನ ವಿಸ್ತರಾತ್ ।
ಅವಿರೋಧಂ ತು ವೇದಾನಾಮಶೇಷಾಣಾಂ ಮುನೀಶ್ವರಾಃ ॥೧॥

ಅದ್ವೈತದಂತೆ, ಕರ್ತೃ, ಕರಣ, ಫಲಗಳೆಂಬ ಭೇದದಿಂದ ಕೂಡಿರುವ ದ್ವೈತವನ್ನೂ ಶ್ರುತಿಯು ಹೇಳುತ್ತದೆ. ಹೇಗೆಂದರೆ ಕರ್ತೃವಾದ ಜೀವನೂ, ಕರಣವಾದ ಯಾಗಾದಿಧರ್ಮಗಳೂ, ಫಲವಾದ ಸ್ವರ್ಗಾದಿಲೋಕಗಳೂ ವೇದದಿಂದ ಹೇಳಲ್ಪಟ್ಟಿವೆ. ಆದುದರಿಂದ ಅದ್ವೈತವನ್ನು ಹೇಳುವ ಶ್ರುತಿಗಳಿಗೂ ದ್ವೈತವನ್ನು ಹೇಳುವ ಶ್ರುತಿವಾಕ್ಯಗಳಿಗೂ ವಿರೋಧವು ತೋರುತ್ತದೆ. ಆ ವಿರೋಧವನ್ನು ಪರಿಹರಿಸಲು ಯುಕ್ತಿಯನ್ನು ಹೇಳುತ್ತಾರೆ. ಅದ್ವೈತರೂಪಮೋಕ್ಷಸಾಧನಗಳನ್ನು ಹೇಳಿ ಈಗ ಅದ್ವೈತವು ವಾಸ್ತವವಾಗಿರುವುದರಿಂದ ಅದಕ್ಕೂ ದ್ವೈತಕ್ಕೂ ಆಪಾತವಾಗಿ ತೋರುತ್ತಿರುವ ವಿರೋಧವನ್ನು ಪರಿಹರಿಸಿ ಅವಿರೋಧವನ್ನು ವಿಸ್ತರಿಸದೆ ಸಂಗ್ರಹವಾಗಿ ಹೇಳುತ್ತೇನೆ. ಓ ಋಷಿಶ್ರೇಷ್ಠರೇ, ಕೇಳಿ ಎಂದು ಸೂತಋಷಿಗಳು ಹೇಳಿದರು. ॥೧॥

ದ್ವಿವಿಧೋ ವೇದರಾಶಿಸ್ತು ಮುನಯಸ್ಸಂಶಿತವ್ರತಾಃ ।
ಸತ್ಯಾದ್ವೈತಪರಃ ಕಶ್ಚಿದ್ವೇದಭಾಗಸ್ಸಮಾಸತಃ ॥೨॥

ಕಲ್ಪಿತದ್ವೈತನಿಷ್ಠಸ್ತು ವೇದಭಾಗೋಽಪರಸ್ತಥಾ ।
ಸತ್ಯಮೇವ ಸದಾಽದ್ವೈತಂ ಅಸತ್ಯಂ ದ್ವೈತಮಾಸ್ತಿಕಾಃ ॥೩॥

ದ್ವೈತಸ್ಯಾಪಿ ಚ ಸತ್ಯತ್ವಂ ವರ್ಣಯಂತೀಹ ಕೇಚನ
ತದಸಂಗತಮಧ್ಯಸ್ತಂ ದ್ವೈತಂ ಯಸ್ಮಾತ್ಪರಾತ್ಮನಿ ॥೪॥

ಅಧ್ಯಸ್ತಂ ಹಿ ಸದಾ ದ್ವೈತಂ ದೃಶ್ಯತ್ವಾಚ್ಛುಕ್ತಿರೂಪ್ಯವತ್ ।
ದೃಶ್ಯತ್ವಂ ದ್ವೈತಜಾತಸ್ಯ ಸಂಮತಂ ಸರ್ವದೇಹಿನಾಂ ॥೫॥

ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವ ಓ ಮುನಿಗಳೇ, ವೇದದಲ್ಲಿ ಎರಡು ಭಾಗಗಳಿವೆ. ಒಂದು ವಾಸ್ತವವಾದ ಬ್ರಹ್ಮಾತ್ಮೈಕ್ಯರೂಪವಾದ ಅದ್ವೈತವನ್ನು ಹೇಳುವ ಜ್ಞಾನಕಾಂಡವೆನಿಸಿರುವ ಉಪನಿಷದ್ಭಾಗವು. ಇನ್ನೊಂದಾದ ಕರ್ಮಕಾಂಡವು ಆ ಬ್ರಹ್ಮನಲ್ಲಿ ಕಲ್ಪಿತವಾದ ದ್ವೈತಪ್ರಪಂಚವನ್ನು ಹೇಳುತ್ತದೆ. ಓ ಆಸ್ತಿಕರಾದ ಋಷಿಗಳೇ, ಕಾಲತ್ರಯದಲ್ಲೂ ಅದ್ವೈತವೇ ಸತ್ಯವಾದ ಸಿದ್ಧಾಂತವು. ದ್ವೈತವು ಜ್ಞಾನದಿಂದ ಬಾಧ್ಯವಾಗಿರುವುದರಿಂದ ಅಸತ್ಯವಾದುದು. ||೨-೩||

ಪ್ರಾತಿಭಾಸಿಕವಾದ ಹಗ್ಗದಹಾವು, ಚಿಪ್ಪಿನ ಬೆಳ್ಳಿ, ಮುಂತಾದುವು ಜ್ಞಾನ ಬಾಧಿತವಾದರೂ ಅಜ್ಞಾನದಲ್ಲಿ ಅನುಭವಕ್ಕೆ ಬರುವ ಈ ಪ್ರಪಂಚದಲ್ಲಿ ವ್ಯಾವಹಾರಿಕ ವಾದ ಅನುಭವವು ಅವಿಸಂವಾದಿಯಾಗಿರುವಂತೆ ತೋರುತ್ತಿರುವುದರಿಂದ ದ್ವೈತಪ್ರಪಂ ಚವು ಸತ್ಯವಾದುದೆಂದು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ಏಕೆಂದರೆ ಪರಮಾತ್ಮನಲ್ಲಿ ದ್ವೈತಪ್ರಪಂಚವೆಲ್ಲವೂ ಅಜ್ಞಾನದಿಂದ ಕಲ್ಪಿತವಾಗಿ ಅಧ್ಯಸ್ತವಾಗಿದೆ. ||೪||

ವ್ಯಾವಹಾರಿಕದ್ವೈತಪ್ರಪಂಚವು ಸತ್ಯವಲ್ಲವು, ಆತ್ಮನಲ್ಲಿ ಅದು ಅಧ್ಯಸ್ತ ವಾಗಿರುವುದರಿಂದ-ಎಂದು ಅನುಮಾನಿಸಿದರೆ, ಇದರಲ್ಲಿ ಹೇತುವು ಅಸಿದ್ಧವಾಗುತ್ತದೆ ಎಂದು ಆಕ್ಷೇಪಿಸಿದರೆ, ಆ ಹೇತ್ವಸಿದ್ಧಿಯನ್ನು ನಿವಾರಿಸುತ್ತಾರೆ. ದ್ವೈತ ಪ್ರಪಂಚವು ಆತ್ಮನಲ್ಲಿ ಅಧ್ಯಸ್ತವಾಗಿದೆ. ದೃಶ್ಯವಾಗಿರುವುದರಿಂದ; ದೃಶ್ಯವಾದುದರಿಂದ ಹೇಗೆ ಹಗ್ಗದ ಹಾವು ಹಗ್ಗದಲ್ಲಿ ಅಧ್ಯಸ್ತವಾಗಿತೋರುತ್ತಿತ್ತೋ, ಹಾಗೆ ಈ ವ್ಯಾವಹಾರಿಕ ದ್ವೈತಪ್ರಪಂಚವೂ ಆತ್ಮನಲ್ಲಿ ಕಲ್ಪಿತವಾಗಿ, ಅಜ್ಞಾನದಿಂದ ಆರೋಪಿತವಾಗಿ,

ತಸ್ಮಾತ್ದ್ವೈತಪರೋ ಭಾಗಃ ಕಲ್ಪಿತದ್ವೈತಗೋಚರಃ ।
ಅದ್ವೈತಂ ಸರ್ವದಾ ಸತ್ಯಂ ಭೇದಾಭಾವಾತ್ಕಥಂಚನ ॥೬॥

ಅದ್ವೈತಮಪಿ ಚಾಧ್ಯಸ್ತಂ ಯದಿ ವೇದವಿದಾಂ ವರಾಃ ।
ಕುತ್ರೈವಾದ್ವೈತಮಧ್ಯಸ್ತಂ ನಾದ್ವೈತೇ ತದಭಾವತಃ ॥೭॥

ಕೇವಲಂ ಕಲ್ಪಿತೇ ದ್ವೈತೇ ನಾದ್ವೈತಾಧ್ಯಾಸಸಂಭವಃ ।
ವ್ಯವಹಾರದಶಾಯಾಂ ತು ಸತ್ಯೇಽದ್ವೈತಸ್ಯ ದರ್ಶನಾತ್ ॥೮॥

ದ್ವೈತೇ ಚಾದ್ವೈತಮಧ್ಯಸ್ತಂ ಇತಿ ವಕ್ತುಂ ನ ಶಕ್ಯತೇ ।
ತಸ್ಮಾಧ್ಯಾಸಸ್ವರೂಪತ್ವಾತ್ ದ್ವೈತಸ್ಯ ಬ್ರಹ್ಮವಿತ್ತಮಾಃ ॥೯॥

ಅಧ್ಯಸ್ತವಾಗಿಯೇ ತೋರುತ್ತಿರುವುದರಿಂದ ದೃಶ್ಯತ್ವವನ್ನು, ತೋರುತ್ತಿರುವಿಕೆಯನ್ನು, ಜ್ಞಾನವಿಷಯವಾಗಿರುವಿಕೆಯನ್ನು ದ್ವೈತಪ್ರಪಂಚದಲ್ಲಿ ಎಲ್ಲರೂ ಒಪ್ಪಿರುತ್ತಾರೆ. ॥೫॥

ಆದುದದರಿಂದ ದ್ವೈತಪ್ರಪಂಚವು ಬ್ರಹ್ಮನಲ್ಲಿ ಕಲ್ಪಿತವಾದುದರಿಂದ ವೇದದ ಕರ್ಮಕಾಂಡ ಭಾಗವು ಕಲ್ಪಿತವಿಷಯವುಳ್ಳದ್ದೆಂದು ಸಿದ್ಧವಾಗುತ್ತದೆ. ಹಾಗೆಯೇ ಬ್ರಹ್ಮಾತ್ಮೈಕ್ಯರೂಪವಾದ ಅದ್ವೈತವು ಯಾವಾಗಲೂ ಬಾಧಿತವಾಗದೆ ಸತ್ಯವಾದುದು. ಆದುದರಿಂದ ಯಾವ ರೀತಿಯಲ್ಲೂ ಭೇದವು ವಾಸ್ತವವಾಗಿ ಸಿದ್ಧಿಸದು. ॥೬॥

ದ್ವೈತಪ್ರಪಂಚದ ಹಾಗೆ ಅದ್ವೈತವೂ ಅಧ್ಯಸ್ತವಾಗಿ ಕಲ್ಪಿತವಾಗಿರಲಿ. ಎಂದರೆ, ಅದು ಎಲ್ಲಿ ಅಧ್ಯಸ್ತವಾಗಿರಬೇಕು ? ಅದ್ವೈತದಲ್ಲೆ ? ದ್ವೈತದಲ್ಲೆ ? ಎಂದು ವಿಂಗಡಿಸಿ, ಅದ್ವೈತದಲ್ಲಿ ಅದು ಕಲ್ಪಿತವಾಗಿರದು. ಏಕೆಂದರೆ ಆರೋಪ್ಯವಾದ ಅದ್ವೈತಕ್ಕಿಂತ ಬೇರೆಯಾದ, ಸತ್ಯವಾದ, ಅದಕ್ಕೆ ಅಧಿಷ್ಠಾನವಾದ, ಅದ್ವೈತ ಒಂದು ಬೇರೆ ಇಲ್ಲವು. ॥೭॥

ಕಲ್ಪಿತವೇ ಆಗಿರುವ ದ್ವೈತವು ಅದ್ವೈತದಲ್ಲಿ ಅಧ್ಯಸ್ತವಾಗಿರಲಾರದು, ಏಕೆಂದರೆ ವ್ಯವಹಾರದಶೆಯಲ್ಲಿ ಅಧ್ಯಾಸವು ಸತ್ಯವಾದ ಅಧಿಷ್ಠಾನದಲ್ಲಿ ಉಂಟಾಗುವುದು ಕಂಡುಬಂದಿದೆ. ॥೮॥

ಲೋಕದಲ್ಲಿ ಅಧ್ಯಾಸವು ಸತ್ಯವಾದ ಅಧಿಷ್ಠಾನದಲ್ಲಿ ಕಂಡುಬಂದರೂ ದ್ವೈತದಲ್ಲೇ ಅದ್ವೈತವು ಅಧ್ಯಸ್ತವಾಗಿರಲಿ, ಎನ್ನಲಾಗುವುದಿಲ್ಲ. ಏಕೆಂದರೆ ಆ ದ್ವೈತವೇ ಅಧ್ಯಾಸರೂಪವಾದುದು. ಆರೋಪಿತತ್ವವೂ ಅಧಿಷ್ಠಾನತ್ವವೂ ಒಂದೇ ವಸ್ತುವಿಗೆ ಬರಲಾರದು. ॥೯॥

ದ್ವೈತಂ ಚಾಪಿ ತಥಾಽದ್ವೈತಮುಭಯಂ ಕಲ್ಪಿತಂ ನ ಹಿ ।
ದ್ವೈತಾದ್ವೈತಾತಿರೇಕೇಣ ನಾಸ್ತಿತ್ವಾದೇವ ವಸ್ತುನಃ ॥೧೦॥

ಶೂನ್ಯಮಾತ್ರೇ ನ ಚಾಧ್ಯಸ್ತಮುಭಯಂ ವೇದವಿತ್ತಮಾಃ ।
ನಿರುಪಾಖ್ಯಸ್ಯ ಚಾಧ್ಯಾಸಾಧಿಷ್ಠಾನತ್ವಾದ್ಯಸಂಭವಾತ್ ॥೧೧॥

ಅತೋ ದ್ವೈತಂ ಸಮಧ್ಯಸ್ತಮದ್ವಿತೀಯೇ ಪರಾತ್ಮನಿ ।
ತಸ್ಮಾದುಕ್ತೇನ ಮಾರ್ಗೇಣ ಕಶ್ಚಿದಂಶಃ ಶ್ರುತೇರ್ಬುಧಾಃ ॥೧೨॥

ಸತ್ಯಾದ್ವೈತಪರಃ ಪ್ರೋಕ್ತಸ್ಸರ್ವಶಾಸ್ತ್ರಾರ್ಥವೇದಿಭಿಃ ।
ತಥೈವ ವೇದರಾಶೇಸ್ತು ಕಶ್ಚಿದಂಶಸ್ತಪೋಧನಾಃ ॥೧೩॥
ಕಲ್ಪಿತದ್ವೈತನಿಷ್ಠಸ್ತು ಕಥಿತಸ್ಸತ್ಯವಾದಿಭಿಃ ।

ದ್ವೈತವೂ, ಅದ್ವೈತವೂ, ಈ ಎರಡೂ ಕಲ್ಪಿತವಾಗಿರಲಿ ಎಂದು ವಾದಿಸಲಾಗದು. ಏಕೆಂದರೆ ದ್ವೈತ, ಅದ್ವೈತ ಇವೆರಡಕ್ಕಿಂತ ಬೇರೆಯಾದ ಯಾವ ವಸ್ತುವೂ ಇಲ್ಲದಿರುವುದರಿಂದ ಅಧಿಷ್ಠಾನವೇ ಇಲ್ಲದೆ ಭ್ರಮವು ಬರಬೇಕಾಗುತ್ತದೆ. ಅದು ಅನುಭವದಲ್ಲಿಲ್ಲವು. ॥೧೦॥

ಶೂನ್ಯದಲ್ಲಿಯೇ ದ್ವೈತಾದ್ವೈತಗಳೆರಡೂ ಅಧ್ಯಸ್ತವಾಗಿರಲಿ. ಎಂದೂ ಹೇಳಲಾಗುವುದಿಲ್ಲ. ನಿರುಪಾಖ್ಯವಾದ ಎಂದರೆ ಯಾವುದೊಂದು ರೂಪದಿಂದಲೂ ತಿಳಿಯಲಾಗದೆ ಇರುವ ಶೂನ್ಯಕ್ಕೆ ಅಧ್ಯಾಸಕ್ಕೆ ಅಧಿಷ್ಠಾನವಾಗುವಿಕೆಯು ಸಂಭವಿಸದು. ॥೧೧॥

ಆದುದರಿಂದ ದ್ವೈತಪ್ರಪಂಚವು ಪರಮಾರ್ಥವಾದ, ಎರಡನೆಯ ವಸ್ತುವಿಲ್ಲದ, ಪರಾತ್ಪರರೂಪವಾದ ಅಧಿಷ್ಠಾನದಲ್ಲಿ ಕಲ್ಪಿತವಾಗಿದೆ. ಎಂದು ಸಿದ್ಧವಾಗುತ್ತದೆ, ॥೧೨॥

ಆದುದರಿಂದ ಮೇಲೆ ಹೇಳಿದಂತೆ ವೇದದ ಒಂದು ಭಾಗವು ಎಂದರೆ ಉಪನಿಷದ್ಭಾಗವು ಎಲ್ಲ ಶಾಸ್ತ್ರಾರ್ಥಗಳನ್ನೂ ತಿಳಿದ ಪಂಡಿತರಿಂದ ಸತ್ಯವಾದ ಅದ್ವೈತವನ್ನು ಹೇಳುವುದರಲ್ಲಿ ತಾತ್ಪರ್ಯವುಳ್ಳದ್ದೆಂದು ಹೇಳಲ್ಪಟ್ಟಿದೆ. ಹಾಗೆಯೇ ವೇದದ ಇನ್ನೊಂದು ಭಾಗವು ಎಂದರೆ ಕರ್ಮಕಾಂಡವು ಕಲ್ಪಿತವಾದ ದ್ವೈತಪ್ರಪಂಚವನ್ನೇ ವಿಷಯೀಕರಿಸಿದೆ. ಎಂದು ಸತ್ಯವಾದಿಗಳಿಂದ ಹೇಳಲ್ಪಟ್ಟಿದೆ. ॥೧೩॥

ದ್ವೈತಾದ್ವೈತಶ್ರುತೀನಾಂ ತು ವಿರೋಧೋಽಪಿ ಪ್ರತೀತಿತಃ ॥೧೪॥

ಉಕ್ತೇನೈವ ಪ್ರಕಾರೇಣ ವಿರೋಧಾ ಭಾವ ಏವ ಹಿ ।
ಪ್ರತ್ಯಕ್ಷಾದೇರಗಮ್ಯತ್ವಾದದ್ವೈತಸ್ಯ ತು ಸರ್ವದಾ ॥೧೫॥

ತತ್ರೈವಾರ್ಥವತೀ ಸಾಕ್ಷಾದದ್ವೈತಶ್ರುತಿರಾಸ್ತಿಕಾಃ ।
ಅಂತರೇಣ ಶ್ರುತಿಂ ಭೇದೋ ಲೋಕಸಿದ್ಧಸ್ಸದೈವ ತು ॥೧೬॥

ತೇನ ನಾರ್ಥವತೀ ತತ್ರ ಶ್ರುತಿರ್ನಾನಾತಿಗಾಮಿನೀ ।
ಪ್ರಮಾಣಾಂತರಸಂವಾದಾಪೇಕ್ಷಾ ನಾಸ್ತಿ ಶ್ರುತೇಸ್ಸದಾ ॥೧೭॥

ಹೀಗೆ ದ್ವೈತಪರವಾದ ಶ್ರುತಿಗಳಿಗೂ ಅದ್ವೈತಪರವಾದ ಶ್ರುತಿಗಳಿಗೂ ವಿರೋಧವು ಕೇವಲ ಆಪಾತಪ್ರತೀತಿಯಿಂದಲೇ ತೋರುತ್ತಿದೆಯೇ ಹೊರತು ವಾಸ್ತವಾಗಿಲ್ಲವು. ಮೇಲೆ ಹೇಳಿದಂತೆ ಇವೆರಡು ವಿಧವಾದ ವಾಕ್ಯಗಳು ಪರಸ್ಪರವಿರೋಧವುಳ್ಳವಾಗಲಾರವು. ಸತ್ಯವಾದುದಕ್ಕೆ ಕಲ್ಪಿತವಾದುದರಿಂದ ವಿರೋಧವು ಸಂಭವಿಸುವುದಿಲ್ಲ. ಇವೆರಡೂ ಸಮಾನವಾದ ಸತ್ತೆಯುಳ್ಳವಲ್ಲವು, ಸಮಾನವಾದವುಗಳಿಗೇ ವಿರೋಧವು ಕೂಡುತ್ತದೆ. ಇವೆರಡರಲ್ಲಿ ಒಂದು ವಾಸ್ತವವೂ ಇನ್ನೊಂದು ಕಲ್ಪಿತವೂ ಆಗಿರುವುದರಿಂದ ವಿರೋಧವಿಲ್ಲವು. ॥೧೪॥

ದ್ವೈತವೂ 'ದ್ವಾಸುಪರ್ಣಾ' ಇತ್ಯಾದಿ ಶ್ರುತಿಗಳಲ್ಲಿ ಹೇಳಿದೆ. ಅದ್ವೈತವೂ 'ತತ್ತ್ವಮಸಿ', 'ಇದಂ ಸರ್ವಂ ಯದಯಮಾತ್ಮಾ','ಸರ್ವಂ ಖಲ್ವಿದಂ ಬ್ರಹ್ಮ' ಎಂಬಿವೇ ಮುಂತಾದ ಶ್ರುತಿಗಳಲ್ಲಿ ಹೇಳಿದೆ. ಹೀಗಿದ್ದರೂ ಅದ್ವೈತವೇ ಸತ್ಯವೆಂದೂ ದ್ವೈತವು ಕಲ್ಪಿತವೆಂದೂ ಹೇಳಲು ಕಾರಣವೇನೆಂದರೆ, ಬ್ರಹ್ಮಾತ್ಮೈಕ್ಯರೂಪವಾದ ಅದ್ವೈತವು ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿಯದೆ ಇದೆ. ಆದುದರಿಂದ ಅದು ಅನಧಿಗತವಾಯಿತು. ಶ್ರುತಿಯೂ ಇತರ ಪ್ರಮಾಣಗಳಿಂದ ತಿಳಿದುಬರುವ ಅರ್ಥವನ್ನು ಹೇಳುವುದಕ್ಕೆ ಹೊರಟಿಲ್ಲವು. ಆದುದರಿಂದ ವೇದವಾಕ್ಯಗಳೆಲ್ಲವೂ ಅದ್ವೈತವನ್ನು ಬೋಧಿಸುವುದರಲ್ಲೇ ತಾತ್ಪರ್ಯವುಳ್ಳವುಗಳೆಂಬುದು ಉಚಿತವಾಗಿದೆ. ॥೧೫॥

ಶ್ರುತಿಯ ಸಹಾಯವಿಲ್ಲದೆಯೇ ಭೇದವು ಲೋಕಾನುಭವದಿಂದ ಸಿದ್ಧವಾಗಿದೆ, ಆದುದರಿಂದ ಪ್ರತ್ಯಕ್ಷಾದಿಪ್ರಮಾಣದಿಂದಲೇ ಸಿದ್ಧವಾಗುವ ಭೇದದಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲವು. ಭೇದವನ್ನು ತಿಳಿಸಲು ಶ್ರುತಿಯು ಹೊರಡಬೇಕಾಗಿಲ್ಲವು. ಸ್ವರ್ಗಾದಿ ವಿಷಯಗಳು ಪ್ರತ್ಯಕ್ಷಾದಿ ವಿಷಯವಲ್ಲದ್ದರಿಂದ ಅವುಗಳ ವಿಷಯದಲ್ಲಿ ಶ್ರುತಿಗೆ

ಸ್ವತಶ್ಚ ಪರತೋ ದೋಷೋ ನಾಸ್ತಿ ತಸ್ಯಾಶ್ಶ್ರುತೇರಪಿ ।
ಪ್ರತ್ಯಕ್ಷಾದಿ ಪ್ರಮಾಣಾನಾಂ ದೋಷವದ್ಭಾವತಾ ಸದಾ ॥೧೮॥

ಅಸ್ಯತಶ್ಶ್ರುತಿರೇತೇಷಾಂ ಪ್ರಮಾಣಾನಾಂ ಬಲೀಯಸೀ ।
ಕಲ್ಪಿತದ್ವೈತಮಾತ್ರೇ ತು ನೈವ ಮಾನಮಿಯಂ ಶ್ರುತಿಃ ॥೧೯॥

ತತ್ರ ಪ್ರಯೋಜನಾಭಾವಾತ್ ಪರಮಾರ್ಥನಿರೂಪಣೇ ।
ಅದ್ವೈತಂ ಪರಮಾನಂದಂ ಬ್ರಹ್ಮವಸ್ತು ನ ಚಾಪರಂ ॥೨೦॥
ತತ್ರ ಪ್ರಯೋಜನಂ ವಿಪ್ರಾ ಅಸ್ತ್ಯೇವ ಹಿ ನ ಸಂಶಯಃ ।

ಹೇಗೆ ಪ್ರಾಮಾಣ್ಯವು ಒಪ್ಪಲ್ಪಟ್ಟಿದೆಯೋ ಹಾಗೆ ಅದ್ವೈತದಲ್ಲೂ ಶ್ರುತಿಯೇ ಪ್ರಮಾಣವೆಂದು ಒಪ್ಪುವುದು ಉಚಿತವು. ಆದರೆ ಅದ್ವೈತವು ಸತ್ಯವೆಂಬುದಕ್ಕೆ ಇತರ ಪ್ರಮಾಣಗಳ ಸಂವಾದವು ಅನಾವಶ್ಯಕವು. ಕಾಶಿಯಲ್ಲಿ ಗಂಗೆ ಇದೆ. ಎಂಬ ವಾಕ್ಯಕ್ಕೆ ಪ್ರಾಮಾಣ್ಯವು ಪ್ರತ್ಯಕ್ಷಾದಿ ಪ್ರಮಾಣಾಂತರಸಂವಾದವಿದ್ದರೇ ಸಿದ್ಧಿಸುತ್ತದೆ. ಹಾಗೆ ಅದ್ವೈತದ ವಿಷಯದಲ್ಲಿ ಬೇಕಿಲ್ಲವು. ಏಕೆಂದರೆ ಶ್ರುತಿಯು ತನಗೆ ತಾನೇ ಪ್ರಮಾಣವೆಂದು ಸಿದ್ಧಾಂತವನ್ನು ಎಲ್ಲರೂ ಒಪ್ಪಿರುತ್ತಾರೆ. ||೧೬-೧೭||

ಶ್ರುತಿವಾಕ್ಯಕ್ಕೆ ಸ್ವತಃ ದೋಷವಿಲ್ಲವು. ಅದು ನಿತ್ಯವೂ ಅಪೌರುಷೇಯವೂ ಆಗಿದೆ. ದೋಷಗಳು ಪುರುಷಗತವಾದವು. ಭ್ರಮ, ಪ್ರಮಾದ, ವಿಪ್ರಲಿಪ್ಸೆಗಳು ; ಇವು ಅಪೌರುಷೇಯವಾದ ಶ್ರುತಿಯಲ್ಲಿರಲಾರವು. ಕರಣಗಳಲ್ಲಿ ಸ್ವತಃ ದೋಷಗಳಿವೆ. ಕಾಚಕಾಮಿಲತಿಮಿರಾದಿಗಳು ದೋಷಗಳು ಈ ಎರಡು ವಿಧದಲ್ಲೂ ಶ್ರುತಿಗೆ ಬರಲಾರವು. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಯಾವಾಗಲೂ ದೋಷವು ಸ್ವತಃ ಇದೆ. ಆದುದರಿಂದ ಅಪೌರುಷೇಯವಾದ ಶ್ರುತಿಯು ಈ ಎಲ್ಲ ಪ್ರಮಾಣಗಳಿಗಿಂತಲೂ ಪ್ರಬಲವಾದುದು. ಕರ್ತೃಸ್ಮರಣೆಯಿಲ್ಲದಿರುವಿಕೆಯು ಅಪೌರುಷೇಯತೆ. ||೧೮||

ಕಲ್ಪಿತದ್ವೈತವೆಲ್ಲವೂ ಮಾಯಾಮಯವಾದುದರಿಂದ, ಪ್ರಯೋಜನವಿಲ್ಲದ್ದರಿಂದ, ಅದರಲ್ಲಿ ಶ್ರುತಿಯು ಪ್ರಮಾಣವಾಗಬೇಕಾಗಿಲ್ಲವು. ಪರಮಾರ್ಥವಾದ ಬ್ರಹ್ಮಾತ್ಮೈಕ್ಯದಲ್ಲಿಯೇ ಶ್ರುತಿಯು ಪ್ರಮಾಣವಾಗಬೇಕಾಗಿದೆ. ಬ್ರಹ್ಮವಸ್ತುವು ಅದ್ವೈತವಾದುದೂ ಪರಮಾನಂದಸ್ವರೂಪವಾದುದೂ, ಆಗಿರುವುದರಿಂದ ಓ ಋಷಿಗಳೇ, ಅದು ಪರಮ ಪ್ರಯೋಜನವೂ ಆಗಬಹುದೆಂದು ತಿಳಿಯಿರಿ. ||೧೯-೨೦||

ಯತ್ರ ಪ್ರಯೋಜನಂ ತತ್ರ ಶ್ರುತಿರ್ಮಾನಮಿತಿ ಸ್ಥಿತಿಃ ॥೨೧॥

ಅತಃ ಪ್ರಯೋಜನಾಭಾವಾತ್ ದ್ವೈತಂ ನ ಪ್ರತಿಪಾದ್ಯತೇ ।
ಅನೂದ್ಯ ದ್ವೈತಮದ್ವೈತಂ ಪ್ರತಿಪಾದಯತಿ ಶ್ರುತಿಃ ॥೨೨॥

ಸ್ಮೃತೀನಾಂ ಚ ಪುರಾಣಾನಾಂ ಭಾರತಾದೇಸ್ತಥೈವ ಚ ।
ತಥಾ ಶೈವಾಗಮಾದೀನಾಂ ತರ್ಕಾಣಾಂ ಚ ದ್ವಿಜೋತ್ತಮಾಃ ॥೨೩॥

ಅದ್ವೈತನಿಷ್ಠತೈವೋಕ್ತಾ ನ ದ್ವೈತಪರತಾ ಸದಾ ।
ಅಧ್ಯಸ್ತಾಜ್ಞಾನತತ್ಕಾರ್ಯನಿವೃತ್ತಿದ್ವಾರತೋಽದ್ವಯಮ್ ॥೨೪॥
ಬೋಧಯಂತಿ ಮುದಾ ಕಾಶ್ಚಿತ್ ಶ್ರುತಯಃ ಪಂಡಿತೋತ್ತಮಾಃ ।

'ಅನಧಿಗತಾಬಾಧಿತ ಪ್ರಯೋಜನವದರ್ಥಬೋಧಕತ್ವಂ ಪ್ರಾಮಾಣ್ಯಂ' ಎಂದರೆ ಇತರ ಚಕ್ಷುರಾದಿಪ್ರಮಾಣಗಳಿಂದ ತಿಳಿದು ಬರದೇ ಇರುವ, ಬಾಧಿತವಾಗದೆ ಇರುವ, ಪ್ರಯೋಜನಕರವಾದ ಅರ್ಥವನ್ನು ಬೋಧಿಸುವಿಕೆಯೇ ಪ್ರಾಮಾಣ್ಯವು. ಅಂಥ ವಾಕ್ಯವು ಶ್ರುತಿವಾಕ್ಯವು. ಆದುದರಿಂದ ವೇದವು ಸ್ವಯಂಪ್ರಮಾಣವಾದುದು. ಆದುದರಿಂದ ಪ್ರಯೋಜನಕರವಾದ ಅರ್ಥಬೋಧಕವಾದ ಶ್ರುತಿಯೇ ಪ್ರಮಾಣವು. ಪರಮಪ್ರಯೋಜನವು ದ್ವೈತಶ್ರುತಿಯಿಂದ ಆಗುವುದಿಲ್ಲವಾದುದರಿಂದ ದ್ವೈತದಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲವು. ಹಾಗಾದರೆ ಶ್ರುತಿಯು ದ್ವೈತವನ್ನೂ ಏಕೆ ಹೇಳುತ್ತದೆ? ಎಂದರೆ ದ್ವೈತಪ್ರಪಂಚವನ್ನು ಅನುವಾದಮಾಡಿ ನಿಷೇಧಿಸುವುದಕ್ಕಾಗಿ ಹೇಳುತ್ತದೆ. ಅಷ್ಟುಮಾತ್ರದಿಂದ ಶ್ರುತಿಗೆ ದ್ವೈತದಲ್ಲಿ ತಾತ್ಪರ್ಯ ಪ್ರಾಮಾಣ್ಯವಿಲ್ಲವೆಂದೇ ನಿಶ್ಚಯವು. ॥೨೧-೨೨॥

ಮನ್ವಾದಿಸ್ಮೃತಿಗಳು, ಭಾಗವತಾದಿ ಪುರಾಣಗಳು, ಭಾರತಾದಿ ಇತಿಹಾಸಗಳು, ಶೈವವೈಷ್ಣವಾದಿ ಆಗಮಗಳು, ನೈಯಾಯಿಕಾದಿಗಳ ತರ್ಕಗಳು ಇವೆಲ್ಲವೂ ಪರಂಪರೆಯಿಂದ ಎಂದರೆ ಆತ್ಮನನ್ನು ದೇಹಾತಿರಿಕ್ತನೆಂದೂ, ಕರ್ತೃತ್ವರಹಿತನೆಂದೂ ನಿತ್ಯನೆಂದೂ, ತಿಳಿಸಲು, ಸಗುಣಬ್ರಹ್ಮವನ್ನೂ ನಿರೂಪಿಸಿ, ಕಡೆಗೆ ಅದ್ವೈತಕ್ಕೆ ದಾರಿಯನ್ನು ಸರಿಮಾಡಿರುವುದರಿಂದ ಅದ್ವೈತದಲ್ಲೇ ತಾತ್ಪರ್ಯವುಳ್ಳವುಗಳು, ಮತ್ತು ದ್ವೈತದಲ್ಲಿ ತಾತ್ಪರ್ಯವಿಲ್ಲದವಾಗಿವೆ. ಎಂದು ಗೊತ್ತಾಗುತ್ತದೆ. ॥೨೩॥

ಕೆಲವು ಶ್ರುತಿಗಳು ಜಾತಿ, ಗುಣ, ಕ್ರಿಯಾ, ಸಂಜ್ಞಾಗಳಲ್ಲಿ ಒಂದೂ ಇಲ್ಲದ ಪರಮಾತ್ಮನನ್ನು ಹೇಗೆ ಹೇಳುತ್ತವೆ? ಎಂದು ಆಕ್ಷೇಪಿಸಿ ಅಧ್ಯಾರೋಪ ಅಪವಾದ

ಸಾಕ್ಷಾದ್ವಿಧಿಮುಖೇನೈವ ಬ್ರಹ್ಮಸತ್ಯಾದಿ ಲಕ್ಷಣಮ್ ॥೨೫॥

ಬೋಧಯಂತಿ ಮುದಾ ಕಾಶ್ಚಿತ್ ಶ್ರುತಯಃ ಪಂಡಿತೋತ್ತಮಾಃ ।
ಜೀವತ್ವಂ ಚೇತನಸ್ಯಾಸ್ಯ ಸ್ವಾಭಾವಿಕಮಿತಿ ದ್ವಿಜಾಃ ॥೨೬॥

ಕೇಚಿದ್ವದಂತಿ ವಾರ್ತೈಷಾ ನ ತತ್ಸ್ವಾಭಾವಿಕಂ ಸದಾ ।
ಯದಿ ಸ್ವಾಭಾವಿಕಂ ತರ್ಹಿ ಜೀವತ್ವಂ ಸರ್ವದಾ ಭವೇತ್ ॥೨೭॥
ನಾಸ್ತಿ ತಸ್ಯ ನಿವೃತ್ತಿರ್ಹಿ ಸ್ವತಸ್ಸಿದ್ಧಂ ನ ನಶ್ಯತಿ ।

ನ್ಯಾಯದಿಂದಲೂ, ಸ್ಥೂಲಾರುಂಧತೀನ್ಯಾಯದಿಂದಲೂ, ಸಗುಣರೂಪವನ್ನು ತಿಳಿಸಿ, ಆ ಮೂಲಕ ಸೂಕ್ಷ್ಮವಾದ ನಿರ್ಗುಣರೂಪವನ್ನು ಸಗುಣರೂಪನಿಷೇಧದಿಂದ ತಿಳಿಸುತ್ತದೆ. ಬ್ರಹ್ಮನಲ್ಲಿ ಕಲ್ಪಿತವಾದ ಅಧಿಷ್ಠಾನಾಜ್ಞಾನ, ಅದರ ಕಾರ್ಯವಾದ ಮಹದಾದಿಪ್ರಪಂಚ, ಇವೆಲ್ಲವನ್ನೂ ನಿಷೇಧದಿಂದ ನಿವೃತ್ತಿಮಾಡಿ, ಆ ಮೂಲಕವಾಗಿ ಉಪಲಕ್ಷಣವಿಧದಿಂದ ವಿವರ್ತವೆಂದು ಪ್ರಪಂಚವನ್ನು ತಿಳಿಸಿ ಆ ಮೂಲಕವಾಗಿ ನಿರ್ಗುಣಪರಮಾತ್ಮತತ್ತ್ವವನ್ನು ಸಂತೋಷದಿಂದ ತಿಳಿಸುತ್ತವೆ. ||೨೪||

ಕೆಲವು ಶ್ರುತಿವಾಕ್ಯಗಳು ಎಂದರೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇವೇ ಮುಂತಾದವು ಬ್ರಹ್ಮವನ್ನು ಸತ್ಯವೆಂದರೆ ಯಾವಾಗಲೂ ಬಾಧಿತವಾಗದೆ, ಅಭಾವ ವಿಷಯವಾಗದೆ, ಇರುವ ವಸ್ತುವೆಂದೂ, ಜ್ಞಾನವೆಂದರೆ ಸ್ವಪರವ್ಯವಹಾರಗಳನ್ನು ತಿಳಿಸುವ, ಪ್ರಕಾಶಪಡಿಸುವ, ವಸ್ತುವೆಂದೂ-ಆನಂದವೆಂದರೆ ಎಲ್ಲಕ್ಕಿಂತ ಹೆಚ್ಚಾಗಿ, ಅತ್ಯಂತವಾಗಿ, ಎಲ್ಲರಿಗೂ ಅನುಕೂಲವಾದುದೆಂದು ತಿಳಿದುಬರುವ ವಸ್ತುವೆಂದೂ, ಅನಂತವೆಂದರೆ ಮೂರು ವಿಧವಾದ ಪರಿಚ್ಛೇದಗಳಿಲ್ಲದಿರುವ ವಸ್ತುವೆಂದೂ, ನಿರುಪಾಧಿಕಪ್ರೇಮಕ್ಕೆ ವಿಷಯವಾದುದೆಂದೂ, ಎಲ್ಲ ವಸ್ತುಗಳಲ್ಲಿ ಪ್ರೀತಿಯೂ ಯಾವ ಆತ್ಮಪ್ರೀತಿಸಾಧನವಾದುದೆಂಬ ಕಾರಣದಿಂದ ಉಂಟಾಗುತ್ತದೊ, ಅದೇ ಬ್ರಹ್ಮವೆಂದು ವಾಚ್ಯರೀತಿಯಿಂದ ಅಲ್ಲದೆ ಲಕ್ಷ್ಯರೀತಿಯಿಂದ ತಿಳಿಸಲು ಶಕ್ತಿಯುಳ್ಳವಾಗಿವೆ. ||೨೫||

ಈ ಆತ್ಮನಿಗೆ ಜೀವಭಾವವು ಸ್ವಾಭಾವಿಕವಾದುದೆಂದು ಕೆಲವರು ಹೇಳುವುದು ಬರಿಯ ಮಾತೇ ಹೊರತು ನಿಜವಲ್ಲವು. ಜೀವತ್ವವು ಸ್ವಾಭಾವಿಕವಾದುದಲ್ಲವು. ಹಾಗಲ್ಲದೆ ಜೀವತ್ವವು ಸ್ವಾಭಾವಿಕವಾದುದೆಂದರೆ ಅದು ಎಲ್ಲ ಕಾಲಗಳಲ್ಲೂ ಇರಬೇಕಾಗುವುದು. ಆದುದರಿಂದ ಜೀವತ್ವಕ್ಕೆ ನಿವೃತ್ತಿಯೇ ಇಲ್ಲದೆ ಹೋಗಬೇಕಾಗು

ಯದಾ ಭೇಷಜಸಂಪರ್ಕಾತ್ತಾಮ್ರಸ್ಯ ಮಲನಾಶನಮ್ ॥೨೮॥

ತಥಾ ಜೀವಸ್ಯ ದುಃಖಾದಿ ನಿವೃತ್ತಿಃ ಕೇನಚಿತ್ ಭವೇತ್ ।
ರಸವಿದ್ಧಮಯಸ್ಸ್ವರ್ಣಂ ಯಥಾ ಭವತಿ ಸರ್ವದಾ ॥೨೯॥

ಕೇನಚಿತ್ ಸಾಧನೇನೈವ ತಥಾ ಜೀವಶ್ಶಿವೋ ಭವೇತ್ ।
ಇತಿ ಕೇಚಿತ್ಸ್ವಮೋಹೇನ ಪ್ರವದಂತಿ ತು ವಾದಿನಃ ॥೩೦॥

ತನ್ನ ಸಂಪ್ರತಿಪನ್ನಂ ಹಿ ಸ್ವತಃ ಸಿದ್ಧಂ ನ ನಶ್ಯತಿ ।
ಯಥಾ ಸ್ವಾಭಾವಿಕಂ ವಹ್ನೇರೌಷ್ಣ್ಯಂ ನೈವ ವಿನಶ್ಯತಿ ॥೩೧॥
ಪ್ರಕಾಶೋ ವಾ ತಥಾಽಸ್ಯಾಪಿ ನ ದುಃಖಾದಿರ್ವಿನಶ್ಯತಿ ।

ವುದು. ಮೋಕ್ಷವೂ ಇಲ್ಲದೆ ಹೋಗಬೇಕಾಗುವುದು. ಅಲ್ಲದೆ ಸ್ವತಸಿದ್ಧವಾದುದಕ್ಕೆ ನಾಶವಿಲ್ಲವೆಂಬುದು ಕ್ಲುಪ್ತವಾದ ನಿಯಮವೂ ಆಗಿದೆ. ||೨೬-೨೭||

ಹುಳಿಹಣ್ಣಿನ ಸಂಬಂಧದಿಂದ ತಾಮ್ರದ ಕೊಳೆಯು ಹೋಗುವ ಹಾಗೆ ಜೀವನಿಗೂ ಸಂಸಾರಬಂಧವೆಂಬ ದೋಷರೂಪವಾದ ಕೊಳೆಯು ಹೋಗುವುದಕ್ಕೂ ಒಂದು ಕಾರಣವಿರಬೇಕು. ||೨೮||

ಪಾದರಸಾದಿ ಸಂಬಂಧದಿಂದ ಕಬ್ಬಿಣವು ಚಿನ್ನವಾಗುವಂತೆ ಈಶ್ವರಾನುಗ್ರಹರೂಪವಾದ ಪರಶಿವತತ್ತ್ವಜ್ಞಾನರೂಪವಾದ ಸಾಧನದಿಂದ ಜೀವನು ಶಿವತತ್ತ್ವವನ್ನು ಪಡೆಯುತ್ತಾನೆ. ಜೀವನು ಎಂದಿನಂತೆ ಬ್ರಹ್ಮನಾಗಿ ಉಳಿಯುತ್ತಾನೆ. ಇದರಿಂದ ಒಂದಾವೃತ್ತಿ ಮೋಕ್ಷ ದೊರೆತ ಮೇಲೆ ಪುನಃ ಕಾಲಾಂತರದಲ್ಲಿಯಾದರೂ ಸಂಸಾರದುಃಖಸಂಬಂಧ ಉಂಟಾದರೂ ಆಗಬಹುದೆಂಬ ಶಂಕೆಯನ್ನು ನಿವಾರಿಸುತ್ತಾರೆ. ಕಬ್ಬಿಣವು ಚಿನ್ನವಾದ ಮೇಲೆ ಪುನಃ ಕಬ್ಬಿಣವಾಗುವುದಿಲ್ಲ. ಇದು ಹೇಗೋ ಹಾಗೆ ಜೀವನು ಸಂಸಾರದುಃಖದಿಂದ ಒಂದಾವೃತ್ತಿ ಬಿಡುಗಡೆಯನ್ನು ಹೊಂದಿದನೆಂದರೆ ಪುನಃ ದುಃಖಸಂಬಂಧವುಂಟಾಗುವ ಸಂಭವವಿಲ್ಲವೆಂದು ಭಾವವು. ||೨೯-೩೦||

ಜೀವನಿಗೆ ಶಿವತ್ವವು ಸಾಧನೆಯ ಬಲದಿಂದ ಉಂಟಾಗುತ್ತೆಂಬುದು ಯುಕ್ತವಾಗದು. ಸ್ವಾಭಾವಿಕವಾದುದಕ್ಕೆ ನಾಶವಿಲ್ಲವು. ಬೆಂಕಿಗೆ ಶಾಖವೂ ಬೆಳಕೂ ಸ್ವಾಭಾವಿಕವಾದುದರಿಂದ ಯಾವಾಗಲೂ ನಾಶವನ್ನು ಹೊಂದದು. ಹಾಗೆ ಜೀವನಿಗೆ ಸಂಸಾರಸಂಬಂಧರೂಪವಾದ ದುಃಖವೂ ಸ್ವಾಭಾವಿಕವಾದರೆ ಅದಕ್ಕೂ ನಿವೃತ್ತಿ ಇಲ್ಲವು. ||೩೧||

ಮಣಿಮಂತ್ರೌಷಧಾದೀನಾಂ ಶಕ್ತಿವೈಚಿತ್ರ್ಯಮಾತ್ರತಃ ॥೩೨॥

ನಷ್ಟವತ್ಪ್ರತಿಬದ್ಧಂ ತು ನ ನಷ್ಟಂ ಸಮ್ಮತಂ ಹಿ ತತ್ ।
ಯಥಾ ತಾಮ್ರಮಲಂ ನೈವ ಕೇನಚಿತ್ ಪ್ರವಿನಶ್ಯತಿ ॥೩೩॥

ನಷ್ಟವತ್ಪ್ರತಿಬದ್ಧಂ ಹಿ ವಿನಷ್ಟಂ ಮನ್ವತೇಽಬುಧಾಃ ।
ಜೀವತ್ವಂ ಚ ತಥಾಽಸ್ಯಾಪಿ ಸುಖದುಃಖಾದಿಲಕ್ಷಣಮ್ ॥೩೪॥

ನಷ್ಟವತ್ಪ್ರತಿಬದ್ಧಂ ಸ್ಯಾತ್ ನೈವ ನಶ್ಯತಿ ಕೇನಚಿತ್ ।
ಪಯಸಾ ವೇಷ್ಟಿತಂ ತೋಽಯಂ ಪಯ ಇತ್ಯಭಿಧೀಯತೇ ॥೩೫॥

ರಜತಂ ಕಾಂಚನಗ್ರಸ್ತಂ ಹೇಮ ಇತ್ಯಭಿಧೀಯತೇ ।
ತಥೈವ ರಸವೀರ್ಯೇಣ ವಹ್ನಿ ಸಂಪರ್ಕತೋಽಪಿ ಚ ॥೩೬॥

ಅಯಸೋ ಹೇಮವರ್ಣತ್ವಂ ನ ಹೇಮತ್ವಂ ಕಥಾಚನ ।

ಮಣಿಮಂತ್ರಾದಿಗಳ ಬಲದಿಂದ ಅಗ್ನಿಯಲ್ಲಿ ಸುಡುವ ಸಾಮರ್ಥ್ಯವೂ ಹೋಗುವುದೂ ಕಂಡುಬಂದಿದೆಯಲ್ಲ? ಎಂದರೆ, ಅದು ಸ್ವಲ್ಪಕಾಲ ತಡೆಯಲ್ಪಟ್ಟಿರುತ್ತದೆಯೇ ಹೊರತು, ಶಾಶ್ವತವಾಗಿ ಹೋಗುವುದೂ ಇಲ್ಲವು. ॥೩೨॥

ಹಾಗೆಯೇ ತಾಮ್ರದ ಕೊಳೆಯು ಯಾವುದರಿಂದಲೂ ಶಾಶ್ವತವಾಗಿ ನಾಶವಾಗುವುದಿಲ್ಲವು, ಅದು ಹುಳಿಯಿಂದ ಸ್ವಲ್ಪಕಾಲ ತಡೆಯಲ್ಪಟ್ಟಿರುತ್ತದೆ. ಆದರೂ ತಿಳಿವಳಿಕೆ ಇಲ್ಲದವರು ಕೊಳೆಯು ನಷ್ಟವಾಯಿತೆಂದು ಭ್ರಾಂತಿಯಿಂದ ಹೇಳುತ್ತಾರೆ. ಹುಳಿಯಿಂದ ಕೊಳೆಯು ಹೋಗುವದು ನಿಜ. ಪುನಃ ಕೊಳೆಯಾಗುವುದೂ ಖಂಡಿತ. ಆದುದರಿಂದ ತಾಮ್ರಕ್ಕೆ ಕೊಳೆಯೇ ಸ್ವಾಭಾವಿಕವಾದುದು. ಅದು ಯಾವುದರಿಂದಲೂ ಶಾಶ್ವತವಾಗಿ ಹೋಗುವುದೂ ಇಲ್ಲವು. ಹಾಗೆಯೇ ಜೀವತ್ವವೂ ಸುಖದುಃಖಗಳನ್ನು ಅನುಭವಿಸುವುದೇ ಆಗಿದೆ. ಸುಖಾನುಭವವುಂಟಾದಾಗ ದುಃಖಭಾವವು ತಾತ್ಕಾಲಿಕವಾಗಿ ತಡೆಯಲ್ಪಟ್ಟಿರುತ್ತದೆಯೇ ಹೊರತು ಶಾಶ್ವತವಾಗಿ, ಹಿಂತಿರುಗದಹಾಗೆ, ನಷ್ಟವಾಗದು. ॥೩೩-೩೪॥

ಹಾಲಿನಿಂದ ಬೆರಿದ ನೀರನ್ನು ಹಾಲು ಎನ್ನುತ್ತಾರೆ. ಚಿನ್ನದಿಂದ ಲೇಪವನ್ನು ಹೊಂದಿದ ಬೆಳ್ಳಿಯನ್ನೂ ಚಿನ್ನವೆಂದು ಅಜ್ಞಾನಿಗಳು ಹೇಳುತ್ತಾರೆ. ಹಾಗೆಯೇ ಪಾದರಸದ ಶಕ್ತಿಯಿಂದಲೂ ಬೆಂಕಿಯ ಸಂಬಂಧದಿಂದಲೂ ಕಬ್ಬಿಣಕ್ಕೆ ಚಿನ್ನದ

ರಸವೀರ್ಯವಿನಾಶೇ ತು ವರ್ಣಸ್ತಸ್ಯ ವಿನಶ್ಯತಿ ॥೩೭॥

ಕೃತಕಸ್ಯ ನ ನಿತ್ಯತ್ವಂ ಇತಿ ವಾರ್ತಾ ಭುವಿ ಸ್ಥಿರಾ ।
ತಥಾಽಪಿ ಮಾನವಾ ಭ್ರಾಂತಾಃ ಕಾಂಚನಂ ಮನ್ವತೇ ಹ್ಯಯಃ ॥೩೮॥

ಸೂಕ್ಷ್ಮದರ್ಶನಹೀನಾನಾಂ ಸುಲಭಃ ಖಲು ವಿಭ್ರಮಃ ।
ತಥಾ ಶಿವತ್ವಂ ಜೀವಸ್ಯ ಭ್ರಾಂತ್ಯಾ ಸಿದ್ಧಂ ಭವಿಷ್ಯತಿ ॥೩೯॥

ಸಾಧನೇನ ಸ್ವತೋ ಜೀವೋ ನ ಶಿವಸ್ಸರ್ವಥಾ ಭವೇತ್ ।
ತತೋ ಜೀವಶ್ಶಿವಸಾಕ್ಷಾನ್ನ ಭವೇತ್ತು ಕದಾಚನ ॥೪೦॥

ಶಿವ ಏವ ಸ್ವತಸ್ಸಾಕ್ಷಾತ್ ಶಿವೋ ಭವತಿ ನಾನ್ಯಥಾ ।
ಯಥೈವ ವಹ್ನಿಸಂಪರ್ಕಾತ್ ತೋಯಂ ವಹ್ನಿರ್ನ ವಸ್ತುತಃ ॥೪೧॥

ಉಷ್ಣಂ ತೋಯಮಿತಿ ಪ್ರಾಜ್ಞಾಃ ಪ್ರತೀತಾವಪಿ ದೇಹಿನಾಮ್ ।
ತಥಾ ಶಿವಸ್ಸ್ವತೋ ಜೀವಃ ಕದಾಚಿತ್ ಪಂಡಿತೋತ್ತಮಾಃ ॥೪೨॥

ಬಣ್ಣವು ಉಂಟಾಗುತ್ತದೆಯೇ ಹೊರತು ಕಬ್ಬಿಣವು ಚಿನ್ನವೇ ಆಗುವುದಿಲ್ಲ. ಪಾದರಸದ ಶಕ್ತಿಯು ನಷ್ಟವಾದರೆ ಕಬ್ಬಿಣಕ್ಕೆ ಬಂದಿದ್ದ ಚಿನ್ನದ ಬಣ್ಣವೂ ನಷ್ಟವಾಗುತ್ತದೆ. ||೩೫-೩೬-೩೭||

ಕೃತಕವಾದ ಧರ್ಮಕ್ಕೆ ನಿತ್ಯತ್ವವಿಲ್ಲವೆಂಬ ಮಾತು ಲೋಕದಲ್ಲೂ ನಿತ್ಯವಾಗಿ ಕೇಳಿಬರುತ್ತಿದೆ. ಹಾಗಿದ್ದರೂ ಭ್ರಾಂತಿಯುಳ್ಳ ಜನರು ಕಬ್ಬಿಣವನ್ನು ಚಿನ್ನವೆಂದು ಹೇಳುತ್ತಾರೆ. ಸೂಕ್ಷ್ಮವಾಗಿ ಪರಿಶೀಲಿಸದ, ತಿಳಿವಳಿಕೆ ಇಲ್ಲದವರಿಗೆ ಭ್ರಾಂತಿಯು ಸುಲಭವಾಗಿ ಉಂಟಾಗುತ್ತದೆ. ಹಾಗೆಯೇ ಜೀವನಿಗೆ ಶಿವತ್ವವು ಉಂಟಾಗುತ್ತೆನ್ನುವುದೂ ಭ್ರಾಂತಿಯಿಂದಲೇ ಆಗಿದೆ ಎನ್ನಬೇಕು. ||೩೮-೩೯||

ಸಾಧನದ ಬಲದಿಂದ ಜೀವನಿಗೆ ಶಿವತ್ವವು ಶಾಶ್ವತವಾಗಿ ಉಂಟಾಗದು. ಆದುದರಿಂದ ಜೀವನು ಯಾವಾಗಲೂ ಶಿವನಾಗಲಾರನು, ಶಿವನೇ ತಾನು ಶಿವನಾಗಿರಬಲ್ಲನು. ಜೀವನು ಸ್ವಭಾವದಿಂದ ಶಿವನೇ ಆಗಿದ್ದು ತಾತ್ಕಾಲಿಕವಾದ ಅಜ್ಞಾನದಿಂದ ಜೀವನಾಗಿ ತೋರುತ್ತಿದಾನೆನ್ನಬೇಕು. ||೪೦||

ಹೇಗೆ ಬೆಂಕಿಯ ಸಂಬಂಧದಿಂದ ನೀರೇ ಬೆಂಕಿಯಾಗದೋ ಹಾಗೆ ನೀರು ಬಿಸಿಯಾಗಿದೆ ಎಂಬ ಜನರ ಮಾತಿನಲ್ಲಿಯೂ ನೀರು ವಾಸ್ತವವಾಗಿ ಬೆಂಕಿಯಾಗುವು

ಶಿವತ್ವೇನ ಪ್ರತೀತೋಽಪಿ ಸ್ವತೋ ನೈವ ಶಿವೋ ಭವೇತ್ ।
ಸ್ವತೋಽಶಿವಸ್ತು ಜೀವೋಽಯಂ ಸರ್ವಥಾ ನ ಶಿವೋ ಭವೇತ್ ॥೪೩॥

ಕೇನಚಿತ್ಸಾಧನೇನೈವ ಮುಕ್ತೌ ಶಿವಸಮೋ ಭವೇತ್ ।
ಇತ್ಯೇವಂ ಕೇಚಿದಿಚ್ಛಂತಿ ವಾದಿನೋ ಮುನಿಪುಂಗವಾಃ ॥೪೪॥

ವಾರ್ತಾಮಾತ್ರಮಿದಂ ಪ್ರೋಕ್ತಂ ಸರ್ವಥಾ ನ ತದರ್ಥವತ್ ।
ಏಕದೇಶೇನ ವಾ ಜೀವಃ ಕಿಂ ವಾ ಸರ್ವಾತ್ಮನಾ ಸಮಃ ॥೪೫॥

ಏಕದೇಶೇನ ಚೇತ್ಸರ್ವೇ ಶಿವಾಸ್ಸಂಸಾರವರ್ತಿನಃ ।
ಏಕದೇಶೇನ ಸರ್ವೇಷಾಮಸ್ತಿ ಸಾಮ್ಯಂ ಶಿವೇನ ಹಿ ॥೪೬॥

ಸರ್ವಾತ್ಮನಾ ಚೇತ್ ತತ್ಸಾಮ್ಯಂ ಸರ್ವಥಾ ಶಿವ ಏವ ಸಃ ।
ಭೇದಕಾರಣಶೂನ್ಯತ್ವಾತ್ ಭೇದಾಭಾವಾ ಚ್ಚ ವಸ್ತುತಃ ॥೪೭॥

ದಿಲ್ಲವು. ಓ ಪ್ರಾಜ್ಞರಾದ ಪಂಡಿತಶ್ರೇಷ್ಠರೇ, ಹಾಗೆಯೇ ಜೀವನು ವಾಸ್ತವವಾಗಿ ಶಿವನಾಗನು. ||೪೧-೪೨||

ಜೀವನು ಸ್ವರೂಪದಲ್ಲಿ ಶಿವನಲ್ಲವು, ಆದುದರಿಂದ ಹೇಗೂ ಶಿವನಾಗಲಾರನು. ಆದರೂ ಉಪಾಸನಾದಿ ಸಾಧನಬಲದಿಂದ ಮೋಕ್ಷದಲ್ಲಿ ಶಿವನಿಗೆ ಸದೃಶನಾಗಬಹುದು. ಹೀಗೆಂದು ಕೆಲವು ವಾದಿಗಳು ಹೇಳುತ್ತಾರೆ. ||೪೩-೪೪||

ಈ ಸಾಮ್ಯವಾದವು ಬರಿಯ ಮಾತೇ ಹೊರತು ವಾಸ್ತವವಾದುದಲ್ಲವು. ಜೀವನು ಈಶ್ವರನೊಡನೆ ಸದೃಶನೆಂದರೆ ಒಂದೆರಡು ಅಂಶಗಳಲ್ಲೇ ? ಅಥವಾ ಸರ್ವಾಂಶಗಳಲ್ಲೂ ಸಾಮ್ಯವೋ ? ಎಂದು ಕೇಳಿದರೆ–ಏಕದೇಶದಿಂದ ಸಾದೃಶ್ಯವೆನ್ನುವುದಾದರೆ ಎಲ್ಲ ಸಂಸಾರಿಗಳಾದ ಜೀವರೂ ಶಿವರಾಗಬೇಕಾಗುತ್ತದೆ. ಏಕೆಂದರೆ ಚೈತನ್ಯವೆಂಬ ಒಂದಂಶದಲ್ಲಿ ಸಂಸಾರಿಜೀವರಿಗೂ ಶಿವನಿಗೂ ಸಾಮ್ಯವಿದೆ. ||೪೫-೪೬||

ಹಾಗಲ್ಲದೆ ಆ ಸಾದೃಶ್ಯವು ಎಲ್ಲ ಅಂಶಗಳಲ್ಲೂ ಇದೆ ಎನ್ನುವುದಾದರೆ, ಶಿವನಿಗೂ ಜೀವನಿಗೂ ಭೇದಕ್ಕೆ ಕಾರಣವೇ ಇಲ್ಲದೆ ಹೋಗುವುದರಿಂದ ಜೀವನು ಶಿವನೇ ಆಗಿರುತ್ತಾನೆ. ಸಾದೃಶ್ಯವು ಕೆಲವಂಶಗಳಲ್ಲಿ ಮಾತ್ರ ಇರುತ್ತದೆ, ಮತ್ತೆ ಕೆಲವಂಶಗಳಲ್ಲಿ ಭೇದವೂ ಇರುತ್ತದೆಯೇ ಹೊರತು, ಎಲ್ಲ ಅಂಶಗಳಲ್ಲೂ ಸಾಮ್ಯವಿದ್ದರೆ ಸಾದೃಶ್ಯವೆನಿಸದು. ||೪೭||

ಕಿಂಚ ಮುಕ್ತೌ ಶಿವೇನೈವ ಸಮೋ ಜೀವೋ ಭವೇದ್ಯದಿ ।
ಕಿಂಚಿತ್ಕಾಲಂ ಹಿ ತತ್ಸಾಮ್ಯಮಾಗತಂ ಖಲು ಗಚ್ಛತಿ ॥೪೮॥

ತಸ್ಮಾಜ್ಜೀವಸ್ಸ್ವತಸ್ಸಾಕ್ಷಾತ್ ಶಿವಸ್ಸತ್ಯಾದಿಲಕ್ಷಣಃ ।
ಅಪ್ರಚ್ಯುತಾತ್ಮಭಾವೇನ ಸ್ಥಿತಸ್ಸನ್ ಪರವಿದ್ಯಯಾ ॥೪೯॥

ಸ್ವಾಜ್ಞಾನಂ ತತ್ಪ್ರಸೂತಂ ಚ ಸಂಸಾರಂ ಸ್ವಾತ್ಮನಾ ಗ್ರಸನ್ ।
ಸ್ವಪೂರ್ಣಶಿವರೂಪೇಣ ಸ್ವಯಮೇವಾವಶಿಷ್ಯತೇ ॥೫೦॥

ಶುಕ್ತಿಕಾಕಲಧೌತಂ ತು ಶುಕ್ತಿಕಾವೇದನೇ ನ ತು ।
ಶುಕ್ತಿಕಾಮಾತ್ರರೂಪೇಣ ಯಥಾ ಲೋಕೇಽವಶಿಷ್ಯತೇ ॥೫೧॥

ಅಲ್ಲದೆ ಮುಕ್ತಿಯಲ್ಲಿ ಮಾತ್ರ ಜೀವನಿಗೆ ಶಿವನೊಡನೆ ಸಾಮ್ಯವು ಬರುತ್ತದೆನ್ನುವುದಾದರೆ, ಅಂಥ ಸಾಮ್ಯವು ಒಂದು ಕಾಲದಲ್ಲಿ ಮಾತ್ರ ಬರುವುದಾದುದರಿಂದ ಮತ್ತೊಂದು ಕಾಲದಲ್ಲಿ ಹೋಗಲೂಬೇಕಾಗುತ್ತದೆ. ॥೪೮॥

ಹೀಗೆ ಜೀವನ ಜೀವತ್ವವು ಸ್ವಾಭಾವಿಕವಾದುದೂ ಅಲ್ಲವು, ನಿತ್ಯವೂ ಅಲ್ಲವು. ಮುಕ್ತಿಯ ವರೆಗೆ ಭೇದವೂ ಮುಕ್ತಿಯಾದ ಮೇಲೆ ಸಾಮ್ಯವೂ ಅಲ್ಲವು, ಅದು ಕೆಲವಂಶಗಳಲ್ಲಿ ಮಾತ್ರವೂ ಅಲ್ಲವು, ಈಗಿಲ್ಲದೆ ಬರುವುದೂ ಅಲ್ಲವು. ಎಂದು ಸಿದ್ಧವಾಗುತ್ತದೆ. ಆದುದರಿಂದ ಜೀವನು ಯಾವಾಗಲೂ ಸ್ವಾಭಾವಿಕವಾಗಿ ಸಚ್ಚಿದಾನಂದನೂ ಅನಂತನೂ ಆಗಿರುತ್ತಾನೆ. ಅವನ ವಾಸ್ತವವಾದ ಈ ಸ್ವರೂಪಕ್ಕೆ ಯಾವಾಗಲೂ ಚ್ಯುತಿಯೂ ಬರಲಾರದು. ಆದುದರಿಂದ ಜೀವನ ಜೀವತ್ವವು ಬರಿಯ ತೋರಿಕೆಯಾಗಿರಬೇಕು. ಈ ತೋರಿಕೆಯು ಜೀವಾತ್ಮನ ವಾಸ್ತವರೂಪದ ಅಜ್ಞಾನದಿಂದ ಆಗಿರಬೇಕು. ಆದುದರಿಂದ ಈ ಅಜ್ಞಾನವನ್ನೂ ಅದರ ಕಾರ್ಯವಾದ ಈ ಎಲ್ಲ ಸಂಸಾರಪ್ರಪಂಚವನ್ನೂ ಪರತತ್ತ್ವದ ಜ್ಞಾನದಿಂದ ಜೀವಬ್ರಹ್ಮಾಭೇದಜ್ಞಾನದಿಂದ, ವಿಲಾಪನಮಾಡಿ, ಸಂಪೂರ್ಣಶಿವರೂಪದಿಂದಲೇ ಯಾವಾಗಲೂ ಇರುತ್ತಾನೆಂಬುದೇ ಸರಿಯಾದ ಸಿದ್ಧಾಂತವು. ॥೪೯-೫೦॥

ಹೇಗೆಂದರೆ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯು ತೋರಿದರೂ ಚಿಪ್ಪೆಂದು ತಿಳಿಯೋಣದಿಂದಲೇ ಚಿಪ್ಪಿನ ರೂಪದಲ್ಲೇ ಹೇಗೆ ಲೋಕಾನುಭವದಲ್ಲೂ ಉಳಿಯುತ್ತದೆಯೋ ಹಾಗೆ. ॥೫೧॥

ಶಿವಾತ್ಮನಾ ಜಗದ್ಬಾಧಃ ನ ಚೈವಂ ಸಂಭವಿಷ್ಯತಿ ।
ಅಭಾವ ಏವ ಮುಕ್ತೌ ತು ಜಗತೋ ಹಿ ಭವಿಷ್ಯತಿ ॥೫೨॥

ಇತ್ಯೇವಂ ಕೇಚಿದಿಚ್ಛಂತಿ ಸ ಚ ಮಂದಮತಿಭ್ರಮಃ ।
ಭಾವರೂಪಂ ತು ವಸ್ತ್ವೇವ ಹ್ಯಭಾವಿ ಭವತಿ ದ್ವಿಜಾಃ ॥೫೩॥

ಜಗನ್ನ ಭಾವೋ ನಾಭಾವೋ ಭಾವಾಭಾವವಿಲಕ್ಷಣಮ್ ।
ತಸ್ಮಾದಧ್ಯಸ್ತಬಾಧಸ್ತು ನ ಭಾವೋಽಭಾವ ಏವ ನ ॥೫೪॥

ಮುಕ್ತಿಯಲ್ಲಿ ಜಗತ್ತು ತೋರದೆ ಇರುವುದರಿಂದ ಜಗತ್ತಿನ ಅಭಾವವೂ ಇರುತ್ತದೆ. ಆದುದರಿಂದ ಅಧಿಷ್ಠಾನ ಮಾತ್ರ ಉಳಿದಿರುತ್ತದೆ. ಎನ್ನುವುದು ಹೇಗೆ? ಎಂದು ಆಕ್ಷೇಪವನ್ನು ಅನುವಾದ ಮಾಡಿ ಸಮಾಧಾನವನ್ನು ಹೇಳುತ್ತಾರೆ. ಮುಕ್ತಿಯಲ್ಲಿ ಶಿವರೂಪದಿಂದಲೇ ಜಗತ್ತಿನ ಅಭಾವವಿದೆ ಎಂದೂ ಜಗತ್ತಿನ ಭಾವವಾಗಲಿ ಅಭಾವವಾಗಲಿ ಶಿವರೂಪಕ್ಕಿಂತ ಬೇರೆ ಇಲ್ಲವು ಎಂದೂ ಹೇಳಲಾಗುವುದಿಲ್ಲ. ಏಕೆಂದರೆ ಮುಕ್ತಿಯಲ್ಲಿ ಜಗತ್ತಿನ ಅಭಾವವೇ ಇರುವುದು. ಭಾವ, ಅಭಾವಗಳಲ್ಲಿ ಒಂದನ್ನು ನಿಷೇಧಿಸಿದರೆ ಇನ್ನೊಂದನ್ನು ವಿಧಿಸಿದಂತೆಯೇ ಆಗುತ್ತದೆ. ಜಗತ್ತು ಇಲ್ಲವೆಂದರೆ ಜಗತ್ತಿನ ಅಭಾವವಿದೆ ಎಂದು ಹೇಳಿದಂತಾಗುತ್ತದೆ. ॥೫೨॥

ಹೀಗೆಂದು ಕೆಲವರು ಹೇಳುವುದು ಕಡಿಮೆ ತಿಳಿವಳಿಕೆಯಿಂದ ಆಗುವ ಭ್ರಾಂತಿಮೂಲಕವಾದುದು. ಏಕೆಂದರೆ ವಸ್ತುವೇ ಭಾವರೂಪವಾದುದು. ಅದು ಯಾವಾಗಲೂ ಅಭಾವವುಳ್ಳದ್ದಾಗದು. ಆದುದರಿಂದ ಈ ಜಗತ್ತು ಭಾವರೂಪವೂ ಎಂದರೆ ವಾಸ್ತವವೂ ಅಲ್ಲವು. ಅಭಾವರೂಪವೂ ಎಂದರೆ ಎಂದೂ ತೋರದೆ ಇರುವಂಥದ್ದೂ ಅಲ್ಲವು. ಆದುದರಿಂದ ಅಧಿಷ್ಠಾನದ ಅಜ್ಞಾನದಿಂದ ತೋರಿದ್ದರ ಬಾಧವೂ ಭಾವರೂಪವೂ ಅಭಾವರೂಪವೂ ಆಗುವುದಿಲ್ಲವು. ಅದು ಭಾವಾಭಾವಗಳಿಗಿಂತ ವಿಲಕ್ಷಣವಾಗಿರುತ್ತದೆ. ಇದೂ ಅನಿರ್ವಚನೀಯವಾಗಿದೆ. ಇದರಂತೆ ಅಧಿಷ್ಠಾನದ ಅಜ್ಞಾನದಿಂದ ಕಲ್ಪಿತವಾಗಿದ್ದುದಕ್ಕೆ ಜ್ಞಾನದಿಂದ ಬಾಧೆಯುಂಟಾದಾಗ ಅಧ್ಯಸ್ತದ ಅಭಾವವಿರುತ್ತದೆ ಎನ್ನಲಾಗದು. ಏಕೆಂದರೆ ಅಭಾವಕ್ಕೆ ಪ್ರತಿಯೋಗಿಯಾಗಿರುವಿಕೆಯು ಜಗತ್ತಿಗೆ ಸಲ್ಲದು. ಘಟಾದ್ಯಭಾವಗಳಿಗೆ ಘಟಾದಿಗಳಂತೆ ಭಾವವಸ್ತುವೇ ಪ್ರತಿಯೋಗಿಯಾಗಿರಬಲ್ಲದು. ಜಗತ್ತು ಜ್ಞಾನಬಾಧ್ಯವಾಗುವುದರಿಂದ ಭಾವವಸ್ತುವಲ್ಲವು. ಅದು ಕುದುರೆಯ ಕೊಂಬಿನಂತೆ ಅಭಾವರೂಪವೂ ಅಲ್ಲವು. ಏಕೆಂದರೆ ಅಜ್ಞಾನದಶೆ

ಅಧಿಷ್ಠಾನಾವಶೇಷೋ ಹಿ ಕೇವಲಂ ಪಂಡಿತೋತ್ತಮಾಃ ।
ಜಗದ್ಭ್ರಮಸ್ಯಾಧಿಷ್ಠಾನಂ ಶಿವಸ್ಸತ್ಯ ಸ್ವಭಾವತಃ ॥೫೫॥

ತದನ್ಯದಖಿಲಂ ಭ್ರಾಂತಂ ಯುಕ್ತಿತಶ್ಚ ಪ್ರಮಾಣತಃ ।
ತಸ್ಮಾತ್ಸರ್ವ ಜಗದ್ಬಾಧೇ ಶಿವ ಏವಾವಶಿಷ್ಯತೇ ॥೫೬॥

ಯಲ್ಲಿ ಮಾತ್ರ ಅದು ತೋರುತ್ತಿರುತ್ತದೆ. ಹೀಗೆ ಬಾಧವೂ ಪ್ರತೀತಿಯೂ ಜಗತ್ತಿಗೆ ಇರುವುದರಿಂದ ಅದು ಭಾವಾಭಾವವಿಲಕ್ಷಣವಾದುದೆಂದು ಒಪ್ಪಬೇಕು. ಆದುದರಿಂದ ಅದು ಭಾವವಸ್ತುವಲ್ಲವಾದುದರಿಂದ ಅಭಾವಪ್ರತಿಯೋಗಿಯಾಗಲಾರದು. ||೫೩-೫೪||

ಆದುದದರಿಂದ ಅಧ್ಯಸ್ತವಾದುದಕ್ಕೆ ಬಾಧವೆಂದರೆ ಅಧಿಷ್ಠಾನ ಮಾತ್ರ ಉಳಿಯುವಿಕೆಯಾಗಿದೆ. ಜಗತ್ತಿನ ಭ್ರಾಂತಿಗೆ ಅಧಿಷ್ಠಾನವು ಸತ್ಯಸ್ವರೂಪನಾದ ಶಿವನೇ ಆಗಿರಬೇಕು. ಆ ಶಿವ ಹೊರತು ಉಳಿದುದೆಲ್ಲವೂ ಕೇವಲ ಭ್ರಾಂತಿಮೂಲಕವಾದುದೆಂದು ಯುಕ್ತಿಯಿಂದಲೂ ಶ್ರುತಿಪ್ರಮಾಣದಿಂದಲೂ ಗೊತ್ತಾಗಿದೆ. ಆದುದರಿಂದ ಅಧ್ಯಸ್ತವಾಗಿ ತೋರುವ ಜಗತ್ತಿಗೆ ಬಾಧವಾದರೆ ಅಧಿಷ್ಠಾನರೂಪನಾದ ಶಿವನೇ ಎಂದಿನಂತೆ ಉಳಿಯುತ್ತಾನೆ. ಯುಕ್ತಿಯು ಏನೆಂದರೆ ಜಗತ್ತು ಅಧ್ಯಸ್ತವಾಗದಿದ್ದರೆ ಜ್ಞಾನದಿಂದ ನಿವರ್ತ್ಯವೂ ಆಗದೆ ಹೋಗಬೇಕಾಗಿ ನಿತ್ಯವಾಗಿರಬೇಕಾಗುತ್ತದೆ. ಇದು ಅನುಭವವಿರುದ್ಧವಾಗಿದೆ. ಹಾಗೆಯೇ ದೃಶ್ಯವಾದುದೆಲ್ಲವೂ ಮಿಥ್ಯಾಭೂತವಾದುದು, ಶುಕ್ತಿಯಲ್ಲಿ ಅಧ್ಯಸ್ತವಾದ ಬೆಳ್ಳಿಯ ಹಾಗೆ, ಎಂಬುದು ಅನುಮಾನಪ್ರಮಾಣವು. “ ನೇಹ ನಾನಾಸ್ತಿ ಕಿಂಚನ” ಎಂದು ಶ್ರುತಿಯು. ಶುಕ್ತಿರಜತಪ್ರತೀತಿಯ ಸಂದರ್ಭದಲ್ಲಿ ಶುಕ್ತಿಯ ಅಜ್ಞಾನದಿಂದ ಅಲ್ಲಿ ಅಧ್ಯಸ್ತವಾಗಿ ತೋರುತ್ತಿದ್ದ ಬೆಳ್ಳಿಯು ಅಜ್ಞಾನ ಅಥವಾ ಮಾಯಾರೂಪವಾದುದರಿಂದ ಅದು ಭಾವಪದಾರ್ಥವಲ್ಲವು. ಅದಕ್ಕೆ ಅಭಾವ ಪ್ರತಿಯೋಗಿತ್ವವೂ ಕೂಡುವುದಿಲ್ಲವು. ಅಧಿಷ್ಠಾನವಾದ ಶುಕ್ತಿಯ ಜ್ಞಾನದಿಂದ ಆ ಬೆಳ್ಳಿಗೆ ಬಾಧವೆಂದರೆ ಅಧಿಷ್ಠಾನದ ಉಳಿಯುವಿಕೆಮಾತ್ರವೇ ಆಗಿರುತ್ತದೆಂದು ಒಪ್ಪಬೇಕು. ಅದರಂತೆ ಅಧ್ಯಸ್ತವಾಗಿ ತೋರುತ್ತಿದ್ದ ಜಗತ್ತಿನ ಬಾಧವೂ ಅಧಿಷ್ಠಾನ ರೂಪವಾಗಿ ಉಳಿಯುವಿಕೆ ಮಾತ್ರವಾಗಿರುತ್ತದೆ. ಅಭಾವಪ್ರತಿಯೋಗಿಯಾಗಿರುವಿಕೆಯೂ ಅದಕ್ಕೆ ಸಲ್ಲದೆಂದು ತಿಳಿಯಬೇಕು. ಎಂದು ತಾತ್ಪರ್ಯವು. ಬ್ರಹ್ಮನಲ್ಲಿ ಜಗತ್ತಿಲ್ಲವೆಂದು ಹೇಳುತ್ತಾ, ಜಗತ್ತು ಬ್ರಹ್ಮರೂಪವಾದ ಅಧಿಷ್ಠಾನದಲ್ಲಿ ಅಧ್ಯಸ್ತವಾಗಿ ತೋರುತ್ತಾ ಇದ್ದು ಜ್ಞಾನದಿಂದ ನಿವೃತ್ತವಾಗಲು, ಶಿವನೊಬ್ಬನೇ ಎಂದಿನಂತೆ ಉಳಿಯುತ್ತಾನೆ. ಎಂದು ಭಾವವು. ||೫೫-೫೬||

ಶಿವಾವಶೇಷಂ ಸರ್ವಸ್ಯ ಜಗತಶ್ಶ್ರುತಿರಾದರಾತ್ ।
ವಕ್ತಿ ತತ್ರ ನ ಸಂದೇಹಃ ತ್ರಿರ್ವಃ ಶಪಥಯಾಮ್ಯಹವಮ್ ॥೫೭॥

ತಸ್ಮಾತ್ಸತ್ಯಪರಾನಂದಪ್ರಕಾಶಾದ್ವೈತಮೀಶ್ವರಮ್ ।
ಬೋಧಯಂತ್ಯಾದರೇಣೈವ ಶ್ರುತಯಸ್ಸ್ಮೃತಿಭಿಸ್ಸಹ . ॥೫೮॥

ಏಕತ್ವಬೋಧಕಸ್ಯಾಸ್ಯ ವೇದವಾಕ್ಯಸ್ಯ ಸುವ್ರತಾಃ ।
ವಾಕ್ಯಾಂತರಾಣಿ ಸರ್ವಾಣಿ ಶೇಷಭೂತಾನಿ ಸಂತತಮ್ ॥೫೯॥

ವೇದೋ ನಾನ್ಯಸ್ಯ ಶೇಷಸ್ತು ಯಥಾ ದೇವೋ ಮಹೇಶ್ವರಃ ।
ಶಿವಸ್ಯ ಶೇಷಂ ಸಕಲಂ ಶ್ರುತಿರ್ಮಾನಾನಿ ಸರ್ವಶಃ ॥೬೦॥

ಎಲ್ಲ ಜಗತ್ತಿಗೂ ಶಿವನೇ ಶೇಷವಾಗಿ ಪ್ರಲಯ ಮೋಕ್ಷಗಳಲ್ಲಿ ಉಳಿಯುತ್ತಾನೆಂದು ಶ್ರುತಿಯು ಆದರದಿಂದ ಸಾರಿಹೇಳುತ್ತದೆಂದು ಅನೇಕಾವೃತ್ತಿ ಶಪಥಪೂರ್ವಕವಾಗಿ ಹೇಳುತ್ತೇನೆ. ಆದುದರಿಂದ ಸಚ್ಚಿದಾನಂದರೂಪನಾದ ಪರಶಿವನೊಬ್ಬನೇ ಎಂಬ ಅದ್ವೈತವನ್ನು ಎಂದರೆ ಎರಡನೆಯವನಿಲ್ಲದವನೆಂದು, ಜೀವಬ್ರಹ್ಮೈಕ್ಯವನ್ನು ಶ್ರುತಿಗಳೂ ಸ್ಮೃತಿಗಳೂ ಏಕಾಭಿಪ್ರಾಯದಿಂದ ಸಾರುತ್ತಿವೆ. ||೫೭-೫೮||

ಜೀವಸ್ವರೂಪವನ್ನು ತಿಳಿಸುವ, ತ್ವಂಪದಾರ್ಥವನ್ನು ಬೋಧಿಸುವ ವಾಕ್ಯಗಳೂ, ತತ್‌ಪದಾರ್ಥವೆಂದರೆ ಜಗತ್ಕಾರಣವಾದ ಈಶ್ವರಸ್ವರೂಪವನ್ನು ತಿಳಿಸುವ ವಾಕ್ಯಗಳೂ, ಏಕತ್ವವನ್ನು ಎಂದರೆ ಬ್ರಹ್ಮಾತ್ಮೈಕ್ಯವನ್ನು ತಿಳಿಸುವ ಮಹಾವಾಕ್ಯಗಳಿಗೆ ಅಂಗವಾದುವು. ಏಕೆಂದರೆ ಫಲವತ್ಸನ್ನಿಧೌ ಅಫಲಂ ತದಂಗಂ, ಎಂದು ಪೂರ್ವಮೀಮಾಂಸಾಶಾಸ್ತ್ರದಲ್ಲಿ ಹೇಳಿರುವಂತೆ ಫಲವುಳ್ಳ ವಾಕ್ಯದ ಸಮೀಪದಲ್ಲಿರುವ ಫಲವಿಲ್ಲದ ವಾಕ್ಯಗಳೆಲ್ಲವೂ ಫಲವುಳ್ಳ ವಾಕ್ಯಕ್ಕೆ ಅಂಗವೆಂದು ಮೀಮಾಂಸಾನ್ಯಾಯವು. ತ್ವಂ ಪದಾರ್ಥಜ್ಞಾನವೂ ತತ್ಪದಾರ್ಥಜ್ಞಾನವೂ ಫಲವಾಗವು. ಏಕೆಂದರೆ ಅದರಿಂದ ದುಃಖಾತ್ಯಂತನಿವೃತ್ತಿ ಅಥವಾ ಪರಮಸುಖಪ್ರಾಪ್ತಿರೂಪವಾದ ಫಲವು ಉಂಟಾಗದು. ಬ್ರಹ್ಮಾತ್ಮೈಕ್ಯಜ್ಞಾನದಿಂದಲಾದರೋ ಅಂಥ ಫಲವಾಗುತ್ತದೆ. ಹಾಗೆಯೇ ಇತರ ದರ್ಶನಗಳ ವಾಕ್ಯಗಳೂ ಏಕತ್ವಬೋಧಕವಾಕ್ಯಕ್ಕೆ ಅಂಗವು. ಹೇಗೆಂದರೆ ಕರ್ಮಕಾಂಡದ ವಾಕ್ಯಗಳು ಕರ್ಮಾನುಷ್ಠಾನದಿಂದ ಚಿತ್ತಶುದ್ಧಿಗೆ ಕಾರಣವಾಗಿ ಜ್ಞಾನಪ್ರಾಪ್ತಿಗೆ ಸಹಾಯವಾಗುತ್ತವೆ. ಸಾಂಖ್ಯದರ್ಶನವು ಜೀವನಿಗೆ ಕರ್ತೃತ್ವಾಭಾವವನ್ನು ತಿಳಿಸುತ್ತದೆ. ಯೋಗವಾಕ್ಯಗಳು ಚಿತ್ತೈಕಾಗ್ರ್ಯಕ್ಕೆ ಸಹಾಯವಾಗುತ್ತವೆ. ನ್ಯಾಯ

ಯಥಾ ಮಾತಾ ಸ್ವಪುತ್ರಸ್ಯ ಸತ್ಯಮೇವಾಭಿಭಾಷತೇ ।
ತಥಾ ಸರ್ವಜನಸ್ಯಾಪಿ ಸತ್ಯಂ ವದತಿ ಹಿ ಶ್ರುತಿಃ ॥೬೧॥

ಶ್ರುತೌ ಚಾಪಿ ಮಹಾದೇವೇ ತ್ರಿಪುಂಡ್ರೇ ಭಸ್ಮಗುಂಠನೇ ।
ಶ್ರದ್ಧಾಂ ನ ಕುರುತೇ ಮರ್ತ್ಯಃ ಪುಣ್ಯಲೇಶವಿವರ್ಜಿತಃ ॥೬೨॥

ಪಾಪಿಷ್ಠಾನಾಂ ಮನುಷ್ಯಾಣಾಂ ತ್ರಿಪುಂಡ್ರೋದ್ಧೂಳನೇ ಶ್ರುತೌ ।
ಮಹಾದೇವೇ ಚ ವಿದ್ವೇಷಃ ಸ್ವತ ಏವ ವಿಜಾಯತೇ ॥೬೩॥

ವೇದೋತ್ಕರ್ಷೇ ಶಿವೋತ್ಕರ್ಷೇ ವಿದ್ಯೋತ್ಕರ್ಷೇ ತಥೈವ ಚ
ತ್ರಿಪುಂಡ್ರೋದ್ಧೂಳನೋತ್ಕರ್ಷೇ ಶ್ರದ್ಧಾ ಪುಣ್ಯವತಾಂ ಭವೇತ್॥೬೪॥

ಅವಿರೋಧೇ ತು ವೇದಾನಾಂ ಪೂರ್ವೋಕ್ತೇನೈವ ವರ್ತ್ಮನಾ ।
ವೇದಾನುಸಾರಿಸ್ಮೃತ್ಯಾದೌ ಪಾಪಿಷ್ಠಸ್ಯ ನ ಹಿ ಸ್ಪೃಹಾ ॥೬೫॥

ಶಾಸ್ತ್ರದ ವಾಕ್ಯಗಳು ಆತ್ಮನಿಗಿಂತ ಇತರ ವಸ್ತುಜ್ಞಾನವನ್ನುಂಟುಮಾಡಿ ಅವುಗಳಿಗಿಂತ ಆತ್ಮನು ಭಿನ್ನನೆಂದು ತಿಳಿಯಲು ಸಹಾಯಮಾಡುತ್ತವೆ. ಬೌದ್ಧದರ್ಶನವಾಕ್ಯಗಳೂ ಜಗದನಿತ್ಯತ್ವವನ್ನೂ ದುಃಖರೂಪತ್ವವನ್ನೂ ತಿಳಿಸಿ ವೈರಾಗ್ಯಕ್ಕೆ ಸಹಾಯಮಾಡುತ್ತವೆ. ಹೀಗೆ ಎಲ್ಲ ದರ್ಶನಗಳೂ ವೇದವಾಕ್ಯಕ್ಕೆ ಅಂಗಗಳು. ವೇದವು ಶಿವನನ್ನು ಬೋಧಿಸಿ ಇತರ ವಾಕ್ಯಗಳಿಗೆ ಅಂಗವಲ್ಲವು. ಹಾಗೆಯೇ ಶಿವನೂ ಇತರ ವಾಕ್ಯಾರ್ಥಕ್ಕೆ ಅಂಗವಲ್ಲವು. ಆದ್ದರಿಂದ ಶಿವನಿಗೆ ಎಲ್ಲವೂ ಶೇಷಭೂತವು, ಅಂಗವಾದುದು. ಶಿವನೇ ಎಲ್ಲಕ್ಕೂ ಪ್ರಧಾನವಾದವನು. ಎಲ್ಲಕ್ಕೂ ಮುಖ್ಯತಾತ್ಪರ್ಯವಿಷಯನು. ಇತರ ಪ್ರಮಾಣಗಳು ಎಂದರೆ ಆಗಮಗಳೂ, ಪುರಾಣಗಳೂ, ದರ್ಶನಗಳೂ ಶ್ರುತ್ಯರ್ಥ ಜ್ಞಾನಕ್ಕೆ ಅಂಗವಾಗಿವೆ. ॥೫೯-೬೦॥

ತಾಯಿಯು ಹೇಗೆ ತನ್ನ ಮಗನಿಗೆ ನಿಜವನ್ನೇ ಹೇಳುತ್ತಾಳೋ ಹಾಗೆ ಎಲ್ಲ ಜನರಿಗೂ ತಾಯಿಯಂತಿರುವ ಶ್ರುತಿಯು ಸತ್ಯವನ್ನೇ ಹೇಳುತ್ತದೆ. ಶ್ರುತಿಯಲ್ಲೂ, ಪರಶಿವನಲ್ಲೂ ತ್ರಿಪುಂಡ್ರದಲ್ಲೂ, ಭಸ್ಮೋದ್ಧೂಳನದಲ್ಲೂ ಯಾರು ನಂಬಿಕೆಯಿಲ್ಲದವರೋ ಅಂಥವರು ಸ್ವಲ್ಪವೂ ಪುಣ್ಯವಿಲ್ಲದವರು. ॥೬೧-೬೨॥

ಪಾಪಿಗಳಾದ ಮಾನವರಿಗೆ ವೇದದಲ್ಲೂ, ತ್ರಿಪುಂಡ್ರೋದ್ಧೂಳನದಲ್ಲೂ, ಪರಶಿವನಲ್ಲೂ, ದ್ವೇಷವು ತಾನಾಗಿಯೇ ಉಂಟಾಗುತ್ತದೆ. ಪುಣ್ಯಶಾಲಿಗಳಾದ

ವಿಷ್ಣ್ವಾದೇಶ್ಶಿವಸಾಮ್ಯತ್ವೇ ವೇದಸಾಮ್ಯೇ ಪರಸ್ಯ ಚ ।
ಕುರ್ವಂತೀಚ್ಛಾಮವಿದ್ವಾಂಸಃ ಪಾಪಮೇವಾತ್ರ ಕಾರಣಂ ॥೬೬॥

ವೇದಾನಾಮುಪಕರ್ಷೇ ತು ತ್ರಿಪುಂಡ್ರಾದೇಸ್ತಥೈವ ಚ ।
ತಥಾ ಶಿವಾಪಕರ್ಷೇ ಚ ಯತಂತೇ ಪಾಪಯೋನಯಃ ॥೬೭॥

ಮಹಾದೇವಶ್ಚ ವೇದಾಶ್ಚ ತಥಾ ತಿರ್ಯಕ್ತ್ರಿಪುಂಡ್ರಕಮ್ ।
ವ್ಯರ್ಥಮಿತ್ಯಾಹುರತ್ಯರ್ಥಂ ಪಾಷಂಡಾಃ ಪಾಪಯೋನಯಃ ॥೬೮॥

ಮಹಾದೇವಸ್ಯ ಮಾಹಾತ್ಮ್ಯಂ ವೇದಾನಾಮಪಿ ವೈಭವಮ್ ।
ತ್ರಿಪುಂಡ್ರಸ್ಯ ಚ ಮಾಹಾತ್ಮ್ಯಂ ನ ಶಕ್ಯಂ ವರ್ಣಿತುಂ ಮಯಾ॥೬೯॥

ಮನುಷ್ಯರಿಗಾದರೋ ವೇದದ ಮೇಲ್ಮೆಯಲ್ಲೂ, ಶಿವನ ಶ್ರೇಷ್ಠತ್ವದಲ್ಲೂ, ಬ್ರಹ್ಮ ವಿದ್ಯೆಯ ಹೆಚ್ಚುಗಾರಿಕೆಯಲ್ಲೂ ನಂಬಿಕೆಯು ಯಥಾರ್ಥವಿಷಯಕವಾದುದರಿಂದ ತಾನಾಗಿಯೇ ಉಂಟಾಗುತ್ತದೆ. ||೬೩-೬೪||

ವೇದವಾಕ್ಯಗಳಿಗೆ ಹಿಂದೆ ಹೇಳಿದಂತೆ ವಿರೋಧವಿಲ್ಲದಿರುವಿಕೆಯಲ್ಲೂ, ವೇದಕ್ಕೆ ಅನುಸಾರವಾಗಿರುವ ಸ್ಮೃತಿ, ಆಗಮ, ಪುರಾಣ–ಮುಂತಾದವುಗಳಿಗೂ ವಿರೋಧವಿಲ್ಲವೆಂಬ ಅಂಶದಲ್ಲೂ ಪಾಪಿಯಾದವನಿಗೆ ಇಚ್ಛೆಯುಂಟಾಗದು. ವಿಷ್ಣು ಬ್ರಹ್ಮಾದಿಗಳೂ ಶಿವನಿಗೆ ಸಮಾನರೆಂಬಂಶದಲ್ಲೂ, ಪರಶಿವನಿಗೆ ವೇದವು ಬೋಧಕ ವಾದುದರಿಂದ ಅಂಗವಾದುದೆಂಬ ತಿಳಿವಳಿಕೆಗೆ ಬದಲು ಸಮವಾದುದೆಂಬ ತಿಳಿವಳಿ ಕೆಯಲ್ಲೂ ಅಜ್ಞಾನಿಗಳು ಅಪೇಕ್ಷೆಯುಳ್ಳವರಾಗಿರುತ್ತಾರೆ. ಅದಕ್ಕೆ ಅವರ ಪಾಪವೇ ಕಾರಣವು. ||೬೫-೬೬||

ವೇದಗಳೂ, ತ್ರಿಪುಂಡ್ರಗಳೂ, ಪರಶಿವನೂ, ಶ್ರೇಷ್ಠವಲ್ಲವೆಂದು ಸ್ಥಾಪಿಸಲು ಪಾಪದಿಂದ ಜನ್ಮಪಡೆದಿರುವ ಜನರು ಪ್ರಯತ್ನಿಸುತ್ತಾರೆ. ಪರಶಿವನೂ, ವೇದಗಳೂ, ತಿರ್ಯಕ್ (ಅಡ್ಡಲಾಗಿ) ತ್ರಿಪುಂಡ್ರವೂ ನಿಷ್ಫಲವಾದುವೆಂದು ಯಾರು ಅತಿಯಾಗಿ ಹೇಳುತ್ತಾರೋ ಅಂಥವರು ಪಾಪದದೆಶೆಯಿಂದ ಜನ್ಮವನ್ನು ಪಡೆದಿರುವವರು. ಮಹಾದೇವನ ಮಹಿಮೆಯನ್ನೂ, ವೇದಗಳ ಮೇಲ್ಮೆಯನ್ನೂ, ತ್ರಿಪುಂಡ್ರದ ಹೆಚ್ಚು ಗಾರಿಕೆಯನ್ನೂ, ಸಂಪೂರ್ಣವಾಗಿ ವಿವರಿಸುವುದು ನನಗೂ ಸಾಧ್ಯವಾದುದಲ್ಲವು. ||೬೭-೬೮-೬೯||

ಕರ್ಮಶೇಷತ್ವಮಾಯಾಸಾ ತ್ ಬ್ರಹ್ಮಕಾಂಡಸ್ಯ ಕೇಚನ ।
ವರ್ಣಯಂತಿ ನ ತೇ ಸಂತಃ ಕಿಂ ತು ತೇ ವಿಪ್ರಲಂಭಕಾಃ ॥೨೦॥

ಕರ್ತೃತ್ವಂ ಚೈವ ಭೋಕ್ತೃತ್ವಂ ನಿಯೋಜ್ಯತ್ವಂ ಕ್ರಿಯಾಫಲಮ್ ।
ಗ್ರಸತೇ ಬ್ರಹ್ಮವಿಜ್ಞಾನಂ ತತಸ್ತಚ್ಛೇಷತಾಽಸ್ಯ ನ ॥೨೧॥

ಅಲ್ಪಲಾಭಪ್ರದಂ ಕರ್ಮ ಜ್ಞಾನಂ ಪೂರ್ಣಫಲಪ್ರದಮ್ ।
ತಥಾ ಸತಿ ಮುನಿಶ್ರೇಷ್ಠಾಃ ತಚ್ಛೇಷತ್ವಂ ಕಥಂ ಭವೇತ್ ॥೨೨॥

ಬ್ರಹ್ಮಸ್ವರೂಪವನ್ನು ತಿಳಿಸುವ ವೇದಭಾಗವಾದ ಉಪನಿಷತ್ತುಗಳಿಗೆ ಕರ್ಮ ಕಾಂಡದಲ್ಲಿ ಹೇಳಿರುವ ಯಾಗ ಉಪಾಸನಾ ಮುಂತಾದ ಕರ್ಮಗಳಿಗೆ ಉಪಾಸ್ಯ ದೇವತಾಸ್ವರೂಪವನ್ನು ತಿಳಿಸುವುದರಿಂದ ಅಂಗವಾಗಿದೆ ಎಂದು ಮೀಮಾಂಸಕರು ಹೇಳುತ್ತಾರೆ. ಅದು ಬರಿಯ ಆಯಾಸವೇ ಹೊರತು ಸಿದ್ಧಾಂತವಾಗಿರದೆ ನಿಷ್ಫಲ ವಾಗಿರುತ್ತದೆ. ಹಾಗೆ ಹೇಳುವವರು ಸತ್ಪುರುಷರಲ್ಲವು. ಮತ್ತೇನೆಂದರೆ ಅವರು ತಮಗೂ ಇತರರಿಗೂ ವಂಚಕರು. ||೨೦||

ದೇಹೇಂದ್ರಿಯಾದಿಗಳಿಗಿಂತ ಭಿನ್ನವಾದ ಆತ್ಮನೇ ಕರ್ತೃವೂ, ಯಾಗಫಲ ವಾದ ಸುಖದುಃಖಗಳಿಗೆ ಭೋಕ್ತೃವೂ ವಿಧಿವಾಕ್ಯಗಳಿಂದ ಯಾಗಾದಿ ಧರ್ಮಾಚರಣೆ ಯಲ್ಲಿ ನಿಯೋಜ್ಯನೂ, ಆಗಿದಾನೆ. ಹಾಗೆಯೇ, ಯಾಗ, ಉಪಾಸನಾದಿಗಳಿಗೆ ಫಲ ವಾದ ಸುಖವೂ ಇದೆ. ಎಂದು ಮೀಮಾಂಸಕರು ಹೇಳುತ್ತಾರೆ. ಅದು ಸರಿಯಲ್ಲವು. ಏಕೆಂದರೆ ಬ್ರಹ್ಮಜ್ಞಾನವು ಈ ಭಾವಗಳನ್ನು ನುಂಗಿಬಿಡುತ್ತದೆ. ಹೇಗೆಂದರೆ, ಆತ್ಮನು ಸ್ವರೂಪದಲ್ಲಿ ಕರ್ತೃವೂ, ಭೋಕ್ತೃವೂ, ನಿಯೋಜ್ಯನೂ, ಅಲ್ಲವು; ಫಲವೂ ಪರ ಮಾರ್ಥವಾದುದಾಗಿ ಇಲ್ಲವು. ಕ್ರಿಯಾ, ಸುಖದುಃಖಗಳು, ಧರ್ಮಾಚರಣ ನಿರ್ಬಂ ಧವೂ ಅವನಿಗೆ ತಗಲಲಾರವು. ಅವನಿಗೆ ಹೊರಗಿನಿಂದ ಪ್ರಾಪ್ಯವಾದ ಫಲವೂ ಇಲ್ಲವು. ಎಂದು ಉಪನಿಷತ್ತಿನಿಂದ ತಿಳಿದರೆ, ಕ್ರಿಯಾಕಾರಕ ಫಲಜ್ಞಾನವು ಲೀನವಾಗುತ್ತದೆ. ಆದುದರಿಂದ ನಿರ್ವಿಕಾರಿಯಾದ ಆತ್ಮನು ಕರ್ಮಕ್ಕೆ ಅಂಗವಾಗಲಾರನು. ||೨೧||

ಕರ್ಮವು ಅಲ್ಪವಾದ ಎಂದರೆ ಮೋಕ್ಷಕ್ಕಿಂತಲೂ ಕಡಿಮೆಯಾದ ಐಹಿಕ ಆಮುಷ್ಮಿಕ ಫಲಗಳನ್ನು ಕೊಡುವಂಥದು. ಬ್ರಹ್ಮಾತ್ಮೈಕ್ಯಜ್ಞಾನವು ಪೂರ್ಣವಾದ ಉತ್ತಮವಾದ ಮೋಕ್ಷರೂಪ ಫಲವನ್ನು ಕೊಡುತ್ತದೆ. ಆದುದರಿಂದ ಓ ಋಷಿ ಶ್ರೇಷ್ಠರೇ, ಜ್ಞಾನವು ಹೇಗೆತಾನೆ ಕರ್ಮಕ್ಕೆ ಅಂಗವಾದೀತು ? ||೨೨||

ಫಲವತ್ಕರ್ಮಶೇಷತ್ವಂ ಅಫಲಸ್ಯ ಹಿ ಸಿಧ್ಯತಿ ।
ಫಲವದ್ಧಿ ಪರಂ ಜ್ಞಾನಂ ತತಸ್ತಚ್ಛೇಷತಾಽಸ್ಯ ನ ॥೭೩॥

ಕರ್ಮಪ್ರಕರಣಸ್ಥಂ ಹಿ ಜ್ಞಾನಂ ಕರ್ಮಾಂಗಮಿಷ್ಯತೇ ।
ಭಿನ್ನಪ್ರಕರಣಂ ಜ್ಞಾನಂ ತತಸ್ತಚ್ಛೇಷತಾಽಸ್ಯ ನ ॥೭೪॥

ಕರ್ಮಸಾಧ್ಯಫಲಂ ಜ್ಞಾನಂ ಬ್ರಹ್ಮ ಸಿದ್ಧಫಲಂ ಬುಧಾಃ ।
ತಥಾ ಸತಿ ಮುನಿಶ್ರೇಷ್ಠಾಃ ತಚ್ಛೇಷತ್ವಂ ಕಥಂ ಭವೇತ್ ॥೭೫॥

ಅಧಿಕಾರಿವಿಭೇದೇನ ಪ್ರವೃತ್ತಂ ಮುನಿಪುಂಗವಾಃ ।
ಕಾಂಡದ್ವಯಮತೋಽನ್ಯಸ್ಯ ಕಥಮನ್ಯದ್ಗುಣೋ ಭವೇತ್ ॥೭೬॥

ಫಲವಿಲ್ಲದೆ ಹೇಳಿರುವ ಕರ್ಮಗಳು ಫಲದೊಡನೆ ಹೇಳಿರುವ ಕರ್ಮಗಳಿಗೆ ಅಂಗಗಳಾಗಿರುತ್ತವೆ. ಪ್ರಯಾಜಾದಿ ಕರ್ಮಗಳು ದರ್ಶಪೂರ್ಣಮಾಸಕರ್ಮಕ್ಕೆ ಅಂಗಗಳಾಗಿವೆ. ಶ್ರೇಷ್ಠವಾದ ಬ್ರಹ್ಮಾತ್ಮೈಕ್ಯಜ್ಞಾನವೂ ಮೋಕ್ಷರೂಪವಾದ ಪರಮಫಲವುಳ್ಳದ್ದೆಂದು ಗೊತ್ತಾಗಿದೆ. ಆದುದರಿಂದಲೂ ಬ್ರಹ್ಮಾತ್ಮೈಕ್ಯದ ಜ್ಞಾನವು ಇನ್ನೊಂದಕ್ಕೆ ಅಂಗವಾಗಲಾರದು. ॥೭೩॥

ಬ್ರಹ್ಮಾತ್ಮೈಕ್ಯದ ಜ್ಞಾನವು ಕರ್ಮಪ್ರಕರಣದಲ್ಲಿಯೇ ಹೇಳಲ್ಪಟ್ಟಿದ್ದರೆ ಅದೂ ಕರ್ಮಕ್ಕೆ ಅಂಗವೆನ್ನಬಹುದಾಗಿತ್ತು. ಆದರೆ ಜ್ಞಾನವು ಕರ್ಮಕ್ಕಿಂತಲೂ ಬೇರೆಯಾದ ಜ್ಞಾನಕಾಂಡದ ಪ್ರಕರಣದಲ್ಲಿ ಹೇಳಲ್ಪಟ್ಟಿದೆ. ಆದುದರಿಂದ ಕರ್ಮಶೇಷತ್ವವನ್ನು ಜ್ಞಾನಕ್ಕೆ ಹೇಳಲಾಗುವುದಿಲ್ಲ. ॥೭೪॥

ಕರ್ಮವು ಸಾಧ್ಯವಾದ ಸ್ವರ್ಗಾದಿಫಲವುಳ್ಳದ್ದು. ಓ ಪಂಡಿತರಾ, ಜ್ಞಾನವಾದರೋ ಸರ್ವದಾ ಸಿದ್ಧವೇ ಆದ ಆತ್ಮಸ್ವರೂಪದ ಸಾಕ್ಷಾತ್ಕಾರರೂಪವಾಗಿದೆ. ಮತ್ತು ಅದು ಸಿದ್ಧವಾದ ಫಲವುಳ್ಳದ್ದು. ಆದುದರಿಂದ ಓ ಮುನಿಶ್ರೇಷ್ಠರೇ, ಹಾಗಿರಲಾಗಿ ಜ್ಞಾನಕ್ಕೆ ಕರ್ಮಾಂಗತ್ವವು ಹೇಗೆತಾನೇ ಸಂಭವಿಸೀತು ? ॥೭೫॥

ಕರ್ಮಕಾಂಡ, ಜ್ಞಾನಕಾಂಡ ಇವೆರಡೂ ಬೇರೆ ಬೇರೆ ಅಧಿಕಾರಿಗಳನ್ನು ಉದ್ದೇಶಮಾಡಿಕೊಂಡು ಹೊರಟಿವೆ. ವೃಷ್ಟಿ, ಸ್ವರ್ಗ—ಮುಂತಾದ ಐಹಿಕ, ಆಮುಷ್ಮಿಕ ಫಲಗಳಲ್ಲಿ ಆಶೆಯುಳ್ಳವರು ಕರ್ಮಕಾಂಡಕ್ಕೆ ಅಧಿಕಾರಿಗಳು. ಹಾಗೆಯೇ ಐಹಿಕ, ಆಮುಷ್ಮಿಕ ಫಲಗಳಲ್ಲಿ ಆಶೆಯಿಲ್ಲದೆ, ಈ ಸಂಸಾರದಿಂದ ಬಿಡುಗಡೆಯಲ್ಲಿ ಆಸಕ್ತರಾದವರು ಜ್ಞಾನಕಾಂಡಕ್ಕೆ ಅಧಿಕಾರಿಗಳು. ಆದುದರಿಂದ ಜ್ಞಾನವು ಕರ್ಮಕ್ಕೆ ಅಂಗವಾಗದು. ॥೭೬॥

ಕರ್ಮಾಜ್ಞಾನಸ್ಯ ಸದ್ಭಾವೇ ನ ತಥಾ ಬ್ರಹ್ಮವೇದನಮ್ ।
ತಥಾ ಸತಿ ಕಥಂ ವಿಪ್ರಾಃ ಜ್ಞಾನಕರ್ಮ ಸಮುಚ್ಚಯಃ ॥೭೭॥

ಅಪ್ರಕಾಶಾತ್ಮಕಂ ಕರ್ಮ ಸ್ವಪ್ರಕಾಶಂ ತು ವೇದನಮ್ ।
ತಥಾ ಸತಿ ಕಥಂ ವಿಪ್ರಾ ಜ್ಞಾನಕರ್ಮಸಮುಚ್ಚಯಃ ॥೭೮॥

ತಸ್ಮಾದ್ವೇದಾಂತಭಾಗಸ್ತು ಬ್ರಹ್ಮ ಕಾಂಡಸಮಾಹ್ವಯಃ ।
ಸರ್ವಥಾ ಕರ್ಮಕಾಂಡಸ್ಯ ನೈವ ಶೇಷಃ ಕದಾಚನ ॥೭೯॥

ಯಾಗಾದಿ ಕರ್ಮವೆಲ್ಲವೂ ಆತ್ಮಸ್ವರೂಪದ ಅಜ್ಞಾನವಿರುವಾಗ ಮಾತ್ರ ಆಚರಿಸಲು ಬರುತ್ತದೆ. ಆತ್ಮಸ್ವರೂಪವು ಕರ್ತೃತ್ವಭೋಕ್ತೃತ್ವ ಮುಂತಾದ ವಿಕಾರ ಗಳಿಲ್ಲದ್ದು. ಕರ್ಮವೂ ಜ್ಞಾನದ ಅಭಾವವೂ ಒಟ್ಟಿಗೆ ಇರಬಹುದು. ಆದರೆ ಬ್ರಹ್ಮ ಜ್ಞಾನವು ಉಂಟಾಗುತ್ತಿದ್ದ ಹಾಗೆಯೇ, ಆತ್ಮಸ್ವರೂಪದ ಅಜ್ಞಾನವನ್ನು ನಾಶಮಾಡಿ ಕೊಂಡೇ ಉಂಟಾಗುತ್ತದೆ. ಹಾಗಿರಲು ಓ ಬ್ರಾಹ್ಮಣರಾ, ಜ್ಞಾನಕ್ಕೂ ಕರ್ಮಕ್ಕೂ ಮೋಕ್ಷವೆಂಬ ಫಲವನ್ನುಂಟುಮಾಡುವುದರಲ್ಲಿ ಸಹಕಾರವು ಸಂಭವಿಸದು. ವೃತ್ತಿ ರೂಪಜ್ಞಾನದ ಉತ್ಪತ್ತಿಯಲ್ಲಿ ಕರ್ಮವು ಕಾರಣವೇ ಹೌದು. ಫಲರೂಪಜ್ಞಾನವು ಎಂದರೆ ಸ್ವರೂಪಜ್ಞಾನಕ್ಕೆ ಅದು ಕಾರಣವಾಗಲಾರದು. ಉತ್ಪತ್ತಿಕ್ಷಣದಲ್ಲಿ ಮಾತ್ರ ಕರ್ಮಜ್ಞಾನಗಳು ಒಟ್ಟಿಗೆ ಇರುತ್ತವೆನ್ನಬಹುದಾದರೂ ಆಮೇಲೆ ಇರಲಾರವು.॥೭೭॥

ಕರ್ಮವು ಕರ್ತೃ, ಕರ್ಮ, ಫಲ, ಎಂಬ ಭೇದವನ್ನು ಅವಲಂಬಿಸಿರುವ ಅಜ್ಞಾನಕಾರ್ಯವಾದುದರಿಂದ, ಜಡವಾದುದರಿಂದ, ಅಪ್ರಕಾಶರೂಪವಾದುದು. ಜ್ಞಾನವಾದರೋ ಸ್ವಪ್ರಕಾಶರೂಪವಾದುದು. ಆದುದರಿಂದ ಅವೆರಡಕ್ಕೂ ಸಮುಚ್ಚ ಯವು ಎಂದರೆ ಒಟ್ಟಿಗಿರುವಿಕೆಯು, ಒಂದು ಫಲಕ್ಕೆ ಸಾಧನವಾಗುವಿಕೆಯು, ಸಂಭವಿ ಸುವುದಿಲ್ಲವು. ಇಲ್ಲಿ ಕರ್ಮವೆಂದರೆ ಲೌಕಿಕವಾದ, ವ್ಯಾವಹಾರಿಕವಾದ ಕರ್ಮವಲ್ಲವು. ಅದರಲ್ಲಿ ಚೇತನಾಚೇತನಗಳಿಗೆ ಸಮುಚ್ಚಯವಿದೆ. ಅದು ಇಷ್ಟವೂ ಆಗಿದೆ. ಮತ್ತೇ ನೆಂದರೆ ಯಾವಜ್ಜೀವಾದಿ ಶ್ರುತಿಬೋಧಿತವಾದ ಅಗ್ನಿಹೋತ್ರಾದಿ ಕರ್ಮಗಳು. ಅವಕ್ಕೆ ಅಂಗವಾಗಿರುವ ಸಂಬಂಧವಿಲ್ಲದೆ ಜ್ಞಾನಕ್ಕೇ ಸ್ವತಂತ್ರವಾದ ಸ್ಥಾನವಿಲ್ಲವೆಂದು ಮೀಮಾಂಸಕರು ಆಕ್ಷೇಪಮಾಡುತ್ತಾರೆ. ಹಾಗೆಯೇ ಜ್ಞಾನವೆಂದರೆ ಕರ್ತೃತ್ವ ಭೋಕ್ತೃತ್ವ ಸುಖಿತ್ವದುಃಖಿತ್ವರಹಿತನಾದವನು ಆತ್ಮನು, ಸುಖವು ಕರ್ಮಾದಿ ಗಳಿಂದ ಸಾಧ್ಯವೂ ಪ್ರಾಪ್ಯವೂ ಅಲ್ಲವು ಎಂಬ ಜ್ಞಾನವು, ಅರ್ಥವಾಗಿದೆ. ಆದುದ ರಿಂದ ಇವೆರಡಕ್ಕೂ ಸಹಕಾರವಾಗಲಿ, ಜತೆಯಲ್ಲಿರುವುದಾಗಲಿ, ಕತ್ತಲೆ ಬೆಳಕುಗಳಿಗೆ

ತಥೈವ ಕರ್ಮಭಾಗಶ್ಚ ಬ್ರಹ್ಮ(ಭಾಗ)ಕಾಂಡಸ್ಯ ಸರ್ವಥಾ ।
ನ (ಸ)ಸಾಕ್ಷಾದೇವ ಶೇಷಃ ಸ್ಯಾತ್ ಜ್ಞಾನಂ ವೇದಾಂತವಾಕ್ಯಜಮ್ ॥೮೦॥

ಶಾಂತಿದಾಂತ್ಯಾದಯಸ್ಸರ್ವೇ ಗುಣಾ ಏವ ಮುನೀಶ್ವರಾಃ ।
ಅಂಗಾನಿ ಬ್ರಹ್ಮವಿದ್ಯಾಯಾಃ ಶ್ರವಣಂ ಕರಣಂ ಬುಧಾಃ ॥೮೧॥

ವಿದ್ಯಾಫಲೋಪಕಾರಿ ಸ್ಯಾತ್ ಮನನಂ ಚಿಂತನಂ ತಥಾ ।
ಜ್ಞಾನಮಜ್ಞಾನವಿಚ್ಛಿತ್ತೌ ನ ಸಹಾಯಮಪೇಕ್ಷತೇ ॥೮೨॥

ಹೇಗೋ ಹಾಗೆ, ಸಂಭವಿಸುವುದಿಲ್ಲ. ಆದ್ದರಿಂದ ವೇದಾಂತಭಾಗವು ಕರ್ಮಕಾಂಡಕ್ಕೆ ಯಾವಾಗಲೂ ಅಂಗವಾಗಲಾರದು. ||೭೮-೭೯||

ಹಾಗೆಯೇ ಕರ್ಮಕಾಂಡವೂ ಜ್ಞಾನಕಾಂಡಕ್ಕೆ ಶೇಷವಾಗದು, ಅಂಗವಾಗದು. ಎಂದರೆ ಕರ್ಮವು ಚಿತ್ತಶುದ್ಧಿಯ ಮೂಲಕವಾಗಿ ಜ್ಞಾನಕ್ಕೆ ಕಾರಣವಾದರೂ ಸಾಕ್ಷಾತ್ತಾಗಿ ಕಾರಣವಾಗದೆಂದು ಭಾವವು. ||೮೦||

ಅಂತರಿಂದ್ರಿಯನಿಗ್ರಹರೂಪವಾದ ಶಾಂತಿಯೂ, ಬಹಿರಿಂದ್ರಿಯನಿಗ್ರಹರೂಪವಾದ ದಾಂತಿಯೂ, ಮುಂತಾದ ಎಲ್ಲ ಗುಣಗಳು ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನಗಳು, ಬ್ರಹ್ಮಜ್ಞಾನಕ್ಕೆ ಅಂಗಗಳು ಎಂದರೆ ಅಂತರಂಗಸಾಧನಗಳು, ಮಹಾವಾಕ್ಯಶ್ರವಣವು ಕರಣವು, ಎನಿಸುತ್ತದೆ. ಏಕೆಂದರೆ ಶ್ರವಣಾನಂತರದಲ್ಲಿಯೇ ಜ್ಞಾನವಾಗುತ್ತದೆ. ||೮೧||

ಜ್ಞಾನವೆಂಬ ಫಲವನ್ನುಂಟುಮಾಡುವುದರಲ್ಲಿ ಉಪಕಾರಕವಾದ ಸಾಧನಗಳು ಮನನನಿದಿಧ್ಯಾಸನಗಳು. ಮನನದಿಂದ ಪ್ರಮೇಯಾಸಂಭಾವನಾನಿರಾಸವಾಗುತ್ತದೆ. ನಿದಿಧ್ಯಾಸನದಿಂದ ವಿಪರೀತಭಾವನಾನಿರಾಸವಾಗುತ್ತದೆ. ಶ್ರವಣದಿಂದ ಪ್ರಮಾಣಾಸಂಭವನಾನಿರಾಸವಾಗುತ್ತದೆ. ಜೀವಬ್ರಹ್ಮೈಕ್ಯವೆಂಬ ಪ್ರಮೇಯದಲ್ಲಿ ಅಸಂಭಾವನಾ ಬುದ್ಧಿ ಇದ್ದರೆ ಅದು ಅವಸ್ಥಾತ್ರಯದ ಶೋಧನಪೂರ್ವಕವಾಗಿ ಅನುಮಾನದಿಂದ ನಿವೃತ್ತವಾಗುತ್ತದೆ. ವಿಪರೀತಭಾವನೆ ಎಂದರೆ ಶರೀರದಲ್ಲಿ ಆತ್ಮಬುದ್ಧಿಯು. ಅದು ನಿದಿಧ್ಯಾಸನದಿಂದ ಹೋಗುತ್ತದೆ. ಅಹಂತ್ವೋಪಲಕ್ಷಿತಬ್ರಹ್ಮವೇ ಆತ್ಮವೆಂಬ ಅಭೇದಜ್ಞಾನದಿಂದ ಅನಾತ್ಮವಾದ ದೇಹದಲ್ಲಿ ಆತ್ಮಾಧ್ಯಾಸವು ಉಂಟಾಗದು. ಮಹಾವಾಕ್ಯಶ್ರವಣದಿಂದ ಪ್ರಮಾಣಾಸಂಭಾವನೆಯು ಶಬ್ದರೂಪಪ್ರಮಾಣಜ್ಞಾನದಿಂದ ಹೋಗುತ್ತದೆ. ಈ ಮೂರೂ ಅನಾದಿದ್ವೈತವಾಸನೆಯಿಂದ ಉಂಟಾಗಿದೆ.

ತಮೋನಿವೃತ್ತೌ ಸೂರ್ಯಸ್ತು ಯಥಾ ನಾನ್ಯದಪೇಕ್ಷತೇ ।
ತಥಾಽಜ್ಞಾನನಿವೃತ್ತೌ ತು ಜ್ಞಾನಂ ನಾನ್ಯದಪೇಕ್ಷತೇ ॥೮೩॥

ಕ್ಷಣಧ್ವಂಸಿಕ್ರಿಯಾಯಾಸ್ತು ಧರ್ಮಾಧರ್ಮಾತ್ಮಕಂ ಫಲಮ್ ।
ನ ಜ್ಞಾನಂ ತೇನ ವಿದ್ಯಾಯಾಃ ನ ಸಾಕ್ಷಾತ್ಕರ್ಮ ಸಾಧನಮ್ ॥೮೪॥

ಅಧರ್ಮಸ್ಯ ಫಲಂ ಸಾಕ್ಷಾನ್ನರಕಪ್ರಾಪ್ತಿರೇವ ಹಿ ।
ನ ಜ್ಞಾನಂ ತೇನ ವಿದ್ಯಾಯಾಃ ನಾಧರ್ಮಸ್ಸಾಧನಂ ಭವೇತ್ ॥೮೫॥

ಧರ್ಮಸ್ಯ ಪಾಪನಿಕ್ಷಿಪ್ತಿದ್ವಾರಾ ಶುದ್ಧಿಸ್ತು ಮಾನಸೀ ।
ಫಲಂ ನ ಬ್ರಹ್ಮವಿಜ್ಞಾನಂ ತೇನ ಧರ್ಮೋ ನ ಸಾಧನಮ್ ॥೮೬॥

ಮನನನಿದಿಧ್ಯಾಸನದಿಂದ ಕೂಡಿದ ಶ್ರವಣದಿಂದ ದರ್ಶನವೆಂದರೆ ಶಬ್ದಾದಪರೋಕ್ಷ ವೃತ್ತಿಜ್ಞಾನ ಉಂಟಾಗುತ್ತದೆ. ಅದರಿಂದ ಅಜ್ಞಾನನಾಶವಾಗುತ್ತದೆ. ಹೀಗೆ ಜ್ಞಾನ ದಿಂದ ಅಜ್ಞಾನನಿವೃತ್ತಿಯಾಗಲು ಸಹಾಯಾಂತರವಾವುದೂ ಬೇಕಿಲ್ಲವು. ॥೮೨॥

ಕತ್ತಲೆಯನ್ನು ನಿವಾರಿಸಲು ಸೂರ್ಯನು ಹೇಗೆ ಸಹಾಯಾಂತರವನ್ನು ಅಪೇಕ್ಷಿಸದೆ ಸ್ವತಂತ್ರನಾಗಿದಾನೋ ಹಾಗೆ ಅಜ್ಞಾನವನ್ನು ಜ್ಞಾನವು ಸ್ವತಂತ್ರವಾಗಿ ನಿವಾರಿಸುತ್ತದೆ. ॥೮೩॥

ಯಾಗಾದಿ ಕರ್ಮಗಳೂ ಶ್ರವಣದ ಹಾಗೆ ಜ್ಞಾನಕ್ಕೆ ಸಾಕ್ಷಾತ್ಕರಣವಾಗಲಿ ಎಂದರೆ ಕ್ರಿಯೆಯು ಕ್ಷಣಕಾಲವಿದ್ದು ಹೋಗುತ್ತದೆ. ಅದರಿಂದ ಧರ್ಮಾಧರ್ಮ ಗಳು, ಪುಣ್ಯಪಾಪಗಳು ಉಂಟಾಗುತ್ತವೆ. ಅವುಗಳಿಂದ ಕಾಲಾಂತರದೇಶಾಂತರಗಳಲ್ಲಿ ಸುಖದುಃಖರೂಪಫಲಗಳಾಗುತ್ತವೆ. ಆದುದರಿಂದ ಫಲದಲ್ಲಿ ಆಶೆ ಇಲ್ಲದೆ ಮಾಡಿದ ನಿಷ್ಕಾಮಕರ್ಮವು ಜ್ಞಾನಕ್ಕೆ ಸಾಕ್ಷಾತ್ತಾಗಿ ಕಾರಣವಾಗದು. ಪರಂಪರೆಯಿಂದ ಎಂದರೆ ಚಿತ್ತಶುದ್ಧಿ ಜ್ಞಾನೋತ್ಪತ್ತಿಯೋಗ್ಯತಾಸಂಪಾದನ ಇವುಗಳದ್ವಾರಾ ಕಾರಣ ವಾಗುತ್ತದೆ. ॥೮೪॥

ಅಧರ್ಮಕ್ಕೆ ಫಲವು ನರಕವೇ ಆಗಿದೆ, ಜ್ಞಾನವಲ್ಲವು. ಆದುದರಿಂದ ಅದು ಜ್ಞಾನಕ್ಕೆ ಕಾರಣವಾಗದು. ಧರ್ಮದ ಅನುಷ್ಠಾನಕ್ಕೆ ಫಲಾಭಿಸಂಧಿಯಿಲ್ಲದಿದ್ದರೆ ಪಾಪನಾಶವಾಗುವುದರ ಮೂಲಕ ಚಿತ್ತಶುದ್ಧಿಯು ಫಲವಾಗಿದೆ. ಬ್ರಹ್ಮಸಾಕ್ಷಾತ್ಕಾರವು ಅದಕ್ಕೆ ಸಾಕ್ಷಾತ್ಫಲವಲ್ಲವು. ಆದುದರಿಂದ ಧರ್ಮವೂ ಸಾಕ್ಷಾತ್ತಾಗಿ ಜ್ಞಾನಸಾಧನ ವಲ್ಲವು. ॥೮೫-೮೬॥

ಕರ್ಮಣಾ ಶುದ್ಧಚಿತ್ತಸ್ಯ ಸಂಸೃತೇರ್ದೋಷದರ್ಶನಮ್ ।
ಪುನರ್ವಿರಕ್ತಿಸ್ಸಂಸಾರಾತ್ ಮೋಕ್ಷೇಚ್ಛಾ ಜಾಯತೇ ತತಃ ॥೮೭॥

ತಸ್ಮಾತ್ ಕರ್ಮ ಪ್ರಣಾಡ್ಯೈವ ಜ್ಞಾನಶೇಷಂ ನ ಚಾನ್ಯಥಾ ।
ಅತ ಏವೋಕ್ತಮಾರ್ಗೇಣ ತಯೋಸ್ಸಮಸಮುಚ್ಚಯಃ ॥೮೮॥

ಸುತರಾಮೇವ ನಾಸ್ತ್ಯೇವ ಸಮ್ಯಗುಕ್ತಂ ಮಯಾಽನಘಾಃ ।
ಅತಶ್ಚಾನ್ಯೋಽನ್ಯಸಂಬಂಧಃ ಕಾಂಡಯೋರ್ನೈವ ವಿದ್ಯತೇ ॥೮೯॥

ನ್ಯಾಯಾಭಾಸಂ ಮಹಾಮೋಹಾದವಲಂಬ್ಯ ನರಾಧಮಾಃ ।
ವಿಪ್ಲಾವಯಂತಿ ವೇದಾರ್ಥಂ ನೈತೇಷಾಂ ಮತಿರುತ್ತಮಾ ॥೯೦॥

ಪ್ರತ್ಯುತ ಭ್ರಾಂತಿವಿಜ್ಞಾನಾದ್ವೇದಾಂತಾರ್ಥಸ್ಯ ಬಾಧನಾತ್ ।
ಸದಾ ಸಂಸಾರವರ್ತಿತ್ವಮೇವ ತೇಷಾಂ ನ ಸಂಶಯಃ ॥೯೧॥

ಕರ್ಮಾನುಷ್ಠಾನದಿಂದ ಚಿತ್ತವು ಶುದ್ಧವಾದವನಿಗೆ ಸಂಸಾರದಲ್ಲಿ ಸುಖ ಭ್ರಾಂತಿಯು ಹೋಗಿ ದುಃಖರೂಪವಾದ ದೋಷವು ಕಾಣುತ್ತದೆ. ಆಮೇಲೆ ಸಂಸಾರದ ದೆಶೆಯಿಂದ ವೈರಾಗ್ಯವೂ, ಅನಂತರ ಸಂಸಾರದಿಂದ ಬಿಡುಗಡೆಯನ್ನು ಹೊಂದಲು ಇಚ್ಛೆಯೂ ಉಂಟಾಗುತ್ತವೆ. ಆದುದರಿಂದ ಈ ರೀತಿಯಾದ ಪರಂಪರಾಮೂಲಕವಾಗಿಯೇ ಕರ್ಮವು ಜ್ಞಾನಕ್ಕೆ ಅಂಗವಾಗಿದೆ; ಬೇರೆ ಇಲ್ಲವು. ಆದುದರಿಂದಲೇ ಮೇಲೆ ಹೇಳಿದ ರೀತಿಯಿಂದ ಕರ್ಮಜ್ಞಾನಗಳಿಗೆ ಸಮಪ್ರಧಾನವಾದ, ಸಮಕಾಲೀನವಾದ, ಸಮುಚ್ಚಯವು ಸಂಭವಿಸುವುದಿಲ್ಲ. ಆದುದರಿಂದ ಕರ್ಮಜ್ಞಾನಗಳೆರಡಕ್ಕೂ ಸಮಪ್ರಧಾನ ಸಂಬಂಧವಿಲ್ಲವು. ಓ ನಿರ್ದೋಷಿಗಳಾದ ಋಷಿಗಳೇ, ನಿಜವನ್ನು ಚನ್ನಾಗಿ ಹೇಳಿದೇನೆ. ॥೮೭-೮೮-೮೯॥

ಯಾವಜ್ಜೀವವೂ ಕರ್ಮಮಾಡಬೇಕೆಂದು ಶ್ರುತಿಯಿಂದಲೂ, ನಿಷ್ಕಾಮ ಕರ್ಮಯೋಗವು ಪಾವನವಾಗಿ ಶ್ರೇಯಸ್ಕರವೆಂದು ಮುಂತಾದ ನ್ಯಾಯದ ಆಭಾಸ ಜ್ಞಾನದಿಂದ ಪ್ರಬಲವಾದ ಅಜ್ಞಾನದ ದೆಶೆಯಿಂದಲೂ, ಅಧಮರಾದ ಜನರು, ಕರ್ಮವನ್ನು ಆಶ್ರಯಿಸಿ ವೇದದ ನಿಜವಾದ ಅರ್ಥವನ್ನು ತಲೆಕೆಳಗುಮಾಡುತ್ತಾರೆ. ಆದುದರಿಂದ ಅಂಥವರ ಬುದ್ಧಿಯು ಉತ್ತಮವಾದುದಲ್ಲವು. ಅಷ್ಟೇ ಅಲ್ಲದೆ ಅವರ ಭ್ರಾಂತಿಯಿಂದ ವೇದಾಂತದ ನಿಜವಾದ ತಾತ್ಪರ್ಯವು ಗೊತ್ತಾಗದೆಹೋಗಿ ಸರ್ವದಾ ಕರ್ತೃತ್ವ ಭೋಕ್ತೃತ್ವಜನನಮರಣಪರಂಪರೆಯಲ್ಲಿ ಸುತ್ತುತ್ತಿರುವ ನಿರ್ಬಂಧ ದುಃಖವು

ಅಹೋ ಮೋಹಸ್ಯ ಮಾಹಾತ್ಮ್ಯಂ ಸರ್ವವೇದಾರ್ಥವರ್ಜಿತಾಃ ।
ಪರಿಭ್ರಮಂತಿ ವೇದಾರ್ಥಾದನ್ಯತ್ರೈವ ವಿಚೇಷ್ಟಿತಾಃ ॥೯೨॥

ವೇದಾನಶೇಷಾನವಧಾರ್ಯ ಮರ್ತ್ಯೋ
ಮದುಕ್ತವೇದಾಂತವಿಚಾರಮಾರ್ಗಮ್ ।
ಉಪೈತಿ ಪುಣ್ಯೇನ ಚ ಶಂಭುಭಕ್ತ್ಯಾ
ಶಿವಪ್ರಸಾದೇನ ನ ಚೇತರೇಣ ॥೯೩॥

ಅವಿರೋಧಃ ಕಥಿತೋ ಮಯಾ ದ್ವಿಜಾಃ
ಕೃಪಯೈವ ಶ್ರುತಿಗೋಚರಸ್ತು ವಃ ।
ಮತಿರೇಷಾ ಮನುಜಸ್ಯ ಮುಕ್ತಿದಾ
ವಿಪರೀತಾ ಮತಿರಸ್ಯ ನಾಶನೀ ॥೯೪॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ವೇದಾನಾಮವಿರೋಧ ನಿರೂಪಣಂ ನಾಮ
ಏಕೋನಚತ್ವಾರಿಂಶಾಧ್ಯಾಯಃ

ತಪ್ಪುವುದೇ ಇಲ್ಲ. ಇದರಲ್ಲಿ ಸಂದೇಹವಿಲ್ಲವು. ಅಜ್ಞಾನದ ಈ ಮಹಿಮೆಯು ಆಶ್ಚರ್ಯಕರವಾಗಿದೆ. ಅದರಿಂದ ಅವರು ವೇದದ ನಿಜವಾದ ತಾತ್ಪರ್ಯವನ್ನು ಬಿಟ್ಟು ಬೇರೆ ವಿಷಯಗಳಲ್ಲಿಯೇ ವ್ಯಾಪಾರಮಾಡುತ್ತಿರುತ್ತಾರೆ. ಎಂದು ತಿಳಿಯಬೇಕು. ॥೯೦-೯೧-೯೨॥

ಶಂಭುವಿನಲ್ಲಿ ಭಕ್ತಿಯಿಂದಲೇ, ಪರಶಿವನ ಅನುಗ್ರಹದಿಂದಲೇ, ಮನುಷ್ಯನು ಎಲ್ಲ ವೇದಗಳ ಅರ್ಥವನ್ನೂ ಗೊತ್ತುಮಾಡಿ ತಿಳಿದು, ವೇದಾಂತವಿಚಾರದ ದಾರಿಯನ್ನು ಹೊಂದುತ್ತಾನೆ. ಬೇರೆ ದಾರಿ ಇಲ್ಲವು. ವೇದವಾಕ್ಯಗಳಿಗೆ ಮೇಲೆ ಹೇಳಿದಂತೆ ಅವಿರೋಧವನ್ನು ನಿಮ್ಮಲ್ಲಿ ದಯೆಯಿಂದ ನಾನು ಹೇಳಿದೇನೆ. ಓ ಬ್ರಾಹ್ಮಣರಾ, ಈಜ್ಞಾನವು ಜನರಿಗೆ ಮುಕ್ತಿಯನ್ನು ಕೊಡುತ್ತದೆ. ಇದಕ್ಕಿಂತ ಬೇರೆಯಾದ ತಿಳಿವಳಿಕೆಯು ಜನರನ್ನು ನಾಶಮಾಡುತ್ತದೆ. ॥೯೩-೯೪॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಕರ್ಮ, ಜ್ಞಾನ, ಕಾಂಡಗಳಿಗೆ ವಿರೋಧವಿಲ್ಲವೆಂದು ತಿಳಿಸುವ
ಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಚತ್ವಾರಿಂಶೋಽಧ್ಯಾಯಃ ||

ನಲವತ್ತನೆಯ ಅಧ್ಯಾಯವು

(ಸರ್ವಸಿದ್ಧಿಕರಧರ್ಮವಿಚಾರಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಸರ್ವಸಿದ್ಧಿಕರಂ ನೃಣಾಮ್ ।
ಮಯಾ ನೋಕ್ತಮಿತಃ ಪೂರ್ವಮತಿಗುಹ್ಯಮನುತ್ತಮಮ್ ॥೧॥

ಕಾಯಿಕಂ ವಾಚಿಕಂ ಚೈವ ಮಾನಸಂ ಚ ತಥೈವ ಚ ।
ತ್ರಿವಿಧಂ ಕರ್ಮ ಕರ್ತವ್ಯಂ ಸರ್ವಸಿದ್ಧ್ಯರ್ಥಮಾಸ್ತಿಕೈಃ ॥೨॥

ಹಿಂದಿನ ಅಧ್ಯಾಯದಲ್ಲಿ ಕರ್ಮವು ಚಿತ್ತಶುದ್ಧಿಯನ್ನುಂಟುಮಾಡುವುದರ ಮೂಲಕ ಮೋಕ್ಷಕ್ಕೆ ಸಹಕಾರಿ ಎಂದು ಹೇಳಿದೆ. ಆ ಕರ್ಮವು ಯಾವುದೆಂಬುದನ್ನು ತಿಳಿಸುವುದಕ್ಕೋಸ್ಕರ ಈ ಅಧ್ಯಾಯವು ಪ್ರಾರಂಭಿಸಲ್ಪಡುತ್ತದೆ. ಅಜ್ಞಾನನಿವೃತ್ತಿಗೋಸ್ಕರ, ಎಲೈ ಋಷಿಗಳೇ, ಇದುವರೆಗೆ ನಾನು ಹೇಳದೆ ಇರುವ ಬಹಳ ಗುಟ್ಟಾದ ಮತ್ತು ಉತ್ತಮವಾದ, ಸರ್ವೇಷ್ಟಾರ್ಥವನ್ನು ಸಿದ್ಧಿಗೊಳಿಸುವ ಕರ್ಮದ ವಿಚಾರವನ್ನು ಹೇಳುತ್ತೇನೆ, ಕೇಳಿರಿ. ಎಂದು ಸೂತರು ಋಷಿಗಳನ್ನು ಕುರಿತು ಹೇಳಿದರು. ||೧||

ಆಸ್ತಿಕರಾದವರು ಸರ್ವೇಷ್ಟಾರ್ಥಸಿದ್ಧಿಗಾಗಿ ಶರೀರದಿಂದ ಮಾಡುವುದು, ಮಾತಿನಿಂದ ಮಾಡುವುದು, ಮನಸ್ಸಿನಿಂದ ಮಾಡುವುದು ಎಂಬ ಮೂರು ವಿಧವಾದ ಕರ್ಮವನ್ನೂ ಮಾಡಬೇಕು. ||೨||

ಸರ್ವಸಿದ್ಧಿಕರಂ ಕರ್ಮ ಕಾಯಿಕಂ ಬಹುಧಾ ಸ್ಮೃತಮ್ ।
ಲಿಂಗೇ ಶಿವಾರ್ಚನಂ ಚೈವ ರುದ್ರಾಕ್ಷಾಣಾಂ ಚ ಧಾರಣಮ್ ॥೩॥

ಅಗ್ನಿರಿತ್ಯಾದಿಭಿರ್ಮಂತ್ರೈರ್ಜಾಬಾಲೋಕ್ತೈಶ್ಚ ಸಪ್ತಭಿಃ ।
ತ್ರಿಯಾಯುಷೇಣ ಮಂತ್ರೇಣ ಭಸ್ಮನಾ ಸಜಲೇನ ಚ ॥೪॥

ಸರ್ವಾಂಗೋದ್ಧೂಳನಂ ಚೈವ ತ್ರಿಪುಂಡ್ರಸ್ಯ ಚ ಧಾರಣಮ್ ।
ಶಿವಸ್ಯೋತ್ಸವಸೇವಾ ಚ ಶಿವಕ್ಷೇತ್ರೇಷು ವರ್ತನಮ್ ॥೫॥

ವಾಚಿಕಂ ಕರ್ಮ ವಿಪ್ರೇಂದ್ರಾಸ್ಸರ್ವಸಿದ್ಧಿಕರಂ ನೃಣಾಮ್ ।
ಚಿನ್ಮಂತ್ರಸ್ಯ ಜಪಸ್ತದ್ವತ್ಪದಾಖ್ಯಸ್ಯ ಜಪಸ್ತಥಾ ॥೬॥

ಪ್ರಣವಸ್ಯ ಜಪಸ್ತದ್ವದ್ಧಂಸಾಖ್ಯಸ್ಯ ಮುನೇರ್ಜಪಃ ।
ಷಡಕ್ಷರಸ್ಯ ಮಂತ್ರಸ್ಯ ಸಾವಿತ್ರ್ಯಾಶ್ಚ ಜಪಸ್ತಥಾ ॥೭॥

ಈ ಮೂರು ವಿಧವಾದ ಕರ್ಮಗಳಲ್ಲಿ ಕಾಯಿಕವಾದ (ಶರೀರದಿಂದ ಮಾಡಬೇಕಾದ) ಕರ್ಮವೂ ಸರ್ವಸಿದ್ಧಿಯನ್ನುಂಟುಮಾಡುತ್ತದೆ. ಇಂಥ ಕಾಯಿಕ ಕರ್ಮವು ಅನೇಕವಿಧವಾಗಿದೆ; ಅವು ಯಾವುವೆಂದರೆ, ಲಿಂಗವನ್ನು ಶಿವನೆಂಬ ಭಾವನೆಯಿಂದ ಪೂಜೆಮಾಡುವುದು, ರುದ್ರಾಕ್ಷಿಗಳನ್ನು ಧರಿಸುವುದು, ಜಾಬಾಲೋಪನಿಷತ್ತಿನಲ್ಲಿ ಹೇಳಿರುವ, "ಅಗ್ನಿರಿತಿ ಭಸ್ಮ" ಇವೇ ಮೊದಲಾದ ಏಳು ಮಂತ್ರಗಳಿಂದಲೂ, "ತ್ರಿಯಾಯುಷ" ಎಂಬ ಮಂತ್ರದಿಂದಲೂ ನೀರಿನಿಂದ ಕಲೆಸಲ್ಪಟ್ಟ ಭಸ್ಮವನ್ನು ಮೈಗೆಲ್ಲಕ್ಕೂ ಬಳಿದುಕೊಳ್ಳುವುದು ಮತ್ತು ಹಣೆ ಕೈ ಮೊದಲಾದ ಸ್ಥಳಗಳಲ್ಲಿ ಮೂರು ರೇಖಾಕಾರವಾಗಿ (ತ್ರಿಪುಂಡ್ರವನ್ನು) ಧರಿಸುವುದು, ಶಿವಕ್ಷೇತ್ರಗಳಲ್ಲಿ ವಾಸಮಾಡುವುದು-ಇವೇ ಮುಂತಾದವುಗಳು ಕಾಯಿಕ ಕರ್ಮಗಳು. ॥೩-೪-೫॥

ಇದರಂತೆ (ಮಾತಿನಿಂದ ಮಾಡುವ) ವಾಚಿಕಕರ್ಮವೂ ಸರ್ವಸಿದ್ಧಿಯನ್ನುಂಟುಮಾಡುವಂಥದು. ಆ ಕರ್ಮ ಯಾವುದೆಂದರೆ ಚಿನ್ಮಂತ್ರದ ಜಪವೂ (ಚಿನ್ಮಂತ್ರವೆಂದರೆ ಜ್ಞಾನರೂಪಳಾದ ಪರಶಕ್ತಿಯನ್ನು ತೋರಿಸಿಕೊಡುವ ಮಂತ್ರ) ಪದಮಂತ್ರದ ಜಪವೂ (ಪದಮಂತ್ರವೆಂದರೆ ಮಾತೃಕಾಮಂತ್ರವು; ಇದರ ವಿಚಾರವು ನಾಲ್ಕನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ.) ಪ್ರಣವ ಹಂಸಮಂತ್ರ, ಷಡಕ್ಷರೀಮಂತ್ರ, ಗಾಯತ್ರೀಮಂತ್ರ-ಇವುಗಳ ಜಪವೂ; ವೇದಗಳ ಮತ್ತು ವೇದಾಂತಗಳ ಪಾರಾಯಣವೂ ವಾಚಿಕಕರ್ಮಗಳೆನಿಸಿಕೊಳ್ಳುತ್ತವೆ. ॥೬-೭॥

ವೇದಪಾರಾಯಣಂ ಚೈವ ವೇದಾಂಗಾನಾಂ ಚ ಕೀರ್ತನಮ್ ।
ಮಾನಸಂ ಕರ್ಮ ವಿಪ್ರೇಂದ್ರಾಸ್ಸರ್ವಸಿದ್ಧಿಕರಂ ನೃಣಾಮ್ ॥೮॥

ಮಹಾದೇವಸ್ಸ್ಮೃತಸ್ಸಾಕ್ಷಾತ್ ಮಹಾದೇವ್ಯಾಸ್ಸ್ಮೃತಿಸ್ತಥಾ ।
ವೇದಾನ್ತಾರ್ಥವಿಚಾರಶ್ಚ ವೇದಾದನ್ಯಸ್ಯ ವಿಸ್ಮೃತಿಃ ॥೯॥

ವಿರಕ್ತಿಃ ಸರ್ವಲೋಕೇಭ್ಯೋ ವೇದಾರ್ಥೇ ನಿಶ್ಚಯೋಽಚಲಃ ।
ಸ್ಮಾರ್ತೇ ಪೌರಾಣಿಕೇಽಪ್ಯರ್ಥೇ ನಿಶ್ಚಯಶ್ಚ ತಥೈವ ಚ ॥೧೦॥

ಶಿವಸ್ಯೋತ್ಕರ್ಷತಾ ಬುದ್ಧಿಶ್ಶಿವೋಽಹಮಿತಿ ಭಾವನಮ್ ।
ಏತೇ ಧರ್ಮಾ ವಿಶಿಷ್ಟಾಸ್ಸ್ಯುಸ್ಸರ್ವಸಿದ್ಧಿಕರಾ ಅಪಿ ॥೧೧॥

ಏಭ್ಯೋಽತಿರಿಕ್ತಾ ಯೇ ಧರ್ಮಾಶ್ಶ್ರೌತಸ್ಮಾರ್ತಾಸ್ತಥಾಽಪರೇ ।
ತೇ ತು ವೇದವಿದಾಂ ಮುಖ್ಯಾಃ ಸರ್ವಸಿದ್ಧಿಕರಾ ನ ಹಿ ॥೧೨॥

ಹೀಗೆಯೇ ಮಾನಸಿಕವಾದ ಕರ್ಮಗಳೂ ಸರ್ವಸಿದ್ಧಿಕರವಾದುವುಗಳು. ಅವು ಯಾವುವೆಂದರೆ: ಸಾಕ್ಷಾತ್ ಶಿವ, ಮಹಾದೇವಿ ಇವರನ್ನು (ಮನಸ್ಸಿನಲ್ಲೇ) ಸ್ಮರಿಸುವುದು, ಉಪನಿಷತ್ತುಗಳ ಅರ್ಥವನ್ನೇ ಅನುಸಂಧಾನಮಾಡುವುದು, ವೇದದಲ್ಲಿ ಹೇಳದಿರುವ ಅರ್ಥವನ್ನು ಮರೆತುಬಿಡುವುದು. ಎಲ್ಲಾ ಲೋಕಗಳಲ್ಲೂ ದೊರೆಯುವ ವಿಷಯಸುಖಗಳಲ್ಲಿ ಆಸೆಯನ್ನಿಡದಿರುವುದು. ವೇದದಲ್ಲಿ ಹೇಳಿರುವ ಅರ್ಥದಲ್ಲಿ ದೃಢವಾದ ನಂಬಿಕೆಯು, ಅದರಂತೆ ಸ್ಮೃತಿಗಳಲ್ಲಿಯೂ ಪುರಾಣಗಳಲ್ಲಿಯೂ ಹೇಳಲ್ಪಟ್ಟಿರುವ ಧರ್ಮಗಳಲ್ಲಿಯೂ ದೃಢವಾದ ನಂಬಿಕೆಯು, ಶಿವನೇ ಸರ್ವೋತ್ಕೃಷ್ಟನೆಂಬುದಾಗಿ ತಿಳಿಯುವುದು, ಅಂಥ ಶಿವನೇ ನಾನಾಗಿದ್ದೇನೆಂಬ ಭಾವನೆಯು— ಇವು ಮಾನಸಿಕಕರ್ಮಗಳು; ಈ ಎಲ್ಲಾ ಧರ್ಮಗಳೂ ಸರ್ವಶ್ರೇಷ್ಠವಾದವೂ, ಸರ್ವಸಿದ್ಧಿಯನ್ನುಂಟುಮಾಡುವುವೂ ಆಗಿವೆ. ॥೮-೯-೧೦-೧೧॥

ವೇದವನ್ನು ತಿಳಿದವರಲ್ಲಿ ಮುಖ್ಯರಾದ ಋಷಿಗಳೇ, ಈ ಮೇಲೆ ಹೇಳಲ್ಪಟ್ಟ ಧರ್ಮಗಳಿಗಿಂತಲೂ ಬೇರೆಯಾದ, ಶ್ರುತಿಯಲ್ಲಿಯೂ ಸ್ಮೃತಿಯಲ್ಲಿಯೂ ಹೇಳಿರುವ ಹೇಳದಿರುವ ಯಾವ ಧರ್ಮಗಳಿವೆಯೋ ಅವು ಸರ್ವಸಿದ್ಧಿಯನ್ನುಂಟುಮಾಡುವವುಗಳಲ್ಲವು. ॥೧೨॥

ಮಹಾದೇವಸ್ತು ಸರ್ವಾತ್ಮಾ ಸರ್ವವಸ್ತ್ವವಭಾಸಕಃ ।
ಸರ್ವಾನಂದಕರಃ ಪೂರ್ಣಸ್ಸರ್ವದೇವೋತ್ತಮೋತ್ತಮಃ ॥೧೩॥

ತಸ್ಯಾಸಾಧಾರಣಾ ಧರ್ಮಾ ಏತ ಏವ ನ ಚಾಪರೇ ।
ತಸ್ಮಾದೇತೇ ಹಿ ಸರ್ವೇಷಾಂ ಸರ್ವಸಿದ್ಧಿಕರಾ ನೃಣಾಮ್ ॥೧೪॥

ಸತ್ತಾ ಸಿದ್ಧಿಶ್ಚ ಸರ್ವೇಷಾಂ ಮಹಾದೇವಪ್ರಸಾದತಃ ।
ವಿಷ್ಣ್ವಾದೀನಾಮತೋ ಧರ್ಮಾಃ ಪೂರ್ವೋಕ್ತಾಸ್ಸರ್ವಸಿದ್ಧಿದಾಃ ॥೧೫॥

ಮುಖತೋ ಮೋಕ್ಷದಾ ಹ್ಯೇತೇ ಪೃಷ್ಠತಸ್ಸರ್ವಸಿದ್ಧಿದಾಃ ।
ಶೀಘ್ರಸಿದ್ಧಿಕರಾಶ್ಚೈವ ಶಿವಾ ಸಾಧಾರಣತ್ವತಃ ॥೧೬॥

ಶಿವೇನ ಸದೃಶೋ ದೇವೋ ಯಥಾ ವಿಪ್ರಾ ನ ವಿದ್ಯತೇ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೧೭॥

ಮಹಾದೇವನಾದರೋ ಎಲ್ಲಾ ಪದಾರ್ಥಗಳಲ್ಲಿಯೂ ಇರುವವನು, ಮತ್ತು ಎಲ್ಲವನ್ನೂ ಪ್ರಕಾಶಗೊಳಿಸುವವನು, ಎಲ್ಲರಿಗೂ ಸಂತೋಷವನ್ನುಂಟುಮಾಡುವವನು, ಎಲ್ಲಾ ದೇವತೆಗಳಿಗಿಂತಲೂ ಉತ್ತಮನಾದವನು. ॥೧೩॥

ಮಹಾದೇವನಲ್ಲಿ ಮಾತ್ರ ಇರುವ, ಇತರರಲ್ಲಿಲ್ಲದ ಧರ್ಮಗಳು ಇವುಗಳು. ಆದುದರಿಂದ ಇವುಗಳು ಎಲ್ಲರಿಗೂ ಎಲ್ಲಾ ವಿಧವಾದ ಸಿದ್ಧಿಯನ್ನೂ ಉಂಟುಮಾಡುವವು. ॥೧೪॥

ವಿಷ್ಣುವೇ ಮೊದಲಾದವರಲ್ಲಿರುವ ಸಾಮರ್ಥ್ಯವು ಸಿದ್ಧಿಸಬೇಕಾದರೂ ಮಹಾದೇವನ ಅನುಗ್ರಹವಿರಬೇಕು. ಇಲ್ಲದಿದ್ದರೆ ಅವರಿಗೆ ಅಂಥ ಸಾಮರ್ಥ್ಯವು ಸಿದ್ಧಿಸುವುದೇ ಇಲ್ಲ. ಹೀಗಿರುವುದರಿಂದ ಮೇಲೆ ಹೇಳಿರುವ ಧರ್ಮಗಳೆಲ್ಲವೂ ಮಹಾದೇವನಲ್ಲಿ ಮಾತ್ರ ಇರುವುದರಿಂದ ಸರ್ವಸಿದ್ಧಿಕರಗಳಾಗುತ್ತವೆ. ॥೧೫॥

ಈ ಧರ್ಮಗಳು ಮುಂಭಾಗದಲ್ಲಿ ಮೋಕ್ಷವನ್ನು ಕೊಡತಕ್ಕವುಗಳು; ಹಿಂಭಾಗದಲ್ಲಿ ಸರ್ವಸಿದ್ಧಿಯನ್ನುಂಟುಮಾಡುವುವು; ಅಲ್ಲದೆ, ಶಿವನಲ್ಲಿಯೇ ಇರುವ ಧರ್ಮಗಳಾದುದರಿಂದ ಜಾಗ್ರತೆಯಾಗಿ ಸಿದ್ಧಿಯನ್ನುಂಟುಮಾಡುವುವು. ॥೧೬॥

ಎಲೈ ಬ್ರಾಹ್ಮಣರೇ, ಶಿವನಿಗೆ ಸಮಾನವಾದ ದೇವರು ಹೇಗೆ ಇಲ್ಲವೋ ಹಾಗೆ ಮೇಲೆ ಹೇಳಲ್ಪಟ್ಟ ಧರ್ಮಗಳಿಗೆ ಸಮಾನವಾದ ಇತರ ಧರ್ಮಗಳು ಶ್ರುತಿ ಸ್ಮೃತಿಗಳಲ್ಲೆಲ್ಲಿಯೂ ಇಲ್ಲ. ॥೧೭॥

ಶಿವಜ್ಞಾನಸಮಂ ಜ್ಞಾನಂ ಯಥಾ ನಾಸ್ತಿ ದ್ವಿಜರ್ಷಭಾಃ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೧೮॥

ವೇದಮಾನಸಮಂ ಮಾನಂ ಯಥಾ ನಾಸ್ತಿ ದ್ವಿಜರ್ಷಭಾಃ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೧೯॥

ಭೂಮಿದೇವಸಮೋ ಮರ್ತ್ಯೋ ಯಥಾ ನಾಸ್ತಿ ದ್ವಿಜರ್ಷಭಾಃ ।
ತಥೈವೈಭಿಃ ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೨೦॥

ಮೇರುಣಾ ಪರ್ವತಸ್ತುಲ್ಯೋ ಯಥಾ ಲೋಕೇ ನ ವಿದ್ಯತೇ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೨೧॥

ಅನ್ನಪಾನಸಮಂ ಕಿಂಚಿನ್ನ ಹಿ ದೇಹಸ್ಥಿತೌ ಯಥಾ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೨೨॥

ಯಥಾ ಭಾಗೀರಥೀತುಲ್ಯಾ ನದೀ ಲೋಕೇ ನ ವಿದ್ಯತೇ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೨೩॥

ಶಿವಸ್ಥಾನಸಮಂ ಸ್ಥಾನಂ ಯಥಾ ಲೋಕೇ ನ ವಿದ್ಯತೇ ।
ತಥೈವೈಭಿಸ್ಸಮಾ ಧರ್ಮಾ ನ ವಿದ್ಯಂತೇ ಶ್ರುತೌ ಸ್ಮೃತೌ ॥೨೪॥

ಶಿವಜ್ಞಾನಕ್ಕೆ ಸಮಾನವಾದ ಜ್ಞಾನವು ಹೇಗೆ ಇಲ್ಲವೋ, ವೇದಕ್ಕೆ ಸರಿಯಾದ ಬೇರೆ ಪ್ರಮಾಣವು ಹೇಗೆ ಇಲ್ಲವೋ, ಬ್ರಾಹ್ಮಣರಿಗೆ ಸಮನಾದ ಮನುಷ್ಯನು ಹೇಗೆ ಇಲ್ಲವೋ, ಪರ್ವತಗಳಲ್ಲಿ ಮೇರುವಿಗೆ ಸರಿಯಾದ ಪರ್ವತವು ಹೇಗೆ ಇಲ್ಲವೋ, ಶರೀರರಕ್ಷಣೆಮಾಡುವುದರಲ್ಲಿ ಅನ್ನ ನೀರುಗಳಿಗೆ ಸಮಾನವಾದುದು ಹೇಗೆ ಇಲ್ಲವೋ, ಹಾಗೆ ಮೇಲೆ ಹೇಳಲ್ಪಟ್ಟ ಧರ್ಮಗಳಿಗೆ ಸಮಾನಗಳಾದ ಇತರ ಧರ್ಮಗಳು ಶ್ರುತಿಸ್ಮೃತಿಗಳಲ್ಲೆಲ್ಲಿಯೂ ಇಲ್ಲ. ||೧೮-೧೯-೨೦-೨೧-೨೨||

ಗಂಗಾನದಿಗೆ ಸರಿಯಾದ ನದಿಯು ಹೇಗೆ ಲೋಕದಲ್ಲಿಲ್ಲವೋ, ಶಿವಸನ್ನಿಧಿಗೆ ಸಮಾನವಾದ ಸ್ಥಾನವು ಹೇಗೆ ಇಲ್ಲವೋ, ಅದರಂತೆ, ಮೇಲೆ ಹೇಳಿರುವ ಧರ್ಮಗಳಿಗೆ ಸಮಾನವಾದ ಬೇರೆ ಧರ್ಮಗಳು ಶ್ರುತಿಸ್ಮೃತಿಗಳಲ್ಲೆಲ್ಲಿಯೂ ಇಲ್ಲ. ||೨೩-೨೪||

ಸರ್ವಸಿದ್ಧಿಕರಾ ಮುನಿಪುಂಗವಾ
ಏತ ಏವ ಸದೈವ ನ ಚಾಪರೇ ।
ಚೋದಿತೇಷು ನ ಸಂಶಯಕಾರಣಂ
ಕೇವಲಂ ಕೃಪಯೈವ ಮಯೋದಿತಮ್ ॥೨೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಸರ್ವಸಿದ್ಧಿಕರಧರ್ಮವಿಚಾರೋ ನಾಮ ಚತ್ವಾರಿಂಶಾಧ್ಯಾಯಃ

ಎಲೈ ಋಷಿಗಳೇ, ಯಾವಾಗಲೂ ಎಲ್ಲಾ ಸಿದ್ಧಿಯನ್ನುಂಟುಮಾಡುವವು ಈ ಧರ್ಮಗಳೇ ಹೊರತು ಬೇರೆ ಧರ್ಮಗಳು ಮಾಡಲಾರವು. ಈ ವಿಚಾರದಲ್ಲಿ ಸ್ವಲ್ಪವೂ ಸಂದೇಹಪಡಬೇಡಿರಿ. ನಾನು ನಿಮ್ಮಲ್ಲಿ ಕರುಣೆಯಿಂದ ಹೇಳಿದ್ದೇನೆಯೇ ವಿನಾ, ನನಗೆ ಇದರಿಂದ ಯಾವ ಪ್ರಯೋಜನವೂ ಇಲ್ಲ–ಎಂದು ಸೂತರು ಶೌನಕಾದಿಗಳನ್ನು ಕುರಿತು ಹೇಳಿದರು. ॥೨೫॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಎಲ್ಲ ಇಷ್ಟಾರ್ಥಸಿದ್ಧಿಯನ್ನೂ ಉಂಟುಮಾಡುವ ಧರ್ಮವನ್ನು ತಿಳಿಸುವ ನಲವತ್ತನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ಏಕಚತ್ವಾರಿಂಶೋಽಧ್ಯಾಯಃ ॥

ನಲವತ್ತೊಂದನೆಯ ಅಧ್ಯಾಯವು

(ಪಾತಕವಿಚಾರಕಥನಮ್)

॥ ಸೂತ ಉವಾಚ ॥

ಅಥಾತಸ್ಸಂಪ್ರವಕ್ಷ್ಯಾಮಿ ಪಾತಕಾನಿ ಸಮಾಸತಃ ।
ಶೃಣುತ ಶ್ರದ್ಧಯಾ ಸಾರ್ಧಂ ಪರಿಹಾರಾಯ ಸುವ್ರತಾಃ ॥೧॥

ಹಿಂದಿನ ಅಧ್ಯಾಯದಲ್ಲಿ ಕಾಯಿಕ, ವಾಚಿಕ, ಮಾನಸಿಕ-ಎಂಬ ಮೂರು ವಿಧವಾದ ಕರ್ಮಗಳು ಚಿತ್ತಶುದ್ಧಿಗಾಗಿ ನಿರೂಪಿಸಲ್ಪಟ್ಟವು. ಈಗ ಆ ಕರ್ಮಗಳ ಆಚರಣೆಗೆ ಅಡ್ಡಿಯಾಗಿರುವ ಪಾಪಗಳ ಪರಿಹಾರವನ್ನು ಮಾಡಬೇಕಾದರೆ ಆ ಪಾಪಗಳ ಜ್ಞಾನವನ್ನು ಅವಶ್ಯವಾಗಿ ಪಡೆಯಬೇಕಾಗುತ್ತದೆ. ಅಥರ್ಮೋಽಪಿವಿಜಿಜ್ಞಾಸ್ಯಃ ಪರಿಹಾರಾಯ" ಎಂಬ ಶಾಬರಭಾಷ್ಯದ ವಚನದಂತೆ, ಅದನ್ನು ತಿಳಿಸುವುದಕ್ಕಾಗಿ ಈ ಅಧ್ಯಾಯವು ಆರಂಭಿಸಲ್ಪಡುತ್ತದೆ.

ಸೂತರು ಹೇಳಿದರು--ಎಲೈ ಋಷಿಗಳೇ, ಸಂಗ್ರಹವಾಗಿ ಕರ್ಮಪ್ರತಿಬಂಧಕಗಳಾದ ಪಾಪಗಳು ಯಾವುವು? ಎಂಬುದನ್ನು ಹೇಳುತ್ತೇನೆ; ಅಂಥ ಪಾಪಗಳ ಜ್ಞಾನವು, ಪಾಪಪರಿಹಾರಕ್ಕಾಗಿ ಅವಶ್ಯಕವಾದುದರಿಂದ, ಅದನ್ನು ನೀವು ಶ್ರದ್ಧೆಯಿಂದ ಕೇಳಿರಿ. ॥೧॥

ಪಾತಕಾನಿ ಸಮಾಸೇನ ದಶ ಪ್ರೋಕ್ತಾನಿ ಸೂರಿಭಿಃ ।
ತಾರತಮ್ಯಕ್ರಮೇಣೈವ ತೇಷಾಮುತ್ಕರ್ಷೇವ ಲಾಘವಮ್ ॥೨॥

ಪ್ರಥಮಂ ಪಾತಕಂ ಪ್ರೋಕ್ತಂ ಮಹಾಪಾತಕಸಂಜ್ಞಿತಮ್ ।
ದ್ವಿತೀಯಮತಿಪಾತಾಖ್ಯಂ ತತಃ ಪ್ರಾಸಂಗಿಕಾಭಿಧಮ್ ॥೩॥

ಚತುರ್ಥಂ ಪಾತಕಂ ಪ್ರೋಕ್ತಂ ಪಂಚಮಂ ಚೋಪಪಾತಕಮ್ ।
ಜಾತಿಭ್ರಂಶಕರಂ ಷಷ್ಠಂ ಸಂಕೀರ್ಣಕರಣಂ ತಥಾ ॥೪॥

ಅಪಾತ್ರೀಕರಣಂ ಪಶ್ಚಾನ್ನವಮಂ ತು ಮಲಾವಹಮ್ ।
ಪ್ರಕೀರ್ಣಕಸಮಾಖ್ಯಂ ತು ದಶಮಂ ಪಾತಕಂ ದ್ವಿಜಾಃ ॥೫॥

ಪ್ರತಿಷಿದ್ಧಸುರಾಪಾನಂ ಬ್ರಹ್ಮಹತ್ಯಾ ತಥೈವ ಚ ।
ಬ್ರಾಹ್ಮಣಾನಾಂ ಸುವರ್ಣಸ್ಯ ಹರಣಂ ಮುನಿಪುಂಗವಾಃ ॥೬॥

ಜನನೀಗಮನಂ ಚೈವ ಸಂಯೋಗಸ್ತೈಸ್ಸಹ ದ್ವಿಜಾಃ ।
ಮಹಾಂತಿ ಪಾತಕಾನ್ಯಾಹುರ್ಮುನಯಸ್ಸೂಕ್ಷ್ಮದರ್ಶಿನಃ ॥೭॥

ಪಾಪಗಳು ಹತ್ತುಬಗೆಯಾಗಿವೆ. ಎಂದು ವಿದ್ವಾಂಸರು ಸಂಗ್ರಹಿಸಿ ಹೇಳಿದ್ದಾರೆ ; ಇವುಗಳಲ್ಲಿರುವ ಒಂದಕ್ಕೊಂದರ ತಾರತಮ್ಯವನ್ನು ಸೂಚಿಸುವ ಕ್ರಮದ ಭೇದದಿಂದ, ಅವುಗಳಲ್ಲಿ ಸಣ್ಣದು ದೊಡ್ಡದು ಎಂಬ ಭೇದವಿದ್ದೇ ಇದೆ. ॥೨॥

ಎಲೈ ಬ್ರಾಹ್ಮಣರೇ, ಈ ಹತ್ತು ಪಾಪಗಳಲ್ಲಿ ಮೊದಲನೆಯದಕ್ಕೆ ಮಹಾ ಪಾತಕವೆಂತಲೂ, ಎರಡನೆಯದಕ್ಕೆ ಅತಿಪಾತಕವೆಂತಲೂ, ಮೂರನೆಯದಕ್ಕೆ ಪ್ರಾಸಂಗಿಕವೆಂತಲೂ, ನಾಲ್ಕನೆಯ ಪಾಪಕ್ಕೆ ಪಾತಕವೆಂತಲೂ, ಐದನೆಯ ಪಾಪಕ್ಕೆ ಉಪಪಾತಕವೆಂತಲೂ, ಆರನೆಯ ಪಾಪಕ್ಕೆ ಜಾತಿಭ್ರಂಶಕರವೆಂತಲೂ ಏಳನೆಯದಕ್ಕೆ ಸಂಕೀರ್ಣಕರಣವೆಂತಲೂ, ಎಂಟನೆಯದಕ್ಕೆ ಅಪಾತ್ರೀಕರಣ ವೆಂತಲೂ, ಒಂಬತ್ತನೆಯಪಾಪಕ್ಕೆ ಮಲಾವಹವೆಂತಲೂ, ಹತ್ತನೆಯ ಪಾಪಕ್ಕೆ ಪ್ರಕೀರ್ಣಕವೆಂತಲೂ ಹೆಸರುಗಳು. ॥೩-೪-೫॥

ನಿಷೇಧಮಾಡಲ್ಪಟ್ಟಿರುವ ಮದ್ಯಪಾನ ಮಾಡುವುದೂ, ಬ್ರಾಹ್ಮಣರನ್ನು ಕೊಲ್ಲುವುದೂ, ಬ್ರಾಹ್ಮಣರ ಚಿನ್ನವನ್ನು ಕದಿಯುವುದೂ, ಮಾತೃಗಮನಮಾಡು

ಅಸಾ(ಯತ್ನಾ)ಕ್ಷಾನ್ಮಾತೃಗಮನಂ ಸ್ವಪುತ್ರೀಗಮನಂ ತಥಾ ।
ಸ್ನುಷಾಯಾ ಗಮನಂ ತದ್ವದ್ಭಗಿನೀಗಮನಂ ತಥಾ ॥೮॥

ಶಿವಸ್ಯ ಮೂರ್ತೇಶ್ಚಲನಂ ವಿಷ್ಣೋಶ್ಚ ಬ್ರಹ್ಮಣಸ್ತಥಾ ।
ಅತಿಪಾತಕಮಿತ್ಯಾಹುರ್ಮುನಯೋ ವೇದವಿತ್ತಮಾಃ ॥೯॥

ರಾಜನ್ಯವೈಶ್ಯಯೋರ್ಹಿಂಸಾ ಯಜ್ಞಸಂಬಂಧಿನಸ್ತಥಾ ।
ರಜಸ್ವಲಾಯಾ ಗರ್ಭಿಣ್ಯಾ ಆತ್ರೇಯ್ಯಾ(ರ್ತಾಯಾ)ಶ್ಚ ವಧಸ್ತಥಾ ॥೧೦॥

ಅವಿಜ್ಞಾತಸ್ಯ ಗರ್ಭಸ್ಯ ಶರಣಾಗತದೇಹಿನಃ ।
ಕೂಟಸಾಕ್ಷ್ಯಂ ಸುಹೃದ್ಧಿಂಸಾ ಬ್ರಾಹ್ಮಣಸ್ಯ ತಪೋಧನಾಃ ॥೧೧॥

ಪೃಥಿವೀಹರಣಂ ತದ್ವತ್ಪಿತೃವ್ಯಸ್ಯ ತಥೈವ ಚ ।
ಮಾತಾಮಹಸ್ಯ ವಿಪ್ರೇಂದ್ರಾ ಮಾತುಲಸ್ಯ ನೃಪಸ್ಯ ಚ ॥೧೨॥
ಭಾರ್ಯಾಽಭಿಗಮನಂ ತದ್ವತ್ಪ್ರಾಹುಃ ಪ್ರಾಸಂಗಿಕಾಭಿಧಮ್ ।

ವುದು, ಯಾವಾಗಲೂ ತಾಯಿ ಮತ್ತು ಮೇಲೆಹೇಳಿದವರೊಡನೆಯೂ ಸೇರಿರುವುದು – ಇವುಗಳೆಲ್ಲವೂ ಮಹಾಪಾತಕಗಳೆನ್ನಿಸಿಕೊಳ್ಳುತ್ತವೆ. ॥೬-೭॥

ವೇದವನ್ನು ತಿಳಿದಿರುವ ಋಷಿಗಳಿರಾ, ಸಾಕ್ಷಾತ್ ತನ್ನ ತನ್ನ ತಾಯಿಯಲ್ಲಿ ಗಮಿಸುವುದೂ, ಇದರಂತೆ ತನ್ನ ಮಗಳು, ಸೊಸೆ, ಸಹೋದರಿಯರು ಇವರುಗಳ ಸಹವಾಸವನ್ನು ಮಾಡುವುದೂ, ಶಿವ, ವಿಷ್ಣು, ಬ್ರಹ್ಮ ಇವರ ವಿಗ್ರಹಗಳನ್ನು ಕಿತ್ತುಹಾಕುವುದೂ, ಇವುಗಳನ್ನು ಅತಿಪಾತಕವೆಂದು ಹೇಳುತ್ತಾರೆ. ॥೮-೯॥

ಕ್ಷತ್ರಿಯವೈಶ್ಯರನ್ನು ಹಿಂಸೆಮಾಡುವುದು, ಯಾಗದೀಕ್ಷಿತರನ್ನು ಹಿಂಸೆಮಾಡುವುದು, ರಜಸ್ವಲಾಸ್ತ್ರೀ, ಗರ್ಭಿಣಿಸ್ತ್ರೀ, ಬ್ರಹ್ಮಚಾರಿಣೀ—ಇವರುಗಳನ್ನು ಕೊಲ್ಲುವುದು, ಚೆನ್ನಾಗಿ ತಿಳಿಯದಹಾಗಿರುವ ಗರ್ಭವನ್ನು ನಾಶಪಡಿಸುವುದು, ಮರೆಹೊಕ್ಕಿರುವ ಪ್ರಾಣಿಯನ್ನು ಸಂಹಾರಮಾಡುವುದು, ಪಂಚಾಯತಿಯಲ್ಲಿ ಸುಳ್ಳುಸಾಕ್ಷಿ ಹೇಳುವುದು, ತನ್ನದಲ್ಲದ ಭೂಮಿಯನ್ನು ಕದಿಯುವುದು, ಸ್ನೇಹಿತನಿಗೆ ಹಿಂಸೆ ಕೊಡುವುದು, ಬ್ರಾಹ್ಮಣ ಹಿಂಸೆಯನ್ನು ಮಾಡುವುದು, ತನ್ನ ಚಿಕ್ಕಪ್ಪ, ತಂದೆ, ಸೋದರಮಾವ, ರಾಜ ಇವರುಗಳ ಪತ್ನೀಗಮನಮಾಡುವುದು, ಇವೇ ಮೊದಲಾದ ಪಾಪಗಳನ್ನು ಪ್ರಾಸಂಗಿಕಪಾಪವೆಂಬುದಾಗಿ ಹೇಳುತ್ತಾರೆ. ॥೧೦-೧೧-೧೨॥

ಸ್ವಮಾತುಸ್ಸೋದರಾಯಾಸ್ತು ಗಮನಂ ತದ್ವದೇವ ತು ॥೧೩॥

ಮಾತೃಷ್ವಸುರ್ಮಾತೃಸಖ್ಯಾ ದುಹಿತುರ್ಗಮನಂ ತಥಾ ।
ಮಾತುಲಾನೀ ಸ್ನುಷಾಶ್ವಶ್ರೂಗಮನಂ ಚ ತಥೈವ ಚ ॥೧೪॥

ತ್ರಿಪುಂಡ್ರಧಾರಣಾಭಾವೋ ಭೂತ್ಯಾ ಉದ್ಧೂಳನಚ್ಯುತಿಃ ।
ಪುಂಡ್ರಾಂತರಸ್ಯ ವಿಪ್ರೇಂದ್ರಾ ಧಾರಣಂ ತದ್ವದೇವ ತು ॥೧೫॥

ಪಾಶಾಂಕುಶಗದಾದಂಡ ಶಂಖಚಕ್ರಾದಿಭಿರ್ದ್ವಿಜಾಃ ।
ಅಂಕನಂ ವಿಗ್ರಹೇ ಸಂತಃ ಪಾತಕಂ ಪ್ರಾಹುರಾಸ್ತಿಕಾಃ ॥೧೬॥

ಮಾತಾಪಿತ್ರೋಸ್ಸ್ವಸುಶ್ಚೈವ ಗಮನಂ ಶ್ರೋತ್ರಿಯಸ್ಯ ಚ ।
ಋತ್ವಿಗಧ್ಯಾಪಕಸ್ಯಾಪಿ ಮಿತ್ರಸ್ಯ ಚ ತಥೈವ ಚ ॥೧೭॥

ಭಾರ್ಯಾಽಭಿಗಮನಂ ತದ್ವತ್ ಸ್ವವಧೂಸಖ್ಯುರಾಸ್ತಿಕಾಃ ।
ಸ್ವಗೋತ್ರಾಯಾಸ್ತಥಾ ವಿಪ್ರಾಃ ಕನ್ಯಕಾಯಾಸ್ತಥೈವ ಚ ॥೧೮॥

ಚತುರ್ಥಾಶ್ರಮನಿಷ್ಠಾಯಾ ನಿಕ್ಷಿಪ್ತಾಯಾಃ ಸ್ತ್ರಿಯಾಸ್ತಥಾ ।
ಪಾಷಂಡೇಷು ಚ ನಿಷ್ಠಾನಾಂ ಸಂಬಂಧೋ ದ್ವಿಜಪುಂಗವಾಃ ॥೧೯॥

ತನ್ನ ತಾಯಿಯ ಅಕ್ಕತಂಗಿಯರು, ತಾಯಿಯ ಗೆಳತಿಯರು, ಅವರ ಮಕ್ಕಳು, ಸೋದರಮಾವನ ಹೆಂಡಿತಿಯು, ಸೊಸೆಯರು, ತನ್ನ ಅತ್ತೆ ಇವರುಗಳ ಸಂಗಮಾಡುವುದು, ತ್ರಿಪುಂಡ್ರವನ್ನು ಧರಿಸದೆ ಇರುವುದು, ಮೈಗೆಲ್ಲಕ್ಕೂ ಭಸ್ಮಲೇಪನ ಮಾಡಿಕೊಳ್ಳದೆ ಇರುವುದು, ಊರ್ಧ್ವಪುಂಡ್ರಾದಿಗಳನ್ನು ಧರಿಸುವುದು, ಮೈಯಲ್ಲಿ ಪಾಶಾಯುಧ, ಅಂಕುಶ, ಗದಾ, ದಂಡಾಯುಧ, ಶಂಖಚಕ್ರ---ಇವುಗಳ ಆಕಾರದಂತೆ ಗುರುತುಮಾಡಿಕೊಳ್ಳುವುದು ಇವುಗಳನ್ನು ಸತ್ಪುರುಷರು ಪಾತಕವೆಂದು ಹೇಳುತ್ತಾರೆ. ||೧೩-೧೪-೧೫-೧೬||

ತಾಯಿತಂದೆ, ಇವರ ಸಹೋದರಿಯರು, ಶೋತ್ರಿಯನಾದ ಬ್ರಾಹ್ಮಣನ ಪತ್ನಿ, ಋತ್ವಿಜರ ಪತ್ನಿ, ಪಾಠಹೇಳುವವರ ಪತ್ನಿ, ಸ್ನೇಹಿತನ ಪತ್ನಿ, ಇವರುಗಳ ಸಂಗವು, ತನ್ನ ಪತ್ನಿಯ ಗೆಳತಿಯರ ಸಂಗವು, ತನ್ನ ಗೋತ್ರದಲ್ಲಿ ಹುಟ್ಟಿದ ಸ್ತ್ರೀಸಂಗವು, ರಜಸ್ವಲೆಯಾಗದ ಕನ್ಯೆಯ ಸಂಗವು, ಸಂನ್ಯಾಸಿನಿಯ ಸಂಗವು, ತನ್ನಲ್ಲಿ ರಕ್ಷಣೆಗಾಗಿ ಅಪ್ಪರಿಂದ ಇಡಲ್ಪಟ್ಟ ಸ್ತ್ರೀಸಹವಾಸವು, ಪಾಷಂಡಿಗಳ

ಸ್ವಸ್ಯೈವ ಗಮನಂ ಪ್ರಾಪ್ತಸ್ತ್ರಿಯೋ ಗಮನಮೇವ ಚ ।
ದುರ್ಗಾದಿತ್ಯಾದಿ ದೇವಾನಾಂ ಚಾಲನಂ ವಿಗ್ರಹಸ್ಯ ಚ ॥೨೦॥

ಮುಖ್ಯೋಪಪಾತಕಂ ಪ್ರಾಹುರ್ಮಹಾನ್ತೋ ವೇದವಿತ್ತಮಾಃ ।
ಅಸತ್ಯಭಾಷಣಂ ತದ್ವತ್ಪೈಶುನ್ಯಂ ರಾಜಗಾಮಿ ಚ ॥೨೧॥

ಗುರೋಶ್ಚಾಲೀಕ ನಿರ್ಬಂಧೋ ವೇದನಿಂದಾ ತಥೈವ ಚ ।
ಅಧೀತಾಯಾಶ್ಶ್ರುತೇಸ್ತ್ಯಾಗಸ್ಸ್ವಗ್ನೇಸ್ತ್ಯಾಗಸ್ತಥೈವ ಚ ॥೨೨॥

ಪಿತೃಮಾತೃಷ್ವಸೃತ್ಯಾಗಃ ಸ್ವಭಾರ್ಯಾತ್ಯಾಗ ಏವ ಚ ।
ಅಭಕ್ಷ್ಯಭಕ್ಷಣಂ ತದ್ವತ್ಪರಾರ್ಥಗ್ರಹಣಂ ತಥಾ ॥೨೩॥

ಪರದಾರನಿಷೇವಾ ಚ ತಥಾಽಯೋಜ್ಯಸ್ಯ ಯೋಜನಮ್
ಭೃತಕಾಧ್ಯಾಪನಂ ತದ್ವದ್ಭೃತ್ಯಾಽಧ್ಯಯನಮೇವ ಚ ॥೨೪॥

ಸರ್ವಾಧಿಕಾರಕರಣಂ ಮಹಾಯಂತ್ರಪ್ರವರ್ತನಮ್ ।
ದ್ರುಮಗುಲ್ಮ ಲತಾದೀನಾಂ ಹಿಂಸಯಾ ಜೀವನಂ ತಥಾ ॥೨೫॥

(ವೇದಬಾಹ್ಯರ) ಸಹವಾಸವು ಇವುಗಳನ್ನೆಲ್ಲವನ್ನೂ ಉಪಪಾತಕವೆಂದು ಪಂಡಿತರು ಹೇಳುತ್ತಾರೆ. ||೧೭-೧೮-೧೯||

ತಾನಾಗಿಯೇ ಬಂದ, ನಾವಾಗಿಯೇ ಪಡೆದ, ಸ್ತ್ರೀಸಂಗವು, ದುರ್ಗಗಳನ್ನು ಹಾಳುಮಾಡುವುದು, ದುರ್ಗಾ, ಸೂರ್ಯಾದಿ ದೇವತೆಗಳ ವಿಗ್ರಹಗಳನ್ನು ಕಿತ್ತುಹಾಕುವುದು–ಇವುಗಳನ್ನು ಉಪಪಾತಕಗಳೆಂದು ಹೇಳುತ್ತಾರೆ. ||೨೦||

ಸುಳ್ಳುಹೇಳುವುದು, ಚಾಡಿಹೇಳುವುದು, ರಾಜದ್ರೋಹಮಾಡುವುದು, ಗುರುಗಳಿಗೆ ಅಪ್ರಿಯವಾದದ್ದನ್ನು ಹೇಳುವುದು, ವೇದವನ್ನು ದೂಷಿಸುವುದು, ಅಧ್ಯಯನಮಾಡಿದ ವೇದವನ್ನು ಮರೆಯುವುದು, ಅಗ್ನಿಯನ್ನು ಸೇವೆಮಾಡದೆ ಬಿಡುವುದು, ತಾಯಿತಂದೆಯರ ಸಹೋದರಿಯರನ್ನು ರಕ್ಷಣೆಮಾಡದೆಬಿಡುವುದು, ತನ್ನ ಹೆಂಡಿತಿಯನ್ನು ಬಿಡುವುದು, ತಿನ್ನಬಾರದ ಶೂದ್ರಾನ್ನಾದಿಗಳನ್ನು ತಿನ್ನುವುದು, ಇತರರ ದ್ರವ್ಯವನ್ನು ತೆಗೆದುಕೊಳ್ಳುವುದು, ಪರಸ್ತ್ರೀಯನ್ನು ಸೇವಿಸುವುದು, ಸಂಬಂಧಮಾಡಬಾರದವರೊಡನೆ ಸಂಬಂಧಮಾಡಿಸುವುದು, ದುಡ್ಡು ತೆಗೆದುಕೊಂಡು ಪಾಠಹೇಳುವುದು, ದುಡ್ಡಿಗಾಗಿಯೇ ಅಧ್ಯಯನಮಾಡುವುದು, ಸರ್ವಾಧಿಕಾರಿಯಾ

ಅಭಿಚಾರಕ್ರಿಯಾ ತದ್ವತ್ ಸ್ವಸ್ಯೈವ ಪಚನಂ ತಥಾ ।
ಅನಾಹಿತಾಗ್ನಿತಾ ತದ್ವದ್ಬ್ರಹ್ಮಚರ್ಯವಿವರ್ಜನಮ್ ॥೨೬॥

ಯಜ್ಞಸ್ಯಾಕರಣಂ ತದ್ವತ್ಪುತ್ರಾನುತ್ಪಾದನಂ ತಥಾ ।
ಅಸಚ್ಛಾಸ್ತ್ರಾಭಿಗಮನಂ ನಾಸ್ತಿಕ್ಯಂ ಚ ಕುಶೀಲತಾ ॥೨೭॥

ಮದ್ಯಪಸ್ತ್ರೀನಿಷೇವಾ ಚ ಪ್ರಾಹುರ್ಗೌಣೋಪಪಾತಕಮ್ ।
ವಿಪ್ರಾಣಾಂ ರೋಗಕಾರಿತ್ವಮಘ್ರೇಯಘ್ರಾತಿಮೋ(ರೇ)ವ ಚ ॥೨೮॥

ಸುರಾಘ್ರಾತಂ ತಥಾ ಜೈಹ್ಮ್ಯಂ ಪಶೌ ಪುಂಸಿ ಚ ಮೈಥುನಮ್ ।
ಜಾತಿಭ್ರಂಶಕರಂ ಪ್ರಾಹುರ್ಧಾರ್ಮಿಕಾ ವೇದಪಾರಗಾಃ । ॥೨೯॥

ಗ್ರಾಮಾರಣ್ಯಪಶೂನಾಂ ತು ಹಿಂಸನಂ ಮುನಿಪುಂಗವಾಃ ।
ಸಂಕೀರ್ಣಕರಣಂ ಪ್ರಾಹುಃ ಧಾರ್ಮಿಕಾ ವೇದಪಾರಗಾಃ ॥೩೦॥

ಗಿರುವುದು, ದೊಡ್ಡ ದೊಡ್ಡ ಯಂತ್ರಗಳನ್ನು ಸ್ಥಾಪಿಸುವುದು, ಮರ, ಗಿಡಗಳ ಪೊದೆ ಬಳ್ಳಿಗಳು ಇವುಗಳನ್ನು ಕಡಿದು ಮಾರಿ ಅದರಿಂದ ಜೀವನ ಮಾಡುವುದು, ಅಭಿಚಾರಮಾಡುವುದು (ಅಭಿಚಾರವೆಂದರೆ ಕ್ಷುದ್ರದೇವತೆಗಳ ಸಹಾಯದಿಂದ ಮತ್ತೊಬ್ಬರಿಗೆ ಹಿಂಸೆಯಾಗುವಂತೆ ಮಾಟಮಾಡುವುದು.), ತನಗಾಗಿಯೇ ಅಡಿಗೆ ಮಾಡಿಕೊಳ್ಳುವುದು, ಅಗ್ನಿಯನ್ನು ಆಧಾನಮಾಡದಿರುವುದು, ಬ್ರಹ್ಮಚರ್ಯವನ್ನು ಬಿಡುವುದು, ಯಜ್ಞಮಾಡದಿರುವುದು, ಮಕ್ಕಳನ್ನು ಪಡೆಯದಿರುವುದು, ಕೆಟ್ಟದಾದ ಶಾಸ್ತ್ರಗಳನ್ನು ಅಭ್ಯಾಸಮಾಡುವುದು--ಇವೇ ಮೊದಲಾದ ಪಾಪಗಳನ್ನು ಶಾಸ್ತ್ರಜ್ಞರು ಗೌಣವಾದ ಉಪಪಾತಕವೆಂದು ಹೇಳುತ್ತಾರೆ. ॥೨೧-೨೨-೨೩-೨೪-೨೫-೨೬-೨೭॥

ಬ್ರಾಹ್ಮಣರಿಗೆ ಕಾಯಿಲೆಬರುವಹಾಗೆ ಮಾಡುವುದು, ಕೆಟ್ಟದಾದ ವಾಸನೆಯನ್ನು ತೆಗೆದುಕೊಳ್ಳುವುದು, ಮದ್ಯದ ವಾಸನೆಯನ್ನನುಭವಿಸುವುದು, ವಕ್ರವಾದ ಮಾರ್ಗದಲ್ಲಿರುವುದು, ಪಶು ಪುರುಷರು ಇವರುಗಳಲ್ಲಿ ಮೈಥುನಮಾಡುವುದು--ಇವುಗಳನ್ನು ಜಾತಿಭ್ರಂಶಕರವೆಂಬ ಪಾಪವನ್ನಾಗಿ ಹೇಳುತ್ತಾರೆ. ॥೨೮-೨೯॥

ಎಲೈ ಋಷಿಗಳೇ, ಗ್ರಾಮುಗಳನ್ನೂ, ಕಾಡುಗಳನ್ನೂ, ಪಶುಗಳನ್ನೂ, ಹಿಂಸೆ ಮಾಡುವುದನ್ನು ಸಂಕೀರ್ಣಕರಣವೆಂಬ ಪಾಪವನ್ನಾಗಿ ಧರ್ಮಿಷ್ಠರು ಹೇಳುತ್ತಾರೆ. ॥೩೦॥

ನಿಂದಿತೇಭ್ಯೋ ಧನಾದಾನಮನ್ನಾದಾನಂ ತಥೈವ ಚ ।
ಕುಸೀದಜೀವನಂ ಚೈವ ವಾಣಿಜ್ಯಮನೃತೋಕ್ತಿತಾ ॥೩೧॥

ಶೂದ್ರಸ್ಯ ಯಾಜನಂ ಪ್ರಾಹುರಪಾತ್ರೀಕರಣಾತ್ಮಕಮ್ ।
ಪಕ್ಷಿಣಾಂ ಘಾತನಂ ಚಾಪಿ ಜಲಸ್ಥಲನಿವಾಸಿನಾಮ್ ॥೩೨॥

ಮದ್ಯಸ್ಪೃಷ್ಟಸ್ಯ ಭುಕ್ತಿಂ ಚ ಪ್ರಾಹುಸ್ಸಂತೋ ಮಲಾವಹಮ್ ।
ಅನುಕ್ತಾನಿ ಸಮಸ್ತಾನಿ ಪ್ರಕೀರ್ಣಕ ಸಮಾಹ್ವಯಮ್ ॥೩೩॥

ಪ್ರವದಂತಿ ಹಿ ವಿದ್ವಾಂಸಸ್ಸತ್ಯಧರ್ಮಪರಾಯಣಾಃ ।
ಅದಂಡ್ಯದಂಡನಂ ಚೈವ ಯುದ್ಧೇ ಭೀತ್ಯಾ ಪಲಾಯನಮ್ ॥೩೪॥

ಕ್ಷತ್ರಿಯಸ್ಯ ವಿಶೇಷೇಣ ಮಹಾಪಾತಕಮುಚ್ಯತೇ ।
ವಂಚನಂ ತು ತುಲಾಮಾನೇ ಮಹಾಪಾಪಂ ವಿಶಾಂ ಭವೇತ್ ॥೩೫॥

ಅಪವಾದಗಳಿಗೊಳಗಾದವರಿಂದ ದ್ರವ್ಯವನ್ನು ತೆಗೆದುಕೊಳ್ಳುವುದು, ನೀಚರಾದವರಿಗೆ ಅನ್ನದಾನಮಾಡುವುದು, ಅಥವಾ ಅಂಥವರಿಂದ ಅನ್ನವನ್ನು ಸ್ವೀಕರಿಸುವುದು, ಹಣದ ಬಡ್ಡಿಯಿಂದಲೇ ಜೀವನಮಾಡುವುದು, ವ್ಯಾಪಾರದಿಂದ ಜೀವನಮಾಡುವುದು, ಸುಳ್ಳುಹೇಳುವುದು, ಶೂದ್ರನಿಂದ ಯಜ್ಞಮಾಡಿಸುವುದು, ಇವುಗಳನ್ನು ಅಪಾತ್ರೀಕರಣವೆಂಬ ಪಾಪವನ್ನಾಗಿ ಹೇಳುತ್ತಾರೆ. ॥೩೧॥

ನೀರಿನಲ್ಲಿಯೂ ನೆಲದಲ್ಲಿಯೂ ವಾಸಮಾಡುವ ಪಕ್ಷಿಗಳನ್ನು ಕೊಲ್ಲುವುದು, ಮದ್ಯಕ್ಕೆ ಮುಟ್ಟಿರುವ ಪದಾರ್ಥಗಳನ್ನು ತಿನ್ನುವುದು, ಇವುಗಳನ್ನು ಮಲಾವಹವೆಂಬ ಪಾಪವನ್ನಾಗಿ ಸತ್ಪುರುಷರು ಹೇಳುತ್ತಾರೆ. ॥೩೨॥

ಇಲ್ಲಿ ಹೇಳದಿರುವ ಇತರ ಎಲ್ಲಾ ಪಾಪಗಳನ್ನೂ, ಸತ್ಯಧರ್ಮ ಇವುಗಳಲ್ಲಿ ಆಸಕ್ತರಾದ ವಿದ್ವಾಂಸರು ಪ್ರಕೀರ್ಣಕವೆಂಬ ಪಾಪವನ್ನಾಗಿ ಹೇಳುತ್ತಾರೆ. ॥೩೩॥

ಶಿಕ್ಷೆಗೆ ಅನರ್ಹರಾದವರಿಗೆ ಶಿಕ್ಷೆಮಾಡುವುದು, ಯುದ್ಧದಲ್ಲಿ ಹೆದರಿಕೆಯಿಂದ ಹಿಂತಿರುಗಿ ಓಡುವುದು, ಇವುಗಳನ್ನು ಕ್ಷತ್ರಿಯರಿಗೆ ವಿಶೇಷವಾದ ಮಹಾಪಾಪವನ್ನಾಗಿ ಹೇಳುತ್ತಾರೆ. ॥೩೪॥

ತಕ್ಕಡಿಹಿಡಿದು ತೂಗುವಾಗ ಮೋಸಮಾಡುವಿಕೆಯು, ವೈಶ್ಯರಿಗೆ ಮಹಾಪಾಪವೆನ್ನಿಸಿಕೊಳ್ಳುವುದು. ॥೩೫॥

ಮಾಂಸಸ್ಯ ವಿಕ್ರಯಂ ಚೈವ ಸುರಾವಿಕ್ರಯಣಂ ತಥಾ ।
ಬ್ರಾಹ್ಮಣೀ ಗಮನಂ ಚೈವ ಪಯಃಪಾನಂ ತು ಕಾಪಿಲಮ್ ॥೩೬॥

ಮಹಾಪಾಪಂ ಮಯಾ ಪ್ರೋಕ್ತಂ ಶೂದ್ರಾಣಾಂ ಚ ವಿಶೇಷತಃ ।
ಸಂಕರಾಣಾಂ ದ್ವಿಜದ್ವೇಷೋ ಮಹಾಪಾತಕಮುಚ್ಯತೇ ॥೩೭॥

ಪುರುಷಾಣಾಂ ತಥಾ ಸ್ತ್ರೀಣಾಂ ಸಮಾನಂ ಪಾತಕಂ ಸ್ಮೃತಮ್ ।
ನೀಚಾಭಿಗಮನಂ ಗರ್ಭಪಾತನಂ ಭರ್ತೃಹಿಂಸನಮ್ ॥೩೮॥

ಭರ್ತೃಶಿಷ್ಯಸ್ಯ ಗಮನಂ ತಥಾ ಭರ್ತೃಗುರೋರಪಿ ।
ವಿಶೇಷೇಣ ಸ್ತ್ರಿಯಾಸ್ಸಂತಃ ಪಾತಕಂ ಪ್ರವದಂತಿ ಹಿ ॥೩೯॥

ಬಹುನಾಽತ್ರ ಕಿಮುಕ್ತೇನ ಶ್ರುತಿಸ್ಮೃತ್ಯುದಿತಂ ವಿನಾ ।
ಯತ್ಕಿಂಚಿದಪಿ ಕುರ್ವಾಣಃ ಪಾತಕೀ ಸ್ಯಾನ್ನ ಸಂಶಯಃ ॥೪೦॥

ಮಾಂಸವನ್ನು ಮಾರುವುದು, ಮದ್ಯವನ್ನು ಮಾರುವುದು, ಬ್ರಾಹ್ಮಣಸ್ತ್ರೀ ಸಹವಾಸಮಾಡುವುದು, ಕಪಿಲವರ್ಣದ ಹಸುವಿನ ಹಾಲನ್ನು ಕುಡಿಯುವುದು, ಇವುಗಳು ಶೂದ್ರನಿಗೆ ಮಹಾಪಾಪವೆಂದು ನನ್ನಿಂದ ಹೇಳಲ್ಪಟ್ಟಿವೆ. ॥೩೬॥

ಸಂಕರಜಾತಿಯವರಿಗೆ ಬ್ರಾಹ್ಮಣ ಕ್ಷತ್ರಿಯ, ವೈಶ್ಯ—ಇವರುಗಳಲ್ಲಿ ದ್ವೇಷ ಮಾಡುವುದು ಮಹಾಪಾತಕವು. ॥೩೭॥

ಹೆಂಗಸರಿಗೂ ಗಂಡಸರಿಗೂ ಹೇಳಲ್ಪಟ್ಟ ಈ ಪಾಪಗಳೆಲ್ಲವೂ ಒಂದೇ ಸಮಾನವಾದವುಗಳು.

ನೀಚಪುರುಷರ ಸಹವಾಸಮಾಡುವುದು, ಅಪವಾದಭಯದಿಂದ ಗರ್ಭವನ್ನು ನಾಶಮಾಡುವುದು, ಗಂಡನಿಗೆ ಹಿಂಸೆಕೊಡುವುದು, ಗಂಡನ ಶಿಷ್ಯನ, ಗಂಡನ ಗುರುಗಳ ಸಂಗಮಾಡುವುದು, ಇವುಗಳು ಹೆಂಗಸರಿಗೆ ವಿಶೇಷವಾದ ಪಾಪಗಳು ಎಂದು ಸತ್ಪುರುಷರು ಹೇಳುತ್ತಾರೆ. ॥೩೮-೩೯॥

ಎಲೈ ಋಷಿಗಳೇ, ಬಹಳ ಹೇಳಿ ಏನುಪ್ರಯೋಜನ? ಶ್ರುತಿಸ್ಮೃತಿಗಳಲ್ಲಿ ಹೇಳದಿರುವ ಯಾವುದೊಂದು ಕೆಲಸವನ್ನು ಮಾಡಿದರೂ ಮನುಷ್ಯನು ಪಾತಕಿ ಎನ್ನಿಸಿಕೊಳ್ಳುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲವು. ॥೪೦॥

ವೇದಸಾರತರಃ ಕಥಿತಸ್ತು ವಃ
ಶೋಕಮೋಹಸಮುದ್ರನಿವಾರಕಃ ।
ಪಾತಕಾನಿ ವಿಹಾಯ ಮಹಾಮತಿಃ
ದೇವದೇವಮನಿಶಂ ಶರಣಂ ವ್ರಜೇತ್ ॥೪೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಪಾತಕವಿಚಾರಕಥನಂ ನಾಮ ಏಕಚತ್ವಾರಿಂಶಾಧ್ಯಾಯಃ

ನಿಮಗಾಗಿ ವೇದದ ಮುಖ್ಯಸಾರವನ್ನು ಹೇಳಿದ್ದೇನೆ. ಇದು ದುಃಖ, ಅಜ್ಞಾನಗಳೆಂಬ ಸಮುದ್ರವನ್ನು ದಾಟಿಸತಕ್ಕದ್ದು. ಆದ್ದರಿಂದ ಮೇಲೆ ಹೇಳಿರುವ ಪಾಪಗಳನ್ನೆಲ್ಲವನ್ನೂ ಬಿಟ್ಟು ಬುದ್ಧಿವಂತನಾದವನು ದೇವತೆಗಳಿಗೆಲ್ಲರಿಗೂ ದೇವನಾದ ಶಿವನನ್ನು ಮರೆಹೊಗಬೇಕು. ಎಂದು ಸೂತರು ಶೌನಕಾದಿಋಷಿಗಳಿಗೆ ಹೇಳಿದರು. ||೪೧||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮಾಡಬಾರದ ಪಾಪಗಳ ಸ್ವರೂಪವನ್ನು ವಿವರಿಸುವ
ನಲವತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ದ್ವಿಚತ್ವಾರಿಂಶೋಽಧ್ಯಾಯಃ ||

ನಲವತ್ತೆರಡನೆಯ ಅಧ್ಯಾಯವು

(ಪ್ರಾಯಶ್ಚಿತ್ತವಿಚಾರಃ)

|| ಓಂ ಸೂತ ಉವಾಚ ||

ಪ್ರಾಯಶ್ಚಿತ್ತರಹಸ್ಯಂ ವಃ ಪ್ರವಕ್ಷ್ಯಾಮಿ ಸಮಾಸತಃ ।
ಶ್ರದ್ಧಯಾ ಸಹಿತಾ ಯೂಯಂ ಶೃಣುತ ಬ್ರಹ್ಮವಿತ್ತಮಾಃ ॥೧॥

ವೇದಾಂತವಾಕ್ಯಜಂ ಜ್ಞಾನಂ ಬ್ರಹ್ಮಾತ್ಮೈಕತ್ವಗೋಚರಮ್ ।
ಬುದ್ಧಿಪೂರ್ವಕೃತಂ ಪಾಪಂ ಕೃತ್ಸ್ನಂ ದಹತಿ ವಹ್ನಿವತ್ ॥೨॥

ಬಿಡಬೇಕೆಂದು ಹೇಳಿದ ಹತ್ತು ವಿಧವಾದ ಪಾಪಗಳ ಸ್ವರೂಪವನ್ನು ತಿಳಿಸಿ, ಕಾರಣಾಂತರದಿಂದ ಅವು ಸಂಭವಿಸಿದರೆ, ಅವುಗಳ ನಿವಾರಣೆಗೂ ದ್ವಾದಶವಾರ್ಷಿಕಾದಿ ಪ್ರಾಯಶ್ಚಿತ್ತವನ್ನು ವಿವರಿಸುತ್ತಾರೆ. ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಬ್ರಾಹ್ಮಣರಾ, ಪ್ರಾಯಶ್ಚಿತ್ತಗಳ ಗುಟ್ಟನ್ನು ಸಂಕ್ಷೇಪವಾಗಿ ನಿಮಗೆ ಹೇಳುತ್ತೇನೆ, ಭಕ್ತಿಯುಳ್ಳವರಾಗಿ ಕೇಳಿ. ||೧||

ವೇದಾಂತವಾಕ್ಯಗಳಿಂದ ಉಂಟಾಗುವ "ಜೀವನಿಗೂ ಬ್ರಹ್ಮನಿಗೂ ಭೇದವಿಲ್ಲವು." ಎಂಬ ಜ್ಞಾನವು ಬುದ್ಧಿಪೂರ್ವಕವಾಗಿ ಮಾಡಿದ, ತಿಳಿವಳಿಕೆ ಇಲ್ಲದೆಯೂ ಮಾಡಿದ, ಎಲ್ಲ ಪಾಪಗಳನ್ನೂ ಬೆಂಕಿಯಹಾಗೆ ಸುಟ್ಟುಬಿಡುತ್ತದೆ. ||೨||

ಕರ್ತಾರಂ ಕರ್ಮ ಬಧ್ನಾತಿ ಖಲು ವೇದವಿದಾಂ ವರಾಃ ।
ಜ್ಞಾನಿನೋ ನೈವ ಕರ್ತೃತ್ವಂ ಕರ್ತೃತ್ವಸ್ಯ ತು ಸಾಕ್ಷಿಣಃ ॥೩॥

ಕಾಯಿಕಂ ವಾಚಿಕಂ ಚೈವ ಮಾನಸಂ ಕರ್ಮ ನಾನ್ಯಥಾ ।
ತಥಾ ಸತಿ ಕಥಂ ಕರ್ಮ ಭವೇತ್ತತ್ಸಾಕ್ಷಿರೂಪಿಣಃ ॥೪॥

ವೇದಾರ್ಥವನ್ನು ತಿಳಿದವರಲ್ಲಿ ಶ್ರೇಷ್ಠರಾದ ಋಷಿಗಳೇ, ಕರ್ತೃತ್ವವೆಂದರೆ ಕ್ರಿಯೆಗೆ ಆಶ್ರಯವಾಗಿರುವಿಕೆಯು. ಕರ್ಮವು ದೇಹಕ್ಕೆ ಸೇರಿದ್ದಲ್ಲವು. ಬದಲಾಯಿಸುತ್ತಿರುವ, ಸುಟ್ಟುಹೋಗುವ, ದೇಹಕ್ಕೆ ಫಲಭೋಗವು ಸಂಭವಿಸದೆ ಕೃತಹಾನಿ ಅಕೃತಾಭ್ಯಾಗಮ ದೋಷಗಳು ಬರುತ್ತವೆ. ಪ್ರಾಣವೂ ಕರ್ತೃವಲ್ಲವು. ಸುಷುಪ್ತಿಯಲ್ಲಿ ಪ್ರಾಣವಿದ್ದರೂ, ವಿಶೇಷಜ್ಞಾನವಿಲ್ಲದ್ದರಿಂದ ಅಚೇತನವಾದ್ದರಿಂದ ಕರ್ತೃತ್ವವಿಲ್ಲವು. ಇಂದ್ರಿಯ ಅಂತಃಕರಣಗಳಿಗೂ ಕರಣವಾದುದರಿಂದ ಕರ್ತೃತ್ವವಿಲ್ಲವು. ಆತ್ಮನಿಗೂ ಕರ್ತೃತ್ವವು ಬರಲಾರದು. ಏಕೆಂದರೆ ಕ್ರಿಯಾಶ್ರಯತ್ವವು ವಿಕಾರವನ್ನುಂಟುಮಾಡುತ್ತದೆ. ಆತ್ಮನು ಚಿದ್ರೂಪನಾಗಿ ನಿತ್ಯನಾಗಿ ನಿರ್ವಿಕಾರಿಯಾಗಿದಾನೆ. ಆದುದರಿಂದ ಕರ್ತೃತ್ವವು ಎಲ್ಲೂ ಇಲ್ಲದೆ ಅಧ್ಯಾಸದಿಂದ ತೋರುತ್ತಿರುತ್ತದೆ. ಜ್ಞಾನದಿಂದನಾಶವಾಗುತ್ತದೆ. ಕರ್ತೃವನ್ನು ಅಜ್ಞಾನಿಯನ್ನು ಕರ್ಮವು ಸಂಸಾರದಲ್ಲಿ ಬಂಧಿಸಿ ದುಃಖವನ್ನುಂಟುಮಾಡುತ್ತದೆ. ಜ್ಞಾನಿಗಾದರೋ ಕರ್ತೃತ್ವಕ್ಕೂ ಸಾಕ್ಷಿಯಾದವನಾದುದರಿಂದ ಆತ್ಮನಿಗೆ ಕರ್ತೃತ್ವವು ಸಂಭವಿಸುವುದೇ ಇಲ್ಲವು. ಈ ಅರ್ಥವನ್ನೇ "ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್। ವಿವಿಧಾಶ್ಚ ಪೃಥಕ್ ಚೇಷ್ಟಾದೈವಂ ಚೈವಾತ್ರ ಪಂಚಮಮ್। ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ। ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ। ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ। ಪಶ್ಯತ್ಯ ಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ ॥" ಎಂದು ಭಗವದ್ಗೀತೆ ಅ. ೧೮. ಶ್ಲೋ. ೧೪-೧೬ ರಲ್ಲಿ ಹೇಳಿರುತ್ತದೆ. ॥೩॥

ಕರ್ಮವು ಕಾಯಿಕವೆಂದೂ ವಾಚಿಕವೆಂದೂ ಮಾನಸಿಕವೆಂದೂ ಮೂರು ಬಗೆಯಾಗಿದೆ. ಬೇರೆ ಯಾವುದೂ ಇಲ್ಲವು. ಆದರೆ ದೇಹದಲ್ಲಿ ನಾನು ಎಂಬ ಅಧ್ಯಾಸವಿರುವ ಅಜ್ಞಾನಿಗೆ ಮಾತ್ರ ಅದು ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರಬಂಧವನ್ನುಂಟುಮಾಡುತ್ತದೆ. ಆದರೂ ಬ್ರಹ್ಮಾತ್ಮೈಕ್ಯಜ್ಞಾನದಿಂದ ಆ ಅಜ್ಞಾನವು ನಷ್ಟವಾಗಿದ್ದರೆ. ಇದೆಲ್ಲಕ್ಕೂಸಾಕ್ಷಿಯಾಗಿರುವ ಆತ್ಮನಿಗೆ ದೇಹಾಭಿಮಾನವಿಲ್ಲದಿರುವುದರಿಂದ ಯಾವ ಕರ್ಮವೂ ಜ್ಞಾನಿಗೆ ಬಂಧಕವಾಗಲಾರದು. ॥೪॥

ಘಟವದ್ದೃಶ್ಯಭೂತಸ್ಯ ಶರೀರಸ್ಯ ತು ಸಾಕ್ಷಿಣಃ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೫॥

ಇಂದ್ರಿಯಾಣಾಂ ಸಮಸ್ತಾನಾಂ ಸದಾ ಸಾಕ್ಷಿಸ್ವರೂಪಿಣಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೬॥

ಪ್ರಾಣಾಪಾನಾದಿಭೇದೇನ ವಿಭಕ್ತಸ್ಯ ತು ಸಾಕ್ಷಿಣಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೭॥

ಸಂಕಲ್ಪಲಕ್ಷಣಸ್ಯಾಸ್ಯ ಮನಸಸ್ಸಾಕ್ಷಿರೂಪಿಣಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೮॥

ನಿಶ್ಚಯಾತ್ಮಕವಿಜ್ಞಾನಸಾಕ್ಷಿಣಂ ಬ್ರಹ್ಮವಿತ್ತಮಾಃ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೯॥

ಅಹಂಕಾರಸ್ಯ ದುಃಖಾದಿ ವಿಶಿಷ್ಟಸ್ಯ ತು ಸಾಕ್ಷಿಣಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೦॥

ಗಡಿಗೆ ಮುಂತಾದ ಪದಾರ್ಥಗಳೆಲ್ಲವೂ ದೃಶ್ಯವಾಗಿವೆ. ಹಾಗೆಯೇ ದೇಹ, ಇಂದ್ರಿಯ, ಮನಸ್ಸುಗಳಲ್ಲಿಯೇ ಕರ್ಮವು ಇರಲಿ. ಅದು ಆತ್ಮನಿಗೆ ಬಂಧಕವೂ ಆಗಲಿ ಎಂದರೆ, ದೇಹಾದಿಗಳಲ್ಲಿ ನಾನು ಎಂಬ ಅಜ್ಞಾನಮೂಲಕವಾಗಿದ್ದ ಸಂಬಂಧವು ಜ್ಞಾನದಿಂದ ನಷ್ಟವಾಗಿರುವುದರಿಂದ ಬಂಧಕವಾಗಲಾರದೆಂದು ಹೇಳಬೇಕು. ಆದುದ ರಿಂದ ಬೇರೆ ಬೆಳಕಿನ ಸಹಾಯವನ್ನು ಅಪೇಕ್ಷಿಸದೆ ಸ್ವಪ್ರಕಾಶಚಿದ್ರೂಪನು ಆತ್ಮ ನೆಂದು ತಾನೇ ಸಾಕ್ಷಾತ್ತಾಗಿ ತಿಳಿದಿರುವವನು ಕರ್ಮದಿಂದ ಹೇಗೆತಾನೆ ಬದ್ಧ ನಾದಾನು? ॥೫॥

ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೂ, ಪ್ರಾಣಾಪಾನಾದಿ ಪಂಚಪ್ರಾಣ ಗಳಿಗೂ, ಹೀಗೋ ಹಾಗೋ ಎಂದು ಮುಂತಾಗಿ ನಿಶ್ಚಯವಿಲ್ಲದಿರುವ, ಸಂಕಲ್ಪ, ವಿಕಲ್ಪರೂಪವಾದ ಮನಸ್ಸಿಗೂ, ಹೀಗೆಯೇ ಸರಿ ಎಂದು ನಿಶ್ಚಯರೂಪವಾದ ಬುದ್ಧಿಗೂ, ಅಹಂ ಎಂದು ದೇಹಾದಿಗಳಲ್ಲಿ ಅಭಿಮಾನರೂಪವಾದ ಅಹಂಕಾರಕ್ಕೂ, ಇಂಥ ವಂಶದವನು, ಗುಣ, ಶಕ್ತಿ, ಮುಂತಾದುವು ಇರುವವನು, ಎಂಬ ವಿಶೇಷ ರೂಪವಾದ ಅಹಂಭಾವಕ್ಕೂ, ಅದರಿಂದ ಆಗುವ ನಾನು ದುಃಖಸುಖಗಳುಳ್ಳವನು ಎಂಬೀ ಅಭಿಮಾನಕ್ಕೂ, ಸ್ಮರಣರೂಪವಾದ ಚೈತನ್ಯಸ್ವರೂಪವಾದ ಚಿತ್ತಕ್ಕೂ, ಹೀಗೆ

ಚೇತನಾಲಕ್ಷಣಸ್ಯಾಸ್ಯ ಚಿತ್ತಸಂಜ್ಞಸ್ಯ ಸಾಕ್ಷಿಣಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೧॥

ದೇಹೇಂದ್ರಿಯಾದಿಸಂಘಾತಸಾಕ್ಷಿಣಂ ನಿರುಪದ್ರವಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೨॥

ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಾವಸ್ಥಾಸಾಕ್ಷಿಣಮವ್ಯಯಮ್ ।
ಚಿದ್ರೂಪಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೩॥

ಇವೆಲ್ಲಕ್ಕೂ ಸಾಕ್ಷಿಯಾಗಿ ಇವೆಲ್ಲಕ್ಕಿಂತಲೂ ಬೇರೆಯಾಗಿರುವ, ಚಿದ್ರೂಪಮಾತ್ರವೇ ಸ್ವರೂಪವಾಗಿವುಳ್ಳ ಆತ್ಮನೇ ತನ್ನ ಸ್ವರೂಪವೆಂದು ಮನಗಂಡಿರುವವ ಜ್ಞಾನಿಯನ್ನು ಕರ್ಮದಿಂದ ಬಂಧಿಸುವುದು ಹೇಗೆತಾನೇ ಸಂಭವಿಸೀತು ? ॥೬-೭-೮-೯೧೦-೧೧॥

ದೇಹ, ಇಂದ್ರಿಯಗಳು, ಅಂತಃಕರಣ ಇವುಗಳಿಗೆ ಒಟ್ಟು ಕಾರ್ಯಕರಣ ಸಂಘಾತವೆಂದು ವ್ಯವಹಾರವಿದೆ. ಇದರಲ್ಲಿ ದೇಹವು, ಕಾರ್ಯವು. ಇಂದ್ರಿಯಾದಿಗಳು, ಕರಣಗಳು. ಈ ಸಂಘಾತವು ಹುಟ್ಟು, ಇರುವಿಕೆ, ಬೆಳವಳಿಗೆ, ಬದಲಾವಣೆ, ಕ್ಷಯ, ನಾಶಗಳೆಂಬ ಆರು ಬಗೆಯ ಭಾವವಿಕಾರಗಳುಳ್ಳದ್ದಾಗಿದೆ. ಎಂಬುದು ಎಲ್ಲರಿಗೂ ಗೊತ್ತಾಗಿರುವ ಅಂಶವಾಗಿದೆ. ಅಲ್ಲದೆ ಇದು ವಿಕಾರವುಳ್ಳದೂ, ಅನಿತ್ಯವೂ ಆಗಿದೆ. ಈ ಗುಂಪಿಗೇ ಸಾಕ್ಷಿಯಾಗಿರುವ, ವಿಕಾರವಿಲ್ಲದ, ದುಃಖಸಂಬಂಧವಿಲ್ಲದ ಜ್ಞಾನಸ್ವರೂಪನಾದ ಆತ್ಮನೇ ತಾನೆಂದು ಮನಗಂಡಿರುವ ಜ್ಞಾನಿಯನ್ನು ಅಜ್ಞಾನಾಭಿಮಾನಮೂಲಕವಾದ ಕರ್ಮವು ಹೇಗೆತಾನೆ ಬಂಧಿಸೀತು ? ಏಕೆಂದರೆ ಕರ್ಮದಿಂದ ದೊರೆಯಬಹುದಾದ ಫಲವೆಲ್ಲವೂ ದೇಹದ ಆರೋಗ್ಯ, ದಾರ್ಢ್ಯ, ಆಯುಸ್ಸಿನ ಹೆಚ್ಚಿಗೆ, ಮತ್ತು ಬಾಹ್ಯವಾದ ಹೆಂಡಿತಿ, ಮಕ್ಕಳು, ಮನೆ, ಆಸ್ತಿ, ಅಧಿಕಾರ, ಸ್ನೇಹಿತರು, ಸೇವಕರು, ಕುದುರೆ, ಗಾಡಿ ಮುಂತಾದ ವಾಹನಗಳು, ಇವೇ ಆಗಿವೆ. ಅಲ್ಲದೆ ಇವೆಲ್ಲವೂ ಕೆಲವು ಕಾಲಮಾತ್ರ ಇರಬಲ್ಲವು. ಆದುದರಿಂದ ನಶ್ವರಗಳಾಗಿರುವ ಇವುಗಳಿಂದ ನಿಜವಾದ ನಿತ್ಯವಾದ ಸುಖವು ಬರಲಾರದು. ಮತ್ತು ಮೂರ್ತವಾದ ಇವುಗಳಿಗೂ ಅಮೂರ್ತನಾದ ಜೀವನಿಗೂ ಸಂಬಂಧವೂ ವಾಸ್ತವವಾಗಿ ಸಂಭವಿಸದು. ನಾನು, ನನ್ನವು, ಎಂಬ ಅಭಿಮಾನಿಕ ಸಂಬಂಧಮಾತ್ರದಿಂದ ಸುಖಾಭಾಸ ದುಃಖಗಳನ್ನು ಅಜ್ಞಾನದಶೆಯಲ್ಲಿ ಮಾತ್ರ ಇವು ಉಂಟುಮಾಡುತ್ತಿರುತ್ತವೆ. ॥೧೨॥

ಅಲ್ಲದೆ ಆತ್ಮನು ದೇಹೇಂದ್ರಿಯಾದಿಗಳಿಗಿಂತ ಬೇರೆಯಾಗಿರುವ ಹಾಗೆ ಜಾಗ್ರತ್, ಸ್ವಪ್ನ, ನಿದ್ರೆ ಎಂಬ ಮೂರು ಅವಸ್ಥೆಗಳಿಗೂ ಸಾಕ್ಷಿಯಾಗಿರುವನು.

ಸಚ್ಚಿದಾನಂದಸಂಪೂರ್ಣಲಕ್ಷಣಂ ತಮಸಃ ಪರಮ್ ।
ಬ್ರಹ್ಮಾತ್ಮಾನಂ ಸದಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೪॥

ಅವಿಕ್ರಿಯಮಸಂಗಂ ಚ ಪರಿಶುದ್ಧಂ ಸದೋದಿತಂ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೫॥

ಈ ಆತ್ಮನನನ್ನು ತನ್ನ ಸ್ವರೂಪವನ್ನಾಗಿ ಮನಗಂಡಿರುವ ಜ್ಞಾನಿಯನ್ನು ಯಾಗಾದಿ ಕರ್ಮವು ಬಂಧಿಸಲಾರದು. ಏಕೆಂದರೆ ಆತ್ಮಸ್ವರೂಪಜ್ಞಾನದಿಂದ ಮೇಲೆ ಹೇಳಿದ ನಾನು, ನನ್ನದು, ಎಂಬ ಅಭಿಮಾನವು ಅಜ್ಞಾನಮೂಲಕವಾಗಿದ್ದುದರಿಂದ ನಷ್ಟವಾಗಲು, ಕರ್ಮಗಳು ಮುಂಚಿನಂತೆ ಸುಖ ದುಃಖರೂಪವಾದ ಫಲಗಳನ್ನು ಕೊಡಲಾರದೆ ಹೋಗುತ್ತವೆ. ಎಂದು ಭಾವವು. ||೧೩||

ಇರುವಿಕೆ, ತಿಳಿವಳಿಕೆ, ತೃಪ್ತಿಸುಖ ಇವೇ ಸಂಪೂರ್ಣವಾದ ಸ್ವಭಾವವಾಗಿ ಉಳ್ಳ, ಎಲ್ಲ ದುಃಖಕ್ಕೂ ಕಾರಣವಾದ ಅಜ್ಞಾನಕ್ಕೂ ಕಾರಣವಾಗಿರುವ ತಮಸಾ ಅಥವಾ ಮಾಯೆಗೆ ಅಧಿಷ್ಠಾನವಾದ ಸಚ್ಚಿದಾನಂದರೂಪವಾದ ಬ್ರಹ್ಮವೇ ತಾನು ಎಂದು ಜೀವಬ್ರಹ್ಮಾಭೇದವನ್ನು ಯಾವನು ತನ್ನಿಂದ ತಾನೇ ಸರ್ವದಾ ಸಾಕ್ಷಾತ್ಕರಿಸಿಕೊಂಡಿರುತ್ತಾನೋ, ಅಂಥವನನ್ನು ಕರ್ಮವು ಹೇಗೆತಾನೇ ಬಂಧಿಸೀತು?

ಮುಕ್ತಿಯಾದ ಮೇಲೆ "ಅಹಂ ಬ್ರಹ್ಮಾಸ್ಮಿ" ಎನ್ನುವ ಸಾಕ್ಷಾತ್ಕಾರಕ್ಕೆ ವಿಷಯವಾಗುವುದರಿಂದ ದೃಶ್ಯತ್ವವು ಬಂದಹಾಗಾಗುತ್ತೆ. ಆದ್ದರಿಂದ ಬಂಧವುಂಟಾಗಲಿ. ಎಂದರೆ, ಸಾಕ್ಷಾತ್ಕಾರಕ್ಕೆ ವಿಷಯವಾದ್ದರಿಂದ ಕರ್ಮತ್ವವು ಉಂಟಾಗಿ ದ್ವೈತವೂ, ಅದರಿಂದ ಭಯವೂ, ಬಂಧವೂ ಉಳಿಯಬೇಕಾಗುತ್ತದೆ. ಹೀಗೆ ಎನ್ನಲೂ ಆಗದು. ಏಕೆಂದರೆ, ಆ ಸಾಕ್ಷಾತ್ಕಾರರೂಪವಾದ ಕ್ರಿಯೆಗೆಫಲವಾದ ವಿಷಯವು ಉತ್ಪತ್ತಿ, ಆಪ್ತಿ, ವಿಕೃತಿ, ಸಂಸ್ಕೃತಿಗಳೆಂಬ ನಾಲ್ಕು ವಿಧಗಳಲ್ಲಿ ಯಾವುದೂ ಆಗುವುದಿಲ್ಲವು. ಹೇಗೆಂದರೆ ಆತ್ಮನು ಘಟಾದಿಗಳ ಹಾಗೆ ಉತ್ಪಾದ್ಯನಲ್ಲವು. ನಿರವಯವನು; ಗ್ರಾಮವು ಗಮನದಿಂದಲೂ, ವೇದವು ಅಧ್ಯಯನದಿಂದಲೂ, ಆಪ್ಯವಾಗುವಹಾಗೆ ಆತ್ಮನು ಆಪ್ಯನಾಗನು. ಏಕೆಂದರೆ ಸ್ವಸ್ವರೂಪನಾದುದರಿಂದ ನಿತ್ಯಾಪ್ತನು. ಹಾಲು ಮೊಸರಾಗುವ ಹಾಗೆ ಆತ್ಮನು ನಿರವಯವನಾಗಿ ನಿರ್ವಿಕಾರಿಯಾದುದರಿಂದ ವಿಕಾರ್ಯನೂ ಅಲ್ಲವು. ಸಂಸ್ಕೃತಿ ಎಂದರೆ ದೋಷನಿವಾರಣ, ಅಥವಾ ಗುಣಾಧಾನರೂಪವಾಗಿರಬಹುದು. ಆತ್ಮನು ಶುದ್ಧನಾದುದರಿಂದ ದೋಷರಹಿತನು. ಆತ್ಮನಲ್ಲಿ ಯಾವ ಗುಣವನ್ನೂ ಹೊಸದಾಗಿ ಉಂಟುಮಾಡಲಾಗುವುದಿಲ್ಲ. ಏಕೆಂದರೆ ಆತ್ಮನು ಮೂರ್ತ

ಸದಾಕಾಶಾದಿಭೂತಾನಾಂ ಶಬ್ದಾದೀನಾಂ ಚ ಸಾಕ್ಷಿಣಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೬॥

ಅನಿಯೋಜ್ಯಮಕರ್ತಾರಂ ಅಭೋಕ್ತಾರಂ ಪರಾಮೃತಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೭॥

ಸ್ವಯಂಭಾತಂ ಪ್ರಮಾತೀತಂ ಪ್ರಮಾಣಾನಾಂ ಚ ಸಾಕ್ಷಿಣಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೮॥

ವಸ್ತುವಲ್ಲವು. ಆದುದರಿಂದ ಇಂಥಾ ನಿರ್ವಿಕಾರಿಯಾಗಿರುವ ಆತ್ಮವೇ ಸ್ವಸ್ವರೂಪವೆಂದು ಸಾಕ್ಷಾತ್ಕರಿಸಿಕೊಂಡಿರುವವನನ್ನು ಕರ್ಮವು ಬಂಧಿಸಲಾರದು. ॥೧೫॥

ಭೌತವಾದ ದೇಹಾದಿಗಳಲ್ಲಿ ಆತ್ಮಾಧ್ಯಾಸದಿಂದ ಬಂಧದುಃಖಗಳು ವಾರಿತವಾದರೂ, ಭೂತಾಧ್ಯಾಸದಿಂದ ಬಂಧದುಃಖಗಳು ಬರಲಿ. ಎಂದರೆ, ಅದಕ್ಕೂ ಉತ್ತರವನ್ನು ಹೇಳುತ್ತಾರೆ. ಆಕಾಶ ಮುಂತಾದ ಪಂಚಭೂತಗಳಿಗೂ ಮತ್ತು ಶಬ್ದ ಮುಂತಾದ ಭೂತಗುಣಗಳಿಗೂ, ಸರ್ವದಾ ಸಾಕ್ಷಿಯಾಗಿರುವ ಆತ್ಮನನ್ನು ತಾನೆಂದು ಮನಗಂಡಿರುವವನನ್ನು ಕರ್ಮವು ಹೇಗೆ ಬಂಧಿಸಬಲ್ಲದು? ॥೧೬॥

ವೇದ ಮುಂತಾದ ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳು ನನಗೆ ಕರ್ತವ್ಯಧರ್ಮಗಳು, ಶಾಸ್ತ್ರವು ನನ್ನನ್ನು ನಿಯೋಜಿಸುತ್ತವೆ. ಎಂದು ಯಾರು ತಿಳಿಯುತ್ತಾರೋ, ಅಂಥವರು ನಿಯೋಜ್ಯರು. ಅವರಿಗೆ ನಿಯೋಜಕವು ಶಾಸ್ತ್ರವು. ಹಾಗೆಯೇ ಈ ಕರ್ಮವನ್ನು ಮಾಡುವವನು ನಾನು, ಇದರ ಫಲವನ್ನೂ ಅನುಭವಿಸುವವನೂ ನಾನೇ, ಎಂದು ಮುಂತಾದ ನಡೆವಳಿಕೆ ಎಲ್ಲವೂ ಆತ್ಮಸ್ವರೂಪಾಜ್ಞಾನದ ವ್ಯವಹಾರದೆಶೆಯಲ್ಲಿ ಮಾತ್ರ ಸಂಭವಿಸುತ್ತದೆ. ಆದರೆ ಪಾರಮಾರ್ಥಿಕವಾಗಿ ಆತ್ಮನು ನಿಯೋಜ್ಯನೂ ಕರ್ತೃವೂ ಭೋಕ್ತೃವೂ ಅಲ್ಲವು. ನಿರತಿಶಯಾನಂದಸ್ವರೂಪನು. ಇಂಥ ಆತ್ಮನೇ ತಾನೆಂದು ತಿಳಿದಿರುವ ಜ್ಞಾನಿಯನ್ನು ಕರ್ಮವು ಹೇಗೆ ಬಂಧಿಸಬಲ್ಲದು? ॥೧೭॥

ಮೇಲೆ ಹೇಳಿದಂತೆ ಕರ್ತೃತ್ವಭೋಕ್ತೃತ್ವಗಳು ಆತ್ಮನಿಗೆ ಬರದೆ ಹೋದರೂ ಪ್ರೇರಕತ್ವವಿರುವುದು ಲೋಕದಲ್ಲಿ ಕಂಡುಬರುತ್ತದೆ. ಅದರಂತೆ ಆತ್ಮನು ಪ್ರೇರಕನಾಗಿರಲಿ ಎಂದರೆ ಅದೂ ಸಂಭವಿಸದು. ಹೇಗೆಂದರೆ ಸುಖಪ್ರಾಪ್ತಿ, ದುಃಖನಿವೃತ್ತಿಗಳು ಕರ್ಮಕ್ಕೆ ಫಲವಾಗಿರುವಂತೆ, ಕರ್ಮವಿಶೇಷವಾದ ಪ್ರೇರಣೆಗೂ ಫಲವೆನ್ನಬೇಕು. ನಿತ್ಯಸುಖಸ್ವರೂಪನಾದ ಆತ್ಮನಿಗೆ ಸುಖಪ್ರಾಪ್ತಿಯು ಪ್ರಾಪ್ಯಫಲವಾಗದು. ಹಾಗೆಯೇ

ಆವಿರ್ಭಾವತಿರೋಭಾವ ಸಂಕೋಚರಹಿತಂ ಸದಾ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೧೯॥

ಸರ್ವಸಾಕ್ಷಿಣಮಾತ್ಮಾನಂ ಸರ್ವಹೀನಂ ತು ವಸ್ತುತಃ ।
ಆತ್ಮಾನಮೀಶ್ವರಂ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೦॥

ನಿರ್ಲಿಪ್ತನಾದ ಆತ್ಮನಿಗೆ ದುಃಖನಿವೃತ್ತಿಯೂ ಸಲ್ಲದು. ಇವೆರಡೂ ಇಲ್ಲದ ಮೇಲೆ ಪ್ರೇರಣೆಯೂ ನಿಷ್ಫಲವಾಗಿ ಪ್ರೇರಕತ್ವವನ್ನೂ ಆತ್ಮನಲ್ಲಿ ಒಪ್ಪಲಾಗುವುದಿಲ್ಲವು. ಆತ್ಮನು ನಿತ್ಯಾನಂದರೂಪನೆಂಬುದನ್ನು ಮೇಲೆ ವಿವರಿಸಲಾಗಿದೆ. ಅಲ್ಲದೆ ಆತ್ಮನು ಸ್ವಯಂಭಾತನು, ಎಂದರೆ ಆತ್ಮನು ತೋರಬೇಕಾದರೆ ಪ್ರಕಾಶಕವಸ್ತು ಬೇರೆ ಯಾವುದೂ ಬೇಕಿಲ್ಲವು. ಜ್ಞಾನಸಾಮಾನ್ಯವೂ ಸೋಪಾಧಿಕವಾದುದರಿಂದ, ವೃತ್ತಿಜ್ಞಾನರೂಪವನ್ನು ಮೀರಿ ದಾಟಿರುವುದರಿಂದ, ಆತ್ಮನು ಪ್ರಮಾಽತೀತನು ಮತ್ತು ಅದ್ವಿತೀಯನು ಆಗಿರುತ್ತಾ, ಪ್ರತ್ಯಕ್ಷಾದಿ ಆರು ಪ್ರಮಾಣಗಳಿಗೂ ಸಾಕ್ಷಿಯಾಗಿರುವುದರಿಂದ ಅವನಲ್ಲಿ ಪ್ರೇರಕತ್ವವೂ ಒಂದು ವಿಕಾರವೆನಿಸುತ್ತದೆ. ಆದರೆ ಪಾರಮಾರ್ಥಿಕವಾಗಿ ಆತ್ಮನು ನಿಯೋಜ್ಯನೂ, ಪ್ರೇರಕನೂ, ಕರ್ತೃವೂ ಭೋಕ್ತೃವೂ ಅಲ್ಲವು. ಅವನು ನಿರತಿಶಯಾನಂದಸ್ವರೂಪನು. ಇಂಥ ಆತ್ಮನು ತಾನೆಂದು ಸಾಕ್ಷಾತ್ಕರಿಸಿರುವ ಜ್ಞಾನಿಗೆ ಕರ್ಮವು ಬಂಧಕವಾಗಲಾರದು. ||೧೮||

ಆತ್ಮವಲ್ಲದ ಪದಾರ್ಥಗಳಿಗೆ ಜ್ಞಾನಕಾಲದಲ್ಲಿ ಮಾತ್ರ ಆವಿರ್ಭಾವವೂ, ಪ್ರಾಕಟ್ಯವೂ, ಜ್ಞಾನವಿಲ್ಲದ ಕಾಲದಲ್ಲಿ ತಿರೋಭಾವವೂ, ಮರೆಯಾಗುವಿಕೆಯೂ, ಎಂದು ಮುಂತಾದ ಸಂಕೋಚವಿಕಾಸಗಳೆಂಬ ವಿಕಾರಗಳು ಅನಾತ್ಮಪದಾರ್ಥಗಳಲ್ಲಿ ಮಾತ್ರ ಕಾಣಬರುತ್ತವೆ. ಆತ್ಮನು ಸ್ವಪ್ರಕಾಶನೂ, ಸತ್ಸ್ವರೂಪನೂ, ಚಿತ್ಸ್ವರೂಪನೂ, ಆಗಿರುವುದರಿಂದ ಇಂಥ ಸಂಕೋಚವಿಲ್ಲದೆ ಯಾವಾಗಲೂ ಮರೆಯಾಗಿರುವಿಕೆ ಇಲ್ಲದೆ, ಸತ್ತಾ ಇರುವಿಕೆ, ಚಿತ್ ತಿಳಿವಳಿಕೆ ಈ ರೂಪದಿಂದ ಸದಾ ತೋರುತ್ತಿರುವ ಆತ್ಮನೇ ತಾನೆಂದು ಮನಗಂಡಿರುವ ಜ್ಞಾನಿಯನ್ನು ಕರ್ಮವು ಹೇಗೆ ತಾನೆ ಬಂಧಿಸಬಲ್ಲದು ? ಸತ್ತೆಯೂ ಪ್ರಕಾಶವೂ ತೋರದೆ ಇರುವ ಸ್ಥಿತಿಯೇ ಇಲ್ಲವು. ||೧೯||

ಹಾಗಲ್ಲವು. ಸಾಕ್ಷಿಗೂ ಸಂಕೋಚವುಂಟು. ಹೇಗೆಂದರೆ ಆತ್ಮನು ಘಟಸಾಕ್ಷಿಯಾಗಿರುವಾಗ ಪಟಸಾಕ್ಷಿಯಾಗಿರುವುದಿಲ್ಲ. ಹಾಗೆಯೇ ಅವನು ಪಟಸಾಕ್ಷಿಯಾಗಿರುವಾಗ ಘಟಸಾಕ್ಷಿಯಾಗಿರುವುದಿಲ್ಲ. ಆದುದರಿಂದ ಆವಿರ್ಭಾವ ತಿರೋಭಾವಗಳಿಂದ ಸಂಕೋಚವಿಕಾಸಗಳು ಬಂದಹಾಗಾಯಿತೆಂದರೆ, ಆತ್ಮನು ಸರ್ವಜ್ಞೊ ಎಂದರೆ

ಸ್ವಸ್ಮಿನ್ನಧ್ಯಸ್ತರೂಪಸ್ಯ ಪ್ರಪಂಚಸ್ಯ ತು ಸಾಕ್ಷಿಣಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೦॥

ವ್ಯಾವಹಾರಿಕವಾದ ಎಲ್ಲಕ್ಕೂ ಸಾಕ್ಷಿಯಾಗಿರುವನಾದರೂ, ಪಾರಮಾರ್ಥಿಕವಾಗಿ ಯಾವುದೂ ಇಲ್ಲದವನಾಗಿದಾನೆ. ಇಂತಹ ಆತ್ಮನೇ ತಾನೆಂದು ತಿಳಿದವನನ್ನು ಕರ್ಮವು ಬಂಧಿಸಲಾರದು. ಪದಾರ್ಥ ತೋರದೆ ಇರುವಾಗ ಸಾಕ್ಷಿ ಇಲ್ಲವೆಂದು ಅಲ್ಲವು. ಔಪಾಧಿಕವಾದ ಘಟಾದಿವಸ್ತುವು ತೋರಲು ಆವಶ್ಯಕವಾದ ವೃತ್ತಿಜ್ಞಾನವಿಲ್ಲದ್ದರಿಂದ ಅದು ತೋರಲಿಲ್ಲವು. ಆತ್ಮನು ಸಾಕ್ಷಿಯಾಗಿ ಯಾವಾಗಲೂ ಇದ್ದೇಇದಾನೆ, ಮತ್ತು ತನಗೆತಾನೇ ತೋರುತ್ತಲೇ ಇರುತ್ತಾನೆ. ಸರ್ವಸಾಕ್ಷಿಯೂ ಸರ್ವಹೀನನೂ ಎಂದು ಹೇಳುವುದು ವಿರುದ್ಧವೆಂದರೆ ಸಗುಣವಾದ ವ್ಯಾವಹಾರಿಕದೆಶೆಯಲ್ಲಿ ಸರ್ವಸಾಕ್ಷಿಯೂ, ಪಾರಮಾರ್ಥಿಕವಾಗಿ ಸರ್ವಹೀನನೂ, ಆಗಿರುವ ಸ್ವಭಾವವು ಆತ್ಮನದು ಎಂದು ಸಮಾಧಾನವು. ॥೨೦॥

ಆತ್ಮನಲ್ಲಿ ಅಧ್ಯಾಸಮೂಲಕವಾಗಿ ಎಲ್ಲ ಪದಾರ್ಥಗಳು ಕಲ್ಪಿತವಾಗಿ ತೋರುತ್ತಿರುವುದರಿಂದ, ಹೀಗೆ ವಾಸ್ತವವಲ್ಲದ ಎಲ್ಲ ಪ್ರಪಂಚಕ್ಕೂ ಆತ್ಮನೇ ಅಧಿಷ್ಠಾನರೂಪನಾಗಿ ಸಾಕ್ಷಿಯಾಗಿರುವನು. ಈ ಅಜ್ಞಾನದಿಂದ ಉಂಟಾಗುತ್ತಿರುವ ಪ್ರಪಂಚಪ್ರತೀತಿಗೂ, ಜ್ಞಾನದಿಂದ ಆಗುವ ಪ್ರಪಂಚಬಾಧಕ್ಕೂ, ಸಾಕ್ಷಿಯಾಗಿರುವ ಆತ್ಮನೇ ತಾನೆಂದು ಅಪರೋಕ್ಷಾನುಭವವನ್ನು ಪಡೆದಿರುವ ಆತ್ಮನನ್ನು ಕರ್ಮವು ಹೇಗೆ ತಾನೆ ಬಂಧಿಸಬಲ್ಲದು ? ಕರ್ಮವು ಆತ್ಮನನ್ನು ಬಂಧಿಸುವುದು ಹೇಗೆಂಬುದನ್ನು ವಿಶದವಾಗಿ ತಿಳಿಯಬೇಕಾಗಿದೆ. ನಾವು ಎಂದರೆ ಜೀವರು ಕರ್ಮವನ್ನು ಮಾಡುವಾಗ ಅದರಿಂದ ಯಾವುದಾದರೂ ಒಂದು ಉದ್ದೇಶಸಾಧನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಹೊರಟಿರುತ್ತಾರೆ. ಹೀಗೆ ಕರ್ಮವನ್ನು ಮಾಡುತ್ತಿರುವವರಿಗೆ ಕರ್ತೃ ಎಂದು ಹೆಸರು. ಅಂಥವರಿಗೆ ಆ ಕರ್ಮವು ತನ್ನ ಫಲವನ್ನು ತಪ್ಪದೇ ಕೊಡುತ್ತದೆ. ಆ ಫಲವನ್ನು ಅನುಭವಿಸುವಾಗ ಅವರಿಗೆ ಭೋಕ್ತೃ ಎಂದು ಹೆಸರು. ಈ ಕರ್ತೃತ್ವಭೋಕ್ತೃತ್ವಗಳಿಗಾಗಿ ದೇಹವನ್ನು ಪಡೆಯುವಿಕೆಯೂ, ಜನನ, ಮರಣಗಳ ಪ್ರವಾಹವೂ ಅನಾದಿಕಾಲದಿಂದ ಸಾಗುತ್ತಾ ಬರುತ್ತಿದೆ. ಆಯಾ ಕಾಲ ದೇಶಗಳಲ್ಲಿ ಜೀವರು ಈಗಿನಂತೆಯೇ "ನಾನು, ನನ್ನದು" ಎಂಬ ಅಭಿಮಾನವನ್ನು ಪಡೆಯುತ್ತಾ ಆಭಾಸರೂಪವಾದ ಸುಖಪ್ರಾಪ್ತಿಯನ್ನೋ, ದುಃಖನಿವೃತ್ತಿಯನ್ನೋ, ಅನುಭವಿಸುತ್ತಿರುವ ನಿರ್ಬಂಧಕ್ಕೆ ಸಿಕ್ಕಿಕೊಂಡಿರುವಿಕೆ ಎಂಬ ಸಂಸಾರದಲ್ಲಿ, ಜಲಪ್ರವಾಹದಲ್ಲಿ ಹುಲ್ಲುಕಡ್ಡಿಯು ಹೇಗೆ ಸುಳಿಗಳಲ್ಲಿ ಸುತ್ತುತ್ತಾ ಮುಂದಕ್ಕೆ ಸಾಗುತ್ತಿ

ರುತ್ತದೋ ಹಾಗೆ, ಬಳಸುತ್ತಾ ಬಳಲುತ್ತಿರುತ್ತಾರೆ. ಹೀಗೆ ಸಿಕ್ಕಿಕೊಂಡಿರುವಿಕೆಗೆ ಕಾರಣವು ದೇಹಾದಿಗಳಲ್ಲಿ ಜೀವರಿಗೆ ಇರುವ, "ನಾನು, ನನ್ನದು", ಎಂಬ ಅಭಿಮಾನಿಕವಾದ, ವಾಸ್ತವವಲ್ಲದ, ಸಂಬಂಧವೇ ಆಗಿದೆ. ಇದು ಬ್ರಹ್ಮಾತ್ಮೈಕ್ಯ ಜ್ಞಾನದಿಂದ ನಾಶವಾಗುತ್ತದೆ.

ಆದರೆ ಈ ಅಜ್ಞಾನದ ಅನುಭವವನ್ನು ವಿಂಗಡಿಸಿ ನೋಡಿದರೆ ಎರಡು ಅಂಶಗಳು ವ್ಯಕ್ತವಾಗುತ್ತವೆ. ಇದರಿಂದ ಜೀವರು ಕಾಮಮಯರೆಂಬುದೂ ಮತ್ತು ಶ್ರದ್ಧಾಮಯರೆಂಬುದೂ ಗೊತ್ತಾಗುತ್ತದೆ. ಜೀವರು ಯಾವಾಗಲೂ ಯಾವುದಾದರೊಂದು ವಿಷಯವನ್ನು ಆಲೋಚಿಸುತ್ತಲೂ, ಇಚ್ಛಿಸುತ್ತಲೂ, ಅದನ್ನು ಪಡೆಯಲು ದುಡಿಯುತ್ತಲೂ, ಇರುತ್ತಾರೆ. ಈ ಅಂಶವನ್ನು ಶ್ರುತಿಯಲ್ಲಿ ಹೀಗೆ ವಿವರಿಸಿದೆ. ಕಾಮಮಯ ಏವಾಯಂ ಪುರುಷಃ ಇತಿ, ಸ ಯಥಾ ಕಾಮೋಭವತಿ, ತತ್ಕ್ರತುರ್ಭವತಿ,....ತತ್ಕರ್ಮ ಕುರುತೇ, ಯತ್ಕರ್ಮ ಕುರುತೇ, ತದಭಿಸಂಪದ್ಯತೇ. ಬೃಹದಾರಣ್ಯಕೋಪನಿಷತ್, ೪.೪.೫. ತದೇವ ಸಕ್ತಃ ಸಹಕರ್ಮಣೈತಿ ಲಿಂಗಂ ಮನೋ ಯತ್ರ ನಿಷಕ್ತಮಸ್ಯ, ೪.೪.೬. ಅಥ ಖಲುಕ್ರತುಮಯಃ ಪುರುಷಃ, ಯಥಾಕ್ರತುರಸ್ಮಿನ್ ಲೋಕೇ ಪುರುಷೋ ಭವತಿ, ತಥೇತಃ ಪ್ರೇತ್ಯ ಭವತಿ. ಛಾಂದೋಗ್ಯೋಪನಿಷತ್. ೩.೧೪.೧ ಯುಕ್ತಃ ಕರ್ಮಫಲಂತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಂ। ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥ ಭಗವದ್ಗೀತಾ ಅ. ೫. ಶ್ಲೋ. ೧೨. ತದಾತ್ಮಾನಮೇವಾವೈತ್. ಅಹಂಬಹ್ಮಾಸ್ಮೀತಿ. ತಸ್ಮಾತ್ತತ್ಸರ್ವಮಭವತ್. ಬೃ. ಉ. ೧.೪.೧೦. ತದೈಕ್ಷತ ಬಹು ಸ್ಯಾಂ ಪ್ರಜಾಯೇ ಯೇತಿ. ಛಾ. ಉ. ೬.೨.೩. ಸತಪೋಽತಪ್ಯತ. ಸತಪಸ್ತಪ್ತ್ವಾ ಇದಂ ಸರ್ವಮಸೃಜತ. ಯದಿದಂ ಕಿಂಚ. ತತ್ಸೃಷ್ಟ್ವಾ ತದೇವಾನುಪ್ರಾವಿಶತ್. ತದನುಪ್ರವಿಶ್ಯ ಸಚ್ಚತ್ಯಚ್ಚಾಭವತ್. ತೈತ್ತಿರೀಯೋಪನಿಷತ್ ೨.೬.

ಹಾಗೆಯೇ ಜೀವರು ಶ್ರದ್ಧಾಮಯರೆಂಬುದನ್ನು ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ । ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಸ್ಸಏವ ಸಃ ॥ ಭಗವದ್ಗೀತಾ. ಅ. ೧೭. ಶ್ಲೋ. ೩ ರಲ್ಲಿ ಹೇಳಿದೆ. ಇದರಿಂದ ಕಾಮವು ಜ್ಞಾನ, ಇಚ್ಛಾ, ಕ್ರಿಯಾ, ಎಂಬ ರೂಪತ್ರಯದಲ್ಲಿಯೂ, ಸರ್ವಜ್ಞತ್ವ, ಸರ್ವಶಕ್ತಿಮತ್ತ್ವಾದಿರೂಪದಲ್ಲಿಯೂ, ಸತ್ವ, ರಜಸ್, ತಮಸ್ ಎಂಬ ಪ್ರಕೃತಿರೂಪದಲ್ಲಿಯೂ, ಮಹಾಮಾಯಾ ಅಥವಾ ಪರಾಶಕ್ತಿರೂಪದಲ್ಲಿಯೂ, ಈಶ್ವರನಲ್ಲಿ ಅಭಿವ್ಯಕ್ತವಾಗುತ್ತದೆ. ಹಾಗೆಯೇ ಅಲ್ಪಜ್ಞತ್ವ, ಅಲ್ಪಶಕ್ತಿಮತ್ತ್ವ ಎಂಬ ಅವಿದ್ಯಾರೂಪದಲ್ಲಿ ಜೀವಸ್ವರೂಪವೂ, ಅಭಿವ್ಯಕ್ತವಾಗುತ್ತದೆ. ಇವು ಅವಿದ್ಯಾಕಾಮಕರ್ಮರೂಪವಾದುದರಿಂದ ಜ್ಞಾನದಿಂದ, ಜೀವಬ್ರಹ್ಮೈಕ್ಯಸಾಕ್ಷಾತ್ಕಾರದಿಂದ, ಅಪರೋಕ್ಷಾನುಭವ

ನಿರ್ಲೇಪಂ ನಿರ್ಮಲಂ ಸೂಕ್ಷ್ಮಂ ನಿರಸ್ತಸಕಲಕ್ರಿಯಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೨॥

ದಿಂದ, ನಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಮೇಲೆ ೧೫ ನೆಯ ಅಧ್ಯಾಯದಲ್ಲಿ, ಎಂದರೆ ಹಿಂದಿನ ಸಂಪುಟದ ೧೮೫-೧೯೧ ಪುಟಗಳನ್ನೂ ನೋಡಬೇಕು.

ಇದರಿಂದ ಬ್ರಹ್ಮತತ್ತ್ವದಲ್ಲಿ ಜ್ಞಾನ, ಇಚ್ಛಾ, ಕೃತಿ, ಎಂದರೆ ಮೂರು ಬಗೆಯ ಸ್ಪಂದ ಅಥವಾ ವೃತ್ತಿಪರಿಣಾಮಗಳನ್ನು, ತಿಳಿಯುವುದು, ಇಚ್ಛಿಸುವುದು, ಕೆಲಸವನ್ನು ಮಾಡುವುದು, ಇವುಗಳಲ್ಲಿ ಒಂದನ್ನೊಂದು ಬಲಪಡಿಸುತ್ತಿರುವುದನ್ನು ಮನಗಾಣ ಬಹುದು. ಮೊದಲು ನಮ್ಮಲ್ಲಿ ಯಾವುದಾದರೂ ಒಂದು ವಿಷಯವನ್ನು ಆಲೋಚಿಸಿ ತಿಳಿಯುವುದೂ, ಆಮೇಲೆ ಅದು ನಮ್ಮಲ್ಲಿಲ್ಲವೆಂದೂ, ನಾವು ಅನಾಪ್ತಕಾಮರೆಂದೂ, ಆಪ್ತಕಾಮರಲ್ಲವೆಂದೂ, ಅದು ಸುಖಪ್ರಾಪ್ತಿಗೋ ದುಃಖನಿವೃತ್ತಿಗೋ ಸಾಧನವಾದು ದೆಂದೂ, ಅದನ್ನು ಪಡೆಯಬೇಕೆಂದೂ, ಆಶಿಸುವುದೂ ಉಂಟಾಗುತ್ತದೆ. ಅದಕ್ಕಾಗಿ ಪ್ರಯತ್ನಿಸಬೇಕೆಂದೂ, ಅಜ್ಞಾನದಿಂದ ತಿಳಿಯುತ್ತಾ ದುಡಿಯುತ್ತಿರುತ್ತೇವೆ. ಇದೇ ಪ್ರವೃತ್ತಿಮಾರ್ಗವು. ಈಗ ಸಕಾಮಕರ್ಮವು ಬಂಧಕವಾಗಿರುತ್ತದೆ. ಜೀವಾತ್ಮನಿಗೆ ಹೀಗೆ ಬಹುಕಾಲ ಕಳೆದ ಮೇಲೆ ಈ ಆವೃತ್ತಿಯಲ್ಲಿ, ಈ ಆಭಾಸವಾದ ಸುಖಪ್ರಾಪ್ತಿ, ದುಃಖನಿವೃತ್ತಿ, ಜನನಮರಣಗಳ ಸುಳಿಗಳಲ್ಲಿ ಸುತ್ತುತ್ತಿರುವಿಕೆಯಲ್ಲಿ ಬೇಸರವು ಇಂದಲ್ಲದಿದ್ದರೆ ನಾಳೆ, ಈ ಜನ್ಮದಲ್ಲಿ ಆಗದಿದ್ದರೆ ಮುಂದಿನ ಜನ್ಮದಲ್ಲಿ, ಎಲ್ಲರಿಗೂ ಎಂದಾದರೊಂದುದಿನ, ಬೇಸರವು ಉಂಟಾಗಿಯೇ ಆಗುತ್ತದೆ. ಆಗ ನಿವೃತ್ತಿ ಮಾರ್ಗದಲ್ಲಿ ಕಾಲಿಡುತ್ತೇವೆ. ಆಮೇಲೆ ವೇದಾಂತ ವಿಚಾರ, ಅನುಭವಗಳಿಂದ ಆತ್ಮಜ್ಞಾನವನ್ನು, ಜೀವಬ್ರಹ್ಮಾಭೇದದ ಅಪರೋಕ್ಷಾನುಭವವನ್ನು, ಕ್ರಮವಾಗಿ ಪಡೆಯುವುದು ಅಂಥವರಿಗೆ ಎಲ್ಲರಿಗೂ ಸಾಧ್ಯವು. ಕಡೆಗೆ ಕರ್ಮವು ಎಂದರೆ ಸಕಾಮ ಕರ್ಮವು, ನಿಷ್ಕಾಮಕರ್ಮದಲ್ಲೂ, ಕರ್ಮಯೋಗಾಚರಣೆಯಲ್ಲೂ ಪರಿಣಮಿಸುತ್ತದೆ. ಆಗ ಚಿತ್ತಶುದ್ಧಿ ಎಂದರೆ ರಾಗದ್ವೇಷಗಳೆಂಬ ಮನಸ್ಸಿನ ಮಲಗಳ ನಿವೃತ್ತಿಯು ದೊರೆತು, ನಿರ್ಮಲವಾದ ಅಂತಃಕರಣದಲ್ಲಿ ಆತ್ಮಸ್ವರೂಪವು ಮೂಡಿ, ನಿತ್ಯಾನಂದವು ಅನುಭವಕ್ಕೆ ಬರುತ್ತದೆ. ಆಗ ಹಿಂದಿನಂತೆ ಅಭಿಮಾನವಿಲ್ಲದೆ ಕರ್ಮವು ಬಂಧಕ ವಾಗದೆ ಹೋಗುತ್ತದೆ. ಎಂದು ಭಾವವು. ||೨೧||

ಅಜ್ಞಾನದ ಕಾರ್ಯವಾದ ಈ ಎಲ್ಲ ಪ್ರಪಂಚವೂ ಅಧಿಷ್ಠಾನವಾದ ಆತ್ಮನಲ್ಲಿ ಆರೋಪಿತವಾಗಿ ತೋರುತ್ತಿದೆಯೇ ಹೊರತು ವಾಸ್ತವವಾಗಿಲ್ಲವೆಂದು ವಿವರಿಸಿದ್ದಾ ಯಿತು. ಈಗ ಕಾರಣವಾದ ಅಜ್ಞಾನವೂ ಆತ್ಮನಲ್ಲಿಲ್ಲವೆಂಬ ಅಂಶವನ್ನು ತಿಳಿಸು ತ್ತಾರೆ. ಅಜ್ಞಾನರೂಪವಾದ ದೋಷವಿಲ್ಲದೆ ನಿರ್ಮಲನಾದ, ನಿರವಯವನಾದುದರಿಂದ ಯಾವ ಕ್ರಿಯೆಯೂ ಇಲ್ಲದಿರುವವನಾದುದರಿಂದ ಸುಖದುಃಖರೂಪ ಫಲದ ಲೇಪವೂ

ಭೂಮಾನಂದಂ ಬುಭುತ್ಸೋಸ್ತು ಸ್ವರೂಪಂ ಭೋಗವರ್ಜಿತಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೩॥

ಪ್ರೇರಕತ್ವಾದಿ ನಿರ್ಮುಕ್ತಂ ಪ್ರಿಯಾಪ್ರಿಯವಿವರ್ಜಿತಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೪॥

ನೇತಿ ನೇತೀತಿ ವೇದಾಂತೈಃ ನಿರಸ್ತಸ್ವವಿಲಕ್ಷಣಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೫॥

ಅನಣ್ವಹ್ರಸ್ವಮಸ್ಥೂಲಂ ಅದೀರ್ಘಂ ಸತ್ಯಚಿದ್ಘನಮ್ ।
ಆತ್ಮಾನಮಾತ್ಮನಾ ಪಶ್ಯನ್ ಕಥಂ ಬಧ್ಯೇತ ಕರ್ಮಣಾ ॥೨೬॥

ಇಲ್ಲದಿರುವ, ಸ್ಥೂಲದೃಷ್ಟಿಗಳಿಗೆ ಗೋಚರನಾಗದೆ ಸೂಕ್ಷ್ಮಸ್ವರೂಪವುಳ್ಳ ಆತ್ಮನೇ ತಾನೆಂದು ತಿಳಿದವನನ್ನು ಕರ್ಮವು ಬಂಧಿಸಲಾರದು. ||೨೨||

ಜಿಜ್ಞಾಸುವಿಗೆ ವಾಸ್ತವಸ್ವರೂಪವಾದ, ಸುಖದುಃಖಸಾಕ್ಷಾತ್ಕಾರರೂಪವಾದ ಭೋಗವಿಲ್ಲದ, ನಿರತಿಶಯಾನಂದರೂಪವನ್ನು ತನ್ನ ಸ್ವರೂಪವೆಂದು ತಾನೇ ತಿಳಿದಿರುವ ಜ್ಞಾನಿಯನ್ನು ಕರ್ಮವು ಬಂಧಿಸಲಾರದು. ||೨೩||

ಶರೀರಾಭಿಮಾನರಹಿತನಾದುದರಿಂದ ಪ್ರಿಯವಾದ ಅಪ್ರಿಯವಾದ ವಸ್ತುಗಳು ಪಾರಮಾರ್ಥಿಕವಾಗಿ ಇಲ್ಲದಿರುವ, ರಾಗದ್ವೇಷಗಳಿಲ್ಲದಿರುವುದರಿಂದ ಪ್ರೇರಣರೂಪವಾದ ವ್ಯಾಪಾರವೂ ಇಲ್ಲದಿರುವ, ಆತ್ಮನೇ ತನ್ನ ಸ್ವರೂಪವೆಂದು. ಅನುಭವವನ್ನು ಪಡೆದಿರುವ ಜ್ಞಾನಿಯನ್ನು ಕರ್ಮವು ಬಂಧಿಸಲಾರದು. ||೨೪||

ಸರ್ವವಿಹೀನತ್ವವು ಆತ್ಮನಲ್ಲಿ ಶ್ರುತಿವಾಕ್ಯದ ಆಧಾರದ ಮೇಲೆ ಸಿದ್ಧವಾಗಿದೆ ಎಂದು ಹೇಳುತ್ತಾರೆ. " ದ್ವೇವಾವಬ್ರಹ್ಮಣೋರೂಪೇ ಮೂರ್ತಂಚೈವಾ ಮೂರ್ತಂ ಚ" ಎಂದು ಪ್ರಾರಂಭಿಸಿ " ಅಥಾತ ಆದೇಶೋ ನೇತಿನೇತಿ ನ ಹ್ಯೇತಸ್ಮಾದಿತಿ ನೇತ್ಯನ್ಯತ್ಪರಮಸ್ತಿ" ಬೃ. ಉ. ೨.೩.೬. ಬ್ರಹ್ಮವು ಸತ್, ಎಂದರೆ ಪೃಥಿವೀ, ಅಪ್, ತೇಜಸ್ಸೆಂಬ ಮೂರ್ತರೂಪವಾದ, ತ್ಯತ್ ಎಂದರೆ ಪರೋಕ್ಷವಾದ ಅಮೂರ್ತವಾದ, ವಾಯ್ವಾಕಾಶರೂಪವಾದ, ಪ್ರಪಂಚದ ಆರೋಪಕ್ಕೆ ಅಧಿಷ್ಠಾನಭೂತವಾದುದೆಂದು ಅಪವಾದಮಾಡುವುದಕ್ಕಾಗಿ ಹೇಳಿದ ಮೇಲೆ, ಅತಃ ಈ ಆರೋಪವು ಅಪವಾದಾರ್ಥವಾದುದರಿಂದ, ಇದಲ್ಲ ಇದಲ್ಲ ಎಂದು ನಿಷೇಧಮುಖದಿಂದ ಉಪದೇಶಮಾಡುವುದು ಹೊರತು ಬೇರೆ ಉಪದೇಶರೀತಿಯು ಇಲ್ಲವೆಂದು ಶ್ರುತಿಯಿಂದ ನಿಷೇಧಿಸಲ್ಪಟ್ಟು, ತನ

ಅಜ್ಞಾನಜನ್ಯಕರ್ತ್ರಾದಿ ಕಾರಕೋತ್ಪನ್ನ ಕರ್ಮಣಾ ।
ಶ್ರುತ್ಯುತ್ಪನ್ನಾತ್ಮವಿಜ್ಞಾನಪ್ರದೀಪೋ ಬಧ್ಯತೇ ಕಥಮ್ ॥೨೭॥

ಅಜ್ಞಾನಾಂಧತಮೋರೂಪಂ ಕರ್ಮಧರ್ಮಾದಿ ಲಕ್ಷಣಮ್ ।
ಸ್ವಪ್ರಕಾಶಕಮಾತ್ಮಾನಂ ನೈವ ಸಂಸ್ಪ್ರಷ್ಟುಮರ್ಹತಿ ॥೨೮॥

ಆದಿತ್ಯಂ ಶಾರ್ವರಂ ಯದ್ವತ್ ತಮೋ ನ ಸ್ಪೃಶತಿ ಸ್ವತಃ ।
ಚಿತ್ಪ್ರಕಾಶಮಹಾದಿತ್ಯಂ ತಮೋರೂಪಕ್ರಿಯಾ ತಥಾ ॥೨೯॥

ಗಿಂತಲೂ ಬೇರೆಯಾದ ಮೂರ್ತಾಮೂರ್ತರೂಪವಾದ ದ್ವಿರೂಪವಾದ ಬ್ರಹ್ಮರೂಪವು ವಾಸ್ತವವಾಗಿ ಇಲ್ಲವೆಂದು ವೇದಾಂತವಾಕ್ಯಗಳಿಂದ ತಿಳಿಸಲ್ಪಡುತ್ತಲಿರುವ, ಬ್ರಹ್ಮವೇ ಆತ್ಮನೆಂದು ತಿಳಿದಿರುವ ಜ್ಞಾನಿಯನ್ನು ಕರ್ಮವು ಬಂಧಿಸಲಾರದು. ॥೨೫॥

ಅದರಂತೆಯೇ ಅಣುತ್ವ, ಹ್ರಸ್ವತ್ವ, ಸ್ಥೂಲತ್ವ, ದೀರ್ಘತ್ವ ಮುಂತಾದ ಸರ್ವಧರ್ಮಗಳೂ ಇಲ್ಲದ, ಸಚ್ಚಿತ್ಸ್ವರೂಪವಾದ, ಗಡ್ಡೆಯಂತೆ ಏಕರಸವಾದ ಎಲ್ಲೆಡೆಯಲ್ಲೂ ಜ್ಞಾನಚೈತನ್ಯರೂಪವಾಗಿರುವ ಬ್ರಹ್ಮವೇ ಆತ್ಮಸ್ವರೂಪವೆಂದು ತಿಳಿದವನನ್ನು ಕರ್ಮವು ಬಂಧಿಸಲಾರದು. ॥೨೬॥

ಕರ್ತೃ, ಕರ್ಮ, ಕರಣ ಮುಂತಾದ ಕಾರಕಗಳಲ್ಲಿ ಅಭಿಮಾನದಿಂದ ಉಂಟಾದ ಕರ್ಮವು ಅಜ್ಞಾನದಿಂದ ಉಂಟಾದುದು. ಈ ಅಜ್ಞಾನವೆಂಬ ಕತ್ತಲೆಯು ವೇದಾಂತ ವಾಕ್ಯಶ್ರವಣದಿಂದ ಉಂಟಾಗುವ ಬ್ರಹ್ಮನೂ ಆತ್ಮನೂ ಸಚ್ಚಿದಾನಂದರೂಪದಲ್ಲಿ ಅಭಿನ್ನರೆಂಬ ಜ್ಞಾನರೂಪವಾದ ಬೆಳಕಿನಿಂದ ನಾಶವಾಗುತ್ತದೆ. ಇಂತಹ ಸಾಕ್ಷಾತ್ಕಾರದ ಅನುಭವವುಳ್ಳವನು ಕರ್ಮದಿಂದ ಹೇಗೆತಾನೆ ಬಂಧಿಸಲ್ಪಟ್ಟಾನು ? ॥೨೭॥

ಜ್ಞಾನವು ಅಜ್ಞಾನವನ್ನು ನಿವಾರಿಸುತ್ತದೆ. ಆದುದರಿಂದ ಜ್ಞಾನಿಗಳಿಗೆ ಅಜ್ಞಾನಕಾರ್ಯವಾದ ಸಂಸಾರಬಂಧವಿಲ್ಲವು ಎಂದು ಹೇಳಿದ್ದಾಯಿತು. ಈಗ ಆ ಅಜ್ಞಾನದ ಸ್ವರೂಪವನ್ನು ವಿಮರ್ಶಿಸಿ ಅದರ ಸಂಪರ್ಕವೇ ಆತ್ಮನಿಗೆ ಸಂಭವಿಸ ಲಾರದೆಂದು ಹೇಳುತ್ತಾರೆ. ಅಜ್ಞಾನವು ಕತ್ತಲೆಯ ಹಾಗೆ ಪದಾರ್ಥವನ್ನು ತಿಳಿ ಯಲು ಅಡ್ಡಿಯಾಗಿರುತ್ತದೆ. ಜ್ಞಾನವು ಬೆಳಕಿನ ಹಾಗೆ ಪದಾರ್ಥವನ್ನು ತಿಳಿಯಲು ಸಹಾಯಮಾಡುತ್ತದೆ. ಈ ಅಜ್ಞಾನವು, ಕರ್ತೃತ್ವಭೋಕ್ತೃತ್ವಗಳಿಲ್ಲದ ಸ್ವಪ್ರಕಾಶ ಸ್ವರೂಪವಾದ ಆತ್ಮನ ಅಜ್ಞಾನವು, ಕರ್ಮ, ಅದರಿಂದ ಉಂಟಾಗುವ ಧರ್ಮಾಧರ್ಮ ಮತ್ತು ಸುಖದುಃಖಗಳ ಅನುಭವರೂಪ ಫಲಸ್ವರೂಪವಾಗಿ ಪರಿಣಮಿಸುತ್ತದೆ. ಇಂಥ ಅಜ್ಞಾನವು ಸ್ವಪ್ರಕಾಶರೂಪನಾದ ಆತ್ಮನಲ್ಲಿ ಹೇಗೂ ಸಂಬಂಧಿಸಲಾರದು. ॥೨೮॥

ತಮೋರೂಪೋ ರವಿಂ ರಾಹುಃ ಸಮಾಶ್ರಿತ್ಯ ಪ್ರತೀಯತೇ ।
ಯತ್ಪ್ರಕಾಶೇನ ಸಂಬಂಧಃ ತಯೋರ್ನಾಸ್ತಿ ತಥಾಽಪಿ ತು ॥೩೦॥

ತದ್ವದಜ್ಞಾನತತ್ಕಾರ್ಯಂ ಸಮಾಶ್ರಿತ್ಯ ಸ್ವಯಂ ಪ್ರಭಮ್ ।
ತದ್ಭಾಸಾ ಭಾತಿ ಸಂಬಂಧಃ ತಯೋರ್ನಾಸ್ತಿ ತಥಾಽಪಿ ತು ॥೩೧॥

ಕರ್ಮಸಂಬಂಧಮಜ್ಞಾನಾದಾತ್ಮನೋ ಮನ್ಯತೇ ಭ್ರಮಾತ್ ।
ವಿದುಷೋ ನ ಭ್ರಮಸ್ತಸ್ಮಾತ್ಕರ್ಮಣಾ ತಸ್ಯ ಸಂಗತಿಃ ॥೩೨॥

ತಸ್ಮಾದ್ದೇಹಾದಿ ಸಂಘಾತೇಽಹಂ ಮತಿಂ ಕುರುತೇ ತು ಯಃ ।
ತಸ್ಯೈವ ಕರ್ಮಣಾ ಯೋಗಃ ಸಂಭ್ರಾಂತಸ್ಯ ಸದಾ ಬುಧಾಃ ॥೩೩॥

ರಾತ್ರಿಯಲ್ಲಿರುವ ಕತ್ತಲೆಯು ಸೂರ್ಯನನ್ನು ಹೇಗೆ ಮುಟ್ಟಲಾರದೋ, ಹಾಗೆ ಚಿತ್ಪ್ರಕಾಶಸ್ವರೂಪನಾದ ಆತ್ಮನೆಂಬ ದೊಡ್ಡ ಸೂರ್ಯನನ್ನು ಅಜ್ಞಾನವೂ ಮುಟ್ಟಲಾರದೆಂಬ ಅಭಿಪ್ರಾಯದಿಂದ ಅಜ್ಞಾನವನ್ನು ಕತ್ತಲೆಯೆಂದು ರೂಪಣ ಮಾಡಿ ಹೇಳಿದೆ. ||೨೯||

ತಮೋರೂಪವಾದ ರಾಹುಗ್ರಹವು ಸೂರ್ಯನನ್ನು ಅವಲಂಬಿಸಿಯೇ ತೋರುತ್ತದೆ. ಹಾಗಾದರೂ ಆ ಬೆಳಕೂ ಕತ್ತಲೆಯೂ ಬೆರೆಯುವುದಿಲ್ಲವು. ಹಾಗೆಯೇ ಅಜ್ಞಾನವೂ ಅದರ ಕಾರ್ಯವಾದ ಈ ಪ್ರಪಂಚವೂ ಸ್ವಪ್ರಕಾಶನಾದ ಆತ್ಮನನ್ನು ಅಧಿಷ್ಠಾನವಾಗಿ ಅವಲಂಬಿಸಿಯೇ ಅವನ ಪ್ರಕಾಶಕತ್ವದ ಸಹಾಯದಿಂದಲೇ ತೋರುತ್ತದೆ. ಆದರೂ ಆ ಅಜ್ಞಾನ, ಆ ಆತ್ಮ ಇವೆರಡಕ್ಕೂ ಯಾವಾಗಲೂ ಸಂಬಂಧವಿಲ್ಲದೆ ಇರುತ್ತದೆ. ||೩೦-೩೧||

ಆತ್ಮನ ಸ್ವಸ್ವರೂಪದ ಜ್ಞಾನವಿಲ್ಲದಿರುವುದರಿಂದ ಆತ್ಮನಿಗೆ ಶರೀರಾದಿಗಳಲ್ಲಿ ಅಹಂಕಾರ ಭ್ರಮ, ಮಮಕಾರ ಭ್ರಮಗಳುಂಟಾಗಿ ಕರ್ಮಾಚರಣೆ ಮುಂತಾದ ವ್ಯವಹಾರದಲ್ಲಿ ತೊಡಗುತ್ತಾನೆಯೇ ಹೊರತು ವಾಸ್ತವವಾಗಿ ಕರ್ಮದೊಡನೆ ಸಂಬಂಧವಿಲ್ಲವು. ||೩೨||

ಆದುದರಿಂದ ಕಾರ್ಯವಾದ ದೇಹ, ಕರಣವಾದ ಇಂದ್ರಿಯಗಳು ಇವುಗಳ ಸಮೂಹರೂಪವಾದ ಶರೀರದಲ್ಲಿ ಯಾರು "ನಾನು" ಎಂಬ ಭ್ರಾಂತಿಯನ್ನು ಇಟ್ಟುಕೊಂಡಿರುತ್ತಾನೋ, ಅಂಥಾ ಅಜ್ಞಾನಿಗೇ ವೈದಿಕಾವೈದಿಕಕರ್ಮಗಳಲ್ಲಿ ಸಂಬಂಧವು·

ಯಸ್ತು ವಿಜ್ಞಾನಸಂಪನ್ನಃ ಕರ್ಮಣಾ ತಸ್ಯ ಸಂಗತಿಃ ।
ನೈವ ಸತ್ಯಂ ಮಯಾ ಪ್ರೋಕ್ತಂ ನಾಸ್ತಿ ಸಂದೇಹಕಾರಣಮ್ ॥೩೪॥

ತಸ್ಮಾದ್ಬ್ರಹ್ಮಾತ್ಮವಿಜ್ಞಾನಂ ಶಾಬ್ದಂ ದೇಶಿಕಪೂರ್ವಕಮ್ ।
ಬುದ್ಧಿಪೂರ್ವಕೃತಂ ಪಾಪಂ ಕೃತ್ಸ್ನಂ ನಿರ್ದಹತಿ ಕ್ಷಣಾತ್ ॥೩೫॥

ಅಪರೋಕ್ಷಾತ್ಮವಿಜ್ಞಾನಂ ಶಾಬ್ದಂ ದೇಶಿಕಪೂರ್ವಕಮ್ ।
ಸಂಸಾರಕಾರಣಾ ಜ್ಞಾನತಮಸಶ್ಚಂಡಭಾಸ್ಕರಃ ॥೩೬॥

ಮಹಾಪಾತಕಪೂರ್ವಾಣಾಂ ಪಾತಕಾನಾಂ ಮುನೀಶ್ವರಾಃ ।
ರಹಸ್ಯಾನಾಂ ಪ್ರಸಿದ್ಧಾನಾಂ ಪ್ರಾಯಶ್ಚಿತ್ತಂ ಹಿ ವೇದನಮ್ ॥೩೭॥

ಆದರೆ ಯಾರಿಗೆ ಆತ್ಮಜ್ಞಾನವು, ಬ್ರಹ್ಮಾತ್ಮೈಕ್ಯಜ್ಞಾನವು, ಉಂಟಾಗಿದೆಯೋ ಅಂಥವನಿಗೆ ಕರ್ಮದೊಡನೆ ಸಂಬಂಧವು ಯಾವಾಗಲೂ ಸಂಭವಿಸುವುದಿಲ್ಲವು. ಈ ನಾನು ಹೇಳಿದ ಅಂಶವು ಸತ್ಯವು. ಇದರಲ್ಲಿ ಸಂದೇಹಪಡಲು ಕಾರಣವಿಲ್ಲವು. ಓ ಬ್ರಾಹ್ಮಣಶ್ರೇಷ್ಠರೇ, ಇದನ್ನು ಗ್ರಹಿಸಿ. ||೩೩-೩೪||

ಆದುದರಿಂದ ಜೀವಬ್ರಹ್ಮಾಭೇದಜ್ಞಾನರೂಪವಾದ ಆತ್ಮಸ್ವಸ್ವರೂಪಜ್ಞಾನವು ವೇದಾಂತವಾಕ್ಯದಿಂದ ಉಂಟಾಗುತ್ತದೆ. ಅದನ್ನು ಗುರುಮುಖಾಂತರವಾಗಿಯೇ ಪಡೆಯಬೇಕು. ಅದರಿಂದ ತಿಳಿದು ಮಾಡಿದ ಪಾಪವೂ ಒಂದು ಕ್ಷಣದಲ್ಲಿ ಸುಟ್ಟು ಬೂದಿಯಾಗುತ್ತದೆ. ತಿಳಿಯದೆ ಮಾಡಿದ ಪಾಪವೂ ನಾಶವಾಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಹೀಗೆ ಎಲ್ಲ ಪಾಪಗಳೂ ನಾಶವಾಗುತ್ತವೆ. ||೩೫||

ಹೀಗೆ ಗುರುಮುಖಾಂತರವಾಗಿ ವೇದಾಂತವಾಕ್ಯದಿಂದ ಉಂಟಾಗುವ ಬ್ರಹ್ಮಾತ್ಮೈಕ್ಯಜ್ಞಾನದ ಸಾಕ್ಷಾತ್ಕಾರವು ಕರ್ತೃತ್ವ ಭೋಕ್ತೃತ್ವ ಜನನಮರಣ ಪ್ರವಾಹಸಂಬಂಧರೂಪವಾದ ಸಂಸಾರಕ್ಕೆ ಕಾರಣವಾದ ಅಜ್ಞಾನವೆಂಬ ಕತ್ತಲೆಗೆ ಮಧ್ಯಾಹ್ನದಲ್ಲಿರುವ ಸೂರ್ಯನ ಹಾಗೆ ಆಗುತ್ತದೆ. ಎಂದರೆ ಕತ್ತಲೆಯನ್ನು ಪೂರ್ಣವಾಗಿ ಆ ಸೂರ್ಯನು ನಾಶಮಾಡುವಂತೆ, ಆ ಜ್ಞಾನವು ಈ ಅಜ್ಞಾನವನ್ನು ನಿರ್ಮೂಲವಾಗಿ ಸುಟ್ಟುಬಿಡುತ್ತದೆ. ||೩೬||

ಓ ಋಷಿಶ್ರೇಷ್ಠರಿರಾ, ಮಹಾಪಾತಕಗಳೇ ಮುಂತಾದ ಪಾಪಗಳಿಗಳಿಗೂ ಅವು ಗುಟ್ಟಾಗಿರಲಿ ಪ್ರಕಟವಾಗಿರಲಿ, ಅವೆಲ್ಲಕ್ಕೂ ಈ ಆತ್ಮನ ಸ್ವಸ್ವರೂಪಜ್ಞಾನವು

ಅಪರೋಕ್ಷಾತ್ಮವಿಜ್ಞಾನವತಾಂ ನೈವಾಸ್ತಿ ಪಾತಕಮ್
ಪ್ರಾಯಶ್ಚಿತ್ತಂ ಪರಿಜ್ಞಾನಂ ಪರೋಕ್ಷಜ್ಞಾನಿನಾಂ ನೃಣಾಮ್ ॥೩೮॥

ತೇಷಾಂ ನಿಷ್ಠಾಮವಿಜ್ಞಾಯ ಮನುಷ್ಯಾಶ್ಚರ್ಮಚಕ್ಷುಷಾ ।
ವಿಲೋಕ್ಯ ಪಾತಕೈರ್ಯುಕ್ತಾನ್ ಮನ್ವತೇ ಸತ್ತಮಾನಪಿ ॥೩೯॥

ಯಥಾ ಬ್ರಹ್ಮಾತ್ಮವಿಜ್ಞಾನಂ ಪಾತಕಾನಾಂ ಮುನೀಶ್ವರಾಃ ।
ಪ್ರಾಯಶ್ಚಿತ್ತಂ ಮಯಾ ಪ್ರೋಕ್ತಂ ತಥೈವ ಬ್ರಹ್ಮಭಾವನಾ ॥೪೦॥

ನಾಶಕವಾಗುತ್ತದೆ. ಹೀಗೆ ವೇದಾಂತವಾಕ್ಯಶ್ರವಣ ಉಪದೇಶಗಳಿಂದ ಉಂಟಾಗುವ ಪರೋಕ್ಷವಾದ ಶಬ್ದಜ್ಞಾನವು ಪ್ರಾಯಶ್ಚಿತ್ತದ ಹಾಗೆ ಪಾಪಗಳನ್ನೆಲ್ಲವನ್ನೂ ನಾಶ ಮಾಡುತ್ತದೆ. ॥೩೭॥

ಸಾಕ್ಷಾತ್ಕಾರರೂಪವಾದ ಬ್ರಹ್ಮಾತ್ಮೈಕ್ಯದ ಅಪರೋಕ್ಷಾನುಭವವನ್ನು ಪಡೆದವರಿಗೆ ಪಾಪವೇ ಇಲ್ಲದಿರುವುದರಿಂದ ಸಂಸಾರಮೋಕ್ಷವೇ ಫಲವು. ಉಪನಿಷತ್ತುಗಳಲ್ಲಿನ ಮಹಾವಾಕ್ಯಗಳ ಉಪದೇಶಶ್ರವಣದಿಂದ ಉಂಟಾಗುವ ಪರೋಕ್ಷವಾದ ಶಾಬ್ದಜ್ಞಾನವು ಅವರಲ್ಲಿರಬಹುದಾದ ಪಾಪಗಳನ್ನು ಮೊದಲು ನಾಶಮಾಡುತ್ತದೆ. ಅದರಿಂದ ಅಪರೋಕ್ಷಾನುಭವಕ್ಕೆ ಯೋಗ್ಯತೆಯುಂಟಾಗುತ್ತದೆ. ॥೩೮॥

ಹಾಗೆ ಅಪರೋಕ್ಷಾನುಭವವನ್ನು ಪಡೆದು ಜೀವನ್ಮುಕ್ತರಾಗಿರುವ ಜ್ಞಾನಿಗಳ ನಿಜವಾದ ಸ್ಥಿತಿಯನ್ನು ಅರಿಯಲಾರದೆ, ಜ್ಞಾನದ ಕಣ್ಣಿಲ್ಲದ, ಚರ್ಮಚಕ್ಷುಸ್ಸಿನಿಂದ ನೋಡುತ್ತಿರುವ, ಪಾಮರರು ಅಂಥ ಜ್ಞಾನಿಗಳು ವಾಸ್ತವವಾಗಿ ಸಾಧುಶ್ರೇಷ್ಠರಾಗಿದ್ದರೂ, ಪಾಪಲೇಪವಿಲ್ಲದವರಾದರೂ, ಅವರು ತೊಡಗಿರಬಹುದಾದ ನಿಷಿದ್ಧಕರ್ಮಗಳಿಂದ ಪಾಪಸಂಬಂಧವುಳ್ಳವರೆಂದು ತಪ್ಪಾಗಿ ತಿಳಿಯುತ್ತಾರೆ. ॥೩೯॥

ವೇದಾಂತಮಹಾವಾಕ್ಯಗಳ ಉಪದೇಶಶ್ರವಣಗಳು ಅವುಗಳಿಂದ ಉಂಟಾಗುವ ಪರೋಕ್ಷವಾದ ಶಾಬ್ದಜ್ಞಾನವು ಹೇಗೆ ಪಾಪಗಳಿಗೆ ಪ್ರಾಯಶ್ಚಿತ್ತರೂಪವಾಗಿ ನಾಶಕವಾಗುತ್ತವೋ ಹಾಗೆ, ಶ್ರವಣಾನಂತರದಲ್ಲಿ ಮಹಾವಾಕ್ಯಾರ್ಥನಿದಿಧ್ಯಾಸನರೂಪವಾದ ಬ್ರಹ್ಮಾತ್ಮೈಕ್ಯಧ್ಯಾನರೂಪವಾದ ಭಾವನೆಯೂ ಪಾಪಗಳಿಗೆ ಪ್ರಾಯಶ್ಚಿತ್ತರೂಪವಾಗುತ್ತದೆ. ॥೪೦॥

ಶ್ರುತ್ಯಾಚಾರ್ಯಪ್ರಸಾದೇನ ಸರ್ವಂ ಬ್ರಹ್ಮೇತಿ ಭಾವಯನ್ ।
ಮುಚ್ಯತೇ ಪಾತಕೈಸ್ಸರ್ವೈಃ ಘಟಿಕಾಮಾತ್ರತೋ ನರಃ ॥೪೧॥

ದಿನಾರ್ಧಂ ಸಕಲಂ ಬ್ರಹ್ಮ ಭಾವಯನ್ ಗುರುಪೂರ್ವಕಮ್ ।
ಬುದ್ಧಿಪೂರ್ವಕೃತೈಸ್ಸರ್ವೈಃ ಪಾತಕೈರ್ಮುಚ್ಯತೇ ನರಃ ॥೪೨॥

ವಿಗ್ರಹಂ ಪರತತ್ತ್ವಸ್ಯ ತ್ರಿಣೇತ್ರಂ ಸಾಂಬಮದ್ಭುತಮ್ ।
ಮುಹೂರ್ತಂ ಚಿಂತಯನ್ಮರ್ತ್ಯೋ ಮುಚ್ಯತೇ ಸರ್ವಪಾತಕೈಃ ॥೪೩॥

ಸ್ವಸ್ವರೂಪಾನುಸಂಧಾನಾನ್ನೃತ್ಯಂತಂ ಸರ್ವಕಾರಣಮ್ ।
ಮುಹೂರ್ತಂ ಚಿಂತಯನ್ಮರ್ತ್ಯೋ ಮುಚ್ಯತೇ ಸರ್ವಪಾತಕೈಃ ॥೪೪॥

ವೇದ ಮತ್ತು ಗುರುಗಳ ಅನುಗ್ರಹದಿಂದ ಈ ಪ್ರಪಂಚವೆಲ್ಲವೂ ಬ್ರಹ್ಮರೂಪವಾದುದೆಂದು ಧ್ಯಾನಮಾಡುತ್ತಾ ಮುಮುಕ್ಷುವಾದ ಜ್ಞಾನಿಯು ಒಂದು ಗಳಿಗೆ ಮಾತ್ರದಲ್ಲಿಯೇ ಎಲ್ಲ ಪಾಪಗಳಿಂದಲೂ ಬಿಡಲ್ಪಡುತ್ತಾನೆ. ॥೪೧॥

ಗುರೂಪದೇಶಪೂರ್ವಕವಾಗಿ ಅಖಂಡಬ್ರಹ್ಮಸ್ವರೂಪವನ್ನು ಅರ್ಧದಿನದ ಮಟ್ಟಿಗೆ ಧ್ಯಾನಮಾಡಿದರೂ ಮಾನವನು ತಿಳಿವಳಿಕೆಯಿಂದ ಮಾಡಿದ ಎಲ್ಲ ಪಾಪಗಳಿಂದಲೂ ಬಿಡಲ್ಪಡುತ್ತಾನೆ. ॥೪೨॥

ಭಕ್ತರ ಅನುಗ್ರಹಕ್ಕಾಗಿ ಪರತತ್ತ್ವವು ಸ್ವೀಕರಿಸಿರುವ ಸಗುಣಮೂರ್ತಿಯನ್ನು ಎಂದರೆ, ಮೂರು ಕಣ್ಣುಗಳುಳ್ಳ, ಅಂಬಾಸಹಿತವಾದ, ಆಶ್ಚರ್ಯಕರವಾದ ವಿಗ್ರಹವನ್ನು, ಮಾನವನು ಒಂದು ಮುಹೂರ್ತದ ಮಟ್ಟಿಗೆ ಧ್ಯಾನಮಾಡಿದರೆ ಎಲ್ಲ ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ. ॥೪೩॥

ತನ್ನ ಪಾರಮಾರ್ಥಿಕವಾದ ಪರಬ್ರಹ್ಮಸ್ವರೂಪವನ್ನು ಅನುಸಂಧಾನಮಾಡುವುದರಿಂದ ಉಂಟಾದ ಆನಂದದಿಂದ ನರ್ತನಮಾಡುತ್ತಿರುವ, ಎಲ್ಲ ಪ್ರಪಂಚಕ್ಕೂ ಕಾರಣನಾದ, ಪರಶಿವನ ಸಗುಣಮೂರ್ತಿಯನ್ನು ಒಂದು ಮುಹೂರ್ತವೆಂದರೆ ಎರಡು ಗಳಿಗೆಯ ಮಟ್ಟಿಗೆ ಧ್ಯಾನಮಾಡಿದರೂ ಮಾನವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ॥೪೪॥

ನೃತ್ಯಮಾನಂ ಮಹಾದೇವಂ ಸಾಂಬಮೂರ್ತಿಧರಂ ತು ವಾ ।
ದಿನಾರ್ಧಂ ಚಿಂತಯನ್ ಪಾಪಾತ್ ಪ್ರಸಿದ್ಧಾನ್ಮುಚ್ಯತೇಽಖಿಲಾತ್ ॥೪೫॥

ತ್ರಿಮೂರ್ತೀನಾಂ ತು ರುದ್ರಸ್ಯ ವಿಗ್ರಹಂ ಚಿಂತಯನ್ ದಿನಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೪೬॥

ದಿನತ್ರಯಮಭಿಧ್ಯಾಯನ್ ರುದ್ರಮೂರ್ತಿಮತಂದ್ರಿತಃ ।
ಮುಚ್ಯತೇ ಪಾತಕೈಸ್ಸರ್ವೈಃ ಪ್ರಸಿದ್ಧೈರ್ನಾತ್ರ ಸಂಶಯಃ ॥೪೭॥

ಆನಂದದಿಂದ ನರ್ತನೆಮಾಡುತ್ತಿರುವ ಅಂಬಾಸಹಿತನಾದ ಪರಶಿವನ ಅರ್ಧನಾರೀಶ್ವರಮೂರ್ತಿಯನ್ನು ಅರ್ಧದಿನದ ಮಟ್ಟಿಗೆ ಧ್ಯಾನಮಾಡಿದರೂ ಎಲ್ಲ ಪ್ರಸಿದ್ಧವಾದ ಪ್ರಕಟವಾದ ಪಾಪಗಳಿಂದಲೂ ಮನುಷ್ಯನು ಬಿಡುಗಡೆಯನ್ನು ಹೊಂದುತ್ತಾನೆ. ॥೪೫॥

ಬ್ರಹ್ಮಾ, ವಿಷ್ಣು, ರುದ್ರರೆಂಬ ತ್ರಿಮೂರ್ತಿಗಳ ಪೈಕಿ ರುದ್ರನ ಮೂರ್ತಿಯನ್ನು ಪ್ರತಿನಿತ್ಯವೂ ಧ್ಯಾನಮಾಡುವ ಮನುಷ್ಯನು ಮಹಾಪಾಪಗಳಿಂದಲೂ ಇತರ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಇಂತಹ ಸಂದರ್ಭಗಳಲ್ಲಿ ತ್ರಿಮೂರ್ತಿಗಳ ಪೈಕಿ ರುದ್ರನಿಗೆ ಉತ್ಕರ್ಷವನ್ನು ಈ ಗ್ರಂಥದಲ್ಲಿ ಅನೇಕಾವೃತ್ತಿ ಹೇಳಿರುತ್ತದೆ. ಆದುದರಿಂದ ಶಿವೋತ್ಕರ್ಷವನ್ನು ಹೇಳುವುದರಲ್ಲಿ ತಾತ್ಪರ್ಯವುಳ್ಳದಾದ ಈ ಗ್ರಂಥವು ಶೈವಪುರಾಣವೆಂದು ಹೇಳುವುದು ಸರಿಯಲ್ಲವು. ಮತ್ತೇನೆಂದರೆ ಅದ್ವೈತಸಿದ್ಧಾಂತವನ್ನು ಮುಖ್ಯವಾಗಿ ತಿಳಿಯಹೇಳುವ ಈ ಗ್ರಂಥದಲ್ಲಿ ರುದ್ರನು ತ್ರಿಮೂರ್ತಿಗಳ ಪೈಕಿ ಒಬ್ಬನು. ಬ್ರಹ್ಮನು ಸೃಷ್ಟಿಕರ್ತನು. ವಿಷ್ಣುವು ಸ್ಥಿತಿ ಅಥವಾ ಕ್ಷೇಮಕರ್ತನು. ರುದ್ರನು ಉಪಸಂಹಾರಕಾರಕನು. ಇದು ವ್ಯಾವಹಾರಿಕದೃಷ್ಟಿಯಿಂದ ಹೇಳುವ ಮಾತಾಗಿದೆ. ಆದರೂ ಈ ರುದ್ರನು ಮುಮುಕ್ಷುಗಳಿಗೆ ಅಜ್ಞಾನವನ್ನು ನಾಶಮಾಡಿ, ಜ್ಞಾನವನ್ನು ಅನುಗ್ರಹಿಸುವುದರಿಂದ ಕಲ್ಯಾಣಕಾರಕನಾದ, ಶ್ರೇಯಸ್ಸನ್ನುಂಟುಮಾಡುವ ಶಿವನೂ ಆಗಿದಾನೆಂಬುದು ತಾತ್ಪರ್ಯವು. ಮುಂದಿನ ಶ್ಲೋಕಗಳಲ್ಲಿ ವಿಷ್ಣು ಪೂಜಾಧ್ಯಾನಗಳಿಂದ ಆಗುವ ಫಲವನ್ನೂ ಹೇಳಿದೆ. ಒಟ್ಟಿನಲ್ಲಿ ತ್ರಿಮೂರ್ತಿಗಳಲ್ಲೂ ಸಾಮರಸ್ಯವನ್ನು, ಪೂಜ್ಯಬುದ್ಧಿಯು ಸಮವಾಗಿರಬೇಕೆಂಬುದನ್ನು, ಮನಗಾಣಿಸುವ ಅದ್ವೈತಬೋಧನೆಯಲ್ಲಿ ತಾತ್ಪರ್ಯವನ್ನು ಗಮನಿಸಬೇಕು.॥೪೬॥

ಶ್ರೀರುದ್ರಮೂರ್ತಿಯನ್ನು ಮೂರು ದಿನಗಳವರೆಗೂ ಎಡೆಬಿಡದೆ ಆಲಸ್ಯ

ವಿಷ್ಣೋಶ್ಚ ವಿಗ್ರಹಂ ಧ್ಯಾಯನ್ ಮರ್ತ್ಯಶ್ಚ್ಯಹ್ನೋ ದಿನತ್ರಯಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೪೮॥

ಸಪ್ತರಾತ್ರಂ ಮಹಾವಿಷ್ಣೋಃ ವಿಗ್ರಹಂ ಚಿಂತಯನ್ನರಃ ।
ಮುಚ್ಯತೇ ಪಾತಕೈಸ್ಸರ್ವೈಃ ಪ್ರಸಿದ್ಧೈರ್ನಾತ್ರ ಸಂಶಯಃ ॥೪೯॥

ಬ್ರಹ್ಮಣೋ ವಿಗ್ರಹಂ ಶುದ್ಧಂ ಸಪ್ತರಾತ್ರಂ ವಿಚಿಂತಯನ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೦॥

ವಿಲ್ಲದೆ ಧ್ಯಾನಮಾಡುವವನು ಪ್ರಸಿದ್ಧವಾದ ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲವು. ||೪೭||

ಶ್ರೀವಿಷ್ಣುಮೂರ್ತಿಯನ್ನು ಮೂರು ದಿನಗಳವರೆಗೆ ಎಡೆಬಿಡದೆ ಧ್ಯಾನ ಮಾಡುವವನು ಮಹಾಪಾತಕಗಳ ಸಮೂಹಗಳಿಂದಲೂ ಇತರ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ಶುದ್ಧನಾಗುತ್ತಾನೆ. ||೪೮||

ಶ್ರೀವಿಷ್ಣುಮೂರ್ತಿಯನ್ನು ಏಳು ದಿನಗಳವರೆಗೂ ಧ್ಯಾನಮಾಡುವ ಮನುಷ್ಯನು ಪ್ರಸಿದ್ಧವಾದ ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಪಡೆಯುತ್ತಾನೆ, ಈ ಅಂಶದಲ್ಲೂ ಸಂದೇಹವಿಲ್ಲವು. ||೪೯||

ಬ್ರಹ್ಮನ ಶುದ್ಧವಾದ ಮೂರ್ತಿಯನ್ನು ಏಳು ರಾತ್ರಿಗಳವರೆಗೂ, ಅಥವಾ ಒಂದು ತಿಂಗಳವರೆಗೂ ಎಡೆಬಿಡದೆ ಧ್ಯಾನಮಾಡುವ ಮನುಷ್ಯನು ಪ್ರಸಿದ್ಧವಾದ ಎಲ್ಲ ಮಹಾಪಾತಕಗಳಿಂದಲೂ, ಇತರ ಪಾಪಗಳಿಂದಲೂ, ಬಿಡುಗಡೆಯನ್ನು ಹೊಂದುತ್ತಾನೆ. ಇದರಲ್ಲಿ ಸಂದೇಹವಿಲ್ಲವು. ಹೀಗೆ ತ್ರಿಮೂರ್ತಿಗಳಲ್ಲೂ ಸಮವಾದ ಪೂಜ್ಯಬುದ್ಧಿಯನ್ನು ಬೆಳೆಸುವಷ್ಟು ಹೃದಯದ ವಿಸ್ತಾರವನ್ನು ಪಡೆಯುವುದು ಅದ್ವೈತಮನೋಭಾವದ ಸಂಪಾದನೆಗೆ ಆವಶ್ಯಕವಾದ ಹಿಂದಿನ ಮೆಟ್ಟಿಲಾಗಿರುತ್ತದೆ. ಹಿಂದೆ ಎರಡನೆಯ ಮತ್ತು ಇತರ ಅಧ್ಯಾಯಗಳಲ್ಲಿ ವಿಷ್ಣು ಮುಂತಾದ ದೇವತೆಗಳನ್ನು ನಿಂದಿಸಿರುವಂತೆ ಅಥವಾ ಅಪಕರ್ಷವನ್ನು ಹೇಳಿರುವಂತೆ ತೋರುವ ಸಂದರ್ಭಗಳಲ್ಲಿ "ನಹಿನಿಂದಾ" ನ್ಯಾಯವನ್ನು ಅನುಸರಿಸಿ ಮುಖ್ಯತಾತ್ಪರ್ಯವನ್ನು ಮನಗಾಣ ಬೇಕೆಂದು ತಿಳಿಯಹೇಳಿದೆ. ಆದುದರಿಂದ ಅದ್ವೈತ ಪರವಾದ ಗ್ರಂಥದಲ್ಲಿ ನಿಂದಾ, ದ್ವೇಷಗಳಲ್ಲಿ ತಾತ್ಪರ್ಯವಿರುವುದಿಲ್ಲವು. ಏಕೆಂದರೆ ಅದು ಅದ್ವೈತದ ಅತ್ಯಂತವಿಶಾಲ

ಮಾಸಮಾತ್ರಮಭಿಧ್ಯಾಯನ್ ಬ್ರಹ್ಮಣೋ ವಿಗ್ರಹಂ ನರಃ ।
ಮುಚ್ಯತೇ ಪಾತಕೈಸ್ಸರ್ವೈಃ ಪ್ರಸಿದ್ಧೈರ್ನಾತ್ರ ಸಂಶಯಃ ॥೫೧॥

ಜಪಿತ್ವಾ ದಶಸಾಹಸ್ರಂ ಮಂತ್ರಂ ಚೈತನ್ಯವಾಚಕಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೨॥

ಪಾತಕಾನಾಂ ಸಮಸ್ತಾನಾಂ ಲಾಘವಾಪೇಕ್ಷಯಾ ಕ್ರಮಾತ್ ।
ಜಪೇಽಪಿ ಲಾಘವಂ ಕಾರ್ಯಂ ಚಿನ್ಮಂತ್ರಸ್ಯ ಕ್ರಮೇಣ ತು ॥೫೩॥

ವಾದ ಮನೋಭಾವಕ್ಕೆ ಅನುಗುಣವಾದುದಲ್ಲವು. ಅಲ್ಲದೆ ಮಾನವನು ತನ್ನ ಪೂರ್ವಸಂಸ್ಕೃತಿ, ಈಗಿನ ಸನ್ನಿವೇಶಗಳಿಗೆ ತಕ್ಕಂತೆ ಹೊಂದಿರಬಹುದಾದ ರುಚಿ, ಅರುಚಿಗಳನ್ನೂ ಮಾರ್ಪಡಿಸಿ, ಮೇಲ್ಪಡಿಸಿ, ಮುಂದುವರಿಯಲು ಅನುಕೂಲವಾದ ತಿಳಿವಳಿಕೆಯನ್ನೂ ನಡೆವಳಿಕೆಯನ್ನೂ ಅದ್ವೈತಗ್ರಂಥಗಳು ಬೋಧಿಸುತ್ತವೆ. ಅದಕ್ಕನುಸಾರವಾಗಿ ಇದರಲ್ಲೂ ಅನೇಕಪ್ರಕರಣಗಳಲ್ಲಿ ಹೇಳಿರುವ ಮಾತುಗಳಿಗೆ ಪೂರ್ವಾಪರವಿರೋಧವಿಲ್ಲದಂತೆಯೂ, ಅದ್ವೈತಕ್ಕೆ ಅನುಗುಣವಾಗಿರುವಂತೆಯೂ ಭಾವವನ್ನು ಮನಗಾಣಬೇಕು. ||೫೦-೫೧||

ಚೈತನ್ಯವನ್ನು ತಿಳಿಸುವ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಮಂತ್ರವನ್ನಾಗಲಿ, ಭುವನೇಶ್ವರೀ ಮಂತ್ರವನ್ನಾಗಲಿ ಹತ್ತು ಸಾವಿರ ಸಲ ಜಪಿಸುವವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಇಲ್ಲಿ ಚಿನ್ಮಂತ್ರವೆಂದರೆ ಹಿಂದೆ ನಾಲ್ಕನೆಯ ಅಧ್ಯಾಯದಲ್ಲಿ ಹೇಳಿರುವ, ಸಂವಿದ್ರೂಪಿಣಿಯಾದ ಎಂದರೆ ಜ್ಞಾನಾನಂದಸ್ವರೂಪಳಾದ, ಪರಾಶಕ್ತಿಯನ್ನು ತಿಳಿಸುವ ಹೃಲ್ಲೇಖಾಮಂತ್ರವೆಂದು ತಿಳಿಯಬೇಕು. ಹಾಗೆಯೇ ಮಾತೃಕಾ ಅಥವಾ ವರ್ಣಮಾಲೆಯ ಉತ್ಪತ್ತಿಯನ್ನು ವಿವರಿಸುವ ಸಂದರ್ಭದಲ್ಲಿ, ಅ. ៥. ಶ್ಲೋ. ೨೨-೨೩ ರಲ್ಲಿ "ಅಪದಂ ಪದಮಾಪನ್ನಂ . . ." ಎಂದು ಮುಂತಾಗಿ ಹೇಳಿ ವಿವರಿಸಿರುವ ಪದಾಖ್ಯವಾದ ಮಾತೃಕಾ ಮಂತ್ರವೆಂದೂ ತಿಳಿಯಬೇಕು. ||೫೨||

ಎಲ್ಲ ಬಗೆಯ ಪಾಪಗಳಲ್ಲಿ ಅವುಗಳ ಲಾಘವಗೌರವದ ದೃಷ್ಟಿಯನ್ನು ಅನುಸರಿಸಿ ಚಿನ್ಮಂತ್ರದ ಜಪಸಂಖ್ಯೆಯನ್ನೂ ಕಮವಾಗಿ ಹೆಚ್ಚುಕಡಿಮೆಮಾಡಬೇಕು. ಹೇಗೆಂದರೆ, ||೫೩||

ಪದಂ ದ್ವಾದಶಸಾಹಸ್ರಂ ಜಪಿತ್ವಾ ಮಾತೃಕಾಽಽಶ್ರಯಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೪॥

ಪಾತಕಾನಾಂ ಸಮಸ್ತಾನಾಂ ಲಾಘವಾಪೇಕ್ಷಯಾ ಕ್ರಮಾತ್ ।
ಜಪೇಽಪಿ ಲಾಘವಂ ಕಾರ್ಯಂ ಪದಾಖ್ಯಸ್ಯ ಮನೋರಪಿ ॥೫೫॥

ಜಪಿತ್ವಾ ಲಕ್ಷಮೇಕಂ ತು ಪ್ರಣವಂ ಬ್ರಹ್ಮವಾಚಕಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೬॥

ಕಂಠಮಾತ್ರೋದಕೇ ಲಕ್ಷಂ ಜಪಿತ್ವಾ ಹಂಸಮಂತ್ರಕಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೭॥

ನಾಭಿಮಾತ್ರೋದಕೇ ಲಕ್ಷಂ ಜಪಿತ್ವಾ ತು ಷಡಕ್ಷರಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೮॥

ಕಂಠಮಾತ್ರೋದಕೇ ಲಕ್ಷಂ ಜಪಿತ್ವಾ ವ್ಯಾಹೃತಿತ್ರಯಮ್ ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೫೯॥

ವಾಗ್ಯತಸ್ತು ಜಪೇಲ್ಲಕ್ಷಂ ಸಾವಿತ್ರೀಮಾದರೇಣ ತು ।
ಮಹಾಪಾತಕಸಂಘೈಶ್ಚ ಮುಚ್ಯತೇ ಪಾತಕಾಂತರೈಃ ॥೬೦॥

ಅಕ್ಷರಮಾಲೆಯಲ್ಲಿನ, ಪ್ರಾಪ್ಯಸ್ಥಾನರೂಪವಾದ, ವರ್ಣವನ್ನು ಹನ್ನೆರಡು ಸಾವಿರ ಸಲ ಜಪಮಾಡುವುದರಿಂದಲೂ, ಪಾಪಗಳ ಲಾಘವಗೌರವಗಳಿಗೆ ತಕ್ಕಂತೆ ಮಂತ್ರಜಪದ ಸಂಖ್ಯೆಯನ್ನು ಕಡಿಮೆ ಹೆಚ್ಚು ಮಾಡುವುದರಿಂದಲೂ, ಬ್ರಹ್ಮವನ್ನು ತಿಳಿಸುವ ಓಂಕಾರಮಂತ್ರವನ್ನು ಒಂದು ಲಕ್ಷ ಸಲ ಜಪಿಸುವುದರಿಂದಲೂ, ಹಂಸ ಮಂತ್ರವನ್ನು ಕತ್ತಿನುದ್ದದ ನೀರಿನಲ್ಲಿ ನಿಂತು ಒಂದು ಲಕ್ಷ ಸಲ ಜಪಿಸುವುದರಿಂದಲೂ, ಮೂರು ವ್ಯಾಹೃತಿಮಂತ್ರಗಳನ್ನು ಕತ್ತಿನುದ್ದದ ನೀರಿನಲ್ಲಿ ನಿಂತು ಒಂದು ಲಕ್ಷ ಸಲ ಜಪಿಸುವುದರಿಂದಲೂ, ಮಹಾಪಾತಕಗಳಿಂದಲೂ ಇತರ ಪಾಪಗಳಿಂದಲೂ ಬಿಡುಗಡೆಯನ್ನು ಉಪಾಸಕನು ಹೊಂದುತ್ತಾನೆ. ॥೫೪-೫೫-೫೬-೫೭-೫೮-೫೯-೬೦॥

ಸವ್ಯಾಹೃತೀಸ್ಸಪ್ರಣವಾಃ ಪ್ರಾಣಾಯಾಮಾಸ್ತು ಷೋಡಶ ।
ಅತಿಭ್ರೂಣಹರಂ ಮಾಸಾತ್ ಪುನಂತ್ಯಹರಹಃ ಕೃತಾಃ ॥೬೧॥

ಗವಾಂ ಗೋಷ್ಠೇ ತು ಭಿಕ್ಷಾಶೀ ಪಾವಮಾನೀಂ ಜಪನ್ಮುದಾ ।
ವತ್ಸರಾತ್ಪಾತಕೈಸ್ಸರ್ವೈಃ ಮುಚ್ಯತೇ ನ ಹಿ ಸಂಶಯಃ ॥೬೨॥

ದಶವಾರಂ ಜಪೇನ್ನಿತ್ಯಂ ಪಾವಮಾನೀಂ ಮಹಾಮತಿಃ ।
ಗವಾನುಗಮನಂ ಪ್ರೋಕ್ತಂ ಗೋಘ್ನಸ್ಯೈವ ನ ಚಾನ್ಯಥಾ ॥೬೩॥

ಉಪವಾಸತ್ರಯಂ ಕೃತ್ವಾ ಕಂಠಮಾತ್ರೋದಕೇ ಸ್ಥಿತಃ ।
ಮುಚ್ಯತೇ ಪಾತಕೈಸ್ಸರ್ವೈಃ ತ್ರಿರ್ಜಪಿತ್ವಾಽಘಮರ್ಷಣಮ್ ॥೬೪॥

ಗಾಯತ್ರ್ಯಷ್ಟಸಹಸ್ರಂ ತು ಜಪಿತ್ವಾ ತು ದಿನೇದಿನೇ ।
ಸಪ್ತಾಹಾತ್ಸರ್ವಪಾಪೇಭ್ಯೋ ಮುಚ್ಯತೇ ಭೈಕ್ಷಭುಙ್ನರಃ ॥೬೫॥

ವ್ಯಾಹೃತಿಮಂತ್ರದಿಂದಲೂ ಪ್ರಣವದಿಂದಲೂ ಕೂಡಿದ ಹದಿನಾರು ಪ್ರಾಣಾಯಾಮಗಳನ್ನು ಒಂದು ತಿಂಗಳವರೆಗೆ ಮಾಡಿದರೆ ಭ್ರೂಣಹತ್ಯಾದೋಷವೂ ಹೋಗುತ್ತದೆ. ದನವನ್ನು ಕಟ್ಟುವ ಕೊಟ್ಟಿಗೆಯಲ್ಲಿ ಪವಮಾನಸೂಕ್ತವನ್ನು ಭಿಕ್ಷಾಶನನಿಯಮಪೂರ್ವಕವಾಗಿ ಒಂದು ವರ್ಷದವರೆಗೆ ಜಪಿಸಿದರೆ ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲವು. ॥೬೧-೬೨॥

ಬುದ್ಧಿವಂತನಾದವನು ಪವಮಾನಸೂಕ್ತವನ್ನು ಪ್ರತಿದಿನವೂ ಹತ್ತು ಸಲ ಜಪಿಸಬೇಕು. ಮತ್ತು ಗೋಹತ್ಯಮಾಡಿದವನಿಗೆ ಹಸುವನ್ನು ಮೇಯುವುದಕ್ಕೆ ಹೋಗುವಾಗ ಅನುಸರಿಸಿ ಹೋಗುತ್ತಾ ಅದರ ಸೇವಿಸುವಿಕೆಯು ಪ್ರಾಯಶ್ಚಿತ್ತವೆಂದು ಹೇಳಿದೆ. ಬೇರೆ ದಾರಿ ಇಲ್ಲವು. ಮೂರು ದಿನ ಉಪವಾಸಮಾಡಿ ಕತ್ತಿನುದ್ದದ ನೀರಿನಲ್ಲಿ ನಿಂತು ಅಘಮರ್ಷಣಸೂಕ್ತವನ್ನು ಮೂರಾವೃತ್ತಿ ಜಪಿಸಿದರೆ ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಪ್ರತಿದಿನವೂ ಎಂಟು ಸಾವಿರ ಸಲ ಗಾಯತ್ರೀಮಂತ್ರವನ್ನು ಏಳು ದಿನಗಳಲ್ಲಿ ಭಿಕ್ಷಾನ್ನಭೋಜನವ್ರತದಿಂದ ಜಪಿಸದರೆ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ॥೬೩-೬೪-೬೫॥

ಉಪವಾಸತ್ರಯಂ ಕೃತ್ವಾ ಚತ್ವಾರಿಂಶತ್ ಘೃತಾಹುತೀಃ ।
ಕೂಷ್ಮಾಂಡೈರ್ಜುಹುಯಾತ್ಸರ್ವಪಾಪೇಭ್ಯೋ ಮುಚ್ಯತೇ ನರಃ ॥೬೬॥

ಜಪಿತ್ವಾ ಶಿವಸಂಕಲ್ಪಂ ಅಸ್ಯ ವಾಮೀಯಮೇವ ಚ ।
ಸುವರ್ಣಸ್ತೇಯದೋಷೇಣ ಮುಚ್ಯತೇ ನ ಹಿ ಸಂಶಯಃ ॥೬೭॥

ಜಪಿತ್ವಾ ಪೌರುಷಂ ಸೂಕ್ತಂ ಹವಿಷ್ಮಂತೀಯಮೇವ ಚ ।
ಗುರುತಲ್ಪಗದೋಷೇಣ ಮುಚ್ಯತೇ ನ ಹಿ ಸಂಶಯಃ ॥೬೮॥

ಉಪವಾಸತ್ರಯಂ ಕುರ್ಯಾತ್ ಹೋಮಮಾಜ್ಯೇನ ಧೀಮತಾ ।
ಪೌರುಷೇಣೈವ ಸೂಕ್ತೇನ ಸರ್ವಪಾಪನಿವೃತ್ತಯೇ ॥೬೯॥

ಪವಿತ್ರವೃಷಭಂ ತೋಯೇ ಸ್ಥಿತ್ವಾ ಜಪ್ತ್ವಾ ದಶಾವರಮ್ ।
ತ್ರಿರಾತ್ರೋಪೋಷಿತಃ ಸ್ತೇಯಾತ್ ಮುಚ್ಯತೇ ನ ಹಿ ಸಂಶಯಃ ॥೭೦॥

ಮೂರು ದಿನ ಉಪವಾಸಮಾಡಿ ಕುಂಬಳಕಾಯಿಯೊಡನೆ ನಲವತ್ತು ಆಜ್ಯ ಹೋಮಗಳನ್ನು ಮಾಡುವ ಮನುಷ್ಯನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ॥೬೬॥

ಶಿವಸಂಕಲ್ಪಮಂತ್ರವನ್ನು ಮಹನ್ಯಾಸದಲ್ಲಿರುವಂತೆ ಜಪಿಸಿ "ಯುಕ್ತಮಸ್ಯ ವಾಮೀಯ" ಎಂಬ ಮಂತ್ರವನ್ನು ಜಪಿಸಿದರೆ ಚಿನ್ನವನ್ನು ಕದ್ದ ದೋಷದಿಂದ ಮುಕ್ತನಾಗುತ್ತಾನೆ, ಸಂದೇಹವಿಲ್ಲವು. ಪುರುಷಸೂಕ್ತವನ್ನೂ ಹವಿಷ್ಮಂತೀಯ ಸೂಕ್ತವನ್ನೂ ಜಪಿಸಿದರೆ ಗುರುತಲ್ಪಗಮನದ ಪಾಪದಿಂದ ಮುಕ್ತನಾಗುತ್ತಾನೆ. ಸಂದೇಹವಿಲ್ಲವು. ಬುದ್ಧಿವಂತನಾದವನು ಮೂರು ದಿನ ಉಪವಾಸಮಾಡಿ ಪುರುಷ ಸೂಕ್ತದಿಂದ ಆಜ್ಯಹೋಮವನ್ನು ಮಾಡಿದರೆ ಎಲ್ಲ ಪಾಪಗಳೂ ನಷ್ಟವಾಗಿಹೋಗುತ್ತವೆ. ॥೬೭-೬೮-೬೯॥

ಮೂರು ರಾತ್ರಿಗಳು ಉಪವಾಸವಿದ್ದು ಪಾವನವಾದ "ಯಶ್ಛಂದಸಾ ವೃಷಭಃ" ಎಂಬ ಮಂತ್ರವನ್ನು ನೀರಿನಲ್ಲಿ ನಿಂತು ಹತ್ತು ಸಲಕ್ಕೆ ಕಡಿಮೆಯಿಲ್ಲದೆ ಜಪಿಸುವವನು ಕಳ್ಳತನವನ್ನು ಮಾಡಿದ ದೋಷದಿಂದ ಮುಕ್ತನಾಗುತ್ತಾನೆ. ಸಂದೇಹವಿಲ್ಲವು. ಮೂರು ದಿನ ಉಪವಾಸವಿದ್ದು ಶರೀರಕ್ಕೆ ವಿಭೂತಿಯನ್ನು

ಉಪವಾಸತ್ರಯಂ ಕೃತ್ವಾ ಭಸ್ಮೋದ್ಧೂಳಿತವಿಗ್ರಹಃ ।
ರುದ್ರಾಧ್ಯಾಯೀ ವಿಮುಚ್ಯೇತ ಸುರಾಪಾನಾನ್ನ ಸಂಶಯಃ ॥೭೧॥

ದ್ರುಪದಾ ನಾಮ ಗಾಯತ್ರೀ ವೇದೇ ವಾಜಸನೇಯಕೇ ।
ಪಂಚ ಜಪ್ತ್ವಾ ಜಲೇ ಮಗ್ನಃ ಮುಚ್ಯತೇ ಸರ್ವಪಾತಕೈಃ ॥೭೨॥

ಅವೇತ್ಯೃಚಂ ಜಪೇದಬ್ದಂ ಯತ್ಕಿಂಚೇದಂ ಇತೀತಿ ಚ ।
ಮಹಾಪಾತಕಸಂಘೈಶ್ಚ ಮುಚ್ಯತೇ ಹಿ ದಶಾವರೈಃ ॥೭೩॥

ಜಪೇತ್ತರತ್ಸಮಂದೀಯಂ ಅಭಕ್ಷ್ಯಸ್ಯ ತು ಭಕ್ಷಣೇ ।
ತದ್ದೋಷೇಣ ವಿಮುಚ್ಯೇತ ಮಾನವಸ್ತು ನ ಸಂಶಯಃ ॥೭೪॥

ಇಂದ್ರಂಮಿತ್ರಂತದೇನಸ್ವೀ ಜಪೇದಬ್ದಾರ್ಧಮಾದರಾತ್ ।
ಭೈಕ್ಷಾಹಾರೋ ವಿಮುಚ್ಯೇತ ಪಾತಕೈಶ್ಚ ಮಹತ್ತರೈಃ ॥೭೫॥

ಉದ್ಧೂಳನಮಾಡಿಕೊಂಡಿರುವವನಾಗಿ ರುದ್ರಾಧ್ಯಾಯದ ನಮಕಚಮಕಮಂತ್ರಗಳನ್ನು ಜಪಿಸುವವನು ಮದ್ಯಪಾನಪಾಪದಿಂದ ಸಂದೇಹವಿಲ್ಲದೆ ಮುಕ್ತನಾಗುತ್ತಾನೆ. ||೭೦-೭೧||

"ದ್ರುಪದಾದಿವ" ಎಂಬ, ವೇದದ ವಾಜಸನೇಯಶಾಖೆಯಲ್ಲಿನ ಗಾಯತ್ರೀ ಮಂತ್ರವನ್ನು ನೀರಿನಲ್ಲಿ ಮುಳುಗಿ ಐದಾವೃತ್ತಿ ಜಪಿಸಿದರೆ ಎಲ್ಲ ಪಾಪಗಳೂ ಹೋಗುತ್ತವೆ. "ಅವತೆಹೇಡೋವರುಣ" "ಯತ್ಕಿಂಚೇದಂ ವರುಣ" ಎಂಬ ಋಕ್‌ಗಳನ್ನು ಒಂದು ವರ್ಷದವರಿಗೆ ಎಡೆಬಿಡದೆ ಪ್ರತಿದಿನವೂ ಹತ್ತುಸಲಕ್ಕೆ ಕಡಿಮೆಯಿಲ್ಲದೆ ಜಪಿಸಿದವನು ಮಹಾಪಾತಕ ಸಮೂಹಗಳಿಂದಲೂ ಮುಕ್ತನಾಗುತ್ತಾನೆ. ||೭೨-೭೩||

"ತರತ್ಸಮಂದೀಧಾವತಿ" ಎಂಬ ಪವಮಾನಸೂಕ್ತದ ಋಕ್ಕನ್ನು ಜಪಿಸಿದರೆ ಅಭಕ್ಷ್ಯಭಕ್ಷಣದ ಪಾಪದಿಂದ ಸಂದೇಹವಿಲ್ಲದೆ ಮುಕ್ತನಾಗುತ್ತಾನೆ. ಮಹಾಪಾತಕಗಳಿಂದ ಪಾಪಿಯಾದವನು "ಇಂದ್ರಂ ಮಿತ್ರಂ ವರುಣಂ" ಎಂಬ ಮಂತ್ರವನ್ನು ಆದರದಿಂದ ಆರು ತಿಂಗಳವರಿಗೆ ಭಿಕ್ಷಾನ್ನ ಭೋಜನದ ವ್ರತವುಳ್ಳವನಾಗಿ ಜಪಿಸಿದರೆ ಪಾಪದಿಂದ ಮುಕ್ತನಾಗುತ್ತಾನೆ. ||೭೪-೭೫||

ಪ್ರಾಣಾಯಾಮತ್ರಯಂ ಕುರ್ವನ್ ಸರ್ವಪಾಪೈಃ ಪ್ರಮುಚ್ಯತೇ ।
ಪ್ರಾಣಾಯಾಮಸಹಸ್ರೈಸ್ತು ಮುಚ್ಯತೇ ಭವಬಂಧನಾತ್ ॥೭೬॥

ಸವ್ಯಾಹೃತಿಂ ಸಪ್ರಣವಾಂ ಗಾಯತ್ರೀಂ ಶಿರಸಾ ಸಹ ।
ತ್ರಿಃಪಠೇತ್ತು ಜಲೇ ಮಗ್ನಃ ಸರ್ವಪಾಪೈಃ ಪ್ರಮುಚ್ಯತೇ ॥೭೭॥

ತಿಲಹೋಮಸಹಸ್ರೇಣ ವ್ಯಾಹೃತ್ಯಾ ಪ್ರಣವೇನ ವಾ ।
ಮಹಾಪಾತಕಸಂಘೈಶ್ಚ ಮುಚ್ಯತೇ ನ ಹಿ ಸಂಶಯಃ ॥೭೮॥

ಮಹಾದೇವೇತಿ ಯೋ ಬ್ರೂಯಾತ್ ಪ್ರಾತರುತ್ಥಾಯ ನಿತ್ಯಶಃ ।
ಜನ್ಮಾಂತರಸಹಸ್ರೇಷು ಕೃತಂ ಪಾಪಂ ವಿನಶ್ಯತಿ ॥೭೯॥

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಶುಚಿರ್ಭೂತ್ವಾ ಸಮಾಹಿತಃ ।
ಶಿವೇತಿ ಕೀರ್ತಯನ್ ಸರ್ವೈಃ ಪಾತಕೈಸ್ತು ವಿಮುಚ್ಯತೇ ॥೮೦॥

ಪುಣ್ಯಾ ಭಾಗೀರಥೀ ಲೋಕೇ ಪುಣ್ಯಾ ವಾರಾಣಸೀ ಪುರೀ ।
ಪುಣ್ಯಾ ವೇದಾಶ್ಶಿವಃ ಪುಣ್ಯಃ ಪುಣ್ಯಂ ತಿರ್ಯಕ್ತ್ರಿಪುಂಡ್ರಕಮ್ ॥೮೧॥

ಮೂರು ಪ್ರಾಣಾಯಾಮಗಳನ್ನು ಮಾಡುವವನು ಎಲ್ಲ ಪಾಪಗಳಿಂದಲೂ, ಒಂದು ಸಾವಿರ ಪ್ರಾಣಾಯಾಮಗಳಿಂದ ಸಂಸಾರದ ಬಂಧನದಿಂದಲೂ, ಬಿಡುಗಡೆಯನ್ನು ಹೊಂದುತ್ತಾನೆ. ವ್ಯಾಹೃತಿಯಿಂದಲೂ, ಪ್ರಣವದಿಂದಲೂ, ಶಿರಸ್ಸಿನಿಂದಲೂ ಕೂಡಿದ ಗಾಯತ್ರಿಯನ್ನು ನೀರಿನಲ್ಲಿ ಮುಳುಗಿದವನಾಗಿ ಮೂರಾವೃತ್ತಿ ಜಪಿಸುವವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ||೭೬-೭೭||

ವ್ಯಾಹೃತಿ ಅಥವಾ ಪ್ರಣವಮಂತ್ರದಿಂದ ಒಂದು ಸಾವಿರ ತಿಲಹೋಮಗಳನ್ನು ಮಾಡುವವನು ಮಹಾಪಾತಕಗಳ ಗುಂಪಿನಿಂದಲೂ ಮುಕ್ತನಾಗುತ್ತಾನೆ. ಪ್ರತಿದಿನವೂ ಬೆಳಗ್ಗೆ ಎದ್ದು ಮಹಾದೇವ ಎಂದು ಜಪಮಾಡುವವನು ಸಾವಿರಾರು ಹಿಂದಿನ ಜನ್ಮಗಳಲ್ಲೂ ಮಾಡಿದ ಪಾಪಗಳಿಂದ ಮುಕ್ತನಾಗುತ್ತಾನೆ. ಸಂದೇಹವಿಲ್ಲವು. ಬೆಳಗಿನಜಾವದಲ್ಲಿ ಎದ್ದು ಪರಿಶುದ್ಧನಾಗಿ ಚಿತ್ತಸಮಾಧಾನವುಳ್ಳವನಾಗಿ ಶಿವ ಎಂದು ಜಪಮಾಡುವವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ||೭೮-೭೯-೮೦||

ಈ ಪ್ರಪಂಚದಲ್ಲಿ ಗಂಗಾನದಿಯೂ, ಕಾಶೀಪಟ್ಟಣವೂ, ವೇದಗಳೂ, ಶಿವನೂ,

ಪಂಚಪುಣ್ಯಾನಿ ಯೋ ನಿತ್ಯಂ ಪ್ರಾತರುತ್ಥಾಯ ಕೀರ್ತಯೇತ್ ।
ಸರ್ವಪಾಪವಿನಿರ್ಮುಕ್ತಃ ಸ ಯಾತಿ ಪರಮಾಂ ಗತಿಮ್ ॥೮೨॥

ವಿಷುವಾಯನ ಕಾಲೇಷು ಗ್ರಹಣೇ ಚಂದ್ರಸೂರ್ಯಯೋಃ ।
ಶಿವಶಬ್ದ ಜಪಂ ಕುರ್ವನ್ ಮುಚ್ಯತೇ ಸರ್ವಪಾತಕೈಃ ॥೮೩॥

ವ್ಯತೀಪಾತೇ ತಿಲಂ ಧಾನ್ಯಂ ಬ್ರಾಹ್ಮಣಾಯ ದದಾತಿ ಯಃ ।
ಸರ್ವಪಾಪವಿನಿರ್ಮುಕ್ತಸ್ಸ ಯಾತಿ ಪರಮಾಂ ಗತಿಮ್ ॥೮೪॥

ಪಂಚದಶ್ಯಾಂ ಸಮುದ್ದಿಶ್ಯ ಮಹಾದೇವಂ ಸಿತೇತರೇ ।
ಬ್ರಾಹ್ಮಣಂ ಭೋಜಯಿತ್ವಾ ತು ಮುಚ್ಯತೇ ಸರ್ವಪಾತಕೈಃ ॥೮೫॥

ಯಸ್ತು ಕೃಷ್ಣ ಚತುರ್ದಶ್ಯಾಂ ಶಿವಮುದ್ದಿಶ್ಯ ಭೋಜಯೇತ್ ।
ಬ್ರಾಹ್ಮಣಂ ಪಾತಕೈಸ್ಸರ್ವೈಃ ಮುಚ್ಯತೇ ನ ಹಿ ಸಂಶಯಃ ॥೮೬॥

ಕೃಷ್ಣಾಷ್ಟಮ್ಯಾಂ ದ್ವಿಜಶ್ರೇಷ್ಠಂ ಭೋಜಯೇಚ್ಛಂಕರಾತ್ಮನಾ ।
ಸರ್ವಪಾಪವಿನಿರ್ಮುಕ್ತಶ್ಶಂಕರಂ ಯಾತಿ ಮಾನವಃ ॥೮೭॥

ಅಡ್ಡಲಾಗಿ ಧರಿಸಿರುವ ಭಸ್ಮತ್ರಿಪುಂಡ್ರವೂ ಪುಣ್ಯಕರಗಳಾಗಿವೆ. ಬೆಳಗ್ಗೆ ಎದ್ದು ಈ ಐದು ಪುಣ್ಯಕರಗಳಾದ ಪದಾರ್ಥಗಳನ್ನು ಧ್ಯಾನಮಾಡುವವನು ಎಲ್ಲ ಪಾಪಗಳಿಂದಲೂ ಮುಕ್ತನಾಗಿ ಉತ್ತಮವಾದ ಸದ್ಗತಿಯನ್ನು ಪಡೆಯುತ್ತಾನೆ. ||೮೧-೮೨||

ತುಲಾಮೇಷಸಂಕ್ರಮಣಕಾಲಗಳಲ್ಲೂ, ಚಂದ್ರಸೂರ್ಯರ ಗ್ರಹಣಗಳಕಾಲಗಳಲ್ಲೂ, ಶಿವಮಂತ್ರಜಪವನ್ನು ಮಾಡುವವನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ವ್ಯತೀಪಾತಯೋಗದ ಕಾಲದಲ್ಲಿ ಎಳ್ಳನ್ನು ಬ್ರಾಹ್ಮಣನಿಗೆ ದಾನ ಮಾಡುವವನು ಎಲ್ಲ ಪಾಪಗಳಿಂದ ಮುಕ್ತನಾಗಿ ಉತ್ತಮವಾದ ಗತಿಯನ್ನು ಪಡೆಯುತ್ತಾನೆ. ||೮೩-೮೪||

ಕೃಷ್ಣಪಕ್ಷದಲ್ಲಿ ಹದಿನೈದನೆಯ ತಿಥಿಯಾದ ಅಮಾವಾಸ್ಯೆಯಲ್ಲಿಯೂ, ಕೃಷ್ಣಪಕ್ಷದ ಚತುರ್ದಶೀತಿಥಿಯಲ್ಲೂ, ಕೃಷ್ಣಪಕ್ಷದ ಅಷ್ಟಮೀ ತಿಥಿಯಲ್ಲೂ ಶಿವನನ್ನು ಉದ್ದೇಶಮಾಡಿ ಬ್ರಾಹ್ಮಣನಿಗೆ ಭೋಜನವನ್ನು ಕೊಡುವವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಕೃಷ್ಣಾಷ್ಟಮಿಯಲ್ಲಿ ಬ್ರಾಹ್ಮಣ ಭೋಜನಮಾಡಿಸುವುದರಿಂದ ಶಂಕರನನ್ನು ಪಡೆಯುತ್ತಾನೆ. ||೮೫-೮೬-೮೭||

ಅರ್ಕವಾರೇ ತು ಸಾವಿತ್ರೀಂ ಜಪಿತ್ವಾಽಷ್ಟೋತ್ತರಂ ಶತಮ್ ।
ಭೋಜಯಿತ್ವಾ ದ್ವಿಜಶ್ರೇಷ್ಠಂ ಮುಚ್ಯತೇ ಸರ್ವಪಾತಕೈಃ ॥೮೮॥

ಆರ್ದ್ರಾಯಾಂ ರುದ್ರಮುದ್ದಿಶ್ಯ ಭೋಜಯಿತ್ವಾ ದ್ವಿಜೋತ್ತಮಂ ।
ಸರ್ವಪಾಪವಿನಿರ್ಮುಕ್ತಃ ಸರ್ವಜ್ಞಾನಮವಾಪ್ನುಯಾತ್ ॥೮೯॥

ಮಹಾಮಾಘೇ ಮಹಾದೇವಂ ಅಭಿಷಿಚ್ಯ ಘೃತೇನ ತು ।
ಬ್ರಹ್ಮಹತ್ಯಾದಿಭಿಃ ಪಾಪೈಃ ಮುಚ್ಯತೇ ಹಿ ಮಹತ್ತರೈಃ ॥೯೦॥

ಮಾಘಮಾಸಿ ಚತುರ್ದಶ್ಯಾಂ ಕೃಷ್ಣಪಕ್ಷೇ ಮಹೇಶ್ವರಮ್ ।
ಬಿಲ್ವಪತ್ರೇಣ ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೯೧॥

ಉತ್ತರೇ ಫಲ್ಗುನೇ ಮಾಸಿ ಪಲಾಶಕುಸುಮೇನ ಚ ।
ಮಹಾದೇವಂ ಸಮಾರಾಧ್ಯ ಮುಚ್ಯತೇ ಸರ್ವಪಾತಕೈಃ ॥೯೨॥

ವಸಂತಕಾಲೇ ಚಿತ್ರಾಯಾಂ ಸುಗಂಧಕುಸುಮೈರ್ಹರಮ್ ।
ಪೂಜ್ಯ ಪ್ರಾಸಂಗಿಕಾದ್ಯೈಸ್ತು ಮುಚ್ಯತೇ ಪಾತಕೈರ್ನರಃ ॥೯೩॥

ಭಾನುವಾರದಲ್ಲಿ ಸೂರ್ಯದೇವತಾಕವಾದ ಮಂತ್ರವನ್ನು ಒಂದುನೂರೆಂಟು ಸಲ ಜಪಿಸಿ, ಒಳ್ಳೆಯ ಬ್ರಾಹ್ಮಣನನ್ನು ಭೋಜನಮಾಡಿಸಿದರೆ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ಆರ್ದ್ರಾನಕ್ಷತ್ರದ ಸಮಯದಲ್ಲಿ ರುದ್ರನನ್ನು ಉದ್ದೇಶಿಸಿ ಯೋಗ್ಯನಾಗಿರುವ ಬ್ರಾಹ್ಮಣನನ್ನು ಭೋಜನಮಾಡಿಸಿದವನು ಎಲ್ಲ ಪಾಪಗಳಿಂದಲೂ ಮುಕ್ತನಾಗಿ, ಎಲ್ಲ ತಿಳಿವಳಿಕೆಯನ್ನೂ ಪಡೆಯುತ್ತಾನೆ.॥೮೮-೮೯॥

ಮಾಘಮಾಸದ ಪೂರ್ಣಿಮಾ ತಿಥಿಯಲ್ಲಿ ಮಖಾ ನಕ್ಷತ್ರಯೋಗವಿರುವಾಗ ಮಹಾಮಾಘವೆಂದು ಹೆಸರು. ಆಗ ಮಹಾದೇವನನ್ನು ತುಪ್ಪದಿಂದ ಸ್ನಾನ ಮಾಡಿಸಿದರೆ ಬಲವಾದ ಬ್ರಹ್ಮಹತ್ಯಾ ಮುಂತಾದ ಪಾಪಗಳಿಂದ ಮುಕ್ತನಾಗುತ್ತಾನೆ. ಮಾಘಮಾಸದಲ್ಲಿ ಕೃಷ್ಣಚತುರ್ದಶಿಯಲ್ಲಿ ಮಹೇಶ್ವರನನ್ನು ಬಿಲ್ವಪತ್ರದಿಂದ ಪೂಜಿಸಿದವನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ॥೯೦-೯೧॥

ಫಾಲ್ಗುಣಮಾಸದಲ್ಲಿ ಉತ್ತರಾಭಾದ್ರಪದ ನಕ್ಷತ್ರದಲ್ಲಿ ಮುತ್ತುಗದ ಹೂವಿನಿಂದ ಮಹಾದೇವನನ್ನು ಪೂಜಿಸಿದರೂ, ವಸಂತಋತುವಿನಲ್ಲಿ ಚಿತ್ತಾನಕ್ಷತ್ರದಲ್ಲಿ ಆ ಕಾಲದಲ್ಲಿ ದೊರೆಯುವ ಸುವಾಸನೆಯುಳ್ಳ ಹೂವಿನಿಂದ ಹರನನ್ನು ಪೂಜಿಸಿದರೂ,

ಸಕೃದ್ಗಂಗಾಜಲೇ ಸ್ನಾತ್ವಾ ವಾರಾಣಸ್ಯಾಂ ಮಹೇಶ್ವರಮ್ ।
ದೃಷ್ಟ್ವಾ ವಿಶ್ವೇಶ್ವರಾಖ್ಯಂ ತು ಮುಚ್ಯತೇ ಸರ್ವಪಾತಕೈಃ ॥೯೪॥

ಗೋದಾವರ್ಯಾಂ ಸಕೃತ್ಸ್ನಾನಾತ್ ಸಿಂಹಯುಕ್ತೇ ಬೃಹಸ್ಪತೌ ।
ಬ್ರಹ್ಮಹತ್ಯಾದಿಭಿಃ ಪಾಪೈಃ ಮುಚ್ಯತೇ ನಾತ್ರ ಸಂಶಯಃ ॥೯೫॥

ಮಾಘಮಾಸಿ ಮಖರ್ಕ್ಷೇ ತು ಸುವರ್ಣಮುಖರೀಜಲೇ ।
ಸ್ನಾತ್ವಾ ದತ್ವಾ ಮಹಾಪಾಪೈಃ ಮುಚ್ಯತೇ ನಾತ್ರ ಸಂಶಯಃ ॥೯೬॥

ಸ್ನಾತ್ವಾ ತು ಶಿವಗಂಗಾಯಾಂ ಸಾರ್ಪಯುಕ್ತೇಽರ್ಕವಾರಕೇ ।
ಮಹಾಪಾತಕಸಂಘೈಶ್ಚ ಮುಚ್ಯತೇ ನಾತ್ರ ಸಂಶಯಃ ॥೯೭॥

ಸೋಮವಾರೇ ತ್ವಮಾವಾಸ್ಯಾಂ ಸಪ್ತಮ್ಯಾಮರ್ಕವಾಸರೇ ।
ಸಕೃತ್ಸ್ನಾನೇನ ಕಾವೇರ್ಯಾಂ ಮುಚ್ಯತೇ ಸರ್ವಪಾತಕೈಃ ॥೯೮॥

ಸ್ನಾತ್ವಾ ದತ್ವಾ ತು ವಿಪ್ರಾಯ ಗಂಧಮಾದನಪರ್ವತೇ ।
ದೃಷ್ಟ್ವಾ ರಾಮೇಶ್ವರಂ ದೇವಂ ಮುಚ್ಯತೇ ಸರ್ವಪಾತಕೈಃ ॥೯೯॥

ಒಂದಾವೃತ್ತಿ ಗಂಗಾಜಲದಲ್ಲಿ ಸ್ನಾನಮಾಡಿ ಕಾಶೀಕ್ಷೇತ್ರದಲ್ಲಿ ವಿಶ್ವೇಶ್ವರನೆಂದು ಪ್ರಸಿದ್ಧನಾಗಿರುವ ಮಹೇಶ್ವರನನ್ನು ದರ್ಶನಮಾಡಿದರೂ, ಮಾನವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಪಡೆಯುತ್ತಾನೆ. ॥೯೨-೯೩-೯೪॥

ಗುರುಗ್ರಹವು ಸಿಂಹರಾಶಿಯಲ್ಲಿರುವಾಗ ಗೋದಾವರೀನದಿಯಲ್ಲಿ ಒಂದಾವೃತ್ತಿ ಸ್ನಾನಮಾಡುವುದರಿಂದಲೂ, ಮಾಘಮಾಸದಲ್ಲಿ ಮಖಾನಕ್ಷತ್ರದಲ್ಲಿ ಸುವರ್ಣಮುಖರೀನದಿಯ ಜಲದಲ್ಲಿ ಸ್ನಾನಮಾಡುವುದರಿಂದಲೂ, ದಾನಮಾಡುವುದರಿಂದಲೂ, ಶಿವಗಂಗಾಕ್ಷೇತ್ರದ ಕಲ್ಯಾಣಿಯ ತೀರ್ಥದಲ್ಲಿ ಆಶ್ಲೇಷಾನಕ್ಷತ್ರದಿಂದ ಕೂಡಿದ ಭಾನುವಾರದಲ್ಲಿ ಸ್ನಾನಮಾಡುವುದರಿಂದಲೂ, ಮಾನವನು ಮಹಾಪಾಪಗಳ ಗುಂಪಿನಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ॥೯೫-೯೬-೯೭॥

ಅಮಾವಾಸ್ಯೆಯಿಂದ ಕೂಡಿದ ಸೋಮವಾರದಲ್ಲೂ, ಸಪ್ತಮಿಯಿಂದ ಕೂಡಿದ ಭಾನುವಾರದಲ್ಲೂ, ಕಾವೇರೀನದಿಯಲ್ಲಿ ಒಂದಾವೃತ್ತಿ ಸ್ನಾನಮಾಡುವುದರಿಂದಲೂ, ಗಂಧಮಾದನಪರ್ವತದಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿ ಬ್ರಾಹ್ಮಣನಿಗೆ ದಾನಮಾಡಿ,

ಅನ್ನಪಾನಾದಿಭಿರ್ಭಕ್ತ್ಯಾ ಬ್ರಹ್ಮನಿಷ್ಠಂ ಸಮರ್ಚಯೇತ್ ।
ಸರ್ವಪಾಪವಿನಿರ್ಮುಕ್ತಶ್ಶಂಕರಂ ಯಾತಿ ಮಾನವಃ ॥೧೦೦॥

ಶ್ರೀಮದ್ದಭ್ರಸಭಾಮಧ್ಯೇ ನೃತ್ಯಂತಂ ದೇವನಾಯಕಂ ।
ದೃಷ್ಟ್ವಾ ದಿನೇದಿನೇ ಪಾಪೈಃ ಮುಚ್ಯತೇ ದಶಭಿರ್ದಿನೈಃ ॥೧೦೧॥

ಸಂನ್ಯಾಸಶ್ಚಾಪಿ ಪಾಪಾನಾಂ ಪ್ರಾಯಶ್ಚಿತ್ತಂ ಪ್ರಕೀರ್ತಿತಂ ।
ಪಾಪಿಷ್ಠಾನಾಮಯೋಗ್ಯಾನಾಂ ಯೋಗ್ಯಾನಾಂ ಮುಕ್ತಿಸಾಧನಂ ॥೧೦೨॥

ಚತುರ್ವಿಧಸ್ತು ಸಂನ್ಯಾಸಃ ವೃತ್ತಿಭೇದೇನ ಸತ್ತಮಾಃ ।
ಏಕಃ ಕುಟೀಚಕಃ ಪ್ರೋಕ್ತಃ ತಥಾಽನ್ಯಶ್ಚ ಬಹೂದಕಃ ॥೧೦೩॥

ಹಂಸಶ್ಚಾನ್ಯಸ್ತಥೈವಾನ್ಯಃ ಪರಹಂಸಸಮಾಹ್ವಯಃ ।
ಕುಟೀಚಕಾದಪಿ ಶ್ರೇಷ್ಠಃ ಭಿಕ್ಷುಕಶ್ಚ ಬಹೂದಕಃ ॥೧೦೪॥

ಹಂಸೋ ಬಹೂದಕಾತ್ ಶ್ರೇಷ್ಠಃ ಪರಹಂಸಸ್ತಥಾಪರಃ ।
ಪರಹಂಸಾದಪಿ ಶ್ರೇಷ್ಠ ಆಶ್ರಮೋ ನ ಹಿ ಕಶ್ಚನ ॥೧೦೫॥

ರಾಮೇಶ್ವರನನ್ನು ದರ್ಶನಮಾಡುವುದರಿಂದಲೂ ಎಲ್ಲ ಪಾಪಗಳಿಂದ ಆ ಮನುಷ್ಯನು ಮುಕ್ತನಾಗುತ್ತಾನೆ. ಬ್ರಹ್ಮಜ್ಞಾನದಲ್ಲಿ ನೆಲೆಸಿರುವ ಯೋಗಿಯನ್ನು ಅನ್ನಪಾನ ಮುಂತಾದವುಗಳಿಂದ ಭಕ್ತಿಪೂರ್ವಕವಾಗಿ ಸತ್ಕರಿಸಿದವನು ಎಲ್ಲ ಪಾಪಗಳಿಂದಲೂ ಮುಕ್ತನಾಗಿ ಶಂಕರನನ್ನು ಪಡೆಯುತ್ತಾನೆ. ||೯೮-೯೯-೧೦೦||

ಕಾಂತಿಯಿಂದ ಕೂಡಿ ದೇವಸಭೆಯ ಮಧ್ಯದಲ್ಲಿ ಚಿದಂಬರಕ್ಷೇತ್ರದಲ್ಲಿ ನರ್ತನಮಾಡುತ್ತಿರುವ ನಟರಾಜನಾದ ಮಹೇಶ್ವರನನ್ನು ಪ್ರತಿದಿನವೂ ದರ್ಶನ ಮಾಡುವವನು ಹತ್ತು ದಿನಗಳಲ್ಲಿ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ||೧೦೧||

ಅಯೋಗ್ಯರಾದ ಪಾಪಿಗಳೂ ಸಂನ್ಯಾಸಸ್ವೀಕಾರವನ್ನು ಮಾಡಿದರೆ ಅದು ಅವರ ಪಾಪಗಳಿಗೆ ಪ್ರಾಯಶ್ಚಿತ್ತದಂತೆ ನಿವಾರಕವಾಗುತ್ತದೆ. ಯೋಗ್ಯರಾದ ಜನರ ಸಂನ್ಯಾಸಸ್ವೀಕಾರವು ಅವರ ಮೋಕ್ಷಕ್ಕೆ ಸಾಧನವಾಗುತ್ತದೆಂದು ಶಾಸ್ತ್ರದಲ್ಲಿ ಹೇಳಿದೆ. ಸಂನ್ಯಾಸವು ಕುಟೀಚಕ, ಬಹೂದಕ, ಹಂಸ, ಪರಮಹಂಸ-ಎಂದು ನಾಲ್ಕು ಬಗೆಯಾಗಿದೆ. ಈ ಭೇದವು ಅವರ ಧರ್ಮ ಆಚರಣೆಗಳನ್ನು ಅವಲಂಬಿಸಿ ಉಂಟಾಗಿದೆ.

ಕುಟೀಚಕಾಶ್ಚ ಹಂಸಾಶ್ಚ ತಥೈವ ಚ ಬಹೂದಕಾಃ ।
ನಿತ್ಯಾನುಷ್ಠಾನತಶ್ಶುದ್ಧಾಃ ಭವಂತಿ ದ್ವಿಜಪುಂಗವಾಃ ॥೧೦೬॥

ಚಿತ್ತಶುದ್ಧ್ಯಾ ಮುಮುಕ್ಷುತ್ವಂ ಕ್ರಮಾತ್ತೇಷಾಂ ವಿಜಾಯತೇ ।
ಮುಮುಕ್ಷುತ್ವೇ ತು ಸಂಜಾತೇ ಭವೇಯುಃ ಪರಹಂಸಕಾಃ ॥೧೦೭॥

ಪರಹಂಸಸ್ತು ನಿತ್ಯಾಖ್ಯಂ ಕರ್ಮ ತ್ಯಕ್ತ್ವಾ ವಿಧಾನತಃ ।
ಶಮಾದಿಸಾಧನೋ ಭೂತ್ವಾ ವೇದಾಂತಜ್ಞಾನಮಭ್ಯಸೇತ್ ॥೧೦೮॥

ಕುಟೀಚಕಾಖ್ಯಸ್ಸಂನ್ಯಾಸೀ ತಥೈವ ಚ ಬಹೂದಕಃ ।
ಗೋವಾಲರಜ್ಜುಸಂಬದ್ಧಂ ತ್ರಿದಂಡಂ ಚ ಕಮಂಡಲುಮ್ ॥೧೦೯॥

ಪಾತ್ರಂ ಜಲಂ ಪವಿತ್ರಂ ಚ ತಥಾ ಕಾಷಾಯಮೇವ ಚ ।
ಶಿಖಾಂ ಯಜ್ಞೋಪವೀತಂ ಚ ಪವಿತ್ರಂ ಚೈವ ಧಾರಯೇತ್ ॥೧೧೦॥

ಪವಿತ್ರಜಲಪಾತ್ರಂ ಚ ಪವಿತ್ರಂ ಚ ತಥೈವ ಚ ।
ಕುಂಡಿಕಾಂ ಚೋಪವೀತಂ ಚ ಹಂಸಸ್ಯಾಪಿ ಸಮಂ ದ್ವಿಜಾಃ ॥೧೧೧॥

ಕುಟೀಚಕನಿಗಿಂತ ಬಹೂದಕನೆಂಬ ಸಂನ್ಯಾಸಿಯೂ, ಬಹೂದಕನಿಗಿಂತ ಹಂಸನೂ, ಅವನಿಗಿಂತ ಪರಹಂಸನೂ ಶ್ರೇಷ್ಠರು. ಓ ಸತ್ಪುರುಷಶ್ರೇಷ್ಠರಾ, ಪರಹಂಸಸಂನ್ಯಾಸಕ್ಕಿಂತ ಉತ್ತಮವಾದ ಇನ್ನೊಂದು ಆಶ್ರಮವಿಲ್ಲವು. ||೧೦೨-೧೦೩-೧೦೪-೧೦೫||

ಈ ಕುಟೀಚಕ, ಬಹೂದಕ, ಹಂಸರೆಂಬ ಸಂನ್ಯಾಸಿಗಳು ನಿತ್ಯಕರ್ಮಾಚರಣೆಯಿಂದ ಶುದ್ಧರಾಗುತ್ತಾರೆ. ಈ ಚಿತ್ತಶುದ್ಧಿಯಿಂದ ಅವರಿಗೆ ಕ್ರಮವಾಗಿ ಮೋಕ್ಷೇಚ್ಛೆಯು ಉಂಟಾಗುತ್ತದೆ. ಅದು ಉಂಟಾದವರೇ ಪರಹಂಸರೆನ್ನಿಸಿಕೊಳ್ಳುತ್ತಾರೆ. ಪರಹಂಸನಾದವನು ನಿತ್ಯಕರ್ಮಗಳನ್ನು ಶಾಸ್ತ್ರಾನುಸಾರವಾದ ರೀತಿಯಿಂದ ಬಿಟ್ಟು ಶಮದಮ ಮುಂತಾದ ಸಾಧನಸಂಪತ್ತನ್ನು ಪಡೆದು ವೇದಾಂತಗಳಾದ ಉಪನಿಷತ್ತುಗಳಿಂದ ಉಂಟಾಗುವ ತಿಳಿವಳಿಕೆಯನ್ನು ಮನನ ನಿದಿಧ್ಯಾಸನಗಳಿಂದ ಬಲಪಡಿಸಿಕೊಳ್ಳಬೇಕು. ||೧೦೬-೧೦೭-೧೦೮||

ಕುಟೀಚಕ ಬಹೂದಕರು, ಗೋವಿನ ಬಾಲದಿಂದ ನಿರ್ಮಿತವಾದ ಹಗ್ಗದಿಂದ ಕಟ್ಟಲ್ಪಟ್ಟ ತ್ರಿದಂಡವನ್ನೂ, ಕಮಂಡಲು ಪಾತ್ರೆಯನ್ನೂ, ಪಾವನವಾದ ತೀರ್ಥಜಲವನ್ನೂ, ಕಾವೀಬಟ್ಟೆಯನ್ನೂ, ಶಿಖೆಯನ್ನೂ, ಪಾವನವಾದ ಯಜ್ಞೋಪವೀತ

ಹಂಸಃ ಪರಮಹಂಸಶ್ಚ ಸತ್ವ ಚಂ ಸೌಮ್ಯಮವ್ರಣಮ್ ।
ಏಕಂ ತು ವೈಣವಂ ದಂಡಂ ಕಾಷಾಯಂ ಚೈವ ಧಾರಯೇತ್ ॥೧೧೨॥

ಪರಹಂಸಸ್ಯ ಹಂಸಸ್ಯ ಸಮಾನಂ ಮೌಂಡ್ಯಮಾಸ್ತಿಕಾಃ ।
ಸ್ನಾನಂ ಶೌಚಂ ಶಿವಧ್ಯಾನಂ ಶಿವಾರ್ಚಾ ಭಸ್ಮಗುಂಠನಮ್ ॥೧೧೩॥

ತ್ರಿಪುಂಡ್ರಧಾರಣಂ ಶಾಂತಿರ್ದಾಂತಿಃ ಕ್ರೋಧಾದಿವರ್ಜನಮ್ ।
ಚಾತುರ್ಮಾಸ್ಯಂ ಚ ಸರ್ವೇಷಾಂ ಸಮಾನಂ ಪರಿಕೀರ್ತಿತಮ್ ॥೧೧೪॥

ಪಾಪಿಷ್ಠಃ ಕರ್ಮಸಂನ್ಯಾಸಂ ಕೃತ್ವಾ ಶಾಸ್ತ್ರೋಕ್ತವರ್ತ್ಮನಾ ।
ಪ್ರಾಣತ್ಯಾಗಂ ತತಃ ಕುರ್ಯಾತ್ ಪಾಪಾನಾಂ ಚ ವಿಶುದ್ಧಯೇ ॥೧೧೫॥

ಯೋಗ್ಯಸ್ಸಂನ್ಯಾಸಮಾಪನ್ನಃ ಪ್ರಾಣತ್ಯಾಗಂ ಕದಾಚನ ।
ನ ಕುರ್ಯಾನ್ಮೋಹತೋ ವಾಽಪಿ ಜ್ಞಾನಮೇವ ಸದಾಽಭ್ಯಸೇತ್ ॥೧೧೬॥

ವನ್ನೂ, ದರ್ಭೆಯ ಪವಿತ್ರವನ್ನೂ ಧರಿಸಿರಬೇಕು. ಹಂಸನೆಂಬ ಸಂನ್ಯಾಸಿಗೆ ಪಾವನವಾದ ಕಮಂಡಲು, ತೀರ್ಥಜಲ, ಯಜ್ಞೋಪವೀತ, ದರ್ಭೆಯಪವಿತ್ರ, ಇವು ಮಾತ್ರ ಸಮಾನವಾಗಿರುತ್ತವೆ. ||೧೦೯-೧೧೦-೧೧೧||

ಹಂಸನೂ ಪರಹಂಸನೂ ಬೆನ್ನುಶಿಪ್ಪೆಯುಳ್ಳ, ನೋಡಲು ಚನ್ನಾಗಿರುವ, ಮಧ್ಯದಲ್ಲಿ ಶೀಳಿರದೆ ಕೆತ್ತಿಹೋಗದೆ ಇರುವ, ಒಂದು ಬಿದಿರುದಂಡವನ್ನೂ ಕಾವೀಬಟ್ಟೆಯನ್ನೂ ಧರಿಸಬೇಕು. ||೧೧೨||

ಪರಹಂಸನಿಗೂ ಹಂಸನಿಗೂ ತಲೆಗೆ ಕ್ಷೌರವೂ, ಸ್ನಾನ, ಶೌಚ, ಶಿವನ ಧ್ಯಾನ, ಶಿವನ ಪೂಜೆ, ಭಸ್ಮದಿಂದ ಲೇಪನ, ತ್ರಿಪುಂಡ್ರಧಾರಣವೂ, ಶಮದಮಾದಿ ಗುಣಗಳು, ಕ್ರೋಧ, ಕಾಮ–ಮುಂತಾದ ದೋಷಗಳ ಬಿಡುವಿಕೆ, ಆಷಾಢ ಕೃಷ್ಣ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕಶುಕ್ಲ–ಎಂಬ ನಾಲ್ಕು ತಿಂಗಳುಗಳಲ್ಲಿ ವ್ರತಾಚರಣೆ, ಇವುಗಳು ಸಮಾನ ಧರ್ಮಗಳೆಂದು ಧರ್ಮಶಾಸ್ತ್ರಗಳಲ್ಲಿ ಹೇಳಿದೆ. ||೧೧೩-೧೧೪||

ಪಾಪಿಯಾದವನು ಶಾಸ್ತ್ರೋಕವಾದ ರೀತಿಯಿಂದ ಕರ್ಮಸನ್ಯಾಸವನ್ನು ಮಾಡಿ ಆಮೇಲೆ ಪಾಪಗಳ ನಾಶಕ್ಕಾಗಿ ಪ್ರಾಣತ್ಯಾಗವನ್ನು ಮಾಡಬೇಕು.

ಸಂನ್ಯಾಸೇನ ಸಮಂ ನಾಸ್ತಿ ಪ್ರಾಯಶ್ಚಿತ್ತಂ ದ್ವಿಜರ್ಷಭಾಃ ।
ಅತಃ ಪಾಪನಿವೃತ್ತ್ಯರ್ಥಂ ಸಂನ್ಯಸೇತ್ ಪರಿತಾಪಿತಃ ॥೧೧೭॥

ರಹಸ್ಯಾನಾಂ ಚ ಸಂನ್ಯಾಸಃ ಪ್ರಾಯಶ್ಚಿತ್ತಂ ಯಥೈನಸಾಂ ।
ಪ್ರಸಿದ್ಧಾನಾಂ ಚ ಪಾಪಾನಾಂ ಪ್ರಾಯಶ್ಚಿತ್ತಮಿದಂ ತಥಾ ॥೧೧೮॥

ಶಿವಜ್ಞಾನಂ ಶಿವಧ್ಯಾನಂ ಶಿವಶಬ್ದ ಜಪಸ್ತಥಾ ।
ಅಗ್ನಿರಿತ್ಯಾದಿಭಿರ್ಮಂತ್ರೈಃ ಭಸ್ಮನಾ ಚಾವಗುಂಠನಮ್ ॥೧೧೯॥

ರುದ್ರಾಕ್ಷಧಾರಣಂ ಭಕ್ತ್ಯಾ ತ್ರಿಪುಂಡ್ರಸ್ಯ ಚ ಧಾರಣಮ್ ।
ಸಂನ್ಯಾಸಶ್ಚೈವ ಪಾಪಾನಾಂ ಪ್ರಾಯಶ್ಚಿತ್ತಂ ಮಹತ್ತರಮ್ ॥೧೨೦॥

ಯೋಗ್ಯನಾದವನು, ಪಾಪರಹಿತನಾದವನು, ಸಂನ್ಯಾಸವನ್ನು ಸ್ವೀಕರಿಸಿದವನಾಗಿ ಯಾವಾಗಲಾದರೂ ಪ್ರಮಾದವಶದಿಂದಲೂ ಅಜ್ಞಾನದಿಂದಲಾದರೂ ಪ್ರಾಣತ್ಯಾಗವನ್ನು ಮಾಡಬಾರದು. ಆದರೆ ಸರ್ವದಾ ವೇದಾಂತಜ್ಞಾನವನ್ನು ಮನನನಿದಿಧ್ಯಾಸನಗಳಿಂದ ಬಲಪಡಿಸಿಕೊಳ್ಳುತ್ತಿರಬೇಕು. ||೧೧೫-೧೧೬||

ಓ ಬ್ರಾಹ್ಮಣಶ್ರೇಷ್ಠರಾ, ಸಂನ್ಯಾಸಕ್ಕೆ ಸಮವಾದ ಪ್ರಾಯಶ್ಚಿತ್ತವಿಲ್ಲವು. ಆದುದರಿಂದ ಪಾಪಗಳ ನಿವಾರಣೆಗೋಸ್ಕರ ಮಾನವನು ಪಶ್ಚಾತ್ತಾಪವುಳ್ಳವನಾಗಿ ಸಂನ್ಯಾಸಧರ್ಮವನ್ನು ಆಚರಿಸಬೇಕು. ಗುಟ್ಟಾಗಿ ಮಾಡಿದ ಪಾಪಗಳಿಗೆ ಸಂನ್ಯಾಸವು ಹೇಗೆ ಪ್ರಾಯಶ್ಚಿತ್ತವೋ ಹಾಗೆ ಪ್ರಕಟವಾಗಿ ಮಾಡಿದ ಪಾಪಗಳಿಗೂ ಸಂನ್ಯಾಸವೇ ಪ್ರಾಯಶ್ಚಿತ್ತವು. ||೧೧೭-೧೧೮||

ಶಿವನ ಜ್ಞಾನವೂ, ಧ್ಯಾನವೂ, ಶಿವಶಬ್ದದ ಜಪವೂ, 'ಅಗ್ನಿರಿತಿ ಭಸ್ಮ' ಎಂದು ಮುಂತಾದ ಮಂತ್ರಗಳಿಂದ ಭಸ್ಮದಿಂದ ಮೈಗೆ ಉದ್ಧೂಳನಮಾಡಿಕೊಳ್ಳುವಿಕೆಯೂ, ರುದ್ರಾಕ್ಷವನ್ನು ಧರಿಸುವಿಕೆಯೂ, ಭಕ್ತಿಯಿಂದ ತ್ರಿಪುಂಡ್ರಧಾರಣವೂ, ಸಂನ್ಯಾಸವೂ ಇವೆಲ್ಲವೂ ಪಾಪಿಗಳಿಗೆ ಉತ್ತಮವಾದ ಪ್ರಾಯಶ್ಚಿತ್ತದಂತೆ ಇವೆ. ||೧೧೯-೧೨೦||

ಸರ್ವವೇದರಹಸ್ಯಮಿದಂ ಮಯಾ
ಕೇವಲಂ ತು ಕೃಪಯೈವ ಸಮೀರಿತಮ್ ।
ಪ್ರಾಹ ಕಾರುಣಿಕಸ್ಸಕಲಾರ್ಥವಿತ್
ದೇಶಿಕಪ್ರವರ ಏವ ಪರಸ್ತು ಮೇ ॥೧೨೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಪ್ರಾಯಶ್ಚಿತ್ತವಿಚಾರೋ ನಾಮ ದ್ವಿಚತ್ವಾರಿಂಶೋಽಧ್ಯಾಯಃ

ಎಲ್ಲ ವೇದಗಳ ರಹಸ್ಯಾರ್ಥವಾದ ಈ ವಿಷಯವನ್ನು ನಾನು ಕೇವಲ ದಯೆಯಿಂದ ಹೇಳಿದೇನೆ. ಎಲ್ಲವನ್ನೂ ಬಲ್ಲ, ಗುರುಗಳಲ್ಲಿ ಶ್ರೇಷ್ಠನಾದ, ಪರಶಿವನೇ, ಕರುಣಾಳುವಾಗಿ ಇದನ್ನು ನನಗೆ ಉಪದೇಶಮಾಡಿದನು. ॥೧೨೧॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಪ್ರಾಯಶ್ಚಿತ್ತಗಳ ಸ್ವರೂಪ, ಫಲ ಇವನ್ನು ತಿಳಿಸುವ,
ನಲವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

॥ ತ್ರಿಚತ್ವಾರಿಂಶೋಽಧ್ಯಾಯಃ ॥

ನಲವತ್ತುಮೂರನೆಯ ಅಧ್ಯಾಯವು

(ಪಾಪಶುದ್ಧ್ಯುಪಾಯಕಥನಮ್)

॥ ಓಂ ಸೂತ ಉವಾಚ ॥

ಭೂಯೋಽಪಿ ಪಾಪಶುದ್ಧ್ಯರ್ಥಮುಪಾಯಂ ಪ್ರವದಾಮ್ಯಹಂ ।
ಮಹತ್ಯಾ ಶ್ರದ್ಧಯಾ ಯುಕ್ತಾಃ ಶೃಣುತ ಬ್ರಹ್ಮವಿತ್ತಮಾಃ ॥೧॥

ನಿರ್ಮಿತಾನಿ ಶಿವೇನೈವ ಭೂಮೌ ಸ್ಥಾನಾನಿ ದೇಹಿನಾಂ ।
ಸರ್ವಪಾಪವಿಶುದ್ಧ್ಯರ್ಥಂ ತಾನಿ ವಕ್ಷ್ಯಾಮ್ಯಶೇಷತಃ ॥೨॥

ಹಿಂದಿನ ಅಧ್ಯಾಯದಲ್ಲಿ ವೇದದಲ್ಲಿ ಅಧಿಕಾರವುಳ್ಳವರಿಗೆ ಪ್ರಾಯಶ್ಚಿತ್ತವು ಹೇಳಲ್ಪಟ್ಟಿತು. ಈಗ ಸರ್ವಸಾಧಾರಣವಾಗಿ ಶಕ್ತಿಸಹಿತನಾದ ಶಿವನ ಪೂಜೆಯಿಂದ ಪಾಪನಿವೃತ್ತಿಯನ್ನು ಹೇಳುವುದಕ್ಕಾಗಿ ಈ ಅಧ್ಯಾಯವು ಆರಂಭಿಸಲ್ಪಡುತ್ತದೆ. ॥೧॥

ಭೂಮಿಯಲ್ಲಿ ಶಿವನೇ ಪ್ರಾಣಿಗಳ ಎಲ್ಲಾ ಪಾಪಗಳ ಪರಿಹಾರಕ್ಕಾಗಿ ಅನೇಕ ಕ್ಷೇತ್ರತೀರ್ಥಗಳ ಸ್ಥಳಗಳನ್ನು ನಿರ್ಮಾಣಮಾಡಿದ್ದಾನೆ. ಹೀಗೆ ನಿರ್ಮಿಸಿರುವ ಪಾಪ ಪರಿಹಾರಕವಾದ ಸ್ಥಳಗಳು ಯಾವುವು ಎಂಬುದನ್ನು ಸಂಪೂರ್ಣವಾಗಿ ಹೇಳುತ್ತೇನೆ. ॥೨॥

ಅಮರೇಶಮಿತಿ ಪ್ರೋಕ್ತಂ ಸ್ಥಾನಂ ಸರ್ವಾರ್ಥಸಾಧಕಂ ।
ಓಂಕಾರಸಂಜ್ಞಃ ತತ್ರೇಶಃ ಚಂಡಿಕಾಽಽಖ್ಯಾ ಮಹೇಶ್ವರೀ ॥೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೪॥

ಪ್ರಭಾಸಾಖ್ಯಂ ಮಹಾಸ್ಥಾನಮಸ್ತಿ ಭೂಮಿತಲೇ ದ್ವಿಜಾಃ ।
ಸೋಮನಾಥಶ್ಶಿವಸ್ತತ್ರ ಶಿವಾ ಸಾ ಪುಷ್ಕರೇಕ್ಷಣಾ ॥೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೬॥

ನೈಮಿಶಾಖ್ಯಂ ಮಹಾಸ್ಥಾನಮಸ್ತಿ ತತ್ರ ಮಹೇಶ್ವರಃ ।
ದೇವದೇವಾಭಿಧಃ ಪ್ರಾಜ್ಞಾ ದೇವೀ ಸಾ ಲಿಂಗರೂಪಿಣೀ ॥೭॥

ತತ್ರ ದೇವೀಂ ಚ ದೇವಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೮॥

ಅಮರೇಶವೆಂಬುದಾಗಿ ಶಿವನಿಂದ ನಿರ್ಮಿಸಲ್ಪಟ್ಟ ಎಲ್ಲಾ ಇಷ್ಟಾರ್ಥವನ್ನೂ ಕೊಡುವ ಕ್ಷೇತ್ರ ಸ್ಥಳದಲ್ಲಿ ಶಿವನು ಓಂಕಾರೇಶ್ವರನೆಂಬ ಹೆಸರಿನಿಂದಲೂ ದೇವಿಯು ಚಂಡಿಕೇಶ್ವರೀ ಎಂಬ ಹೆಸರಿನಿಂದಲೂ, ವಾಸಮಾಡುತ್ತಿದ್ದಾರೆ. ಹೀಗೆ ವಾಸಿಸುತ್ತಿರುವ ಪಾರ್ವತೀಪರಮೇಶ್ವರರನ್ನು ಆಯಾಯ ಹೆಸರಿನಿಂದ ಪೂಜೆಮಾಡಿದರೆ, ಪೂಜೆ ಮಾಡಿದವನು ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ||೩-೪||

ಎಲೈ ಬ್ರಾಹ್ಮಣರೇ, ಪ್ರಭಾಸವೆಂಬ ಒಂದು ಉತ್ತಮವಾದ ಕ್ಷೇತ್ರಸ್ಥಳವಿದೆ, ಅಲ್ಲಿ ಶಿವನು ಸೋಮನಾಥನೆಂಬ ಹೆಸರಿನಿಂದಲೂ, ಪಾರ್ವತಿಯು ಪುಷ್ಕರೇಕ್ಷಣಾ ಎಂಬ ಹೆಸರಿನಿಂದಲೂ, ಸನ್ನಿಹಿತರಾಗಿ ವಾಸಿಸುತ್ತಾರೆ. ಅವರನ್ನು ಆಯಾಯ ಹೆಸರಿನಿಂದ, ಬಹಳ ಭಕ್ತಿಯಿಂದ ಕೂಡಿ ಪೂಜಿಸಿದ್ದಾದರೆ, ಅವನು ಸಕಲಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ||೫-೬||

ನೈಮಿಶವೆಂಬ ಉತ್ತಮವಾದ ಪವಿತ್ರಸ್ಥಳದಲ್ಲಿರುವ ದೇವದೇವನನ್ನೂ ಲಿಂಗರೂಪದಿಂದಿರುವ ಪಾರ್ವತಿಯನ್ನೂ ಯಾರು ಭಕ್ತಿಯಿಂದ ಆಯಾ ನಾಮಗಳಿಂದಲೂ ಪೂಜೆಮಾಡುತ್ತಾರೋ ಅವರು ಪಾಪವಿಲ್ಲದವರಾಗುತ್ತಾರೆ. ||೭-೮||

ಪುಷ್ಕರಾಖ್ಯಂ ಮಹಾಸ್ಥಾನಮನ್ಯದಸ್ತಿ ಮಹೀತಲೇ ।
ರಜೋಗಂಧಿರ್ಮಹಾದೇವಃ ಪುರುಹೂತಾ ಮಹೇಶ್ವರೀ ॥೯॥

ತತ್ರಂ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೧೦॥

ಆಷಾಢಿರ್ನಾಮ ವಿಪ್ರೇಂದ್ರಾಃ ಸ್ಥಾನಮಸ್ತಿ ಮಹೀತಲೇ ।
ಆಷಾಢೀಶೋ ಹರಸ್ತತ್ರ ರತಿಸ್ಸಾ ಪರಮೇಶ್ವರೀ ॥೧೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೧೨॥

ದಂಡೀ(ಚಂಡ)ಮುಂಡೀ ಸಮಾಖ್ಯಂ ತು ಸ್ಥಾನಮನ್ಯನ್ಮಹತ್ತರಮ್ ।
ದಂಡೀ ತತ್ರ ಮಹಾದೇವೋ ದಂಡಿನೀ ಪರಮೇಶ್ವರೀ ॥೧೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೧೪॥

ಭಾರಭೂತಿರಿತಿ ಖ್ಯಾತಮಸ್ತಿ ಸ್ಥಾನಂ ಮಹತ್ತರಮ್ ।
ಭಾರಭೂತಿರ್ಮಹಾದೇವೋ ಭೂತಿಸ್ಸಾ ಪರಮೇಶ್ವರೀ ॥೧೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೧೬॥

ಭೂಲೋಕದಲ್ಲಿ ಪುಷ್ಕರವೆಂಬ ಶ್ರೇಷ್ಠಸ್ಥಳದಲ್ಲಿರುವ ರಜೋಗಂಧಿ ಎಂಬ ಮಹೇಶ್ವರನನ್ನೂ, ಪುರುಹೂತಾ ಎಂಬ ಪಾರ್ವತಿಯನ್ನೂ, ಆಷಾಢಿ ಎಂಬ ಕ್ಷೇತ್ರ ಸ್ಥಳದಲ್ಲಿರುವ, ಆಷಾಢೀಶನನ್ನೂ, ರತಿಯನ್ನೂ, ದಂಡಿಮುಂಡಿ ಎಂಬ ಸ್ಥಳದಲ್ಲಿರುವ, ದಂಡೀಶ್ವರನನ್ನೂ ದಂಡಿನೀದೇವಿಯನ್ನೂ ಯಾರು ಆಯಾ ನಾಮಗಳಿಂದ ಭಕ್ತಿಯಿಂದ ಪೂಜಿಸುತ್ತಾರೋ ಅವರು ಪಾಪವಿಲ್ಲದವರಾಗುತ್ತಾರೆ. ||೯-೧೦-೧೧-೧೨-೧೩-೧೪||

ಬಹಳ ಶ್ರೇಷ್ಠವಾದ, ಭಾರಭೂತಿ ಎಂಬ ಸ್ಥಳದಲ್ಲಿರುವ ಭಾರಭೂತೀಶ್ವರನನ್ನೂ ಭೂತಿದೇವಿಯನ್ನೂ, ನಾಕುಲವೆಂಬ ಪರಿಶುದ್ಧಕ್ಷೇತ್ರದಲ್ಲಿರುವ, ನಾಕುಲೇಶ್ವರ

ನಾಕುಲಂ ನಾಮ ಸಂಶುದ್ಧಮಸ್ತಿ ಸ್ಥಾನಂ ಮಹೀತಲೇ ।
ನಾಕುಲೇಶೋ ಹರಸ್ತತ್ರ ನಕುಲಾ ಸಾ ಪ್ರಕೀರ್ತಿತಾ ॥೧೭॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೧೮॥

ಹರಿಶ್ಚಂದ್ರಸಮಾಖ್ಯಂ ಚ ಸ್ಥಾನಮಸ್ತಿ ಮಹೀತಲೇ ।
ಹರಾಖ್ಯಶ್ಶಂಕರಸ್ತತ್ರ ಚಂಡಿಕಾಽಽಖ್ಯಾ ಮಹೇಶ್ವರೀ ॥೧೯॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೦॥

ಶ್ರೀಪರ್ವತಸಮಾಖ್ಯಂ ಚ ಸ್ಥಾನಮಸ್ತಿ ಮಹತ್ತರಮ್ ।
ಮಾಯಾವೀ ಶಂಕರೀ ತತ್ರ ಶಂಕರಸ್ತ್ರಿಪುರಾಂತಕಃ ॥೨೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೨॥

ಜಪ್ಯೇಶ್ವರಮಿತಿ ಖ್ಯಾತಂ ಸ್ಥಾನಮಸ್ತಿ ಮಹತ್ತರಮ್ ।
ತ್ರಿಶೂಲಾ ಶಂಕರೀ ತತ್ರ ತ್ರಿಶೂಲೀ ಪರಮೇಶ್ವರಃ ॥೨೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೪॥

ನನ್ನೂ, ನಕುಲಾದೇವಿಯನ್ನೂ ಯಾರು ಭಕ್ತಿಯಿಂದ ಆಯಾ ನಾಮಗಳಿಂದ ಪೂಜಿಸುತ್ತಾರೋ ಅವರಿಗೆ ಪಾಪವೆಲ್ಲವೂ ಹೋಗುವುದು. ॥೧೫-೧೬-೧೭-೧೮॥

ಹರಿಶ್ಚಂದ್ರವೆಂಬ ಕ್ಷೇತ್ರದಲ್ಲಿ ವಾಸಮಾಡುವ ಹರೇಶ್ವರನನ್ನು ಚಂಡಿಕಾದೇವಿಯನ್ನೂ, ಶ್ರೀಪರ್ವತಕ್ಷೇತ್ರದಲ್ಲಿರುವ ತ್ರಿಪುರಾಂತಕೇಶ್ವರನನ್ನೂ ಮಾಯಾವೀ ದೇವಿಯನ್ನೂ ಯಾರು ಭಕ್ತಿಯಿಂದ ಆಯಾ ನಾಮಗಳಿಂದ ಪೂಜಿಸುತ್ತಾರೋ ಅವರು ಪಾಪದಿಂದ ಬಿಡಲ್ಪಡುತ್ತಾರೆ. ॥೧೯-೨೦-೨೧-೨೨॥

ಜಪ್ಯೇಶ್ವರವೆಂಬ ಸ್ಥಳದಲ್ಲಿರುವ ತ್ರಿಶೂಲೀಶ್ವರನನ್ನೂ ತ್ರಿಶೂಲಾದೇವಿಯನ್ನೂ ಆಮ್ರಾತಕೇಶ್ವರದಲ್ಲಿರುವ, ಸೂಕ್ಷ್ಮೇಶ್ವರನನ್ನೂ ಸೂಕ್ಷ್ಮಾದೇವಿಯನ್ನೂ,

ಆಮ್ರಾತಕೇಶ್ವರಂ ನಾಮ ಸ್ಥಾನಮನ್ಯತ್ಸುಶೋಭನಮ್ ।
ತತ್ರ ಸೂಕ್ಷ್ಮಾಭಿಧೋ ರುದ್ರಸ್ಸೂಕ್ಷ್ಮಾಖ್ಯಾ ಪರಮೇಶ್ವರೀ ॥೨೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾತ್ವಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೬॥

ಮಹಾಕಾಳಮಿತಿ ಪ್ರೋಕ್ತಮನ್ಯದಸ್ತಿ ಮಹತ್ತರಮ್ ।
ಮಹಾಕಾಳೋ ಹರಸ್ತತ್ರ ಶಂಕರೀ ಚ ಮಹೇಶ್ವರೀ ॥೨೭॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾತ್ವಾತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೮॥

ಮಧ್ಯಮಾಖ್ಯಂ ಮಹಾಸ್ಥಾನಮಸ್ತಿ ಮಾಯಾವಿಷಾಪಹಮ್ ।
ತತ್ರ ಶರ್ವಶ್ಶಿವಸ್ಸಾಕ್ಷಾಚ್ಛರ್ವಾಣೀ ಪರಮೇಶ್ವರೀ ॥೨೯॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತಸ್ನಾತ್ವಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೦॥

ಕೇದಾರಾಖ್ಯಂ ಮಹಾಸ್ಥಾನಮಸ್ತಿ ಭೂಮಿತಲೇ ಶುಭಮ್ ।
ಈಶಾನಾಖ್ಯೋ ಹರಸ್ತತ್ರ ದೇವೀ ಸಾ ಮಾರ್ಗದಾಯಿನೀ ॥೩೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾತ್ವಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೨॥

ಭೈರವಾಖ್ಯಂ ಮಹಾಸ್ಥಾನಂ ಭವರೋಗಸ್ಯ ಭೇಷಜಮ್ ।
ಭೈರವಶ್ಶಂಕರಸ್ತತ್ರ ಭೈರವೀ ಪರಮೇಶ್ವರೀ ॥೩೩॥

ಮಹಾಕಾಳವೆಂಬ ಉತ್ತಮಕ್ಷೇತ್ರದಲ್ಲಿರುವ ಮಹಾಕಾಳೇಶ್ವರನನ್ನೂ ಶಂಕರೀದೇವಿಯನ್ನೂ, ಅಜ್ಞಾನವೆಂಬ ವಿಷವನ್ನು ನಾಶಮಾಡುವ, ಮಧ್ಯಮವೆಂಬ ಕ್ಷೇತ್ರದಲ್ಲಿ ವಾಸಿಸುತ್ತಿರುವ ಸರ್ವೇಶ್ವರನನ್ನೂ ಶರ್ವಾಣೀದೇವಿಯನ್ನೂ ಪೂಜಿಸಿದವರ ಪಾಪವೆಲ್ಲವೂ ನಾಶವಾಗುವುದು. ॥೨೩-೨೪-೨೫-೨೬-೨೭-೨೮-೨೯-೩೦॥

ಕೇದಾರಕ್ಷೇತ್ರದಲ್ಲಿ ವಾಸಮಾಡುವ ಈಶಾನೇಶ್ವರನನ್ನೂ ಮಾರ್ಗದಾಯಿನೀ ದೇವಿಯನ್ನೂ, ಭೈರವವೆಂಬ ಸಂಸಾರದುಃಖನಾಶಕವಾದ ಕ್ಷೇತ್ರದಲ್ಲಿರುವ ಭೈರ

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೪॥

ಗಯಾ ನಾಮ ಮಹಾಕ್ಷೇತ್ರಮಸ್ತಿ ಭೂಮಿತಲೇ ಶುಭಂ ।
ಮಂಗಳಾಖ್ಯಾ ಮಹಾದೇವೀ ಶಂಕರಃ ಪ್ರಪಿತಾಮಹಃ ॥೩೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೬॥

ಕುರುಕ್ಷೇತ್ರಮಿತಿ ಖ್ಯಾತಮಸ್ತಿ ಕ್ಷೇತ್ರಂ ಮಹೀತಲೇ ।
ಶಿವಾ ಸ್ಥಾಣುಪ್ರಿಯಾ ತತ್ರ ಶಿವಃ ಸ್ಥಾಣುಸಮಾಹ್ವಯಃ ॥೩೭॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೮॥

ಸ್ಥಾಲೀಕಾಖ್ಯಂ ಮಹಾಸ್ಥಾನಮಸ್ತಿ ಸರ್ವಾರ್ಥಸಾಧಕಮ್ ।
ಸ್ವಯಂಭೂಸ್ತತ್ರ ದೇವೇಶಶ್ಶಿವಾ ಸ್ವಾಯಂಭುವೀ ಮತಾ ॥೩೯॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೪೦॥

ವಿಮಲೇಶ್ವರಮಿತ್ಯುಕ್ತಮನ್ಯದಸ್ತಿ ಮಹೀತಲೇ ।
ವಿಶ್ವಸ್ತತ್ರ ಮಹಾದೇವೋ ವಿಶ್ವಾಸಾ (ವಿಶ್ವೇಶಾ) ಪರಮೇಶ್ವರೀ ॥೪೧॥

ವೇಶ್ವರನನ್ನೂ ಭೈರವೀದೇವಿಯನ್ನೂ, ಗಯೆ ಎಂಬ ಶ್ರೇಷ್ಠವಾದ ಕ್ಷೇತ್ರದಲ್ಲಿ ವಾಸ ಮಾಡುವ ಪ್ರಪಿತಾಮಹೇಶ್ವರನನ್ನೂ ಮಂಗಳಾದೇವಿಯನ್ನೂ, ಕುರುಕ್ಷೇತ್ರವೆಂಬ ಪ್ರಸಿದ್ಧವಾದ ಕ್ಷೇತ್ರದಲ್ಲಿ ವಾಸಮಾಡುತ್ತಿರುವ ಸ್ಥಾಣ್ವೀಶ್ವರನನ್ನೂ ಸ್ಥಾಣುಪ್ರಿಯಾ ದೇವಿಯನ್ನೂ ಯಾರು ಭಕ್ತಿಯಿಂದ ಆಯಾ ನಾಮಗಳಿಂದ ಪೂಜಿಸುತ್ತಾರೋ ಅವರಿಗೆ ಪಾಪವು ಎಲ್ಲವೂ ನಾಶವಾಗುವುದು. ||೩೧-೩೨-೩೩-೩೪-೩೫-೩೬-೩೭-೩೮||

ಸಕಲ ಇಷ್ಟಾರ್ಥವನ್ನೂ ಕೊಡುವ ಸ್ಥಾಲೀಕಕ್ಷೇತ್ರದಲ್ಲಿರುವ ಸ್ವಯಂಭ್ವೀಶ್ವರನನ್ನೂ ಸ್ವಾಯಂಭುವೀದೇವಿಯನ್ನೂ, ವಿಮಲೇಶ್ವರದಲ್ಲಿರುವ ವಿಶ್ವೇಶ್ವರನನ್ನೂ

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೪೨॥

ಅನ್ಯತ್ಕನಖಲಂ ನಾಮ ಸ್ಥಾನಮಸ್ತಿ ಮಹತ್ತರಮ್ ।
ಉಗ್ರಸ್ತತ್ರ ಮಹಾದೇವಶ್ಶಿವೋಗ್ರಾ ಮುನಿಪುಂಗವಾಃ ॥೪೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೪೪॥

ಅಟ್ಟಹಾಸಮಿತಿ ಪ್ರೋಕ್ತಮನ್ಯದಸ್ತಿ ಮಹತ್ತರಮ್ ।
ಮಹಾನಂದೋ ಹರಸ್ತತ್ರ ಮಹಾನಂದಾ ಮಹೇಶ್ವರೀ ॥೪೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೪೬॥

ಮಹೇಂದ್ರಮಿತಿ ವಿಖ್ಯಾತಮನ್ಯದಸ್ತಿ ಮಹೀತಲೇ ।
ಹರೋ ಮಹಾಂತಕಸ್ತತ್ರ ನಿವಾಸಾ ತು ಮಹಾಂತಕಾ ॥೪೭॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೪೮॥

ಭೀಮಂ ನಾಮ ಮಹಾಸ್ಥಾನಮಸ್ತಿ ಭೀತಿವಿನಾಶನಮ್ ।
ತತ್ರ ಭೀಮೇಶ್ವರೋ ದೇವಶ್ಶಿವಾ ಭೀಮೇಶ್ವರಾಭಿಧಾ ॥೪೯॥

ವಿಶ್ವೇಶಾದೇವಿಯನ್ನೂ, ಕನಖಲವೆಂಬ ಕ್ಷೇತ್ರದಲ್ಲಿ ವಾಸಮಾಡುತ್ತಿರುವ, ಉಗ್ರೇಶ್ವರನನ್ನೂ ಉಗ್ರಾದೇವಿಯನ್ನೂ, ಬಹಳ ದೊಡ್ಡದಾದ ಅಟ್ಟಹಾಸಕ್ಷೇತ್ರವಾಸಿಯಾದ ಮಹಾನಂದೇಶ್ವರನನ್ನೂ ಮಹಾನಂದಾದೇವಿಯನ್ನೂ ಭಕ್ತಿಯಿಂದ ಕೂಡಿ ಆಯಾಯ ನಾಮದಿಂದ ಪೂಜಿಸಿದವರಿಗೆ ಸಕಲವಿಧವಾದ ಪಾಪಗಳೂ ಪರಿಹಾರವಾಗುತ್ತವೆ.
॥೩೯-೪೦-೪೧-೪೨-೪೩-೪೪-೪೫-೪೬॥

ಭೂಲೋಕದಲ್ಲಿ ಮಹೇಂದ್ರವೆಂದು ಪ್ರಸಿದ್ಧವಾದ ಕ್ಷೇತ್ರವಿದೆ. ಅಲ್ಲಿ ವಾಸಮಾಡುತ್ತಿರುವ ಮಹಾಂತಕೇಶ್ವರನನ್ನೂ ಮಹಾಂತಕಾದೇವಿಯನ್ನೂ, ಭಯನಾಶಕ

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೫೦॥

ವಸ್ತ್ರಾಪಥಮಿತಿ ಖ್ಯಾತಮಸ್ತಿ ಸ್ಥಾನಂ ಮಹತ್ತರಮ್ ।
ಭವಸ್ತತ್ರ ಶಿವಸ್ಸಾಕ್ಷಾದ್ಭವಾನೀ ಪರಮೇಶ್ವರೀ ॥೫೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೫೨॥

ರುದ್ರ(ಅರ್ಧ)ಕೋಟಿರಿತಿ ಖ್ಯಾತಮನ್ಯದಸ್ತಿ ಸುಶೋಭನಮ್ ।
ರುದ್ರಸ್ತತ್ರ ಮಹಾದೇವಃ ರುದ್ರಾಣೀ ಸಾ ಮಹೇಶ್ವರೀ ॥೫೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೫೪॥

ಅವಿಮುಕ್ತಮಿತಿ ಖ್ಯಾತಮನ್ಯದಸ್ತಿ ಸುಶೋಭನಮ್ ।
ಮಹಾದೇವಾಭಿಧಶ್ಶಂಭುರ್ವಿಶಾಲಾಕ್ಷೀ ಮಹೇಶ್ವರೀ ॥೫೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೫೬॥

ಮಹಾಲಯಮಿತಿ ಖ್ಯಾತಮನ್ಯದಸ್ತಿ ಸುಶೋಭನಮ್ ।
ರುದ್ರಸ್ತತ್ರ ಹರಸ್ಸಾಕ್ಷಾನ್ಮಹಾಭಾಗಾಽಭಿಧಾ ಶಿವಾ ॥೫೭॥

ವಾದ ಭೀಮವೆಂಬ ಕ್ಷೇತ್ರದಲ್ಲಿರುವ ಭೀಮೇಶ್ವರಭೀಮಾದೇವಿಯರನ್ನೂ, ವಸ್ತ್ರಾಪಥವೆಂಬ ಸ್ಥಳದಲ್ಲಿರುವ ಭವೇಶ್ವರ, ಪರಮೇಶ್ವರಿಯಾದ ಭವಾನೀದೇವೀ, ಇವರನ್ನೂ, ರುದ್ರ(ಅರ್ಧ)ಕೋಟಿಯಲ್ಲಿರುವ ರುದ್ರೇಶ್ವರ, ರುದ್ರಾಣೀದೇವಿಯರನ್ನೂ, ಯಾರು ಭಕ್ತಿಯಿಂದ ಆಯಾ ನಾಮಗಳಿಂದ ಪೂಜೆಮಾಡುತ್ತಾರೋ, ಅವರ ಸಕಲ ಪಾಪಗಳೂ ನಾಶವಾಗುತ್ತವೆ. ॥೪೭-೪೮-೪೯-೫೦-೫೧-೫೨-೫೩-೫೪॥

ಪ್ರಸಿದ್ಧವಾದ ಅವಿಮುಕ್ತವೆಂಬ ಕ್ಷೇತ್ರದಲ್ಲಿರುವ ಮಹಾದೇವನನ್ನೂ ವಿಶಾಲಾಕ್ಷೀದೇವಿಯನ್ನೂ, ಬಹಳ ಸುಂದರವಾದ ಮಹಾಲಯವೆಂಬ ಸ್ಥಳದಲ್ಲಿರುವ ರುದ್ರೇಶ್ವರನನ್ನೂ, ಮಹಾಭಾಗಾದೇವಿಯನ್ನೂ, ಗೋಕರ್ಣಕ್ಷೇತ್ರದಲ್ಲಿ ವಾಸಿಸುತ್ತಿ

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾನಾತ್ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೫೮॥

ಗೋಕರ್ಣಾಖ್ಯಂ ಮಹಾಸ್ಥಾನಮಸ್ತಿ ಭೂಮಿತಲೇ ಶುಭಮ್ ।
ಮಹಾಬಲೋ ಹರಸ್ತತ್ರ ಶಿವಾ ಸಾ ಭದ್ರಕರ್ಣಿಕಾ ॥೫೯॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾನಾತ್ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೬೦॥

ಭದ್ರಕರ್ಣಂ ಮಹಾಸ್ಥಾನಮಸ್ತಿ ಭದ್ರಕರಂ ಪರಮ್ ।
ಭದ್ರಾ ತತ್ರ ಮಹಾದೇವೀ ಮಹಾದೇವಶ್ಶಿವಾಭಿಧಃ ॥೬೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾನಾತ್ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೬೨॥

ಸುವರ್ಣಾಕ್ಷಮಿತಿ ಪ್ರೋಕ್ತಮನ್ಯದಸ್ತಿ ಮಹತ್ತರಮ್ ।
ಶಿವಸ್ತತ್ರ ಸಹಸ್ರಾಕ್ಷಃ ಉತ್ಪಲಾಕ್ಷೀ ಶಿವಾ ಪರಾ ॥೬೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾನಾತ್ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೬೪॥

ಸ್ಥಾಣುಸಂಜ್ಞಂ ಮಹಾಸ್ಥಾನಮಸ್ತಿ ಭೂಮಿತಲೇ ಶುಭಮ್ ।
ಶಿವಃ ಸ್ಥಾಣ್ವೀಶ್ವರಸ್ತತ್ರ ಶಿವಾ ಸ್ಥಾಣ್ವೀಶ್ವರೀ ಮತಾ ॥೬೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ರಸ್ನಾನಾತ್ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೬೬॥

ರುವ ಮಹಾಬಲೇಶ್ವರ, ಭದ್ರಕರ್ಣಿಕಾದೇವಿಯರನ್ನೂ, ಭದ್ರಕರ್ಣದಲ್ಲಿರುವ ಶಿವನನ್ನೂ ಭದ್ರಾದೇವಿಯನ್ನೂ ಯಾರು ಬಹಳ ಭಕ್ತಿಯಿಂದ ಕೂಡಿ ಆಯಾಯ ನಾಮೋಚ್ಚಾರಣೆಮಾಡಿ ಪೂಜೆಮಾಡುತ್ತಾರೋ, ಅವರ ಎಲ್ಲಾ ಪಾಪಗಳೂ ಮಾಯ ವಾಗುತ್ತವೆ. ||೫೫-೫೬-೫೭-೫೮-೫೯-೬೦-೬೧-೬೨||

ಸುವರ್ಣಾಕ್ಷವೆಂಬ ದೊಡ್ಡ ಕ್ಷೇತ್ರದಲ್ಲಿರುವ, ಸಹಸ್ರಾಕ್ಷೇಶ್ವರನನ್ನೂ ಉತ್ಪಲಾಕ್ಷೀದೇವಿಯನ್ನೂ, ಸ್ಥಾಣುವೆಂಬ ಮಹಾಕ್ಷೇತ್ರದಲ್ಲಿರುವ ಸ್ಥಾಣ್ವೀಶ್ವರನನ್ನೂ

ಕಮಲಾಲಯಮಿತ್ಯುಕ್ತಮಸ್ತಿ ಸ್ಥಾನಂ ಮಹತ್ತರಮ್ ।
ಕಮಲಾಖ್ಯೋ ಹರಸ್ತತ್ರ ಕಮಲಾಖ್ಯಾ ಮಹೇಶ್ವರೀ ॥೧೭॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೧೮॥

ಚಲಗಂಡಮಿತಿ ಪ್ರೋಕ್ತಮನ್ಯದಸ್ತಿ ಮಹೀತಲೇ ।
ಕಪರ್ದೀ ತತ್ರ ದೇವೇಶಃ ಪ್ರಚಂಡಾಖ್ಯಾ ಮಹೇಶ್ವರೀ ॥೧೯॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೦॥

ಕುರಂಡಮಿತಿ ವಿಖ್ಯಾತಮನ್ಯದಸ್ತಿ ಮಹತ್ತರಮ್ ।
ಊರ್ಧ್ವರೇತಾ ಹರಸ್ತತ್ರ ತ್ರಿಸಂಧ್ಯಾಖ್ಯಾ ಶಿವಾ ಪರಾ ॥೨೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೨॥

ಮಾಕುಟಾಖ್ಯಂ ಮಹಾಸ್ಥಾನಮನ್ಯದಸ್ತಿ ಮಹೀತಲೇ ।
ಮಹೋತ್ಕಟೋ ಹರಸ್ತತ್ರ ಶಿವಾ ಸಾ ಮಕುಟೇಶ್ವರೀ ॥೨೩॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೪॥

ಮಂಡಲೇಶ್ವರಸಂಜ್ಞಂ ಚ ಸ್ಥಾನಮಸ್ತಿ ಮಹತ್ತರಂ ।
ಶ್ರೀಕಂಠಸ್ತತ್ರ ದೇವೇಶಶ್ಶಂಕರೀ ಮಂಡಲೀ ತಥಾ ॥೨೫॥

ಸ್ಥಾಣ್ವೀಶ್ವರಿಯನ್ನೂ, ಕಮಲಾಲಯದಲ್ಲಿರುವ ಕಮಲೇಶ್ವರನನ್ನೂ ಕಮಲಾದೇವಿಯನ್ನೂ, ಚಲಗಂಡಕ್ಷೇತ್ರದಲ್ಲಿರುವ ಕಪರ್ದೀಶ್ವರನನ್ನೂ ಪ್ರಚಂಡಾದೇವಿಯನ್ನೂ ಭಕ್ತಿಯಿಂದ ಆಯಾ ನಾಮಗಳಿಂದ ಪೂಜೆಮಾಡಿದವರ ಸಕಲಪಾಪಗಳೂ ನಾಶವನ್ನೈದುತ್ತವೆ. ||೧೩-೧೪-೧೫-೧೬-೧೭-೧೮-೧೯-೨೦||

ಪ್ರಸಿದ್ಧವಾದ ಕುರಂಡಕ್ಷೇತ್ರದಲ್ಲಿರುವ ಊರ್ಧ್ವರೇತಸೇಶ್ವರನನ್ನೂ ತ್ರಿಸಂಧ್ಯಾದೇವಿಯನ್ನೂ, ಮಾಕುಟಕ್ಷೇತ್ರದಲ್ಲಿರುವ ಮಹೋತ್ಕಟೇಶ್ವರನನ್ನೂ ಮಕುಟಾ

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೬॥

ಕಾಲಂಜರಮಿತಿ ಖ್ಯಾತಮನ್ಯದಸ್ತಿ ಮಹತ್ತರಮ್ ।
ನೀಲಕಂಠೋ ಹರಸ್ತತ್ರ ಶಿವಾ ಕಾಳೀ ಪ್ರಕೀರ್ತಿತಾ ॥೨೭॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೨೮॥

ಶಂಕುಕರ್ಣಂ ಮಹಾಕ್ಷೇತ್ರಂ ಸರ್ವದೋಷನಿವಾರಣಂ ।
ಮಹಾತೇಜಾ ಹರಸ್ತತ್ರ ಧ್ವನಿಸ್ಸಾ ಪರಮೇಶ್ವರೀ ॥೨೯॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೦॥

ಸ್ಥೂಲೇಶ್ವರಸಮಾಖ್ಯಂ ತು ಸ್ಥಾನಮಸ್ತಿ ಮಹತ್ತರಂ ।
ಸ್ಥೂಲಸ್ತತ್ರ ಮಹಾದೇವಃ ಸ್ಥೂಲಾ ಸಾ ಪರಮೇಶ್ವರೀ ॥೩೧॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೩೨॥

ಶ್ರೀಮದ್ವ್ಯಾಘ್ರಪುರಾಖ್ಯಂ ತು ಸ್ಥಾನಮಸ್ತಿ ಮಹೀತಲೇ ।
ಹರಸ್ಸಭಾಪತಿಸ್ತತ್ರ ಶಿವಾ ದಭ್ರಸಭೇಶ್ವರೀ ॥೩೩॥

ದೇವಿಯನ್ನೂ, ಮಂಡಲೇಶ್ವರವೆಂಬ ಕ್ಷೇತ್ರದಲ್ಲಿರುವ ಶ್ರೀಕಂಠೇಶ್ವರನನ್ನೂ ಮಂಡಲೀ ದೇವಿಯನ್ನೂ, ಕಾಲಂಜರಕ್ಷೇತ್ರದಲ್ಲಿರುವ ನೀಲಕಂಠೇಶ್ವರನನ್ನೂ ಕಾಳೀದೇವಿ ಯನ್ನೂ ಯಾರು ಭಕ್ತಿಯಿಂದ ಆಯಾ ನಾಮಗಳಿಂದ ಪೂಜೆಮಾಡುತ್ತಾರೋ ಅವರ ಎಲ್ಲಾ ಪಾಪವೂ ನಾಶವನ್ನೈದುತ್ತದೆ. ॥೭೧॥೨೧-೨೩-೨೪-೨೫॥೨೬-೨೭॥

ಶಂಕುಕರ್ಣವೆಂಬ ಉತ್ತಮವಾದ ಕ್ಷೇತ್ರದಲ್ಲಿರುವ, ಮಹಾತೇಜಸೇಶ್ವರನನ್ನೂ ಧ್ವನೀದೇವಿಯನ್ನೂ, ಸ್ಥೂಲೇಶ್ವರವೆಂಬ ಸ್ಥಳದಲ್ಲಿರುವ ಸ್ಥೂಲೇಶ್ವರನನ್ನೂ ಸ್ಥೂಲಾ ದೇವಿಯನ್ನೂ, ವ್ಯಾಘ್ರಪುರವೆಂಬ ಮಹಾಕ್ಷೇತ್ರದಲ್ಲಿ ವಾಸಮಾಡುತ್ತಿರುವ ಸಭಾಪತಿ ಎಂಬ ಈಶ್ವರನನ್ನೂ ದಭ್ರಸಭೇಶ್ವರೀ ಎಂಬ ಪಾರ್ವತೀದೇವಿಯನ್ನೂ ಯಾರು

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೮೪॥

ಯತ್ರ ನೃತ್ಯತಿ ದೇವೇಶಃ ಸ್ವಾತ್ಮಾನಂದಪ್ರಮೋದತಃ ।
ಯತ್ರ ನೃತ್ಯಂತಮೀಶಾನಮಂಬಿಕಾ ಪರಿಪಶ್ಯತಿ ॥೮೫॥

ತತ್ರ ದೇವಂ ಚ ದೇವೀಂ ಚ ಶ್ರದ್ಧಯಾ ಪರಯಾ ಸಹ ।
ತತ್ತನ್ನಾಮ್ನಾ ತು ಸಂಪೂಜ್ಯ ಮುಚ್ಯತೇ ಸರ್ವಪಾತಕೈಃ ॥೮೬॥

ಯತ್ರ ಭಕ್ತಿವತಾಂ ನೃಣಾಂ ಪ್ರಸೀದತಿ ಮಹೇಶ್ವರಃ ।
ಯತ್ರ ನೃತ್ಯಂತಮೀಶಾನಂ ದೃಷ್ಟ್ವಾ ಮರ್ತ್ಯೋ ವಿಮುಚ್ಯತೇ ॥೮೭॥

ಸ್ಥಾನಾನಾಮಪಿ ಸರ್ವೇಷಾಮೇತತ್ಸ್ಥಾನಂ ಮಹತ್ತರ(ಮ)ಂ ।
ಅತ್ರ ಜಪ್ತಂ ಹುತಂ ದತ್ತಮಸಂಖ್ಯೇಯ ಗುಣಾಧಿಕಂ ॥೮೮॥

ಅಸ್ಮಿನ್ನೇವ ಮಹಾಸ್ಥಾನೇ ಶಿವಗಂಗಾಭಿಧಂ ಪರಂ ।
ತಟಾಕಮಸ್ತಿ ತತ್ತೀರೇ ದಕ್ಷಿಣೇ ನೃತ್ಯತೀಶ್ವರಃ ॥೮೯॥

ತಸ್ಮಿನ್ನೇವ ತಟಾಕೇ ಯೋ ನಿತ್ಯಂ ಸ್ನಾತ್ವಾ ದ್ವಿಜಾ ನರಃ ।
ದೃಷ್ಟ್ವಾ ದಭ್ರಸಭಾನಾಥಂ ಪರಮಶ್ರದ್ಧಯಾ ಸಹ ॥೯೦॥

ಭಕ್ತಿಯಿಂದ ಆಯಾ ನಾಮಗಳಿಂದ ಪೂಜೆಮಾಡುತ್ತಾರೋ ಅವರ ಎಲ್ಲಾ ಪಾಪಗಳೂ ನಾಶವಾಗುತ್ತವೆ. ||೭೯-೮೦-೮೧-೮೮-೮೩-೮೪||

ಯಾವ ಸ್ಥಳದಲ್ಲಿ ಪರಮೇಶ್ವರನು ಆತ್ಮಾನಂದವನ್ನನುಭವಿಸುತ್ತಾ ನರ್ತನ ಮಾಡುತ್ತಾನೋ, ಅಂಥ ನರ್ತನೆಯನ್ನು ಪಾರ್ವತಿಯು ಯಾವ ಸ್ಥಳದಲ್ಲಿ ನೋಡುತ್ತಿರುತ್ತಾಳೋ, ಅಂಥ ವ್ಯಾಘ್ರಪುರದಲ್ಲಿರುವ ಪಾರ್ವತೀಪರಮೇಶ್ವರರನ್ನು ಯಾರು ಪೂಜಿಸುತ್ತಾರೋ ಅವರಿಗೆ ಪಾತಕವಿಲ್ಲವಾಗುತ್ತದೆ. ||೮೫-೮೬||

ಯಾವ ವ್ಯಾಘ್ರಪುರದಲ್ಲಿ ಭಕ್ತರಾದ ಜನಗಳಿಗೆ ಪರಮೇಶ್ವರನು ಪ್ರಸನ್ನನಾಗುತ್ತಾನೋ, ಯಾವ ಸ್ಥಳದಲ್ಲಿ ನರ್ತನಮಾಡುತ್ತಿರುವ ಈಶ್ವರನನ್ನು ನೋಡಿದರೆ ನೋಡಿದವನು ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೋ, ಅಂಥ ಆ ವ್ಯಾಘ್ರಪುರವು ಎಲ್ಲಾ ಸ್ಥಳಗಳಿಗಿಂತಲೂ ಉತ್ಕೃಷ್ಟವಾದುದು. ಈ ಸ್ಥಳದಲ್ಲಿ

ಅಷ್ಟೋತ್ತರಸಹಸ್ರಂ ತು ಮಂತ್ರಮಾದ್ಯಂ ಷಡಕ್ಷರಂ ।
ಜಪತಿ ಪ್ರೀತಿಸಂಯುಕ್ತಃ ಪ್ರಸಿದ್ಧೈರಪಿ ಮುಚ್ಯತೇ ॥೯೧॥

ಆದಿತ್ಯೇ ಮೇಷಸಂಯುಕ್ತೇ ಪರ್ವಣ್ಯಾದ್ರಾರ್ದಿನೇ ತಥಾ ।
ತಟಾಕೇಽಸ್ಮಿನ್ನರಸ್ಸ್ನಾತ್ವಾ ಪ್ರಸಿದ್ಧೈರಪಿ ಮುಚ್ಯತೇ ॥೯೨॥

ಆದಿತ್ಯೇ ವೃಷಭಂ ಪ್ರಾಪ್ತೇ ತಟಾಕೇಽಸ್ಮಿನ್ ವೃಷೋದಯೇ ।
ಸ್ನಾತ್ವಾ ದತ್ವಾ ಮಹಾಪಾಪೈಃ ಪ್ರಸಿದ್ಧೈರಪಿ ಮುಚ್ಯತೇ ॥೯೩॥

ಆದಿತ್ಯೇ ಮಿಥುನಂ ಪ್ರಾಪ್ತೇ ತಟಾಕೇಽಸ್ಮಿನ್ಮಹತ್ತರೇ ।
ಕೃಷ್ಣಾಷ್ಟಮ್ಯಾಂ ನರಸ್ಸ್ನಾತ್ವಾ ಪ್ರಸಿದ್ಧೈರಪಿ ಮುಚ್ಯತೇ ॥೯೪॥

ಆಷಾಢೇ ತು ಚತುರ್ದಶ್ಯಾಂ ಕೃಷ್ಣಪಕ್ಷೇ ಸಮಾಹಿತಃ ।
ತಟಾಕೇಽಸ್ಮಿನ್ನರಸ್ಸ್ನಾತ್ವಾ ಪ್ರಸಿದ್ಧೈರಪಿ ಮುಚ್ಯತೇ ॥೯೫॥

ಮಾಡಿದ ಜಪ, ಹೋಮ, ದಾನ–ಇವುಗಳು ಬಹಳ ಸ್ವಲ್ಪವಾಗಿದ್ದರೂ ಬಹಳ ಹೆಚ್ಚಿನ ಫಲವುಳ್ಳದ್ದಾಗುವುವು. ಈ ಸ್ಥಳದಲ್ಲಿ ಶಿವಗಂಗಾ ಎಂಬೊಂದು ಉತ್ತಮವಾದ ಕೆರೆ ಇದೆ. ಈ ಕೆರೆಯ ದಕ್ಷಿಣದಿಕ್ಕಿನಲ್ಲಿ ಪರಮೇಶ್ವರನು ನರ್ತನ ಮಾಡುತ್ತಾನೆ. ಎಲೈ ಬ್ರಾಹ್ಮಣರೇ, ಯಾವನು ಈ ಕೆರೆಯಲ್ಲಿ ಸ್ನಾನಮಾಡಿ ನಿತ್ಯವೂ ಬಹಳ ಭಕ್ತಿಯಿಂದ ಮಂತ್ರಗಳಿಗೆಲ್ಲಕ್ಕೂ ಮೊದಲನೆಯದಾದ ಷಡಕ್ಷರೀಮಂತ್ರವನ್ನು ಸಾವಿರದ ಎಂಟಾವೃತ್ತಿ ಜಪಮಾಡುತ್ತಾನೋ, ಅವನು ಪ್ರಸಿದ್ಧವಾದ ಬ್ರಹ್ಮಹತ್ಯಾದಿ ಮಹಾಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ॥೮೭-೮೮-೮೯-೯೦-೯೧॥

ಸೂರ್ಯನು ಮೇಷರಾಶಿಯಲ್ಲಿರುವಾಗ ಆದ್ರ್ರಾನಕ್ಷತ್ರವಿರುವ ದಿನದಲ್ಲಿ ಈ ಕೆರೆಯಲ್ಲಿ ಯಾರು ಸ್ನಾನಮಾಡುತ್ತಾರೋ, ವೃಷಭಮಾಸದಲ್ಲಿ ವೃಷಭಸಂಕ್ರಮಣದ ದಿನ ಈ ಕೆರೆಯಲ್ಲಿ ಯಾರು ಸ್ನಾನಮಾಡಿ ಯಥಾಶಕ್ತಿಯಾಗಿ ದಾನಮಾಡುತ್ತಾರೋ, ಅವರು ಪ್ರಸಿದ್ಧವಾದ ಮಹಾಪಾಪಗಳಿಂದಲೂ ಬ್ರಹ್ಮಹತ್ಯಾದಿ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ. ॥೯೨-೯೩॥

ಮಿಥುನಮಾಸದ ಕೃಷ್ಣಪಕ್ಷದ ಅಷ್ಟಮೀದಿವಸ ಈ ಕೆರೆಯಲ್ಲಿ ಸ್ನಾನ ಮಾಡಿದರೆ ಸಕಲ ಬ್ರಹ್ಮಹತ್ಯಾದಿ ಪಾಪಗಳೂ ನಾಶವಾಗುತ್ತವೆ. ॥೯೪॥

ಎಲೈ ಋಷಿಗಳೇ, ಆಷಾಢಮಾಸದ ಕೃಷ್ಣಪಕ್ಷದ ಚತುರ್ದಶೀ ದಿವಸವೂ, ಶ್ರಾವಣಮಾಸದ ಪೌರ್ಣಮಾಸೀ ದಿನದಲ್ಲಿಯೂ, ಕನ್ಯಾಮಾಸದಲ್ಲಿ ತಾನು ಹುಟ್ಟಿದ

ಶ್ರಾವಣ್ಯಾಂ ಪೌರ್ಣಮಾಸ್ಯಾಂ ತು ತಟಾಕೇಽಸ್ಮಿನ್ಸಮಾಹಿತಃ ।
ಸ್ನಾತ್ವಾ ತು ಪಾತಕೈಸ್ಸರ್ವೈಃ ಪ್ರಸಿದ್ಧೈರಪಿ ಮುಚ್ಯತೇ ॥೯೬॥

ಕನ್ಯಕಾಯಾಂ ಸ್ಥಿತೇ ಚಾರ್ಕೇ ಜನ್ಮರ್ಕ್ಷೇ ಚಾರ್ಕವಾಸರೇ ।
ನರಸ್ಸ್ನಾತ್ವಾ ತಟಾಕೇಽಸ್ಮಿನ್ ಪ್ರಸಿದ್ಧೈರಪಿ ಮುಚ್ಯತೇ ॥೯೭॥

ಆದಿತ್ಯೇ ಚ ತುಲಾಂ ಪ್ರಾಪ್ತೇ ಭಗನಕ್ಷತ್ರಕೇ ನರಃ ।
ಪ್ರಾತಸ್ಸ್ನಾತ್ವಾ ತಟಾಕೇಽಸ್ಮಿನ್ ಪ್ರಸಿದ್ಧೈರಪಿ ಮುಚ್ಯತೇ ॥೯೮॥

ಆದಿತ್ಯೇ ವೃಶ್ಚಿಕಂ ಪ್ರಾಪ್ತೇ ಪಾವಕಸ್ಯ ದಿನೇ ನರಃ ।
ಪ್ರಾತಸ್ಸ್ನಾತ್ವಾ ತಟಾಕೇಽಸ್ಮಿನ್ ಪ್ರಸಿದ್ಧೈರಪಿ ಮುಚ್ಯತೇ ॥೯೯॥

ಆದಿತ್ಯೇ ಚಾಪಸಂಯುಕ್ತೇ ರೌದ್ರನಕ್ಷತ್ರಕೇ ನರಃ ।
ಸ್ನಾನಂ ಕೃತ್ವಾ ತಟಾಕೇಽಸ್ಮಿನ್ ಪ್ರಸಿದ್ಧೈರಪಿ ಮುಚ್ಯತೇ ॥೧೦೦॥

ಆದಿತ್ಯೇ ಮಕರಂ ಪ್ರಾಪ್ತೇ ಪುಷ್ಯರ್ಕ್ಷೇ ಚಾರ್ಕವಾಸರೇ ।
ನರಸ್ಸ್ನಾತ್ವಾ ತಟಾಕೇಽಸ್ಮಿನ್ ಪ್ರಸಿದ್ಧೈರಪಿ ಮುಚ್ಯತೇ ॥೧೦೧॥

ಮಾಘಮಾಸಿ ಮಖರ್ಕ್ಷೇ ತು ತಟಾಕೇಽಸ್ಮಿನ್ ಮಹತ್ತರೇ ।
ಸ್ನಾನಂ ಕೃತ್ವಾ ಮಹಾಪಾಪೈಃ ಪ್ರಸಿದ್ಧೈರಪಿ ಮುಚ್ಯತೇ ॥೧೦೨॥

ಫಾಲ್ಗುನೇ ಚೋತ್ತರೇ ಮರ್ತ್ಯಸ್ತಟಾಕೇಽಸ್ಮಿನ್ ಮಹತ್ತರೇ ।
ಸ್ನಾನಂ ಕೃತ್ವಾ ಮಹಾಪಾಪೈಃ ಪ್ರಸಿದ್ಧೈರಪಿ ಮುಚ್ಯತೇ ॥೧೦೩॥

ನಕ್ಷತ್ರದಲ್ಲಿಯೂ ಭಾನುವಾರದಲ್ಲೂ, ತುಲಾಮಾಸದಲ್ಲಿ ಉತ್ತರಾಫಲ್ಗುನೀ ನಕ್ಷತ್ರದಲ್ಲಿಯೂ, ವೃಶ್ಚಿಕಮಾಸದಲ್ಲಿ ಕೃತ್ತಿಕಾನಕ್ಷತ್ರದ ದಿನದಲ್ಲಿಯೂ, ಧನುರ್ಮಾಸದಲ್ಲಿ ಆರ್ದ್ರಾನಕ್ಷತ್ರದಲ್ಲಿಯೂ, ಮಕರಮಾಸದಲ್ಲಿ ಪುಷ್ಯನಕ್ಷತ್ರದಲ್ಲಿಯೂ, ಮಾಘಮಾಸದ ಮಘಾನಕ್ಷತ್ರದಲ್ಲಿಯೂ, ಫಾಲ್ಗುನಮಾಸದ ಉತ್ತರಾನಕ್ಷತ್ರದಲ್ಲಿಯೂ, ಯಾವನು ಈ ಕೆರೆಯಲ್ಲಿ ಸ್ನಾನಮಾಡಿ ಈಶ್ವರದರ್ಶನಜಪಾದಿಗಳನ್ನು ಮಾಡುತ್ತಾನೋ ಅವನು ಪ್ರಸಿದ್ಧವಾದ ಬ್ರಹ್ಮಹತ್ಯಾದಿ ಮಹಾಪಾಪಗಳಿಂದಲೂ ಬಿಡಲ್ಪಡುತ್ತಾನೆ. ॥೯೫-೯೬-೯೭-೯೮-೯೯-೧೦೦-೧೦೧-೧೦೨-೧೦೩॥

ಅತ್ರ ಬ್ರಹ್ಮವಿದಾಂ ನಿತ್ಯಂ ಅನ್ನಂ ಪೇಯಂ ದದಾತಿ ಯಃ ।
ಸರ್ವಪಾಪವಿನಿರ್ಮುಕ್ತಸ್ಸ ಯಾತಿ ಪರಮಾಂ ಗತಿಮ್ ॥೧೦೪॥

ಗೃಹಂ ವಾ ಮಠಿಕಾಂ ವಾಽಪಿ ಪ್ರದತ್ವಾಽತ್ರೈವ ಯೋಗಿನೇ ।
ಸರ್ವಪಾಪವಿನಿರ್ಮುಕ್ತಶ್ಶಂಕರಂ ಯಾತಿ ಮಾನವಃ ॥೧೦೫॥

ಅನೇನ ಸದೃಶಂ ಸ್ಥಾನಂ ನಾಸ್ತಿ ಲೋಕತ್ರಯೇಷ್ವಪಿ ।
ಅತ್ರೈವ ವರ್ತಮಾನಸ್ತು ಮುಚ್ಯತೇ ಭವಬಂಧನಾತ್ ॥೧೦೬॥

ಸ್ಥಾನಮೇತತ್ಪುರಾ ಶಂಭುಸ್ಸರ್ವದೋಷನಿವೃತ್ತಯೇ ।
ನಿರ್ಮಮೇ ಸರ್ವಜಂತೂನಾಂ ಕೇವಲಂ ಕರುಣಾಬಲಾತ್ ॥೧೦೭॥

ಅನೇಕಕೋಟಿಭಿಃ ಕಲ್ಪೈರಾರ್ಜಿತೈಃ ಪುಣ್ಯರಾಶಿಭಿಃ ।
ಸ್ಥಾನಮೇತನ್ಮನುಷ್ಯಾಣಾಂ ಸಿದ್ಧ್ಯತ್ಯತ್ಯಂತಶೋಭನಂ ॥೧೦೮॥

ಈ ಸ್ಥಳದಲ್ಲಿ ಯಾವನು ಬ್ರಹ್ಮತತ್ವದ ಸ್ವರೂಪದ ಅಪರೋಕ್ಷ ಸಾಕ್ಷಾತ್ಕಾರವನ್ನು ಪಡೆದಿರುವ ಜ್ಞಾನಿಯಾದವರಿಗೆ ಅನ್ನ, ನೀರುಗಳನ್ನೂ, ಮನೆ ಮಠಗಳನ್ನೂ, ಕೊಡುತ್ತಾನೋ, ಅವನು ಪಾಪಗಳಿಂದ ಬಿಡಲ್ಪಟ್ಟವನಾಗಿ ಸದ್ಗತಿಯನ್ನು ಎಂದರೆ ಶಂಕರನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ. ||೧೦೪-೧೦೫||

ಮೂರು ಲೋಕಗಳಲ್ಲಿಯೂ ಈ ಸ್ಥಳಕ್ಕೆ ಸರಿಯಾದ ಸ್ಥಳವು ಮತ್ತೊಂದಿಲ್ಲವು. ಇಲ್ಲಿ ವಾಸಮಾಡುವವರು ಸಂಸಾರದ ಸಂಕೋಲೆಯಿಂದ ಬಿಡುಗಡೆಯನ್ನು ಪಡೆಯುತ್ತಾರೆ. ಇಂಥ ಉತ್ಕೃಷ್ಟವಾದ ಸ್ಥಳವನ್ನು ಪರಮೇಶ್ವರನು ಕರುಣೆಯಿಂದ ಎಲ್ಲಾ ಪ್ರಾಣಿಗಳ ಎಲ್ಲಾ ದೋಷಗಳ ಪರಿಹಾರಕ್ಕಾಗಿ ಪೂರ್ವಕಾಲದಲ್ಲಿಯೇ ಸೃಷ್ಟಿ ಮಾಡಿದನು. ||೧೦೬-೧೦೭||

ಮನುಷ್ಯರಿಗೆ ಈ ಸ್ಥಳವು ದೊರೆಯಬೇಕಾದರೆ ಅನೇಕಕೋಟಿ ಕಲ್ಪಗಳಲ್ಲಿ ಸಂಪಾದಿಸಿರುವ ಪುಣ್ಯರಾಶಿಗಳಿರಬೇಕು. ಇಲ್ಲದಿದ್ದರೆ ಇಂಥ ಉತ್ತಮವಾದ ಸ್ಥಳವು ದೊರೆಯಲಾರದು. ||೧೦೮||

ಸರ್ವಮುಕ್ತಮತಿಶೋಭನಂ ಮಯಾ
ಪಾಪರಾಶಿವಿನಿಕೃಂತನಂ ನೃಣಾಮ್ ।
ಸ್ಥಾನಮೇತದತಿಶೋಭನಂ ಸದಾ
ಸೇವನೀಯಮಖಿಲೈಸ್ತು ಜಂತುಭಿಃ ॥೧೦೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಪಾಪಶುದ್ಧ್ಯುಪಾಯಕಥನಂ ನಾಮ ತ್ರಿಚತ್ವಾರಿಂಶಾಧ್ಯಾಯಃ

ಎಲೈ ಋಷಿಗಳೇ, ನಾನು ಉತ್ತಮವಾದ ಪಾಪನಾಶದಿಂದ ಚಿತ್ತಶುದ್ಧಿಯಾಗಲು ಬೇಕಾದ ಉಪಾಯವೆಲ್ಲವನ್ನೂ ನಿಮಗೆ ಹೇಳಿರುತ್ತೇನೆ. ಇಂಥ ಬಹಳ ಮಂಗಳಕರವಾದ ಸ್ಥಾನವು ಎಲ್ಲಾ ಪ್ರಾಣಿಗಳಿಂದಲೂ ಯಾವಾಗಲೂ ಸೇವಿಸಲ್ಪಡುವುದಾಗಿದೆ. ಎಂದು ಸೂತರು ಶೌನಕಾದಿಗಳಿಗೆ ಹೇಳಿದರು. ॥೧೦೯॥

ಈ ಸಂದರ್ಭದಲ್ಲಿ ಪಾಪನಾಶವಾಗುವ ಕ್ರಮವನ್ನು ಧರ್ಮಶಾಸ್ತ್ರದಲ್ಲಿ ಹೀಗೆ ಹೇಳಿದೆ. “ಪಶ್ಚಾತ್ತಾಪಾದುಪರಮಾತ್ ಪ್ರಾಯಶ್ಚಿತ್ತೋನ್ಮುಖತ್ವತಃ । ಪಶ್ಚಾಚ್ಚತದನುಷ್ಠಾನಾತ್ ಪಾಪಾ ನಶ್ಯಂತಿ ಪಾದಶಃ ॥” ಪಾಪವನ್ನು ಅಜ್ಞಾನ, ಅಶಕ್ತಿ, ಆಕರ್ಷಣೆ, ನಿರ್ಬಂಧ ಮುಂತಾದ ಕಾರಣಾಂತರಗಳಿಂದ ಮಾಡಿದ್ದರೆ, ಅದಕ್ಕಾಗಿ ಪಶ್ಚಾತ್ತಾಪಪಡುವುದರಿಂದ ಕಾಲುಭಾಗ ಪಾಪವೂ, ಪುನಃ ಆ ಪಾಪವನ್ನು ಮಾಡದಿರುವುದರಿಂದ ಇನ್ನು ಕಾಲುಭಾಗದಷ್ಟು ಪಾಪವೂ, ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಶುದ್ಧನಾಗಬೇಕೆಂಬ ಮನೋಭಾವದಿಂದ ಇನ್ನೊಂದು ಕಾಲುಭಾಗದಷ್ಟು ಪಾಪವೂ, ಕಡೆಗೆ ಶ್ರದ್ಧಾಭಕ್ತಿಗಳಿಂದ ಪ್ರಾಯಶ್ಚಿತ್ತವನ್ನು ಆಚರಿಸುವುದರಿಂದಲೂ, ಪಾಪಗಳು ಕ್ರಮವಾಗಿ ನಾಶವಾಗುತ್ತವೆ. ಎಂದು ಈ ಧರ್ಮಶಾಸ್ತ್ರದ ವಚನದ ತಾತ್ಪರ್ಯವಾಗಿದೆ. ಈ ಅಧ್ಯಾಯದಲ್ಲೂ ಈ ಭಾವವನ್ನು ಅನುಸರಿಸಿ ಪಾಪಶುದ್ಧಿಯ ರೀತಿಯನ್ನು ವಿವರಿಸಲಾಗಿದೆ ಎಂಬುದನ್ನೂ ಮನಗಾಣಬಹುದು.

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಜನರ ಪಾಪನಾಶಪೂರ್ವಕವಾಗಿ ಚಿತ್ತಶುದ್ಧಿಗೆ ಬೇಕಾದ ಉಪಾಯಗಳನ್ನು ತಿಳಿಸುವ ನಲವತ್ತುಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಯಜ್ಞವೈಭವಖಂಡಂ

|| ಚತುಶ್ಚತ್ವಾರಿಂಶೋಽಧ್ಯಾಯಃ ||

ನಲವತ್ತುನಾಲ್ಕನೆಯ ಅಧ್ಯಾಯವು

(ದ್ರವ್ಯಶುದ್ಧಿವಿಚಾರಃ)

|| ಓಂ ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ದ್ರವ್ಯಶುದ್ಧಿಂ ಸಮಾಸತಃ ।
ಶ್ರದ್ಧಯಾ ಸಹ ವಿಪ್ರೇಂದ್ರಾಃ ಶೃಣುತಾತ್ಮವಿಶುದ್ಧಯೇ ॥೧॥

ಉಪನಯನವೆಂಬ ಸಂಸ್ಕಾರದ ಮೂಲಕವಾಗಿ ವೇದಾಧ್ಯಯನದಲ್ಲಿ ಅಧಿಕಾರವನ್ನು ಪಡೆದಿರುವ ದ್ವಿಜರ ಮನಸ್ಸಿನ ಪರಿಪಕ್ವಸ್ಥಿತಿಗೆ ಅನುಸಾರವಾಗಿ ವೇದಾಂತವ್ಯಾಸಂಗದಿಂದ ಉಪನಿಷತ್ತುಗಳಲ್ಲಿರುವ ಮಹಾವಾಕ್ಯಗಳನ್ನು ಅರ್ಥವಿವರಣೆಯೊಡನೆ ಗುರುಗಳಿಂದ ಉಪದೇಶವನ್ನು ಪಡೆದು, ಅವುಗಳ ಧ್ಯಾನ ಮತ್ತು ವೈದಿಕವಾದ ಮಂತ್ರಗಳ ಜಪ ಇವನ್ನು ಆ ದ್ವಿಜರು ಒಂದು ಬಗೆಯ ಉತ್ತಮವಾದ ಪ್ರಾಯಶ್ಚಿತ್ತವನ್ನಾಗಿ ಆಚರಿಸಬೇಕೆಂದೂ ಅದರಿಂದ ಚಿತ್ತಶುದ್ಧಿಯು ದೊರೆಯುತ್ತದೆಂದೂ ಹೇಳಿದರು. ಅಲ್ಲಿಗೆ ಎಲ್ಲ ಜನರೂ ಮಾಡಬಹುದಾದ ಪಾಪಕ್ಷಯದ ಉಪಾಯಾಚರಣೆಯನ್ನು, ಎಂದರೆ, ಶಕ್ತಿಸಹಿತನಾದ ಪರಮೇಶ್ವರನನ್ನು ಅವನ ನಾಮಗಳ ಜಪದೊಡನೆ ಪೂಜೆಯನ್ನು ಮಾಡುವುದೆಂಬ ಧರ್ಮವನ್ನು ಅಮರೇಶ ಮುಂತಾದ ಪವಿತ್ರಕ್ಷೇತ್ರಗಳಲ್ಲಿ ಆಚರಿಸಬೇಕೆಂದೂ, ಅದರಿಂದಲೂ ಕ್ರಮವಾಗಿ ಉತ್ತಮ ಫಲವಾದ ಮೋಕ್ಷಲಾಭಕ್ಕೆ ತುಂಬ ಅನುಕೂಲವಾಗುತ್ತದೆಂದೂ ಹಿಂದಿನ ಅಧ್ಯಾಯದಲ್ಲಿ

ಆತ್ಮಾನಾತ್ಮೇತಿ ವಿಪ್ರೇಂದ್ರಾ ದ್ವಿಧಾ ದ್ರವ್ಯಂ ವ್ಯವಸ್ಥಿತಮ್ ।
ಆತ್ಮದ್ರವ್ಯಂ ಸ್ವಯಂ ಶುದ್ಧಂ ಸತ್ಯಜ್ಞಾನಾದಿಲಕ್ಷಣಮ್ ॥೨॥

ಸತ್ತಾಮಾತ್ರೇ ನ ದೋಷೋಽಸ್ತಿ ಸ್ವತಶ್ಶುದ್ಧಂ ಯತಸ್ಸದಾ ।
ಯದಿ ಸತ್ತಾ ಸ್ವತೋಽಶುದ್ಧಾ ದುಷ್ಟಂ ಸರ್ವಂ ಭವೇತ್ಸದಾ ॥೩॥

ದುಷ್ಟಸತ್ತಾಽಭಿಸಂಬಂಧಾತ್ ದುಷ್ಟಸ್ಪೃಷ್ಟಂ ಸದಾ ಖಲು ।
ತಥಾ ಸತಿ ವಿಶುದ್ಧಾ ತು ನ ಸಿಧ್ಯತ್ಯೇವ ಕಿಂಚನ ॥೪॥

ತಿಳಿಯಹೇಳಿದರು. ಅಲ್ಲದೆ ಆತ್ಮನಲ್ಲಿ ಅಜ್ಞಾನದಿಂದ ಕಲ್ಪಿತವಾದ ಅವಿದ್ಯಾಕಾರ್ಯಗಳಿಗೆ ಆತ್ಮಜ್ಞಾನದಿಂದ ಆ ಅವಿದ್ಯಾದೋಷನಿವೃತ್ತಿಯಾಗಲು ಆತ್ಮಜ್ಞಾನರೂಪವಾದ ಪ್ರಾಯಶ್ಚಿತ್ತವನ್ನು ಹೇಳಿದರು. ಈಗ ಈ ಆತ್ಮರೂಪದ್ರವ್ಯದ ಎಂದರೆ ವಸ್ತುವಿನ ಸ್ವಾಭಾವಿಕವಾದ ಶುದ್ಧಸ್ವರೂಪವನ್ನು ಸೂತಮುಹರ್ಷಿಗಳು ತಿಳಿಸುತ್ತಾರೆ. ಆತ್ಮವಸ್ತುವಿನ ನೈಜವಾದ ಶುದ್ಧರೂಪವನ್ನು ಸಂಗ್ರಹವಾಗಿ ಹೇಳುತ್ತೇನೆ. ಓ ಬ್ರಾಹ್ಮಣರಾ, ಭಕ್ತಿಯಿಂದ ಕೇಳಿ; ನಿಮ್ಮ ಆತ್ಮಗಳಿಗೂ ಎಂದರೆ ಅಂತಃಕರಣಗಳಿಗೆ ಶುದ್ಧಿಯಾಗುವುದಕ್ಕಾಗಿಯೂ, ಅಜ್ಞಾನದೋಷನಿವಾರಣೆಗಾಗಿಯೂ ಇದನ್ನು ಆದರದೊಡನೆ ಕೇಳಿ. ॥೧॥

ಓ ಬ್ರಾಹ್ಮಣರಾ, ದ್ರವ್ಯವು ಎಂದರೆ ವಸ್ತುವು ಆತ್ಮವೆಂದೂ ಅನಾತ್ಮವೆಂದೂ ಎರಡು ಬಗೆಯಾಗಿದೆ. ಸಚ್ಚಿದಾನಂದಸ್ವರೂಪವಾದ ಸ್ವಪ್ರಕಾಶವಾದ ಆತ್ಮವಸ್ತುವು ಸರ್ವದಾ ಶುದ್ಧವಾಗಿಯೇ ಇರುತ್ತದೆ. ॥೨॥

ಸನ್ಮಾತ್ರರೂಪನಾದ ಆತ್ಮನಲ್ಲಿ ದೋಷಸಂಭವವೇ ಇಲ್ಲವು. ಏಕೆಂದರೆ ಆತ್ಮನು ಯಾವಾಗಲೂ ಸ್ವತಃ ಶುದ್ಧನಾಗಿರುತ್ತಾನೆ. ಹಾಗಿಲ್ಲದೆ ಸತ್ತೆಯಲ್ಲಿ ಸ್ವಾಭಾವಿಕವಾಗಿ ದೋಷವಿರುವುದಾದರೆ ಎಲ್ಲಾ ವಸ್ತುವೂ ಯಾವಾಗಲೂ ದೋಷವುಳ್ಳದ್ದೇ ಆಗಿರಬೇಕಾಗುತ್ತದೆ. ॥೩॥

ದೋಷವುಳ್ಳ ಸತ್ತಾ ಎಂದರೆ ಇರುವಿಕೆಯ ಸಂಬಂಧದಿಂದ ಎಲ್ಲವೂ ಯಾವಾಗಲೂ ದುಷ್ಟವಾಗಿರುವುದಾದರೆ, ಎಲ್ಲ ವಸ್ತುಗಳಲ್ಲಿಯೂ ಸತ್ತಾಧರ್ಮದ ಸಂಬಂಧವಿರುವುದರಿಂದ, ಈ ಪ್ರಪಂಚದಲ್ಲಿ ಯಾವುದೂ ಶುದ್ಧವಸ್ತುವೇ ಸಿದ್ಧಿಸದೆ ಹೋಗಬೇಕಾಗುತ್ತದೆ. ಅದು ಅನಿಷ್ಟವು. ॥೪॥

ಸತ್ತಾಶೂನ್ಯಂ ತು ತುಚ್ಛಂ ಸ್ಯಾತ್ ಸತ್ತಾ ಶುದ್ಧಾ ಸ್ವತಸ್ತಥಾ ।
ಜ್ಞಪ್ತಿರೂಪಮಪಿ ಜ್ಞಾನಂ ಶುದ್ಧಮೇವ ಸ್ವತಸ್ಸದಾ ॥೫॥

ಅಶುದ್ಧಿರ್ಜಡರೂಪೇ ಹಿ ದೃಷ್ಟಾ ಸರ್ವಜನೈರಪಿ ।
ಸ್ವತಸ್ಸ್ಫುರಣರೂಪಂ ತು ಜ್ಞಾನಂ ದುಷ್ಟಂ ಭವೇದ್ಯದಿ ॥೬॥

ದುಷ್ಟಮೇವ ಭವೇತ್ಸರ್ವಂ ದುಷ್ಟಸ್ಫುರಣಸಂಗಮಾತ್ ।
ತಥಾ ಸತಿ ವಿಶುದ್ಧಂ ತು ನ ಸಿದ್ಧ್ಯತ್ಯೇವ ಕಿಂಚನ ॥೭॥

ವಸ್ತುಸ್ಫುರಣಶೂನ್ಯಂ ತು ತುಚ್ಛಮೇವ ಭವೇತ್ಸದಾ ।
ದುಷ್ಟಕಾರಣವಿಜ್ಞಾನೇ ದೋಷೋಽಸ್ತೀತಿ ವದೇದ್ಯದಿ ॥೮॥

ಅಭಿವ್ಯಂಜಕವೃತ್ತ್ಯಾ ತು ಜ್ಞಾನೇ ದೋಷೋ ನ ಚ ಸ್ವತಃ ।
ಅನ್ಯಥಾ ಸಕಲಂ ಜ್ಞಾನಂ ದುಷ್ಟಮೇವ ಸ್ವತೋ ಭವೇತ್ ॥೯॥
ಅತಸ್ಸ್ಫುರಣರೂಪಂ ತು ಜ್ಞಾನಂ ಶುದ್ಧಂ ಸದೈವ ತು ।

ದುಷ್ಟವಾದುದರಿಂದ ಸತ್ತೆಯ ಸಂಬಂಧವೇ ಇಲ್ಲದಿರಲಿ, ಎಂದರೆ ಆಗ ಎಲ್ಲವೂ ಅಸತ್ತಾದ ತುಚ್ಛವಾದ ಶಶವಿಷಾಣದಂತಾಗಬೇಕಾಗುತ್ತದೆ. ಆದುದರಿಂದ ಸತ್ತೆಯು ಸ್ವಾಭಾವಿಕವಾಗಿ ಸರ್ವದಾ ಶುದ್ಧವಾದುದು. ಹಾಗೆಯೇ ಜ್ಞಾನವೂ ಜ್ಞಪ್ತಿರೂಪವಾದುದು. ಕರಣರೂಪವಾದುದಲ್ಲ; ಜ್ಞಾನಸ್ವರೂಪವು ಸರ್ವದಾ ಸ್ವತಃ ಶುದ್ಧವಾಗಿರುತ್ತದೆ. ॥೫॥

ಚೇತನವಲ್ಲದ ಜಡರೂಪವಾದ ದೇಹಾದಿಗಳಲ್ಲಿ ಮಾತ್ರ ದೋಷವಿರುವುದನ್ನು ಎಲ್ಲ ಜನರೂ ತಿಳಿದಿದಾರೆ. ಸ್ವಪ್ರಕಾಶರೂಪವಾದ ಸ್ಫುರಣವೆಂಬ ಸ್ವರೂಪಜ್ಞಾನವೂ ದೋಷವುಳ್ಳದ್ದೆನ್ನುವುದಾದರೆ, ದುಷ್ಟವಾದ ಸ್ಫುರಣದಿಂದ ಸಂಬಂಧವನ್ನು ಪಡೆದ ಎಲ್ಲಾ ಪದಾರ್ಥಗಳೂ ದುಷ್ಟವೇ ಆಗಬೇಕಾಗುತ್ತದೆ. ಹಾಗಾದರೆ ಶುದ್ಧವಾದ ಯಾವ ವಸ್ತುವೂ ಇಲ್ಲವೆಂದಾಗಬೇಕಾಗುತ್ತದೆ. ಅದೂ ಅನಿಷ್ಟವು. ॥೬-೭॥

ವಸ್ತುವು ಜ್ಞಾನವಿಷಯವಾದರೆ ಮಾತ್ರ ಸಿದ್ಧವಾಗುತ್ತದೆ. ಹಾಗೆ ಸ್ಫುರಣ ಸಂಬಂಧವಿಲ್ಲದೆ ಹೋದರೆ ಅದು ಶಶಿವಿಷಾಣದಂತೆ ತುಚ್ಛವಾಗಬೇಕಾಗುತ್ತದೆ; ದೋಷವು ಕರಣವಾದ ಇಂದ್ರಿಯಾದಿಗಳಲ್ಲಿದೆ. ಆದ್ದರಿಂದ ಕಾರಣವಾದ ಇಂದ್ರಿಯ ದುಷ್ಟವೇ ಹೊರತು ಜ್ಞಾನಕ್ಕೆ ದೋಷಾಪತ್ತಿ ಇಲ್ಲವೆನ್ನುವುದಾದರೆ, ಜ್ಞಾನದಲ್ಲೂ

ಆನಂದಸ್ತು ಸ್ವಯಂ ಶುದ್ಧಃ ಪುರುಷೈರರ್ಥ್ಯತೇ ಯತಃ ॥೧೦॥

ಅಶುದ್ಧಃ ಸರ್ವಥಾ ಭಾವೋ ನಾರ್ಥ್ಯತೇ ಪುರುಷೈಃ ಖಲು ।
ಬ್ರಹ್ಮಾದಿಸ್ತಂಬಪರ್ಯಂತೈರರ್ಥ್ಯತೇ ಹಿ ಸುಖಂ ಸದಾ ॥೧೧॥

ವಿಷಯೇಂದ್ರಿಯಸಂಪರ್ಕಾಜ್ಜನ್ಯತೇ ಹಿ ಸುಖಂ ಸದಾ ।
ನ ದೃಶ್ಯತೇ ತತೋ ದುಷ್ಟಮಿತಿ ಚೇತ್ತನ್ನ ಸಂಗತಂ ॥೧೨॥

ಅಭಿವ್ಯಂಜಕವೃತ್ತ್ಯಾ ಹಿ ಸುಖೇ ದೋಷೋ ನ ಚ ಸ್ವತಃ ।
ಆತ್ಮರೂಪಂ ಸುಖಂ ನಿತ್ಯಂ ನೈವ ಜನ್ಮವಿನಾಶವತ್ ॥೧೩॥

ಪ್ರೇಮಾಲಂಬನತಸ್ಸ್ವಾತ್ಮಾಸುಖಮೇವ ನ ಸಂಶಯಃ ।
ಆತ್ಮನಶ್ಚ ಸುಖಸ್ಯಾಪಿ ಪ್ರೇಮಾಲಂಬನತಾ ಸದಾ ॥೧೪॥

ವಿದ್ಯತೇಽತಸ್ತಯೋರೈಕ್ಯಂ ವಸ್ತುತಸ್ತು ಸುಖಾತ್ಮನೋಃ ।
ಅತಶ್ಚಾತ್ಮತಯಾ ನಿತ್ಯಂ ಸುಖಂ ನಿರ್ದೋಷಮೇವ ಹಿ ॥೧೫॥

ಅಭಿವ್ಯಂಜಕವಾದ ವೃತ್ತಿಯಲ್ಲಿ ದೋಷಸಂಬಂಧವೇ ಹೊರತು ಸ್ವರೂಪಜ್ಞಾನದಲ್ಲಿ ದೋಷವಿಲ್ಲವೆಂದು ಉತ್ತರಹೇಳಬಹುದು. ಸ್ವರೂಪಜ್ಞಾನದಲ್ಲಿ ಸ್ವಾಭಾವಿಕವಾಗಿ ದೋಷವಿಲ್ಲವು. ಹಾಗಿಲ್ಲದಿದ್ದರೆ ಎಲ್ಲಾ ಜ್ಞಾನವೂ ಸ್ವಾಭಾವಿಕವಾಗಿ ದುಷ್ಟವೇ ಆಗಬೇಕಾದೀತು. ಆದುದರಿಂದ ಸ್ಫುರಣರೂಪವಾದ ಸ್ವರೂಪಜ್ಞಾನವು ಸರ್ವದಾ ಶುದ್ಧವೇ ಆಗಿರುತ್ತದೆ. ॥೮-೯॥

ಆನಂದರೂಪನಾದ ಆತ್ಮನನ್ನು ಎಲ್ಲಾ ಪುರುಷರೂ ಅಪೇಕ್ಷಿಸುತ್ತಾರಾದುದರಿಂದ ಆತ್ಮನು ಶುದ್ಧನೇ ಆಗಿರಬೇಕು. ಏಕೆಂದರೆ ಅಶುದ್ಧಪದಾರ್ಥವನ್ನು ವಿವೇಕಿಗಳಾದ ಪುರುಷರು ಅಪೇಕ್ಷಿಸುವುದಿಲ್ಲ. ಬ್ರಹ್ಮ ಮೊದಲಾಗಿ ಹುಲ್ಲುಗರಿಯವರೆಗಿನ ಪ್ರಾಣಿಗಳಲ್ಲಿರುವ ಎಲ್ಲಾ ಆತ್ಮರೂ ಯಾವಾಗಲೂ ಸುಖವನ್ನೇ ಅಪೇಕ್ಷಿಸುತ್ತಾರೆ. ಆತ್ಮನು ಎಲ್ಲರಿಗೂ ಪರಮ ಪ್ರೇಮಾಸ್ಪದನಾಗಿದಾನೆ. ಆದುದರಿಂದ ಆತ್ಮನು ಆನಂದರೂಪನೂ ಶುದ್ಧನೂ ಆಗಿರಬೇಕು. ॥೧೦-೧೧॥

ರೂಪಾದಿ ವಿಷಯಗಳಿಗೂ ಕಣ್ಣು ಮುಂತಾದ ಇಂದ್ರಿಯಗಳಿಗೂ ಸಂಬಂಧ ಉಂಟಾಗುವುದರಿಂದಲೇ ಯಾವಾಗಲೂ ಸುಖವು ಉಂಟಾಗುತ್ತದೆ. ಆ ಸಂಬಂಧವು ತಪ್ಪಿದ ಮೇಲೆ ಸುಖದ ಅನುಭವವೂ ಇರುವುದಿಲ್ಲ. ಆದುದರಿಂದ ಸುಖವು

ದುಷ್ಟವು, ಎಂದರೆ ಉತ್ಪತ್ತಿ, ವಿನಾಶರೂಪವಾದ ದೋಷವುಳ್ಳದ್ದು. ಎನ್ನಲಾಗದು. ಆದರೆ ಸುಖದಲ್ಲಿ ಕಾಣುವ ಈ ದೋಷವು ಸುಖವನ್ನು ಅಭಿವ್ಯಂಜನೆಮಾಡುವ ಉಪಾಧಿಯಲ್ಲಿದೆಯೇ ಹೊರತು ಸುಖದಲ್ಲಿಲ್ಲವು. ಸುಖವು ಆತ್ಮನ ಸ್ವರೂಪ ವಾದುದು, ನಿತ್ಯವಾದುದು, ಅದಕ್ಕೆ ಯಾವಾಗಲೂ ಉತ್ಪತ್ತಿನಾಶಗಳಿಲ್ಲವು. ||೧೨-೧೩||

ಆತ್ಮನು ಪರಮಪ್ರೇಮವಿಷಯನಾದುದರಿಂದ ಅವನು ಸುಖಸ್ವರೂಪನಾಗಿರ ಬೇಕು. ಇದರಲ್ಲಿ ಸಂದೇಹವಿಲ್ಲವು. ಆತ್ಮನು ಸುಖಸ್ವರೂಪನೆಂಬುದನ್ನು ಹೀಗೆ ಮನಗಾಣಬಹುದು. ಎಚ್ಚರಕಾಲದಲ್ಲಿ ನಮಗೆ ಬರುವ ಎಲ್ಲ ಸುಖಾನುಭವಗಳನ್ನು ವಿಂಗಡಿಸಿ ನೋಡಿದರೆ ನಾಲ್ಕು ಅಂಶಗಳು ಇವೆ ಎಂಬುದು ಗೊತ್ತಾಗುತ್ತದೆ. ಹೊರಗಿನ ವಿಷಯ, ಅದರ ಸ್ವರೂಪವನ್ನು ತಿಳಿಸಲು ಸಾಧನವಾದ ಇಂದ್ರಿಯ, ಆದನ್ನು ಕ್ರೋಢೀಕರಿಸಿ ಒಟ್ಟುಗೂಡಿಸಿ ಆತ್ಮನಿಗೆ ತಲಪಿಸುವ ಮನಸ್ಸು, ಇದೆಲ್ಲ ವನ್ನೂ ನೋಡಿ ತಿಳಿಯುವ ಸುಖದುಃಖಗಳನ್ನು ಅನುಭವಿಸುವ ಜೀವಾತ್ಮ, ಹೀಗೆ ವಿಷಯ, ಇಂದ್ರಿಯ, ಮನಸ್ಸು, ಆತ್ಮ ಎಂಬ ನಾಲ್ಕು ತತ್ತ್ವಗಳು ಪ್ರತಿ ಯೊಂದು ಅನುಭವದಲ್ಲಿಯೂ ಸಂಬಂಧಿಸಿರುವುದು ಎಲ್ಲರಿಗೂ ಗೊತ್ತಾಗುತ್ತದೆ. ಈ ನಾಲ್ಕರಲ್ಲಿ ಸುಖವನ್ನು ಕೊಡುವ ಸ್ವಭಾವವು ಯಾವುದರದು? ಎಂದು ವಿವೇಚಿಸಬೇಕು. ಮೊದಲನೆಯದಾಗಿ ವಿಷಯಗಳಿಂದ ಸುಖವಾಗುವಂತೆ ತೋರು ತ್ತದೆ. ಸಿನೀಮಾ ಚಿತ್ರವನ್ನು ನೋಡಿದರೆ, ಭಕ್ಷ್ಯಗಳನ್ನು ತಿಂದರೆ ಸುಖವಾಗು ತ್ತದೆ. ಆದರೂ ಇವು ಸುಖವನ್ನು ಕೊಡುವ ಸ್ವಭಾವವುಳ್ಳವು, ಎನ್ನಲಾಗದು. ಏಕೆಂದರೆ ಯಾವ ವಸ್ತುವಿನ ಧರ್ಮವು ದೇಶಕಾಲವ್ಯಕ್ತಿಗಳು ಬದಲಾಯಿಸಿದರೂ ವ್ಯತ್ಯಾಸವನ್ನು ಪಡೆಯುವುದಿಲ್ಲವೋ ಅಂತಹ ಧರ್ಮವನ್ನೇ ಆ ವಸ್ತುವಿನ ಸ್ವಭಾವವೆನ್ನುವುದು ಸರಿಯಾದುದು. ಸೂರ್ಯನು ಎಲ್ಲ ದೇಶ ಕಾಲಗಳಲ್ಲೂ ಎಲ್ಲ ಜನರಿಗೂ ಶಾಖ ಬೆಳಕುಗಳನ್ನು ಕೊಡುವುದರಿಂದ ಶಾಖಬೆಳಕುಗಳು ಸೂರ್ಯನ ಸ್ವಭಾವವೆನ್ನಬಹುದು. ಆದರೆ ಸಿನೀಮಾಚಿತ್ರವನ್ನು ಸ್ವಲ್ಪ ಹೊತ್ತು ನೋಡಿದ ಮೇಲೆ ಸಾಕೆನ್ನಿಸುತ್ತದೆ. ಇನ್ನೂ ಸ್ವಲ್ಪ ಹೆಚ್ಚಾಗಿ ನೋಡಿದರೆ ಸುಖವಾಗುವುದರ ಬದಲು ದುಃಖವಾಗುತ್ತದೆ. ಕಡೆಗೆ ಕಣ್ಣೇ ಕುರುಡಾಗುವ ಸಂಭವವೂ ಉಂಟು. ಹಾಗೆಯೇ ಭಕ್ಷ್ಯಗಳು ಊಟಮಾಡಿದವರಿಗೆ ಬೇಡವಾಗುತ್ತವೆ. ಹೆಚ್ಚಾಗಿ ತಿಂದರೆ ಅಜೀರ್ಣದುಃಖವಾಗುತ್ತದೆ. ಖಾಯಿಲೆಯಲ್ಲಿರುವವರಿಗೆ ಭಕ್ಷ್ಯದಲ್ಲಿ ದ್ವೇಷ ಅಸಹ್ಯ ಭಾವಗಳುಂಟಾಗುತ್ತವೆ. ಇದರಂತೆಯೇ ಇತರ ವಿಷಯಗಳಲ್ಲೂ ಊಹಿಸಬಹುದು. ಆದುದರಿಂದ ವಿಷಯಗಳು ಸುಖಕರಸ್ವಭಾವದವುಗಳಲ್ಲವೆಂದು ಗೊತ್ತಾಗುತ್ತದೆ.

ಅವುಗಳಿಂದ ಸುಖವಾದಾಗ ಆ ಸುಖವು ವಿಷಯದ್ದಲ್ಲವು. ಈ ನಾಲ್ಕರಲ್ಲಿ ಇನ್ನೊಂದರದ್ದೆಂದೂ ಊಹಿಸುವುದೇ ಸರಿ ಎಂದು ಗೊತ್ತಾಗುತ್ತದೆ.

ಆಮೇಲೆ ಎರಡನೆಯದಾದ ಇಂದ್ರಿಯಗಳು ಸುಖಕರಸ್ವಭಾವದವೇ? ಎಂದು ವಿಮರ್ಶಿಸಬೇಕು. ಸುಖವು ಯಾವ ಇಂದ್ರಿಯದ ಸ್ವಭಾವವು? ಎಂದು ಕೇಳಿದರೆ ಯಾವುದೊಂದರ ಸ್ವಭಾವವೂ ಅಲ್ಲವೆನ್ನಬೇಕು. ಏಕೆಂದರೆ ಒಂದೊಂದು ಇಂದ್ರಿಯವಿಲ್ಲದವರಿಗೂ ಸುಖಾನುಭವವು ತಪ್ಪದೆ ಆಗುತ್ತದೆ. ಅದು ಎಲ್ಲ ಇಂದ್ರಿಯದ ಸ್ವಭಾವವೆಂದೂ ಹೇಳಲಾಗದು. ಏಕೆಂದರೆ ಯಾವ ಇಂದ್ರಿಯಗಳೂ ಕೆಲಸಮಾಡದೆ ಇರುವ ಸ್ವಪ್ನಕಾಲದಲ್ಲಿ ಸುಖಾನುಭವವಾಗುತ್ತದೆ. ಆದುದರಿಂದ ಸುಖವು ಇಂದ್ರಿಯಗಳ ಸ್ವಭಾವವಲ್ಲವೆಂದು ಗೊತ್ತಾಗುತ್ತದೆ.

ಹಾಗೆಯೇ ಮೂರನೆಯದಾದ ಮನಸ್ಸು ಸುಖಕರಸ್ವಭಾವವುಳ್ಳದೇ? ಎಂದು ವಿಚಾರಮಾಡಿದರೆ ಅದು ಒಂದು ಸಮಯದಲ್ಲಿ ಸುಖ ಉತ್ಸಾಹಗಳುಳ್ಳದ್ದಾಗಿಯೂ, ಮತ್ತೊಂದು ಕಾಲದಲ್ಲಿ ದುಃಖ ಬೇಸರಗಳುಳ್ಳದಾಗಿಯೂ, ಇರುವಂತೆ ತೋರುತ್ತದೆ. ಇಂದ್ರಿಯಗಳ ಮೂಲಕವಾಗಿ ವಿಷಯಗಳ ಸ್ವರೂಪವನ್ನು ಮನಸ್ಸು ಗ್ರಹಿಸಿ, ಅದರ ತಿಳಿವಳಿಕೆಯನ್ನು ಆತ್ಮನಿಗೆ ತಲಪಿಸುತ್ತದೆ. ಇದೊಂದು ರೀತಿಯಲ್ಲಿ ಅಂಚೆಯ ಕಚೇರಿಯಂತೆ ಮನಸ್ಸು ಇಂದ್ರಿಯಗಳು ಕೊಟ್ಟದ್ದನ್ನು ಆತ್ಮನಿಗೆ ಕೊಡುತ್ತಿರುತ್ತದೆ. ಈ ಕೆಲಸವನ್ನು ಮಾಡಿದಹಾಗೆಲ್ಲ ಅದು ಬಳಲುತ್ತದೆ. ತುಂಬ ಬಳಲಿದಾಗ ವಿಷಯವನ್ನು ಗ್ರಹಿಸಲೂ, ತತ್ವವನ್ನು ವಿಮರ್ಶಿಸಲೂ, ಅಶಕ್ತವಾಗುತ್ತದೆ. ಆಗ ನಿದ್ರೆಯನ್ನು ವಿಶ್ರಾಂತಿಯನ್ನು ಪಡೆಯಲಪೇಕ್ಷಿಸುತ್ತದೆ. ಇದರಿಂದ ಸುಖವು ಇದರ ಸ್ವಭಾವವಲ್ಲವೆಂದೂ, ಇದೂ ಬದಲಾಯಿಸುತ್ತಿರುವ ಸ್ವಭಾವವುಳ್ಳದೆಂದೂ ಗೊತ್ತಾಗುತ್ತದೆ.

ಈಗ ಕಡೆಯದಾದರೂ ಮುಖ್ಯತಮವಾದ ಆತ್ಮವು ಸುಖವನ್ನು ಕೊಡುವ ಸ್ವಭಾವ ಉಳ್ಳದ್ದೇ? ಎಂದು ವಿಚಾರಿಸಬೇಕು. ಎಚ್ಚರದ ಕಾಲದಲ್ಲಿ ವಿಷಯ, ಇಂದ್ರಿಯ, ಮನಸ್ಸು, ಆತ್ಮ ಈ ನಾಲ್ಕೂ ಕೆಲಸಮಾಡುವುದು ಗೊತ್ತಾಗುತ್ತದೆ. ಆದರೆ ಸ್ವಪ್ನ ಅಥವಾ ಕನಸಿನಲ್ಲಿ ವಿಷಯ, ಇಂದ್ರಿಯಗಳು ಕೆಲಸಮಾಡದೆ ಇದ್ದರೂ, ಮನಸ್ಸು, ಆತ್ಮ ಈ ಎರಡು ಮಾತ್ರ ವ್ಯಾಪಾರಮಾಡುತ್ತಿರುವುದನ್ನು ತಿಳಿಯುತ್ತೇವೆ. ಆದರೆ ನಿದ್ರೆಯಲ್ಲಿ, ಕನಸುಗಳಿಲ್ಲದ ಗಾಢನಿದ್ರೆಯಲ್ಲಿ, ಮನಸ್ಸೂ ಕೆಲಸಮಾಡದೆ ವಿಶ್ರಾಂತವಾಗುತ್ತದೆ. ಆಗಲೂ ಸುಖವು, ಅತ್ಯುತ್ತಮವಾದ ಸುಖವು, ನಮಗೆ

ಅನುಭವಕ್ಕೆ ಬರುತ್ತದೆ. ಅಲ್ಲಿ ಆತ್ಮನೊಬ್ಬನೇ ಇರುವುದರಿಂದ ಸುಖವು, ಅಥವಾ ಆನಂದವು ಆತ್ಮಸ್ವರೂಪವಾದುದೆಂದು ತಿಳಿಯಬಹುದು. ಹೀಗೆ ನಮಗೆ ಬರುವ ಅನುಭವಗಳನ್ನು ವಿಂಗಡಿಸಿ ವಿಮರ್ಶಿಸಿದರೆ, ಮತ್ತು ಮಾನವನಿಗೆ ಉಂಟಾಗುವ, ಎಚ್ಚರ, ಕನಸು, ನಿದ್ದೆ, ಎಂಬ ಮೂರು ಅವಸ್ಥೆಗಳಲ್ಲೂ ದೊರೆಯುವ, ಎಲ್ಲ ಅನುಭವಗಳ ಒಟ್ಟಿನ ಅಥವಾ ಪೂರ್ಣದೃಷ್ಟಿಯಿಂದ ಪರ್ಯಾಲೋಚಿಸಿದರೆ, ಸುಖವು ಆತ್ಮನ ಸ್ವರೂಪದ ಅನುಭವದಿಂದ ಉಂಟಾಗುತ್ತದೆ. ಅಲ್ಲದೆ ಎಚ್ಚರ, ಕನಸುಗಳಲ್ಲಿ ಅನುಭವಕ್ಕೆ ಬರುವ ಸುಖವು ವಿಷಯಗಳನ್ನು ಅವಲಂಬಿಸಿರುತ್ತಾ, ವೃತ್ತಿರೂಪವಾಗಿರುತ್ತಾ, ಅಲ್ಪವೂ, ಜನ್ಯವೂ, ಔಪಾಧಿಕವೂ, ತಾರತಮ್ಯ ಉಳ್ಳದೂ, ದೋಷಯುಕ್ತವೂ, ನಶ್ವರವೂ ಆಗಿರುತ್ತಾ, ಆತ್ಮಸುಖಾಭಾಸಮಾತ್ರವಾಗಿರುತ್ತದೆ. ಎಂಬುದನ್ನು ಗಮನಿಸಬೇಕು. ನಿದ್ರಾಕಾಲದ ಸುಖವು ವೃತ್ತಿರೂಪವಾಗಿರದೆ ಆತ್ಮಸ್ವರೂಪ ಸುಖವಾಗಿರುತ್ತದೆ. ನಿದ್ದೆಯಲ್ಲಿ ಅನುಭವಗೋಚರವಾಗುವ ಸುಖವು ದುಃಖಮಿಶ್ರವಾದುದೂ ಅಲ್ಲವು. ಎಚ್ಚರ, ಕನಸುಗಳಲ್ಲಿನ ಸುಖವು ದುಃಖಮಿಶ್ರವಾದುದು. ಅಲ್ಲದೆ ಎಚ್ಚರದಲ್ಲಿ ನಮ್ಮ ದೇಹ, ಇಂದ್ರಿಯಗಳು, ಮನಸ್ಸು, ಇವೆಲ್ಲವೂ ದುಡಿದು, ಬಳಲಿ, ಬೆಂಡಾಗಿ, ಆಗ ಬಂದ ಸುಖಗಳಲ್ಲಿಯೂ ಸಾಕೆಂಬ ಬುದ್ಧಿಯನ್ನು ಪಡೆದು, ವಿಶ್ರಾಂತಿಸುಖವನ್ನು ಪಡೆಯಲು, ನಿದ್ದೆಯನ್ನು ಹೊಂದಲು, ಆಶಿಸುತ್ತೇವೆ. ನಿದ್ರಾಸುಖವನ್ನು ಅನುಭವಿಸುತ್ತಿರುವಾಗ, ಆಮೇಲೂ, ಅದರಲ್ಲಿ ಸಾಕು ಎಂಬ ಬುದ್ಧಿಯು ಯಾರಿಗೂ ಯಾವಾಗಲೂ ಉಂಟಾಗುವುದಿಲ್ಲವು. ಎಚ್ಚರದ ದುಡಿಮೆಗೆ ಪುನಃ ಹೋಗಬೇಕೆಂದೂ ಆಶೆಯುಂಟಾಗುವುದಿಲ್ಲವು. ಆದುದರಿಂದ ನಿದ್ರಾಸುಖವು ಆತ್ಮನಂತೆ ನಿತ್ಯವಾದುದೂ, ಶುದ್ಧವಾದುದೂ, ಉತ್ತಮವಾದ ಆನಂದಸ್ವರೂಪವಾದುದೆಂಬುದನ್ನು ಗಮನಿಸಬೇಕು.

ಹೀಗಿದ್ದರೂ ಎಲ್ಲರೂ ನಿದ್ದೆಯನ್ನು ಬಿಟ್ಟು ಎಚ್ಚರಕ್ಕೆ ತಪ್ಪದೆ ಬರುತ್ತಾ, ದುಡಿಮೆಯಲ್ಲಿ ಮುಂಚಿನಂತೆಯೇ ತೊಡಗುತ್ತಾರೆ. ಇದಕ್ಕೆ ಕಾರಣವು ಏನೆಂದರೆ, ಸರ್ವಸಾಧಾರಣ ಕಾರಣವಾದ ಮಾಯೆಯೂ, ಪ್ರತಿ ವ್ಯಕ್ತಿಯ ಸ್ಥಿತಿಗತಿಗಳಿಗೆ ಕಾರಣ ವಿಶೇಷವಾದ, ಮಾಯೆಯ ಅಂಶವಾದ, ಅವಿದ್ಯೆಯೂ ಇದಕ್ಕೆ ಕಾರಣವೆಂದು ತಿಳಿಯಬೇಕು. ಮಾಯೆಯು ಈಶ್ವರನಿಗೆ ಉಪಾಧಿಯಾಗಿರುತ್ತಾ ಅವನಿಗೆ ಅಧೀನವಾಗಿರುತ್ತದೆ. ಅವಿದ್ಯೆಯು ಪ್ರತಿಯೊಬ್ಬ ಜೀವಾತ್ಮನಿಗೂ ಉಪಾಧಿಯಾಗಿರುತ್ತಾ, ಅವನು ಮಾಡಿರುವ ಕರ್ಮಗಳ, ಆಚರಿಸಿರುವ ಧರ್ಮಗಳ, ಪರಿಣಾಮವಾಗಿರುತ್ತಾ, ಫಲಕಾರಿಯಾಗಿರುತ್ತದೆ. ಅದರ ಫಲವಾಗಿ ಜೀವನು ಎಚ್ಚರ, ಕನಸು, ನಿದ್ರೆಗಳನ್ನೂ,

ಅತಸ್ಸತ್ಯಚಿದಾನಂದಃ ಸ್ವತಶ್ಶುದ್ಧೋ ನ ಸಂಶಯಃ ।
ಸತ್ಯಾದಿಲಕ್ಷಣಂ ಚಾತ್ಮದ್ರವ್ಯಂ ಶುದ್ಧಂ ತತಸ್ಸ್ವತಃ ॥೧೬॥

ಅಜ್ಞಾನೋಪಾಧಿಸಂಪರ್ಕಾದಶುದ್ಧಮಿವ ಭಾತಿ ತತ್ ।
ವಿಶುದ್ಧಿಃ ಪರಮಾ ತಸ್ಯ ಜ್ಞಾನಾದೇವ ನ ಸಂಶಯಃ ॥೧೭॥

ಸ್ವತಶ್ಶುದ್ಧಸ್ಯ ಚಾಜ್ಞಾನಾದಶುದ್ಧಿಃ ಸ್ವಾತ್ಮವಸ್ತುನಃ ।
ಅಜ್ಞಾನಸ್ಯ ನಿವೃತ್ತ್ಯೈವ ಶುದ್ಧಿಸ್ಸ್ವಾಭಾವಿಕೀ ಭವೇತ್ ॥೧೮॥

ಹುಡುಗತನ, ಪ್ರಾಯ, ಮುಪ್ಪುಗಳನ್ನೂ, ಹುಟ್ಟುಸಾವುಗಳನ್ನೂ, ಜನ್ಮಾಂತರಗಳನ್ನೂ ಪಡೆಯುತ್ತಿರುತ್ತಾನೆ. ಇನ್ನೂ ಸೂಕ್ಷ್ಮವಾಗಿ ವಿಮರ್ಶಿಸಿದರೆ ಬ್ರಹ್ಮತತ್ವದಲ್ಲಿ ಆಪೇಕ್ಷಿಕವಾದ ಸೃಷ್ಟಿಯ ಆರಂಭದಲ್ಲಿ ಸೃಜ್ಯಮಾನರಾದ ಪ್ರಾಣಿಗಳಿಗೆ ಅವರವರ ಕರ್ಮಫಲಗಳನ್ನು ಕೊಡುವುದಕ್ಕೋಸ್ಕರ ಉಂಟಾಗುವ ಸ್ಪಂದ, ಮಾಯಾ, ಆದಿಶಕ್ತಿ, ಪರಾಶಕ್ತಿ, ದೇವೀ, ಅವಿದ್ಯಾ, ಕಾಮ, ಕರ್ಮ, ದೈವ, ಧರ್ಮ ಇವೆಲ್ಲವೂ ಒಂದೇ ತತ್ವದ ರೂಪಾಂತರಗಳಾಗಿವೆ ಎಂಬುದನ್ನೂ ತಿಳಿಯಬಹುದು. ಹೀಗೆ ಆತ್ಮನೂ ಸುಖವೂ ಯಾವಾಗಲೂ ಪರಮಪ್ರೇಮಕ್ಕೆ ಆಲಂಬನವಾಗಿಯೇ ಇರುತ್ತವೆ. ಮತ್ತು ಸುಖರೂಪವಾದ ಅವೆರಡಕ್ಕೂ ಅಭೇದವಿದೆ. ಹೀಗೆ ಸುಖವು ಆತ್ಮಸ್ವರೂಪವಾದುದರಿಂದ ಸುಖವು ನಿತ್ಯವೂ ದೋಷವಿಲ್ಲದ್ದೂ ಆಗಿರುತ್ತದೆ. ||೧೪-೧೫||

ಈ ಕಾರಣದಿಂದ ಸಚ್ಚಿದಾನಂದರೂಪವಾದುದು ಸ್ವಭಾವದಿಂದ ಶುದ್ಧಸ್ವರೂಪವಾದುದೇ ಆಗಿರುತ್ತದೆ. ಇದರಲ್ಲಿ ಸಂದೇಹವಿಲ್ಲವು. ಆತ್ಮದ್ರವ್ಯವೂ, ಆತ್ಮನೆಂಬ ವಸ್ತುವೂ, ಸಚ್ಚಿದಾನಂದರೂಪವಾದುದು. ಆದುದರಿಂದ ಸ್ವಭಾವದಿಂದಲೇ ಶುದ್ಧವಾದುದು. ||೧೬||

ಹೀಗಿದ್ದರೂ ಆತ್ಮನು ಅಜ್ಞಾನವೆಂಬ ಉಪಾಧಿಯ ಸಂಬಂಧದಿಂದ ಅಶುದ್ಧವಾಗಿರುವ ಹಾಗೆ ತೋರುತ್ತಾನೆ. ಅಂಥ ಉಪಾಧಿಯುಳ್ಳ ಆತ್ಮನಿಗೆ ಜ್ಞಾನದಿಂದಲೇ ಶುದ್ಧಿಯು ಉತ್ತಮವಾದುದು ಆಗುತ್ತದೆ. ಇದರಲ್ಲಿ ಸಂದೇಹವಿಲ್ಲವು. ||೧೭||

ಸ್ವಾಭಾವಿಕವಾಗಿ ಪಾರಮಾರ್ಥಿಕವಾಗಿ ಶುದ್ಧವಾದ ಆತ್ಮವಸ್ತುವಿಗೆ ಅಜ್ಞಾನದಿಂದಲೇ ಅಶುದ್ಧಿಯು ತೋರುತ್ತಿರುತ್ತದೆ. ಆದುದರಿಂದ ಆ ಅಜ್ಞಾನದ ನಿವೃತ್ತಿಯಿಂದಲೇ ಸ್ವಾಭಾವಿಕವಾದ ಶುದ್ಧಿಯು ಉಂಟಾದಹಾಗಾಗುತ್ತದೆ. ||೧೮||

ಕರ್ಮಣಾ ಶುದ್ಧಿರುತ್ಪನ್ನಾ ಯದಿ ಸಾ ತಸ್ಯ ನಶ್ಯತಿ ।
ಕರ್ಮಸಾಧ್ಯಮನಿತ್ಯಂ ಹಿ ನ ನಿತ್ಯಂ ಸಮ್ಮತಂ ಹಿ ತತ್ ॥೧೯॥

ಸಚ್ಚಿದಾನಂದರೂಪಾತ್ಮಾ ನಿತ್ಯಶುದ್ಧಸ್ಸ್ವಯಂ ಸ್ವತಃ ।
ಅಜ್ಞಾನಾಜ್ಜೀವತಾ ತಸ್ಯ ನೈವ ಸ್ವಾಭಾವಿಕೀ ಸದಾ ॥೨೦॥

ಅತೋ ಜೀವೇಶ್ವರೈಕತ್ವಜ್ಞಾನಾದೇವಾತ್ಮವಸ್ತುನಃ ।
ವಿಶುದ್ಧಿಃ ಪರಮಾ ಪ್ರೋಕ್ತಾ ಕರ್ಮಣಾ ನ ಕಥಂ(ದಾ) ಚ ನ ॥೨೧॥

ಅಜ್ಞಾನೇನಾವೃತೋ ಜೀವೋ ವ್ಯವಹಾರೇ ತು ಕರ್ಮಣಾ ।
ವೇದೋದಿತೇನ ಶುದ್ಧಿಸ್ಸ್ಯಾತ್ ಜ್ಞಾನಾಚ್ಛುದ್ಧಿಃ ಪರಾಽಸ್ಯ ತು ॥೨೨॥

ಹಾಗಲ್ಲದೆ ಆ ಆತ್ಮವಸ್ತುವಿಗೆ ಕರ್ಮದಿಂದ ಶುದ್ಧಿಯು ಉಂಟಾಗುತ್ತದೆ ಎನ್ನುವುದಾದರೆ ಅಂಥ ಜನ್ಯವಾದ ಶುದ್ಧಿಗೆ ನಾಶವೂ ಆಗಲೇಬೇಕು. ಏಕೆಂದರೆ ಕರ್ಮಜನ್ಯವಾದುದೆಲ್ಲವೂ ಅನಿತ್ಯವಾದುದೆಂದೂ, ನಿತ್ಯವಾದುದಲ್ಲವೆಂದೂ ಎಲ್ಲರೂ ಒಪ್ಪಿರುವ, ಮನಗಂಡೂ ಇರುವ ಸಿದ್ಧಾಂತವಾಗಿದೆ. ||೧೯||

ಆದುದರಿಂದ ಸಚ್ಚಿದಾನಂದರೂಪನಾದ ಆತ್ಮನು ಸ್ವಾಭಾವಿಕವಾಗಿ ಯಾವಾಗಲೂ ಶುದ್ಧನಾದವನು. ಅಂಥವನಿಗೆ ಜೀವತ್ವವು ಅಜ್ಞಾನದಿಂದಲೇ ತೋರುತ್ತಿದೆ. ಈ ತೋರುತ್ತಿರುವ ಜೀವತ್ವವು ಯಾವಾಗಲೂ ನಿತ್ಯವಾದುದಲ್ಲವು. ||೨೦||

ಈ ಕಾರಣದಿಂದ ಆತ್ಮವಸ್ತುವಿಗೆ ಜೀವನಿಗೂ ಈಶ್ವರನಿಗೂ ಇರುವ ಅಭೇದದ ಜ್ಞಾನದಿಂದಲೇ ಉತ್ತಮವಾದ ಶುದ್ಧಿಯು, ದೇಹಾಭಿಮಾನ, ಉತ್ಪತ್ತಿ ವಿನಾಶರೂಪವಾದ ದೋಷವಿಲ್ಲದಿರುವಿಕೆಯು, ಸ್ವಾಭಾವಿಕವಾದುದರಿಂದ ನಿತ್ಯವಾದುದು. ಅದು ಹೇಗೂ ಕರ್ಮದಿಂದ ಉಂಟಾಗತಕ್ಕದ್ದಲ್ಲವು. ||೨೧||

ಜೀವನು ಬ್ರಹ್ಮಾತ್ಮೈಕ್ಯದ ತಿಳಿವಳಿಕೆಯಿಲ್ಲದಿರುವಿಕೆ ಎಂಬ ಅಜ್ಞಾನದಿಂದ ಆವರಿಸಲ್ಪಟ್ಟಿದಾನೆ. ಈ ವ್ಯಾವಹಾರಿಕವಾದ ಪ್ರಪಂಚದಲ್ಲಿ ಅವನಿಗೆ ವೇದೋಕ್ತವಾದ ಕರ್ಮಾನುಷ್ಠಾನದಿಂದ ಪಾಪನಿವೃತ್ತಿರೂಪವಾದ ಚಿತ್ತಶುದ್ಧಿಯು ಆಪೇಕ್ಷಿಕವಾದುದು ಆಗುತ್ತದೆ. ಆದರೆ ಪರಮವಾದ ಸ್ವಾಭಾವಿಕವಾದ ನಿತ್ಯವಾದ ಶುದ್ಧಿಯು ಶ್ರುತ್ಯುಕ್ತವಾದ ಬ್ರಹ್ಮಾತ್ಮೈಕ್ಯಜ್ಞಾನದಿಂದಲೇ ಇವನಿಗೆ ಆಗಬೇಕಾಗಿದೆ. ||೨೨||

ಅನಾತ್ಮರೂಪಂ ಯದ್ದ್ರವ್ಯಂ ಅಶುದ್ಧಂ ತತ್ಸ್ವಭಾವತಃ ।
ತಥಾಽಪಿ ವ್ಯವಹಾರೇ ತು ವಿಶುದ್ಧಿಸ್ತಸ್ಯ ಕೀರ್ತಿತಾ ॥೨೩॥

ಆಧ್ಯಾತ್ಮಿಕಾದಿಭೇದೇನ ದ್ವಿಧಾಽನಾತ್ಮಾ ವ್ಯವಸ್ಥಿತಃ ।
ದೇಹೇಂದ್ರಿಯಾದ್ಯಹಂಬುದ್ಧಿಗ್ರಾಹ್ಯಮಾಧ್ಯಾತ್ಮಿಕಂ ಭವೇತ್ ॥೨೪॥

ಪೃಥಿವ್ಯಾದೀನಿ ಭೂತಾನಿ ಭೌತಿಕಾನಿ ತಥೈವ ಚ ।
ಶಬ್ದಸ್ಪರ್ಶಾದಯಃ ಪ್ರೋಕ್ತಾ ಆಧಿಭೌತಿಕಸಂಜ್ಞಿತಾಃ ॥೨೫॥

ವೇದೋದಿತಾಚ್ಚ ಸಂಸ್ಕಾರಾತ್ ಶಿವಭಾವನಯಾಽಪಿ ಚ ।
ತಥಾ ಹಿಂಸಾದಿರಾಹಿತ್ಯಾದ್ದೇಹಶುದ್ಧಿರ್ದ್ವಿಜಾ ಭವೇತ್ ॥೨೬॥

ಇಂದ್ರಿಯಾಣಾಮಧಿಷ್ಠಾತೃದೇವತಾಸ್ಮರಣಾದಪಿ ।
ಶಿವಭಾವನಯಾ ಚಾಪಿ ವಿಶುದ್ಧಿರ್ದ್ವಿಜಪುಂಗವಾಃ ॥೨೭॥

ಆತ್ಮವಲ್ಲದ ಪದಾರ್ಥವೆಲ್ಲವೂ ಜಡವಾಗಿ ಅಜ್ಞಾನಕಲ್ಪಿತವಾಗಿ ಅಶುದ್ಧವಾದುದಾಗಿರುತ್ತದೆ. ಸ್ವಾಭಾವಿಕವಾಗಿ ಅಶುದ್ಧವಾದ ಪದಾರ್ಥಗಳಿಗೆ ಕರ್ಮಮುಂತಾದ್ದರಿಂದ ಶುದ್ಧಿಯು ಹೇಳಲ್ಪಟ್ಟಿದೆ. ಹಾಗೆಯೇ ಸ್ವಾಭಾವಿಕವಾಗಿ ಶುದ್ಧನಾದರೂ ಆತ್ಮನಿಗೆ ವ್ಯಾವಹಾರಿಕವಾಗಿ ಕರ್ಮಗಳಿಂದ ಶುದ್ಧಿಯುಂಟಾಗುವಂತೆ ಹೇಳಿದೆ. ॥೨೩॥

ಈ ಅನಾತ್ಮದ್ರವ್ಯವು ಆಧ್ಯಾತ್ಮಿಕವೆಂದೂ ಆಧಿಭೌತಿಕವೆಂದೂ ಎರಡು ಬಗೆಯಾಗಿ ಗೊತ್ತಾಗಿದೆ. ಅದರಲ್ಲಿ ಆಧ್ಯಾತ್ಮಿಕವೆಂಬುದು ದೇಹ, ಇಂದ್ರಿಯ, ಪ್ರಾಣಮುಂತಾದುವಲ್ಲಿ ನಾನು ಎಂಬ ಭ್ರಾಂತಿರೂಪವಾದುದು. ಪಂಚಭೂತತನ್ಮಾತ್ರೆಗಳಿಂದ ಏರ್ಪಟ್ಟಿರುವ ಸ್ಥೂಲಭೂತಗಳೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೂ ಆಧಿಭೌತಿಕವಾದ ಅನಾತ್ಮದ್ರವ್ಯವೆನಿಸುತ್ತವೆ. ॥೨೪-೨೫॥

ವೇದಗಳಲ್ಲಿ ವಿಹಿತವಾಗಿರುವ ಜಾತಕರ್ಮಾದಿ ಸಂಸ್ಕಾರಗಳಿಂದಲೂ, ಪರಶಿವಮೂರ್ತಿಯ ಧ್ಯಾನದಿಂದಲೂ, ಹಿಂಸೆ ಮುಂತಾದ ನಿಷಿದ್ಧಕರ್ಮಗಳನ್ನು ಬಿಡುವುದರಿಂದಲೂ, ಓ ಬ್ರಾಹ್ಮಣರಾ, ದೇಹಕ್ಕೆ ಶುದ್ಧಿಯುಂಟಾಗುತ್ತದೆ. ॥೨೬॥

ಇಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ಧ್ಯಾನಮಾಡುವುದರಿಂದಲೂ, ಪರಶಿವಮೂರ್ತಿಧ್ಯಾನದಿಂದಲೂ, ಓ ಬ್ರಾಹ್ಮಣಶ್ರೇಷ್ಠರಾ, ವಿಶುದ್ಧಿಯುಂಟಾಗುತ್ತದೆ. ಪ್ರಾಣಾಯಾಮಾದಿಗಳಿಗೆ ಅಧಿಷ್ಠಾತೃವಾದ ಅಭಿಮಾನಿದೇವತೆ

ಪ್ರಾಣಾಯಾಮಾದ್ಯಧಿಷ್ಠಾತೃದೇವತಾಸ್ಮರಣಾದಪಿ ।
ಶಿವಭಾವನಯಾ ಶುದ್ಧಿಃ ಭವೇತ್ ಪ್ರಾಣಸ್ಯ ಸುವ್ರತಾಃ ॥೨೮॥

ನಿಷಿದ್ಧಚಿಂತನಾಽಭಾವಾತ್ ಶಿವಭಾವನಯಾಽಪಿ ಚ ।
ಮನ ಆದೇಸ್ತು ವಿಪ್ರೇಂದ್ರಾ ಭವೇಚ್ಛುದ್ಧಿರ್ನ ಸಂಶಯಃ ॥೨೯॥

ಸಮಾಧೌ ವಿಲಯಶ್ಚಾಪಿ ವಿಶುದ್ಧಿಃ ಪರಿಕೀರ್ತಿತಾ ।
ದೇಹಾದೇಸ್ತು ವಿಶುದ್ಧ್ಯಾತ್ಮಾ ಶುದ್ಧೋಽಹಮಿತಿ ವಿಭ್ರಮಾತ್ ॥೩೦॥

ಸ್ವಾತ್ಮಾನಂ ಮನ್ಯತೇ ಶುದ್ಧಂ ಸಾ ಶುದ್ಧಿರ್ವ್ಯಾವಹಾರಿಕೀ ।
ಅಶುದ್ಧ್ಯಾಽಶುದ್ಧವದ್ಭಾತಿ ಶರೀರಾದೇಸ್ತು ಚೇತನಃ ॥೩೧॥

ಗಳನ್ನು ಕುರಿತು (೧೪, ೨೨)ರಲ್ಲಿ ಹೇಳಿರುವಂತೆ ಧ್ಯಾನಮಾಡುವುದರಿಂದಲೂ ಪರಶಿವ ಮೂರ್ತಿ ಧ್ಯಾನದಿಂದಲೂ ಪ್ರಾಣಕ್ಕೆ ಶುದ್ಧಿಯುಂಟಾಗುತ್ತದೆ. ॥೨೭-೨೮॥

ವೇದಶಾಸ್ತ್ರಗಳಲ್ಲಿ ನಿಷೇಧಿಸಲ್ಪಟ್ಟಿರುವವುಗಳ ಚಿಂತನೆಯೇ ಇಲ್ಲದಂತೆ ಮಾಡಿಕೊಳ್ಳುವುದರಿಂದಲೂ, ಪರಮಶಿವನ ಮೂರ್ತಿಧ್ಯಾನದಿಂದಲೂ, ಓ ಉತ್ತಮ ಬ್ರಾಹ್ಮಣರಾ, ಮನಸ್ಸು ಮುಂತಾದವುಗಳಿಂದ ಸಮಾಧಿಯನ್ನು ಪಡೆದು ಮನಸ್ಸೇ ಮುಂತಾದ ಅಂತಃಕರಣಗಳಿಗೂ ಶುದ್ಧಿಯು ಉಂಟಾಗುತ್ತದೆ. ಇದರಲ್ಲಿ ಸಂದೇಹ ವಿಲ್ಲವು. ಸಮಾಧಿಯಲ್ಲಿ ಸಿದ್ಧಿಯನ್ನು ಪಡೆದಿರುವಾಗ ವಿಷಯ ಇಂದ್ರಿಯ ಮನೋ ಬುದ್ಧಿಗಳಿಗೆ ಕ್ರಮವಾಗಿ ಆಗುವ ವಿಲಯವೂ ಶುದ್ಧಿ ಎನಿಸುತ್ತದೆ. ॥೨೯॥

ದೇಹ ಇಂದ್ರಿಯ ಮುಂತಾದುವುಗಳಿಗೆ ಶುದ್ಧಿಯಾಗುವುದರಿಂದ ಆತ್ಮನು ತಾನೇ ಶುದ್ಧನಾದನೆಂದು ಭ್ರಾಂತಿಯಿಂದ ತಿಳಿಯುತ್ತಾನೆ. ಈ ಶುದ್ಧಿಯು ವ್ಯಾವ ಹಾರಿಕವಾದ ಶುದ್ಧಿ ಎನಿಸುತ್ತದೆ. ॥೩೦॥

ದೇಹ ಮುಂತಾದುದರ ಅಶುದ್ಧಿಯಿಂದ ಆತ್ಮನೂ ತಾನೂ ಅಶುದ್ಧನೆಂದು ಭ್ರಾಂತಿಪಡುತ್ತಾನೆ. ಇದು ವ್ಯಾವಹಾರಿಕವಾದುದೇ ಹೊರತು ಪಾರಮಾರ್ಥಿಕವಾದು ದಲ್ಲವು. ಹೇಗೆಂದರೆ ಚಂದ್ರನು ನಿಜವಾಗಿ ಚಲಿಸದೆ ಇದ್ದರೂ ಜಲದಲ್ಲಿ ಪ್ರತಿಬಿಂಬಿ ಸಿರುವಾಗ ಉಪಾಧಿಯಾದ ಜಲದಲ್ಲಿ ಚಲನೆಯಿಂದ ಚಂದ್ರನೇ ಚಲಿಸುತ್ತಿರುವಂತೆ ಭ್ರಾಂತಿಯುಂಟಾಗುತ್ತದೆ. ಹಾಗೆ ಆತ್ಮನಿಗೆ ಉಪಾಧಿಯಾಗಿರುವ ಈ ದೇಹಾದಿಗಳ ಅಶುದ್ಧಿಯಿಂದ, ಸ್ವಾಭಾವಿಕವಾಗಿ ಶುದ್ಧನಾದರೂ ಆತ್ಮನು, ಅಶುದ್ಧನಾದಂತೆ ಭ್ರಾಂತಿ ಯಿಂದ ತಿಳಿಯುತ್ತಾನೆ. ॥೩೧॥

ವ್ಯವಹಾರೇ ಯಥಾ ಚಂದ್ರೋ ನಿಶ್ಚಲೋಽಪಿ ಚಲತ್ಯಪಿ ।
ಭೂತಭೌತಿಕರೂಪಾಣಾಂ ವಿಶುದ್ಧಿಃ ಬ್ರಹ್ಮಭಾವನಾತ್ ॥೩೨॥

ಭವತ್ಯೇವ ನ ಸಂದೇಹಸ್ಸತ್ಯಮುಕ್ತಂ ಮಯೈವ ತು ।
ಬ್ರಹ್ಮಭಾವನಯಾ ಸರ್ವಂ ವಿಶುದ್ಧಮಿತಿ ಪಶ್ಯತಃ ॥೩೩॥

ನ ಹೇಯಂ ವಿದ್ಯತೇ ಕಿಂಚಿತ್ ಸತ್ಯಮೇವ ನ ಸಂಶಯಃ ।
ಬ್ರಹ್ಮ ಸರ್ವಮಿತಿ ಜ್ಞಾನಾತ್ ಭಾವನಾ ಬಲತೋಽಪಿ ವಾ ॥೩೪॥

ವಿನಾ ವಿಶುದ್ಧಿರ್ದ್ರವ್ಯಾಣಾಂ ನ ಸಿಧ್ಯತಿ ಕದಾಚನ ।
ಶುದ್ಧಿಃ ಕೃಚ್ಛ್ರೇಣ ಸಿದ್ಧಾಽಪಿ ದ್ವಿಜಾ ವೇದಾರ್ಥಪಾರಗಾಃ ॥೩೫॥

ಅಶುದ್ಧ್ಯಾ ಚಾವೃತಂ ಸರ್ವಂ ಧೂಮೇನಾಗ್ನಿರಿವಾವೃತಃ ।
ತಥಾಽಪಿ ಶುದ್ಧಿಃ ಕರ್ತವ್ಯಾ ವ್ಯವಹಾರೇಽಖಿಲಸ್ಯ ತು ॥೩೬॥

ಪಂಚಭೂತತನ್ಮಾತ್ರೆಗಳೂ, ಸ್ಥೂಲಕಾರ್ಯವಾದ ಭೂತಗಳೂ ಎಲ್ಲವೂ ಬ್ರಹ್ಮಸ್ವರೂಪವಾದುವೆಂದೂ, ಬ್ರಹ್ಮನಿಂದ ಅಧಿಷ್ಠಿತವಾಗಿವೆ ಎಂದೂ ಭಾವನೆ ಮಾಡುವುದರಿಂದ ಅಜ್ಞಾನಸುಖಸಂಬಂಧರೂಪವಾದ ಅಶುದ್ಧಿ ಎಲ್ಲವೂ ಹೋಗಿ ಶುದ್ಧಿಯುಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲವು. ನಾನು ಸತ್ಯವನ್ನು ಹೇಳಿದೇನೆ. ಬ್ರಹ್ಮಭಾವನೆಯಿಂದ ಎಲ್ಲವನ್ನೂ ಶುದ್ಧವಾದುದೆಂದು ಕಾಣುವ ಜ್ಞಾನಿಗೆ ಯಾವುದೂ ಹೇಯವಾದ ಪದಾರ್ಥವೇ ಇರುವುದಿಲ್ಲ. ಇದರಲ್ಲಿ ಸಂದೇಹವಿಲ್ಲವು. ॥೩೨-೩೩॥

ಈ ದೃಶ್ಯವೆಲ್ಲವೂ ಪಾರಮಾರ್ಥಿಕವಾಗಿ ಬ್ರಹ್ಮರೂಪವಾದುದು ಎಂಬ ತಿಳಿವಳಿಕೆಯಿಂದಲೂ, ಅಂಥ ಜ್ಞಾನದಲ್ಲಿ ಸಾಮರ್ಥ್ಯವಿಲ್ಲದಿದ್ದರೆ, ಎಲ್ಲವೂ ಬ್ರಹ್ಮ ರೂಪವಾದುದೆಂದು ಭಾವನೆಮಾಡುವುದರಿಂದಲೂ, ಹೊರತು ದ್ರವ್ಯಗಳಿಗೆ ಶುದ್ಧಿಯು ಯಾವಾಗಲೂ ಮತ್ತೆ ಯಾವುದರಿಂದಲೂ ಉಂಟಾಗುವುದಿಲ್ಲವು. ಪ್ರಯತ್ನದಿಂದ ಶುದ್ಧಿಯನ್ನು ಕರ್ಮಾದಿಗಳಿಂದ ಉಂಟುಮಾಡಲು ಪ್ರಯತ್ನಿಸಿದರೂ ಬ್ರಹ್ಮಭಾವನೆ ಇಲ್ಲದೆ ವಾಸ್ತವವಾಗಿ ಶುದ್ಧಿಯುಂಟಾಗುವುದಿಲ್ಲವು. ॥೩೪-೩೫॥

ಈ ದೃಶ್ಯವೆಲ್ಲವೂ, ಹೊಗೆಯಿಂದ ಆವರಿಸಲ್ಪಟ್ಟಿರುವ ಬೆಂಕಿಯ ಹಾಗೆ, ಅಶುದ್ಧಿಯಿಂದ ಅಜ್ಞಾನದಿಂದ ಆವೃತವಾಗಿದೆ. ಹಾಗಿದ್ದರೂ ವ್ಯವಹಾರದಲ್ಲಿರುವ

ವೇದಸಿದ್ಧೇನ ಮಾರ್ಗೇಣ ಶ್ರೇಯಸ್ಕಾಮೈರ್ಮನೀಷಿಭಿಃ ।
ಚಂಡಾಲಾದ್ಯೈಸ್ತು ಸಂಸ್ಪೃಷ್ಟಂ ಮೃಣ್ಮಯಂ ಪಕ್ವಮುತ್ಸೃಜೇತ್ ॥೩೭॥

ಪ್ರಕ್ಷಾಳಯೇದಪಕ್ವಂ ತು ಪ್ರೋಕ್ಷಯೇದ್ವಾ ಕುಶೋದಕೈಃ ।
ಪಕ್ವಂ ಶೂದ್ರೇಣ ಸಂಸ್ಪೃಷ್ಟಂ ಪ್ರೋಕ್ಷಣಾದೇವ ಶುದ್ಧ್ಯತಿ ॥೩೮॥

ತ್ಯಾಜ್ಯಮೇವೋಪಯುಕ್ತಂ ಸ್ಯಾತ್ ಪುನಃ ಪಾಕೇನ ವಾ ಶುಚಿ ।
ಆಕಾರದ್ವಿತಯಾತ್ಮಸ್ಥಂ ಮೃಣ್ಮಯಂ ತು ಪುರಾತನಮ್ ॥೩೯॥

ಅಗ್ನಿದಾಹೇನ ಸಂಶುಧ್ಯೇನ್ನೂತನಂ ಕ್ಷಾಳನೇನ ತು ।
ವಿಷ್ಠಯಾ ಮೃಣ್ಮಯಂ ಸ್ಪೃಷ್ಟಂ ಉಪಯುಕ್ತಂ ಪರಿತ್ಯಜೇತ್ ॥೪೦॥

ಅಪಕ್ವಂ ಕ್ಷಾಳಯೇಚ್ಛುದ್ಧ್ಯೈ ಬಹುಶಸ್ತು ಕುಶೋದಕೈಃ ।
ಉದಕ್ಯಾ ಶುಚಿ ಸಂಸ್ಪೃಷ್ಟಂ ಯಜ್ಞಪಾತ್ರಂ ತು ದಾರವಮ್ ॥೪೧॥

ವರೆಗೆ, ಪಾರಮಾರ್ಥಿಕವಾದ ಜ್ಞಾನವುಂಟಾಗುವವರೆಗೆ, ಕರ್ಮಾದಿಗಳಿಂದ ಶುದ್ಧಿಯನ್ನು ಎಲ್ಲಕ್ಕೂ ಉಂಟುಮಾಡುತ್ತಿರಬೇಕು. ॥೩೬॥

ವೇದದಲ್ಲಿ ಹೇಳಿರುವ ರೀತಿಯಿಂದ ಶುದ್ಧಿಯನ್ನು ಮಾಡಬೇಕು. ಸುಟ್ಟ ಮಣ್ಣಿನ ಪಾತ್ರೆಯನ್ನು ಚಂಡಾಲ ಮುಂತಾದವರು ಮುಟ್ಟಿದರೆ ಶ್ರೇಯಸ್ಸಾಗಬೇಕೆನ್ನುವವರು ಬಿಸಾಡಬೇಕು. ಸುಡದೆ ಇರುವ ಹಸಿಯ ಮಣ್ಣಿನ ಪಾತ್ರೆಯನ್ನು ತೊಳೆಯಬೇಕು, ಅಥವಾ ದರ್ಭೋದಕದಿಂದ ಪ್ರೋಕ್ಷಿಸಬೇಕು. ಸುಟ್ಟ ಮಣ್ಣಿನ ಪಾತ್ರೆಯನ್ನು ಶೂದ್ರನು ಮುಟ್ಟಿದರೆ ಪ್ರೋಕ್ಷಣಮಾಡುವುದರಿಂದ ಶುದ್ಧಿಮಾಡಿಕೊಳ್ಳಬೇಕು. ॥೩೭-೩೮॥

ಒಂದಾವೃತ್ತಿ ಉಪಯೋಗಿಸಿದ ಮಣ್ಣಿನ ಪಾತ್ರೆಯನ್ನು ಬಿಸಾಡಬೇಕು. ಅಥವಾ ಪುನಃ ಸುಡುವುದರಿಂದ ಅದು ಶುದ್ಧವಾಗುತ್ತದೆ. ಹಳೆಯದಾದ ಮಣ್ಣಿನ ಪಾತ್ರೆಯನ್ನು ಬೆಂಕಿಯಲ್ಲಿ ಸುಡುವುದರಿಂದ ಶುದ್ಧಮಾಡಬೇಕು. ಹೊಸದನ್ನು ತೊಳೆದು ಶುದ್ಧಮಾಡಬೇಕು. ಮಣ್ಣಿನ ಉಪಯೋಗಿಸಿದ ಪಾತ್ರೆಯು ಅಮೇಧ್ಯದ ಸಂಬಂಧವನ್ನು ಪಡೆದರೆ ಅದನ್ನು ಬಿಸಾಡಬೇಕು. ಹಸಿಯದನ್ನು ಶುದ್ಧಿಗೋಸ್ಕರ ತೊಳೆಯಬೇಕು. ದರ್ಭೋದಕದಿಂದ ಹೆಚ್ಚಾಗಿ ಪ್ರೋಕ್ಷಿಸಬೇಕು. ಮರದಿಂದ ಮಾಡಿರುವ ಉಪಯೋಗಿಸಿದ ಯಜ್ಞಪಾತ್ರೆಯನ್ನು ಹೊರಗಾಗಿರುವ ಹೆಂಗಸರು

ಉಪಯುಕ್ತಂ ತ್ಯಜೇದನ್ಯತ್ ಕ್ಷಾಳಯೇಚ್ಚ ಕುಶಾಂಭಸಾ ।
ವಿಲೋಕ್ಯ ದೇಶಕಾಲಾದಿ ದ್ರವ್ಯಂ ದ್ರವ್ಯಪ್ರಯೋಜನಮ್ ॥೪೨॥

ಸ್ವೋಪಪತ್ತಿಂ ಅವಸ್ಥಾಂ ಚ ಪುನಶ್ಶೌಚಂ ಸಮಾಚರೇತ್ ।
ಅನ್ನಂ ದ್ರೋಣಾಧಿಕಂ ಪಕ್ವಂ ಅಂತ್ಯಾದ್ಯಸ್ಪೃಶ್ಯದೂಷಿತಮ್ ॥೪೩॥

ಕ್ಷಾಳನೇನ ವಿಘಾತೇನ ಪರಿಶುದ್ಧಂ ಹಿ ಚಾಪದಿ ।
ದ್ರೋಣಾದೂನಂ ತ್ಯಜೇದ್ಭಾರಾತ್ ಅಧಿಕಂ ಪ್ರೋಕ್ಷಯೇದ್ಬುಧಃ॥೪೪॥

ಅನಾಪದಿ ನ ಸರ್ವತ್ರ ಕ್ಷಾಳಯೇತ್ ದ್ರೋಣತಃ ಪರಮ್ ।
ಕುಂಭಾದೂರ್ಧ್ವಂ ದ್ವಿಜಾ ಧಾನ್ಯಂ ಪಕ್ವಂ ಪ್ರೋಕ್ಷಣತಶ್ಶುಚಿ ॥೪೫॥

ಅಪಕ್ವಂ ಕ್ಷಾಳನೇನೈವ ವಿಶುದ್ಧಂ ಭವತಿ ಧ್ರುವಮ್ ।
ಭಾರಾದೂನಃ ಪರಿತ್ಯಾಜ್ಯಃ ಪಕ್ವಧಾನ್ಯಸ್ಯ ತಂಡುಲಃ ॥೪೬॥

ಮುಟ್ಟಿದರೆ ಬಿಸಾಡಬೇಕು. ಉಪಯೋಗಿಸದೆ ಹೊಸದಾಗಿರುವುದನ್ನು ದರ್ಭೋದಕ ದಿಂದ ತೊಳೆದರೆ ಶುದ್ಧಿಯಾಗುತ್ತದೆ. ||೩೯-೪೦-೪೧||

ದೇಶವನ್ನೂ, ಕಾಲವನ್ನೂ ಪದಾರ್ಥದ ಸ್ವಭಾವವನ್ನೂ ಅದರ ಉಪಯೋಗ ವನ್ನೂ ತನ್ನ ಅನುಕೂಲ್ಯವನ್ನೂ ಸ್ಥಿತಿಯನ್ನೂ ಪರ್ಯಾಲೋಚಿಸಿ ಇನ್ನೊಂದಾ ವೃತ್ತಿ ಶುದ್ಧಿಮಾಡಬೇಕು. ಬೇರೆ ಒಂದು ಬಗೆಯಲ್ಲೂ ಶುದ್ಧಿಮಾಡಬಹುದು. ಹೇಗೆಂದರೆ, ನಾಲ್ಕು ಸೇರಿಗಿಂತ ಹೆಚ್ಚಾಗಿರುವ ಪಕ್ವವಾದ ಅನ್ನವನ್ನು "ಅಂತ್ಯಾದ್ಯ ಸ್ಪೃಶ್ಯದೂಷಿತಂ" ಚಂಡಾಲ ಮೊದಲಾದ ಅಸ್ಪೃಶ್ಯಜನರ ಸ್ಪರ್ಶದಿಂದ ದುಷ್ಟ ವಾದರೆ ತೊಳೆಯುವುದರಿಂದಲೂ, ಅಕ್ಕಿಯನ್ನು ಕುಟ್ಟುವುದರಿಂದಲೂ ಆಪತ್ಕಾಲದಲ್ಲಿ ಶುದ್ಧಿಮಾಡಬೇಕು. ಅದಕ್ಕಿಂತ ಕಡಿಮೆ ಪರಿಮಾಣವುಳ್ಳದ್ದನ್ನು ಬಿಸಾಡಬೇಕು. ಒಂದು ಭಾರಕ್ಕಿಂತ ಹೆಚ್ಚಾಗಿದ್ದರೆ ಪ್ರೋಕ್ಷಣೆಯಿಂದ ಶುದ್ಧಿಯಾಗುತ್ತದೆ. ಆಪತ್ಕಾಲ ದಲ್ಲಿ ಅಲ್ಲದೆ ಮಿಕ್ಕ ಎಲ್ಲಾ ಕಾಲದಲ್ಲೂ ಪ್ರೋಕ್ಷಣೆ ಮಾಡದೆ ತೊಳೆಯಬೇಕು. ಓ ಬ್ರಾಹ್ಮಣರಾ, ದ್ರೋಣಕ್ಕಿಂತ ಕುಂಭಕ್ಕಿಂತ ಹೆಚ್ಚಾಗಿರುವ ಧಾನ್ಯವನ್ನು ಪ್ರೋಕ್ಷಣದಿಂದ ಶುದ್ಧಿಮಾಡಬೇಕು. ಬೇಯಿಸದೆ ಇರುವ ಧಾನ್ಯವು ತೊಳೆಯು ವುದರಿಂದ ಶುದ್ಧವಾಗುತ್ತದೆ. ಒಂದು ಭಾರಕ್ಕಿಂತ ಕಡಿಮೆಯಾದ ಬೇಯಿಸಿದ ಬತ್ತದ ಅಕ್ಕಿಯನ್ನು ಬಿಸಾಡಬೇಕು. ಅದಕಿಂತ ಹೆಚ್ಚಾಗಿದ್ದರೆ ತೊಳೆಯಬೇಕು.

ಭಾರದ್ವಯಾದಧಃ ಕ್ಷಾಳ್ಯಃ ತದೂರ್ಧ್ವಂ ಪ್ರೋಕ್ಷಣಾಚ್ಛುಚಿಃ ।
ಅನ್ನಂ ಪಕ್ವಂ ಪರಿತ್ಯಾಜ್ಯಂ ಉದಕ್ಯಾಂತ್ಯಾದಿ ದೂಷಿತಮ್ ॥೪೭॥

ಭಾರಷಟ್ಕಾದನಂ ಕ್ಷಾಳ್ಯಂ ಪ್ರೋಕ್ಷಣೀಯಂ ತತಃ ಪರಮ್ ।
ಉದಕ್ಯಾಂತ್ಯಾದಿ ಸಂಸ್ಪೃಷ್ಟಂ ವಸ್ತ್ರಂ ಪ್ರಕ್ಷಾಳಯೇತ್ತಥಾ ॥೪೮॥

ಶ್ವಸೂಕರಖರೋಷ್ಟ್ರಾದಿ ಸ್ಪೃಷ್ಟಂ ಚ ಕ್ಷಾಳಯೇತ್ತಥಾ ।
ನವವಸ್ತ್ರಂ ಚ ಕಾಷಾಯಂ ಬಹುವಸ್ತ್ರಂ ತಥೈವ ಚ ॥೪೯॥

ರಕ್ತವಸ್ತ್ರಂ ತಥಾ ಕೃಷ್ಣಂ ಪ್ರೋಕ್ಷಯೇತ್ಕಂಬಳಾದಿಕಮ್ ।
ತಂಡುಲೇಷು ತಥಾ ಧಾನ್ಯೇ ಗುಡೇ ಗವ್ಯೇ ರಸಾತ್ಮಕೇ ॥೫೦॥

ಕಾಕಾದಿದೂಷಿತಾಂಶಂ ತು ತ್ಯಕ್ತ್ವಾ ಸಂಪ್ರೋಕ್ಷಯೇದ್ಬುಧಃ ।
ದ್ರವದ್ರವ್ಯಸ್ಯ ಸಂಶುದ್ಧಿಃ ಭವೇದುತ್ಪವನೇನ ತು ॥೫೧॥

ದುಷ್ಟಭಾಂಡಸ್ಥಿತಸ್ಯಾಸ್ಯ ಭವೇದ್ದೋಷೋ ನ ಚಾಪರಃ ।
ದ್ರವ್ಯಾಣಾಮಗ್ನಿಪಕ್ವಾನಾಂ ಧಾನ್ಯವಚ್ಛುದ್ಧಿರೀರಿತಾ ॥೫೨॥

ಎರಡು ಭಾರಕ್ಕಿಂತ ಹೆಚ್ಚಾಗಿದ್ದರೆ ಪ್ರೋಕ್ಷಣದಿಂದಲೇ ಶುದ್ಧಿಯಾಗುತ್ತದೆ. ॥೪೨-೪೩-೪೪-೪೫-೪೬॥

ಹೊರಗಿರುವ ಹೆಂಗಸರಿಂದಲೂ ಅಂತ್ಯಜನರಿಂದಲೂ ಮುಟ್ಟಿ ದುಷ್ಟವಾದ ಅನ್ನವನ್ನು ಬಿಸಾಡಬೇಕು. ಆದರೆ ಅದು ಆರು ಭಾರಪರಿಮಾಣವುಳ್ಳದ್ದಾಗಿದ್ದರೆ ತೊಳೆದರೂ ಶುದ್ಧವಾಗುತ್ತದೆ. ಅದಕ್ಕಿಂತಲೂ ಹೆಚ್ಚಿನ ಪರಿಮಾಣವುಳ್ಳದ್ದನ್ನು ಪ್ರೋಕ್ಷಿಸಿದರೂ ಶುದ್ಧಿಯಾಗುತ್ತದೆ. ಅವರು ಬಟ್ಟೆಯನ್ನು ಮುಟ್ಟಿದರೆ ಒಗೆಯುವುದರಿಂದ ಆ ಬಟ್ಟೆಗೆ ಶುದ್ಧಿಯಾಗುತ್ತದೆ. ॥೪೭-೪೮॥

ನಾಯಿ, ಹಂದಿ, ಕತ್ತೆ, ಒಂಟೆ—ಇವೇ ಮುಂತಾದುವು ಹೊಸಬಟ್ಟೆಯನ್ನೂ, ಕಾವಿಬಟ್ಟೆಯನ್ನೂ, ಅನೇಕ ಬಟ್ಟೆಗಳ ಮೂಟೆಯನ್ನೂ ಮುಟ್ಟಿದರೆ ಒಗೆಯುವುದರಿಂದ ಶುದ್ಧಿಯಾಗುತ್ತದೆ. ಕೆಂಪುಬಟ್ಟೆಯನ್ನೂ, ಕರಿಯ ಬಟ್ಟೆಯನ್ನೂ, ಕಂಬಳಿ ಮುಂತಾದುದನ್ನೂ ಅವು ಮುಟ್ಟಿದರೆ ಪ್ರೋಕ್ಷಣದಿಂದ ಶುದ್ಧಿಯಾಗುತ್ತದೆ. ಅಕ್ಕಿಯಲ್ಲೂ, ದವಸದಲ್ಲೂ, ಬೆಲ್ಲದಲ್ಲೂ, ಹಸುವಿನಹಾಲು, ಮೊಸರು, ತುಪ್ಪ–ಮುಂತಾದುವಲ್ಲೂ ಕಾಗೆ ಮುಂತಾದವು ಮುಟ್ಟುವುದರಿಂದ ಉಂಟಾದ ದೋಷವು ಆ ಮುಟ್ಟಿದ

ಅಲಭ್ಯಲಾಭೇ ಸಂಶುದ್ಧಿಃ ಪ್ರೋಕ್ಷಣೇನೈವ ಕೇವಲಮ್ ।
ಕೇಶಲೋಮನಖಸ್ಪೃಷ್ಟಂ ಕ್ರಿಮಿಕೀಟಾದಿ ದೂಷಿತಮ್ ॥೫೩॥

ಅನ್ನಂ ತು ಭಸ್ಮನಾ ಶುದ್ಧಂ ಪ್ರೋಕ್ಷಣೇನ ಕೃತೇನ ಚ ।
ಕ್ರೀತಂ ಪಿಷ್ಟಮಯಂ ಸರ್ವಂ ಪುನಃ ಪಾಕೇನ ಶುದ್ಧ್ಯತಿ ॥೫೪॥

ಶೂದ್ರಾಂತ್ಯಾಶುಚಿಸಂಸ್ಪೃಷ್ಟಂ ತ್ಯಾಜ್ಯಮೇವ ನ ಸಂಶಯಃ ।
ಉಚ್ಛಿಷ್ಟೋ ದ್ರವ್ಯಹಸ್ತಸ್ತು ಭಕ್ಷ್ಯದ್ರವ್ಯಂ ತು ಕಿಂಚನ ॥೫೫॥

ವಿಧಾಯ ಶೌಚಂ ಕೃತ್ವಾಽಥ ಗೃಹ್ಣೀಯಾತ್ಪ್ರೋಕ್ಷಿತಂ ತತಃ ।
ಅದ್ಭಿಸ್ತು ಪ್ರೋಕ್ಷಣಂ ಶೌಚಂ ಬಹೂನಾಂ ಧಾನ್ಯವಾಸಸಾಂ ॥೫೬॥

ಪ್ರಕ್ಷಾಳನೇನ ತ್ವಲ್ಪಾನಾಂ ಶುದ್ಧಿರ್ವೇದೋದಿತಾ ಪರಾ ।
ತೈಜಸಾನಾಂ ಸುರಾಸ್ಪರ್ಶೇ ವಹ್ನಿದಾಹೇನಶುದ್ಧತಾ ॥೫೭॥

ಭಾಗವನ್ನು ಮಾತ್ರ ಬಿಸಾಟು, ಉಳಿದುದನ್ನು ಪ್ರಾಜ್ಞನಾದವನು ಪ್ರೋಕ್ಷಿಸಿದರೆ ಶುದ್ಧವಾಗುತ್ತದೆ. ನೀರಾಗಿರುವ ಪದಾರ್ಥಗಳಿಗೆ ಶುದ್ಧಿಯು ದರ್ಭೆಯಿಂದ ಉತ್ಪವನ ಮಾಡುವುದರಿಂದ ಉಂಟಾಗುತ್ತದೆ. ದುಷ್ಟವಾದ, ಮೈಲಿಗೆಯಾದ ಮಡಕೆ ಮುಂತಾದ ಪಾತ್ರೆಯಲ್ಲಿರುವ ಪದಾರ್ಥಗಳಿಗೆ ಬೇರೆ ದೋಷವಿಲ್ಲವು. ಬೆಂಕಿಯಲ್ಲಿ ಬೇಯಿಸಿದ ಪದಾರ್ಥಗಳಿಗೆ ದವಸಕ್ಕೆ ಹೇಗೋ ಹಾಗೆ ಶುದ್ಧಿಯು ಹೇಳಲ್ಪಟ್ಟಿದೆ. ||೪೯-೫೦-೫೧-೫೨||

ಅಪೂರ್ವವಾದ, ಪಡೆಯಲು ಕಷ್ಟವಾದ, ಪದಾರ್ಥಗಳು ದೊರೆತರೆ ಬರಿಯ ಪ್ರೋಕ್ಷಣದಿಂದಲೇ ಶುದ್ಧಿಯಾಗುತ್ತದೆ. ತಲೆಯ ಕೂದಲು ರೋಮಗಳು, ಉಗುರು, ಕ್ರಿಮಿ, ಹುಳುಗಳಿಂದ ದುಷ್ಟವಾದ ಅನ್ನವು ಭಸ್ಮದಿಂದಲೂ ಪ್ರೋಕ್ಷಣಮಾಡುವುದರಿಂದಲೂ ಶುದ್ಧವಾಗುತ್ತದೆ. ಕೊಂಡುಕೊಂಡ ಬೇಯಿಸಿದ ಪದಾರ್ಥಗಳೆಲ್ಲವೂ ಪುನಃ ಬೇಯಿಸುವುದರಿಂದ ಶುದ್ಧಿಯಾಗುತ್ತದೆ. ಶೂದ್ರರು, ಅಂತ್ಯರು, ಮೈಲಿಗೆಯವರು, ಮುಟ್ಟಿದ ಅನ್ನವನ್ನು ಬಿಸಾಡಲೇಬೇಕು. ಸಂದೇಹವಿಲ್ಲವು. ಎಂಜಲುಕೈಯುಳ್ಳವನು ಭಕ್ಷ್ಯಪದಾರ್ಥಗಳನ್ನು ಮುಟ್ಟಿದರೆ ಅವನ್ನು ಕೆಳಗಿಟ್ಟು ಕೈತೊಳೆದುಕೊಂಡು ನೀರಿನಿಂದ ಪ್ರೋಕ್ಷಿಸಿದರೆ ಶುದ್ಧಿಯಾಗುತ್ತದೆ. ಹಾಗೆ ಪ್ರೋಕ್ಷಿಸಿದರೆ ಆ ಪದಾರ್ಥವನ್ನು ಪರಿಗ್ರಹಿಸಬಹುದು. ಅನೇಕ ವಿಧವಾದ ದವಸ ಮತ್ತು ಬಟ್ಟೆಗಳು ಇವನ್ನು, ಕಾಲಕಳೆದು ಹಳಸಿದ ಪದಾರ್ಥವನ್ನು ಪ್ರೋಕ್ಷಣೆ

ಬ್ರಾಹ್ಮಣಸ್ಯ ವಿಶಾಂ ರಾಜ್ಞಾಂ ಕ್ಷಾಳನೇನ ವಿಶುದ್ಧತಾ ।
ಶ್ವಚಂಡಾಲಾದಿ ಸಂಸ್ಪರ್ಶೇ ತೈಜಸಾನಾಂ ತು ಮಾರ್ಜನಾತ್ ॥೫೮॥

ಪ್ರೋಕ್ಷಣಾಚ್ಚ ವಿಶುದ್ಧಿಸ್ಸ್ಯಾತ್ ತಿಂತ್ರಿಣ್ಯಾ ತಾಮ್ರಶೋಧನಂ ।
ಭಸ್ಮನಾಮೃಜ್ಜಲಾಭ್ಯಾಂ ಚ ಮಾರ್ಜನೇನ ವಿಶುದ್ಧತಾ ॥೫೯॥

ಉದಕ್ಯಾ ಭುಕ್ತಕಾಂಸ್ಯಸ್ಯ ಘರ್ಷಣೇನ ಜಲೇನ ಚ ।
ಕಲ್ಯಾಣೇತೀರ್ಥಯಾತ್ರಾಯಾಂ ರಾಷ್ಟ್ರಕ್ಷೋಭೇ ಚ ಸಂಭ್ರಮೇ॥೬೦॥

ದೇವೋತ್ಸವೇ ಚ ದಾರಿದ್ರ್ಯೇ ಸ್ಪೃಷ್ಟಿದೋಷೋ ನ ವಿದ್ಯತೇ ।
ಶೂದ್ರಾನುಲೋಮಕಾಕಾದ್ಯೈಃ ಪ್ರತಿಲೋಮೈಶ್ಚ ದೂಷಿತಮ್ ॥೬೧॥

ಮೃಜ್ಜಲಾಭ್ಯಾಂ ವಿಶುಧ್ಯೇತ ತ್ವೇಕವಿಂಶತಿಮಾರ್ಜನಾತ್ ।
ಅಶ್ಮನಾ ನಿರ್ಮಿತಂ ಪಾತ್ರಂ ಭಸ್ಮನಾ ಸಜಲೇನ ತು ॥೬೨॥

ಮಾಡಿ ಶುದ್ಧಿಮಾಡಿದ ಮೇಲೆ ಸ್ವೀಕರಿಸಬೇಕು. ಅನೇಕ ದವಸಗಳಿಗೂ ಬಟ್ಟೆಗಳಿಗೂ ನೀರಿನಿಂದ ಪ್ರೋಕ್ಷಿಸುವುದರಿಂದ ಶುದ್ಧಿಯಾಗುತ್ತದೆ. ಕೆಲವು ಸ್ವಲ್ಪ ಪದಾರ್ಥಗಳಿಗೆ ತೊಳೆಯುವಿಕೆಯಿಂದ ಶುದ್ಧಿಯಾಗುತ್ತದೆ ಎಂದು ವೇದದಲ್ಲಿ ಹೇಳಿದೆ. ತೇಜೋ ರೂಪವಾದ ಪದಾರ್ಥಗಳಿಗೆ ಮದ್ಯಸ್ಪರ್ಶವಾದರೆ ಇನ್ನೊಂದಾವೃತ್ತಿ ಬೆಂಕಿಯಲ್ಲಿ ಸುಡುವುದರಿಂದ ಶುದ್ಧಿಯಾಗುತ್ತದೆ. ||೫೩-೫೪-೫೫-೫೬-೫೭||

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಇವರಿಗೆ ನಾಯಿ, ಚಂಡಾಲ ಮುಂತಾದವರೊಡನೆ ಸ್ಪರ್ಶವಾದರೆ ಸ್ನಾನದಿಂದ ಶುದ್ಧಿಯಾಗುತ್ತದೆ. ಲೋಹದ ಪದಾರ್ಥಗಳಿಗೆ ಒರೆಸುವುದರಿಂದಲೂ ಪ್ರೋಕ್ಷಣದಿಂದಲೂ ಶುದ್ಧಿಯಾಗುತ್ತದೆ. ತಾಮ್ರ ಪಾತ್ರೆಗೆ ಹುಣಿಸೆಹಣ್ಣಿನಿಂದಲೂ, ಹೊರಗಾದವರು ಉಪಯೋಗಿಸಿದ ಕಂಚಿನ ಪಾತ್ರೆಗೆ ಬೂದಿ, ಮಣ್ಣು, ನೀರುಗಳಿಂದ ತಿಕ್ಕೋಣದರಿಂದಲೂ ಪ್ರೋಕ್ಷಣದಿಂದಲೂ ಶುದ್ಧಿಯಾಗುತ್ತದೆ. ಮಂಗಳಕಾರ್ಯಗಳಲ್ಲೂ, ತೀರ್ಥಯಾತ್ರೆಯಲ್ಲಿಯೂ, ದೇಶದ ಉಪದ್ರವದಲ್ಲೂ, ಗಾಬರಿಯಲ್ಲೂ, ದೇವರ ಉತ್ಸವದಲ್ಲೂ, ಬಡತನದಲ್ಲಿಯೂ ಸ್ಪರ್ಶದೋಷವಿಲ್ಲವು. ||೫೮-೫೯-೬೦||

ಶೂದ್ರನು, ಅನುಲೋಮಜಾತಿಯವರು, ಕಾಗೆ ಮುಂತಾದವರು, ಪ್ರತಿಲೋಮಜಾತಿಯವರು, ಇವರಿಂದ ಮೈಲಿಗೆಯಾದ ಪದಾರ್ಥವು ಮಣ್ಣು ನೀರಿನಿಂದಲೂ ಇಪ್ಪತ್ತೊಂದು ಸಲ ಪ್ರೋಕ್ಷಿಸುವುದರಿಂದಲೂ ಶುದ್ಧಿಯನ್ನು ಪಡೆಯು

ನಿರ್ಲೇಪಂ ಶುದ್ಧಿಮಾಪ್ನೋತಿ ತ್ವೇಕವಿಂಶತಿಮಾರ್ಜನಾತ್ ।
ಅಬ್ಜಾನಿ ಶಂಖಶುಕ್ತ್ಯಾದಿ ದ್ರವ್ಯಾಣಿ ಸಕಲಾನಿ ತು ॥೬೩॥

ಪ್ರಕ್ಷಾಳನೇನ ಶುದ್ಧಾನಿ ಭಸ್ಮನಾ ಮಾರ್ಜನೇನ ಚ ।
ಬಹುನಾಽತ್ರ ಕಿಮುಕ್ತೇನ ಸರ್ವಂ ಬ್ರಹ್ಮಾತ್ಮನಾ ಬುಧಾಃ ॥೬೪॥

ಸರ್ವದೋಷನಿವೃತ್ತ್ಯರ್ಥಂ ಚಿಂತಯೇತ್ಸುದೃಢಂ ಸದಾ ।
ಬ್ರಹ್ಮರೂಪೇಣ ಸಂಗ್ರಾಹ್ಯಂ ಸರ್ವಂ ಶುದ್ಧಂ ಸದಾ ಭವೇತ್ ।
ನಿತ್ಯಶುದ್ಧಸ್ಯ ದೃಷ್ಟಿಸ್ತು ವಿಶುದ್ಧ್ಯೈ ಭವತಿ ಧ್ರುವಮ್ ॥೬೫॥

ನಿತ್ಯಶುದ್ಧಂ ಹಿ ತದ್ಬ್ರಹ್ಮ ಸದಾ ಸತ್ಯಾದಿಲಕ್ಷಣಮ್ ।
ತತಸ್ತದ್ದೃಷ್ಟಿಸಂಯುಕ್ತಂ ವಿಶುದ್ಧಂ ಸಕಲಂ ಭವೇತ್ ॥೬೬॥

ಅಥವಾ ಸಕಲಂ ಕಾರ್ಯಂ ತರ್ಕತಶ್ಚ ಪ್ರಮಾಣತಃ ।
ಕಾರಣಾತ್ಮತಯಾ ಪಶ್ಯೇತ್ಸರ್ವದೋಷನಿವೃತ್ತಯೇ ॥೬೭॥

ತ್ತದೆ. ಕಲ್ಲಿನಿಂದ ಮಾಡಿರುವ ಪಾತ್ರೆಯು ನೀರಿನಿಂದ ಕೂಡಿದ ಬೂದಿಯಿಂದಲೂ ಅಂಟಿಕೊಂಡಿರಬಹುದಾದ ಕೊಳೆಯು ಬಿಡುವವರೆಗೂ ಇಪ್ಪತ್ತೊಂದಾವೃತ್ತಿ ಪ್ರೋಕ್ಷಣದಿಂದಲೂ ಶುದ್ಧಿಯನ್ನು ಹೊಂದುತ್ತದೆ. ನೀರಿನಲ್ಲಿ ಹುಟ್ಟುವ ಶಂಖ, ಕಪ್ಪೆಚಿಪ್ಪು ಮುಂತಾದ ಎಲ್ಲ ವಸ್ತುಗಳು ತೊಳೆಯುವುದರಿಂದಲೂ ಬೂದಿಯಿಂದಲೂ ಪ್ರೋಕ್ಷಣದಿಂದಲೂ ಶುದ್ಧವಾಗುತ್ತವೆ. ಈ ವಿಷಯದಲ್ಲಿ ಹೆಚ್ಚು ಹೇಳಬೇಕಾದುದೇನು ? ಎಲ್ಲ ದೋಷಗಳ ನಿವಾರಣೆಗಾಗಿ ಯಾವಾಗಲೂ ಎಲ್ಲಾ ಪದಾರ್ಥಗಳೂ ಬ್ರಹ್ಮರೂಪವಾದುವೆಂದು ಪ್ರಾಜ್ಞರು ದೃಢವಾಗಿ ಭಾವನೆಯನ್ನು ಮಾಡಬೇಕು. ॥೬೧-೬೨-೬೩-೬೪॥

ಆತ್ಮನಲ್ಲದ ಎಲ್ಲ ವಸ್ತುಗಳನ್ನೂ ಬ್ರಹ್ಮರೂಪವಾದುದೆಂದು ಭಾವನೆಮಾಡುವುದರಿಂದ ಎಲ್ಲ ಪದಾರ್ಥಗಳ ದೋಷಗಳೂ ಅಡಗಿಸಲ್ಪಟ್ಟದ್ದಾಗಿ ಎಲ್ಲವೂ ಪರಿಶುದ್ಧವಾಗುತ್ತದೆ. ನಿತ್ಯಶುದ್ಧನಾದ ಬ್ರಹ್ಮನ ಸ್ವರೂಪವಾದುದೆಂದು ಎಲ್ಲವನ್ನೂ ಭಾವಿಸುವಿಕೆಯು ಖಂಡಿತವಾಗಿ ಶುದ್ಧಿಯನ್ನುಂಟುಮಾಡುವುದು. ಆ ಬ್ರಹ್ಮವು ಯಾವಾಗಲೂ ಶುದ್ಧವಾದುದು ಮತ್ತು ಸಚ್ಚಿದಾನಂದಸ್ವರೂಪವಾದುದು. ಆದುದರಿಂದ ಅಂಥ ಬ್ರಹ್ಮಭಾವನೆಯಿಂದ ಕೂಡಿದುದೆಲ್ಲವೂ ಶುದ್ಧವಾಗುತ್ತದೆ. ಅಥವಾ ಕಾರ್ಯರೂಪವಾದ ಈ ಪ್ರಪಂಚವೆಲ್ಲವೂ ಅದರ ಕಾರಣವಾದ ಬ್ರಹ್ಮರೂಪವಾದುದೆಂದು ಯುಕ್ತಿ

ಕಾರಣಂ ಸರ್ವಕಾರ್ಯಾಣಾಂ ಪರಮಾತ್ಮೈವ ನೇತರತ್ ।
ಪ್ರವದಂತಿ ಹಿ ವೇದಾಂತಾಃ ಸ್ಮೃತಯಶ್ಚಾದರೇಣ ತು ॥೬೮॥

ಅತಸ್ಸಮಸ್ತಂ ಪರಮೇಶ್ವರಾತ್ಮನಾ
ವಿಚಿಂತಯೇತ್ಸ್ವಾನುಭವೇನ ಮಾನವಾಃ ।
ವಿಚಿಂತನೇನೈವ ಸಮಸ್ತಮಾಸ್ತಿಕಾ
ವಿಶುದ್ಧತಾಮೇತಿ ನ ಚಾತ್ರ ಸಂಶಯಃ ॥೬೯॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ದ್ರವ್ಯಶುದ್ಧಿವಿಚಾರೋ ನಾಮ ಚತುಶ್ಚತ್ವಾರಿಂಶಾಧ್ಯಾಯಃ

ಯಿಂದಲೂ ವೇದಾಂತವಾಕ್ಯಗಳ ಪ್ರಮಾಣದಿಂದಲೂ ತಿಳಿದು ಭಾವಿಸುವುದರಿಂದ ಎಲ್ಲ ದೋಷಗಳ ನಿವಾರಣೆಯು ಉಂಟಾಗುತ್ತದೆಂದು ಭಾವನೆಮಾಡಬೇಕು. ||೬೫-೬೬-೬೭||

ಎಲ್ಲ ಕಾರ್ಯಗಳಿಗೂ ಪರಮಾತ್ಮನೇ ಕಾರಣನೆಂದೂ, ಇನ್ನೊಂದು ಕಾರಣ ವಿಲ್ಲವೆಂದೂ, ವೇದಾಂತವಾಕ್ಯಗಳೂ, ಗೀತಾದಿ ಸ್ಮೃತಿಗಳೂ ಆದರದಿಂದ ಹೇಳು ತ್ತಿವೆ. ಆದುದರಿಂದ ಎಲ್ಲವನ್ನೂ ಪರಮೇಶ್ವರನ ಸ್ವರೂಪವೆಂದು ಭಾವನೆ ಮಾಡ ಬೇಕು. ಓ ಆಸ್ತಿಕರಾದ ಮನುಷ್ಯರೇ, ಹೀಗೆ ಸ್ವಂತ ಅನುಭವದಿಂದ ಭಾವನೆ ಮಾಡೋಣದರಿಂದಲೇ ಎಲ್ಲವೂ ಪರಿಶುದ್ಧವಾಗುತ್ತದೆ. ಈ ಅಂಶದಲ್ಲಿ ಸಂದೇಹ ವಿಲ್ಲವು. ||೬೮-೬೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ದ್ರವ್ಯಗಳನ್ನು ಶುದ್ಧಮಾಡುವ ಬಗೆಯನ್ನು ತಿಳಿಸುವ
ನಲವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಪಂಚಚತ್ವಾರಿಂಶೋಽಧ್ಯಾಯಃ ||

ನಲವತ್ತೈದನೆಯ ಅಧ್ಯಾಯವು

(ಅಭಕ್ಷ್ಯನಿವೃತ್ತಿಕಥನಮ್)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಮುನಯಸ್ಸಂಶಿತವ್ರತಾಃ ।
ಅಭಕ್ಷ್ಯಸ್ಯ ನಿವೃತ್ತ್ಯಾ ತು ವಿಶುದ್ಧಂ ಹೃದಯಂ ಭವೇತ್ ॥೧॥

ಆಹಾರಶುದ್ಧ್ಯಾ ಚಿತ್ತಸ್ಯ ವಿಶುದ್ಧಿರ್ಭವತಿ ಸ್ವತಃ ।
ಚಿತ್ತಶುದ್ಧ್ಯಾ ಕ್ರಮಾತ್ ಜ್ಞಾನಂ ಜಾಯತೇ ಪಾರಮೇಶ್ವರಮ್ ॥೨॥

ಹಿಂದಿನ ಅಧ್ಯಾಯದಲ್ಲಿ ಭಾವನೆಯಿಂದ ಚಿತ್ತಶುದ್ಧಿಯನ್ನು ಹೇಳಿದರು. ಚಿತ್ತವು ಹಾಗೆ ಶುದ್ಧವಾಗಬೇಕಾದರೂ, ಅದಕ್ಕೆ ಮೊದಲು ಮತ್ತು ಆಮೇಲಾದರೂ, ದುರಾಹಾರದಿಂದ ಚಿತ್ತಕ್ಕೆ ಮಾಲಿನ್ಯವುಂಟಾಗಿದ್ದರೆ, ಆ ಶುದ್ಧಿಗೆ ಭಂಗವು ಬರುತ್ತದೆ. ಆದುದರಿಂದ ಅದರ ಪರಿಹಾರಕ್ಕಾಗಿ ಆಹಾರಶುದ್ಧಿಯನ್ನು ಸೂತರು ಹೇಳುತ್ತಾರೆ. ನಿಯಮನಿಷ್ಠರಾದ ಋಷಿಗಳಿರಾ, ಅಶುದ್ಧವಾದುದರಿಂದ ತಿನ್ನಬಾರದ್ದಾದ ಆಹಾರವನ್ನು ತಿನ್ನದೆಬಿಡುವುದರಿಂದ ಹೃದಯವು ಪರಿಶುದ್ಧವಾಗುತ್ತದೆ. "ಅನ್ನಮಶಿತಂ ತ್ರೇಧಾವಿಧೀಯತೇ. ತಸ್ಯಯಃ ಸ್ಥವಿಷ್ಠೋಧಾತುಃ ತತ್ ಪುರೀಷಂ ಭವತಿ. ಯೋ ಮಧ್ಯಮಃ ತತ್ ಮಾಂಸಂ, ಯೋಽಣಿಷ್ಠಃ ತತ್ ಮನಃ." "ಕರ್ಮಣಾ ಶುದ್ಧ ಚಿತ್ತಸ್ಯ ಸಂಸೃತೇಃ ದೋಷದರ್ಶನಂ । ಪುನರ್ವಿರಕ್ತಿಃ ಸಂಸಾರಾತ್ ಮೋಕ್ಷೇಚ್ಛಾ

ಪಾರಮೇಶ್ವರವಿಜ್ಞಾನೇ ಸತಿ ಸಂಸಾರಹೇತವಃ ।
ಗ್ರಂಥಯಸ್ತು ವಿನಶ್ಯಂತಿ ನ ಹಿ ಸಂದೇಹಕಾರಣಮ್ ॥೩॥

ಅಭಕ್ಷ್ಯಭಕ್ಷಣಾಚ್ಚಿತ್ತಂ ಅಶುದ್ಧಂ ಭವತಿ ಸ್ವತಃ ।
ಅಶುದ್ಧ್ಯಾ ಭ್ರಾಂತಿವಿಜ್ಞಾನಂ ಜಾಯತೇ ಸುದೃಢಂ ನೃಣಾಂ ॥೪॥

ಭ್ರಾಂತಿವಿಜ್ಞಾನತಃ ಪುಂಸೋ ನಿಷಿದ್ಧಾಚರಣೇ ರತಿಃ ।
ಜಾಯತೇ ತು ತಯಾ ಪಾಪಂ ಕುರುತೇ ಕರ್ಮ ಸರ್ವದಾ ॥೫॥

ತೇನ ಸಂಸಾರವೃದ್ಧಿಃ ಸ್ಯಾತ್ ನ ಹಿ ಮುಕ್ತಿಃ ಕಥಂ ಚನ ।
ತಸ್ಮಾದಭಕ್ಷ್ಯಂ ಯತ್ನೇನ ದೂರತಃ ಪರಿವರ್ಜಯೇತ್ ॥೬॥

ಜಾಯತೇ ತತಃ ||" ಎಂದು ಶಾಸ್ತ್ರಗಳಲ್ಲಿ ಹೇಳಿದೆ. ಶುದ್ಧವಾದ ಆಹಾರವನ್ನು ಭೋಜನಮಾಡುತ್ತ ಬಂದರೆ ಚಿತ್ತವು ಕ್ರಮವಾಗಿ ತಾನಾಗಿಯೇ ಶುದ್ಧವಾಗುತ್ತಾ ಬರುತ್ತದೆ. ಚಿತ್ತವು ಶುದ್ಧವಾಗಲು ಕ್ರಮವಾಗಿ ಎಂದರೆ ಶುದ್ಧಹಾರಭೋಜನ, ಸತ್ಕರ್ಮಾನುಷ್ಠಾನ, ಚಿತ್ತಶುದ್ಧಿಯೂ, ಸಂಸಾರವು ಅಜ್ಞಾನಮೂಲಕವಾಗಿ ದುಃಖ ರೂಪವಾದುದೆಂಬ ತಿಳಿವಳಿಕೆ, ವೈರಾಗ್ಯ, ಮುಮುಕ್ಷಾ, ವಿವಿದಿಷಾ, ವಿಚಾರ ವೇದಾಂತಶ್ರವಣ ಮನನ ನಿದಿಧ್ಯಾಸನಗಳಿಂದ ಬ್ರಹ್ಮಾತ್ಮೈಕ್ಯಜ್ಞಾನ, ಈ ಕ್ರಮ ದಿಂದ ಪರಶಿವಸ್ವರೂಪಜ್ಞಾನವಾಗುತ್ತದೆ. ಪರಶಿವನೇ ಬ್ರಹ್ಮವಸ್ತುವು. ||೧-೨||

ಪರಮೇಶ್ವರನ ಸ್ವರೂಪಜ್ಞಾನವಾದರೆ, ಕರ್ತೃತ್ವಭೋಕ್ತೃತ್ವ ಜನನಮರಣ ಪ್ರವಾಹಸಂಬಂಧರೂಪವಾದ ಸಂಸಾರಕ್ಕೆ ಕಾರಣವಾದ ಗ್ರಂಥಿಯು ಎಂದರೆ ಜಡಚಿತ್ತಾದಾತ್ಮ್ಯಭ್ರಾಂತಿಯು, ನಾಶವಾಗುತ್ತದೆ. ಈ ವಿಷಯದಲ್ಲಿ ಸಂದೇಹಕ್ಕೆ ಕಾರಣವಿರುವುದಿಲ್ಲವು. ||೩||

ಅಲ್ಲದೆ ತಿನ್ನಬಾರದ ಆಹಾರವನ್ನು ತಿನ್ನುವುದರಿಂದ ಚಿತ್ತವು ತಾನಾಗಿಯೇ ಮಲಿನವಾಗುತ್ತದೆ. ಆ ಮಾಲಿನ್ಯದಿಂದ ಮನುಷ್ಯರಿಗೆ ಬಲವಾಗಿರುವ ಭ್ರಾಂತಿ ಜ್ಞಾನವು, ದೇಹವು ನಾನೆಂಬ ಅಜ್ಞಾನವು ಉಂಟಾಗುತ್ತದೆ. ||೪||

ಭ್ರಾಂತಿಜ್ಞಾನದಿಂದ ಮನುಷ್ಯನಿಗೆ ನಿಷಿದ್ಧವಾದ ಕರ್ಮವನ್ನು ಮಾಡುವುದ ರಲ್ಲಿ ಆಸಕ್ತಿಯುಂಟಾಗುತ್ತದೆ. ಅದರಿಂದ ಯಾವಾಗಲೂ ಸಕಾಮಕರ್ಮವನ್ನೂ ಪಾಪಕರ್ಮವನ್ನೂ ಮಾಡುತ್ತಾನೆ. ಅದರಿಂದ ಸಂಸಾರಬಂಧವು ಹೆಚ್ಚುತ್ತದೆ.

ಅಭಕ್ಷ್ಯಂ ಬ್ರಹ್ಮವಿಜ್ಞಾನವಿಹೀನಸ್ಯೈವ ದೇಹಿನಃ ।
ನ ಸಮ್ಯಗ್ಜ್ಞಾನಿನಸ್ತಸ್ಯ ಸ್ವರೂಪಂ ಸಕಲಂ ಖಲು ॥೭॥

ಅಹಮನ್ನಂ ತಥಾನ್ನಾದ ಇತಿ ಹಿ ಬ್ರಹ್ಮವೇದನಂ ।
ಬ್ರಹ್ಮವಿದ್ಗ್ರಸತಿ ಜ್ಞಾನಾತ್ಸರ್ವಂ ಬ್ರಹ್ಮಾತ್ಮನೈವ ತು ॥೮॥

ಬ್ರಹ್ಮಕ್ಷತ್ರಾದಿಕಂ ಸರ್ವಂ ಯಸ್ಯ ಸ್ಯಾದೋದನಂ ತದಾ ।
ಯಸ್ಯೋಪಸೇಚನಂ ಮೃತ್ಯುಃ ತದ್ಜ್ಞಾನೀ ತಾದೃಶಃ ಖಲು ॥೯॥

ಬ್ರಹ್ಮಸ್ವರೂಪಂ ವಿಜ್ಞಾತುಃ ಜ್ಞಾನಾತ್ತತ್ತಸ್ಯ ಭಾಸತೇ ।
ತಥಾ ಸತಿ ಜಗದ್ಭೋಜ್ಯಂ ಭವೇದ್ವಿಜ್ಞಾನಿನಃ ಖಲು ॥೧೦॥

ಹೇಗೂ ಮುಕ್ತಿಯಾಗದೇ ಹೋಗುವುದು. ಆದುದರಿಂದ ಅಭಕ್ಷ್ಯವನ್ನು ತಿನ್ನದೆ ಪ್ರಯತ್ನಪೂರ್ವಕವಾಗಿ ದೂರದಲ್ಲಿ ಬಿಡಬೇಕು. ॥೫-೬॥

ಬ್ರಹ್ಮಾತ್ಮೈಕ್ಯಜ್ಞಾನವಿಲ್ಲದ ಮನುಷ್ಯನಿಗೇ ಅಭಕ್ಷ್ಯ ಮತ್ತು ಭಕ್ಷ್ಯ ಎಂದು ಮುಂತಾದ ವಿವೇಚನೆಯು ವಿಹಿತವಾಗಿದೆ. ಜ್ಞಾನಿಗೆ ಈ ವಿವೇಚನೆಯು ಅನಾವಶ್ಯಕವಾದುದು. ಏಕೆಂದರೆ ಜ್ಞಾನಿಯು ಭಕ್ಷ್ಯಾಭಕ್ಷ್ಯವೆಲ್ಲವನ್ನೂ ಆ ಪರಬ್ರಹ್ಮ ಸ್ವರೂಪವಾದುದೆಂದು ತಿಳಿದಿರುತ್ತಾನೆ. ॥೭॥

ನಾನೇ ಅನ್ನಸ್ವರೂಪನೂ, ಅನ್ನವನ್ನು ತಿನ್ನುವವನೂ, ಆಗಿದೇನೆ. ಎಂದು ತಿಳಿಯುವುದೇ ಬ್ರಹ್ಮಾತ್ಮೈಕ್ಯಜ್ಞಾನವು. ಇಂಥ ಬ್ರಹ್ಮಜ್ಞಾನಿಯು ತಿನ್ನುವ ಎಲ್ಲ ವಸ್ತುಗಳ ಪ್ರಪಂಚವೂ ಬ್ರಹ್ಮರೂಪದಿಂದ ಇದೆ ಎಂದು ತಿಳಿದು ಆ ಜ್ಞಾನಿಯು ತಿನ್ನುತ್ತಾನೆ. ತೈತ್ತಿರೀಯೋಪನಿಷತ್ತಿನಲ್ಲಿ ಭೃಗು. ೧೦. ರಲ್ಲಿ ಹೀಗೆ ಹೇಳಿದೆ. ॥೮॥

ಬ್ರಾಹ್ಮಣ, ಕ್ಷತ್ರಿಯ ಮುಂತಾದ ಎಲ್ಲ ಚರಾಚರಪ್ರಪಂಚವೂ ಯಾರಿಗೆ ಆಹಾರವಾಗಿದೆಯೋ, ಯಮನೂ ಯಾರಿಗೆ ಉಪ್ಪಿನಕಾಯಿಯ ಹಾಗೆ ಭಕ್ಷ್ಯನಾಗಿದ್ದಾನೆಯೋ, ಯಸ್ಯ ಬ್ರಹ್ಮಚಕ್ಷತ್ರಂಚ ಉಭೇ ಭವತ ಓದನಃ । ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾವೇದಯತ್ರಸಃ ॥ ಎಂದು ಕಠೋಪನಿಷತ್ತಿನಲ್ಲಿ ಹೇಳಿದೆ. ೨.೨೫. ॥೯॥

ಬ್ರಹ್ಮರೂಪವನ್ನು ತಿಳಿದವನಿಗೆ ಆ ಪ್ರಪಂಚವೆಲ್ಲವೂ ಭೋಜ್ಯವೆಂದು ತೋರುತ್ತದೆ. ಎಲ್ಲವೂ ಸಚ್ಚಿದಾನಂದರೂಪವಾದುದೆಂದು ಅನುಭವವು ದೃಢವಾಗಿ

ಜಗದಾತತ್ಮಯಾ ಭಾತಿ ಯದಾ ಭೋಜ್ಯಂ ಭವೇತ್ತದಾ ।
ಯದಾ ಸ್ವಾತ್ಮತಯಾ ಭಾತಿ ಭಕ್ಷಿತಂ ಸಕಲಂ ಸದಾ ॥೧೧॥

ತದಾ ಭಾತೇನ ರೂಪೇಣ ಜಗದ್ಭೋಜ್ಯಂ ಭವೇತ್ಸ್ವಯಂ ।
ಮಾನತಸ್ಸ್ವಾತ್ಮನಾ ಭಾತಂ ಭಕ್ಷಿತಂ ಭವತಿ ಧ್ರುವಂ ॥೧೨॥

ಜಾಗ್ರತ್ಸ್ವಪ್ನಾಭಿಧೇ ಕಾಲೇ ಪ್ರತೀತಂ ಗ್ರಸತೀಶ್ವರಃ ।
ಸ್ವಾತ್ಮನೈವ ಸುಷುಪ್ತೇ ತು ಪುನಸ್ತತ್ಸೃಜತಿ ಪ್ರಭುಃ ॥೧೩॥

ಉಂಟಾಗೋಣದರಿಂದ ಎಲ್ಲವೂ ಬ್ರಹ್ಮಸ್ವರೂಪವಾದುದೆಂದೇ ತೋರುತ್ತಿರುತ್ತದೆ. ಹಾಗೆ ಆದರೇ ಜ್ಞಾನಿಗೆ ಈ ಪ್ರಪಂಚವೆಲ್ಲವೂ ಭೋಜ್ಯರೂಪವಾಗುತ್ತದೆ. ||೧೦||

ಯಾವಾಗ ಸತ್ತೆಯಲ್ಲಿ ಜಗತ್ತಿನ ಅಧ್ಯಾಸದಶೆಯಲ್ಲಿ ಸದ್ರೂಪವಾದ ಬ್ರಹ್ಮವು ಜಗದ್ರೂಪದಿಂದ ತೋರುತ್ತಿರುತ್ತದೋ, ಆಗ ಜಗತ್ತೆಲ್ಲವೂ ಭೋಜ್ಯವೂ ಆಗುತ್ತದೆ. ಯಾವಾಗ ಬಾಧದಶೆಯಲ್ಲಿ ಜಗತ್ತೆಲ್ಲವೂ ಅಧಿಷ್ಠಾನಬ್ರಹ್ಮಾಭಿನ್ನವಾದ ಆತ್ಮಸ್ವರೂಪದಿಂದ ತೋರುತ್ತಿರುತ್ತದೋ, ಆಗ ಜಗತ್ತೆಲ್ಲವೂ ಲಯವಾಗಿ ಭಕ್ಷಿತವಾದ ಹಾಗಾಗಿರುತ್ತದೆ. ||೧೧||

ಯಾವಾಗ ಸ್ಫುರಣಕ್ಕೆ ಆಶ್ರಯವಾದ ಅಧಿಷ್ಠಾನದಲ್ಲಿ ಅಧ್ಯಸ್ತವಾದ ಜಗತ್ತಿಗೆ ಅಧಿಷ್ಠಾನದ ಸ್ಫುರಣಕ್ಕಿಂತಲೂ ಬೇರೆಯಾದ ಸ್ಫುರಣವಿಲ್ಲದುದರಿಂದ ಅಧಿಷ್ಠಾನದ ಸ್ಫುರಣರೂಪದಿಂದ ತೋರುತ್ತಿರುವ ಜಗತ್ತೆಲ್ಲವೂ ಭೋಜ್ಯವಾಗುತ್ತದೆ. ಎಂದರೆ ಅಭೋಜ್ಯವಾಗುವುದಿಲ್ಲವು. ಶ್ರುತಿಪ್ರಮಾಣದಿಂದ ಜಗತ್ತೆಲ್ಲವೂ ಆತ್ಮಸ್ವರೂಪವೆಂದು ಸಾಕ್ಷಾತ್ಕಾರವಿಷಯವಾದಾಗ ಜಗತ್ತೆಲ್ಲವೂ ಅಧಿಷ್ಠಾನದಲ್ಲಿ ಲಯವಾಗಿ ಖಂಡಿತವಾಗಿಯೂ ಭಕ್ಷಿತವಾದಂತಾಗುತ್ತದೆ. ||೧೨||

ಎಚ್ಚರದ, ಸ್ವಪ್ನದ ಕಾಲಗಳಲ್ಲಿ ತೋರುತ್ತಿದ್ದ ಪ್ರಪಂಚವನ್ನು ಜೀವರೂಪದಿಂದ ಇರುವ ಈಶ್ವರನು ಸುಷುಪ್ತಿಕಾಲದಲ್ಲಿ ತನ್ನ ಸ್ವಾತ್ಮರೂಪದಿಂದ ನುಂಗಿಬಿಡುತ್ತಾನೆ. ಆಗ ಅದು ತೋರುವುದಿಲ್ಲ. ಅದು ಆಗ ಕೇವಲ ಅಜ್ಞಾನರೂಪದಲ್ಲಿರುತ್ತದೆ. ಪುನಃ ಎಚ್ಚರದ ಅವಸ್ಥೆಗೆ ಬಂದಾಗ ಅಂಥಾ ಸರ್ವಸಾಧಾರಣವಾದ ವ್ಯಾವಹಾರಿಕ ಪ್ರಪಂಚವನ್ನು ಈಶ್ವರನು ಸೃಷ್ಟಿಸುತ್ತಾನೆ. ಸ್ವಪ್ನದಲ್ಲಿ ಪ್ರಪಂಚವನ್ನು ಜೀವನೇ ಸೃಷ್ಟಿಸುತ್ತಾನೆ. ||೧೩||

ಯಥಾ ಸ್ವಪ್ನಪ್ರಪಂಚಸ್ಥಂ ಸಮಸ್ತಂ ವಸ್ತುತಸ್ಸ್ವಯಮ್ ।
ತಥಾ ಜಾಗ್ರತ್ಪ್ರಪಂಚಸ್ಥಂ ವಸ್ತುತಸ್ಸ್ವಯಮೇವ ಹಿ ॥೧೪॥

ಸ್ವಸ್ವರೂಪಂ ಸ್ವಯಂ ಭುಙ್ತೇ ನಾಸ್ತಿ ಭೋಜ್ಯಂ ಪೃಥಕ್ಸ್ವತಃ ।
ಅಸ್ತಿ ಚೇದಸ್ತಿತಾ ರೂಪಂ ಬ್ರಹ್ಮೈವಾಸ್ತಿತ್ವಲಕ್ಷಣಮ್ ॥೧೫॥

ಅಸ್ತಿತಾಲಕ್ಷಣಾ ಸತ್ತಾ ಸದಾ ಬ್ರಹ್ಮ ನ ಚಾಪರಾ ।
ನಾಸ್ತಿ ಸತ್ತಾಽತಿರೇಕೇಣ ಕಿಂಚಿದಸ್ಯಾಸ್ತಿಕೋತ್ತಮಾಃ ॥೧೬॥

ಕನಸಿನ ಪ್ರಪಂಚದಲ್ಲಿ ತೋರುವ ಎಲ್ಲ ವಸ್ತುವೂ ಹೇಗೆ ಅಧಿಷ್ಠಾನವಾದ ಆತ್ಮರೂಪವಾದುದೋ, ಎಂದರೆ ಆತ್ಮನಿಗಿಂತ ಬೇರೆ ಪರಮಾರ್ಥವಾಗಿ ಇಲ್ಲವೋ, ಹಾಗೆ ಎಚ್ಚರದ ವ್ಯಾವಹಾರಿಕವಾದ ಪ್ರಪ್ರಂಚದಲ್ಲಿ ಎಲ್ಲ ವಸ್ತುವೂ ಆತ್ಮಸ್ವರೂಪವೇ ಆಗಿದೆ. ಏಕೆಂದರೆ ಅದೂ, ಕನಸಿನ ಪ್ರಪಂಚವು ಎಚ್ಚರದಲ್ಲಿ ಬಾಧಿತವಾದಂತೆ, ಮುಕ್ತಿಯಲ್ಲಿ ಬ್ರಹ್ಮಾತ್ಮೈಕ್ಯಜ್ಞಾನದಿಂದ ಬಾಧಿತವಾಗುತ್ತದೆ. ಆದುದರಿಂದ ಅದೂ ಎಂದರೆ, ಎಚ್ಚರದ ವ್ಯಾವಹಾರಿಕವಾದ ಪ್ರಪಂಚವೂ, ಆತ್ಮನಿಗಿಂತ ಪಾರಮಾರ್ಥಿಕವಾಗಿ ಬೇರೆ ಸತ್ತೆಯುಳ್ಳದ್ದಲ್ಲವು. ||೧೪||

ಜ್ಞಾನಿಯು ಜೀವನ್ಮುಕ್ತಾವಸ್ಥೆಯಲ್ಲಿ ಎಲ್ಲವನ್ನೂ ಸ್ವಸ್ವರೂಪವನ್ನಾಗಿ ಕಾಣುತ್ತಾ ತಾನೇ ತನ್ನನ್ನು ಅನುಭವಿಸುತ್ತಾನೆ. ಆದುದರಿಂದ ಆಗ ಅವನಿಗೆ ಭೋಜ್ಯ ಅಭೋಜ್ಯ ಎಂಬ ವ್ಯವಹಾರವು ಸಲ್ಲದು. ಏಕೆಂದರೆ ತನಗಿಂತ ಪಾರಮಾರ್ಥಿಕವಾಗಿ ಬೇರೆಯಾದುದು ಯಾವುದೂ ಇಲ್ಲವು. ಇದೆ ಎಂದರೂ ಅದರ ಅಸ್ತಿತ್ವವೂ ಬ್ರಹ್ಮನ ಸತ್ತಾರೂಪವಾಗಿರುತ್ತದೆ. ಬ್ರಹ್ಮ ಒಂದೇ ಸತ್ತಾರೂಪವಾದುದು. ಎಂದರೆ, ತ್ರಿಕಾಲಾಬಾಧಿತವಾಗಿ ಪಾರಮಾರ್ಥಿಕವಾದ ವಸ್ತುವಾಗಿದೆ. ||೧೫||

ಜಾಯತೇ, ಅಸ್ತಿ ಎಂದು ಮುಂತಾದ ಆರು ಭಾವವಿಕಾರಗಳಲ್ಲಿ ಸೇರಿರುವುದರಿಂದ ಅಸ್ತಿತ್ವವೂ ಒಂದು ವಿಕಾರವಾದರೆ ಬ್ರಹ್ಮನಿರ್ವಿಕಾರವೆಂಬುದು ಹೇಗೆ? ಎಂದರೆ, ಆ ಅಸ್ತಿತ್ವವು ಆಧ್ಯಾಸಿಕವಾಹುದು. ವಾಸ್ತವವಾದ ಸತ್ತೆಯು ಯಾವಾಗಲೂ ಬ್ರಹ್ಮಸ್ವರೂಪವಾದುದೇ ಆಗಿದೆ. ಬೇರೆ ಯಾವುದೂ ಅಲ್ಲ. ಓ ಆಸ್ತಿಕರಲ್ಲಿ ಶ್ರೇಷ್ಠರಾದ ಋಷಿಗಳೇ, ಈ ಸತ್ತೆಗಿಂತ ಬೇರೆಯಾಗಿ ಯಾವ ವಸ್ತುವೂ ಪಾರಮಾರ್ಥಿಕವಾಗಿ ಇಲ್ಲವು. ||೧೬||

ಸತ್ತಾಽತಿರಿಕ್ತಂ ಚೇದಸ್ತಿ ಶೂನ್ಯವತ್ ಶೂನ್ಯಮೇವ ತತ್ ।
ಭವೇನ್ನೈವಾತ್ರ ಸಂದೇಹೋ ನಾಸ್ತಿ ಮಾಯಾ ಚ ವಸ್ತುತಃ ॥೧೭॥

ಅವಿಚಾರಿತರೂಪಾ ಹಿ ಮಾಯಾ ಸರ್ವವಿಮೋಹಿನೀ ।
ಸಾ ಶಿವಜ್ಞಾನಹೀನಾನಾಮೇವ ಭಾತಿ ನ ಯೋಗಿನಃ ॥೧೮॥

ಯೋಗಿನಾಮಾತ್ಮನಿಷ್ಠಾನಾಂ ಮಾಯಾ ಸಾಕ್ಷಿಣಿ ಕಲ್ಪಿತಾ ।
ಸಾಕ್ಷಿರೂಪತಯಾ ಭಾತಿ ಶಿವಜ್ಞಾನೇನ ಬಾಧಿತಾ ॥೧೯॥

ಬಾಧಿತಾಽಪಿ ಪುನರ್ಮಾಯಾ ಭಾತಿ ದಿಙ್ಮೋಹಭಾನವತ್ ।
ಪ್ರಾರಬ್ಧಕರ್ಮಪರ್ಯಂತಂ ಬ್ರಹ್ಮವಿಜ್ಞಾನಿನಾಮಪಿ ॥೨೦॥

ಜಾತಿಯು ತೋರಬೇಕಾದರೆ ವ್ಯಕ್ತಿಗಳು ಇರಬೇಕು. ಸತ್ತೆಯು ಜಾತಿ ಎಂದರೆ ಸತ್ತೆಗಿಂತ ಬೇರೆಯಾದ ಯಾವ ವ್ಯಕ್ತಿಗಳೂ ಇಲ್ಲದ್ದರಿಂದ ಸತ್ತೆಯೂ ಶೂನ್ಯದ ಹಾಗಾಗಿ ಶೂನ್ಯವಾಗಬೇಕಾಗುತ್ತದೆ. ಇದರಲ್ಲಿ ಸಂದೇಹವಿಲ್ಲವು. ಮಾಯೆಯೂ ಪಾರಮಾರ್ಥಿಕವಾಗಿ ಬೇರೆ ಇಲ್ಲವು. ಮಾಯೆಯು ಸತ್ತ್ವ ಅಸತ್ತ್ವ ಎಂಬ ಎರಡು ರೂಪದಿಂದಲೂ ವಿಚಾರವನ್ನು ಸಹಿಸದು. ಏಕೆಂದರೆ ಅದು ಸತ್ ಅಲ್ಲವು, ಬಾಧಿತ ವಾಗುತ್ತದೆ. ಅಸತ್ ಅಲ್ಲವು, ತೋರುತ್ತಿರುತ್ತದೆ. ಆದುದರಿಂದ ಮಾಯೆಯು ಸದಸದ್ಭಿನ್ನವಾಗಿ ಅನಿರ್ವಚನೀಯವಾದುದು. ಈ ಮಾಯೆಯು ಎಲ್ಲರನ್ನೂ ಮಂಕ ರನ್ನಾಗಿ ಮಾಡುತ್ತಿದೆ. ಈ ಮಾಯೆಯು ಶಿವನ ಜ್ಞಾನವಿಲ್ಲದಿರುವವರಿಗೆ ಮಾತ್ರವೇ ಉಂಟಾಗುತ್ತದೆ, ಯೋಗಿಗೆ ಉಂಟಾಗದು. ॥೧೭-೧೮॥

ಆತ್ಮನಿಷ್ಠರಾದ ಯೋಗಿಗಳಿಗೆ ಮಾಯೆಯು ಸಾಕ್ಷಿಯಲ್ಲಿ ಕಲ್ಪಿತವಾದುದೆಂದು ಗೊತ್ತಿರುತ್ತದೆ. ನಮಗೆ, ಅನಾತ್ಮದಲ್ಲಿ ಆತ್ಮವೆಂಬ ಭ್ರಾಂತಿಯುಳ್ಳವರಿಗೆ, ಹಾಗಲ್ಲವು. ಜ್ಞಾನಿಗಳಿಗೆ ಪರಶಿವಜ್ಞಾನದಿಂದ ಬಾಧಿತವಾಗುವ ಆ ಮಾಯೆಯು ಸಾಕ್ಷಿರೂಪವಾಗಿ ತೋರುತ್ತಿರುತ್ತದೆ. ಹಾಗೆ ತೋರುತ್ತಿರುವ ಮಾಯೆಯು ಪರಶಿವನ ಜ್ಞಾನದಿಂದ ಬಾಧಿತವಾಗುತ್ತದೆ. ॥೧೯॥

ಆ ಮಾಯೆಯು ಜ್ಞಾನದಿಂದ ಬಾಧಿತವಾದರೂ ಪ್ರಾರಬ್ಧಕರ್ಮವು ಮುಗಿ ಯುವವರಿಗೆ ಪುನಃಪುನಃ ತೋರುತ್ತಿರುತ್ತದೆ. ಸೂರ್ಯಪ್ರಕಾಶವಿರುವಾಗ ಪೂರ್ವ ಮುಂತಾದ ದಿಕ್ಕುಗಳ ಜ್ಞಾನವುಂಟಾದರೂ ಕತ್ತಲೆಯಲ್ಲಿ ಪುನಃ ದಿಕ್ಕಿನ ಭ್ರಾಂತಿ ಯುಂಟಾಗುವ ಹಾಗೆ ಬ್ರಹ್ಮಜ್ಞಾನವನ್ನು ಹೊಂದಿರುವವರಿಗೂ ಜೀವನ್ಮುಕ್ತರಿಗೂ

ಬ್ರಹ್ಮವಿಜ್ಞಾನಸಂಪನ್ನಃ ಪ್ರತೀತಮಖಿಲಂ ಜಗತ್ ।
ಪಶ್ಯನ್ನಪಿ ಸದಾ ನೈವ ಪಶ್ಯತಿ ಸ್ವಾತ್ಮನಃ ಪೃಥಕ್ ॥೨೦॥

ತಸ್ಮಾದಭಕ್ಷ್ಯಂ ನೈವಾಸ್ತಿ ವಿದುಷಃ ಪರಯೋಗಿನಃ ।
ಆತ್ಮವಿಜ್ಞಾನಹೀನಾನಾಂ ಖಲ್ವೇವಾಭಕ್ಷ್ಯಮಾಸ್ತಿಕಾಃ ॥೨೧॥

ದ್ವಿಜಾನಾಮಾತ್ಮವಿಜ್ಞಾನವಿಹೀನಾನಾಮಿಯಂ ಬುಧಾಃ ।
ವ್ಯವಸ್ಥಾ ಶಂಕರೇಣೈವ ನಿರ್ಮಿತಾ ಭಕ್ಷ್ಯಗಾಮಿನೀ ॥೨೨॥

ಲಶುನಂ ಗೃಂಜನಂ ಚೈವ ಪಲಾಂಡುಂ ಗ್ರಾಮಕುಕ್ಕುಟಂ ।
ಛತ್ರಾಕಂ ವಿಡ್ವರಾಹಂ ಚ ಮತಿಮಾನ್ನೈವ ಭಕ್ಷಯೇತ್ ॥೨೪॥

ಪ್ರಾರಬ್ಧಕರ್ಮದ ಮಹಿಮೆಯಿಂದ ಮಾಯಾಕಾರ್ಯವಾದ ಶರೀರಾದಿವ್ಯವಹಾರವು ಅನುಸರಿಸಿ ಉಂಟಾಗುತ್ತಿರುತ್ತದೆ. ಆದರೂ ಅದು ದಗ್ಧಪಟದಂತೆ ಕಾರ್ಯಕಾರಿಯಾಗದೆ ಇರುತ್ತದೆ. ಪ್ರಾರಬ್ಧಕರ್ಮಾಂತದಲ್ಲಿ ಮರಣವಾದ ಮೇಲೆ, ವಿದೇಹ ಕೈವಲ್ಯರೂಪವಾದ ಮುಕ್ತಿಯಾಗುತ್ತದೆ. ॥೨೦॥

ಬ್ರಹ್ಮಾತ್ಮೈಕ್ಯಜ್ಞಾನವನ್ನು ಪಡೆದವನು, ಜೀವನ್ಮುಕ್ತನು, ಈ ಎಲ್ಲ ಪ್ರಪಂಚವನ್ನೂ ತೋರುತ್ತಿರುವುದನ್ನು ನೋಡುತ್ತಿದ್ದರೂ, ಅದು ತನ್ನ ಆತ್ಮನಿಗಿಂತ ಪಾರಮಾರ್ಥಿಕವಾಗಿ ಬೇರೆಯಾಗಿ ಯಾವಾಗಲೂ ಇಲ್ಲವೆಂಬುದನ್ನು ಕಾಣುತ್ತಿರುತ್ತಾನೆಯೇ ಹೊರತು ಬೇರೆಯಾಗಿರುವಂತೆ ನೋಡುವುದಿಲ್ಲ. ॥೨೧॥

ಆದುದರಿಂದ ಜ್ಞಾನಿಯಾದ ಶ್ರೇಷ್ಠವಾದ ಯೋಗಸಮಾಧಿಯಲ್ಲಿರುವವನಿಗೆ ಭಕ್ಷ್ಯ ಅಭಕ್ಷ್ಯ ಎಂಬ ವಿವೇಚನೆಯೂ, ವಿಧಿನಿಷೇಧಗಳೂ, ಅನ್ವಯಿಸುವುದಿಲ್ಲವು. ಬ್ರಹ್ಮಾತ್ಮೈಕ್ಯಜ್ಞಾನವಿಲ್ಲದವರಿಗೆ, ಅಜ್ಞಾನಿಗಳಿಗೆ, ಭಕ್ಷ್ಯಾಭಕ್ಷ್ಯವಿಧಿನಿಷೇಧಗಳು ಅನ್ವಯಿಸುತ್ತವೆ. ॥೨೨॥

ಓ ಪ್ರಾಜ್ಞರಾದ ಋಷಿಗಳಿರಾ, ಆತ್ಮಜ್ಞಾನವಿಲ್ಲದ ಬ್ರಾಹ್ಮಣಾದಿಗಳಿಗೆ ಈ ಭಕ್ಷ್ಯಾಭಕ್ಷ್ಯವಿಷಯವಾದ ವ್ಯವಸ್ಥೆಯು ಶಂಕರನಿಂದಲೇ ರಚಿಸಲ್ಪಟ್ಟಿದೆ. ॥೨೩॥

ಬಿಳಿಯ ಬೆಳ್ಳುಳ್ಳಿ, ಕೆಂಪು ಬೆಳ್ಳುಳ್ಳಿ, ನೀರುಳ್ಳಿ, ಊರಲ್ಲಿರುವ ಕೋಳಿ, ಅಮೇಧ್ಯವನ್ನು ತಿನ್ನುವ ಹಂದಿ, ನಾಯಿಕೊಡೆ ಸರ್ಪಾಕ್ಷೀಗಿಡ ಇವನ್ನು ವಿವೇಕಿಯು ತಿನ್ನಬಾರದು. ॥೨೪॥

ಪಲಾಂಡುಸದೃಶಂ ಸರ್ವಂ ಗಂಧವರ್ಣರಸಾದಿಭಿಃ ।
ಕಾಮತೋಽಕಾಮತಶ್ಚೈವ ಬ್ರಾಹ್ಮಣೋ ನೈವ ಭಕ್ಷಯೇತ್ ॥೨೫॥

ವೃಕ್ಷನಪ್ರಭವಂ ಸರ್ವಂ ಹಿಂಗುದ್ರವ್ಯಂ ವಿನೈವ ತು ।
ಭೂಸ್ತೃಣಂ ಶಿಗ್ರುಕಂ ಚೈವ ಬ್ರಾಹ್ಮಣೋ ನೈವ ಭಕ್ಷಯೇತ್ ॥೨೬॥

ಖಟ್ವಾಸಂಜ್ಞಂ ಚ ವಾರ್ತಾಕಂ ತಥೈವೋಽಖ(ಷ)ರಜಂ ತೃಣಂ ।
ಲವಣಂ ಭೂಮಿಜಂ ವಿಪ್ರೋ ನೋಹೇನಾಪಿ ನ ಭಕ್ಷಯೇತ್ ॥೨೭॥

ನಖವಿಷ್ಕಿರಸಂಜ್ಞಂ ಚ ತಥಾ ಕೋಯಷ್ಟಿಸಂಜ್ಞಿತಂ ।
ಸೌಲಂ ವಲ್ಲೂರಸಂಜ್ಞಂ ಚ ಮತ್ಸ್ಯದೋ ನೈವ ಭಕ್ಷಯೇತ್ ॥೨೮॥

ಬಕಂ ಚೈವ ಬಲಾಕಂ ಚ ಖಂಜರೀಟಕಸಂಜ್ಞಿತಂ ।
ಕೋಕಿಲಂ ಚ ದ್ವಿಜಶ್ರೇಷ್ಠಾಃ ಪ್ರಮಾದಾಚ್ಚ ನ ಭಕ್ಷಯೇತ್ ॥೨೯॥

ನೀರುಳ್ಳಿಗೆ ವಾಸನೆ, ಬಣ್ಣ, ರುಚಿ ಮುಂತಾದ್ದರಲ್ಲಿ ಸಮಾನವಾಗಿರುವ ಎಲ್ಲ ಪದಾರ್ಥಗಳನ್ನೂ ಇಚ್ಛಾಪೂರ್ವಕವಾಗಿಯಾಗಲಿ ಇಚ್ಛೆಯಿಲ್ಲದೆ ಆಗಲಿ ಬಾಹ್ಮಣನು ತಿನ್ನಬಾರದು. ||೨೫||

ಹಿಂಗು ಹೊರತು ಉಳಿದ ವೃಕ್ಷನಿರ್ಯಾಸದಿಂದ ಪಡೆಯುವ ಪದಾರ್ಥಗಳನ್ನು ಮಜ್ಜಿಗೆಹುಲ್ಲು, ನುಗ್ಗೆಕಾಯಿ ಸೊಪ್ಪು, ಇವನ್ನು ಬ್ರಾಹ್ಮಣನು ಆಹಾರವಾಗಿ ಉಪಯೋಗಿಸಬಾರದು. ||೨೬||

ಕಹಿ ಅಥವಾ ಕಾರದ ರುಚಿಯುಳ್ಳ ಬದನೆಕಾಯಿ, ಊಷರಪ್ರದೇಶದಲ್ಲಿ ಚೌಳುನೆಲದಲ್ಲಿ ಬೆಳೆದ ಹುಲ್ಲು, ಭೂಮಿಯಿಂದ ತೆಗೆದ ಉಪ್ಪು, ಇವುಗಳನ್ನು ಬ್ರಾಹ್ಮಣನು ಆಹಾರದಲ್ಲಿ ಉಪಯೋಗಿಸಬಾರದು. ||೨೭||

ಉಗುರುಗಳಿಂದ ಕೆದಕುವ ಪರಚುವ ಸ್ವಭಾವವುಳ್ಳ ಪ್ರಾಣಿಗಳ, ಮತ್ತು ಟಿಟ್ಟಿಭ ಪಕ್ಷಿಯ ಮಾಂಸವನ್ನೂ, ಸಲಾಕಿಯಲ್ಲಿ ಚುಚ್ಚಿ ಕೆಂಡದಲ್ಲಿ ಸುಟ್ಟ ಮಾಂಸವನ್ನೂ, ಮೀನನ್ನು ತಿನ್ನುವ ಪ್ರಾಣಿಗಳ ಮಾಂಸವನ್ನೂ ತಿನ್ನಬಾರದು. ||೨೮||

ಬಕಪಕ್ಷಿ, ಬೆಳ್ಳಕ್ಕಿ, ಬಾನಕ್ಕಿ, ಕೋಗಿಲೆ, ಇವುಗಳ ಮಾಂಸವನ್ನೂ ಬ್ರಾಹ್ಮಣನು ಪ್ರಮಾದದಿಂದಲೂ ತಿನ್ನಬಾರದು. ||೨೯||

ಪಾಠೀನರೋಹಿತಾವಾದ್ಯೌ ನಿಯುಕ್ತೌ ಹವ್ಯಕವ್ಯಯೋಃ ।
ರಾಜೀವಾನ್ ಸಿಂಹತುಂಡಾಂಶ್ಚ ಶಶಕಾನ್ನೈವ ಭಕ್ಷಯೇತ್ ॥೩೦॥

ಕೇವಲಾನಿ ಚ ಶುಷ್ಕಾಣಿ ತಥಾ ಪರ್ಯುಷಿತಾನಿ ಚ ।
ಋಜೀಷಪಕ್ವಂ ವಿಪ್ರೇಂದ್ರಾಃ ಕದಾಚಿನ್ನೈವ ಭಕ್ಷಯೇತ್ ॥೩೧॥

ವಿಣ್ಮೂತ್ರಂ ಚ ಸುರಾಸ್ಪೃಷ್ಟಂ ಸರ್ವಂ ದ್ರವ್ಯಂ ತಥೈವ ಚ ।
ಸುರಾಸ್ಪೃಷ್ಟಸ್ಯ ಚ ಸ್ಪೃಷ್ಟಂ ಬ್ರಾಹ್ಮಣೋ ನೈವ ಭಕ್ಷಯೇತ್ ॥೩೨॥

ರೇತೋ ದೇಹಮಲಂ ಚೈವ ಶ್ವಕಾಕೋಚ್ಛಿಷ್ಟಮೇವ ಚ ।
ವಿಡ್ವರಾಹಖರೋಷ್ಟ್ರಾಣಾಂ ಮೂತ್ರಂ ವಿಪ್ರೋ ನ ಭಕ್ಷಯೇತ್ ॥೩೩॥

ಬಿಡಾಲಕಾಕಾದ್ಯುಚ್ಛಿಷ್ಟಂ ನಕುಲೋಚ್ಛಿಷ್ಟಮೇವ ಚ ।
ವೇದಬಾಹ್ಯೇನ ಸಂಸ್ಪೃಷ್ಟಂ ಬ್ರಾಹ್ಮಣೋ ನೈವ ಭಕ್ಷಯೇತ್ ॥೩೪॥

ಪಾಠೀನ, ರೋಹಿತ ಎಂಬ ದೊಡ್ಡ ಮೀನುಗಳನ್ನು ಹವ್ಯಕವ್ಯ (ದೇವ, ಪಿತೃಗಳ ಆರಾಧನೆ) ಗಳಲ್ಲಿ ಉಕ್ತವಾಗಿರುವ ಮೀನುಗಳನ್ನು, ಜಲ್ಜಮ ಎಂಬ ಸಣ್ಣ ಮೀನುಗಳನ್ನೂ, ಸಿಂಹದ ಹಾಗೆ ಮುಖವುಳ್ಳ ಅಗಲವಾದ ಮುಖವುಳ್ಳ ಮೀನುಗಳನ್ನೂ, ಮೊಲಗಳನ್ನೂ, ಇವುಗಳ ಮಾಂಸವನ್ನು ತಿನ್ನಬಾರದು. ॥೩೦॥

ತುಂಬ ಒಣಗಿರುವ, ಹಳಸಿರುವ, ಓಡಿನಲ್ಲಿ ಹುರಿದ, ಮಾಂಸವನ್ನು ತಿನ್ನಬಾರದು. ಗೋಮೂತ್ರ ಮತ್ತು ಸಗಣಿ ಇವು ಮದ್ಯಸಂಪರ್ಕವನ್ನು ಪಡೆದರೆ ಅವನ್ನೂ, ಮದ್ಯದಿಂದ ಕೂಡಿದವುಗಳೊಡನೆ ಬೆರೆದಿರುವಂತಹವನ್ನೂ ಬ್ರಾಹ್ಮಣನು ಆಹಾರದಲ್ಲಿ ಉಪಯೋಗಿಸಬಾರದು. ವೀರ್ಯವನ್ನೂ ದೇಹದ ಕೊಳಕನ್ನೂ, ನಾಯಿ, ಕಾಗೆ ಇವುಗಳ ಮಲವನ್ನೂ, ಹಂದಿ, ಕತ್ತೆ, ಒಂಟೆ ಇವುಗಳ ಮೂತ್ರದಿಂದ ಬೆರೆದ ಆಹಾರವನ್ನೂ ಬ್ರಾಹ್ಮಣನು ತಿನ್ನಬಾರದು. ಬೆಕ್ಕಿನ ಎಂಜಲು, ಮುಂಗಸಿಯ ಎಂಜಲು ಇವುಗಳಿಂದ ಬೆರೆದಿರುವ, ವೇದಾಧ್ಯಯನಕ್ಕೆ ಅನರ್ಹನಾದವನು ಮುಟ್ಟಿದ, ಆಹಾರವನ್ನು ಬ್ರಾಹ್ಮಣನು ತಿನ್ನಬಾರದು. ॥೩೧-೩೨-೩೩-೩೪॥

ಶಕುನೀಸಂಜ್ಞಿತಾನ್ ಸರ್ವಾನ್ ತಥಾ ಗ್ರಾಮನಿವಾಸಿನಃ ।
ಅನಿರ್ದಿಷ್ಟಾಂಶ್ಚೈಕಶಫಾನ್ ಕ್ರವ್ಯಾದಾನ್ನೈವ ಭಕ್ಷಯೇತ್ ॥೩೫॥

ಕಲವಿಂಕಸಮಾಖ್ಯಂ ಚ ಟಿಟ್ಟಿಭಂ ಪ್ಲವಮೇವ ಚ ।
ಹಂಸಂ ಚಕ್ರಸಮಾಖ್ಯಂ ಚ ಸಾರಸಂ ನೈವ ಭಕ್ಷಯೇತ್ ॥೩೬॥

ರಜ್ಜುವಾಲಂ ಚ ದಾತ್ಯೂಹಂ ಶುಕಂ ಸಾ(ಶಾ)ರಿಕಸಂಜ್ಞಿತಂ ।
ಪ್ರತುದಾನ್ ಜಾಲಪಾದಾಂಶ್ಚ ಬ್ರಾಹ್ಮಣೋ ನೈವ ಭಕ್ಷಯೇತ್ ॥೩೭॥

ತುರಂಗಸ್ಯ ಗಜಸ್ಯಾಪಿ ಮಂಡ್ರ(ಡೂ)ಕಸ್ಯ ತಥೈವ ಚ ।
ಪುರೀಷಂ ಚ ತಥಾ ಮೂತ್ರಂ ಬ್ರಾಹ್ಮಣೋ ನೈವ ಭಕ್ಷಯೇತ್ ॥೩೮॥

ನರಾಣಾಂ ಚ ಗಜಾನಾಂ ಚ ಮಾಂಸಮಶ್ವಸ್ಯ ಸತ್ತಮಾಃ ।
ಮಹಿಷಸ್ಯ ಚ ಮಾಂಸಂ ಚ ಬ್ರಾಹ್ಮಣೋ ನೈವ ಭಕ್ಷಯೇತ್ ॥೩೯॥

ಅಜಾವಿಮಾಂಸಂ ರಕ್ತಂ ಚ ಗೋಮಾಂಸಂ ಚ ತಥೈವ ಚ ।
ಮೃಗಾಣಾಂ ಚ ತಥಾ ಮಾಂಸಂ ಬ್ರಾಹ್ಮಣೋ ನೈವ ಭಕ್ಷಯೇತ್॥೪೦॥

ಮಾಂಸಂ ಪಂಚನಖಾನಾಂ ಚ ವಿನೈವ ಸಕಲಾನಿ ತು ।
ಕಾಮತೋಽಕಾಮತೋ ವಾಽಪಿ ಬ್ರಾಹ್ಮಣೋ ನೈವ ಭಕ್ಷಯೇತ್ ॥೪೧॥

ಮತ್ಸ್ಯಂ ಕೃತ್ಸ್ನಂ ದೃತಿಸ್ಪೃಷ್ಟಮಾಜ್ಯಂ ಕೀಲಾಲಮೇವ ಚ ।
ರಸಂ ತಾಲಫಲಸ್ಯಾಪಿ ಬ್ರಾಹ್ಮಣೋ ನೈವ ಭಕ್ಷಯೇತ್ ॥೪೨॥

ಹಕ್ಕಿಗಳ ಹೆಸರುಳ್ಳ, ಗ್ರಾಮದಲ್ಲಿ ವಾಸಮಾಡುವ, ಹೇಳದಿರುವ, ಒಂದೇ ಗೊರಸುಳ್ಳ, ಮಾಂಸವನ್ನು ತಿನ್ನುವವುಗಳನ್ನೂ, ಕಲವಿಂಕ ಟಿಟ್ಟಿಭ, ಕಪ್ಪೆ, ಚಕ್ರಹಂಸ, ಸಾರಸ, ಕಾಡುಕೋಳಿ, ಕಾಳುತಿನ್ನುವಹಕ್ಕಿ, ಗಿಣಿ, ಸಾರಿಕೆ, ಕೊಕ್ಕರೆ, ಬಾತುಕೋಳಿ, ಇವುಗಳನ್ನೂ, ಕುದುರೆ, ಆನೆಗಳ ಪುರೀಷಮೂತ್ರಗಳನ್ನೂ, ಮನುಷ್ಯರ, ಆನೆಯ, ಮತ್ತು ಕುದುರೆಯ ಮಾಂಸವನ್ನೂ, ಎಮ್ಮೆಕೋಣಗಳ ಮಾಂಸವನ್ನೂ, ಕುರಿಮೇಕೆಗಳ ಮಾಂಸವನ್ನೂ, ಹಸುವಿನ ಮಾಂಸವನ್ನೂ, ಹುಲ್ಲೆಕರುಗಳ ಮಾಂಸವನ್ನೂ, ಐದುಗುರಿನ ಮೃಗಗಳ ಮಾಂಸ ಹೊರತು ಉಳಿದ ಎಲ್ಲ ಮಾಂಸವನ್ನೂ, ಇಚ್ಛೆ ಇರಲಿ ಇಲ್ಲದಿರಲಿ, ಬ್ರಾಹ್ಮಣನು ತಿನ್ನಬಾರದು. ||೩೫-೩೬-೩೭-೩೮-೩೯-೪೦-೪೧||

ಓದನಂ ತು ಪುನಃ ಪಕ್ವಂ ನಾಳಿಕೇರ(ರಿಕೇಳ)ರಸಂ ತಥಾ ।
ಪಕ್ವಂ ತೋಯಮಭೂಮಿಸ್ಥಂ ಬ್ರಾಹ್ಮಣೋ ನೈವ ಭಕ್ಷಯೇತ್ ॥೪೩॥

ಅನಿರ್ದಶಾಹಗೋಕ್ಷೀರಂ ಔಷ್ಟ್ರಮೇಕಶಫಂ ತಥಾ ।
ಆವಿಕಂ ಸಂಧಿನೀಕ್ಷೀರಂ ವಿವತ್ಸಾಯಾಶ್ಚ ಗೋಃ ಪಯಃ ॥೪೪॥

ಆರಣ್ಯಾನಾಂ ಚ ಸರ್ವೇಷಾಂ ಮೃಗಾಣಾಂ ಮಹಿಷೀಂ ವಿನಾ ।
ಸ್ತ್ರೀಕ್ಷೀರಂ ಚ ಪ್ರಮಾದ್ವಾಽಪಿ ಬ್ರಾಹ್ಮಣೋ ನ ಪಿಬೇತ್ಸದಾ ॥೪೫॥

ಗೋಗಜಾಶ್ವಾದಿಭಿರ್ಘ್ರಾತಂ ಪಾದಸ್ಪೃಷ್ಟಂ ಚ ಕಾಮತಃ ।
ಅನುಲೋಮಾದಿಭಿಸ್ಸ್ಪೃಷ್ಟಂ ಬ್ರಾಹ್ಮಣೋ ನ ಪಿಬೇತ್ಸದಾ ॥೪೬॥

ಉಕ್ತಾನ್ಯೇತಾನಿ ಸರ್ವಾಣಿ ಬ್ರಾಹ್ಮಣಾನಾಂ ವಿಶೇಷತಃ ।
ಅಭಕ್ಷ್ಯಾಣಿ ಮಯೋಕ್ತಾನಿ ಭಕ್ಷಕಶ್ಚ ಪತತ್ಯಧಃ ॥೪೭॥

ಎಲ್ಲ ವಿಧವಾದ ಮೀನನ್ನೂ, ತೊಗಲಿನ ಚೀಲಕ್ಕೆ ತಗುಲಿರುವ ತುಪ್ಪವನ್ನೂ ರಕ್ತವನ್ನೂ ಕರಿಹಣ್ಣಿನ ತಾಳೆಯ ರಸವನ್ನೂ ಎರಡಾವೃತ್ತಿ ಬೇಯಿಸಿದ ಅನ್ನವನ್ನೂ ತೆಂಗಿನ ಹೆಂಡದ ರಸವನ್ನೂ, ಭೂಮಿಗೆ ಸಂಬಂಧಿಸದೆ ಇರುವ ಬಿಸಿ ನೀರನ್ನೂ ಬ್ರಾಹ್ಮಣನು ಉಪಯೋಗಿಸಬಾರದು. ಕರುವಿಗೆ ಹತ್ತುದಿನಗಳಾಗುವ ವರಿಗೆ ಆ ಹಸುವಿನ ಹಾಲನ್ನೂ, ಒಂಟೆಯ ಮತ್ತು ಒಂದು ಗೊರಸುಳ್ಳ ಪ್ರಾಣಿಯ ಮಾಂಸವನ್ನೂ, ಕುರಿಯ ಹಾಲನ್ನೂ, ಕರುವಿಲ್ಲದ ಹಸುವಿನ ಹಾಲನ್ನೂ, ಬ್ರಾಹ್ಮಣನು ಉಪಯೋಗಿಸಬಾರದು. ||೪೨-೪೩-೪೪||

ಎಮ್ಮೆ ಹೊರತು ಉಳಿದ ಕಾಡಿನ ಮೃಗಗಳ ಹಾಲನ್ನೂ, ಹೆಂಗಸರ ಹಾಲನ್ನೂ ಪ್ರಮಾದದಿಂದಲೂ ಕುಡಿಯಬಾರದು. ಹಸು, ಆನೆ, ಕುದುರೆ ಇವುಗಳಿಂದ ಮೂಸಿಸಲ್ಪಟ್ಟ, ತಿಳಿದೂ ಕಾಲಿನಿಂದ ತುಳಿಯಲ್ಪಟ್ಟ, ಅನುಲೋಮಜಾತಿಯವರು ಮುಟ್ಟಿದ ಹಾಲನ್ನೂ ಬ್ರಾಹ್ಮಣನು ಕುಡಿಯಬಾರದು. ಇವೆಲ್ಲವನ್ನೂ ವಿಶೇಷವಾಗಿ ಬ್ರಾಹ್ಮಣನಿಗೆ ಹೇಳಿದೆ. ಈ ಅಭಕ್ಷ್ಯ ಅಪೇಯಗಳನ್ನು ಉಪಯೋಗಿಸುವ ಬ್ರಾಹ್ಮಣನು ಅಧೋಗತಿಯನ್ನು ಹೊಂದುತ್ತಾನೆ. ||೪೫-೪೬-೪೭||

ತಸ್ಮಾದಭಕ್ಷ್ಯಂ ಸಂತ್ಯಜ್ಯ ಬ್ರಾಹ್ಮಣೋ ಮತಿಮತ್ತಮಾಃ ।
ಚಿತ್ತಸ್ಯ ಪರಿಶುದ್ಧ್ಯರ್ಥಂ ಭಕ್ಷ್ಯಮೇವ ತು ಭಕ್ಷಯೇತ್ ॥೪೮॥

ಕ್ಷತ್ರಿಯಾಣಾಂ ಚ ವೈಶ್ಯಾನಾಂ ಭಕ್ಷ್ಯಮೇಷ್ವಪಿ ವಿದ್ಯತೇ ।
ತಥಾಽಪಿ ಭಕ್ಷಣಾಭಾವಃ ತೇಷಾಮತ್ಯಂತಶೋಭನಃ ॥೪೯॥

ಶೂದ್ರಾದೀನಾಂ ಚ ಸರ್ವೇಷಾಮಭಕ್ಷ್ಯಂ ನೈವ ವಿದ್ಯತೇ ।
ತಥಾಽಪ್ಯಭಕ್ಷಣಂ ತೇಷಾಂ ಫಲಾಯ ಮಹತೋ ಭವೇತ್ ॥೫೦॥

ಭಕ್ಷ್ಯಸ್ಯ ಭಕ್ಷಣಾದೇವ ವಿಶುದ್ಧಹೃದಯಃ ಪುಮಾನ್ ।
ಪಾರಮೇಶ್ವರವಿಜ್ಞಾನಾನ್ಮುಚ್ಯತೇ ಭವಬಂಧನಾತ್ ॥೫೧॥

ಪರಮೇಶ್ವರವಿಜ್ಞಾನಂ ವೇದಾದೇವ ನ ಚಾನ್ಯಥಾ ।
ಆಗಮಾಂತರಜನ್ಯಂ ತು ಜ್ಞಾನಂ ನ ಜ್ಞಾನಮಾಸ್ತಿಕಾಃ ॥೫೨॥

ಓ ಪ್ರಾಜ್ಞರಾ, ಆದುದರಿಂದ ಅಭಕ್ಷ್ಯವಸ್ತುಗಳನ್ನೂ ಬಿಟ್ಟು ಭಕ್ಷ್ಯವಾದ ಪದಾರ್ಥಗಳನ್ನೇ ಮನಸ್ಸಿನ ಪರಿಶುದ್ಧಿಗೋಸ್ಕರ ಬ್ರಾಹ್ಮಣರು ತಿನ್ನಬೇಕು. ||೪೮||

ಮೇಲೆ ಹೇಳಿದ ಅಭಕ್ಷ್ಯಪದಾರ್ಥಗಳಲ್ಲೂ ಕ್ಷತ್ರಿಯರಿಗೂ ವೈಶ್ಯರಿಗೂ ಭಕ್ಷಣಾರ್ಹವಾದವೂ ಇವೆ. ಆದರೂ ಅವನ್ನು ತಿನ್ನದೆ ಬಿಡುವುದೇ ತುಂಬ ಒಳ್ಳೆಯದು. ಶೂದ್ರ ಮುಂತಾದವರಿಗೆ ತಿನ್ನಕೂಡದಾದ ವಸ್ತುಗಳಿಲ್ಲವು. ಆದರೂ ಅವರೂ ಅವನ್ನು ತಿನ್ನದೆ ಇರುವುದು ದೊಡ್ಡ ಫಲವನ್ನುಂಟುಮಾಡಬಲ್ಲದು. ||೪೯-೫೦||

ತಿನ್ನುವದಕ್ಕೆ ಅರ್ಹವಾದ ಪದಾರ್ಥಗಳನ್ನು ಮಾತ್ರ ತಿನ್ನುವುದರಿಂದ ಮನುಷ್ಯನು ಪರಿಶುದ್ಧವಾದ ಹೃದಯವುಳ್ಳವನಾಗಿ ಪರಶಿವನ ನಿಜಸ್ವರೂಪದ ಜ್ಞಾನವನ್ನು ಪಡೆಯೋಣದರಿಂದ ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಆ ಪರಮೇಶ್ವರನ ಸ್ವರೂಪದ ತಿಳಿವಳಿಕೆಯು ವೇದವಾಕ್ಯದಿಂದಲೇ ಉಂಟಾಗುತ್ತದೆ. ಬೇರೆ ಯಾವುದರಿಂದಲೂ ಉಂಟಾಗುವುದಿಲ್ಲ. ಇತರವಾದ ಆಗಮ ಮುಂತಾದ ಶಾಸ್ತ್ರಗಳಿಂದ ಉಂಟಾಗುವ ಜ್ಞಾನವು, ವೇದವಾಕ್ಯದಿಂದ ಆಗುವ ಜ್ಞಾನದ ಹಾಗೆ, ಮುಕ್ತಿಗೆ ಶೀಘ್ರವಾಗಿಯೂ ಸುಲಭವಾಗಿಯೂ ಸಾಧನವಾಗಲಾರದು. ||೫೧-೫೨||

ಅಷ್ಟಾದಶಾನಾಂ ವಿದ್ಯಾನಾಂ ವೇದಾದನ್ಯಾಶ್ಚ ಸತ್ತಮಾಃ ।
ವಿದ್ಯಾ ವೇದಾನುಸಾರೇಣ ಪ್ರವೃತ್ತಾಸ್ಸರ್ವಶೋಭನಾಃ ॥೫೩॥

ತಥಾಽಪಿ ತಾಸು ಸರ್ವಾಸು ಕಶ್ಚಿದಂಶಃ ಕ್ವಚಿತ್ಕ್ವಚಿತ್ ।
ಶಿವಾಗಮಾನುಸಾರೇಣ ತತ್ಪ್ರಭೇದಾನುಸಾರತಃ ॥೫೪॥

ವಿಷ್ಣ್ವಾಗಮಾನುಸಾರೇಣ ತತ್ಪ್ರಭೇದಾನುಸಾರತಃ ।
ಬ್ರಹ್ಮಾಗಮಾನುಸಾರೇಣ ತತ್ಪ್ರಭೇದಾನುಸಾರತಃ ॥೫೫॥

ಅಧಿಕಾರಿವಿಶೇಷೇಣ ಕ್ರಮೇಣೈವ ವಿಮುಕ್ತಯೇ ।
ಪ್ರವರ್ತಂತೇ ಮುನಿಶ್ರೇಷ್ಠಾಃ ಸತ್ಯಮೇವ ಮಯೋದಿತಂ ॥೫೬॥

ತತ್ತತ್ತಂತ್ರೇಷು ಯೇ ಮರ್ತ್ಯಾ ದೀಕ್ಷಿತಾ ಮುನಿಸತ್ತಮಾಃ ।
ಸೋಽಂಶಸ್ತೈರೇವ ಸಂಗ್ರಾಹ್ಯಸ್ಸರ್ವಥಾ ನೈವ ವೈದಿಕೈಃ ॥೫೭॥

ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್, ಜ್ಯೋತಿಷ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ನೀತಿಶಾಸ್ತ್ರ—ಎಂಬ ಹದಿನೆಂಟು ವಿದ್ಯೆಗಳಲ್ಲಿ ನಾಲ್ಕು ವೇದಗಳು ಹೊರತು ಉಳಿದ ವಿದ್ಯೆಗಳು ವೇದಗಳಲ್ಲಿ ಹೇಳಿರುವ ಅರ್ಥಗಳಿಗೆ ಅನುಸಾರವಾಗಿ, ವಿರುದ್ಧವಾಗಿ ಅಲ್ಲದೆ, ಪ್ರವರ್ತಿಸುವಂಥವಾಗಿ ಎಲ್ಲಕ್ಕಿಂತ ಶ್ರೇಷ್ಠವಾಗಿರುತ್ತವೆ. ಹಾಗಾದರೂ ಆ ವಿದ್ಯೆಗಳಲ್ಲಿ ಎಲ್ಲವುಗಳಲ್ಲೂ ಕೆಲಕೆಲವು ವಿಷಯಗಳು ಕೆಲಕೆಲವು ಸಂದರ್ಭಗಳಲ್ಲಿ ಅಲ್ಲಲ್ಲಿ ಶಿವಾಗಮಕ್ಕೆ ಅನುಸಾರವಾಗಿಯೂ ಆ ಆಗಮದ ಒಳಭೇದಗಳಿಗೆ ಅನುಸಾರವಾಗಿಯೂ ಇರುವುದರಿಂದಲೂ, ವೈಷ್ಣವಾಗಮಗಳ, ಅವುಗಳ ಒಳಭೇದಗಳಾದ ಗ್ರಂಥಗಳನ್ನೂ, ಬ್ರಹ್ಮಪುರಾಣ ಮತ್ತು ಅದರ ಒಳಭೇದಗಳಾದ ಗ್ರಂಥಗಳನ್ನೂ, ಅನುಸರಿಸಿರೋಣದರಿಂದಲೂ, ಅಧಿಕಾರಿಗಳಲ್ಲಿ ಉಂಟಾಗುವ ವಿಶೇಷಗುಣಗಳಿಂದ ಕ್ರಮವಾಗಿ ಎಂದರೆ ಚಿತ್ತಶುದ್ಧಿ, ಜ್ಞಾನಪ್ರಾಪ್ತಿ, ಮುಕ್ತಿ ಈ ಕ್ರಮದಿಂದಲೇ ಸಂಸಾರಬಂಧದಿಂದ ಬಿಡುಗಡೆಯನ್ನುಂಟುಮಾಡಲು ಪ್ರವರ್ತಿಸುತ್ತವೆ. ಆದುದರಿಂದ ಶೈವ ವೈಷ್ಣವ ಶಾಕ್ತೇಯ ಮತಗಳಿಗೆ ವಿರೋಧವಿಲ್ಲವು. ಓ ಋಷಿಶ್ರೇಷ್ಠರಾ, ನನ್ನ ಈ ಮಾತು ಸತ್ಯವಾದದು. ॥೫೩-೫೪-೫೫-೫೬॥

ಶೈವವೈಷ್ಣವವಾದ ತಂತ್ರಗಳಲ್ಲಿ ಯಾರು ದೀಕ್ಷೆಯನ್ನೂ ಉಪದೇಶವನ್ನೂ ಪಡದಿದಾರೋ, ಅಂಥವರು ಆಯಾ ಆಚಾರಗಳನ್ನು ಆ ಆಗಮಗಳಿಂದಲೇ ತಿಳಿದು

ಮದುಕ್ತಾ ಸಂಹಿತಾ ಸಾಧ್ವೀ ವೇದಮಾನಾನುಸಾರಿಣೀ ।
ವೇದೇತರಾಗಮಾಧೀನಃ ಕಶ್ಚಿದಂಶೋ ನ ವಿದ್ಯತೇ ॥೫೮॥

ಪ್ರಸಾದಾದೇವ ರುದ್ರಸ್ಯ ಸಂಹಿತೇಯಂ ಮಯೋದಿತಾ ।
ಪ್ರಸಾದಶ್ಶಾಂಕರಸ್ಸಮ್ಯಗ್ಜ್ಞಾನಸ್ಯ ಖಲು ಸಾಧನಂ ॥೫೯॥

ಅತೋ ವೇದಾನುಸಾರೇಣ ದ್ವಿಜಾನಾಮಾತ್ಮಶುದ್ಧಯೇ ।
ಅಭಕ್ಷ್ಯಮಾದರೇಣೋಕ್ತಂ ಮಯಾ ವೇದಾರ್ಥವಿತ್ತಮಾಃ ॥೬೦॥

ಸರ್ವಮುಕ್ತಂ ಸಮಾಸೇನ ಕೇವಲಂ ಕರುಣಾಬಲಾತ್ ।
ಶ್ರದ್ದಧಾನಸ್ತ್ವಭಕ್ಷ್ಯಾಣಿ ಭ್ರಮಾದ್ವಾಽಪಿ ನ ಭಕ್ಷಯೇತ್ ॥೬೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ ಅಭಕ್ಷ್ಯನಿವೃತ್ತಿಕಥನಂ ನಾಮ ಪಂಚಚತ್ವಾರಿಂಶಾಧ್ಯಾಯಃ

ಆಚರಿಸಬೇಕು. ಅಲ್ಲದೆ ವೇದೋಕ್ತಕರ್ಮನಿಷ್ಠರಾದ ವೈದಿಕರು ಅಂಥವನ್ನು ಆಚರಿಸಬಾರದು. ||೫೭||

ವೇದಪ್ರಮಾಣಾನುಸಾರಿಯಾದ ಶ್ರೇಷ್ಠವಾದ ಈ ಸಂಹಿತಾಧರ್ಮಶಾಸ್ತ್ರವು ನನ್ನಿಂದ ಹೇಳಲ್ಪಟ್ಟಿದೆ. ವೇದ ಹೊರತು ಇತರವಾದ ಆಗಮ ಮುಂತಾದವುಗಳಿಗೆ ಅಧೀನವಾಗಿರುವ ವಿಷಯವು ಯಾವುದೂ ಇದರಲ್ಲಿಲ್ಲವು. ಈ ಸಂಹಿತೆಯನ್ನು ಪರಶಿವನ ಅನುಗ್ರಹದಿಂದಲೇ ನಾನು ಹೇಳಿದೆನು. ಪರಶಿವನ ಅನುಗ್ರಹವು ಬ್ರಹ್ಮಜ್ಞಾನಕ್ಕೆ ಪರತತ್ತ್ವಜ್ಞಾನಕ್ಕೆ ನೇರವಾಗಿ ಕಾರಣವಾಗಿದೆ. ||೫೮-೫೯||

ಆದುದರಿಂದ ದ್ವಿಜರಿಗೆ ಚಿತ್ತಶುದ್ಧಿಯುಂಟಾಗುವುದಕ್ಕೋಸ್ಕರ, ವೇದತಾತ್ಪರ್ಯವನ್ನು ಅನುಸರಿಸಿ ಅಭಕ್ಷ್ಯವಿಷಯವನ್ನು ನಾನು ಆದರದಿಂದ ಹೇಳಿದೇನೆ; ಓ ಜ್ಞಾನಿಗಳಾದ ಋಷಿಗಳಿರಾ, ನಾನು ಇದೆಲ್ಲವನ್ನೂ ಆ ಪರಶಿವನ ದಯೆಯ ಬಲದಿಂದಲೇ ಹೇಳಿದೇನೆ. ಆದುದರಿಂದ ಶಾಸ್ತ್ರದಲ್ಲಿ ನಂಬಿಕೆಯುಳ್ಳವನು ಅಜ್ಞಾನದಿಂದಲೂ ಅಭಕ್ಷ್ಯವಸ್ತುಗಳನ್ನು ತಿನ್ನಬಾರದು. ||೬೦-೬೧||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಅಭಕ್ಷ್ಯವರ್ಜನವು ಚಿತ್ತಶುದ್ಧಿಗೆ ಕಾರಣವೆಂದು ತಿಳಿಸುವ
ನಲವತ್ತೈದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

ಯಜ್ಞವೈಭವಖಂಡಂ

|| ಷಟ್ಚತ್ವಾರಿಂಶೋಽಧ್ಯಾಯಃ ||

ನಲವತ್ತಾರನೆಯ ಅಧ್ಯಾಯವು

(ಮೃತ್ಯುಸೂಚಕವಿವರಣಮ್)

|| ಓಂ ಸೂತ ಉವಾಚ ||

ಅಥಾರಿಷ್ಟಂ ಪ್ರವಕ್ಷ್ಯಾಮಿ ಸಮಾಸೇನ ನ ವಿಸ್ತರಾತ್ ।
ಯೇನ ವಿಜ್ಞಾತಮಾತ್ರೇಣ ಮೃತ್ಯುಂ ಪಶ್ಯಂತಿ ದೇಹಿನಃ ||೧||

ಸೋಮಚ್ಛಾಯಾಂ ಧ್ರುವಂ ಚೈವ ಮಹಾಪಥಮರುಂಧತೀಂ ।
ಅಪಶ್ಯನ್ವತ್ಸರಾದೂರ್ಧ್ವಂ ನ ಜೀವತಿ ನ ಸಂಶಯಃ ||೨||

ಮರಣಕಾಲವು ಹತ್ತಿರವಾಗಿರುವ ಮನುಷ್ಯನು ಕಾಶಿ ಮೊದಲಾದ ಕ್ಷೇತ್ರಗಳಿಗೆ ಹೋಗಿ ಅಲ್ಲಿ ಸಂಸಾರದುಃಖದಿಂದ ಬಿಡುಗಡೆಯನ್ನು ಹೊಂದಲು ತಕ್ಕ ಧರ್ಮಗಳನ್ನು ಆಚರಿಸಲಿ. ಎನ್ನುವುದಕ್ಕಾಗಿ, ಮರಣಕಾಲ ಸಮೀಪವಾಯಿತೆಂಬುದರ ಸೂಚನೆಯನ್ನು ತಿಳಿಸುವುದಕ್ಕಾಗಿ ಈ ಅಧ್ಯಾಯವು ಪ್ರಾರಂಭಿಸಲ್ಪಡುತ್ತದೆ.

ಸೂತರು ಹೇಳಿದರು — ಎಲೈ ಋಷಿಗಳೇ, ಯಾವುದನ್ನು ತಿಳಿದರೆ ಪ್ರಾಣಿಗಳು ಸಮೀಪವಾದ ಮೃತ್ಯುವನ್ನು ತಿಳಿಯುವರೋ ಅಂಥ ಅರಿಷ್ಟವನ್ನು (ಅಮಂಗಳವನ್ನು, ಅಪಶಕುನವನ್ನು) ಹೇಳುತ್ತೇನೆ ಕೇಳಿರಿ. ||೧||

ಆಯಾಯ ಮಾಸದ ಶುದ್ಧ ದ್ವಿತೀಯಾ ಮೊದಲಾದ ತಿಥಿಗಳಲ್ಲಿ ಕೆಲವು ಕಲೆಗಳರೂಪವಾದ ಚಂದ್ರನ ತೇಜಸ್ಸು ತೋರುತ್ತಿರುತ್ತದೆ. ಅದಕ್ಕೆ ಸೋಮ

ಅರಶ್ಮಿಮಂತಮಾದಿತ್ಯಂ ರಶ್ಮಿಮಂತಂ ಚ ಪಾವಕಂ ।
ಪಶ್ಯನ್ನೇಕಾದಶಾನ್ಮಾಸಾದೂರ್ಧ್ವಂ ಮರ್ತ್ಯೋ ನ ಜೀವತಿ ॥೩॥

ರಜತಂ ವಾ ಸುವರ್ಣಂ ವಾ ವಿಣ್ಮೂತ್ರಂ ವಾ ವಮೇನ್ನರಃ ।
ಪ್ರತ್ಯಕ್ಷಮಥವಾ ಸ್ವಪ್ನೇ ದಶ ಮಾಸಾನ್ ನ ಜೀವತಿ ॥೪॥

ಭೂತಪ್ರೇತಪಿಶಾಚಾಂಶ್ಚ ಗಂಧರ್ವನಗರಾಣಿ ಚ ।
ರುಕ್ಮವರ್ಣಾನ್ದ್ರುಮಾನ್ ಪಶ್ಯನ್ನವ ಮಾಸಾನ್ ನ ಜೀವತಿ ॥೫॥

ಸ್ಥೂಲೋ ವಾಽಥ ಕೃಶೋಽಕಸ್ಮಾದ್ಭವೇನ್ಮರ್ತ್ಯಸ್ಸ್ವಯಂ ಯದಿ ।
ಕೃಷ್ಣವರ್ಣೋಽಥವಾ ಮಾಸಾನಷ್ಟ ಜೀವತಿ ಮಾನವಃ ॥೬॥

ಚ್ಛಾಯಾ ಎಂದು ಹೆಸರು. ಈ ರೀತಿಯಾದ ಚಂದ್ರಕಲೆಯು ಯಾರ ಕಣ್ಣಿಗೆ ಕಾಣುವುದಿಲ್ಲವೋ, ಮತ್ತು ಧ್ರುವನಕ್ಷತ್ರವೂ ಮಹಾಪಥವೂ ಅರುಂಧತೀ ನಕ್ಷತ್ರವೂ ಯಾರ ಕಣ್ಣಿಗೆ ಕಾಣಿಸುವುದಿಲ್ಲವೋ ಅಂಥವನು ಒಂದು ವರ್ಷಕ್ಕಿಂತ ಹೆಚ್ಚು ದಿವಸಗಳು ಬದುಕುವುದಿಲ್ಲ. (ಮಹಾಪಥವೆಂದರೆ ಪ್ರವಾಹರೂಪವಾಗಿರುವ Milky way ನಕ್ಷತ್ರಗಳ ಸಾಲು.) ॥೨॥

ಸೂರ್ಯನನ್ನು ಕಿರಣಗಳಿಲ್ಲದವನನ್ನಾಗಿ ಯಾರು ನೋಡುತ್ತಾರೋ, ಯಾರ ಕಣ್ಣಿಗೆ ಬೆಂಕಿಯು ಕಿರಣಗಳಿಂದ ಕೂಡಿರುವಹಾಗೆ ಕಾಣುತ್ತದೋ, ಅವರು ಹನ್ನೊಂದು ತಿಂಗಳುಗಳಿಗಿಂತ ಹೆಚ್ಚು ದಿನಗಳು ಬದುಕುವುದಿಲ್ಲ. ॥೩॥

ಯಾರು ಬೆಳ್ಳಿಯನ್ನಾಗಲಿ, ಬಂಗಾರವನ್ನಾಗಲಿ, ಮಲಮೂತ್ರಗಳನ್ನಾಗಲಿ ಕಕ್ಕುತ್ತಾನೆಯೋ, ಅಥವಾ ಕಕ್ಕಿದ ಹಾಗೆ ಸ್ವಪ್ನದಲ್ಲಿ ಕಾಣುತ್ತಾನೋ, ಅವನು ಹತ್ತು ತಿಂಗಳುಗಳಿಗಿಂತ ಹೆಚ್ಚು ದಿನಗಳು ಬದುಕುವುದಿಲ್ಲ. ॥೪॥

ಭೂತಗಳನ್ನೂ ಪ್ರೇತಗಳನ್ನೂ ಪಿಶಾಚಗಳನ್ನೂ ಗಂಧರ್ವನಗರಗಳನ್ನೂ (ಗಂಧರ್ವನಗರವೆಂದರೆ ಆಕಾಶದಲ್ಲಿ ಭ್ರಾಂತಿಯಿಂದ ಕಾಣುವ ಪಟ್ಟಣದ ಆಕಾರ) ಬಂಗಾರದ ಬಣ್ಣಗಳುಳ್ಳ ಮರಗಳನ್ನೂ ಯಾರು ನೋಡುತ್ತಾರೋ, ಅವರು ಒಂಬತ್ತು ತಿಂಗಳುಗಳಿಗಿಂತ ಹೆಚ್ಚು ದಿವಸಗಳು ಬದುಕುವುದಿಲ್ಲ. ॥೫॥

ಮನುಷ್ಯನು ಯಾವ ಕಾರಣವೂ ಇಲ್ಲದೆ ಅಕಸ್ಮಾತ್ತಾಗಿ ದಪ್ಪನಾಗುವುದಾಗಲಿ, ಕೃಶನಾಗುವುದಾಗಲಿ ಆದರೂ ಅಥವಾ ಕಪ್ಪುಬಣ್ಣವುಳ್ಳವನಾಗುವುದಾಗಲಿ ಆದರೂ ಅಂಥವನು ಎಂಟು ತಿಂಗಳಿಗಿಂತ ಹೆಚ್ಚು ದಿನಗಳು ಬದುಕುವುದಿಲ್ಲ. ॥೬॥

ಸ್ವಪಾದಂ ಖಂಡಿತಂ ಪಶ್ಯನ್ ಅಗ್ರತಃ ಪೃಷ್ಠತೋಽಪಿ ವಾ ।
ಪಂಕೇ ವಾ ಪಾಂಸುಕೇ ವಾಽಪಿ ಸಪ್ತಮಾಸಾನ್ನ ಜೀವತಿ ॥೭॥

ಕಪೋತೋ ವಾಽಥ ಗೃಧ್ರೋ ವಾ ಕಾಕೋ ವಾ ಯದಿ ಮೂರ್ಧನಿ ।
ಸ್ಥಿತಃ ಕ್ರವ್ಯಾದಸಂಜ್ಞೋ ವಾ ಷಣ್ಮಾಸೇನ ವಿನಶ್ಯತಿ ॥೮॥

ಗಚ್ಛಂತೀ ವಾಯಸೀ ಯಂ ತು ಪಾಂಸುವರ್ಷಂ ವಿಮುಂಚತಿ ।
ಗಚ್ಛೇದ್ವಾಯಸಪಙ್ಕ್ತಿಭಿಃ ಪಾಂಸುವರ್ಷೇಣ ವಾ ನರಃ ॥೯॥

ಸ್ವಚ್ಛಾಯಾಂ ವಿಕೃತಿಂ ಪಶ್ಯೇಚ್ಚತುರ್ಮಾಸಾನ್ನ ಜೀವತಿ ।
ವಿದ್ಯುತಂ ದಕ್ಷಿಣೇ ಭಾಗೇ ಪಶ್ಯೇನ್ಮೇಘವಿವರ್ಜಿತೇ ॥೧೦॥
ಉದಕೇ ಚಾಪಮೈಂದ್ರಂ ವಾ ತ್ರೀಣಿ ದ್ವೌ ವಾ ನ ಜೀವತಿ ।

ಯಾವನು ತನ್ನ ಪಾದದ ಹಿಂಭಾಗದಲ್ಲಾಗಲಿ, ಮುಂಭಾಗದಲ್ಲಾಗಲಿ, ಕತ್ತರಿಸಿರುವ ಹಾಗೂ ಕೆಸರಿನಲ್ಲಾಗಲಿ, ಧೂಳಿನಲ್ಲಾಗಲಿ, ಇರುವ ಹಾಗೂ ಕಾಣುತ್ತಾನೋ ಅವನು ಏಳು ತಿಂಗಳುಗಳಿಗಿಂತ ಹೆಚ್ಚು ದಿವಸಗಳು ಬದುಕಲಾರನು. ॥೭॥

ಪಾರಿವಾಳ, ಹದ್ದು, ಕಾಗೆ, ಇವುಗಳಾಗಲಿ, ಕ್ರವ್ಯಾದಪಕ್ಷಿಯಾಗಲಿ ತಲೆಯ ಮೇಲೆ ಕುಳಿತರೆ ಆ ಮನುಷ್ಯನು ಆರು ತಿಂಗಳ ಕಾಲದಲ್ಲಿ ಸಾಯುತ್ತಾನೆ. ॥೮॥

ದಾರಿಯಲ್ಲಿ ಹೋಗುತ್ತಿರುವಾಗ ಕಾಗೆಯ ಸಂಬಂಧವಾದ ಧೂಳಿಯು ಇವನ ಮೇಲೆ ಬಿದ್ದರೂ, ಅದು ಸಮೀಪದಲ್ಲಿ ಧೂಳನ್ನೆರಚುತ್ತಾ ಹೋದರೂ, ತನ್ನ ನೆರಳನ್ನು ವಿಕಾರವುಳ್ಳದ್ದನ್ನಾಗಿ ನೋಡಿದರೂ, ನಾಲ್ಕು ತಿಂಗಳುಗಳಿಗಿಂತ ಹೆಚ್ಚು ದಿವಸಗಳು ಅಂಥವನು ಬದುಕುವುದಿಲ್ಲ. ॥೯॥

ಯಾವ ಮನುಷ್ಯನು ತನ್ನ ಬಲಭಾಗದಲ್ಲಿ ಮೋಡವಿಲ್ಲದೆ ಇರುವಾಗ ಅಕಸ್ಮಾತ್ತಾಗಿ ಮಿಂಚನ್ನು ನೋಡುತ್ತಾನೆಯೋ, ನೀರಿನಲ್ಲಿ ಇಂದ್ರನ ಧನುಸ್ಸ (ಕಾಮನಬಿಲ್ಲು) ಇರುವಹಾಗೆ ನೋಡುತ್ತಾನೋ ಅವನು ಎರಡು ಮೂರು ತಿಂಗಳುಗಳಿಗಿಂತ ಹೆಚ್ಚು ದಿವಸ ಬದುಕುವುದಿಲ್ಲ. ॥೧೦॥

ದರ್ಪಣೇ ವಾ ಜಲೇ ವಾಽಪಿ ಪರೇಷಾಂ ವಾಽಥ ಚಕ್ಷುಷಿ ॥೧೧॥

ಅಶಿರಸ್ಕಂ ತಥಾಽಽತ್ಮಾನಂ ಪಶ್ಯನ್ಮಾಸೇನ ನಶ್ಯತಿ ।
ಬಸ್ತಗಂಧಸ್ತು ವಾ ದೇಹಶ್ಶವಗಂಧಸ್ತು ವಾ ಭವೇತ್ ॥೧೨॥

ನಿಂಬಗಂಧಸ್ತು ವಾಽತೀವ ಮಾಸಾರ್ಧೇನ ವಿನಶ್ಯತಿ ।
ಶುಷ್ಯತೇ ಹೃದಯಂ ಯಸ್ಯ ಮಸ್ತಕಂ ಧೂಮಸಂಜ್ಞಿತಂ ॥೧೩॥

ಸದಾ ಕಂಪೋ ಭವೇದ್ಯಸ್ಯ ದಶಾಹಂ ನೈವ ಜೀವತಿ ।
ಸಂಭಿನ್ನೋ ಮಾರುತೋ ಯಸ್ಯ ಮರ್ಮಸ್ಥಾನಾನಿ ಕೃಂತತಿ ॥೧೪॥

ಅದ್ಭಿಃ ಸ್ಪೃಷ್ಟೋ ನ ಹೃಷ್ಯೇಚ್ಚ ಮೃತ್ಯುಸ್ತಸ್ಯ ಗೃಹಂ ಗತಃ ।
ಯಕ್ಷವಾನರಸಂಯುಕ್ತರಥೇನೈವ ತು ದಕ್ಷಿಣಾಮ್ ॥೧೫॥
ದಿಶಂ ಗಚ್ಛತಿ ಯೋ ಮರ್ತ್ಯೋ ಮೃತ್ಯುಸ್ತಸ್ಯ ಗೃಹಂ ಗತಃ ।

ಕನ್ನಡಿಯಲ್ಲಾಗಲಿ, ನೀರಿನಲ್ಲಾಗಲಿ, ಮತ್ತೊಬ್ಬರ ಕಣ್ಣಿನಲ್ಲಾಗಲಿ, ತನಗೆ ತಲೆಯಿಲ್ಲದಿರುವ ಹಾಗೆ, ತನ್ನ ನೆರಳನ್ನು ನೋಡಿದರೆ ಅವನು ಒಂದೇ ತಿಂಗಳಲ್ಲಿ ಮರಣಹೊಂದುತ್ತಾನೆ. ॥೧೧॥

ಯಾವನ ಶರೀರದಲ್ಲಿ ಆಡಿನ ಶರೀರದ ವಾಸನೆಯಂತೆ ವಾಸನೆಬರುವುದೋ, ಸತ್ತಶರೀರದ (ಹೆಣದ) ವಾಸನೆ ಬರುವುದೋ, ಅಥವಾ ಬಹಳವಾಗಿ ಬೇವಿನಮರದ ವಾಸನೆಯಂತೆ ವಾಸನೆ ಬರುವುದೋ, ಅವನು ಹದಿನೈದು ದಿನಗಳಲ್ಲಿಯೇ ಸಾಯುತ್ತಾನೆ. ॥೧೨॥

ಯಾರಿಗೆ ಎದೆಯು ಒಣಗಿರುವುದೋ, ತಲೆಯು ಹೊಗೆಯ ಹಾಗಿರುವುದೋ, ಯಾರಿಗೆ ಶರೀರದಲ್ಲಿಯೂ ಯಾವಾಗಲೂ ನಡುಕ ಇರುವುದೋ, ಅವನು ಹತ್ತು ದಿನಗಳಲ್ಲಿ ಸಾಯುತ್ತಾನೆ. ॥೧೩॥

ಯಾರ ಶರೀರದಲ್ಲಿ ವಾಯುವು ಸೇರಿ ಮರ್ಮಸ್ಥಾನಗಳಲ್ಲಿ ಬಾಧೆಯನ್ನುಂಟುಮಾಡುತ್ತದೆಯೋ, ನೀರನ್ನು ಮುಟ್ಟಿದರೂ ಯಾರಿಗೆ ಸಂತೋಷವಾಗುವುದಿಲ್ಲವೋ, ಅಂಥವನ ಮನೆಗೆ ಮೃತ್ಯುವು ಬಂದಿರುವುದಾಗಿ ತಿಳಿಯಬೇಕು. ॥೧೪॥

ಯಾವನು ಕರಡಿ, ಕಪಿ, ಇವುಗಳಿಂದ ಕೂಡಿದ ರಥದಲ್ಲಿ ಕುಳಿತು ದಕ್ಷಿಣ ದಿಕ್ಕಿಗೆ (ಸ್ವಪ್ನದಲ್ಲಿ) ಹೋಗುತ್ತಾನೆಯೋ ಅವನ ಮನೆಗೆ ಮೃತ್ಯುವು ಬಂದುದಾಗಿ ತಿಳಿಯಬೇಕು. ॥೧೫॥

ಕೃಷ್ಣಾಂಬರಧರಾಸ್ಸ್ವಪ್ನೇ ಶ್ಯಾಮವಸ್ತ್ರಧರಾಃ ಸ್ತ್ರಿಯಃ ॥೧೬॥

ಯೇನೈವ ಸಹ ಗಚ್ಛಂತಿ ದಕ್ಷಿಣಾಂ ನ ಸ ಜೀವತಿ ।
ಛಿದ್ರಂ ಕೃಷ್ಣಂ ಸ್ವಕಂ ವಾಸಸ್ಸ್ವಪ್ನೇ ಪಶ್ಯತಿ ಯಃ ಪುಮಾನ್ ॥೧೭॥

ನಗ್ನಂ ವಾ ಭ್ರಮಣಂ ತಸ್ಯ ಗೃಹೇ ಮೃತ್ಯುರುಪಸ್ಥಿತಃ ।
ನಕ್ಷತ್ರಾಣಿ ದಿವಾ ಪಶ್ಯೇದ್ರಾತ್ರೌ ಚೇಂದ್ರಧನುಸ್ತಥಾ ॥೧೮॥

ಚಂದ್ರೇ ರಕ್ತಮಿನೇ ಕೃಷ್ಣಂ ಮಾಸಾನ್ನಶ್ಯತಿ ಮಾನವಃ ।
ಆದಿತ್ಯಮಂಡಲೇ ಪಶ್ಯೇತ್ಸುಷಿರಂ ಚಂದ್ರಮಂಡಲೇ ॥೧೯॥

ಆಕಾಶೇ ರಕ್ತಮಾಲಾಂ ವಾ ಸದ್ಯ ಏವ ವಿನಶ್ಯತಿ ।
ಸ್ಮಶಾನಂ ಭಸ್ಮಕೇಶಾಂಶ್ಚ ನದೀಂ ಶುಷ್ಕಾಂ ಭುಜಂಗಮಾನ್ ॥೨೦॥
ಪಶ್ಯೇತ್ಸ್ವಪ್ನದಶಾಯಾಂ ಯಸ್ತಸ್ಯ ಮೃತ್ಯುರುಪಸ್ಥಿತಃ ।

ಯಾರಿಗೆ ತನ್ನೊಡನೆ ಕಪ್ಪುಬಟ್ಟೆಗಳನ್ನುಟ್ಟಿರುವ ಕಪ್ಪಾದ ಸ್ತ್ರೀಯರು ದಕ್ಷಿಣ ದಿಕ್ಕಿಗೆ ಹೋದಹಾಗೆ ಸ್ವಪ್ನವು ಬೀಳುವುದೋ, ಅವನು ಬಹಳ ದಿಸಸ ಬದುಕುವುದಿಲ್ಲ. ॥೧೬॥

ಯಾವನು ಸ್ವಪ್ನದಲ್ಲಿ ತಾನು ಕಪ್ಪುಬಟ್ಟೆಗಳನ್ನು ಧರಿಸಿರುವ ಹಾಗೂ ಆ ಬಟ್ಟೆಯೆಲ್ಲವೂ ಹರಿದಿರುವ ಹಾಗೂ, ಅಥವಾ ದಿಗಂಬರನಾಗಿ ತಿರುಗುತ್ತಿರುವ ಹಾಗೂ, ನೋಡುತ್ತಾನೆಯೋ ಅವನ ಮನೆಗೆ ಮೃತ್ಯುವು ಬಂದಿರುವುದಾಗಿ ತಿಳಿಯ ಬೇಕು. ॥೧೭॥

ಯಾವನು ಹಗಲಿನಲ್ಲಿ ನಕ್ಷತ್ರಗಳನ್ನೂ ರಾತ್ರೆಯಲ್ಲಿ ಇಂದ್ರಧನುಸ್ಸನ್ನೂ, ನೋಡುತ್ತಾನೆಯೋ, ಚಂದ್ರನು ಕಪ್ಪಾಗಿರುವ ಹಾಗೂ, ಸೂರ್ಯನು ಕೆಂಪಾಗಿರುವ ಹಾಗೂ ನೋಡುತ್ತಾನೆಯೋ, ಅಂಥವನು ಒಂದು ತಿಂಗಳಲ್ಲಿ ಸಾಯುತ್ತಾನೆ. ॥೧೮॥

ಯಾರು ಚಂದ್ರಮಂಡಲದಲ್ಲಿಯೂ, ಸೂರ್ಯಮಂಡಲದಲ್ಲಿಯೂ, ಬಿಲ ವಿರುವಹಾಗೆ ಕಾಣುತ್ತಾರೆಯೋ, ಆಕಾಶದಲ್ಲಿ ಕೆಂಪಾದ ಮಾಲೆಯನ್ನು ನೋಡು ತ್ತಾರೆಯೋ, ಅಂಥವರು ಜಾಗ್ರತೆ ಹಾಳಾಗುತ್ತಾರೆ. ॥೧೯॥

ಯಾರು ಸ್ವಪ್ನದಲ್ಲಿ ಸ್ಮಶಾನವನ್ನೂ, ಬೂದಿಯನ್ನೂ, ಕೂದಲನ್ನೂ, ಒಣಗಿದ ನದಿಯನ್ನೂ, ಹಾವುಗಳನ್ನೂ ನೋಡುತ್ತಾರೆಯೋ ಅವರಿಗೆ ಮರಣವು, ಸಮೀಪವಾಗಿರುತ್ತದೆ. ॥೨೦॥

ಕೃಷ್ಣೈರ್ವಿಕೇಶೈಃ ಪುರುಷೈಸ್ಸ್ವಪ್ನೇ ಯಃ ಪೀಡಿತಃ ಪುಮಾನ್ ॥೨೧॥
ಪಾಷಾಣೈಸ್ತಾಡ್ಯತೇ ಯಸ್ತು ಮೃತ್ಯುಸ್ತಸ್ಯ ಗೃಹಂ ಗತಃ ।
ಭಯಕಂಪಾದಯೋ ಯಸ್ಯ ಭೂಯೋ ಭೂಯೋ ಭವಂತಿ ಚ ॥೨೨॥
ಶೋಕಮೋಹೌ ಸದಾ ಯಸ್ಯ ಮೃತ್ಯುಸ್ತಸ್ಯ ಗೃಹಂ ಗತಃ ।
ಆದಿತ್ಯೋದಯವೇಳಾಯಾಂ ಪ್ರತ್ಯಕ್ಷಂ ಯಸ್ಯ ವೈ ಶಿವಾಃ ॥೨೩॥
ಕ್ರೋಶಂತ್ಯಭಿಮುಖಾ ಹ್ಯೇತ್ಯ ಮೃತ್ಯುಸ್ತಸ್ಯ ಗೃಹ ಂಗತಃ ।
ನಿರ್ಜಲಂ ಯಸ್ಯ ಜಿಹ್ವಾ ತು ದಂತಘರ್ಷಸ್ತು ಯಸ್ಯ ತು ॥೨೪॥
ಹೃದಯೇ ಯಸ್ಯ ವೈ ವಹ್ನಿರ್ಮೃತ್ಯುಸ್ತಸ್ಯ ಗೃಹಂ ಗತಃ ।
ಚಕ್ಷುರೇಕಂ ಸ್ರವೇದ್ಯಸ್ಯ ಕರ್ಣೌ ಸ್ಥಾನಾಚ್ಚ ಭ್ರಶ್ಯತಃ ॥೨೫॥
ಯಸ್ಯ ನಾಸಾ ಚ ವಕ್ರಾ ಸ್ಯಾನ್ಮೃತ್ಯುಸ್ತಸ್ಯ ಗೃಹಂ ಗತಃ ।

ಯಾರು ಸ್ವಪ್ನದಲ್ಲಿ ಕಪ್ಪಾದ ಕೂದಲಿಲ್ಲದ ಮನುಷ್ಯರಿಂದ ಹಿಂಸೆಗೊಳಿಸಲ್ಪಡುತ್ತಾರೋ ಮತ್ತು ಕಲ್ಲುಗಳಿಂದ ಹೊಡೆಯಲ್ಪಡುತ್ತಾರೋ ಅವರ ಮನೆಗೆ ಮೃತ್ಯುವು ಬಂದಿರುವುದಾಗಿ ತಿಳಿಯಬೇಕು. ॥೨೧॥

ಯಾವನಿಗೆ ಭಯ, ನಡುಗುವಿಕೆ, ಇವುಗಳು ಪದೇಪದೇ ಉಂಟಾಗುತ್ತವೆಯೋ, ಮತ್ತು ಪದೇಪದೇ ದುಃಖ, ಅಜ್ಞಾನ ಇವುಗಳುಂಟಾಗುತ್ತವೆಯೋ, ಯಾರ ಕಣ್ಣಿಗೆ ಸೂರ್ಯೋದಯಕಾಲದಲ್ಲಿ ನರಿಗಳು ಕಾಣಿಸಿಕೊಳ್ಳುತ್ತವೆಯೋ, ಕೂಗುತ್ತಾ ಎದುರಾಗಿ ಬರುತ್ತವೆಯೋ, ಅಂಥವನ ಮನೆಗೆ ಮೃತ್ಯುವು ಬಂದುದಾಗಿ ತಿಳಿಯಬೇಕು. ॥೨೨-೨೩॥

ಯಾರಿಗೆ ನಾಲಿಗೆಯು ಒಣಗುವುದೋ, ಹಲ್ಲುಗಳು ಒಂದಕ್ಕೊಂದು ಉಜ್ಜುತ್ತಿರುವುವೋ, ಎದೆಯು ಬಹಳ ಸುಡುತ್ತಿರುವುದೋ, ಅವನ ಮನೆಯಲ್ಲಿ ಮೃತ್ಯುವು ಸಮೀಪವಾಗಿರುವುದೆಂದು ತಿಳಿಯಬೇಕು. ॥೨೪॥

ಯಾರಿಗೆ ಒಂದು ಕಣ್ಣಿನಲ್ಲಿ ನೀರು ಸುರಿಯುತ್ತಿರುವುದೋ, ಕಿವಿಯು ಚಲನ ಮಾಡುವುದೋ, ಮೂಗು ಸೊಟ್ಟನಾಗುವುದೋ, ಅವನ ಮನೆಗೆ ಮೃತ್ಯುವು ಬಂದಿರುವುದೆಂದು ತಿಳಿಯಿರಿ. ॥೨೫॥

ಯಸ್ಯ ಜಿಹ್ವಾ ತು ಕೃಷ್ಣಾ ಸ್ಯಾತ್ಸುಮುಖಂ ದುರ್ಮುಖಂ ಭವೇತ್॥೨೬॥

ಗಂಡೇ ಚ ಕೃಷ್ಣೇ ರಕ್ತೇ ವಾ ಮೃತ್ಯುಸ್ತಸ್ಯ ಗೃಹಂ ಗತಃ ।
ಮುಕ್ತಕೇಶೋ ಹಸನ್ಗಾಯನ್ನೃತ್ಯನ್ಗಚ್ಛತಿ ದಕ್ಷಿಣಾಂ ॥೨೭॥

ದಿಶಂ ಸ್ವಪ್ನೇ ಸಮೃತ್ಯುಸ್ಸ್ಯಾದೀದೃಶಸ್ವಪ್ನದರ್ಶನಃ ।
ಶ್ವೇತಭೂತಾಸ್ತಥಾ ಶ್ವೇತಾ ಅಶ್ವಾಃ ಶ್ವೇತತರಾ ಅಪಿ ॥೨೮॥

ವಹಂತಿ ಯಾಮ್ಯದೇಶೇ ಯಂ ತಸ್ಯ ಮೃತ್ಯುರುಪಸ್ಥಿತಃ ।
ಉಷ್ಟ್ರರಾಸಭಸಂಯುಕ್ತಂ ರಥಮಾರುಹ್ಯ ದಕ್ಷಿಣೇ ॥೨೯॥

ಸ್ವಪ್ನೇ ಗಚ್ಛತಿ ಯೋ ಮರ್ತ್ಯಸ್ತಸ್ಯ ಮೃತ್ಯುರುಪಸ್ಥಿತಃ ।
ಘೋಷಂ ನ ಶೃಣುಯಾತ್ಕರ್ಣೇ ಜ್ಯೋತಿರ್ನೇತ್ರೇ ನ ಪಶ್ಯತಿ ॥೩೦॥
ಶ್ವಭ್ರೇ ಯೋ ನಿಪತೇತ್ಸ್ವಪ್ನೇ ತಸ್ಯ ಮೃತ್ಯುರುಪಸ್ಥಿತಃ ।

ಯಾವನ ನಾಲಿಗೆಯು ಕಪ್ಪಾಗುವುದೋ, ಮುಖವು ರೂಪಗೆಟ್ಟುಹೋಗುವುದೋ, ಕಪೋಲಗಳು ಕಪ್ಪಾಗಿಯಾಗಲಿ, ಕೆಂಪಾಗಿಯಾಗಲಿ, ತಿರುಗುವುವೋ, ಅಂಥವನ ಮನೆಯಲ್ಲಿ ಮೃತ್ಯುವು ಸಮೀಪದಲ್ಲಿರುವುದಾಗಿ ತಿಳಿಯಬೇಕು. ||೨೬||

ಯಾವನು ತಲೆಕೂದಲನ್ನು ಕೆದರಿಕೊಂಡು ನಗುತ್ತಲೂ, ಗಾನಮಾಡುತ್ತಲೂ, ಕುಣಿಯುತ್ತಲೂ ದಕ್ಷಿಣದಿಕ್ಕಿಗೆ ಹೋದಹಾಗೆ ಸ್ವಪ್ನ ಕಾಣುತ್ತಾನೆಯೋ ಅವನಿಗೆ ಕೂಡಲೆ ಮರಣವು ಸಿದ್ಧವು. ||೨೭||

ಸಾಧಾರಣ ಬೆಳ್ಳಗಿರುವ ಅಥವಾ ಬಹಳ ಬೆಳ್ಳಗಿರುವ ಕುದುರೆಗಳು ಯಾವನನ್ನು ದಕ್ಷಿಣ ದಿಕ್ಕಿಗೆ ಹೊತ್ತುಕೊಂಡು ಹೋದಹಾಗೆ ಸ್ವಪ್ನಬೀಳುವುದೋ ಅವನಿಗೆ ಮರಣವು ಸಮೀಪವಾಗಿರುವುದು. ||೨೮||

ಒಂಟೆಯನ್ನಾಗಲಿ ಕತ್ತೆಯನ್ನಾಗಲಿ ಕಟ್ಟಿರುವ ರಥದಲ್ಲಿ ಕುಳಿತು ದಕ್ಷಿಣ ದಿಕ್ಕಿಗೆ ಹೋದಹಾಗೆ ಯಾವನಿಗೆ ಸ್ವಪ್ನಬೀಳುವದೋ ಅವನಿಗೆ ಮರಣವು ಸಮೀಪವಾಗಿರುವುದು. ||೨೯||

ಯಾವನ ಕಿವಿಗಳು ಶಬ್ದವನ್ನು ಕೇಳುವುದಿಲ್ಲವೋ, ಕಣ್ಣುಗಳು ಬೆಳಕನ್ನು ನೋಡುವುದಿಲ್ಲವೋ, ಯಾರಿಗೆ ತಾನು ಗುಂಡಿಯಲ್ಲಿ ಬಿದ್ದಹಾಗೆ ಸ್ವಪ್ನಬೀಳುವುದೋ, ಅವನಿಗೆ ಮರಣವು ಸಮೀಪವಾಗಿರುವುದು. ||೩೦||

ಊರ್ಧ್ವದೃಷ್ಟಿಸ್ತಥಾ ರಕ್ತಕೃಷ್ಣದೃಷ್ಟಿಶ್ಚ ಯಃ ಪುಮಾನ್ ॥೩೧॥

ಊಷ್ಮಣಾ ಹೀನದೇಹಶ್ಚ ತಸ್ಯ ಮೃತ್ಯುರುಪಸ್ಥಿತಃ ।
ನಾಭೌ ವಾ ಹೃದಯೇ ವಾಽಪಿ ಸುಷಿರಂ ಯಸ್ಯ ಭಾಸತೇ ॥೩೨॥

ಯಸ್ಯಾತ್ಯುಷ್ಣಂ ಭವೇನ್ಮೂತ್ರಂ ತಸ್ಯ ಮೃತ್ಯುರುಪಸ್ಥಿತಃ ।
ಜಾಗ್ರತ್ಕಾಲೇಽಥವಾ ಸ್ವಪ್ನೇ ಯೋಽದೃಷ್ಟೇನ ನಿಹನ್ಯತೇ ॥೩೩॥

ಜೀವನಂ ತಸ್ಯ ನಾಸ್ತ್ಯೇವ ಮೃತ್ಯುರಗ್ರ ಇತಿ ಸ್ಥಿತಿಃ ।
ಅಗ್ನೌ ಯೋ ನಿಪತೇತ್ಸ್ವಪ್ನೇ ಯೋ ವಾ ನಷ್ಟಸ್ಮೃತಿಸ್ಸದಾ ॥೩೪॥

ಭೂಮ್ಯಾಂ ಶಬ್ದಂ ಚ ಯೋ ಬ್ರೂಯಾತ್ತಸ್ಯ ಮೃತ್ಯುರುಪಸ್ಥಿತಃ ।
ಶುಕ್ಲಂ ಪ್ರಾವರಣಂ ರಕ್ತಂ ಕೃಷ್ಣಂ ವಾ ಯಸ್ಯ ಭಾಸತೇ ॥೩೫॥

ಯಾವನ ದೃಷ್ಟಿಯು ಮೇಲ್ಮುಖನಾಗುವುದೋ, ಕಪ್ಪು, ಕೆಂಪುಬಣ್ಣಗಳುಳ್ಳದ್ದಾಗುವುದೋ, ಯಾವನು ತಣ್ಣಗಿರುವ ದೇಹದವನಾಗಿರುವನೋ, ಅವನಿಗೆ ಮರಣವು ಸಮೀಪವಾಗಿರುವುದು. ॥೩೧॥

ಯಾವನಿಗೆ ಎದೆಯೂ, ನಾಭಿಯೂ, ಗುಳಿಬೀಳುವುವೋ, ಯಾವನ ಮೂತ್ರವು ಬಹಳ ಬಿಸಿಯಾಗುವುದೋ, ಅವನಿಗೆ ಮರಣವು ಸಮೀಪವಾಗಿ ಇರುತ್ತದೆ. ॥೩೨॥

ಎಚ್ಚರದಲ್ಲಾಗಲಿ ಕನಸಿನಲ್ಲಾಗಲಿ ಯಾವನು ದುರದೃಷ್ಟದಿಂದ ಕಾಣದಿರುವ ವ್ಯಕ್ತಿಯಿಂದ ಹತನಾಗಿರುತ್ತಾನೋ, ಅಂಥವನು ಬದುಕುವುದೇ ಇಲ್ಲವು. ಅಂಥವನಿಗೆ ಮರಣವು ಮುಂದುಗಡೆಯೇ ಇರುತ್ತದೆ. ಇದೇ ವಾಸ್ತವವಾದುದು. ॥೩೩॥

ಯಾವನು ತಾನು ಅಗ್ನಿಯಲ್ಲಿ ಬಿದ್ದಹಾಗೆ ಸ್ವಪ್ನದಲ್ಲಿ ಕಾಣುತ್ತಾನೆಯೋ, ಯಾವನಿಗೆ ಯಾವಾಗಲೂ ಜ್ಞಾಪಕಶಕ್ತಿಯು ತುಂಬ ಕಡಿಮೆಯಾಗಿರುವುದೋ, ಯಾವನು ಭೂಮಿಯಲ್ಲಿ ಶಬ್ದವಾಗುತ್ತಿದೆಯೆಂದು ಹೇಳುತ್ತಿರುತ್ತಾನೋ, ಅಂಥವನಿಗೆ ಮರಣಕಾಲವು ಸಮೀಪಿಸಿದೆ ಎಂದು ತಿಳಿಯಬೇಕು. ॥೩೪॥

ಯಾರಿಗೆ ಬಿಳಿಯದಾದ ಬಟ್ಟೆಯು ಕೆಂಪಾಗಿ, ಕಪ್ಪಾಗಿ, ನೀಲಿಬಣ್ಣವುಳ್ಳದ್ದಾಗಿ ಕಾಣುವುದೋ, ಅಂಥವನಿಗೆ ಮೃತ್ಯುವು ಸಮೀಪವಾಗಿರುವುದಾಗಿ ತಿಳಿಯಬೇಕು. ಅಲ್ಲದೆ ಈ ಮೇಲೆ ಹೇಳಲ್ಪಟ್ಟ ಅರಿಷ್ಟಗಳು ಯಾರಿಗೆ ಚೆನ್ನಾಗಿ ತೋರುತ್ತವೆಯೋ,

ಸ್ವಪ್ನೇ ನೀಲಂ ಪಟಂ ಯಸ್ಯ ತಸ್ಯ ಮೃತ್ಯುರುಪಸ್ಥಿತಃ ।
ಏವಮಾದೀನ್ಯರಿಷ್ಟಾನಿ ಭಾಸಂತೇ ಯಸ್ಯ ಸುಸ್ಥಿರಮ್ ॥೩೬॥

ಸ ಭಯಂ ಶೋಕಮೋಹೌ ಚ ತ್ಯಕ್ತ್ವೈಕಾಗ್ರಮನಾ ದೃಢಂ ।
ಶ್ರೀಮದ್ವಾರಾಣಸೀಂ ಗತ್ವಾ ಸ್ನಾತ್ವಾ ಗಂಗಾಜಲೇ ನರಃ ॥೩೭॥

ದೃಷ್ಟ್ವಾ ವಿಶ್ವೇಶ್ವರಂ ದೇವಂ ಜಪೇತ್ಪಂಚಾಕ್ಷರಂ ಸದಾ ।
ಸೋಮನಾಥೇಽಥವಾ ಸ್ನಾತ್ವಾ ಸೋಮತೀರ್ಥೇ ಮಹೋದಧೌ ॥೩೮॥

ಸೋಮನಾಥಂ ಮಹಾದೇವಂ ದೃಷ್ಟ್ವಾ ಪಂಚಾಕ್ಷರಂ ಜಪೇತ್ ।
ಶ್ರೀಪರ್ವತೇ ತಥಾ ದೇವಂ ದೃಷ್ಟ್ವಾ ಶ್ರೀಮಲ್ಲಿಕೇಶ್ವರಮ್ ॥೩೯॥

ಭಸ್ಮನೋದ್ಧೂಳ್ಯ ಮಂತ್ರೇಣ ಸದಾ ಪಂಚಾಕ್ಷರಂ ಜಪೇತ್ ।
ಶ್ರೀಕಾಳಹಸ್ತಿನಾಥಂ ವಾ ಸುವರ್ಣಮುಖರೀಜಲೇ ॥೪೦॥
ಸ್ನಾತ್ವಾ ದೃಷ್ಟ್ವಾ ಮಹಾದೇವಂ ಸದಾ ಪಂಚಾಕ್ಷರಂ ಜಪೇತ್ ।

ಅವರು ಮನಸ್ಸನ್ನು ದೃಢವಾಗಿ ಮಾಡಿ ಭಯ, ಮೋಹ, ದುಃಖಾದಿಗಳನ್ನು ಬಿಟ್ಟು ಒಂದೇ ಮನಸ್ಸಿನಿಂದ ಶ್ರೀಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಗಂಗಾನದಿಯ ನೀರಿನಲ್ಲಿ ಸ್ನಾನಮಾಡಿ, ವಿಶ್ವೇಶ್ವರನ ದರ್ಶನವನ್ನು ಮಾಡಿ ಯಾವಾಗಲೂ ಪಂಚಾಕ್ಷರೀ ಮಂತ್ರವನ್ನು ಜಪಮಾಡುತ್ತಿರಬೇಕು. ॥೩೫-೩೬-೩೭॥

ಅಥವಾ ಸೋಮನಾಥಕ್ಷೇತ್ರಕ್ಕೆ ಹೋಗಿ ಅಲ್ಲಿ ಸಮುದ್ರಕ್ಕೆ ಸಮಾನವಾದ ಸೋಮತೀರ್ಥದಲ್ಲಿ ಸ್ನಾನಮಾಡಿ ಸೋಮನಾಥಮಹಾದೇವನ ದರ್ಶನವನ್ನು ಮಾಡಿ ಪಂಚಾಕ್ಷರೀಮಂತ್ರವನ್ನು ಜಪಮಾಡಬೇಕು. ॥೩೮॥

ಅಥವಾ ಶ್ರೀಪರ್ವತಕ್ಷೇತ್ರಕ್ಕೆ ಹೋಗಿ ಅಲ್ಲಿ ಮಲ್ಲಿಕೇಶ್ವರನ(ಮಲ್ಲಿಕಾರ್ಜುನನ) ದರ್ಶನಮಾಡಿ ಪೂರ್ವದಲ್ಲಿ ಹೇಳಿರುವ ಮಂತ್ರದಿಂದ ಭಸ್ಮಲೇಪನಮಾಡಿಕೊಂಡು ಯಾವಾಗಲೂ ಪಂಚಾಕ್ಷರೀಮಂತ್ರವನ್ನು ಜಪಮಾಡುತ್ತಿರಬೇಕು. ॥೩೯॥

ಅಥವಾ ಶ್ರೀಕಾಳಹಸ್ತಿಕ್ಷೇತ್ರಕ್ಕೆ ಹೋಗಿ ಅಲ್ಲಿ ಸುವರ್ಣಮುಖರೀ ನದಿಯಲ್ಲಿ ಸ್ನಾನಮಾಡಿ ಕಾಳಹಸ್ತೀಶ್ವರನ ದರ್ಶನಮಾಡಿ ಪಂಚಾಕ್ಷರೀಮಂತ್ರವನ್ನು ಜಪ ಮಾಡುತ್ತಿರಬೇಕು. ॥೪೦॥

ಗೋಪರ್ವತೇ ತಥಾ ದೇವಂ ದೃಷ್ಟ್ವಾ ಶಕ್ತೀಶ್ವರಾಭಿಧಂ ॥೪೧॥

ಭಸ್ಮನೋದ್ಧೂಳ್ಯ ಮಂತ್ರೇಣ ಸದಾ ಪಂಚಾಕ್ಷರಂ ಜಪೇತ್ ।
ಶ್ರೀಮದ್ವೃದ್ಧಾಚಲೇ ವಾಽಪಿ ಸ್ನಾತ್ವಾ ಮುಕ್ತಾಜಲೇ ನರಃ ॥೪೨॥

ದೃಷ್ಟ್ವಾ ವೃದ್ಧಾಚಲೇಶಾನಂ ಸದಾ ಪಂಚಾಕ್ಷರಂ ಜಪೇತ್ ।
ಶ್ರೀಮದ್ರಾಮೇಶ್ವರೇ ವಾಽಪಿ ಸ್ನಾತ್ವಾ ತತ್ರ ಮಹೋದಧೌ ॥೪೩॥

ದೃಷ್ಟ್ವಾ ರಾಮೇಶ್ವರಂ ದೇವಂ ಸದಾ ಪಂಚಾಕ್ಷರಂ ಜಪೇತ್ ।
ಶ್ರೀಹಾಲಾಸ್ಯೇ ತಥಾ ದೇವಂ ದೃಷ್ಟ್ವಾ ಹಾಲಾಸ್ಯನಾಯಕಂ ॥೪೪॥

ಯಥಾಶಕ್ತಿ ಧನಂ ದತ್ವಾ ಸದಾ ಪಂಚಾಕ್ಷರಂ ಜಪೇತ್ ।
ವೇದಾರಣ್ಯೇ ತಥಾ ಸ್ನಾತ್ವಾ ವೇದತೀರ್ಥೇ ಮಹೋದಧೌ ॥೪೫॥

ವೇದಾರಣ್ಯಾಧಿಪಂ ದೃಷ್ಟ್ವಾ ಸದಾ ಪಂಚಾಕ್ಷರಂ ಜಪೇತ್ ।

ಅಥವಾ ವೃಷಭಾಚಲಕ್ಷೇತ್ರಕ್ಕೆ ಹೋಗಿ ಅಲ್ಲಿ ಶಕ್ತೀಶ್ವರನೆಂಬ ಪರಮೇಶ್ವರನ ದರ್ಶನಮಾಡಿ ಭಸ್ಮಲೇಪನಮಾಡಿಕೊಂಡು ಯಾವಾಗಲೂ ಪಂಚಾಕ್ಷರೀಮಂತ್ರವನ್ನು ಜಪಮಾಡುತ್ತಿರಬೇಕು. ॥೪೧॥

ಅಥವಾ ವೃದ್ಧಾಚಲಕ್ಷೇತ್ರಕ್ಕಾದರೂ ಹೋಗಿ ಮುಕ್ತಾನದಿಯಲ್ಲಿ ಸ್ನಾನಮಾಡಿ ವೃದ್ಧಾಚಲೇಶ್ವರನ ದರ್ಶನಮಾಡಬೇಕು. ಅಥವಾ ರಾಮೇಶ್ವರಕ್ಷೇತ್ರಕ್ಕೆ ಹೋಗಿ ಸಮುದ್ರಸ್ನಾನಮಾಡಿ ರಾಮೇಶ್ವರದರ್ಶನಮಾಡಿ ಪಂಚಾಕ್ಷರೀಮಂತ್ರವನ್ನು ಜಪಮಾಡಬೇಕು. ॥೪೨-೪೩॥

ಅಥವಾ ಹಾಲಾಸ್ಯಕ್ಷೇತ್ರಕ್ಕೆ ಹೋಗಿ ಹಾಲಾಸ್ಯೇಶ್ವರನ ದರ್ಶನಮಾಡಿ ಯಥಾಶಕ್ತಿಯಾಗಿ ದಾನಮಾಡಿ ಪಂಚಾಕ್ಷರೀಮಂತ್ರಜಪಮಾಡಬೇಕು. ವೇದಾರಣ್ಯಕ್ಷೇತ್ರಕ್ಕಾದರೂ ಹೋಗಿ ವೇದತೀರ್ಥವೆಂಬ ಮಹಾಸಮುದ್ರದಲ್ಲಿ ಸ್ನಾನಮಾಡಿ ವೇದಾರಣ್ಯೇಶ್ವರನ ದರ್ಶನಮಾಡಿ ಪಂಚಾಕ್ಷರೀಮಂತ್ರವನ್ನು ಜಪಮಾಡಬೇಕು. ॥೪೪-೪೫॥

ಶ್ರೀಮದ್ವಲ್ಮೀಕಸಂಜ್ಞೇ ವಾ ಕ್ಷೀರಕುಂಡೇ ಜಲೇ ನರಃ ॥೪೬॥

ಸ್ನಾತ್ವಾ ದೃಷ್ಟ್ವಾ ಮಹೇಶಾನಂ ಸದಾ ಪಂಚಾಕ್ಷರಂ ಜಪೇತ್ ।
ಗಜಾರಣ್ಯೇ ತಥಾ ಸ್ನಾತ್ವಾ ಕಾವೇರ್ಯಾಮೇವ ಮಾನವಃ ॥೪೭॥

ಗಜಾರಣ್ಯಾಧಿಪಂ ದೃಷ್ಟ್ವಾ ಸದಾ ಪಂಚಾಕ್ಷರಂ ಜಪೇತ್ ।
ಜಪ್ಯೇಶ್ವರಂ ತು ವಾ ಗತ್ವಾ ಸ್ನಾತ್ವಾ ಕಾವೇರಿಕಾಜಲೇ ॥೪೮॥

ದೃಷ್ಟ್ವಾ ಜಪ್ಯೇಶ್ವರೇಶಾನಂ ಸದಾ ಪಂಚಾಕ್ಷರಂ ಜಪೇತ್ ।
ಅಥವಾ ದಕ್ಷಿಣಾವರ್ತೇ ಸ್ನಾತ್ವಾ ಕಾವೇರಿಕಾಜಲೇ ॥೪೯॥

ದಕ್ಷಿಣಾವರ್ತನಾಥೇಶಂ ದೃಷ್ಟ್ವಾ ಪಂಚಾಕ್ಷರಂ ಜಪೇತ್ ।
ಕುಂಭಕೋಣೇ ತಥಾ ಸ್ನಾತ್ವಾ ಕಾವೇರ್ಯಾಮೇವ ಮಾನವಃ ॥೫೦॥

ಕುಂಭಕೋಣಾಧಿಪಂ ದೇವಂ ನತ್ವಾ ಪಂಚಾಕ್ಷರಂ ಜಪೇತ್ ।
ಮಧ್ಯಾರ್ಜುನೇ ವಾ ಕಾವೇರ್ಯಾಂ ಸ್ನಾತ್ವಾ ಮರ್ತ್ಯಸ್ಸಮಾಹಿತಃ ॥೫೧॥
ಮಧ್ಯಾರ್ಜುನಾಭಿದಂ ದೇವಂ ದೃಷ್ಟ್ವಾ ಪಂಚಾಕ್ಷರಂ ಜಪೇತ್ ।

ವಲ್ಮೀಕವೆಂಬ ಕ್ಷೇತ್ರದಲ್ಲಿ ಕ್ಷೀರಕುಂಡದಲ್ಲಿ ಸ್ನಾನಮಾಡಿ ಈಶ್ವರದರ್ಶನ ಮಾಡಿ ಮಂತ್ರಜಪಮಾಡಬೇಕು. ಗಜಾರಣ್ಯಕ್ಕೆ ಹೋಗಿ ಅಲ್ಲಿ ಕಾವೇರೀನದಿಯಲ್ಲಿ ಸ್ನಾನಮಾಡಿ, ಗಜಾರಣ್ಯಕ್ಕೆ ಒಡೆಯನಾದ ಈಶ್ವರನ ದರ್ಶನಮಾಡಿ ಮಂತ್ರಜಪ ಮಾಡುತ್ತಿರಬೇಕು. ॥೪೬-೪೭॥

ಜಪ್ಯೇಶ್ವರವೆಂಬ ಸ್ಥಳಕ್ಕೆ ಹೋಗಿ, ಕಾವೇರಿಯಲ್ಲಿ ಸ್ನಾನಮಾಡಿ ಜಪ್ಯೇಶ್ವರನ ದರ್ಶನಮಾಡಿ ಮಂತ್ರಜಪಮಾಡಬೇಕು. ಅಥವಾ ದಕ್ಷಿಣಾವರ್ತದಲ್ಲಿ ಕಾವೇರಿಯಲ್ಲಿ ಸ್ನಾನಮಾಡಿ ದಕ್ಷಿಣಾವರ್ತೇಶ್ವರನ ದರ್ಶನಮಾಡಿ ಮಂತ್ರಜಪಮಾಡಬೇಕು. ॥೪೮-೪೯॥

ಕುಂಭಕೋಣದಲ್ಲಿ ಕಾವೇರೀನದಿಯಲ್ಲಿ ಸ್ನಾನಮಾಡಿ ಕುಂಭಕೋಣಾಧೀಶ್ವರನ ದರ್ಶನನಮಸ್ಕಾರಗಳನ್ನು ಮಾಡಿ ಮಂತ್ರಜಪಮಾಡಬೇಕು. ಅಥವಾ ಮಧ್ಯಾರ್ಜುನವೆಂಬ ಕ್ಷೇತ್ರದಲ್ಲಿರುವ ಕಾವೇರಿಯ ನೀರಿನಲ್ಲಿ ಸ್ನಾನಮಾಡಿ ಮಧ್ಯಾರ್ಜುನನೆಂಬ ಈಶ್ವರನ ದರ್ಶನಮಾಡಿ ಪಂಚಾಕ್ಷರೀಮಂತ್ರಜಪಮಾಡಬೇಕು. ॥೫೦-೫೧॥

ಶ್ರೀಮದ್ಗೋಮಯತೀರ್ಥೇ ವಾ ತಥಾ ಮಂಗಳವಂಶಕೇ ॥೫೨॥

ಶ್ರೀಮದಗ್ನೀಶ್ವರಾಖ್ಯೇ ವಾ ಕೋಟಿಕಾಖ್ಯೆ (ಹಾಸ್ಯೆ)ಽಥವಾ ನರಃ ।
ಆಮ್ರತೀರ್ಥೇ ಧೃ(ದೃ)ತೀಸ್ಥಾನೇ ಶ್ವೇತಾರಣ್ಯ ಸಮಾಹ್ವಯೇ ॥೫೩॥

ಶ್ರೀಮದ್ಬ್ರಹ್ಮಪುರೇ ವಾಽಪಿ ಕಾವೇರ್ಯುದಧಿಸಂಗಮೇ ।
ಸ್ನಾತ್ವಾ ದತ್ವಾ ಯಥಾಶಕ್ತಿ ಧನಂ ಧಾನ್ಯಂ ತಿಲಂ ತು ವಾ ॥೫೪॥

ದೃಷ್ಟ್ವಾ ಮಹೇಶ್ವರಂ ಭಕ್ತ್ಯಾ ಸದಾ ಪಂಚಾಕ್ಷರಂ ಜಪೇತ್ ।
ಅಥವಾ ಮಾನವಶ್ಶೀಘ್ರಂ ಗತ್ವಾ ವ್ಯಾಘ್ರಪುರಂ ಸದಾ ॥೫೫॥

ಶಿವಗಂಗಾಭಿದೇ ತೀರ್ಥೇ ಸ್ನಾತ್ವಾ ದತ್ವಾ ಯಥಾಬಲಮ್ ।
ಪ್ರದಕ್ಷಿಣತ್ರಯಂ ಕೃತ್ವಾ ಶ್ರೀಮದ(ದ್ದ)ಭ್ರಸಭಾಪತಿಮ್ ॥೫೬॥

ದೃಷ್ಟ್ವಾ ಪಂಚಾಕ್ಷರಂ ಮಂತ್ರಂ ಸತಾರಂ ಸರ್ವದಾ ಜಪೇತ್ ।
ಅಸ್ಮಿನ್ ವ್ಯಾಘ್ರಪುರೇ ಪುಣ್ಯೇ ಯೋ ವಾ ಕೋ ವಾ ತು ಮಾನವಃ ॥೫೭॥
ಮಮಾರ ಪರಮಾ ಮುಕ್ತಿಸ್ಸಿದ್ಧಾ ತಸ್ಯ ನ ಸಂಶಯಃ ।

ಸಂಪದ್ಯುಕ್ತವಾದ ಗೋಮಯವೆಂಬ ತೀರ್ಥದಲ್ಲಾಗಲಿ, ಮಂಗಳವಂಶವೆಂಬ ತೀರ್ಥದಲ್ಲಾಗಲಿ, ಅಥವಾ ಅಗ್ನೀಶ್ವರವೆಂಬ ತೀರ್ಥದಲ್ಲಾಗಲಿ, ಕೋಟಿಕಾ ಎಂಬ ತೀರ್ಥದಲ್ಲಾಗಲಿ, ಆಮ್ರತೀರ್ಥ, ಶ್ವೇತಾರಣ್ಯ, ಮಹಿಮೆಯುಳ್ಳ ಬ್ರಹ್ಮಪುರ, ಇವುಗಳಲ್ಲಾಗಲಿ, ಕಾವೇರೀನದಿಯು ಸಮುದ್ರಕ್ಕೆ ಸೇರುವ ಸ್ಥಳದಲ್ಲಾಗಲಿ, ಸ್ನಾನ ಮಾಡಿ, ತನ್ನ ಶಕ್ತಿಗನುಸಾರ ದ್ರವ್ಯ ಧಾನ್ಯ ಎಳ್ಳು ಇವುಗಳಲ್ಲಾವುದನ್ನಾದರೂ ದಾನಮಾಡಿ, ಭಕ್ತಿಯಿಂದ ಮಹೇಶ್ವರನ ದರ್ಶನಮಾಡಿ ಯಾವಾಗಲೂ ಪಂಚಾಕ್ಷರೀಮಂತ್ರವನ್ನು ಜಪಮಾಡುತ್ತಿರಬೇಕು. ॥೫೨-೫೩-೫೪॥

ಅಥವಾ ಮೇಲೆ ಹೇಳಿದ ರೀತಿಯಲ್ಲಿ ಮರಣಕಾಲ ಸಮೀಪಿಸಿರುವ ಮನುಷ್ಯನು ವ್ಯಾಘ್ರಪುರಕ್ಕೆ ಹೋಗಿ ಶಿವಗಂಗೆ ಎಂಬ ತೀರ್ಥದಲ್ಲಿ ಸ್ನಾನಮಾಡಿ, ಯಥಾಶಕ್ತಿದಾನಮಾಡಿ, ಮೂರು ಪ್ರದಕ್ಷಿಣೆಗಳನ್ನು ಮಾಡಿ ದೇವಸಭಾಪತಿಯಾದ ಪರಮೇಶ್ವರನ ದರ್ಶನಮಾಡಿ ಪ್ರಣವಸಹಿತವಾದ ಪಂಚಾಕ್ಷರೀಮಂತ್ರವನ್ನು ಜಪಮಾಡುತ್ತಿರಬೇಕು. ॥೫೫-೫೬॥

ಪುಣ್ಯಕರವಾದ ಈ ವ್ಯಾಘ್ರಪುರದಲ್ಲಿ ಯಾವನಾದರೂ ಮನುಷ್ಯನು ಮರಣ

ಮಹಾಪಾತಕಸಂಘಾಶ್ಚ ಸ್ಥಾನಸ್ಯಾಸ್ಯ ಪ್ರವೇಶನಾತ್ ||೫೮||

ನಶ್ಯಂತಿ ದರ್ಶನಾದೇವ ಮುಕ್ತಿಸ್ಸಿದ್ಧಾ ಸಭಾಪತೇಃ ।
ಮಹಾಕಾರುಣಿಕೋ ದೇವೋ ಮಹಾನಂದಪರಾಯಣಃ ||೫೯||

ಯತ್ರ ನೃತ್ಯತಿ ತಂ ದೃಷ್ಟ್ವಾ ಮುಚ್ಯತೇ ಭವಬಂಧನಾತ್ ।
ದೇಶದರ್ಶನಮಾತ್ರೇಣ ವಿಮುಕ್ತಾ ಬಹವೋ ಜನಾಃ ||೬೦||

ಕಿಂ ಪುನರ್ದೇವದೇವಸ್ಯ ದರ್ಶನೇನ ಸಭಾಪತೇಃ ।
ಅವಿಮುಕ್ತಾದಪಿ ಶ್ರೇಷ್ಠಮಿದಂ ಸ್ಥಾನಂ ನ ಸಂಶಯಃ ||೬೧||

ಅತ್ರ ನೃತ್ಯತಿ ದೇವೇಶಸ್ತತ್ರ ದೇವೋ ನ ನೃತ್ಯತಿ ।
ಅತ್ರ ದರ್ಶನಮಾತ್ರೇಣ ಮುಕ್ತಿಸ್ಸಿದ್ಧಾ ಹಿ ದೇಹಿನಾಮ್ ||೬೨||
ತತ್ರ ನಷ್ಟಸ್ಯ ಮರ್ತ್ಯಸ್ಯ ತತಶ್ಶ್ರೇಷ್ಠಮಿದಂ ಪುರಮ್ ।

ಹೊಂದಿದರೆ, ಅವನಿಗೆ ಶ್ರೇಷ್ಠವಾದ ಮುಕ್ತಿಯು ಸಿದ್ಧಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ||೫೭||

ಶ್ರೀವ್ಯಾಘ್ರಪುರಕ್ಕೆ ಹೋಗುವುದರಿಂದಲೇ ಬ್ರಹ್ಮಹತ್ಯಾದಿಮಹಾಪಾಪಗಳ ಗುಂಪುಗಳೂ ನಾಶವಾಗುವುವು. ಮತ್ತು ಪರಮೇಶ್ವರದರ್ಶನಮಾಡುವುದರಿಂದ ಮೋಕ್ಷವೇ ಸಿದ್ಧಿಸುವುದು. ||೫೮||

ಬಹಳ ಕರುಣಾಶಾಲಿಯೂ, ಮೇಲಾದ ಪೂರ್ಣವಾದ ಆನಂದಸ್ವರೂಪನೂ ಆದ ಪರಮೇಶ್ವರನು ಯಾವ ಸ್ಥಳದಲ್ಲಿ ನರ್ತನಮಾಡುತ್ತಾನೆಯೋ, ಅಂಥ ಪರಮೇಶ್ವರನ ದರ್ಶನಮಾತ್ರದಿಂದಲೇ ಸಂಸಾರಬಂಧನದಿಂದ ಯಾತ್ರಿಕನಾದ ಭಕ್ತನು ಬಿಡುಗಡೆಯನ್ನು ಹೊಂದುತ್ತಾನೆ. ||೫೯||

ವ್ಯಾಘ್ರಪುರದ ದರ್ಶನಮಾತ್ರದಿಂದಲೇ ಎಷ್ಟೋ ಜನಗಳು ಮೋಕ್ಷ ಹೊಂದಿರುತ್ತಾರೆ. ಹೀಗಿರುವಲ್ಲಿ ಸಾಕ್ಷಾತ್ಪರಮೇಶ್ವರನ ದರ್ಶನದಿಂದ ಮೋಕ್ಷಹೊಂದುತ್ತಾರೆಂದು ಹೇಳಬೇಕಾದುದೇನು ? ||೬೦||

ಈ ವ್ಯಾಘ್ರಪುರಕ್ಷೇತ್ರವು ಅವಿಮುಕ್ತಕ್ಷೇತ್ರಕ್ಕಿಂತಲೂ ಉತ್ತಮವಾದುದು. ಏಕೆಂದರೆ ವ್ಯಾಘ್ರಪುರದಲ್ಲಿ ಪರಮೇಶ್ವರನು ಸಂತೋಷದಿಂದ ನರ್ತನಮಾಡುತ್ತಿರುತ್ತಾನೆ, ಅವಿಮುಕ್ತಕ್ಷೇತ್ರದಲ್ಲಿಯಾದರೋ ಆದೇವನು ನರ್ತನಮಾಡುತ್ತಿರುವುದಿಲ್ಲ.

ಶ್ರೀಮದ್ವ್ಯಾಘ್ರಪುರಂ ಮುಕ್ತ್ವಾ ಯೋ ವಾ ವಾರಾಣಸೀಂ ಗತಃ ॥೬೩॥

ತತ್ರ ನಷ್ಟೋಽಪಿ ಕೈವಲ್ಯಂ ಪ್ರಾಪ್ನುಯಾನ್ನೈವ ಮಾನವಃ ।
ಪಾರ್ವತೀ ಪರಮಾ ಶಕ್ತಿಶ್ಶ್ರೀಮದ್ವ್ಯಾಘ್ರಪುರೇ ಸದಾ ॥೬೪॥

ಪ್ರಕಾಶತೇ ಹಿ ವಿದ್ಯಾಭಿಸ್ಸಂವೃತಾ ಕರುಣಾಬಲಾತ್ ।
ಸರ್ವವಿದ್ಯಾಲಯಾ ದೇವೀ ಯತ್ರಾತೀವ ಪ್ರಕಾಶತೇ ॥೬೫॥
ಖಲು ತತ್ರ ಪರಾ ಮುಕ್ತಿಸ್ತತಃ ಶ್ರೇಷ್ಠಮಿದಂ ಪರಮ್ ।

ಅತಸ್ಸಮಸ್ತಂ ಪರಿವರ್ಜ್ಯ ಸತ್ವರಮ್
ಸಮಸ್ತದೋಷಸ್ಯ ನಿವೃತ್ತಿಸಿದ್ಧಯೇ ।

ವ್ಯಾಘ್ರಪುರದಲ್ಲಿ ಪರಮೇಶ್ವರನ ದರ್ಶನಮಾತ್ರದಿಂದ ಮುಕ್ತಿಯುಂಟಾಗುವುದು. ಅಲ್ಲಿಯಾದರೋ ಮರಣಪಡೆದನಂತರ ಮುಕ್ತಿಯುಂಟಾಗುವುದು. ಆದುದರಿಂದ ವ್ಯಾಘ್ರಪುರವೇ ಉತ್ತಮವಾದುದು. ||೬೧-೬೨||

ವ್ಯಾಘ್ರಪುರವನ್ನು ಬಿಟ್ಟು ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿ ಮರಣವನ್ನು ಹೊಂದಿದಾಗ್ಯೂ ಮೋಕ್ಷವುಂಟಾಗುವುದಿಲ್ಲ. (ಈ ಮಾತನ್ನು ಹೇಳುವವರಿಗೆ ವ್ಯಾಘ್ರ ಪುರವೇ ಶ್ರೇಷ್ಠವೆಂದು ಹೇಳುವುದರಲ್ಲಿ ತಾತ್ಪರ್ಯವೇ ಹೊರತು ಕಾಶೀಮರಣದಿಂದ ಮುಕ್ತಿಯಾಗುವುದಿಲ್ಲವೆಂದು ಹೇಳುವುದರಲ್ಲಿ ತಾತ್ಪರ್ಯವಿಲ್ಲವೆಂದು ತಿಳಿಯಬೇಕು. ಏಕೆಂದರೆ ಕಾಶೀಕ್ಷೇತ್ರದಲ್ಲಿ ಮರಣದಿಂದ ಮುಕ್ತಿಯುಂಟೆಂದು ಹೇಳುವ ಇತರ ಶಾಸ್ತ್ರಗಳೆಲ್ಲವೂ ಆಗ ಅಪ್ರಮಾಣಗಳಾಗಿ ವ್ಯರ್ಥವಾಗುತ್ತವೆ). ||೬೩||

ಶ್ರೇಷ್ಠಳಾದ ಶಕ್ತಿರೂಪಿಣಿಯಾದ ಪಾರ್ವತೀದೇವಿಯು ಭಕ್ತರಿಗೆ ಅನುಗ್ರಹ ವನ್ನು ಮಾಡಬೇಕೆಂದು, ಅನೇಕವಿದ್ಯೆಗಳಿಂದಲೂ, ಕರುಣೆಯಿಂದಲೂ ಕೂಡಿ ಈ ಕ್ಷೇತ್ರದಲ್ಲಿ ಪ್ರಕಾಶಿಸುತ್ತಿದ್ದಾಳೆ. ಹೀಗೆ ಎಲ್ಲಾ ವಿದ್ಯೆಗಳಿಗೂ ತವರುಮನೆಯಾಗಿರುವ ಪಾರ್ವತಿಯು ಎಲ್ಲಿ ಪ್ರಕಾಶಿಸುತ್ತಿದ್ದಾಳೋ, ಅಲ್ಲಿ ತಾನೆ ಜ್ಞಾನಲಾಭವಾಗಿ ಮುಕ್ತಿಯೂ ದೊರೆಯಬೇಕಾದುದು? ಆದ್ದರಿಂದ ಈ ಕ್ಷೇತ್ರವು ಬಹಳ ಶ್ರೇಷ್ಠ ವಾದುದು. ||೬೪-೬೫||

ಆದುದರಿಂದ ಎಲೈ ಋಷಿಗಳೇ, ಎಲ್ಲವನ್ನೂ ಬಿಟ್ಟು ಸಮಸ್ತವಾದ ಪಾಪಗಳ ಪರಿಹಾರಕ್ಕಾಗಿ ಶ್ರೇಷ್ಠವಾದ ವ್ಯಾಘ್ರಪುರಕ್ಕೆ ಯಾವ ಮನುಷ್ಯನು ಹೋಗುತ್ತಾ

ಇದಂ ತು ಮುಖ್ಯಂ ಪುರಮಾಪ್ನುಯಾನ್ನರಃ
ಶಿವಪ್ರಸಾದೇನ ಹಿ ತತ್ರ ಮುಚ್ಯತೇ ॥೬೬॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಯಜ್ಞವೈಭವಖಂಡೇ
ಮೃತ್ಯುಸೂಚಕನಿವರಣಂ ನಾಮ ಷಟ್ಚತ್ವಾರಿಂಶಾಧ್ಯಾಯಃ

ನೆಯೋ, ಅವನು ಈಶ್ವರನ ಅನುಗ್ರಹದಿಂದ ಮೋಕ್ಷವನ್ನು ಹೊಂದುತ್ತಾನೆ ಎಂದು ಸೂತರು ಶೌನಕಾದಿ ಋಷಿಗಳಿಗೆ ಹೇಳಿದರು. ॥೬೬॥

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ವಿಶೇಷಾಂಶವೇನೆಂದರೆ, ಕರ್ಮಗಳನ್ನು ಮಾಡುವವನು ದೇಹಾದಿಗಳಲ್ಲಿ " ನಾನು " ಎಂಬ ಅಭಿಮಾನವುಳ್ಳವನಾಗಿರುವುದರಿಂದ ಅಂಥವನು ಆತ್ಮತತ್ವದ ಪಾರಮಾರ್ಥಿಕವಾದ ಸ್ವರೂಪವನ್ನು ತಿಳಿಯದವನಾಗಿರುತ್ತಾನೆ. ಮತ್ತು ಅಂಥವನು ಮಾಡಿರುವ ಕರ್ಮಫಲಗಳನ್ನು ಅನುಭವಿಸುವಾಗಲೂ ದೇಹಾದ್ಯಭಿಮಾನಿಯಾಗಿಯೇ ಇರುತ್ತಾನೆ. ದುಷ್ಕರ್ಮಗಳ ಫಲವಾದ ರೋಗಾದಿಗಳಿಂದ ದುಃಖಾನುಭವವನ್ನೂ ಅಂತಹ ಅಜ್ಞಾನಿಯೇ ಪಡೆಯುತ್ತಾನೆ. ಸಮ್ಯಕ್‌ಜ್ಞಾನವನ್ನು ಎಂದರೆ ಬ್ರಹ್ಮಾತ್ಮೈಕ್ಯದ ಸಚ್ಚಿದಾನಂದಸ್ವರೂಪದ ಸಾಕ್ಷಾತ್ಕಾರವನ್ನು ಉಳ್ಳವನು, ದೇಹಾದಿಗಳಲ್ಲಿ ಅಭಿಮಾನವಿಲ್ಲದೆ ಸುಖದುಃಖಗಳಿಗೆ ಭಾಗಿಯಾಗಿರುವುದಿಲ್ಲವು. ಆದುದರಿಂದ ಜ್ಞಾನವೇ ಸರ್ವದುಃಖನಿವಾರಕವೂ, ಶಾಶ್ವತ ಸುಖದಾಯಕವೂ ಆಗಿರುವುದರಿಂದ, ಅಂತಹ ಜ್ಞಾನವನ್ನು ಎಲ್ಲರೂ ಪಡೆಯಬೇಕು. ಎಂಬುದು ಮುಖ್ಯತಾತ್ಪರ್ಯವು.

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಮರಣಚಿಹ್ನೆಗಳನ್ನೂ, ಆಗ ಮಾಡಬೇಕಾದುದನ್ನೂ, ತಿಳಿಸುವ
ನಲವತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ
ಸೂತಸಂಹಿತಾ

ಯಜ್ಞವೈಭವಖಂಡಂ

|| ಸಪ್ತಚತ್ವಾರಿಂಶೋಽಧ್ಯಾಯಃ ||

ನಲವತ್ತೇಳನೆಯ ಅಧ್ಯಾಯವು

(ಅವಶಿಷ್ಟಪಾಪಸ್ವರೂಪಕಥನಮ್)

|| ಸೂತ ಉವಾಚ ||

ಅಥಾತಸ್ಸಂಪ್ರವಕ್ಷ್ಯಾಮಿ ಪಾಪಸ್ಯಾಕರಣಾಯ ತು ।
ಭೋಗಾವಶಿಷ್ಟಪಾಪಾನಾಂ ಲಕ್ಷಣಂ ಮುನಿಸತ್ತಮಾಃ ||೧||

ಬ್ರಹ್ಮಹಾ ಕ್ಷಯರೋಗೀ ಸ್ಯಾತ್ ಸುರಾಪೀ ಶ್ಯಾವದಂತಕಃ ।
ಸ್ವರ್ಣಾಪಹಾರೀ ಕುನಖೀ ದುಶ್ಚರ್ಮಾ ಗುರುತಲ್ಪಗಃ ||೨||

ಹಿಂದಿನ ಅಧ್ಯಾಯದಲ್ಲಿ ಮರಣಕಾಲದಲ್ಲಿ ಮಾನವನು ಆಚರಿಸಬೇಕಾದ ಧರ್ಮಗಳನ್ನೂ, ಮರಣಕ್ಕೆ ಕಾರಣಗಳಾದ ಅರಿಷ್ಟಗಳನ್ನೂ, ಅವನ್ನು ಹೋಗಲಾಡಿಸುವ ಕಾಶೀವಾಸ ವಾಘ್ರಪುರೀಶ್ವರದರ್ಶನ ಮುಂತಾದ ಸಾಧನಗಳನ್ನೂ ಹೇಳಿ, ಈಗ ಸಂಚಿತವಾಗಿರಬಹುದಾದ ಪಾಪಗಳ ಲಕ್ಷಣಗಳನ್ನೂ, ಅವನ್ನು ನಿವಾರಿಸಲು ಉಪಾಯಗಳನ್ನೂ ತಿಳಿಸುತ್ತಾರೆ. ಓ ಮುನಿಶ್ರೇಷ್ಠರಿರಾ, ಪಾಪಗಳನ್ನು ಮಾಡದೆ ಬಿಡುವುದಕ್ಕೋಸ್ಕರ ಅವುಗಳ ಸ್ವರೂಪವನ್ನು ಹೇಳಿರುತ್ತೇನೆ. ಸಂಚಿತವಾದ ದುಷ್ಕರ್ಮಗಳಿಂದ ಉಂಟಾಗಿರುವ, ಮತ್ತು ಅವುಗಳ ಫಲವನ್ನು ಅನುಭವಿಸದೆ ಉಳಿದಿರುವ, ಪಾಪಗಳ ನಿವಾರಣೋಪಾಯವನ್ನೂ ಈಗ ಹೇಳುತ್ತೇನೆ. ||೧||

ಬ್ರಾಹ್ಮಣನನ್ನು ಕೊಂದವನು ಕ್ಷಯರೋಗವನ್ನೂ, ಮದ್ಯಪಾನಮಾಡಿದವನು ಕಪ್ಪುಮಿಶ್ರವಾದ ಕಂದುಬಣ್ಣವುಳ್ಳ ಹಲ್ಲುಗಳನ್ನೂ, ಚಿನ್ನವನ್ನು

ಪರದಾರರತಃ ಪಂಗುಃ ಅಂಧಶ್ಚ ಬಧಿರಸ್ತಥಾ ।
ಅನುಕೀರ್ತನಕೃನ್ಮರ್ತ್ಯಃ ಖರಸ್ವಾಮೀ ಭವೇತ್ಸದಾ ॥೩॥

ಗುರುನಿಂದಾಪರೋ ನಿತ್ಯಂ ಅಪಸ್ಮಾರೀ ನಿರಂತರಮ್ ।
ಭಗಂದರೀ ಗುರೋರಾಜ್ಞಾಭಂಗಕಾರೀ ನ ಸಂಶಯಃ ॥೪॥

ಗುರುಮಾತ್ಸರ್ಯಕೃನ್ಮರ್ತ್ಯಃ ವಿಟ್ಕ್ರಿಮಿಸ್ಸ್ಯಾನ್ನ ಸಂಶಯಃ ।
ಗರ್ವವಜ್ಞಾಪರಸ್ತದ್ವತ್ ಶಿವದ್ರೋಹೀ ತಥಾ ಭವೇತ್ ॥೫॥

ಗುರುಶುಶ್ರೂಷಣೇಽಸಕ್ತಃ ದುಷ್ಪ್ರಜ್ಞಸ್ಸ್ಯಾನ್ನ ಸಂಶಯಃ ।
ವಿಷ್ಣುದ್ರೋಹೀ ನರಸ್ಸಾಕ್ಷಾತ್ ಕೃಕಲಾಸತ್ವಮಾಪ್ನುಯಾತ್ ॥೬॥

ಯೋ ವೇದದೂಷಕೋ ಮರ್ತ್ಯಃ ಸ ಚಂಡಾಲೋ ಭವೇತ್ತಥಾ ।
ವೇದಾಂತದೂಷಕಸ್ಸಾಕ್ಷಾತ್ ಪುಲ್ಕಸಸ್ಸ್ಯಾನ್ನ ಸಂಶಯಃ ॥೭॥

ಕದ್ದವನು ವಿಕಾರವಾದ ಉಗುರುಗಳನ್ನೂ, ಗುರುಪತ್ನಿಯಲ್ಲಿ ಸಂಗಮಾಡಿದವನು ಕುಷ್ಠರೋಗವನ್ನೂ, ಹಾದರಮಾಡಿದವನು ಕುಂಟುತನವನ್ನೂ, ಕುರುಡು ಕಿವುಡುಗಳನ್ನೂ, ಈ ಪಾಪಗಳನ್ನು ಪ್ರಕಟನಮಾಡಿದವನು ಕತ್ತೆಗಳಿಗೆ ಸ್ವಾಮಿತ್ವವನ್ನೂ, ಎಂದರೆ ಅಗಸನ ಜನ್ಮವನ್ನೂ ಸರ್ವದಾ ಪಡೆಯುತ್ತಾನೆ. ||೨-೩||

ಗುರುವನ್ನು ನಿಂದಿಸುವವನು ಯಾವಾಗಲೂ ಮೂರ್ಛೆರೋಗವುಳ್ಳವನಾಗುತ್ತಾನೆ. ಗುರುವಿನ ಅಪ್ಪಣೆಯನ್ನು ಮೀರುವವನು ಭಗಂದರ ರೋಗವನ್ನೂ, ಗುರುವಿನಲ್ಲಿ ಅಸೂಯೆಪಡುವವನು ಅಮೇಧ್ಯದಲ್ಲಿನ ಹುಳುವಿನ ಜನ್ಮವನ್ನೂ, ಗುರುವನ್ನು ತಿರಸ್ಕರಿಸುವವನೂ ಶಿವದ್ರೋಹವನ್ನು ಮಾಡುವವನೂ, ||೪-೫||

ಗುರುಸೇವೆಯಲ್ಲಿ ಆದರವಿಲ್ಲದವನೂ ಕೆಟ್ಟ ಮತ್ತು ತಪ್ಪಾದ ತಿಳಿವಳಿಕೆಯನ್ನು ಪಡೆಯುವವನಾಗುತ್ತಾನೆ. ಸಂದೇಹವಿಲ್ಲವು. ವಿಷ್ಣುದ್ರೋಹಮಾಡುವ ಮನುಷ್ಯನು ಹಲ್ಲಿ, ಗೋಸುಂಬೆ, ಇವುಗಳ ಜನ್ಮವನ್ನೂ ಪಡೆಯುತ್ತಾನೆ. ವೇದವನ್ನು ನಿಂದಿಸುವವನು ಹೊಲೆಯನಾಗಿಯೂ, ವೇದಾಂತವನ್ನು ನಿಂದಿಸುವವನೂ, ||೬-೭||

ಉನ್ಮತ್ತೋ ವೇದವಿಜ್ಞಾನದೂಷಕಃ ಪುರುಷಾಧಮಃ ।
ರಜಸ್ವಲಾಽಭಿಗಂತಾ ಸ್ಯಾದಂತ್ಯಜಾತಿಸ್ತು ಮಾನವಃ ॥೮॥

ಅಗ್ನಿದೋ ಮನುಜಃ ಕುಷ್ಠೀ ಗರದಶ್ಚ ತಥೈವ ಚ ।
ಶಸ್ತ್ರಪಾಣಿಸ್ತಥಾ ಮರ್ತ್ಯಃ ರೂಪ್ಯಚೋರಸ್ತು ದರ್ದುರಃ ॥೯॥

ಕೂಟಕೃನ್ಮುಖರೋಗೀ ಸ್ಯಾತ್ ಕೂಟಸಾಕ್ಷೀ ತಥೈವ ಚ ।
ಕೂಟಕೃತ್ಯಸಹಾಯಶ್ಚ ತದುಪಾಯಪ್ರದೋಽಪಿ ಚ ॥೧೦॥

ಪಿತೃಮಾತೃಪರಿತ್ಯಾಗೀ ಬಾಲತ್ಯಾಗೀ ತಥೈವ ಚ ।
ಅಕ್ಷಿರೋಗೀ ಭವೇನ್ನಿತ್ಯಂ ಭಾರ್ಯಾತ್ಯಾಗೀ ತು ಮಾನವಃ ॥೧೧॥

ಅಲ್ಪಾಯುಶ್ಚಾಪ್ರದಾನೇನ ಪ್ರತಿಜ್ಞಾತಸ್ಯ ಮಾನವಃ ।
ಪತ್ನೀ ಬಹುತ್ವೇಽಪ್ಯೇಕಸ್ಯಾಂ ರಮತೇ ಷಂಡ ಏವ ಸಃ ॥೧೨॥

ವೇದಾರ್ಥಜ್ಞಾನವನ್ನು ಅಲ್ಲಗಳೆಯುವ ನೀಚಮನುಷ್ಯನೂ ಹುಚ್ಚನಾಗುತ್ತಾನೆ. ಬಹಿಷ್ಠೆಯರಾಗಿರುವ ಹೆಂಗಸರಲ್ಲಿ ಸಂಗಮಾಡುವವನು ಮಾದಿಗನಾಗುತ್ತಾನೆ. ಮನೆ ಮುಂತಾದವುಗಳಿಗೆ ಬೆಂಕಿಯನ್ನು ಹಾಕುವವನೂ ಇತರರಿಗೆ ವಿಷವನ್ನು ಹಾಕುವವನೂ ಕುಷ್ಠರೋಗ ಉಳ್ಳವನಾಗುತ್ತಾನೆ. ಶಸ್ತ್ರಗಳನ್ನು ಅನಾವಶ್ಯಕವಾಗಿಯೂ ಅನುಚಿತವಾಗಿಯೂ ಧರಿಸುವವನೂ, ಬೆಳ್ಳಿಯನ್ನು ಕದಿಯುವವನೂ ಕಪ್ಪೆಯಾಗಿ ಹುಟ್ಟುತ್ತಾನೆ. ||೮-೯||

ಗುಟ್ಟಾಗಿ ಅಪಕಾರವನ್ನೂ ಕೆಡುಕನ್ನೂ ಮಾಡುವವನೂ, ಸುಳ್ಳುಸಾಕ್ಷ್ಯವನ್ನು ಹೇಳುವವನೂ, ಅಂತಹ ಮೋಸಕಾರ್ಯಕ್ಕೆ ಸಹಾಯಮಾಡುವವನೂ, ಅದಕ್ಕೆ ಸಾಧನಗಳನ್ನು ಒದಗಿಸಿಕೊಡುವವನೂ, ಮುಖದಲ್ಲಿ ಯಾವುದಾದರೊಂದು ರೋಗವನ್ನು ಪಡೆಯುತ್ತಾನೆ. ತಂದೆತಾಯಿಯರನ್ನು ತ್ಯಜಿಸುವವನೂ ಮಕ್ಕಳನ್ನು ಬಿಡುವವನೂ, ಹೆಂಡತಿಯನ್ನು ಕೈಬಿಡುವವನೂ, ಕಣ್ಣುಬೇನೆಯುಳ್ಳವನಾಗುತ್ತಾನೆ. ||೧೦-೧೧||

ವಾಗ್ದಾನಮಾಡಿದ ವಸ್ತುವನ್ನು ಕೊಡದೆ ಹೋಗುವ ಮನುಷ್ಯನು ಅಲ್ಪಾಯುಸ್ಸಿನಲ್ಲೇ ಸಾಯುತ್ತಾನೆ. ಅನೇಕ ಜನರು ಹೆಂಡತಿಯರಿದ್ದರೂ ಒಬ್ಬಳಲ್ಲೇ ರಮಿಸುವವನು ನಪುಂಸಕನಾಗುತ್ತಾನೆ. ಇತರರ ಅನ್ನವನ್ನು ಅಪಹರಿಸುವವನೂ

ಅನ್ನಾಪಹಾರೀ ಮಂದಾಗ್ನಿಃ ಜಿಹ್ವಾರೋಗೀ ಭವೇತ್ತಥಾ ।
ಅಗ್ರಭುಕ್ ಗಳರೋಗೀ ಸ್ಯಾತ್ ನಷ್ಟಭೋಗೀ ತಥೈವ ಚ ॥೧೩॥

ಪಂಚಯಜ್ಞವಿನಿರ್ಮುಕ್ತಃ ವಿಡ್ವರಾಹೋ ಭವೇನ್ನರಃ ।
ಪರ್ವಮೈಥುನಕೃನ್ಮರ್ತ್ಯಃ ಪ್ರಮೇಹೀ ಸ್ಯಾನ್ನ ಸಂಶಯಃ ॥೧೪॥

ಅಭ್ಯಾಗತಪರಿತ್ಯಾಗೀ ಕಪೋಲೇ ಪೀಡಿತೋ ಭವೇತ್ ।
ತಥಾಽತಿಥಿಪರಿತ್ಯಾಗೀ ಭವೇನ್ನಾತ್ರ ವಿಚಾರಣಾ ॥೧೫॥

ಸ್ವಾತ್ಮೋತ್ಕರ್ಷಪರೋ ನಿತ್ಯಂ ವಾಮನಃ ಪಂಗುರೇವ ಚ ।
ಗೋಘ್ನಶ್ಚೈವ ಕೃತಘ್ನಶ್ಚ ಜಾತ್ಯಂಧಸ್ಸ್ಯಾನ್ನ ಸಂಶಯಃ ॥೧೬॥

ನಿಸ್ಸ್ನೇಹಕಸ್ಸ್ವಭಾರ್ಯಾಯಾಂ ಗಳಗ್ರಂಥಿರ್ಭವೇನ್ನರಃ ।
ವೇಶ್ಯಾಸೇವಾಪರೋ ಮರ್ತ್ಯಃ ಛಿನ್ನಲಿಂಗೋ ನ ಸಂಶಯಃ ॥೧೭॥

ಅಜೀರ್ಣರೋಗ, ನಾಲಿಗೆಯ ರೋಗಗಳಿಂದ ನರಳುತ್ತಾನೆ. ಅತಿಥಿಗಳಿಗಿಂತಲೂ ಅಭ್ಯಾಗತರಿಗಿಂತಲೂ ಮುಂಚೆ ಊಟಮಾಡುವವನೂ, ಅಗ್ರವೆಂಬ ದಾನವನ್ನು ಸ್ವೀಕರಿಸುವವನೂ, ಇತರರು ಕಳೆದುಕೊಂಡದ್ದನ್ನು ಅನುಭವಿಸುವವನೂ ಗಂಡಮಾಲೆ ಮುಂತಾದ ಕತ್ತಿನ ರೋಗವುಳ್ಳವನಾಗುತ್ತಾನೆ. ||೧೨-೧೩||

ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಬ್ರಹ್ಮಯಜ್ಞ, ಮನುಷ್ಯಯಜ್ಞ ಎಂಬ ಪಂಚಮಹಾಯಜ್ಞಗಳನ್ನು ಪ್ರತಿನಿತ್ಯವೂ ಆಚರಿಸದೆ ಇರುವವನು ಅಮೇಧ್ಯವನ್ನು ತಿನ್ನುವ ಹಂದಿಯಾಗುತ್ತಾನೆ. ಪೂರ್ಣಿಮಾ ಅಮಾವಾಸ್ಯಾ ಕಾಲಗಳಲ್ಲಿ ಸ್ತ್ರೀಸಂಗಮವನ್ನು ಮಾಡುವವನು ಮೇಹರೋಗವನ್ನು ಹೊಂದುತ್ತಾನೆ. ಮಧ್ಯಾಹ್ನ ಕಾಲಕ್ಕೆ ಭೋಜನಕ್ಕಾಗಿ ಬಂದ ದಾರಿಗರಾದ ಅತಿಥಿ, ಅಭ್ಯಾಗತರನ್ನು ಊಟಮಾಡಿಸದೆ ಕಳುಹಿಸುವವನು ಕಪೋಲರೋಗವುಳ್ಳವನಾಗುತ್ತಾನೆ. ನಿಮಂತ್ರಣಕೊಟ್ಟು ಕರೆಸಿದವರನ್ನು ಊಟಮಾಡಿಸದವನನ್ನೂ ಕಪೋಲಪೀಡೆಯು ಬಾಧಿಸುತ್ತದೆ. ಯಾವಾಗಲೂ ತನ್ನನ್ನು ಹೊಗಳಿಕೊಳ್ಳುವವನು ಕುಳ್ಳನೂ ಕುಂಟನೂ ಆಗುತ್ತಾನೆ. ದನವನ್ನು ಕೊಲ್ಲುವವನೂ, ಉಪಕಾರವನ್ನು ಮರೆಯುವವನೂ, ಹುಟ್ಟುಕುರುಡನಾಗುತ್ತಾನೆ. ||೧೪-೧೫-೧೬||

ತನ್ನ ಹೆಂಡತಿಯಲ್ಲಿ ಪ್ರೀತಿಯಿಲ್ಲದವನು ಕತ್ತಿನ ಗಂಟುಳ್ಳವನಾಗುತ್ತಾನೆ. ಸೂಳೆಯನ್ನು ಸೇವಿಸುವವನು ತನ್ನ ಜನನೇಂದ್ರಿಯವನ್ನು ಕಳೆದುಕೊಳ್ಳುತ್ತಾನೆ.

ಪಿಶುನಃ ಪೂತಿವಕ್ತ್ರಸ್ಸ್ಯಾತ್ ನರಸ್ತಾವ್ರಾದಿವಿಕ್ರಯೀ ।
ಏಡಕಾಜಗಜಾಶ್ವಾದಿ ವಿಕ್ರೇತಾ ವ್ಯಾಧ ಏವ ಹಿ ॥೧೮॥

ಜ್ಞಾನಾಪಹಾರೀ ಮೂಕಸ್ಸ್ಯಾತ್ ಮಂತ್ರಚೋರಸ್ತಥೈವ ಚ ।
ಅಭಕ್ಷ್ಯಭಕ್ಷಕೋ ಮರ್ತ್ಯೋ ಗಂಡಮಾಲೀ ಭವೇತ್ಸದಾ ॥೧೯॥

ರಂಗೋಪಜೀವೀ ಕುಮತಿಃ ಭವೇನ್ನಾತ್ರ ವಿಚಾರಣಾ ।
ಅಂಧಃ ಪುಸ್ತಕಚೋರಸ್ಸ್ಯಾತ್ ತಥಾ ಸ್ಯಾಲ್ಲೇಖನೀಹರಃ ॥೨೦॥

ಸದಾ ಪುಣ್ಯಕಥಾಽಽಕ್ಷೇಪೀ ವಕ್ರನಾಸೋ ಭವೇನ್ನರಃ ।
ಶಿಷ್ಟಾಚಾರಸ್ಯ ಧರ್ಮಸ್ಯ ದೂಷಕೋ ರಾಕ್ಷಸೋ ಭವೇತ್ ॥೨೧॥

ಜ್ಞಾನಯೋಗಗುರುದ್ವೇಷ್ಟಾ ವಕ್ರಾಸ್ಯೋ ವೇದದೂಷಕಃ ।
ಪುಣ್ಯಕರ್ಮಪ್ರವೃತ್ತಸ್ಯ ಪ್ರತಿಷೇಧೀ ಕ್ರಿಮಿರ್ಭವೇತ್ ॥೨೨॥

ಚಾಡಿಕೋರನು ದುರ್ವಾಸನೆಯುಳ್ಳ ಬಾಯಿಯುಳ್ಳವನಾಗುತ್ತಾನೆ. ತಾವ್ರ ಮುಂತಾದ್ದನ್ನೂ ಟಗರು, ಆಡು, ಆನೆ, ಕುದುರೆ–ಮುಂತಾದುವನ್ನೂ ಮಾರುವವನು ಬೇಡನಾಗಿ ಹುಟ್ಟುವನು. ॥೧೭-೧೮॥

ಎಚ್ಚರವನ್ನು ತಪ್ಪಿಸಿ ಮತ್ತನ್ನುಂಟುಮಾಡುವ ವಸ್ತುಗಳನ್ನು ಉಪಯೋಗಿಸುವುದೇ ಮುಂತಾದುದರಿಂದ ಇತರರಿಗೆ ತಿಳಿವಳಿಕೆಯನ್ನು ತಪ್ಪಿಸುವವನೂ ಮಂತ್ರ ಪುಸ್ತಕಗಳನ್ನು ಕದಿಯುವವನೂ, ಗುಟ್ಟನ್ನು ಪ್ರಕಟಪಡಿಸುವವನೂ ಮೂಗನಾಗುತ್ತಾನೆ. ತಿನ್ನಬಾರದ್ದನ್ನು ತಿನ್ನುವವನು ಗಂಡಮಾಲೆರೋಗವನ್ನು ಪಡೆಯುತ್ತಾನೆ. ರಂಗದಲ್ಲಿ ಅಭಿನಯ ಮುಂತಾದುದರಿಂದ ಜೀವಿಸುವವನು ಕೆಟ್ಟಬುದ್ಧಿಯುಳ್ಳವನಾಗುತ್ತಾನೆ. ಪುಸ್ತಕಗಳನ್ನು ಕದಿಯುವವನೂ ಬರೆಯುವ ಕಡ್ಡಿಗಳನ್ನು ಕದಿಯುವವನೂ ಕುರುಡನಾಗುತ್ತಾನೆ. ॥೧೯-೨೦॥

ಪುರಾಣ ಇತಿಹಾಸಗಳಲ್ಲಿನ ಪುಣ್ಯಕರವಾದ ಕಥೆಗಳನ್ನು ನಂಬದೆ ಆಕ್ಷೇಪಿಸುವವನು ಡೊಂಕಾದ ಮೂಗುಳ್ಳವನಾಗುತ್ತಾನೆ. ಧರ್ಮಿಷ್ಠರು ಆಚರಿಸುವ ಧರ್ಮವನ್ನು ನಿಂದಿಸುವವನು ರಾಕ್ಷಸನಾಗುತ್ತಾನೆ. ಜ್ಞಾನಯೋಗವನ್ನು ಹೇಳಿಕೊಟ್ಟ ಗುರುವನ್ನು ದ್ವೇಷಿಸುವವನು ಕೊಂಕಾದ ಮುಖವುಳ್ಳವನಾಗುತ್ತಾನೆ. ಪುಣ್ಯಕರವಾದ ಕೆಲಸಗಳನ್ನು ಮಾಡುವವನನ್ನು ತಡೆಯುವವನು ಹುಳುವಾಗಿ ಹುಟ್ಟು

ದೇವದ್ರವ್ಯಾಪಹಾರೀ ಸ್ಯಾನ್ಮನುಷ್ಯೋ ವಾಯುಭಕ್ಷಕಃ ।
ತಟಾಕಾರಾಮಭೇತ್ತಾ ಸ್ಯಾತ್ ಅಂಗಹೀನಸ್ತು ಮಾನವಃ ॥೨೩॥

ಮರ್ಯಾದಾಭೇದಕೋ ದಾಸಃ ಭವೇನ್ನಾತ್ರ ವಿಚಾರಣಾ ।
ಪರದಾರಾಭಿಗಾಮೀ ತು ವಾತರೋಗೀ ಭವೇನ್ನರಃ ॥೨೪॥

ಮಧುಪ್ರಮೇಹೀ ಚೋಷ್ಪ್ರ್ದಿಹ(ಗ)ಂತಾ ನಾತ್ರ ವಿಚಾರಣಾ ।
ಪತಿವ್ರತಾಽಭಿಗಂತಾ ತು ಸೂಕರಸ್ಸ್ಯಾತ್ತು ಮಾನವಃ ॥೨೫॥

ಪರಾಪವಾದನಿರತಃ ವ್ಯಸನೀ ಚಾಲಸಸ್ಸದಾ ।
ಅತಿಪಾತಕದೋಷೇಣ ಭವೇಯುಃ ಕ್ರಿಮಯೋ ನರಾಃ ॥೨೬॥

ತಥಾ ಪಾತಕದೋಷೇಣ ವಿಡ್ವರಾಹೋ ಭವೇನ್ನರಃ ।
ಉಪಪಾತಕದೋಷೇಣ ತಥಾ ಶ್ವಾನಸ್ಸದಾ ನರಾಃ ॥೨೭॥

ತ್ತಾನೆ. ದೇವರ ಸ್ವತ್ತುಗಳನ್ನು ಕದಿಯುವವನು ಹೊಟ್ಟೆಗಿಲ್ಲದವನಾಗುತ್ತಾನೆ, ಹಾವಾಗಿ ಹುಟ್ಟುತ್ತಾನೆ. ಕೆರೆಯನ್ನು ಒಡೆಯುವವನೂ, ತೋಪನ್ನು ಕಡಿಯುವವನೂ ಅಂಗವಿಕಲನಾಗುತ್ತಾನೆ. ||೨೧-೨೨-೨೩||

ಮರ್ಯಾದೆಯನ್ನು ಮೀರುವವನು ಕೂಲಿಜೀತದವನಾಗುತ್ತಾನೆ. ಇನ್ನೊಬ್ಬರ ಹೆಂಡತಿಯಲ್ಲಿ ಸಂಗವನ್ನು ಮಾಡುವವನು ವಾಯುರೋಗದಿಂದ ನರಳುತ್ತಾನೆ. ಒಂಟೆ ಮುಂತಾದುವನ್ನು ಕೊಲ್ಲುವವನು ಮಧುಮೇಹರೋಗವನ್ನು ಪಡೆಯುತ್ತಾನೆ. ಇತರ ಪತಿವ್ರತೆಯಲ್ಲಿ ಸಂಗಮವನ್ನು ಮಾಡುವವನು ಹಂದಿಯಾಗಿ ಹುಟ್ಟುತ್ತಾನೆ. ಇತರರ ಮೇಲೆ ಅಪವಾದಗಳನ್ನು ಹರಡುವುದರಲ್ಲಿ ಆಸಕ್ತನಾದವನು ಚಿಂತಾಕ್ರಾಂತನೂ ಸೋಮಾರಿಯೂ ಆಗುತ್ತಾನೆ. ಹೆಚ್ಚಾದ ಪಾಪಗಳನ್ನು ಮಾಡುವವರು ಹುಳುವಾಗಿ ಹುಟ್ಟುವರು. ||೨೪-೨೫-೨೬||

ಹಾಗೆಯೇ ಮಿತಿಮೀರಿದ ಪಾಪವನ್ನು ಮಾಡುವುದರಿಂದ ಉಂಟಾಗುವ ದೋಷದಿಂದ ಅಮೇಧ್ಯವನ್ನು ತಿನ್ನುವ ಹಂದಿಯಾಗಿ ಹುಟ್ಟುತ್ತಾನೆ. ಉಪಪಾತಕಗಳನ್ನು ಮಾಡುವುದರಿಂದ ಉಂಟಾದ ದೋಷದಿಂದ ನಾಯಿಯಾಗಿ ಹುಟ್ಟುತ್ತಾನೆ. ಇತರವಾದ ಅಲ್ಪವಾದ ಸಣ್ಣ ಪಾಪಗಳಿಂದ ಅಲ್ಪಪ್ರಾಣಿಗಳ ಜನ್ಮವನ್ನು ಪಡೆಯುತ್ತಾನೆ. ಮಹಾಪಾತಕವೇ ಮುಂತಾದ ಇತರ ಎಲ್ಲ ಪಾಪಗಳಿಂದಲೂ ಮನುಷ್ಯರು

ಪಾತಕೈರಪರೈಃ ಕ್ಷುದ್ರೈಃ ಜಾಯಂತೇ ಕ್ಷುದ್ರಯೋನಿಷು ।
ಮಹಾಪಾತಕಪೂರ್ವೈಶ್ಚ ಪಾತಕೈರಖಿಲೈರಪಿ ॥೨೮॥

ತಿರ್ಯಗ್ಜಂತುಗಳಾಗಿ ಹುಟ್ಟುತ್ತಾರೆ. ಹೀಗೆಯೇ ಇನ್ನೂ ಅನೇಕ ಬಗೆಯ ಪಾಪಗಳ ಸ್ವರೂಪವನ್ನೂ ಅವುಗಳ ಫಲಪರಿಣಾಮಗಳನ್ನೂ ಕರ್ಮವಿಪಾಕವೆಂಬ ಧರ್ಮಶಾಸ್ತ್ರಗ್ರಂಥದಲ್ಲಿ ವಿವರಗಳೊಡನೆ ವಿಸ್ತಾರವಾಗಿ ನಿರೂಪಿಸಿದೆ. ದುಷ್ಕರ್ಮಗಳನ್ನು ಮಾಡಿದರೆ ಅವುಗಳಿಂದ ಪಾಪಗಳುಂಟಾಗಿ ಅವುಗಳ ಫಲವಾದ ಐಹಿಕ ಮತ್ತು ಆಮುಷ್ಮಿಕಗಳಾದ ದುಃಖಗಳ ಅನುಭವಗಳಲ್ಲಿ ಅವು ಪರಿಣಮಿಸುತ್ತವೆ. ಹಾಗೆಯೇ ಸತ್ಕರ್ಮಗಳನ್ನು ಮಾಡಿದರೆ ಅವುಗಳಿಂದ ಪುಣ್ಯಗಳುಂಟಾಗಿ ಇಹಲೋಕ ಪರಲೋಕಗಳಲ್ಲಿ ಸುಖಗಳನ್ನು ಅನುಭವಿಸುವುದರಲ್ಲಿ ಪರ್ಯವಸಾನವನ್ನು ಹೊಂದುತ್ತವೆ. ಇದೇ ಕರ್ಮವಾದದ ಸಿದ್ಧಾಂತವು. ವಿವೇಕಿಯಾದ ಮಾನವನು ದುಷ್ಕರ್ಮಗಳನ್ನು ಬಿಟ್ಟು ಸತ್ಕರ್ಮಗಳನ್ನೇ ಮಾಡುತ್ತಾ ಬರುತ್ತಾನೆ. ಇದಕ್ಕೆ ಪ್ರವೃತ್ತಿಮಾರ್ಗವೆಂದು ವ್ಯವಹಾರವಿದೆ. ಜೀವರಿಗೆ ಈ ಕರ್ತೃತ್ವ, ಭೋಕ್ತೃತ್ವ, ಜನನ,ಮರಣ, ಸುಖದುಃಖಾನುಭವ, ಇವುಗಳಲ್ಲಿ, ಈ ಸಂಸಾರದ ಪ್ರವಾಹದಲ್ಲಿನ ಸುಳಿಗಳಲ್ಲಿ, ಸುತ್ತುತ್ತಾ ಬಳಲಿಕೆಯು ಉಂಟಾಗುತ್ತಿರುತ್ತದೆ. ಈ ಬಳಲಿಕೆಯೂ ಬೇಸರವೂ ಹೆಚ್ಚಾಗಿ ಉಂಟಾದಾಗ ಇದರ ತತ್ವವೇನೆಂದು ವಿಮರ್ಶಿಸುತ್ತಾನೆ. ಆಗ ದುಷ್ಕರ್ಮಗಳಂತೆ ಕಾಮ್ಯ ಸತ್ಕರ್ಮಗಳೂ ದುಃಖಕಾರಣಗಳಾಗಿವೆ ಎಂಬುದನ್ನು ಮನಗಾಣುತ್ತಾನೆ. ಹೇಗೆಂದರೆ, ಸತ್ಕರ್ಮಗಳಿಂದ ಉಂಟಾಗುವ ಸುಖಗಳು ಜನ್ಯಗಳಾಗಿ, ಕೆಲವು ಕಾಲವಿದ್ದು ನಷ್ಟವಾಗುತ್ತವೆ. ಆದುದರಿಂದ ಅವು ನಶ್ವರಗಳು. ಒಂದು ಸುಖಕ್ಕಿಂತ ಇನ್ನೊಂದು ಸುಖವೂ, ಒಬ್ಬರ ಸುಖಕ್ಕಿಂತ ಇನ್ನೊಬ್ಬರ ಸುಖವೂ, ಹೆಚ್ಚುಕಡಿಮೆಯುಳ್ಳದ್ದಾಗಿರುತ್ತದೆ. ಈ ತಾರತಮ್ಯದಿಂದ ಅಸೂಯೆಯುಂಟಾಗುತ್ತದೆ. ಅಲ್ಲದೆ ಕರ್ಮಗಳನ್ನು ಮಾಡುವಾಗ, ಪುಣ್ಯಸಂಪಾದಿಸುವಾಗ, ತನಗೂ ಇತರರಿಗೂ ಶ್ರಮದುಃಖಹಿಂಸೆಗಳನ್ನುಂಟುಮಾಡಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಸತ್ಕರ್ಮಗಳ ಫಲಗಳೂ ದುಃಖಮಿಶ್ರಗಳಾಗಿರುತ್ತವೆ. ಎಂಬುದು ತಿಳಿದುಬರುತ್ತದೆ. ಹಾಗೆಯೇ ಸ್ವಾರ್ಥಪರತೆಯೂ, ಇತರರ ದುಃಖದಲ್ಲಿ ಔದಾಸೀನ್ಯವೂ ಬೆಳೆಯುತ್ತಾ ಹೋಗುತ್ತವೆ. ಇದು ಧರ್ಮದ, ಮಾದರಿಯ ಉತ್ತಮಧರ್ಮದ, ವಿಶ್ವಧರ್ಮದ, ಆಚರಣೆಯ ಮನೋಭಾವದ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಆಸ್ತಿಕನೂ ಧಾರ್ಮಿಕನೂ ಆಗಿರುವ ಮಾನವನು ಈ ಕರ್ಮವನ್ನೇ ಬಿಟ್ಟುಬಿಡಲು ಮನಸ್ಸನ್ನು ಮಾಡುವುದಿಲ್ಲ. ಅದು ಅಸಾಧ್ಯವೂ ಅನುಚಿತವೂ ಆಗಿರುತ್ತದೆ. ಆದುದರಿಂದ ಕರ್ಮವನ್ನು ಮಾಡಿ, ಸತ್ಕರ್ಮಫಲವಾದ ಚಿನ್ನದ

ಸ್ವಸ್ವರೂಪಾಪರಿಜ್ಞಾನಾತ್ ಬಧ್ಯತೇ ಖಲು ಮಾನವಃ ।
ಸ್ವಸ್ವರೂಪಪರಿಜ್ಞಾನಾತ್ ಕರ್ಮಭಿರ್ನ ಸ ಬಧ್ಯತೇ ॥೨೯॥

ಸಸ್ವರೂಪಂ ತು ಶುದ್ಧಂ ಹಿ ಸತತಂ ಸರ್ವದೇಹಿನಾಮ್ ।
ಸ್ವಸ್ವರೂಪಂ ತು ಚಿನ್ಮಾತ್ರಂ ಸರ್ವದಾ ಸರ್ವಜೀವಿನಾಂ ॥೩೦॥

ನೈವ ದೇಹಾದಿಸಂಘಾತಃ ಪಟವದ್ದೃಶಿ ಗೋಚರಃ ।
ದೃಶ್ಯರೂಪೇಣ ಯದ್ರೂಪಂ ದೃಶ್ಯತೇ ದೇಹಪೂರ್ವಕಂ ॥೩೧॥

ಸಂಕೋಲೆಯ ಬಂಧವನ್ನು ತಪ್ಪಿಸಿಕೊಳ್ಳಲು ನಿಷ್ಕಾಮಕರ್ಮಾಚರಣೆಯೇ ಸರಿಯಾದ ಮಾರ್ಗವೆಂದು ಮನಗಂಡು ಹಾಗೆ ಮಾಡುತ್ತಾನೆ. ಈ ಕರ್ಮಯೋಗವು ನಿವೃತ್ತಿಮಾರ್ಗದ ಮೊದಲನೆಯ ಮೆಟ್ಟಿಲಾಗಿದೆ. ನಿಷ್ಕಾಮಕರ್ಮದಿಂದ ಚಿತ್ತವು ಶುದ್ಧವಾಗಲು ವೇದಾಂತವಿಚಾರದಿಂದ ಆತ್ಮಜ್ಞಾನಕ್ಕೆ ಯತ್ನಿಸುತ್ತಾನೆ. ॥೨೭-೨೮॥

ಕರ್ತೃತ್ವಭೋಕ್ತೃತ್ವಗಳ ಸಂಬಂಧವಿಲ್ಲದ ಆತ್ಮನ ನಿಜಸ್ವರೂಪವನ್ನು ತಿಳಿಯದೆ ಇರುವುದರಿಂದ, ದೇಹಾದಿಗಳಲ್ಲಿ ಅಹಂಬುದ್ಧಿರೂಪವಾದ ಅಜ್ಞಾನದಿಂದ, ಮಾನವನು ಕರ್ಮಗಳ ಫಲವಾದ ಸುಖದುಃಖಾನುಭವಗಳಲ್ಲಿ ರಾಗದ್ವೇಷಗಳಿಂದ, ಸುಖದುಃಖಾನುಭವದ ನಿರ್ಬಂಧವೆಂಬ ಸಂಸಾರದಲ್ಲಿ ಸಿಕ್ಕಿ ನರಳುತ್ತಾನೆ. ಆತ್ಮನ ಪಾರಮಾರ್ಥಿಕವಾದ, ಅಖಂಡಸಚ್ಚಿದಾನಂದಾದ್ವೈತಸ್ವರೂಪದ ಜ್ಞಾನವುಂಟಾದರೆ ಆ ಅಹಂಭಾವನೆಯು ತೊಲಗಿ ಮಮತಾಭಾವನೆಯೂ ನಷ್ಟವಾಗಿ ಹೋಗಲು ಕರ್ಮಫಲಸಂಬಂಧವನ್ನು ಪಡೆಯುವುದಿಲ್ಲ. ॥೨೯॥

ಎಲ್ಲ ಜೀವರ ಪಾರಮಾರ್ಥಿಕವಾದ ಸ್ವರೂಪವು ಸರ್ವದಾ ಶುದ್ಧವೂ, ಸಂಸಾರಬಂಧದುಃಖಸಂಬಂಧವಿಲ್ಲದ್ದೂ, ಚಿನ್ಮಾತ್ರಸ್ವರೂಪವಾದುದೂ, ಜ್ಞಾನಸ್ವರೂಪವಾದುದೂ ಆಗಿದೆ. ದೇಹಾದಿಗಳಲ್ಲಿ ಅಹಂತಾಮಮತಾರೂಪವಾದ ಅಭಿಮಾನವಿದ್ದರೆ ಸುಖದುಃಖಾನುಭವವಾಗುತ್ತದೆ. ಅಭಿಮಾನವಿಲ್ಲದಿದ್ದರೆ ಸುಖದುಃಖಾನುಭವವಾಗುವುದಿಲ್ಲವು. ಇದನ್ನು ಬಾಡಿಗೆಮನೆ ಸ್ವಂತಮನೆಗಳಲ್ಲಿ ಕಾಣಬಹುದು. ॥೩೦॥

ಆದುದರಿಂದ ದೇಹ, ಇಂದ್ರಿಯ, ಪ್ರಾಣ, ಇವುಗಳ ಸಮೂಹವು ಬಟ್ಟೆ ಮುಂತಾದ ಪದಾರ್ಥಗಳ ಹಾಗೆ ದೃಶ್ಯವಾದುದು. ಹಾಗೆ ಯಾವುದರ ರೂಪವು ದೃಶ್ಯವಾಗಿ ಕಾಣುತ್ತದೋ, ಅಂಥಾ ದೇಹ ಮುಂತಾದುವೆಲ್ಲವೂ ಆತ್ಮವಲ್ಲವು. ಏಕೆಂದರೆ ಆತ್ಮನು ದೃಕ್‌ರೂಪನು, ನೋಡುವವನು. ದೃಶ್ಯವಾದುದೆಲ್ಲವೂ ಆತ್ಮ

ತದನಾತ್ಮೈವ ದೃಶ್ಯತ್ವಾತ್ ಯದಿತ್ಥಂ ತತ್ತಥಾ ಖಲು ।
ದೃಶ್ಯತ್ವಂ ದೇಹಪೂರ್ವಸ್ಯ ಸಮ್ಮತಂ ಸರ್ವದೇಹಿನಾಮ್ ॥೩೨॥

ದೃಶ್ಯತ್ವಂ ದ್ರಷ್ಟೃಪೂರ್ವಂ ತು ಲೋಕೇ ದೃಷ್ಟಂ ಹಿ ಚೇತನೈಃ ।
ದ್ರಷ್ಟುರ್ನಾಸ್ತಿ ಹಿ ದೃಶ್ಯತ್ವಂ ದೃಶ್ಯತ್ವೇ ದ್ರಷ್ಟೃತಾ ನ ಹಿ ॥
ದೃಶ್ಯರೂಪಸ್ಯ ಕುಡ್ಯಾದೇಃ ದ್ರಷ್ಟೃತಾ ನ ಹಿ ದೃಶ್ಯತೇ ॥೩೩॥

ಅಂಶಭೇದೇನ ದೃಶ್ಯತ್ವಂ ದ್ರಷ್ಟೃತ್ವಂ ಚೇತಿ ಚೇನ್ಮತಮ್ ।
ಅಂಶಭೇದೇ ತು ಸಾಂಶತ್ವಾತ್ ಕುಡ್ಯವತ್ತದನಾತ್ಮಕಮ್ ॥೩೪॥

ವಲ್ಲವು. ಬಟ್ಟೆ ಮುಂತಾದವುಗಳ ಹಾಗೆ ದೇಹಾದಿಗಳು ದೃಶ್ಯಗಳೆಂದು ಎಲ್ಲರೂ ಒಪ್ಪಿರುವ ವಿಷಯವಾಗಿದೆ. ಆದುದರಿಂದ ದೇಹಾದಿಗಳು ಆತ್ಮವಲ್ಲವು. ಸುಖದುಃಖಗಳು ದೇಹಾದಿಗಳಲ್ಲಿ ಅಭಿಮಾನಿಗೇ ಹೊರತು ಶುದ್ಧಆತ್ಮನಿಗೆ ಆಗವು. ॥೩೧-೩೨॥

ಆತ್ಮನಿಗಿಂತಲೂ ಬೇರೆಯಾಗಿರುವ ದೇಹ ಮುಂತಾದವುಗಳಿಗೆ ದೃಶ್ಯತ್ವವಿರುವುದರಿಂದ ಆತ್ಮವಲ್ಲವೆಂದು ನಿರೂಪಿಸಿ, ಈಗ ನೋಡತಕ್ಕವನಾದುದರಿಂದ ಆತ್ಮನಿಗೆ ದೃಶ್ಯತ್ವವಿಲ್ಲವೆಂದು ಹೇಳುತ್ತಾರೆ. ಈ ಪ್ರಪಂಚದಲ್ಲಿರುವ ದೃಶ್ಯವಾದ ವಸ್ತುವಿನಿಂದ ಅದಕ್ಕಿಂತಲೂ ಬೇರೆಯಾದ ದ್ರಷ್ಟೃವಿರಬೇಕೆಂಬುದು ಜನರಿಗೆ ಅನುಭವದಲ್ಲಿ ಕಂಡುಬಂದಿದೆ. ದ್ರಷ್ಟೃವಿಗೆ, ದೃಗ್ರೂಪನಾದವನಿಗೆ, ನೋಡತಕ್ಕವನಿಗೆ, ದೃಶ್ಯತ್ವವು ಸಂಭವಿಸುವುದಿಲ್ಲವು. ಹಾಗೆಯೇ ದೃಶ್ಯವಸ್ತುವಿಗೆ ದ್ರಷ್ಟೃತ್ವವೂ ಸಂಭವಿಸದು. ದೃಶ್ಯವಾದ ಗೋಡೆ ಮುಂತಾದುದಕ್ಕೆ ದ್ರಷ್ಟೃತ್ವವು ಉಂಟೆಂಬುದು ಯಾರಿಗೂ ಕಂಡುಬಂದಿಲ್ಲವು. ಇದರಿಂದ ಅಹಂಪ್ರತ್ಯಯಕ್ಕೆ ಗೋಚರನಾಗಿರುವ ಆತ್ಮನು ದೃಶ್ಯನಾಗಲಿಲ್ಲವೆ? ಎಂದು ಆಕ್ಷೇಪಿಸಬಾರದು. ಏಕೆಂದರೆ ಆಗ ಆತ್ಮನು ದ್ರಷ್ಟೃವೂ ದೃಶ್ಯವೂ ಆಗುತ್ತೆಂದು ಹೇಳಬೇಕಾಗುತ್ತದೆ. ಕರ್ತೃಕರ್ಮವಿರೋಧವು ಸಂಘಟಿಸುತ್ತದೆ. ॥೩೩॥

ಕರ್ತೃ, ಕರ್ಮಭಾವವಿರೋಧವನ್ನು ಪರಿಹರಿಸಲು ಆತ್ಮವು ದ್ರವ್ಯ, ಬೋಧ ಈ ಎರಡು ರೂಪವುಳ್ಳದ್ದು. ದ್ರವ್ಯಾಂಶದಲ್ಲಿ ದೃಶ್ಯತ್ವವೂ, ಬೋಧಾಂಶದಲ್ಲಿ ದ್ರಷ್ಟೃತ್ವವೂ, ಇರಬಹುದೆಂದು ಹೇಳುವುದಾದರೆ, ಅಂಶಭೇದವನ್ನು ಒಪ್ಪಿಕೊಂಡರೆ, ಆತ್ಮನು ಅವಯುವವುಳ್ಳವನೆಂದು ಫಲಿತವಾಗುತ್ತದೆ. ಆತ್ಮನು ನಿರವಯುವನು ಎಂಬ ಸಿದ್ಧಾಂತಕ್ಕೆ ವಿರೋಧವೂ ಉಂಟಾಗುತ್ತದೆ. ಗೋಡೆ ಮುಂತಾದುವು ಅವಯುವ

ಅಂಶಭೇದೇಽಪಿ ದೃಶ್ಯಾಂಶಃ ಸಮಾನಃ ಕುಡ್ಯವಸ್ತುನಾ ।
ದ್ರಷ್ಟ್ರಂಶಃ ಕೇವಲಸ್ಸಾಕ್ಷಾದಾತ್ಮೈವ ಸ್ಯಾನ್ನ ಸಂಶಯಃ ॥೩೫॥

ದ್ರಷ್ಟ್ರಂಶೇಽಪಿ ಚ ಕರ್ತೃತ್ವಂ ಉಪಾಧಿಜನಿತಂ ಸದಾ ।
ದೃಶ್ಯಾಭಿವ್ಯಕ್ತ್ಯಪೇಕ್ಷಂ ವಾ ನ ಸ್ವತಃ ಪಂಡಿತೋತ್ತಮಾಃ ॥೩೬॥

ಸ್ವತಃ ಕರ್ತೃತ್ವಮಸ್ಯಾಪಿ ವಿದ್ಯತೇ ಯದಿ ಚಾತ್ಮನಃ ।
ತರ್ಹಿ ದರ್ಶನರೂಪೇಣ ಪರಿಣಾಮೀ ಭವೇದ್ಧಿ ಸಃ ॥೩೭॥

ಪರಿಣಾಮೀ ನ ಚಾತ್ಮಾ ಸ್ಯಾತ್ ಸರ್ವಥಾ ಮೃತ್ತಿಕಾದಿವತ್ ।
ಅಚಿತ್ತ್ವಂ ಚ ಪ್ರಸಜ್ಯೇತ ತತಶ್ಚಿನ್ನ ಹಿ ವಿದ್ಯತೇ ॥೩೮॥

ವುಳ್ಳದ್ದರಿಂದ ಹೇಗೆ ಆತ್ಮನಿಗಿಂತ ಬೇರೆಯಾದುವೋ ಹಾಗೆಯೇ ಆತ್ಮವೂ ಅನಾತ್ಮವೆನಿಸಬೇಕಾಗುತ್ತದೆ. ಆತ್ಮನಿಗೆ ಸಾವಯವತ್ವವನ್ನು ಒಪ್ಪಿಕೊಂಡರೂ, ದ್ರವ್ಯಾಂಶವೇ ದೃಶ್ಯವಾಗುವುದರಿಂದ ಅದು ದೃಶ್ಯವೇ, ಬೋಧಾಂಶವು ದೃಗ್ರೂಪವಾದುದೇ, ಎಂದು ಫಲಿಸುವುದರಿಂದ ದೃಶ್ಯವೂ ದ್ರಷ್ಟೃತ್ವವೂ ಒಂದು ಕಡೆ ಬಂದಹಾಗಾಗುವುದಿಲ್ಲವಾದುದರಿಂದ ಕರ್ತೃಕರ್ಮವಿರೋಧವಿಲ್ಲವೆಂದು ಸಮಾಧಾನವು. ಈಗ ದ್ರಷ್ಟೃತ್ವವೆಂದರೆ ನೋಡುವಿಕೆ ಎಂಬ ಕ್ರಿಯೆಗೆ ಆಶ್ರಯವಾಗಿರುವಿಕೆಯು. ಆದುದರಿಂದ ಆತ್ಮನು ದೃಶಿಕ್ರಿಯೆಗೆ ಆಶ್ರಯನಾಗಿ ಸಾವಯವತ್ವವೂ ವಿಕಾರಿತ್ವವೂ ಗಂಟುಬೀಳುತ್ತದೆ. ಎಂದು ಆಕ್ಷೇಪಿಸಿದರೆ, ಅಂತಹ ಕ್ರಿಯೆಗೆ ಆಶ್ರಯವಾಗಿರುವಿಕೆಯು ಉಪಾಧಿಯಾದ ಅಂತಃಕರಣಸಂಬಂಧದಿಂದ ಕಲ್ಪಿತವಾಗಿ ತೋರುತ್ತದೆ. ವಾಸ್ತವವಾಗಿಲ್ಲವೆಂದು ಒಂದು ಸಮಾಧಾನವು. ಅಥವಾ ದೃಶ್ಯವಾದ ಪದಾರ್ಥದ ಅಭಿವ್ಯಕ್ತಿಗೆ ಹೇತುವಾಗಿರುವುದರಿಂದ ಆತ್ಮನಿಗೆ ದ್ರಷ್ಟೃತ್ವವೂ ಔಪಚಾರಿಕವಾದುದೇ ಹೊರತು ಸ್ವಾಭಾವಿಕವಾದುದಲ್ಲವೆಂಬುದು ಇನ್ನೊಂದು ಸಮಾಧಾನವು. ಎಂದು ಜ್ಞಾನಿಗಳಲ್ಲಿ ಉತ್ತಮರಾದ ಋಷಿಗಳೇ, ತಿಳಿಯಿರಿ. ॥೩೪-೩೫-೩೬॥

ಕರ್ತೃವು, ದೃಶಿಕ್ರಿಯಾಶ್ರಯತ್ವವು, ದ್ರಷ್ಟೃತ್ವವು, ಸ್ವಾಭಾವಿಕವಾದುದೆಂದು ಹೇಳಿದರೆ, ಆಗ ಆತ್ಮನೂ ದರ್ಶನವೆಂದರೆ ನೋಡುವಿಕೆ ಎಂಬ ಪರಿಣಾಮವುಳ್ಳವನಾಗಬೇಕಾಗುತ್ತದೆ. ಆದರೆ ಆತ್ಮನು ಮಣ್ಣು ಮುಂತಾದವುಗಳ ಹಾಗೆ ಪರಿಣಾಮಿಯೂ ವಿಕಾರಿಯೂ ಅಲ್ಲವು. ಪರಿಣಾಮಿಯೂ ಆಗಿರಲಿ. ಎಂದರೆ ಮಣ್ಣಿನ ಹಾಗೆ ಆತ್ಮನೂ ಅಚಿತ್ ರೂಪನಾಗಬೇಕಾಗುತ್ತದೆ. ಆತ್ಮವೂ ಅಚೇತನವಾಗಲಿ

ಚಿದ್ವಿಹೀನಂ ಜಡಂ ನೈವ ವಿಭಾತಿ ಮುನಿಪುಂಗವಾಃ ।
ಸ್ವತಃ ಪ್ರಕಾಶಹೀನಸ್ಯ ಪ್ರಕಾಶೋ ನೋಪಪದ್ಯತೇ ॥೩೯॥

ಚಿತ್ಪ್ರಕಾಶಾತ್ಮಸಂಬಂಧಾದಪಿ ಚೇತ್ಯಂ ನ ಭಾಸತೇ ।
ತಸ್ಯಾಭಾವಾತ್ತತಃ ಚೇತ್ಯಪ್ರತೀತ್ಯಾ ಭಿದ್ಯತೇ ಹಿ ಚಿತ್ ॥೪೦॥

ಎಂದೂ ಹೇಳಿದರೆ, ಪದಾರ್ಥಗಳನ್ನು ತಿಳಿಯುವಿಕೆಯೇ ಇಲ್ಲದೆ ಹೋಗಬೇಕಾಗುತ್ತದೆ. ಆದರೆ ಎಲ್ಲರ ಅನುಭವದಲ್ಲೂ ತಿಳಿಯುವಿಕೆಯು ಇದೆ. ಎಲ್ಲ ವಸ್ತುಗಳನ್ನೂ ಚಿದ್ರೂಪನಾದ ಆತ್ಮನು ತಿಳಿಯುತ್ತಿರುವುದೇ ಎಲ್ಲರ ಅನುಭವದಲ್ಲಿದೆ. ತಿಳಿಯುವವನು ತಿಳಿಯುವ ವಸ್ತುವಿಗಿಂತಲೂ, ತಿಳಿವಳಿಕೆ ಎಂಬ ಕ್ರಿಯೆಗಿಂತಲೂ, ಭಿನ್ನವಾದ ಸ್ವರೂಪವುಳ್ಳವನು ಎಂಬುದನ್ನು ಮರೆಯಲಾಗದು. ॥೩೭-೩೮॥

ಚಿತ್ಸ್ವರೂಪನಾದ ಆತ್ಮನಿಲ್ಲದೆ ಜಡವಾದ ಪ್ರಪಂಚವು ಜ್ಞಾನಗೋಚರವಾಗುವುದಿಲ್ಲವು. ಆದುದರಿಂದ ಅದು ಅಭಿವ್ಯಕ್ತಿಯನ್ನು ಪಡೆಯಲಾರದು. ಓ ಮುನಿಶ್ರೇಷ್ಠರೇ, ಸ್ವಪ್ರಕಾಶವಲ್ಲದ ಜಡವಸ್ತುವಿಗೆ ಸ್ವಪ್ರಕಾಶನಾದ ಆತ್ಮನ ಅವಲಂಬನವಿಲ್ಲದೆ ಪ್ರಕಾಶಿಸುವಿಕೆಯು, ಅಭಿವ್ಯಕ್ತಿಯು ಸಂಭವಿಸುವುದಿಲ್ಲ. ॥೩೯॥

ಚಿತ್ಪ್ರಕಾಶರೂಪನಾದ ಆತ್ಮನ ಸಂಬಂಧದಿಂದ ಚೇತ್ಯವಾದ, ಪ್ರಕಾಶ್ಯವಾದ, ಜಡಪ್ರಪಂಚವು ಪ್ರಕಾಶಿಸುತ್ತದೆ ಎಂದೂ ಹೇಳಲಾಗುವುದಿಲ್ಲ. ಏಕೆಂದರೆ ಸಂಬಂಧವೇ ಸಿದ್ಧಿಸುವುದಿಲ್ಲ. ಹೇಗೆಂದರೆ ಸಂಯೋಗಸಂಬಂಧವು ದ್ರವ್ಯಗಳಿಗೆ ಮಾತ್ರ ಅನ್ವಯಿಸುತ್ತದೆ. ಸಮವಾಯಸಂಬಂಧವು ಗುಣ, ಕ್ರಿಯಾ, ಅವನ್ನುಳ್ಳ ಪದಾರ್ಥಗಳಿಗೆ ಮಾತ್ರ ಅನ್ವಯಿಸುತ್ತದೆ. ಕಾರ್ಯಕಾರಣಭಾವಸಂಬಂಧವು ಸಾದಿಯಾದ, ಅನಿತ್ಯವಾದವುಗಳಿಗೆ ಮಾತ್ರ ಅನ್ವಯಿಸುತ್ತದೆ. ತಾದಾತ್ಮ್ಯ ಸಂಬಂಧವೂ ಸ್ವರೂಪಸಂಬಂಧವೂ ಜಡ ಮತ್ತು ಚೇತನಗಳಿಗೆ ಸಮನ್ವಯವಾಗದು. ಆತ್ಮನು ದ್ರವ್ಯವಲ್ಲವು; ಅವನು ನಿರ್ಗುಣನೂ ನಿಷ್ಕ್ರಿಯನೂ ನಿತ್ಯನೂ ಆಗಿದಾನೆ; ಹಾಗೆಯೇ ವಿಷಯವಿಷಯಿಭಾವ ಸಂಬಂಧವೂ ಕೂಡುವುದಿಲ್ಲ. ಏಕೆಂದರೆ ವಿಷಯತೆಗೆ ನಿಯಾಮಕವಾದ ಸಂಬಂಧವನ್ನು ಒಪ್ಪಲಾಗುವುದಿಲ್ಲ. ಆತ್ಮನಿಗೂ ಜಡಕ್ಕೂ ಸಂಬಂಧವು ವಾಸ್ತವವಾಗಿ ಇರದು; ಆದುದರಿಂದ ಆತ್ಮನಿಗೂ ಪ್ರಪಂಚಕ್ಕೂ ಆಧ್ಯಾಸಿಕವಾದ, ಕಲ್ಪಿತವಾದ ಸಂಬಂಧ ಮಾತ್ರವಿದೆ ಎನ್ನಬೇಕು. ಆಗ್ಗೆ ಭೇದವು ಔಪಾಧಿಕವಾಗಿದ್ದು ವಾಸ್ತವವಾಗದೆ ಹೋಗುತ್ತದೆ. ಪಾರಮಾರ್ಥಿಕವಾದ ಭೇದವು ಸಿದ್ಧಿಸದಿರುವುದರಿಂದ ವಾಸ್ತವವಾಗಿ ಭೇದವಿಲ್ಲವೆಂದು ಸಿದ್ಧಾಂತವಾಗುತ್ತದೆ. ಚಿತ್

ಚಿಚ್ಚಿದೇವ ಸದಾ ವಿಪ್ರಾ ನ ದೃಶ್ಯೈವ ಹಿ ಕೇನ ಚಿತ್ ।
ಯಾ ದೃಗ್ದೃಶ್ಯತ್ವಹೀನಾ ಸಾ ಸರ್ವದಾ ಭಾಸತೇ ಖಲು ॥೪೧॥

ಸಾ ಕದಾಚಿನ್ನ ಭಾತೀತಿ ಯದಿ ಸ್ಯಾನ್ಮುನಿಪುಂಗವಾಃ ।
ತರ್ಹಿ ನೈವ ವಿಭಾತೀತಿ ವಿಭಾನಂ ಕೇನ ಸಿದ್ಧ್ಯತಿ ॥೪೨॥

ನ ಭಾತೀತಿ ವಿಭಾನಂ ತು ನ ಭಾತಮಿತಿ ಚೇನ್ಮತಮ್ ।
ತರ್ಹಿ ಭಾನಂ ಹಿ ನಾಭಾತಂ ತದ್ಜ್ಞಾನಂ ಭಾನಮೇವ ಹಿ ॥೪೩॥

ಅದ್ವಿತೀಯ ತತ್ವವಾಗಿರುತ್ತದೆ. ಪಾರಮಾರ್ಥಿಕವಾದ ಸಂಬಂಧವಿಲ್ಲದ್ದರಿಂದ, ಆಧ್ಯಾಸಿಕವಾದ ಕಲ್ಪಿತವಾದ ಸಂಬಂಧದಿಂದಲೇ ಜಡಪ್ರತೀತಿಯಾಗುತ್ತೆಂದು ಹೇಳಬೇಕಾಗುತ್ತದೆ. ಹೀಗೆ ಔಪಾಧಿಕಭೇದದಿಂದ ಉಪಾಧಿಗತವಾದ ಭೇದವು ಆತ್ಮನಲ್ಲಿ ತೋರುತ್ತಿರುತ್ತದೆಯೇ ಹೊರತು ವಾಸ್ತವವಲ್ಲವು. ತನ್ನ ಧರ್ಮಗಳನ್ನು ಇತರರಲ್ಲಿ ಸಂಕ್ರಮಿಸುವಂತೆ ಮಾಡುವುದೇ ಉಪಾಧಿಯ ಸ್ವಭಾವವು. ||೪೦||

ಅಯಂ ಘಟಃ 'ಇದು ಗಡಿಗೆಯು' ಎಂಬ ಜ್ಞಾನವು 'ಜ್ಞಾತೋ ಘಟಃ' ಎಂಬ ಅನುವ್ಯವಸಾಯಜ್ಞಾನಕ್ಕೆ ವಿಷಯವಾಗುವುದರಿಂದ ಜ್ಞಾನವೂ ಘಟದ ಹಾಗೆ ವಿಷಯವಾಗಿ ದೃಶ್ಯವಾಗಬೇಕು. ದೃಶ್ಯವೆಲ್ಲವೂ ಅಧ್ಯಸ್ತವಾಗಿದೆ. ದೃಶ್ಯವಾದ ಜ್ಞಾನವೂ ಅಧ್ಯಸ್ತವಾಗಬೇಕು. ಜ್ಞಾನವೇ ಚಿತ್ ಆದುದರಿಂದ ಘಟಾದಿ ಪ್ರಪಂಚದ ಹಾಗೆ ಚಿತ್ ಸಹ ಅಧ್ಯಸ್ತವಾಗಲೆಂದು ಆಕ್ಷೇಪಿಸಿದರೆ, ಓ ಬ್ರಾಹ್ಮಣರಾ, ಚಿತ್ ಯಾವಾಗಲೂ ಚಿತ್ತೇ ಆಗಿರುತ್ತದೆ. ಅದು ಯಾವುದರಿಂದಲೂ ದೃಶ್ಯವಾಗುವುದಿಲ್ಲ. ಯಾವ ಶುದ್ಧ ಚಿತ್ ದೃಗ್ರೂಪವಾದುದೋ, ನೋಡುವಂಥದೋ, ಅದು ಯಾವಾಗಲೂ ದೃಶ್ಯತ್ವವಿಲ್ಲದ್ದಾಗಿಯೇ, ತನಗೆ ತಾನೇ, ತೋರುತ್ತಿರುತ್ತದೆ. ||೪೧||

ಆ ಚಿತ್ತತ್ವವು ಘಟ ಮುಂತಾದ ವಿಷಯಗಳು ತೋರುತ್ತಿರುವಾಗ ತೋರದೆ ಇರುತ್ತದೆ ಎನ್ನುವುದಾದರೆ, ಓ ಋಷಿಶ್ರೇಷ್ಠರೇ, "ಅದು ತೋರುವುದಿಲ್ಲ." ಎಂಬ ಅಂಶವನ್ನು ಯಾವುದು ಗ್ರಹಿಸುತ್ತದೆ? ಎಂಬ ಪ್ರಶ್ನೆಯು ಏಳುತ್ತದೆ. ಆದುದರಿಂದ ಚಿತ್ತತ್ವವು ಸರ್ವದಾ ತೋರುತ್ತಿರಬೇಕು. ವಿಷಯಗಳು ತೋರುತ್ತವೆ. ಎನ್ನುವಾಗಲೂ, ವಿಷಯವು ತೋರುವುದಿಲ್ಲ. ಎನ್ನುವಾಗಲೂ, ಈ ಎರಡು ಬಗೆಯ ಪ್ರತೀತಿಗೂ ಸಾಕ್ಷಿಯಾಗಿರಬೇಕಾದ ಚಿತ್ತತ್ವವು ಇರಬೇಕಾಗುತ್ತದೆ. ಆದುದರಿಂದ ಚಿತ್ತತ್ವವು ಸ್ವಪ್ರಕಾಶವೂ ನಿತ್ಯವೂ ಆಗಿದೆ. ಎಂಬ ಸಿದ್ಧಾಂತವೇ ಏರ್ಪಡುತ್ತದೆ. ||೪೨||

ಘಟಾದಿಗಳು ತೋರದೆ ಇರುವಾಗ, ಭಾನಾಭಾವವು ತೋರುತ್ತಿರುತ್ತದೆ. ಭಾನನಿಷೇಧವನ್ನು ಗ್ರಹಿಸುವ ಸ್ಫುರಣವೂ ಸ್ಫುರಣಾಭಾವವೂ ಒಟ್ಟಿಗೆ ಇದ್ದ

ಭಾನಂ ಭಾನಾಂತರೇಣೈವ ನ ಭಾತಿ ದ್ವಿಜಪುಂಗವಾಃ ।
ಭಾನರೂಪೇಣ ಭಾನಂ ತು ಸದೇಕಂ ನ ಹಿ ತದ್ದ್ವಯಮ್ ॥೪೪॥

ಹಾಗಾಯಿತು. ಅದು ವಿರುದ್ಧವು. ಎಂದರೆ, ಭಾನವು, ಸ್ಫುರಣವು, ಅಭಾತವಾಗದು, ಅಭಾನವೆನ್ನಿಸುವುದಿಲ್ಲವು. ಆ ಭಾನಾಭಾವಸ್ಫುರಣವೂ ಭಾನವೇ, ಸ್ಫುರಣವೇ, ಆಗಿರುತ್ತದಾದುದರಿಂದ ಅಭಾನವಾಗದು. ಅದೂ ಸ್ಫುರಣವೇ ಆಗಿರುತ್ತದೆ. ನ ಭಾತಿ ಎಂದು ಅಜ್ಞಾನವಿಷಯದಂತೆ ತೋರಿದರೂ ಆ ತೋರುವಿಕೆಯೂ ಭಾನವೇ ಆಗಿರುತ್ತದೆ. ಆ ಭಾನಗಳಿಗೆ ಸ್ವರೂಪದಲ್ಲಿ ಭೇದವೂ ಇಲ್ಲವು. ॥೪೩॥

ವೃತ್ತಿಜ್ಞಾನ ಮತ್ತು ಸ್ವರೂಪಜ್ಞಾನವೆಂಬುದಾಗಿ ಜ್ಞಾನವು ಎರಡು ಬಗೆಯಾಗಿರುತ್ತದೆ. ಕಣ್ಣು ಮುಂತಾದ ಇಂದ್ರಿಯಕ್ಕೆ ಸಂಬಂಧಪಟ್ಟ ಸತ್ತ್ವಪರಿಣಾಮ ರೂಪವಾದ ಎಂದರೆ ಕಣ್ಣು ಮುಂತಾದ ಇಂದ್ರಿಯದೊಡನೆ ಸೇರಿದ ಘಟಾದಿ ವಿಷಯಾಕಾರವಾದ ಅಂತಃಕರಣವೃತ್ತಿಗೆ ವೃತ್ತಿಜ್ಞಾನವೆಂದು ವ್ಯವಹಾರವು. ಆ ಜ್ಞಾನವನ್ನು ಎಂದರೆ, ಆ ಅಂತಃಕರಣವೃತ್ತಿರೂಪವಾದ ಜಡಪದಾರ್ಥವನ್ನು, ಔಪಚಾರಿಕವಾಗಿ ಜ್ಞಾನವೆನ್ನಿಸಿಕೊಂಡಿರುವುದನ್ನು, ಸಾಕ್ಷಿಯಾಗಿ ನೋಡುವ, ಭಾಸಕವಾದ, ಗ್ರಾಹಕವಾದ, ಸಾಕ್ಷಿಜ್ಞಾನವು ಸ್ವರೂಪಜ್ಞಾನವೆನಿಸುತ್ತದೆ. ಆದುದರಿಂದ ಭಾನಂ ವೃತ್ತಿಜ್ಞಾನವು, ಭಾನಾಂತರೇಣೈವ ಸ್ವರೂಪಜ್ಞಾನದಿಂದಲೇ, ಸಾಕ್ಷಿಸ್ವರೂಪವಾದ ಜ್ಞಾನದಿಂದಲೇ ತೋರುತ್ತದೆ. ಆ ಸ್ವರೂಪಜ್ಞಾನವಾದರೋ ಇನ್ನೊಂದರಿಂದ ತೋರುವುದಿಲ್ಲವು. ಅದು ತನಗೆ ತಾನೇ ತೋರುತ್ತದೆ. ಅದಕ್ಕೆ ಪ್ರಕಾಶಕಾಂತರದ ಅಪೇಕ್ಷೆ ಇಲ್ಲವು. ಇದೆ ಎಂದರೆ ಅನವಸ್ಥೆಯಲ್ಲಿ ಪರ್ಯವಸಾನವಾಗಬೇಕಾಗುತ್ತದೆ. ಆದುದರಿಂದ ಅದು ಯಾವಾಗಲೂ ಸ್ವಪ್ರಕಾಶರೂಪವಾಗಿ ತೋರುತ್ತಿರುತ್ತದೆ. ಭಾನರೂಪೇಣ ಭಾನವೆಂದರೆ, ಸಾಕ್ಷಿರೂಪವಾದ ಜ್ಞಾನವು ಯಾವಾಗಲೂ ಒಂದೇ ಆಗಿರುತ್ತದೆಯೇ ಹೊರತು ಎರಡಾಗಿರುವುದಿಲ್ಲವು. ಆ ಸ್ವರೂಪಜ್ಞಾನಕ್ಕೆ ಭಾಸಕ ಮತ್ತೊಂದಿಲ್ಲವು. ಇದೆ ಎಂದರೆ ಅನವಸ್ಥಾ ಬರುತ್ತದೆ. ಅದಕ್ಕಿಂತಲೂ ಬೇರೆಯಾದ ಇನ್ನೊಂದು ಜ್ಞಾನವಿಲ್ಲವೆಂದು ಫಲಿಸುತ್ತದೆ. ವಿಷಯದೊಡನೆ ಸೇರಿದಾಗ ಜ್ಞಾನಕ್ಕೆ ಭೇದವು ಔಪಾಧಿಕವಾಗಿ ತೋರುತ್ತದೆ. ವಿಷಯವನ್ನು ಬಿಟ್ಟರೆ ಜ್ಞಾನವೆಲ್ಲವೂ ಒಂದೇ ಎಂಬುದೇ ತತ್ತ್ವವು. ಬೆಂಕಿಗೆ ಔಪಾಧಿಕವಾದ ಕಟ್ಟಿಗೆಯ ಸಂಬಂಧವಿದ್ದರೆ ಬೇರೆ ಬೇರೆ ಕಾಣುತ್ತದೆ. ಅದಿಲ್ಲದಿದ್ದರೆ ಬೆಂಕಿ ಎಲ್ಲವೂ ಎಲ್ಲ ದೇಶಕಾಲಗಳಲ್ಲಿರುವ ಬೆಂಕಿಯೂ ಒಂದೇ ಹೊರತು ಎರಡಲ್ಲವು. ಹೀಗೆ ಒಂದು ಚಿತ್ತಿಗೂ ಮತ್ತೊಂದು ಚಿತ್ತಿಗೂ ಒಂದು ಜ್ಞಾನಕ್ಕೂ ಮತ್ತೊಂದು ಜ್ಞಾನಕ್ಕೂ ಸ್ವರೂಪದಲ್ಲಿ ಭೇದವು ಸಿದ್ಧಿಸದು. ॥೪೪॥

ಭಾತಂ ಭಾನಂ ಸದಾ ಸ್ವೇನ ಭಾಸಾ ಭಾತಿ ನ ಚಾನ್ಯತಃ ।
ಯತ್ಸ್ವಯಂ ಭಾತಿ ತದ್ಭಾನಂ ಖಲು ಭಾಸ್ಯಸ್ಯ ಭಾಸಕಂ ॥೪೫॥

ಅತಸ್ಸರ್ವಸ್ಯ ಸಾಕ್ಷ್ಯಸ್ಯ ಸಾಕ್ಷಿಭೂತಃ ಸ್ವಯಂ ಪ್ರಭುಃ ।
ಆತ್ಮಾ ಸಾಕ್ಷ್ಯಗತೈರ್ಧರ್ಮೈಃ ಕರ್ಮಭಿರ್ನ ಸ ಬಧ್ಯತೇ ॥೪೬॥

ಭಾತಂ ಭಾನಕ್ಕೆ ವಿಷಯವಾದ, ತೋರಿದ, ಭಾನಂ ಸ್ಫುರಣವು, ಸಾಕ್ಷಿರೂಪವಾದುದರಿಂದ ಸರ್ವದಾ ತನ್ನ ಕಾಂತಿಯಿಂದಲೇ, ಬೆಳಕಿನಿಂದಲೇ, ಬೆಳಗುತ್ತದೆ. ಮತ್ತು ತಿಳಿಸುತ್ತದೆ. ಇನ್ನೊಂದರಿಂದ ಬೇರೆ ಬೆಳಕಿನ ಸಹಾಯದಿಂದ ತೋರಬೇಕಾಗಿರುವುದಿಲ್ಲ. ಏಕೆಂದರೆ ತನ್ನಂತಹ ಇನ್ನೊಂದು ಬೆಳಕಿನ ಅಪೇಕ್ಷೆಯಿಲ್ಲದೆ ತಾನೇ ತನ್ನನ್ನು ತೋರಿಸುವ ಪ್ರಭಾ, ದೀಪ, ಮುಂತಾದ ಪದಾರ್ಥಕ್ಕೇ ಭಾಸಕವೆಂದು ವ್ಯವಹಾರವು. ಯಾವುದು ತಾನೇ ತೋರುತ್ತದೋ ಅದು ಭಾನವೇ ಚಿತ್ತೇ ಆಗಿರುತ್ತದಷ್ಟೆ. ಅದೇ ಅಂಥಾದ್ದೇ ಇತರ ಎಲ್ಲ ಭಾಸ್ಯಗಳನ್ನೂ ತೋರಿಸಿಕೊಡಬಲ್ಲದು. ನತತ್ರ ಸೂರ್ಯೋಭಾತಿನ ಚಂದ್ರತಾರಕಂ ನೇಮಾವಿದ್ಯುತೋ ಭಾಂತಿ ಕುತೋಽಯಮಗ್ನಿಃ । ತಮೇವಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥ ಕಠೋಪನಿಷತ್ ೫.೧೫. ನಲ್ಲಿ ಹೀಗೆ ಹೇಳಿದೆ. ಹಾಗಲ್ಲದೆ ಆ ಸಾಕ್ಷಿಚೈತನ್ಯದ ಸ್ವರೂಪವಾದ ಜ್ಞಾನವನ್ನೂ ತಿಳಿಸಲು ಇನ್ನೊಂದು ಭಾಸಕವು ಬೇಕೆಂದರೆ, ಅನವಸ್ಥಾದೋಷದಲ್ಲಿ ಕೊನೆಗಾಣಬೇಕಾಗುತ್ತದೆ. ಅಲ್ಲದೆ ಅದು ಅಪ್ರಾಮಾಣಿಕವಾಗಿಯೂ ಇರುತ್ತದೆ. ಅದರಿಂದ ಬೇರೆ ಪದಾರ್ಥವೂ ಸಿದ್ಧಿಸಲಾರದು. ಏಕೆಂದರೆ ಪ್ರಮಾಣಗಳಿಂದಲೇ ಪ್ರಮೇಯವು ಸಿದ್ಧವಾಗಬೇಕೆಂಬುದು ಎಲ್ಲರೂ ಒಪ್ಪಿರುವ ಸಿದ್ಧಾಂತವಾಗಿದೆ. ಎಂದು ತಿಳಿಯಬೇಕು. ॥೪೫॥

ಆತ್ಮನು ಅದ್ವಿತೀಯನಾದ ಸ್ವಪ್ರಕಾಶನಾದ ಚಿನ್ಮಾತ್ರಸ್ವರೂಪನೆಂದು ಗೊತ್ತಾದುದರಿಂದ, ಎಲ್ಲ ದೃಶ್ಯಪದಾರ್ಥಗಳಿಗೂ ಸಾಕ್ಷಿಭೂತನಾದ ದೃಗ್ರೂಪನಾದ ಸ್ವಪ್ರಕಾಶನಾದ ತನ್ನ ಸ್ಫುರಣದಲ್ಲಿ ಪ್ರಕಾಶಾಂತರದ ಅಪೇಕ್ಷೆಯಿಲ್ಲದೆ ಇರುವ ಆತ್ಮನು, ಸಾಕ್ಷ್ಯಗಳಲ್ಲಿ ದೃಶ್ಯವಾದ ಶರೀರಾದಿಗಳಲ್ಲಿ ಇರುವ ಧರ್ಮಗಳಿಂದಲೂ ಕರ್ಮಗಳಿಂದಲೂ ವಾಸ್ತವವಾಗಿ ಬಂಧಿಸಲ್ಪಡುವುದೂ ಇಲ್ಲವು. ಅಜ್ಞಾನದಿಂದ ಕಲ್ಪಿತ ಮಾತ್ರವಾಗಿ ತೋರುತ್ತಿದ್ದ ಸಂಬಂಧವು ತಿಳಿವಳಿಕೆಯಿಂದ ನಷ್ಟವಾಗುತ್ತದೆ. ॥೪೬॥

ದೃಗ್ರೂಪಂ ದೃಶ್ಯಸಂಬದ್ಧಂ ಇತಿ ವಕ್ತುಂ ನ ಶಕ್ಯತೇ ।
ಸಂಬಂಧಸ್ಯಾಪಿ ಸಾಕ್ಷ್ಯತ್ವಾತ್ ಸಂಬಂಧೋ ದೃಶ್ಯವಸ್ತುಗಃ ॥೪೭॥

ದೃಶ್ಯಭೂತಸ್ಯ ರಜ್ಜ್ವಾದೇಃ ಖಲು ದೃಷ್ಟಸ್ತು ಸಂಗಮಃ ॥೪೮॥
ಅಸಂಗೋ ಹ್ಯಯಮಿತ್ಯೇವಂ ಬ್ರವೀತಿ ಚ ಪರಾ ಶ್ರುತಿಃ ।
ತಸ್ಮಾದಾತ್ಮಾ ತು ಚಿದ್ರೂಪಃ ಕರ್ಮಭಿರ್ನ ಸ ಬಧ್ಯತೇ ॥೪೯॥

ಚಿದ್ರೂಪಸ್ಯಾತ್ಮನಃ ಸಾಕ್ಷಾತ್ ಬ್ರಹ್ಮತಾಮಾಹ ಹಿ ಶ್ರುತಿಃ ।
ಬ್ರಹ್ಮಣಃ ಕರ್ಮಸಂಬಂಧಾಭಾವಂ ಚಾಹ ಪರಾ ಶ್ರುತಿಃ ॥೫೦॥

ಅಲ್ಲದೆ ಯಾವುದು ನೋಡುವಂಥಾದ್ದೂ ದೃಕ್‌ರೂಪವಾದುದೂ ಆಗಿರುವುದೋ, ಅದು ಸಂಬಂಧವನ್ನು ಪಡೆದಿರುತ್ತದೆಂದು ಹೇಳಲಾಗುವುದಿಲ್ಲ. ಏಕೆಂದರೆ ಆ ಸಂಬಂಧವೂ ದೃಶ್ಯವೇ ಆಗಿರುತ್ತದೆ. ಆ ಸಂಬಂಧವೂ ದೃಶ್ಯವಾದ ಪದಾರ್ಥದಲ್ಲೇ ಇರುವಂತಹದು. ದೃಶ್ಯವಾದ ಹಗ್ಗ ಮುಂತಾದುದಕ್ಕೆ ಅಮೂರ್ತವೂ ನಿಷ್ಕ್ರಿಯವೂ ಆದ ದೃಕ್‌ರೂಪವಾದ ಆತ್ಮನೊಡನೆ ಸಂಬಂಧವು ಪಾರಮಾರ್ಥಿಕವಾಗಿರುವುದಿಲ್ಲವು. ಅಲ್ಲದೆ ಅ ಸಂಬಂಧವೂ ದೃಗ್ರೂಪವೋ ದೃಶ್ಯರೂಪವೋ ಎಂದು ವಿಕಲ್ಪಿಸಿದರೆ, ಅದನ್ನು ದೃಗ್ರೂಪವೆಂದು ಹೇಳಲಾಗದು. ಏಕೆಂದರೆ ಆಗ ತನಗೆ ತನ್ನೊಡನೆ ಸಂಬಂಧವೆಂದ ಹಾಗಾಗುತ್ತದೆ. ಅದು ಅಸಂಗತವು. ದೃಶ್ಯರೂಪವೆಂದರೆ ಅದು ಸಂಬಂಧಿ ಎಂದ ಹಾಗಾಗುತ್ತದೆಯೇ ಹೊರತು ಸಂಬಂಧವೆನಿಸದು. ಆದುದರಿಂದ ಸಂಬಂಧದ ಸ್ವರೂಪವನ್ನು ನಿರೂಪಣಮಾಡಲಾಗುವುದಿಲ್ಲವೆಂದಹಾಗಾಯಿತು. ಆದುದರಿಂದ ದೃಕ್ ದೃಶ್ಯ ಇವುಗಳಿಗೆ ಸಂಬಂಧವು ವಾಸ್ತವವಲ್ಲವು. ಅಲ್ಲದೆ ಶ್ರುತಿಯಲ್ಲಿ "ಅಸಂಗೋ ನ ಹಿ ಸಜ್ಜತೇ" ಬೃ.ಉ. ೩.೯.೨೬.. "ಅಸಂಗೋ ಹ್ಯಯಂ ಪುರುಷಃ,' ಎಂಬ ಬೃಹದಾರಣ್ಯಕ ೪.೩.೧೫.೧೬. ವಾಕ್ಯಗಳೂ ಆತ್ಮನು ಸಂಬಂಧ ರಹಿತನೆಂದು ಹೇಳುತ್ತವೆ. ಆದುದರಿಂದ ಚಿದ್ರೂಪನಾದ ಅತ್ಮನು ಕರ್ಮಗಳಿಂದ ವಾಸ್ತವವಾಗಿ ಬಂಧಿಸಲ್ಪಡುವುದಿಲ್ಲ. ॥೪೭-೪೮-೪೯॥

ಚಿದ್ರೂಪನಾದ ಅತ್ಮನಿಗೆ ಬ್ರಹ್ಮಾಭೇದವನ್ನು "ಅಹಂ ಬ್ರಹ್ಮಾಸ್ಮಿ" ಬೃ.ಉ. ೧.೪.೧೦. "ಅಯಮಾತ್ಮಾ ಬ್ರಹ್ಮ", ಮಾಂ. ಉ. ೨; ಬೃ. ಉ. ೨.೫.೧೯. ಎಂದು ಮುಂತಾದ ಶ್ರುತಿಯು ಹೇಳುತ್ತದೆ. ಬ್ರಹ್ಮನಿಗೂ ಕರ್ಮಸಂಬಧವಿಲ್ಲವೆಂಬ ಅಂಶವನ್ನೂ ಶ್ರುತಿಯು "ಸ ನ ಸಾಧುನಾ ಕರ್ಮಭೂಯಾನ್ನೋ" ಎಂಬ ಮುಂತಾದ ಶ್ರುತಿಯು ಬೃ.ಉ. ೪.೪.೨೨. ಹೇಳುತ್ತದೆ. ॥೫೦॥

ತಥಾ ಸತಿ ಕಥಂ ಸೋಽಯಂ ಕರ್ಮಭಿರ್ಬಧ್ಯತೇ ಬುಧಾಃ ।
ತಸ್ಮಾದಾತ್ಮಾ ಸ್ವಮೋಹೇನ ಸಂಸಾರೀವ ಪ್ರಕಾಶಿತಃ ॥೫೧॥

ವರ್ಣಾಶ್ರಮವಯೋಽವಸ್ಥಾ ವಿಶೇಷಾನಾತ್ಮವಿಭ್ರಮಾತ್ ।
ಅಧ್ಯಸ್ಯಾಶೇಷವೇದಾನಾಂ ನಿಯೋಜ್ಯಸ್ಸ್ಯಾತ್ ನ ತು ಸ್ವತಃ ॥೫೨॥

ಅಜ್ಞಾನಾದನ್ಯಥಾ ಜ್ಞಾನಂ ಮನುಷ್ಯತ್ವಾದಿಮಾನಯಮ್ ।
ಆತ್ಮಾ ತು ಪರಮಾತ್ಮಾಽಪಿ ಕರ್ಮಭಿರ್ಬಧ್ಯತೇಽವಶಃ ॥೫೩॥

ಆತ್ಮನು ಸಂಗರಹಿತನಾದರೆ ಅವನಿಗೆ ಕರ್ಮಸಂಬಂಧವಿರುವ ಹಾಗೆ ತೋರುತ್ತಿರುವುದು ಹೇಗೆಂದರೆ, ಆತ್ಮನು ವಾಸ್ತವವಾಗಿ ಸಂಬಂಧರಹಿತನಾದುದರಿಂದ, ತನ್ನ ನಿಜಸ್ವರೂಪದ ಅಜ್ಞಾನದಿಂದ, ದೇಹಾದಿಗಳಲ್ಲಿ 'ನಾನು, ನನ್ನದು', ಕರ್ತೃತ್ವ, ಫಲಕಾಮನೆ, ಭೋಕ್ತೃತ್ವಗಳಲ್ಲಿ ಸಂಕಲ್ಪ, ಅಭಿಮಾನಗಳಿಂದ ಕರ್ಮಬಂಧವುಳ್ಳವನಂತೆಯೂ ಸಂಸಾರಿಯಂತೆಯೂ ಅಧ್ಯಾಸದಿಂದ ಕಲ್ಪಿತವಾಗಿ ತೋರುತ್ತಾನೆ. ||೫೧||

ಆತ್ಮವಿಭ್ರಮದಿಂದ ಎಂದರೆ ಸ್ಥೂಲದೇಹದಲ್ಲಿ "ನಾನು, ನನ್ನದು" ಎಂಬ ಭ್ರಾಂತಿಯಿಂದ, ಬ್ರಾಹ್ಮಣಾದಿವರ್ಣಗಳು, ಬ್ರಹ್ಮಚರ್ಯಾದಿ ಆಶ್ರಮಗಳು, ಬಾಲ್ಯಾದಿ ಅವಸ್ಥೆಗಳೂ, ಅಷ್ಟವರ್ಷ ಮುಂತಾದ ವಯಸ್ಸು, ಇವುಗಳ ವಿಶೇಷಗಳನ್ನು ಆತ್ಮನಲ್ಲಿ ಅಜ್ಞಾನದಿಂದ ಆರೋಪಿಸಿ, ವೇದಗಳಲ್ಲಿರುವ ಕರ್ಮವಿಧಿಗಳಿಗೆ ನಿಯೋಜ್ಯನೆಂಬ ಅಭಿಮಾನವುಳ್ಳವನಾಗುತ್ತಾನೆಯೇ ಹೊರತು ಸ್ವಾಭಾವಿಕವಾಗಿ ಅಲ್ಲವು.||೫೨||

ಆತ್ಮಸ್ವರೂಪವನ್ನು ತಿಳಿಯದೆ ಇರುವುದರಿಂದ ಈ ಜೀವನು ನಾನು ಮನುಷ್ಯನು ಎಂದು ಮುಂತಾಗಿ ಕಲ್ಪಿತವಾಗಿ ತಿಳಿದುಕೊಳ್ಳುವಿಕೆಯೇ ಅನ್ಯಥಾಜ್ಞಾನವೆನಿಸುತ್ತದೆ. ನೀಲಪೃಷ್ಠತ್ರಿಕೋಣತ್ವ ಮುಂತಾದ ತಿಳಿವಳಿಕೆ ಇಲ್ಲದ್ದರಿಂದ ಇದು ರಜತವೆಂಬ ಭ್ರಾಂತಿಯುಂಟಾಗುವ ಹಾಗೆ, ಆತ್ಮನ ವಾಸ್ತವವಾದ ಸಚ್ಚಿದಾನಂದ ಬ್ರಹ್ಮಸ್ವರೂಪವು ತಿಳಿಯದೆ ಇರುವುದರಿಂದ ಮನುಷ್ಯತ್ವಾದಿಗಳು ತೋರುತ್ತಿರುತ್ತವೆ. ಈ ಅಜ್ಞಾನರೂಪವಾದ ಮಾಯೆಗೆ ಆವರಣಶಕ್ತಿ ಎಂದೂ ವಿಕ್ಷೇಪಶಕ್ತಿ ಎಂದೂ ಎರಡು ಶಕ್ತಿಗಳಿವೆ. ಆವರಣಶಕ್ತಿಯಿಂದ ಆತ್ಮನ ಸ್ವಸ್ವರೂಪವು ತಿಳಿಯದೇ ಹೋಗುತ್ತದೆ. ವಿಕ್ಷೇಪಶಕ್ತಿಯಿಂದ ಶರೀರಾದಿಗಳೇ ನಾನು, ಹೆಂಡತಿ, ಮಕ್ಕಳು, ಮನೆ, ಆಸ್ತಿ, ವಿತ್ತ ಮುಂತಾದುವು ನನ್ನವು, ಎಂಬ ತಪ್ಪು ತಿಳಿವಳಿಕೆಯು

ಕರ್ಮಭಿಃ ವ್ಯವಹಾರೇ ತು ಬದ್ಧೋಽಪಿ ಸ್ವೀಯಮಾಯಯಾ ।
ವಸ್ತುತಃ ಪರಮಾತ್ಮಾಽಯಂ ಖಲು ತೈರ್ನ ನಿಬಧ್ಯತೇ ॥೫೪॥

ಸ್ವಾತ್ಮನಸ್ಸರ್ವಸಾಕ್ಷಿತ್ವಂ ದೇಹಾದೇರ್ವ್ಯತಿರಿಕ್ತತಾಮ್ ।
ಬ್ರಹ್ಮತ್ವಂ ಚ ಶ್ರುತೇರ್ಜ್ಞಾತ್ವಾ ಕರ್ಮಭಿರ್ನ ಹಿ ಬಧ್ಯತೇ ॥೫೫॥

ಸರ್ವಸಾಕ್ಷಿಣಮಾತ್ಮಾನಂ ವರ್ಣಾಶ್ರಮವಿವರ್ಜಿತಮ್ ।
ಬ್ರಹ್ಮರೂಪತಯಾ ಪಶ್ಯನ್ ಮುಚ್ಯತೇ ಭವಬಂಧನಾತ್ ॥೫೬॥

ಉಂಟಾಗುತ್ತದೆ. ಆತ್ಮನು ವಾಸ್ತವವಾಗಿ ಪರಮಾತ್ಮಸ್ವರೂಪನೇ ಆಗಿದ್ದರೂ, ಅಖಂಡಸಚ್ಚಿದಾನಂದಾ ದ್ವೈತರೂಪನಾಗಿದ್ದರೂ, ಈ ಅಜ್ಞಾನವೆಂಬ ಮಾಯೆಯಿಂದ ಪರವಶನಾಗಿ ಕರ್ತೃತ್ವ, ಭೋಕ್ತೃತ್ವ, ಮನುಷ್ಯತ್ವಾದಿಗಳನ್ನು ತನ್ನಲ್ಲಿ ಆರೋಪಿಸಿ ಕೊಂಡು ಆಯಾ ವರ್ಣಾಶ್ರಮಗಳಿಗೆ ವಿಹಿತವಾದ ಕರ್ಮಗಳಿಂದ ಬದ್ಧನಂತಾಗಿರುತ್ತಾನೆ. ॥೫೩॥

ಆತ್ಮನು ವಾಸ್ತವವಾಗಿ ಪರಬ್ರಹ್ಮನಾದರೂ ತನ್ನ ನಿಜಸ್ವರೂಪದ ಅಜ್ಞಾನವೆಂಬ ಮಾಯೆಯಿಂದ ಈ ಐಹಲೌಕಿಕಪಾರಲೌಕಿಕ ವ್ಯವಹಾರಗಳಲ್ಲಿ ಕರ್ಮಗಳಿಂದ ಬಂಧಿಸಲ್ಪಟ್ಟಿರುವಂತೆ ತೋರುತ್ತಿರುತ್ತಾನೆಯೇ ಹೊರತು ಇವನು ನಿಜವಾಗಿ ಆ ಕರ್ಮಗಳಿಂದ ಬದ್ಧನಾಗಿರುವುದಿಲ್ಲ. ॥೫೪॥

ಅಜ್ಞಾನದಿಂದ ಸಂಸಾರದಲ್ಲಿ ಬದ್ಧನಾದಂತಿರುವ ಆತ್ಮನಿಗೆ ಬಿಡುಗಡೆಯ ದಾರಿಯನ್ನು ಹೇಳುತ್ತಾರೆ. ತನ್ನ ಆತ್ಮನಿಗೆ ಸರ್ವಕ್ಕೂ ಸಾಕ್ಷಿಯಾಗಿರುವಿಕೆಯನ್ನೂ, ದೇಹ ಇಂದ್ರಿಯ ಪ್ರಾಣಗಳಿಗಿಂತ ಬೇರೆಯಾಗಿರುವಿಕೆಯನ್ನೂ, ಬ್ರಹ್ಮವಸ್ತುವಿನೊಡನೆ ಅಭೇದವನ್ನೂ, ವೇದವಾಕ್ಯದ ಸಹಾಯದಿಂದ ತಿಳಿದು ಜೀವನು ಕರ್ಮಗಳಿಂದ ಬದ್ಧನಾಗುವುದಿಲ್ಲ. ॥೫೫॥

ಆತ್ಮನನ್ನು ಎಲ್ಲಕ್ಕೂ ಸಾಕ್ಷಿಯಾದವನನ್ನಾಗಿಯೂ, ಬ್ರಾಹ್ಮಣ್ಯ ಬ್ರಹ್ಮಚರ್ಯಾದಿಗಳಿಲ್ಲದವನನ್ನಾಗಿಯೂ, ಪರಬ್ರಹ್ಮಸ್ವರೂಪವಾದವನನ್ನಾಗಿಯೂ, ಅಪರೋಕ್ಷಾನುಭವದಿಂದ ತಿಳಿದು ಸಂಸಾರದ ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಈ ಅಂಶವನ್ನು "ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ ವ್ಯಾವೃತ್ತಾಸ್ವನು ವರ್ತಮಾನ ಮಹಮಿತ್ಯಂತಃ ಸ್ಫುರಂತಂ ಸದಾ । ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ ಯೋ ಮುದ್ರಯಾಭದ್ರಯಾ ತಸ್ಮೈಶ್ರೀ ಗುರು

ಅತಸ್ಸ್ವಾತ್ಮಾಪರಿಜ್ಞಾನಾತ್ ದೇಹೇಽಹಂಭಾವಮಾಶ್ರಿತಃ ।
ಕರೋತಿ ಸರ್ವಶಾಸ್ತ್ರೋಕ್ತಂ ನ ಜ್ಞಾನೀ ನ ಹಿ ಸಂಶಯಃ ॥೫೭॥

ಈದೃಶೀ ಪರಮಾ ವಿದ್ಯಾ ಶಾಂಕರೀ ಭವನಾಶಿನೀ ।
ಪ್ರಸಾದಾದೇವ ಜಂತೂನಾಂ ಶಕ್ತೇರೇವ ಹಿ ಜಾಯತೇ ॥೫೮॥

ನಾಗುದ್ಭೂತಾ ಪರಾ ಶಕ್ತಿಃ ಯಾ ಚಿದ್ರೂಪಾ ಪರಾ ಭಿಧಾ ।
ವಂದೇ ತಾಮನಿಶಂ ಭಕ್ತ್ಯಾ ಶ್ರೀಕಂಠಾರ್ಧಶರೀರಿಣೀಮ್ ॥೫೯॥

ಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ಎಂದು ಶ್ರೀಶಂಕರಾಚಾರ್ಯರು ವಿವರಿಸಿರುತ್ತಾರೆ. ॥೫೬॥

ಆದುದರಿಂದ ಆತ್ಮನು ತನ್ನ ನಿಜಸ್ವರೂಪವನ್ನು ತಿಳಿಯದೆ ಇರೋಣದರಿಂದ, ಈ ದೇಹದಲ್ಲಿ ನಾನೆಂಬ ಅಧ್ಯಾಸವನ್ನು ಪಡೆದವನಾಗಿ ಎಲ್ಲ ಶಾಸ್ತ್ರಗಳಲ್ಲೂ ವಿಹಿತವಾಗಿರುವ ಕರ್ಮಗಳನ್ನೂ ಆಚರಿಸುತ್ತಿರುತ್ತಾನೆ. ಜ್ಞಾನಿಯಾದವನು ಹೀಗೆ ಕರ್ಮಗಳಲ್ಲಿ ತೊಡಗುವುದಿಲ್ಲ. ಈ ಅಂಶದಲ್ಲಿ ಸಂದೇಹವಿಲ್ಲವು. ॥೫೭॥

ಇಂಥ ಅಜ್ಞಾನವನ್ನು ಹೋಗಲಾಡಿಸುವ ಸಂಸಾರದಿಂದ ಬಿಡುಗಡೆಯನ್ನುಂಟುಮಾಡುವ ಶ್ರೇಷ್ಠವಾದ ತಿಳಿವಳಿಕೆಯು ಶಂಕರನ ಪರಶಿವನ ಅನುಗ್ರಹ ಮೂಲಕವಾದುದು. ಈ ಜ್ಞಾನವು ಆ ಪರಶಿವನ ಶಕ್ತಿಸ್ವರೂಪಳಾದ ಉಮಾದೇವಿಯ ಅನುಗ್ರಹದಿಂದಲೇ ಎಲ್ಲ ಪ್ರಾಣಿಗಳಿಗೂ ಉಂಟಾಗುತ್ತದೆ. ಈ ಅಂಶವನ್ನು "ಕಾಮ್ಯಾನಾಂ ಕರ್ಮಣಾಂ ಯೈಃ" ಎಂಬ ಪದ್ಯದಲ್ಲಿ, ದೇವೀಭಾಗವತ ಏಳನೆಯ ಸ್ಕಂಧದ ಮಂಗಳಪದ್ಯದ ವಿವರಣೆಯಲ್ಲಿ ತಿಳಿಸಿದೆ. ಮತ್ತು ಕೇನೋಪನಿಷತ್ ೩.೧೨. ನೋಡಿ. ॥೫೮॥

ಆ ದೇವಿಯ ಪ್ರಸಾದಕ್ಕೋಸ್ಕರ ಸ್ತೋತ್ರವನ್ನು ಹೇಳುತ್ತಾರೆ. ಸಂವಿದ್ರೂಪವಾದ ಯಾವ ದೇವಿಯ ಪರಾಶಕ್ತಿಯು ಶಬ್ದರೂಪವಾದ ವಿವರ್ತರೂಪವಾಗಿ ಪರಿಣಾಮವನ್ನು ಹೊಂದಿ ಮೊದಲು ಪರಾ ಎಂಬ ಹೆಸರಿನಿಂದ ಆವಿರ್ಭಾವವನ್ನು ಪಡೆಯುತ್ತದೋ, ಅಂಥ ಶ್ರೀಪರಶಿವನ ಅರ್ಧಾಂಗಿಯಾದ ಉಮಾದೇವಿಯನ್ನು ಯಾವಾಗಲೂ ಭಕ್ತಿಯಿಂದ ನಮಸ್ಕರಿಸುತ್ತೇನೆ. ಪಂಚೋಪನಿಷತ್ ಪು. ೧೩.೧೫. ನೋಡಿ. ॥೫೯॥

ಇಚ್ಛಾ ಸಂಜ್ಞಾ ಚ ಯಾ ಶಕ್ತಿಃ ಪರಿಪೂರ್ಣ ಶಿವೋದರಾ ।
ವಂದೇ ತಾಮಾದರೇಣೈವ ಮಮೇಷ್ಟಫಲದಾಯಿನೀಮ್ ॥೬೦॥

ಶಕ್ತಿರ್ಯಾ ಪರಮಾ ಸಾಕ್ಷಾತ್ ಬೀಜಭೂತಾಽಖಿಲಸ್ಯ ಚ ।
ವಂದೇ ತಾಮನಿಶಂ ಭಕ್ತ್ಯಾ ನ ಕುಲೀಶಶಿವಾನ್ವಿತಾಮ್ ॥೬೧॥

ಊರ್ಧ್ವರೂಪಾಽಪ್ಯಧೋರೂಪಾ ತಥಾಽಧಸ್ಸ್ಥಾಽಪಿ ಮಧ್ಯಗಾ ।
ಮಧ್ಯರೂಪಾಽಪಿ ಚಾಂತಸ್ಥಾ ಯಾ ತಾಂ ವಂದೇ ವರಪ್ರದಾಮ್॥೬೨॥

ಆ ಪರಾಶಕ್ತಿಯೇ ಸಿಸೃಕ್ಷೆಗೆ, ಸೃಷ್ಟಿಮಾಡಬೇಕೆಂಬ ಇಚ್ಛೆಗೆ, ವಿಷಯವಾದ ಈ ಜಗತ್ತೆಂಬ ವಿಶೇಷರೂಪದಿಂದ ಇಚ್ಛಾಶಕ್ತಿ ಎಂಬ ಹೆಸರನ್ನು ಪಡೆದು, ಪರಿಪೂರ್ಣನಾದ ಅಖಂಡಚಿದ್ರೂಪನಾದ ಪರಶಿವನಿಂದ, ಸ್ವಪ್ರಕಾಶನಾದ ಶಿವಚೈತನ್ಯದಿಂದ, ಹೂವಿನ ಬಣ್ಣದಿಂದ ಸ್ಫಟಿಕವು ಹೇಗೋ ಹಾಗೆ ವ್ಯಾಪ್ತವಾಗುತ್ತದೋ, ಅಂಥ ನನ್ನ ಇಷ್ಟಾರ್ಥಗಳನ್ನು ಅನುಗ್ರಹಿಸುವ ದೇವತೆಯನ್ನು ಆದರದಿಂದ ನಮಸ್ಕರಿಸುತ್ತೇನೆ. ॥೬೦॥

ಈ ಸಮಸ್ತವಾದ ಪ್ರಪಂಚಕ್ಕೂ ನೇರವಾಗಿ ಕಾರಣವಾಗಿರುವುದರಿಂದಲೇ ಉತ್ಕೃಷ್ಟವಾದ ಸಂವಿದ್ರೂಪವಾದ ಶಕ್ತಿಯು ಶ್ರೀಕಂಠನ್ಯಾಸದಲ್ಲಿ ಹಕಾರವಾಚ್ಯವಾದುದು. ಆ ಹಕಾರರೂಪನಾದ ನಕುಲೀಶಮೂರ್ತಿಸ್ವರೂಪನಾದ ಪರಶಿವನಿಂದ ಕೂಡಿರುವ "ಅಥ ಸಂಜ್ಞಾಭವೇದ್ವ್ಯಾಪ್ಯವಿಶ್ವಂ" ಎಂದು ಪ್ರಸಿದ್ಧವಾದ ಆ ಪರಶಕ್ತಿಯನ್ನು ಸರ್ವದಾ ವಂದಿಸುತ್ತೇನೆ. ॥೬೧॥

ಈ ಪ್ರಪಂಚದ ನಾಶದ ಉತ್ತರಕಾಲದಲ್ಲಿ ತನ್ನಲ್ಲಿ ಅಡಗಿರುವ ಪ್ರಪಂಚವುಳ್ಳವಳಾಗಿ ಊರ್ಧ್ವರೂಪಳಾಗಿರುವ, ಅಧೋರೂಪಳಾಗಿ ಕಾರ್ಯದ ಉತ್ಪತ್ತಿಕಾಲದಲ್ಲಿ ಮುಂಚೆ ಕಾರಣಸ್ವರೂಪಳಾಗಿರುತ್ತಾ, ಅಧೋರೂಪಳಾಗಿರುವ, ಅಧೋರೂಪಳಾದರೂ ಇವೆರಡರ ಮಧ್ಯಕಾಲದಲ್ಲೂ ಉಪಾದಾನಕಾರಣರೂಪಳಾಗಿ ಇರುವ, ಹೀಗೆ ಕಾಲತ್ರಯದಲ್ಲೂ ವ್ಯಾಪಿಸಿರುವ, ಇಷ್ಟಾರ್ಥಗಳನ್ನು ಕೊಡುವ, ಆ ಪರಶಕ್ತಿಯನ್ನು ನಮಸ್ಕರಿಸುತ್ತೇನೆ. ತನ್ನಿಂದ ಸೃಷ್ಟಿಸಲ್ಪಟ್ಟಿರುವ ಸ್ಥಾವರ ಮತ್ತು ಜಂಗಮರೂಪವಾದ ಈ ಪ್ರಪಂಚದಲ್ಲಿ ಸ್ವಾತ್ಮರೂಪದಿಂದ ಅನುಪ್ರವೇಶಮಾಡಿ ಸರ್ವವ್ಯಾಪಿಯಾಗಿರುವ ಶಕ್ತಿಗೆ ನಮಸ್ಕಾರವು. ಈ ಅಂಶವನ್ನು "ತತ್ಸೃಷ್ಟ್ವಾ ತದೇವಾನುಪ್ರಾವಿ

ವಿನ್ಯಾಸೈರ್ವರ್ಣ ಸಂಕ್ಲೃಪ್ತೈಃ ವಿಶ್ವವಿದ್ಯಾಽಽಲಯಾತ್ಮನಾ ।
ವಿದ್ಯೋತಮಾನಾ ಯಾ ವಾಚಿ ವಂದೇ ತಾಮಾದರೇಣ ತು ॥೬೩॥

ಏಕಧಾ ಚ ದ್ವಿಧಾ ಚೈವ ತಥಾ ಷೋಡಶಧಾ ಸ್ಥಿತಾ ।
ದ್ವಾತ್ರಿಂಶದ್ಭೇದಭಿನ್ನಾ ಚ ಯಾ ತಾಂ ವಂದೇ ಪರಾತ್ಮದಾಮ್ ॥೬೪॥

ಅಕಾರಾದಿಕ್ಷಕಾರಾಂತೈಃ ವರ್ಣೈರತ್ಯಂತನಿರ್ಮಲೈಃ ।
ಅಶೇಷಶಬ್ದೈರ್ಯಾ ಭಾತಿ ತಾಮಾನಂದಪ್ರದಾಂ ನುಮಃ ॥೬೫॥

ಶತ್. ತದನುಪ್ರವಿಶ್ಯಸಚ್ಚತ್ಯಚ್ಚಾಽಭವತ್.'' ತೈತ್ತಿರೀಯೋಪನಿಷತ್ ೨.೬. ನಲ್ಲಿ ಹೇಳಿದೆ. ॥೬೨॥

ಅಕಾರ ಮೊದಲು ಹಕಾರದವರೆಗಿನ ಅಕ್ಷರಗಳ ಸಂಯೋಜನಗಳಿಂದ ಏರ್ಪಟ್ಟಿರುವ ವೇದ, ಶಾಸ್ತ್ರ, ಸಾಹಿತ್ಯಾದಿ ವಿದ್ಯೆಗಳಿಗೆ ಆಶ್ರಯಸ್ವರೂಪದಿಂದ ಯಾರು ವಾಙ್ಮಯದಲ್ಲಿ ಪ್ರಕಾಶಿಸುತ್ತಿರುತ್ತಾಳೋ, ಅಂಥಾ ಶಕ್ತಿಯನ್ನು ಆದರ ದೊಡನೆ ನಮಸ್ಕರಿಸುತ್ತೇನೆ. ॥೬೩॥

ವೈಖರೀರೂಪದಿಂದ ಏಕರೂಪಳಾದ, ಸ್ವರ, ವ್ಯಂಜನರೂಪದಿಂದ ಎರಡು ಬಗೆಯಾಗಿರುವ, ಸ್ವರಗಳು ಅನುಸ್ವಾರವಿಸರ್ಗರೂಪದಿಂದ ಷೋಡಶಪ್ರಕಾರಳಾಗಿರುವ, ವರ್ಗವರ್ಣಗಳು ಇಪ್ಪತ್ತೈದು ಯ ರ ಲ ವ ಶ ಷ ಸ ಎಂಬ ಏಳು ಒಟ್ಟು ಮೂವತ್ತೆರಡು ವರ್ಣರೂಪಳಾದ, (ಇಲ್ಲಿ ಲ ರ ಕಾರಗಳಿಗೆ ಅಭೇದದಿಂದ, ಎರಡನ್ನೂ ಒಂದು ಎಂದು ಗಣಿಸಲಾಗಿದೆ. ಕ್ಷಕಾರವು ಸಂಯುಕ್ತಾಕ್ಷರವಾಗಿರುವುದರಿಂದ ಅದನ್ನು ಪ್ರತ್ಯೇಕವಾಗಿ ಗಣಿಸಬಾರದು. ಹಕಾರವು ಮೂಲಪ್ರಕೃತಿತತ್ವಕ್ಕೆ ವಾಚಕವಾಗಿದೆ. ಆದುದರಿಂದ ಅದು ಸಕಲ ಜಗತ್ತಿಗೂ ಮೂಲಕಾರಣರೂಪವಾಗಿರುತ್ತದೆಂಬ ಕಾರಣ ದಿಂದ ಆ ಸಮಷ್ಟಿಯನ್ನು ವ್ಯಷ್ಟಿಕಾರ್ಯರೂಪಗಳ ಮಧ್ಯದಲ್ಲಿ ಗಣಿಸಬಾರದು. ಆದುದರಿಂದ ಕಕಾರಾದಿ ಸಕಾರಾಂತವ್ಯಂಜನಗಳನ್ನು ಮೂವತ್ತೆರಡು ಎಂದು ಹೇಳಿದೆ. ಎಂದು ತಿಳಿಯಬೇಕು.) ಹೀಗೆ ಮಾತೃಕಾವರ್ಣರೂಪಳಾಗಿರುವ, ಪರಮಾತ್ಮಸ್ವರೂಪದೊಡನೆ ಅಭೇದಜ್ಞಾನವನ್ನು ಅನುಗ್ರಹಿಸುವ ಆ ಪರಶಕ್ತಿಯನ್ನು ನಮಸ್ಕರಿಸುತ್ತೇನೆ. ॥೬೪॥

ಅಕಾರ ಮೊದಲು ಕ್ಷಕಾರದವರೆಗಿನ, ಅಮೃತರೂಪವಾಗಿ ಶುದ್ಧವಾದ, ವರ್ಣಗಳಿಂದ ಉಂಟಾಗುವ ಎಲ್ಲ ಶಬ್ದಗಳಿಂದಲೂ ವಾಚ್ಯಳಾಗಿ ಯಾರು ತೋರು ತ್ತಾಳೋ, ಅಂಥಾ ಆನಂದರೂಪಳಾದ ಶಕ್ತಿಯನ್ನು ಸ್ತೋತ್ರಮಾಡುತ್ತೇವೆ.

ಲಕ್ಷ್ಮ್ಯಾದಿ ರೂಪೇಣ ನರ್ತಕೀವ ವಿಭಾತಿ ಯಾ ।
ತಾಮಾದ್ಯಂತವಿನಿರ್ಮುಕ್ತಾಮಹಂ ವಂದೇ ವರಾನನಾಮ್ ॥೬೬॥

ಬ್ರಹ್ಮಾದ್ಯಾಸ್ಸ್ಥಾವರಾಂತಾಶ್ಚ ಯಸ್ಯಾ ಏವ ಸಮುದ್ಗತಾಃ ।
ಯಸ್ಯಾಮೇವ ವಿಲೀಯಂತೇ ತಸ್ಯೈ ನಿತ್ಯಂ ನಮೋ ನಮಃ ॥೬೭॥

ಮಹದಾದಿ ವಿಶೇಷಾಂತಂ ಜಗದ್ಯಸ್ಯಾಸ್ಸಮುದ್ಗತಮ್ ।
ಯಸ್ಯಾಮೇವ ಲಯಂ ಯಾತಿ ವಂದೇ ತಾಮಂಬಿಕಾಮಹಮ್॥೬೮॥

" ಮೂಲಾಧಾರಾತ್ ಸ್ಫುರಿತತಡಿದಾಭಾ ಪ್ರಭಾ ಸೂಕ್ಷ್ಮರೂಪಾ
ಉದ್ಗಚ್ಛಂತ್ಯಾ ಮಸ್ತಕಂ ಅಣುತರಾ ತೇಜಸಾಂ ಮೂಲಭೂತಾ ।
ಸೌಷುಮ್ನಾಧ್ವಾ ಚರಣನಿಪುಣಾ ಸಾ ಸವಿತ್ರಾಽನುಬದ್ಧಾ
ಧ್ಯಾತಾ ಸದ್ಯೋಽಮೃತಮಥ ರವೇಃ ಸ್ರಾವಯೇತ್ ಸಾರ್ಧಸೋಮಾತ್ ॥ "

" ಶಿರಸಿ ನಿಪತಿತಾ ಯಾ ಬಿಂದುಧಾರಾ ಸುಧಾರಾ ।
ಭವತಿ ಲಿಪಿಮಯೀ ಸಾ ತಾಭಿರಂಗಂ ಮುಖಾದ್ಯಮ್ ॥ "

ಎಂದು ಆಚಾರ್ಯರು ಹೇಳಿರುವ, ನಿತ್ಯಾನಂದಸಾಕ್ಷಾತ್ಕಾರವನ್ನು ಅನುಗ್ರಹಿಸುವ ಶಕ್ತಿಗೆ ನಮಸ್ಕಾರವು. ॥೬೫॥

ನಾಟಕದಲ್ಲಿ ನಟಿಯು ಹೇಗೆ ಅನೇಕ ವೇಷಗಳನ್ನು ಹಾಕಿಕೊಂಡು ಅನೇಕ ವ್ಯಕ್ತಿಗಳಂತೆ ತೋರುತ್ತಾಳೋ, ಹಾಗೆ ಪರಾಶಕ್ತಿಯು ಲಕ್ಷ್ಮೀ, ಸರಸ್ವತೀ— ಮುಂತಾದ ರೂಪಗಳನ್ನು ಧರಿಸಿ ಆಯಾ ಕಾರ್ಯಗಳನ್ನು ನೆರವೇರಿಸುತ್ತಾಳೆ. ಅಂಥಾ ಆದ್ಯಂತಗಳಿಲ್ಲದ, ಆದರೂ ಭಕ್ತರ ಉಪಾಸನಾಸೌಕರ್ಯಕ್ಕೋಸ್ಕರ ಸುಂದರ ವಾಗಿ ಶ್ರೇಷ್ಠವಾದ ಮುಖವುಳ್ಳ ಪರಾಶಕ್ತಿದೇವತೆಯನ್ನು ನಮಸ್ಕರಿಸುತ್ತೇನೆ. ॥೬೬॥

ಬ್ರಹ್ಮ ಮೊದಲುಗೊಂಡು ಮರ ಮುಂತಾದ ಚಲಿಸದ ಪದಾರ್ಥದವರೆಗೆ ಇರುವ ಎಲ್ಲ ಪದಾರ್ಥಗಳೂ ಯಾರ ದಶೆಯಿಂದ ಉಂಟಾಗಿವೆಯೊ, ಯಾರಲ್ಲಿಯೇ ಅಡಗುವುವೋ, ಅಂಥಾ ಪರಾಶಕ್ತಿಗೆ ಸರ್ವದಾ ನಮಸ್ಕಾರವು. ಈ ಶ್ಲೋಕದಲ್ಲಿ ಸ್ಥಾವರಜಂಗಮರೂಪವಾದ ಪ್ರಾಣಿಗಳೆಲ್ಲವನ್ನೂ ಎಂದರೆ ಭೋಕ್ತೃಪ್ರಪಂಚವನ್ನು ಸಂಗ್ರಹಿಸಿದೆ. ॥೬೭॥

ಈಗ ಭೋಗ್ಯಪ್ರಪಂಚವು ಎಂದರೆ ಮಹತ್ ಮೂಲಪ್ರಕೃತಿಯಿಂದ ಉಂಟಾ ಗಿರುವ ಮಹತ್ತತ್ತ್ವ ಮೊದಲುಗೊಂಡು ಗಡಿಗೆ ಮುಂತಾದ ಎಲ್ಲ ಕಾರ್ಯಸಮುದಾ

ಗುರುಮೂರ್ತಿಧರಾಂ ಗುಹ್ಯಾಂ ಗುಹ್ಯವಿಜ್ಞಾನದಾಯಿನೀಮ್ ।
ಗುಹ್ಯಭಕ್ತಜನಪ್ರೀತಾಂ ಗುಹಾಯಾಂ ನಿಹಿತಾಂ ನುಮಃ ॥೬೯॥

ಯ ಇದಂ ಪಠತೇ ಸ್ತೋತ್ರಂ ಸಂಧ್ಯಯೋರುಭಯೋರಪಿ ।
ಸರ್ವವಿದ್ಯಾಽಽಲಯೋ ಭೂತ್ವಾ ಸ ಯಾತಿ ಪರಮಾಂ ಗತಿಮ್ ॥೭೦॥

ಇತಿ ಜನಹಿತಮೇತತ್ಪ್ರೋಚ್ಯ ದೇವ್ಯಾಃ ಪ್ರಸಾದಾತ್
ಗುರುಗುರುಮಖಿಲೇಶಂ ಭಕ್ತಿಪೂರ್ವಂ ಪ್ರಣಮ್ಯ ।
ಮುನಿಗಣಮವಲೋಕ್ಯ ಸ್ವಾನುಭೂತ್ಯೈವ ಸೂತಃ
ಸ್ವಕಪರಶಿವರೂಪೇ ಲೀನಬುದ್ಧಿರ್ಬಭೂವ ॥೭೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಚತುರ್ಥೇ ಯಜ್ಞವೈಭವಖಂಡೇ ಅವಶಿಷ್ಟಪಾಪಸ್ವರೂಪಕಥನಂ ನಾಮ ಸಪ್ತಚತ್ವಾರಿಂಶಾಧ್ಯಾಯಃ

ಯವು ಯಾವ ಪರಾಶಕ್ತಿಯ ದೆಸೆಯಿಂದ ಉಂಟಾಗುತ್ತದೋ, ಮತ್ತು ಪ್ರಳಯದಲ್ಲಿ ಯಾವ ಪರಾಶಕ್ತಿಯಲ್ಲಿಯೇ ಅಡಗುವುದೋ, ಅಂಥ ಅಂಬಿಕೆಯನ್ನು ನಮಸ್ಕರಿಸುತ್ತೇನೆ. ॥೬೮॥

ಅಜ್ಞಾನಿಗಳನ್ನು ಅನುಗ್ರಹಿಸಲು ಗುರುವಿನ ರೂಪವನ್ನು ಧರಿಸಿ ಶಿಷ್ಯರಿಗೆ ರಹಸ್ಯವಾದ ಬ್ರಹ್ಮಾತ್ಮೈಕ್ಯಜ್ಞಾನವನ್ನು ಉಂಟುಮಾಡುವ, ಯೋಗ್ಯತೆ ಇಲ್ಲದವರಿಗೆ ತಿಳಿಯಲಾಗದೆ ಗೂಢಳಾಗಿರುವ, ವೇದಾಂತೋಪದೇಶದಲ್ಲಿ ಆಸಕ್ತಿಯುಳ್ಳ ಜನರಲ್ಲಿ ಪ್ರೀತಿಯುಳ್ಳವಳಾದ, ಬುದ್ಧಿಯಲ್ಲಿ ದೊರೆಯುವ, ಸಾಕ್ಷಾತ್ಕರಿಸಲು ಒದಗುವ, ಆ ಪರಾಶಕ್ತಿಯನ್ನು ನಮಸ್ಕರಿಸುತ್ತೇನೆ. ॥೬೯॥

ಈ ಸ್ತೋತ್ರವನ್ನು ಯಾರು ಪ್ರಾತಸ್ಸಂಧ್ಯಾಸಾಯಂಸಂಧ್ಯಾಕಾಲಗಳೆರಡರಲ್ಲೂ ಪಠಿಸುತ್ತಾರೋ, ಅಂಥವರು ಎಲ್ಲ ವಿದ್ಯೆಗಳಿಗೂ ಆಶ್ರಯರಾಗಿ ಕಡೆಗೆ ಉತ್ತಮವಾದ ಸದ್ಗತಿಯನ್ನು ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರವೆಂಬ ಮೋಕ್ಷವನ್ನೂ ಪಡೆಯುತ್ತಾರೆ. ॥೭೦॥

ಈ ಪ್ರಕಾರವಾಗಿ ಜನಸಾಮಾನ್ಯಕ್ಕೂ ಹಿತಕರವಾದ ಪರತತ್ತ್ವಸ್ವರೂಪವನ್ನು ಪರಾಶಕ್ತಿಸ್ವರೂಪಳಾದ ದೇವಿಯ ಅನುಗ್ರಹದಿಂದ ಸೂತಋಷಿಗಳು ಶೌನಕಾದಿ

ಋಷಿಗಳಿಗೆ ವಿವರಿಸಿ ಹೇಳಿ, ಗುರುಗಳಿಗೆಲ್ಲರಿಗೂ ಗುರುವಾದ ಎಲ್ಲಕ್ಕೂ ಸ್ವಾಮಿಯಾದ ಪರಶಿವನನ್ನು ವಂದಿಸಿ, ಋಷಿಗಳ ಸಮುದಾಯವನ್ನು ನೋಡಿ ಸ್ವಸ್ವರೂಪಕ್ಕೂ ಪರಶಿವಸ್ವರೂಪಕ್ಕೂ ಇರುವ ಅಭೇದದಲ್ಲಿ ಸ್ವಾನುಭವದಿಂದ ನೆಲೆಸಿದ ಬುದ್ಧಿಯುಳ್ಳವನಾದನು. ಎಂದರೆ ಬ್ರಹ್ಮಾನಂದ ಸಮಾಧಿಯನ್ನು ಪಡೆದನು. ||೭೧||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ
ಪಾಪನಿವೃತ್ತಿಚಿತ್ತಶುದ್ಧಿ, ಜ್ಞಾನಪ್ರಾಪ್ತಿ, ಮೋಕ್ಷಗಳನ್ನು ತಿಳಿಸುವ
ನಲವತ್ತೇಳನೆಯ ಅಧ್ಯಾಯವು ಮುಗಿದುದು.

ಯಜ್ಞವೈಭವಖಂಡವೂ ಮುಗಿದುದು

ಮಹಿಶೂರಾಧಿಪ **ಜಯಚಾಮರಾಜೇಂದ್ರ** ಶಾಸನಾತ್ ।
ಶ್ರೀಸೂತಸಂಹಿತಾರ್ಥಾನುವಾದಂ ಕನ್ನಡಭಾಷಯಾ ॥

ಸುಬ್ಬಮ್ಮಾಂಬಾದೇವಯಜ್ವತನಯಃ ಚಂದ್ರಶೇಖರಃ ।
ಜನಾನಾಮುಪಕಾರಾಯ ರಚಯಾಮಾಸಸಾದರಂ ॥

ವಾಣೀಸೇವಾಂ ರಾಜಸೇವಾಂ ಜನಸೇವಾಂ ಮುದಾಕೃತಾಂ ।
ಸ್ವೀಕೃತ್ಯ ತುಷ್ಯತು ಶಿವಃ ಸಾಂಬೋ ರಾಜಾ ಚ ಭಾರತೀ ॥